ಬ್ರಹ್ಮಜಿಜ್ಞಾಸುಗಳಿಗೆ ನಿಷ್ಕಾಮಕರ್ಮವು ಅಂತರಂಗಶುದ್ಧಿಯ ಸಾಧನ ಎಂದು ತಿಳಿದಿರುತ್ತದೆ. "ಸರ್ವಕರ್ಮಾಣಿ ಮನಸಾ ಸನ್ಯಸ್ಯಾಸ್ತೇಸುಖಂವಶೀ ನವದ್ವಾರೇಪುರೇ ದೇಹಿ ನೈವ ಕುರ್ವನ್ನ ಕಾರಯನ್". ಇಂದ್ರಿಯ ಸಂಯಮವನ್ನು ಸಾಧಿಸಿದ ಅವರು, ತಾವೆಸಗುವ ಕಾರ್ಯಗಳ ಕರ್ತೃತ್ವ, ಭೋಕ್ತೃತ್ವಾದಿಗಳಿಂದ ಅತೀತರಾಗಿದ್ದು, ಕರ್ಮಸಂನ್ಯಾಸವನ್ನೆಸಗುವುದರಿಂದ; ನವದ್ವಾರಗಳಿಂದ ಕೂಡಿದ ಈ ದೇಹವೆಂಬ ಪುರದಲ್ಲಿ ಸಾಕ್ಷೀಭೂತರಾಗಿ ನೆಲೆಸಿರುತ್ತಾರೆ. ಇದು ಗೀತಾಚಾರ್ಯ ಶ್ರೀಕೃಷ್ಣನ ನಿರ್ವಚನ. ಇಂತಹ ನಿರ್ವಾಣಸುಖದಾಯಕನಿಗೆ ನನ್ನ ನಮನವೆಂದು ಗಜೇಂದ್ರನು ಹೇಳುತ್ತಾನೆ.

11

ನಮಃ ಶಾಂತಾಯ ಘೋರಾಯ ಮೂಢಾಯ ಗುಣಧರ್ಮಿಣೆ ।
ಆದಿಶೇಷಾಯ ಮಾಯಾಯ ನಮೋ ಜ್ಞಾನ ಘನಾಯ ಚ ॥

ಈ ವಿಶ್ವವು ತ್ರಿಗುಣಾತ್ಮಕವಾಗಿದ್ದು, ತ್ರಿಗುಣಾತೀತನೆನಿಸಿದ ಪರಬ್ರಹ್ಮವು ತಾನಾಗಿಯೇ ಗುಣಗಳನ್ನು ಸ್ವೀಕರಿಸಿ, ತನ್ನ ಅವತಾರ ಕಾಲದಲ್ಲಿ, ಶಾಂತ, ಘೋರ ಮತ್ತು ಮೂಢ ಎಂಬ ಅವಸ್ಥೆಗಳನ್ನು ಹೊಂದಿದಂತೆ ವರ್ತಿಸುತ್ತಾ "ನ ಬುದ್ಧಿ ಭೇದಂ ಜನಯೇತ್ ಅಜ್ಞಾನಂ ಕರ್ಮಸಂಗಿನಾಮ್" ಎಂಬ ಭಗವದ್ವಾಕ್ಯದಂತೆ ಭೇದರಹಿತವಾದ ಸಮತ್ವಭಾವದಿಂದ ವರ್ತಿಸುತ್ತಿರುವುದು. ಇಂತಹ ಪ್ರಜ್ಞಾನಘನನೂ, ವಿಜ್ಞಾನಿಯೂ ಆದ ಪರಮಾತ್ಮನಿಗೆ ಮತ್ತೆ ಮತ್ತೆ ನಮಸ್ಕರಿಸುವೆ.

12

ಕ್ಷೇತ್ರಜ್ಞಾಯ ನಮಸ್ತುಭ್ಯಂ ಸರ್ವಾಧ್ಯಕ್ಷಾಯಸಾಕ್ಷಿಣೇ ।
ಪುರುಷಾಯಾತ್ಮ ಮೂಲಾಯ ಮೂಲಪ್ರಕೃತಯೇ ನಮಃ ॥

'ಕ್ಷೇತ್ರಜ್ಞಂ ಚಾಪಿ ಮಾಂ ವಿದ್ಧಿ ಸರ್ವಕ್ಷೇತ್ರೇಷು ಭಾರತ'. ಈ ಶರೀರವು ಕ್ಷೇತ್ರವೆಂಬ ಹೆಸರಿನಿಂದ ಕರೆಯಲ್ಪಡುತ್ತಿದ್ದು ಅದರಲ್ಲಿ ನೆಲೆನಿಂತ ಆತ್ಮ ಸ್ವರೂಪವೇ ಕ್ಷೇತ್ರಜ್ಞ, ಅರ್ಥಾತ್ ಪರಮಾತ್ಮ, ಪರಬ್ರಹ್ಮ ಇತ್ಯಾದಿ. ಇದು ಭಗವದ್ವಾಣಿ. ಗಜೇಂದ್ರನು ನಮಿಸುತ್ತಿರುವುದು ಅಂತಹ ಕ್ಷೇತ್ರಜ್ಞನೂ ಸಮಸ್ತ ಕ್ಷೇತ್ರಗಳಲ್ಲಿ ಸಾಕ್ಷಿಸ್ವರೂಪದಲ್ಲಿ ನೆಲೆನಿಂತ ಬ್ರಹ್ಮವಸ್ತುವಿಗೆ. ಈ ಬ್ರಹ್ಮವು ಆತ್ಮಮೂಲವಾದ ಮೂಲಪ್ರಕೃತಿಯೇ ಆಗಿದ್ದು, ಅದನ್ನು ಪುನಃ ಪುನಃ ನಮಿಸುತ್ತಿರುವನು. ಪರಬ್ರಹ್ಮವು ಸರ್ವವ್ಯಾಪ್ತವೆಂಬುದು ಈ ಶ್ಲೋಕದ ಭಾವ. ಇದನ್ನೇ ಕಠೋಪನಿಷತ್ತಿನ ಮಂತ್ರವೊಂದು ಹೀಗೆ ನಿರೂಪಿಸುತ್ತದೆ.

ವಾಯುರ್ಯಥೈಕಂ ಭುವನಂಪ್ರವಿಷ್ಟೋ
ರೂಪಂ ರೂಪಂ ಪ್ರತಿರೂಪೋಬಭೂವ ।
ಏಕಸ್ತಥಾ ಸರ್ವಭೂತಾಂತರಾತ್ಮಾ
ರೂಪಂ ರೂಪಂ ಪ್ರತಿರೂಪೋ ಬಹಿಶ್ಚ ॥

ಸರ್ವವ್ಯಾಪ್ತವಾದ ವಾಯುವಿನಂತೆ ಪರಬ್ರಹ್ಮವೂ ಸಹ. ಎಲ್ಲಾ ರೂಪಗಳಿಗೂ ವಾಯುವು ಪ್ರತಿರೂಪವಾಗಿರುವಂತೆ ಪರಬ್ರಹ್ಮವು ಸರ್ವಕ್ಷೇತ್ರಗಳಲ್ಲೂ ಪ್ರತಿರೂಪವಾಗಿ ವ್ಯಾಪ್ತವಾಗಿರುವನು.

13

ಸರ್ವೇಂದ್ರಿಯ ಗಣದ್ರಷ್ಟೇ ಸರ್ವಪ್ರತ್ಯಯ ಹೇತವೇ ।
ಅಸತಾಛಾಯಯೋಕ್ತಾಯ ಸದಾಭಾಸಾಯತೇ ನಮಃ ॥

ಸಮಸ್ತ ಇಂದ್ರಿಯಗಣದ ದ್ರಷ್ಟಾರನು ನೀನು. ಈ ಇಂದ್ರಿಯಗಳ ವ್ಯವಹಾರಕ್ಕೆ ಕಾರಣನಾದ ನೀನು ದೃಗ್ಗೋಚರವಾದ ಅಹಂಕಾರಾದಿ ಛಾಯಾರೂಪವಾದ ಅಸತ್ ವಸ್ತುಗಳ ಮೂಲಕ ನಿನ್ನ ಇರುವಿಕೆಯನ್ನು ತಿಳಿಸುವೆ. ಅಲ್ಲದೇ ಸಮಸ್ತ ವಿಶ್ವದಲ್ಲಿ ವ್ಯಾಪ್ತನಾದ ನೀನು ನಿನ್ನ ಇರುವಿಕೆಯು ಅರಿವಿಗೆ ಬಾರದಂತೆ ತೋರುವೆ.

ಮೇಲಿನ ಶ್ಲೋಕದ ಸ್ಪಷ್ಟ ವಿವರಣೆಯು
ಈಶಾವಾಸ್ಯೋಪನಿಷತ್‌ಮಂತ್ರದಲ್ಲಿದ್ದು ಅದು ಹೀಗಿದೆ.

ತದೇಜತಿ ತನ್ನೈಜತಿ ತದ್ದೂರೇ ತದ್ವಂತಿಕೆ
ತದಂತರಸ್ಯ ಸರ್ವಸ್ಯ ತದುಸರ್ವಸ್ಯಾಸ್ಯ ಬಾಹ್ಯತಃ
(ಈಶಾವಾಸ್ಯೋಪನಿಷತ್)

ಅದು ಚಲಿಸುತ್ತದೆ. ಚಲಿಸುವುದಿಲ್ಲ. ಅದು ದೂರವಿದೆ, ಸಮೀಪವಿದೆ. ಹೊರಗೂ, ಒಳಗೂ ಎಲ್ಲೆಡೆಗೂ ವ್ಯಾಪಿಸಿದೆ.

14

ನಮೋ ನಮಸ್ತೇಖಿಲ ಕಾರಣಾಯ
ನಿಷ್ಕಾರಣಾಯಾದ್ಭುತ ಕಾರಣಾಯ
ಸರ್ವಾಗಮಾಮ್ನಾಯ ಮಹಾರ್ಣವಾಯ
ನಮೋಽಪವರ್ಗಾಯ ಪರಾಯಣಾಯ

ಗಜೇಂದ್ರನು ಪ್ರಾರ್ಥಿಸುತ್ತಾ ಮೊರೆ ಇಡುತ್ತಿದ್ದಾನೆ. ಅಯ್ಯಾ ಭಗವಂತ ಸಮಸ್ತ ಸೃಷ್ಟಿಯ ಕಾರಣನು ನೀನು. ವಿಶ್ವದ ವ್ಯವಹಾರಗಳನ್ನು ನಡೆಸುತ್ತಿರುವವನು ನೀನು. ಆದರೂ ನಿನ್ನಲ್ಲಿ ತ್ರಿಗುಣಗಳ ಪರಿಣಾಮವಿಲ್ಲ. ಅವಿಕಾರಿಯಾದ ನಿನಗೆ ಪಂಚಭೂತಗಳ ಪರಿಣಾಮವಿಲ್ಲ. ಅದ್ಭುತ ಮಹಿಮೆಯುಳ್ಳ ನಿನಗೆ ನನ್ನ ನಮನ. ಸಮಸ್ತ ಶೃತಿ, ಸ್ಮೃತಿ ಪ್ರತಿಪಾದ್ಯಮಾನನಾದ ನೀನು ಅವುಗಳ ಗಮ್ಯವೂ ಆಗಿರುವೆ. ಸಾಧುಗಳ, ಮೋಕ್ಷ ಜಿಜ್ಞಾಸುಗಳ ತಪನಿಧಿಯೇ ನೀನಾಗಿರುವೆ. ಚಿದ್ವಿಭೂತಿಯೆನಿಸಿದ ನಿನಗೆ ನನ್ನ ನಮಸ್ಕಾರ.

ಜಗದ್ಗುರುವೆನಿಸಿದ ಶ್ರೀಕೃಷ್ಣನ ಅದ್ಭುತವೆನಿಸಿದ ವಿಶ್ವರೂಪವನ್ನು ನೋಡಿದ ಪಾರ್ಥನ ಉದ್ಗಾರ ಮೇಲಿನ ಸಂದರ್ಭದಲ್ಲಿ ಉಲ್ಲೇಖನೀಯ.

ತ್ವಮಾದಿದೇವಃ ಪುರುಷಃ ಪುರಾಣಃ
ತ್ವಮಸ್ಯ ವಿಶ್ವಸ್ಯ ಪರಂ ನಿಧಾನಂ ।
ವೇತ್ತಾಸಿ ವೇದ್ಯಂಚ ಪರಂಚಧಾಮ
ತ್ವಯಾ ತತಂ ವಿಶ್ವ ಮನಂತ ರೂಪ ॥

ಆದಿದೇವನೂ, ಪುರಾಣಪುರುಷನೂ, ಸಮಸ್ತ ವಿಶ್ವದ ಗಮ್ಯನೂ ಆತನಾಗಿದ್ದು, ಅನಂತರೂಪಿಯಾದ ಆತನೇ ಪರಂಧಾಮನೂ ಎನಿಸಿರುವನು. ಗಜೇಂದ್ರನಿಗೆ ತನಗೆ ಮುಮುಕ್ಷು ಪದವಿಯನ್ನೀಯಲು ಈತನಲ್ಲಿ ಶರಣಾಗತಿಯ ವಿನಹ ಮತ್ತಾವ ಮಾರ್ಗವೂ ಇಲ್ಲವೆಂಬ ಪ್ರಜ್ಞೆಯು ಉದಿಸಿದ್ದು ಅದರಂತೆ ಮುನ್ನಡೆದಿದ್ದಾನೆ.

15

ಗುಣಾರಣಿಚ್ಛನ ಚಿದೂಷ್ಟಪಾಯ
ತ ಕ್ಷೋಭ ವಿಸ್ಫೂರ್ಜಿತ ಮಾನಸಾಯ ।
ನೈಷ್ಕರ್ಮ್ಯಭಾವೇನ ವಿವರ್ಜಿತಾಯ
ಸ್ವಯಂ ಪ್ರಕಾಶಾಯ ನಮಸ್ಕರೋಮಿ ॥

ಯಜ್ಞಾಂಗವಾಗಿ ಬೇಕಾಗುವ ಹೋಮಾಗ್ನಿಯ ಉತ್ಪತ್ತಿಗಾಗಿ ಘರ್ಷಿಸಲ್ಪಡುವ ಅರಣಿಯಲ್ಲಿ ಯಜ್ಞೇಶ್ವರನು ಪ್ರಚ್ಛನ್ನನಾಗಿರುವಂತೆ ಗುಣತ್ರಯಗಳೆಂಬ ಮಾಯೆಯಲ್ಲಿ ಜ್ಞಾನಾಗ್ನಿಯು ಅಡಗಿದ್ದು ನಿನ್ನ ತತ್ವವನ್ನರಿಯಲು ಅದು ವಿಫಲವಾಗಿದೆ. ಗುಣತ್ರಯವೈಪರೀತ್ಯದಿಂದ ಸೃಷ್ಟಿಕಾರ್ಯವನ್ನು ಕೈಗೊಳ್ಳುವ ನೀನು ಮಾಯೆಯಿಂದ ಹೊರಬಂದು, ಜ್ಞಾನಾಗ್ನಿದಗ್ಧಕರ್ಮಫಲರಾದ, ನಿಷ್ಕಾಮಕರ್ಮಿಗಳಾದ ಮೋಕ್ಷಜಿಜ್ಞಾಸುಗಳಿಗೆ ಸ್ವಯಂಪ್ರಕಾಶದಿಂದ ವೇದ್ಯವಾಗುವೆ. ಇಂತಹ ನಿನಗೆ ನನ್ನ ನಮಸ್ಕಾರ.

16

ಮಾದೃಕ್ಪ್ರಸನ್ನ ಪಶುಪಾಶ ವಿಮೋಕ್ಷಣಾಯ
ಮುಕ್ತಾಯ ಭೂರಿ ಕರುಣಾಯನಮೋಲಯಾಯ
ಸ್ವಾಂತೇನ ಸರ್ವತನುಭೃನ್ಮನಸಿ ಪ್ರತೀತ
ಪ್ರತ್ಯಗ್ದೃಶೇ ಭಗವತೇ ಬೃಹತೇ ನಮಸ್ತೇ ॥

ಗಜೇಂದ್ರನು ಮೊರೆ ಇಡುತ್ತಿದ್ದಾನೆ, ಸ್ವಾಮಿಯೇ ಭವಪಾಶಬದ್ಧರಾದ ನನ್ನಂತಹ ಪಶುಗಳು ಶರಣಾಗತರಾಗಿ ಬೇಡಲಾಗಿ ಅವರನ್ನು ಪಾಪವಿಮುಕ್ತರನ್ನಾಗಿ ಮಾಡುವವನೂ, ನಿತ್ಯಸುಖೈಕ ಹೇತುವಾದ ಮೋಕ್ಷಸಾಮ್ರಾಜ್ಯದಲ್ಲಿ ಸದಾ ನೆಲೆಸಿರುವವನೂ, ಕರುಣೆಯ ಕಡಲೆನಿಸಿರುವವನೂ, ಭಕ್ತರಕ್ಷಣದಾಕ್ಷಿಣ್ಯಕಟಾಕ್ಷನಾಗಿದ್ದು, ಲೋಕಕಲ್ಯಾಣವೆಸಗುವಲ್ಲಿ ಸದಾ ಜಾಗರೂಕನೂ ಆದ ಪರಮಕಾರುಣಿಕನಾದ ನಿನಗೆ ನನ್ನ ನಮನ. ಅಂತರಂಗ ಭಕ್ತರ ಹೃದಯವೆಂಬ ಚಿದಾಕಾಶದಲ್ಲಿ ಭಾಸಮಾನನಾದ ನೀನು, ಪ್ರತ್ಯಗಾತ್ಮಸ್ವರೂಪಿಯಾಗಿರುವೆ. ಸರ್ವೈಶ್ವರ್ಯಸಂಪನ್ನನಾದ ನಿನಗೆ ನನ್ನ ನಮನ.

ನಿತ್ಯ ಸುಖವನ್ನರಸುವ ಆರ್ತರಿಗೆ ಭಗವತ್ಪ್ರಪತ್ತಿಯೊಂದೇ ದಿವ್ಯೌಷಧ. ಇದನ್ನೇ ಶ್ರೀಕೃಷ್ಣನು ಗೀತೆಯ ಮೋಕ್ಷಧರ್ಮಸನ್ಯಾಸಯೋಗದಲ್ಲಿ ಅರ್ಜುನನಿಗೆ ಹೇಳುತ್ತಾನೆ.

ಸರ್ವಧರ್ಮಾನ್ ಪರಿತ್ಯಜ್ಯ ಮಾಮೇಕಂ ಶರಣಂವ್ರಜ ।
ಅಹಂ ತ್ವಾ ಸರ್ವ ಪಾಪೇಭ್ಯೋ ಮೋಕ್ಷಯಿಷ್ಯಾಮಿ ಮಾಶುಚಃ ॥

ಸರ್ವಧರ್ಮಗಳನ್ನೂ (ಕಾಮ್ಯಕರ್ಮಫಲಗಳನ್ನು) ಪರಿತ್ಯಜಿಸಿ ನನಗೆ ಶರಣಾಗು. ನಾನು ನಿನ್ನನ್ನು ಸಮಸ್ತ ಪಾಪಗಳಿಂದ ಮುಕ್ತನನ್ನಾಗಿಸಿ ಸಾಯುಜ್ಯವನ್ನೀಯುವೆ. ಈ ಭಾವವು ಆರ್ತನೂ, ಮುಮುಕ್ಷುವೂ ಆದ ಗಜೇಂದ್ರನಲ್ಲಿ ಕಾಣಬಹುದಾಗಿದೆ.

17

ಆತ್ಮಾತ್ಮಜಾಪ್ತ ಗೃಹವಿತ್ತ ಜನೇಷು ಸತ್ತೈ
ದುರ್ಷ್ಪ್ರಾಪಣಾಯ ಗುಣಸಂಗ ವಿವರ್ಜಿತಾಯ ।
ಮುಕ್ತಾತ್ಮಭಿಃ ಸ್ವಹೃದಯೇ ಪರಿಭಾವಿತಾಯ
ಜ್ಞಾನಾತ್ಮನೇ ಭಗವತೇ ನಮ ಈಶ್ವರಾಯ ॥

ಈ ಪ್ರಪಂಚದಲ್ಲಿ ಜನ್ಮತಳೆದ ಪ್ರತಿ ಮಾನವಜೀವಿಗೂ ದೇಹಾಭಿಮಾನವಿರುತ್ತದೆ. ಐಹಿಕ ಭೋಗಾಸಕ್ತಿ ಇರುತ್ತದೆ. ಇದೆಲ್ಲವೂ ಎಷ್ಟು ನಶ್ವರವೆಂಬುದನ್ನು ಕುರಿತಂತೆ ಶ್ರೀಮಚ್ಚಂಕರ ಭಗವತ್ಪಾದರು ತಮ್ಮ ಚರ್ಪಟಮಂಜರಿಕಾಸ್ತೋತ್ರದಲ್ಲಿ ಹೀಗೆ ಹೇಳುತ್ತಾರೆ.

ಕಾತೇ ಕಾಂತಾ, ಕಸ್ತೇಪುತ್ರಃ ಸಂಸಾರೋಽಯಮತೀವ ವಿಚಿತ್ರಃ ।
ಕಸ್ತತ್ವಂವಾಕುತ ಆಯಾತಃ ತತ್ವಂ ಚಿಂತಯ ತದಿದಂಭ್ರಾತಃ ॥

ಈ ಸಂಸಾರವೇ ವಿಚಿತ್ರವಾದದ್ದು; ಯಾರು ನಿನ್ನ ಪತ್ನಿ? ಯಾರು ನಿನ್ನ ಮಗ? ಎಲ್ಲಿಂದ ನೀನು ಬಂದಿರುವೆ? ನೀನು ಯಾರವನು? ಇದನ್ನೆಲ್ಲಾ ನಿಶ್ಚಿತವಾಗಿ ಆಲೋಚಿಸಿ ನೋಡು. ಹೀಗೆ ಪ್ರಶ್ನಿಸಿದ ಆಚಾರ್ಯರೇ ಅವುಗಳಿಗೆ ಉತ್ತರಿಸುತ್ತಾ ಮತ್ತೊಂದು ಪದ್ಯದಲ್ಲಿ ಹೀಗೆನ್ನುತ್ತಾರೆ.

ಯಾವತ್ಪವನೋ ನಿವಸತಿದೇಹೇ, ತಾವತ್ಪೃಚ್ಛತಿ ಕುಶಲಂಗೇಹೇ ।
ಗತವತವಾಯೋದೇಹಾಪಾಯೇ ಭಾರ್ಯಾ ಬಿಭ್ಯತಿ ತಸ್ಮಿನ್ ಕಾಯೇ ॥

ಎಲ್ಲಿಯವರೆಗೆ ದೇಹದಲ್ಲಿ ಉಸಿರಾಟವಿರುವುದೋ ಅಲ್ಲಿಯವರೆಗೆ ಮನೆಯವರಿಂದ ಕುಶಲ ಪ್ರಶ್ನೆ. ದೇಹಾಪಾಯದಿಂದಾಗಿ ಉಸಿರಾಟವು ನಿಂತ ಮೇಲೆ ಪತ್ನಿಯೂ ಆ ಜಡ ದೇಹವನ್ನು ನೋಡಿ ಭಯಗೊಳ್ಳುತ್ತಾಳೆ. ಇದು ಶಾಶ್ವತ ಸತ್ಯ. ಇಂತಹ ನಶ್ವರ ಜೀವನದಲ್ಲಿ ಸತಿ, ಸುತ, ಆಪ್ತೇಷ್ಟಾದಿ ಭೋಗಗಳಲ್ಲಿ ಮೋಹಗೊಳ್ಳುವವರಿಗೆ, ಬ್ರಹ್ಮಸಾಕ್ಷಾತ್ಕಾರವು ಸಾಧ್ಯವೇ? ಬ್ರಹ್ಮವಾದರೋ ತ್ರಿಗುಣಾತೀತವಾಗಿದ್ದು, ಮುಮುಕ್ಷುಗಳ ಹೃದಯ ಕುಹರದಲ್ಲಿ ಸರ್ವದಾ ನೆಲೆಸಿದ್ದು, ಅವರಿಂದ ಉಪಾಸಿಸಲ್ಪಡುತ್ತದೆ. ಜ್ಞಾನೈಕಲಭ್ಯನಾದ ಬ್ರಹ್ಮನೇ ನಿನಗೆ ನನ್ನ ನಮನ.

18

ಯಂ ಧರ್ಮಕಾಮಾರ್ಥವಿಮುಕ್ತಿ ಕಾಮಾ
ಭಜಂತಿ ಇಷ್ಟಾಂಗತಿ ಮಾಪ್ನುವಂತಿ
ಕಿಂತ್ವಾಶಿಷೋ ರಾತ್ಯಪಿ ವೇಹಮವ್ಯಯಂ
ಕರೋತುಮೇದಭ್ರದಯೋ ವಿಮೋಕ್ಷಣಮ್

ಐಹಿಕ ಭೋಗಗಳ ಪರ್ಯಾಪ್ತ್ಯನುಭವಕ್ಕೆ ಭಗವಚ್ಛರಣ್ಯತೆಯೇ ಏಕೈಕ ಉಪಾಯ. ಪುರುಷಾರ್ಥಪ್ರದನಾದ ಪರಮಾತ್ಮನೇ ಮುಕ್ತಿದಾಯಕನೂ ಸಹ. ಈತನ ಆಶೀರ್ವಾದವಿದ್ದಲ್ಲಿ, ಅನೂಹ್ಯವಾದ ಅಪರೂಪದ ಫಲಗಳೂ, ಅವಿನಾಶಿಯಾದ ದೇಹವೂ ದೊರೆಯಲು ಸಾಧ್ಯ. ಇಂತಹ ಕರುಣಾಳು ಪರಮಾತ್ಮನು ಈ ಗ್ರಾಹರೂಪೀ ಮೃತ್ಯುವಿನಿಂದ ನನ್ನನ್ನು ರಕ್ಷಿಸಲಿ.

ಭಗವಂತನ ದರ್ಶನ ಸ್ಪರ್ಶಗಳು ಅಜ್ಞಾನ ನಿವೃತ್ತಿ ಸಮರ್ಥವೂ, ಅಪವರ್ಗಪ್ರದವೂ ಆಗಿವೆ. ಅಸುಲಭಸಾಧ್ಯವಾದ ಭಗವತ್ಕೃಪೆಯು ಶರಣಾಗತಿಯ ವಿನಃ ದೊರೆಯದು. ಇದನ್ನು ಸಾಕ್ಷಾತ್ ಭಗವಂತನೇ ಗೀತೆಯ ರಾಜವಿದ್ಯಾ-ರಾಜಗುಹ್ಯ ಯೋಗದಲ್ಲಿ ಹೀಗೆ ಪ್ರಸ್ತುತಪಡಿಸುತ್ತಾನೆ.

ಅನನ್ಯಾಶ್ಚಿಂತಯಂತೋಮಾಂ ಯೇಜನಾಃಪರ್ಯುಪಾಸತೇ
ತೇಷಾಂ ನಿತ್ಯಾಭಿಯುಕ್ತಾನಾಂ ಯೋಗಕ್ಷೇಮಂ ವಹಾಮ್ಯಹಮ್
ಮನ್ಮನಾಭವ ಮದ್ಭಕ್ತೋಮದ್ಯಾಜೀಮಾಂ ನಮಸ್ಕುರು
ಮಾಮೇವೈಷ್ಯಸಿ ಯುಕ್ತ್ವೈವಮ್ ಆತ್ಮಾನಾಂ ಮತ್ಪರಾಯಣಃ

ಅನನ್ಯ ಮನಸ್ಕತೆಯಿಂದ ಯಾರು ನನ್ನ ಉಪಾಸನೆ ಮಾಡುವರೋ ಸಂತತ ಭಗವಚ್ಚಿಂತನೆಯು ಯಾರ ಧ್ಯೇಯವಾಗಿರುವುದೋ ಅವರ

ಯೋಗಕ್ಷೇಮವು ನನ್ನ ಹೊಣೆಯಾಗಿರುವುದು. ಹಾಗೆಯೇ ಮನಸಾ ನನ್ನ ಧ್ಯಾನ ಗೈಯುತ್ತಾ ಇರುವ ಭಕ್ತರು ನನ್ನನ್ನು ಕುರಿತ ಯಜನ, ಯಾಜನಗಳನ್ನು ಮಾಡಿದಲ್ಲಿ ನನ್ನದೆ ಆದ ಪರಮಪದವಿಯು ಅವರದೂ ಆಗುವುದು.

ಈ ವಿಚಾರವನ್ನೇ ವಿಜಯಧ್ವಜೀಯವೂ ಉಲ್ಲೇಖಿಸುತ್ತದೆ. "ಗಜೇಂದ್ರೋ ಭಗವತ್ ಸ್ಪರ್ಶಾದ್ವಿಮುಕ್ತೋ ಜ್ಞಾನಬನ್ಧನಾತ್ ಪ್ರಾಪ್ತೋ ಭಗವತೋ ರೂಪಂ ಪೀತಾವಾಸಶ್ಚತುರ್ಭುಜಃ॥". ಅವಿದ್ಯಾರೂಪದ ಅಜ್ಞಾನ ಬಂಧನದಿಂದ ಗಜೇಂದ್ರನು ಮುಕ್ತನಾಗಿ ಚತುರ್ಭುಜನೂ, ಪೀತಾಂಬರಧಾರಿಯೂ ಆದ ಭಗವತ್ಸ್ವರೂಪವನ್ನು ಹೊಂದಿದನು. ಅರ್ಥಾತ್ ಸಾರೂಪ್ಯಪದವಿಯು ಅವನಿಗೆ ಲಭಿಸಿತು.

19

ಏಕಾನ್ತಿನೋ ಯಸ್ಯನಕಞ್ಚನಾರ್ಥಂ
ವಾ ಞ್ಛಸ್ತಿ ಯೇ ವೈ ಭಗವತ್ಪ್ರಪನ್ನಾಃ ।
ಅತ್ಯದ್ಭುತಂ ತಚ್ಚರಿತಂ ಸುಮಂಗಲಂ
ಗಾಯಸ್ತ ಆನಂದ ಸಮುದ್ರ ಮಗ್ನಾಃ ॥

ಭಗವಂತನಿಗೆ ಶರಣಾಗುವುದು ಒಂದು ಅನುಪಮ ಅನುಭವ. ಇದೇ ಭಗವದ್ಭಕ್ತರ ಅತಿಶಯವಾದ ಆಶಯ. ಕಷ್ಟಸಾಧ್ಯವಾದ ಈ ಗತಿಯು ಮುಕ್ತಿಗಿಂತಲೂ ಅತಿಶಯವಾದದ್ದು. ಈ ಪದವಿಯನ್ನು ಪಡೆದ ಭಕ್ತವರೇಣ್ಯರು ಆನಂದಸಾಗರದಲ್ಲಿ ಮುಳುಗಿ ಭಗವಂತನ ಲೀಲೆಯನ್ನೂ ಚರಿತ್ರೆಯನ್ನೂ ಹಾಡುತ್ತ ಅದರಲ್ಲೇ ಪಾರಮ್ಯವನ್ನು ಕಾಣುತ್ತಾರೆ.

ನಾವು ಅನುಭವಿಸುತ್ತಿರುವ ವ್ಯಕ್ತ ಪ್ರಪಂಚವು ಅತಿಶಯವಾದ ಮೋಹಗಳ ಆಕರ. ಇದರ ಆಕರ್ಷಣೆಯಿಂದ ಹೊರಬರುವ ಸಾಧನವೇ ಭಕ್ತಿ. ಬೀಜದಲ್ಲಿ ಅಡಗಿರುವ ಮೊಳಕೆಯಂತೆ ಮಾಯಾಮಯ ವಿಶ್ವವು ನಿರ್ವಿಕಲ್ಪವಾಗಿದ್ದು; ದೇಶ, ಕಾಲ, ವರ್ತಮಾನಗಳಿಗನುಗುಣವಾಗಿ ಸೃಷ್ಟಿಯು ಭಗವಂತನ ಲೀಲೆಯಿಂದಾಗುತ್ತದೆ.

20

ತಮಕ್ಷರಂ ಬ್ರಹ್ಮ ಪರಂ ಪರೇಶಂ
ಅವ್ಯಕ್ತಮಾಧ್ಯಾತ್ಮಿಕ ಯೋಗಮವ್ಯಯಂ ।
ಅತೀನ್ದ್ರಿಯಂ ಸೂಕ್ಷ್ಮಮಿವಾತಿದೂರಂ
ಮನನ್ತಮಾದ್ಯಂ ಪರಿಪೂರ್ಣಮೀಡೇ ॥

"ಅಕ್ಷರಂ ಬ್ರಹ್ಮಪರಮಂ"; 'ಓಂ ಇತ್ಯೇಕಾಕ್ಷರಂ ಬ್ರಹ್ಮ' ಈ ಎರಡೂ ಭಗವದುಕ್ತಿಗಳು ಬ್ರಹ್ಮದ ಸ್ವರೂಪವನ್ನು ಹೇಳುತ್ತವೆ. ಅವ್ಯಕ್ತವಾದ ಪರಮಾತ್ಮ ತತ್ವವು ಪರಬ್ರಹ್ಮ. ಬ್ರಹ್ಮಾದಿ ದೇವತೆಗಳಿಗೂ ಅಧಿದೈವವೆನಿಸಿದ ಈ ಅವ್ಯಕ್ತಸ್ವರೂಪವು ಅಧ್ಯಾತ್ಮ ಜ್ಞಾನಗಮ್ಯವಾಗಿದ್ದು, ಭಕ್ತಿಯೋಗ ಜ್ಞಾನಯೋಗಗಮ್ಯವಾಗಿದೆ.

ಇಂದ್ರಿಯಾತೀತನಾದ ಪರಬ್ರಹ್ಮನು, ಮಹತೋಮಹೀಯನೂ, ಸೂಕ್ಷ್ಮಾತಿಸೂಕ್ಷ್ಮನೂ ಆಗಿದ್ದು ಹೃದಯ ಕುಹರದಲ್ಲಿ ಇರುವನಾದರೂ, ಅತಿ ದೂರದಲ್ಲಿರುವಂತೆ ತೋರುತ್ತಾನೆ. ಅನಾದ್ಯನಂತವಾದ ಈ ಸ್ವರೂಪವನ್ನು ನಾನು ಶರಣುಹೋಗುವೆ.

21

ಯಸ್ಯ ಬ್ರಹ್ಮಾದಯೋ ದೇವಾ ವೇದಾ ಲೋಕಶ್ಚರಾಚರಾಃ ।
ನಾಮ ರೂಪ ವಿಭೇದೇನ ಫಲ್ಗ್ವಾಚ ಕಲಯಾಕೃತಾಃ ॥

ಸಾಧನಾತೀತವಾದ ವಿಷಯಗಳನ್ನೂ, ಬ್ರಹ್ಮನೇ ಮುಂತಾದ ದೇವಾನುದೇವತೆಗಳನ್ನೂ, ಸಮಸ್ತ ವಿಶ್ವವನ್ನೂ ವೈವಿಧ್ಯಮಯ ನಾಮರೂಪಗಳುಳ್ಳ ಲೋಕಗಳನ್ನೂ ಸೃಷ್ಟಿಸಿರುವುದೇ ಬ್ರಹ್ಮವಸ್ತು.

22

ಯಥಾರ್ಚಿಷೋಗ್ನೇ ಸವಿತುರ್ಗಭಸ್ತಯೋ
ನಿರ್ಯಾಂತಿ ಸಂ ಯಾತ್ಯಸಕೃತ್ಸ್ವ ರೋಚಿಷಃ ।

ತಥಾ ಯತೋಽಯಂ ಗುಣಸಂಪ್ರವಾಹೋ
ಬುದ್ಧಿರ್ಮನಃಖಾನಿ ಶರೀರಸರ್ಗಾಃ ॥

ಅಗ್ನಿಯಿಂದ ಸಮುತ್ಪನ್ನವಾಗುವ ಜ್ವಾಲೆಗಳು, ಸೂರ್ಯನ ಕಿರಣಗಳು ಹಲವು ಬಾರಿ ಹೊರಚಿಮ್ಮಿ ವಿಲೀನವಾಗುವಂತೆ ಸ್ವಪ್ರಕಾಶದಿಂದ ಬೆಳಗುವ ಪರಬ್ರಹ್ಮನ ಗುಣಪ್ರವಾಹದಿಂದ ಉತ್ಪನ್ನವಾಗುವ ಬುದ್ಧಿ, ಇಂದ್ರಿಯ, ಮನಸ್ಸು ಮತ್ತು ಅನ್ನಮಯಕೋಶಗಳಾದ ಶರೀರಗಳು ಮತ್ತೆ ಮತ್ತೆ ಪ್ರಕಟವಾಗಿ ಲೀನವಾಗುತ್ತವೆ.

"ತತ್ ಸೃಷ್ಟ್ವಾ ತದೈವಾನುಪ್ರಾವಿಶತ್ ತದನುಪ್ರವಿಶ್ಯ". ಇದು ತೈತ್ತಿರೀಯ ಶೃತಿ ಪರಬ್ರಹ್ಮನ ಲೀಲಾವಿಭೂತಿಯೇ ಚರಾಚರ ಸೃಷ್ಟಿ-ಸೃಷ್ಟಿಯ ನಂತರ ಅದರಲ್ಲಿ ವಿಲೀನವಾಗುವನು. ಇದನ್ನೇ ಗೀತೆಯ ಅಕ್ಷರಬ್ರಹ್ಮ ಯೋಗ ಸ್ಪಷ್ಟಪಡಿಸುತ್ತದೆ.

ಅವ್ಯಕ್ತಾದ್ವ್ಯಕ್ತಯಃ ಸರ್ವಾಃ ಪ್ರಭವಂತ್ಯಹರಾಗಮೇ ।
ರಾತ್ರ್ಯಾಗಮೇ ಪ್ರಲೀಯಂತೇ ತತ್ರೈವಾವ್ಯಕ್ತಸಂಜ್ಞಕೇ ॥
ಭೂತಗ್ರಾಮಃ ಸಯೇವಾಯಮ್ ಭೂತ್ವಾಭೂತ್ವಾ ಪ್ರಲೀಯತೇ ।
ರಾತ್ರ್ಯಾಗಮೇ ವಶಃ ಪಾರ್ಥ ಪ್ರಭವಂತ್ಯಹರಾಗಮೇ ॥

ಪರಬ್ರಹ್ಮವು ಅಕ್ಷರ. ಅವನ ಲೀಲಾವಿಭೂತಿಯೇ ದಿನರಾತ್ರಿಗಳು. ಅವನ ಹಗಲೆಂದರೆ ವ್ಯಕ್ತ ಪ್ರಪಂಚದ ಸೃಷ್ಟಿ. ಅವನ ರಾತ್ರಿಯೇ ವ್ಯಕ್ತ ಪ್ರಪಂಚದ ತಿರೋಭಾವ. ಹೀಗೆ ಸೃಷ್ಟಿ, ವಿನಾಶಗಳ ಚಕ್ರ ಸಂತತವಾಗಿ ಉರುಳುತ್ತಿರುತ್ತದೆ.

23

ಸವೈ ನದೇವಾಸುರ ಮರ್ತ್ಯತಿರ್ಯಕ್
ನಸ್ತ್ರೀ ನಷಂನೋನಪುಮಾನ್ನಜಂತುಃ ।
ನಾಯಂ ಗುಣಃ ಕರ್ಮ ನಸನ್ನ ಚಾಸನ್
ನಿಷೇಧ ಶೇಷೋ ಜಯತಾದಶೇಷಃ ॥

ಶ್ರೀಮದ್ವಿಷ್ಣು ರೂಪದಲ್ಲೋ, ಶ್ರೀಕೃಷ್ಣ ರೂಪದಲ್ಲೋ, ಶ್ರೀರಾಮನ ರೂಪದಲ್ಲೋ ಪ್ರಕಟವಾಗುವ ಪರಬ್ರಹ್ಮವೇ ಲೋಕದ ವೈವಿಧ್ಯತೆಗೆ ಕಾರಣ. ಇದು ಪುರುಷನಲ್ಲ, ಸ್ತ್ರೀಯಲ್ಲ, ನಪುಂಸಕನಲ್ಲ. ಗುಣ, ಕರ್ಮರಹಿತವಾದ ಇದು, ಕಾರ್ಯ, ಕಾರಣಾತೀತವಾಗಿರುವುದು. ಇಂತಹ ಸ್ವರೂಪವು ನನ್ನನ್ನುದ್ಧರಿಸಲು ಪ್ರಕಟವಾಗಲಿ.

ಪರಬ್ರಹ್ಮದ ಸ್ವರೂಪವನ್ನು ಕುರಿತ ಚಿಂತನೆಯನ್ನು ಮಾಡುತ್ತಿರುವ ಗಜೇಂದ್ರನು ಮುಕ್ತಾತ್ಮನಾಗಲಿಚ್ಛಿಸಿ ಹೇಳುವ ಈ ಪದ್ಯದಲ್ಲಿ ಬ್ರಹ್ಮಸ್ವರೂಪದ ವಿವರವಿದ್ದು, ಈ ದಿಶೆಯಲ್ಲಿ ಮುಂಡಕೋಪನಿಷತ್ತಿನ ಈ ಮಂತ್ರವು ದಿಗ್ದರ್ಶಕವಾಗಿದೆ.

ಯತ್ ತದದ್ರೇಶ್ಯಮಗ್ರಾಹ್ಯಮಗೋತ್ರಮವರ್ಣ
ಮಚಕ್ಷು ಶ್ರೋತ್ರಂ ತದಪಾಣಿ ಪಾದಮ್
ನಿತ್ಯಂ ವಿಭುಂ ಸರ್ವಗತಂ ಸುಸೂಕ್ಷ್ಮಂ
ತದವ್ಯಯಂ ಯದ್ಭೂತಯೋನಿಂ ಪರಿಪಶ್ಯಂತಿಧೀರಾಃ ॥

ಬುದ್ಧಿ ಮತ್ತು ಇಂದ್ರಿಯಾತೀತವಾದ ಈ ವಸ್ತುವು (ಬ್ರಹ್ಮವು) ಕರ್ಮೇಂದ್ರಿಯಗಳ ವ್ಯಾಪ್ತಿಯನ್ನು ಮೀರಿದೆ. ಅಮಾನುಷ ರೂಪವು ಇದರದಾಗಿದ್ದು, ಗೋತ್ರ, ವರ್ಣ ಮುಂತಾದವುಗಳಿಗೆ ಅತೀತವಾದುದು. ಚಿರಂತನವಾದ ಈ ವಸ್ತುವಿಗೆ ಕರ್ಮೇಂದ್ರಿಯಗಳಿಲ್ಲ. "ದ್ರವಃ ಸಂಘಾತಕಠಿನಃ ಸ್ಥೂಲ ಸೂಕ್ಷ್ಮೋ ಲಘುರ್ಗುರುಃ ವ್ಯಕ್ತೋ ವ್ಯಕ್ತೇತರಶ್ಚಾಪಿ ಪ್ರಾಕಾಮ್ಯಂತೇ ವಿಭೂತಿಷು ॥ (ಕುಮಾರಸಂಭವ 2ನೇ ಸರ್ಗ) ಎಂಬ ಮಹಾಕವಿ ಕಾಳಿದಾಸನ ವಾಣಿಯಂತೆ. ಶಬ್ದಾದಿ ಕಾರಣವಾದ, ಸ್ಥೂಲ ಶರೀರಾದಿಗಳಲ್ಲದ, ಸೂಕ್ಷ್ಮ ರೂಪವೂ ಅಲ್ಲಿದೆ. ಅವ್ಯಯವಾದ ಈ ಅಕ್ಷರವಸ್ತುವನ್ನು ವಿದ್ಯೆಯಿಂದ ಮಾತ್ರ ಪಡೆಯಲು ಸಾಧ್ಯ. ಇದೇ ಪರಾವಿದ್ಯೆ.

24

ಜೀಜೀವಿಷೇ ನಾಹ ಮಿಹಾಮಯಾ ಕಿ ಮಂತರ್ಬಹಿಶ್ಚಾವೃತ ಯೇ
ಭಯುನ್ಯಾ ।
ಇಚ್ಛಾಮಿ ಕಾಲೇನ ನಯಸ್ಯ ವಿಪ್ಲವ ಸ್ತ ಸ್ಯಾತ್ಮ ಲೋಕಾವರಣಸ್ಯ ಮೋಕ್ಷಂ ॥

ಸೋಽಹಂ ವಿಶ್ವಸೃಜಂ ವಿಶ್ವ ಮ ವಿಶ್ವಂ ವಿಶ್ವವೇದಸಮ್
ವಿಶ್ವಾತ್ಮಾನ ಮಜಂಬ್ರಹ್ಮ ಪ್ರಣತೋಽಸ್ಮಿ ಪರಂಪದಮ್ ॥

ಇದೀಗ ನನಗೆ ಅಜ್ಞಾನಾಂಧತಮಸಾವೃತವಾದ ಈ ಗಜಯೋನಿಯಿಂದ ಶಾಶ್ವತ ವಿಮುಕ್ತಿಯು ಬೇಕಾಗಿದೆ. ಜಡವಾದ ಈ ಅನ್ನಮಯಕೋಶದಿಂದ ನನಗಾವ ಪ್ರಯೋಜನವೂ ಇಲ್ಲ. ಬ್ರಹ್ಮದ ಅರಿವಾಗದಂತೆ ಮುಚ್ಚಿರುವ ಅವಿದ್ಯಾಮತ ಅಜ್ಞಾನದಿಂದ ಶಾಶ್ವತ ಮುಕ್ತಿಯನ್ನಪೇಕ್ಷಿಸುತ್ತೇನೆ.

ಕಾಲಕ್ರಮದಲ್ಲಿ ಈ ಅಜ್ಞಾನವು ನಿರ್ಮೂಲವಾಗುವಂತಹುದಲ್ಲ. ಇದಕ್ಕೆ ಭಗವಂತನ ದಯೆ ಬೇಕು. ಆಗ ಮಾತ್ರವೇ ಸ್ವಯಂ ಪ್ರಬುದ್ಧವಾಗುವ ತತ್ವಜ್ಞಾನದ ಉದ್ಭೋಧವಾಗುವುದು. ಅದಕ್ಕಾಗಿಯೇ ನಾನು ಪರಬ್ರಹ್ಮ ಸ್ವರೂಪಿಯಾದ ಭಗವಂತನಿಗೆ ಶರಣಾಗಿದ್ದೇನೆ.
ವ್ಯಾಪನಶೀಲನಲ್ಲವಾದರೂ ವ್ಯಾಪ್ತಿಯನ್ನು ಹೊಂದಿದ, ವಿಶ್ವರೂಪಿಯೇ ಆಗಿರುವ, ವಿಶ್ವದ ಸೃಷ್ಟಿಯ ಲೀಲೆಯನ್ನು ತನ್ನ ವ್ಯಾಪ್ತಿಯನ್ನಾಗಿಸಿಕೊಂಡಿರುವ ಅಜನಾದ ಪರಬ್ರಹ್ಮಕ್ಕೆ ನನ್ನ ನಮನ.

ಅಜ್ಞಾನ ವಿಮುಕ್ತಿಯಿಂದಲೇ ಮುಮುಕ್ಷುವಾಗಲು ಸಾಧ್ಯವೆಂಬುದನ್ನು ನ್ಯಾಯಸೂತ್ರಗಳನ್ನು ರಚಿಸಿರುವ ಗೌತಮನು ಹೀಗೆ ಹೇಳುತ್ತಾನೆ.
"ಪ್ರಮಾಣ, ಪ್ರಮೇಯ ಸಂಶಯ ಪ್ರಯೋಜನ ದೃಷ್ಟಾಂತ ಸಿದ್ಧಾಂತ ಅವಯವ ತರ್ಕ ನಿರ್ಣಯವಾದ ಜಲ್ವ ವಿತಂಡ ಹೇತ್ವಾಭಾಸ ಛಲ ಜಾತಿ ನಿಗ್ರಹಸ್ಥಾನಾನಾಂ ತತ್ವಜ್ಞಾನಾತ್ ನಿಶ್ರೇಯಸಾಧಿಗಮಃ ॥."
ಅನೂಹ್ಯವಾದ ಪರಬ್ರಹ್ಮದ ಬೋಧ ಉಂಟಾಗಲು ಪ್ರಮಾಣ, ಪ್ರಮೇಯ, ಸಂಶಯ ದೃಷ್ಟಾಂತ, ತರ್ಕವೇ ಮುಂತಾದ ಶಾಸ್ತ್ರಗಳ ಅರಿವು ಅಗತ್ಯ.

26

ಯೋಗ ರಂಧಿತ ಕರ್ಮಾಣೋ ಹೃದಿಯೋಗ ವಿಭಾವಿತೇ
ಯೋಗಿನೋ ಯಂ ಪ್ರಪಶ್ಯಂತಿ ಯೋಗೇಶಂತಂ ನತೋಽಸ್ಮ್ಯಹಮ್ ॥

ಅಷ್ಟಾಂಗ ಯೋಗವನ್ನು ಬಲ್ಲವರು ಅ ಮಾರ್ಗದಲ್ಲೇ ಮುಂದೆ ಸಾಗಿ ಕರ್ಮಗಳ ಫಲ, ಕರ್ಮವಾಸನೆ, ಕರ್ಮಫಲತ್ಯಾಗ ಇವುಗಳಿಂದ ದೂರವಾಗಿ, ಶುದ್ಧಾತ್ಮರೆನಿಸಿ, ಅವಿದ್ಯಾವಿಷಯಕ ಆವರಣದಿಂದ ಹೊರಬಂದು, ಯೋಗಮಾರ್ಗದಲ್ಲಿ ಬ್ರಹ್ಮಸಾಕ್ಷಾತ್ಕಾರ ಮಾಡಿಕೊಳ್ಳುವರು. ಇಂತಹ ಅತಿಶಯ ಸಾಧನೆಯತ್ತ ನನ್ನನ್ನು ಕರೆದೊಯ್ಯಲು ಸಮರ್ಥನಾದ ಯೋಗೀಶ್ವರನನ್ನು ನಾನು ನಮಸ್ಕರಿಸುವೆ.

ಮೋಕ್ಷಸಾಧನ ಸಾಮಗ್ರಿಗಳಲ್ಲಿ ಭಕ್ತಿಯಂತೆಯೇ ಯೋಗವೂ ಒಂದು ಸಾಧನ. ಇದನ್ನು ಶ್ರೀಕೃಷ್ಣನು ಅಕ್ಷರಬ್ರಹ್ಮ ಯೋಗದಲ್ಲಿ ವಿವರವಾಗಿ ಸ್ಪಷ್ಟಪಡಿಸುತ್ತಾನೆ.

ಸರ್ವದ್ವಾರಾಣಿ ಸಂಯಮ್ಯ ಮನೋಹೃದಿನಿರುಧ್ಯ ಚ
ಮೂರ್ಧ್ನ್ಯಾದಾಯಾಸ್ಥಿತ ಪ್ರಾಣಮ್ ಆಸ್ಥಿತೋಯೋಗಧಾರಣಮ್ ॥
ಓಂ ಇತ್ಯೇಕಾಕ್ಷರಂ ಬ್ರಹ್ಮ ವ್ಯಾಹರನ್ ಮಾಮನುಸ್ಮರನ್
ಯಃ ಪ್ರಯಾತಿ ತ್ಯಜನ್ ದೇಹಂ ಸಯಾತಿ ಪರಮಾಂಗತಿಮ್ ॥

ದೇಹದಲ್ಲಿರುವ ಸಮಸ್ತ ದ್ವಾರಗಳನ್ನೂ ನಿಯಂತ್ರಿಸಿ, ಮನಸ್ಸನ್ನು ಹೃದಯದಲ್ಲೂ, ಪ್ರಾಣಗಳನ್ನು ಬ್ರಹ್ಮರಂಧ್ರದತ್ತಲೂ ತಳ್ಳಿ, ಯೋಗಾರೂಢನಾಗಿ ಪ್ರಣವವಾಚಕವಾದ ಓಂಕಾರವನ್ನು ಬ್ರಹ್ಮವೆಂದು ಜಪಿಸುತ್ತಾ ಶರೀರಯಾತ್ರೆಯ ಚರಮಗತಿಯತ್ತ ಸಾಗಿ ದೇಹತ್ಯಾಗ ಮಾಡುವ ಯೋಗಿಗೆ ಪರಮಪದವಿಯು ಲಭಿಸುತ್ತದೆ. ಈ ವಿಶಿಷ್ಟ ಸಾಧನೆಯತ್ತ ಗಜೇಂದ್ರನ ಮನವು ಸುಳಿದಿದೆ.

27

ನಮೋ ನಮೋಸ್ತುಭ್ಯ ಮಸಹ್ಯವೇಗಶಕ್ತಿ
ತ್ರಯಾಯಾಖಿಲಧೀಗುಣಾಯ
ಪ್ರಸನ್ನ ಪಾಲಾಯ ದುರಂತಶಕ್ತಯೇ
ಕದಿಂದ್ರಿಯಾಣಾಮನವಾಪ್ಯವರ್ತ್ಮನೇ ॥

ನಾಯಂ ವೇದ ಸ್ವಮಾತ್ಮಾನಾಂ ಯಚ್ಛಕ್ತ್ಯಾಹಂಧಿಯಾಹತಮ್
ತಂದುರತ್ಯಯ ಮಾಹಾತ್ಮ್ಯಮ್ ಭಗವಂತಮಿತೋಽಸ್ಮ್ಯಹಮ್ ॥

ಪ್ರಾಕ್ತನ ಕರ್ಮವಶದಿಂದಾಗಿ ನನಗೆ ಈ ಗಜಯೋನಿಯು ಪ್ರಾಪ್ತವಾಗಿದೆ. ಭಗವಂತ ನನ್ನಲ್ಲಿ ಉತ್ಪನ್ನವಾಗಿರುವ ತ್ರಿಗುಣಗಳೂ, ರಾಗದ್ವೇಷಗಳೂ, ಅರಿಷಡ್ವರ್ಗಗಳೂ ನಿನ್ನ ಕರುಣೆಯ ಫಲವೇ. ಅಸಹನೀಯವಾದ ಈ ಅಜ್ಞಾನದಿಂದ, ನಾನು ಜ್ಞಾನದತ್ತ ನಡೆಯಬೇಕಾಗಿದೆ. ಇದೀಗ ನನ್ನ ಸಮಸ್ತ ಇಂದ್ರಿಯವ್ಯಾಪಾರಗಳ ಹಿನ್ನೆಲೆಯಲ್ಲಿ 'ಬ್ರಹ್ಮ'ದ ವಿನಹ ಮತ್ತಾವುದೂ ಕಾಣುತ್ತಿಲ್ಲ. 'ಸರ್ವಂ ಖಲ್ವಿದಂ ಬ್ರಹ್ಮ' ಎಂಬ ತತ್ವವು ತಿಳಿದು ಬಂದಿದೆ. ಅನಂತ ಶಕ್ತಿಯಾದ ನಿನಗೆ ನಾನು ಮತ್ತೆ ಮತ್ತೆ ನಮಸ್ಕರಿಸುವೆ.

ಉಪಸಂಹಾರ

ಗಜೇಂದ್ರಮೋಕ್ಷದ ಈ ಪ್ರಸಂಗವು ಮೋಕ್ಷಮಾರ್ಗದಲ್ಲಿ ಸಾಗುವವರಿಗೆ ಭಕ್ತಿಯ ಪ್ರಾಧಾನ್ಯದ ಅರಿವನ್ನು ಮಾಡಿಕೊಡುವುದರೊಂದಿಗೆ, ಮೋಕ್ಷಮಾರ್ಗದಲ್ಲಿ ತಡೆಯಾಗುವ ಅವಿದ್ಯೆಯಿಂದ ಆವೃತವಾದ ಮಾಯಾಮಯ ವಿಶ್ವದ ಪರಿಚಯ ಮಾಡಿಕೊಡುತ್ತದೆ. ಅದ್ವೈತ ತತ್ವದ ಅರಿವಿಗೆ ಮಾಯೆಯ ಸ್ವರೂಪ, ಅವಿದ್ಯಾ ನಿವೃತ್ತಿ ಇವೆರಡೂ ಬಲವತ್ತರವಾದ ಸಾಧನೆಗಳಾಗಿದ್ದು, ಅವುಗಳತ್ತ ಬೆಳಕನ್ನು ಚೆಲ್ಲುವುದರಿಂದ ಈ ಸ್ತೋತ್ರದ ಅಧ್ಯಯನ ಅಲೌಕಿಕ ಮತ್ತು ಲೌಕಿಕ ಸಾಧನೆಗಳ ಸಾಧನ ಎಂದು ಹೇಳುತ್ತ ಈ ಲೇಖನವನ್ನು ಉಪಸಂಹರಿಸುತ್ತೇನೆ.

❑

Sri Sri Sri Jayendra Puri Mahaswamiji, Peethadipathi of Sri Kailash Ashrama Mahasamsthana addressing also in the pic. Sri Madhu Pandit Dasa, President, ISKCON, Bangalore

ಪದ್ಮಪುರಾಣ

ಒಂದು ಅಧ್ಯಯನ

—ವಿದ್ವಾನ್ ಶ್ರೀಧರ ಹೆಗಡೆ,
ಬೆಂಗಳೂರು

ಭಾರತೀಯ ಸಾಹಿತ್ಯ ಕ್ಷೇತ್ರದಲ್ಲಿ ಪುರಾಣಗಳು ಮಹತ್ವಸ್ಥಾನವನ್ನು ಪಡೆದುಕೊಂಡಿವೆ. "ಪುರಾಭವಂ ಪುರಾಣಾಂ" ಎಂಬ ವ್ಯುತ್ಪತ್ತಿಯಂತೆ ಪುರಾತನ ಸಾಹಿತ್ಯವೇ ಪುರಾಣ. "ಪುರಾಪಿ ನವಂ ಪುರಾಣಂ" ಎಂದೂ ಹೇಳಬಹುದು. ಇದರ ಪ್ರಕಾರ ಪುರಾತನವೂ ನಿತ್ಯನೂತನವೂ ಆದ ಧರ್ಮವನ್ನೂ ದಾರ್ಶನಿಕ ತತ್ವವನ್ನೂ ನಿರೂಪಿಸುವ ಗ್ರಂಥವೇ ಪುರಾಣ. ವೇದದ ಗೂಢಾರ್ಥವನ್ನು ಆಖ್ಯಾನ ಉಪಾಖ್ಯಾನಗಳ ಮೂಲಕ ಸರಳಗೊಳಿಸಿ ಪ್ರಕಾರಾಂತರದಿಂದ ಪುರಾಣಗಳು ತಿಳಿಸುತ್ತವೆ. ಈ ಪುರಾಣಗಳೇ ಇಂದು ಭಾರತೀಯ ಸಂಸ್ಕೃತಿಯ, ಹಿಂದೂಧರ್ಮದ ಆಧಾರಸ್ತಂಭಗಳಾಗಿವೆ. ಈ ಹಿನ್ನಲೆಯಲ್ಲಿ ಪದ್ಮಪುರಾಣವನ್ನು ಇಲ್ಲಿ ವಿವೇಚಿಸಲಾಗಿದೆ.

॥ ಶ್ರೀಗುರುಭ್ಯೋ ನಮಃ ॥

ಯೋಽಂತಃ ಪ್ರವಿಶ್ಯ ಮಮ ವಾಚಮಿಮಾಂ ಪ್ರಸುಪ್ತಾಂ ।
ಸಂಜೀವತ್ಯಖಿಲಶಕ್ತಿಧರಸ್ಸ್ವಧಾಮ್ನಾ ॥
ಅನ್ಯಾಂಶ್ಚ ಹಸ್ತಚರಣ ಶ್ರವಣತ್ವಗಾದೀನ್
ಪ್ರಾಣಾನ್ನಮೋ ಭಗವತೇ ಪುರುಷಾಯ ತುಭ್ಯಮ್ ॥

ಪದ್ಮಪುರಾಣ

ಭಾರತೀಯ ಸಾಹಿತ್ಯ ಕ್ಷೇತ್ರದಲ್ಲಿ ಪುರಾಣಗಳು ಮಹತ್ವಸ್ಥಾನವನ್ನು ಪಡೆದುಕೊಂಡಿವೆ. "ಪುರಾಭವಂ ಪುರಾಣಾಂ" ಎಂಬ ವ್ಯುತ್ಪತ್ತಿಯಂತೆ ಪುರಾತನ ಸಾಹಿತ್ಯವೇ ಪುರಾಣ. "ಪುರಾಪಿ ನವಂ ಪುರಾಣಾಂ" ಎಂದೂ ಹೇಳಬಹುದು. ಇದರ ಪ್ರಕಾರ ಪುರಾತನವೂ ನಿತ್ಯನೂತನವೂ ಆದ ಧರ್ಮವನ್ನೂ ದಾರ್ಶನಿಕ ತತ್ವವನ್ನೂ ನಿರೂಪಿಸುವ ಗ್ರಂಥವೇ ಪುರಾಣ. ವೇದದ ಗೂಢಾರ್ಥವನ್ನು ಆಖ್ಯಾನ ಉಪಾಖ್ಯಾನಗಳ ಮೂಲಕ ಸರಳಗೊಳಿಸಿ ಪ್ರಕಾರಾಂತರದಿಂದ ಪುರಾಣಗಳು ತಿಳಿಸುತ್ತವೆ. ಈ ಪುರಾಣಗಳೇ ಇಂದು ಭಾರತೀಯ ಸಂಸ್ಕೃತಿಯ, ಹಿಂದೂಧರ್ಮದ ಆಧಾರಸ್ತಂಭಗಳಾಗಿವೆ.

ಪುರಾಣಗಳು ಭಗವಂತನ ಸಾಕ್ಷಾತ್‌ರೂಪವೇ ಆಗಿವೆಯೆಂದು ಬಣ್ಣಿಸುತ್ತಾರೆ. ಪದ್ಮಪುರಾಣದ ಸ್ವರ್ಗಖಂಡದಲ್ಲಿ ಈ ಅಂಶವನ್ನು ಹೀಗೆ ವರ್ಣಿಸಿದೆ.

ಯಥಾ ಸೂರ್ಯವಪುರ್ಭೂತ್ವಾ ಪ್ರಕಾಶಾಯ ಚರೇದ್ಧರಿಃ।
ಸರ್ವೇಷಾಂ ಜಗತಾಮೇವ ಹರಿರಾಲೋಕಹೇತವೇ॥
ತಥೈವಾಂತಃ ಪ್ರಕಾಶಾಯ ಪುರಾಣಾವಯವೋ ಹರಿಃ।
ವಿಚರೇವಿಹ ಭೂತೇಷು ಪುರಾಣಂ ಪಾವನಂ ಪರಮ್॥
(ಪದ್ಮ. ಸ್ವರ್ಗ. 62-60-61)

ಹೇಗೆ ಭಗವಂತನು ಸಮಸ್ತ ಜಗತ್ತನ್ನು ತೋರಿಸುವುದಕ್ಕಾಗಿ ಸೂರ್ಯನ ರೂಪವನ್ನು ಧರಿಸಿ ನಮ್ಮ ಹೊರಗಿನ ಅಂಧಕಾರವನ್ನು ನಾಶಗೊಳಿಸುವನೋ, ಹಾಗೆ ನಮ್ಮ ಹೃದಯಾಂಧಕಾರವನ್ನು ನಾಶಗೊಳಿಸುವುದಕ್ಕಾಗಿ ಪುರಾಣರೂಪವನ್ನು ಧರಿಸಿದ್ದಾನೆ.

"ಪುರಾಣಂ ಶೃಣುಯಾನ್ನಿತ್ಯಮ್" ಎಂಬಂತೆ ಪ್ರತಿದಿನ ಪುರಾಣಶ್ರವಣವು ಸಂಪ್ರದಾಯವಾಗಿದೆ. ಅನುದಿನ ಪುರಾಣ ಪಠಣ, ಶ್ರವಣಗಳಿಂದ ಭಗವದ್ಭಕ್ತಿ ಜಾಗೃತಗೊಂಡು ಚಿತ್ತಶುದ್ಧಿಯಾಗುವುದರ ಮೂಲಕ ತತ್ವ ಜಿಜ್ಞಾಸೆಯುಂಟಾಗುತ್ತದೆ. ಇದನ್ನೆ ಪದ್ಮಪುರಾಣದಲ್ಲಿ ಹೀಗೆ ಹೇಳಿದೆ.

ತಸ್ಮಾದ್ಯದಿ ಹರೇಃ ಪ್ರೀತೇರುತ್ಪಾದೇ ಧೀಯತೇ ಮತಿಃ ।
ಶ್ರೋತವ್ಯಮನಿಶಂ ಪುಂಭಿಃ ಪುರಾಣಂ ಕೃಷ್ಣರೂಪಿಣಃ ॥
(ಪದ್ಮ. ಸ್ವರ್ಗ.62-63)

ಮತ್ಸ್ಯ, ಮಾರ್ಕಂಡೇಯ, ಭವಿಷ್ಯ, ಭಾಗವತ, ಬ್ರಹ್ಮ, ಬ್ರಹ್ಮವೈವರ್ತ, ಬ್ರಹ್ಮಾಂಡ, ವಾಮನ, ವರಾಹ, ವಾಯು, ವಿಷ್ಣು, ಅಗ್ನಿ, ನಾರದ, ಪದ್ಮ, ಲಿಂಗ, ಗರುಡ, ಕೂರ್ಮ ಮತ್ತು ಸ್ಕಾಂದ ಎಂಬುದಾಗಿ ಅಷ್ಟಾದಶ ಮಹಾಪುರಾಣಗಳು ಹಾಗೂ ಸನತ್ಕುಮಾರ, ನಾರಸಿಂಹ, ಕಾಪಿಲ ಮೊದಲಾದ ಅಷ್ಟಾದಶ ಉಪಪುರಾಣಗಳಿವೆ ಎಂಬುದು ಸರ್ವವಿದಿತವಾದ ವಿಷಯವಾಗಿದೆ. ಇವುಗಳಲ್ಲಿ 81 ಸಾವಿರ ಶ್ಲೋಕಗಳಿಂದ ಕೂಡಿದ ಸ್ಕಾಂದ ಪುರಾಣವು ಅತಿಮಹತ್ವದ ಪುರಾಣವಾದರೆ, 55 ಸಾವಿರ ಶ್ಲೋಕಗಳನ್ನೊಳಗೊಂಡ ಪದ್ಮಪುರಾಣವೇ ಎರಡನೆಯ ದೊಡ್ಡ ಪುರಾಣವೆನಿಸಿದೆ.

ಪುರಾಣಗಳಲ್ಲಿಪ್ರತಿಪಾದ್ಯವಾಗಿರುವ ವಿಷಯ

ಪುರಾಣಕ್ಕೆ ಐದು ಮುಖ್ಯ ಲಕ್ಷಣಗಳನ್ನು ಅಮರಸಿಂಹನು ಹೇಳುತ್ತಾನೆ.

ಸರ್ಗಶ್ಚ ಪ್ರತಿಸರ್ಗಶ್ಚ ವಂಶೋ ಮನ್ವಂತರಾಣಿ ಚ ।
ವಂಶಾನುಚರಿತಂ ಚೇತಿ ಪುರಾಣಂ ಪಂಚಲಕ್ಷಣಮ್ ॥

ಜಗತ್ತಿನ ಪ್ರಥಮ ಸೃಷ್ಟಿ ಅಂದರೆ ಮೂಲಸೃಷ್ಟಿ (ಬ್ರಹ್ಮನು ತಾನೇ ಮಾಡುವ ಮುಖ್ಯಸೃಷ್ಟಿ), ಅವನ ಮಾನಸಪುತ್ರರ ಮೂಲಕ ಆಗುವ

ಅನುಸೃಷ್ಟಿ (ಅವಾಂತರ ಸೃಷ್ಟಿ), ದೇವತೆಗಳ ಮತ್ತು ಪಿತೃಗಳ ವಂಶಕ್ರಮ, ಸ್ವಾಯಂಭುವಾದ ಚತುರ್ದಶ ಮನುಗಳ ಇತಿಹಾಸ, ಸೂರ್ಯ ಮತ್ತು ಚಂದ್ರರ ವಂಶಾವಳಿ.

ಈ ಐದು ಮುಖ್ಯ ಲಕ್ಷಣಗಳು ಎಲ್ಲ ಪುರಾಣಗಳಲ್ಲಿ ಕಂಡುಬರುತ್ತದೆ. ಇವುಗಳ ಜೊತೆಗೆ ಧರ್ಮಶಾಸ್ತ್ರ, ವೇದಾಂತ, ಯೋಗ, ಸಾಂಖ್ಯ, ಜ್ಯೋತಿಷ, ವೈದ್ಯ, ವ್ಯಾಕರಣ, ಧನುರ್ವೇದ, ಸಂಗೀತ, ಶಿಲ್ಪ, ಅಲಂಕಾರ, ದೇವತಾಭಕ್ತಿ, ಪೂಜೆ, ಸದಾಚಾರ ನಿಷ್ಠೆ, ಕ್ಷೇತ್ರತೀರ್ಥಾದಿಗಳ ಮಾಹಾತ್ಮ್ಯ ಮುಂತಾದ ವಿಷಯಗಳು ಕಂಡುಬರುತ್ತವೆ. ದೇವತೆಗಳ ಪ್ರಶಂಸೆ, ನಿಂದೆ, ಶೈವ, ವೈಷ್ಣವ ಮತಗಳ ಸ್ಪರ್ಧೆ ಮೊದಲಾದ ಅಂಶಗಳು ಕೆಲವು ಪುರಾಣಗಳಲ್ಲಿ ವಿವರಿಸಲ್ಪಟ್ಟಿವೆ. ಈ ಎಲ್ಲ ಬಗೆಯ ವರ್ಣನೆ, ವೈಪರೀತ್ಯಗಳಿದ್ದರೂ ಪುರಾಣಗಳ ಮುಖ್ಯ ಗುರಿ ಧರ್ಮದರ್ಶನ ಹಾಗೂ ಲೋಕನೀತಿಗಳಾಗಿವೆ. ಈ ಎಲ್ಲ ಅಂಶಗಳು ಉಳಿದ ಪುರಾಣಗಳಲ್ಲಿ ಇರುವಂತೆ ಪದ್ಮಪುರಾಣದಲ್ಲಿಯೂ ಇವೆ.

ಪುರಾಣಗಳ ಕಾಲ ಮತ್ತು ಕರ್ತೃವಿನ ಬಗ್ಗೆ ಇರುವ ಭಿನ್ನಾಭಿಪ್ರಾಯಗಳಿಗೆ ಉತ್ತರವೆಂಬಂತೆ ಪದ್ಮಪುರಾಣದ ಸೃಷ್ಟಿಖಂಡದಲ್ಲಿ ಹೀಗೆ ವಿವರಿಸಿದೆ.

ಪುರಾಣಂಸರ್ವಶಾಸ್ತ್ರಾಣಾಂ ಪ್ರಥಮಂ ಬ್ರಹ್ಮಣಾ ಸ್ಮೃತಮ್ ।
ತ್ರಿವರ್ಗಸಾಧನಂ ಪುಣ್ಯಂ ಶತಕೋಟಿಪ್ರವಿಸ್ತರಮ್ ॥

ಕಾಲೇನಾಗ್ರಹಣಂ ವೃಷ್ಟ್ವಾ ಪುರಾಣಸ್ಯ ತದಾ ವಿಭುಃ ।
ವ್ಯಾಸರೂಪಸ್ತವಾ ಬ್ರಹ್ಮಾ ಸಂಗ್ರಹಾರ್ಥಂ ಯುಗೇ ಯುಗೇ ॥
ಚತುರ್ಲಕ್ಷ ಪ್ರಮಾಣೇನ ದ್ವಾಪರೇ ದ್ವಾಪರೇ ಜಗೌ ।
ತದಾಷ್ಟಾದಶಧಾ ಕೃತ್ವಾ ಭೂಲೋಕೈಸ್ಮಿನ್ ಪ್ರಕಾಶಿತಮ್ ॥

ವೇದಗಳಂತೆ ಪುರಾಣಗಳೂ ಅತ್ಯಂತ ಪ್ರಾಚೀನವಾದವುಗಳು. ಅವುಗಳನ್ನು ಯಾರೂ ರಚಿಸಿಲ್ಲ. ಸೃಷ್ಟಿಕರ್ತನಾದ ಬ್ರಹ್ಮ ಅವುಗಳನ್ನು ಸ್ಮರಿಸಿಕೊಂಡನು. ಇವುಗಳು ಒಟ್ಟು ಒಂದು ನೂರು ಕೋಟಿ ಶ್ಲೋಕಗಳಿಂದ ಕೂಡಿದ್ದವು. ನಂತರ ಕಾಲಚಕ್ರದ ಪ್ರಭಾವದಿಂದಾಗಿ ಮನುಷ್ಯನ ಆಯುರ್ಮಾನ ಕಡಿಮೆಯಾಗುತ್ತಾ ಬಂದಿರುವುದರಿಂದ ಇಷ್ಟು ವಿಸ್ತಾರವಾದ ಪುರಾಣಗಳ ಶ್ರವಣ ಹಾಗೂ ಪಠನವು ದುಃಸಾಧ್ಯವೆಂದು ಮನಗಂಡ ಭಗವಂತನೇ (ಬ್ರಹ್ಮನೇ, ದ್ವಾಪರದಲ್ಲಿ ವ್ಯಾಸಮಹರ್ಷಿಗಳ ರೂಪದಲ್ಲಿ ಅವತಾರ ತಾಳಿ ಇವುಗಳನ್ನು ನಾಲ್ಕು ಲಕ್ಷ ಶ್ಲೋಕಗಳಿಗೆ ಸಂಕ್ಷೇಪಗೊಳಿಸಿ, ಹದಿನೆಂಟು ಭಾಗಗಳನ್ನಾಗಿ ಮಾಡಿದನೆಂದೂ, ಇವೇ ಹದಿನೆಂಟು ಪುರಾಣಗಳೆಂದು ಇಂದು ಭೂಲೋಕದಲ್ಲಿ ಪ್ರಸಿದ್ಧವಾಗಿವೆ. ಸ್ವರ್ಗಾದಿಗಳಲ್ಲಿ ಇಂದಿಗೂ ಒಂದುನೂರುಕೋಟಿಯ ವಿಸ್ತಾರವಾದ ಪುರಾಣ ಮಹತ್ತರವಾದುದು. "ಅಷ್ಟಾದಶ ಪುರಾಣಾನಾಂ ಕರ್ತಾ ಸತ್ಯವತೀ ಸುತಃ" ಎಂದು ಸಂಪ್ರದಾಯವಿರುವುದರಿಂದ ದ್ವೈಪಾಯನ ವೇದವ್ಯಾಸರು ಹದಿನೆಂಟು ಪುರಾಣಗಳನ್ನು ರಚಿಸಿದ್ದಾರೆಂದು ಹಲವರ ಅಭಿಮತ.

"ಇತಿಹಾಸಪುರಾಣಂ ಪಂಚಮಂ ವೇದಾನಾಂ ವೇದಃ" ಎಂಬ ಛಾಂದೋಗ್ಯೋಪನಿಷತ್ತಿನ ಉಲ್ಲೇಖದಂತೆ ಇತಿಹಾಸದಿಂದ ಅವುಗಳ ಅಧ್ಯಯನವನ್ನು ಮಾಡುತ್ತೇವೆ. ವೇದಗಳ ನಂತರ ಪುರಾಣಗಳೇ ನಮಗೆ ಪ್ರಮಾಣ ಗ್ರಂಥಗಳಾಗಿವೆ. ವೇದಗಳಲ್ಲಿ ಸೂತ್ರರೂಪದಲ್ಲಿ ಬೋಧಿಸಿದ ವಿಷಯಗಳೇ ಪುರಾಣಗಳಲ್ಲಿ ವಿಸ್ತಾರವಾಗಿ ವಿವರಿಸಲ್ಪಟ್ಟಿವೆ.

ಭಗವಾನ್ ವ್ಯಾಸರ ಶಿಷ್ಯನಾದ ಬಹಳ ಬುದ್ಧಿವಂತನಾದ ಲೋಮಹರ್ಷಣನ ಮಗನಾದ ಉಗ್ರಶ್ರವನೆಂಬ ಹೆಸರಿನ ಸೂತಪುರಾಣಿಕನು ನೈಮಿಷಾರಣ್ಯದ ಗಂಗಾವರ್ತ ಎಂಬ ಹೆಸರಿನ ಪುಣ್ಯಕ್ಷೇತ್ರದ ದೀರ್ಘಕಾಲ ನಡೆಯುವ ಯಜ್ಞಾನುಷ್ಠಾನದಲ್ಲಿ ತೊಡಗಿರುವ ಶೌನಕಾದಿ ಮಹರ್ಷಿಗಳಿಗೆ ಅಷ್ಟಾದಶ ಪುರಾಣಗಳನ್ನು ಸವಿಸ್ತಾರವಾಗಿ ಬೋಧಿಸಿದನೆಂದು ಪದ್ಮಪುರಾಣದ ಉಪಕ್ರಮದಲ್ಲಿ ಹೇಳಿದೆ.

ಈ ಪದ್ಮಪುರಾಣದಲ್ಲಿ ಐದು ಖಂಡಗಳು, 55 ಸಾವಿರ ಶ್ಲೋಕಗಳಿವೆ.

1) ಸೃಷ್ಟಿಖಂಡ 2) ಭೂಮಿಖಂಡ 3) ಸ್ವರ್ಗಖಂಡ 4) ಪಾತಾಲಖಂಡ 5) ಉತ್ತರಖಂಡ.

ಪ್ರಥಮಂ ಸೃಷ್ಟಿಖಂಡಂ ಹಿ
ಭೂಮಿಖಂಡಂ ದ್ವಿತೀಯಕಮ್ ।

ತೃತೀಯಂ ಸ್ವರ್ಗಖಂಡಂ ಚ
ಪಾತಾಲಂ ಚ ಚತುರ್ಥಿಕಮ್ ।
ಪಂಚಮಂ ಚೋಕ್ತಂ ಖಂಡಂ
ಸರ್ವಪಾಪ ಪ್ರಣಾಶನಮ್ ॥ (ಪದ್ಮ, ಭೂಮಿ 125–48–49)

ಸಮಸ್ತ ಜಗತ್ತಿನ ಉತ್ಪತ್ತಿಗೆ ಕಾರಣೀಭೂತವಾದುದು ಭಗವಂತನ ನಾಭಿಯಲ್ಲಿ ಪ್ರಕಟಗೊಂಡ ದಿವ್ಯವಾದ ಪದ್ಮ. ಈ ದಿವ್ಯ ಪದ್ಮದಿಂದ ಉತ್ಪನ್ನವಾದ ಸೃಷ್ಟಿಯ ವೃತ್ತಾಂತವನ್ನು ಆಶ್ರಯಿಸಿ ಈ ಪುರಾಣವು ಪ್ರಕಟಗೊಂಡಿರುವುದರಿಂದ ಇದಕ್ಕೆ 'ಪದ್ಮಪುರಾಣ'ವೆಂಬ ಹೆಸರು ಬಂದಿದೆ. ಸ್ವಾಭಾವಿಕವಾಗಿಯೇ ನಿರ್ಮಲವಾದ ಈ ಪುರಾಣವು ಶ್ರೀವಿಷ್ಣುವಿನ ಮಹಾತ್ಮ್ಯದ ವರ್ಣನೆಯಿಂದ ನಿರ್ಮಲಕರವಾಗಿ ಶೋಭಿಸಿದೆ. ಹಿಂದೆ ದೇವಾಧಿದೇವನಾದ ವಿಷ್ಣುವೇ – ಈ ಪುರಾಣವನ್ನು ಉಪದೇಶಿಸಿದನೆಂದೂ, ತದನಂತರ ಬ್ರಹ್ಮನು ತನ್ನ ಮಗನಾದ ಮರೀಚಿಗೆ ಉಪದೇಶಿಸಿ, ಜಗತ್ತಿನಲ್ಲಿ ಪ್ರಚುರಪಡಿಸಿದನೆಂದು ಪದ್ಮಪುರಾಣದ ಉಪಕ್ರಮದಲ್ಲಿ ಉಲ್ಲೇಖವಿದೆ.

ಪುರಾಣಗಳಲ್ಲಿ "ವಿಷ್ಣುಪುರಾಣ"ಕ್ಕೆ ಅತ್ಯಂತ ಶ್ರೇಷ್ಠ ಸ್ಥಾನವಿದೆ. ಇದನ್ನು ಭಗವಂತನ ಪುರಾಣರೂಪ ವಿಗ್ರಹದ ಹೃದಯವೆಂದು ಪರಿಗಣಿಸಿದ್ದಾರೆ.

ಏಕಂ ಪುರಾಣಂ ರೂಪಂ ವೈ ತತ್ರ ಪಾದ್ಮಂ ಪರಂ ಮಹತ್ ।
ಬ್ರಾಹ್ಮಂ ಮೂರ್ಧಾ ಹರೇರೇವ ಹೃದಯಂ ಪದ್ಮಸಂಜ್ಞಕಮ್ ॥
(ಪದ್ಮ ಪು. ಸ್ವರ್ಗಖಂಡ 62/2–7)

ಇದರಲ್ಲಿ ಭಗವಂತನಾದ ಮಹಾವಿಷ್ಣುವಿನ ಮಹಿಮೆಯನ್ನು ವಿಶೇಷವಾಗಿ ವರ್ಣಿಸಿದ್ದಾರೆ. ಎಲ್ಲ ದೇವತೆಗಳಿಗೆ ದೇವತೆಯಾದವನು ವಿಷ್ಣುವಾಗಿದ್ದರೂ, ವಿಷ್ಣುವನ್ನು ಬ್ರಹ್ಮ ಮತ್ತು ಶಂಕರನೊಡನೆ ಅಭೇದವನ್ನು ಪ್ರತಿಪಾದಿಸಿದ್ದಾರೆ. ಮಹಾವಿಷ್ಣುವೇ ಬ್ರಹ್ಮನಾಗಿ ಸಂಸಾರದ ಸೃಷ್ಟಿಯನ್ನು ಮಾಡಿದನೆಂದೂ, ಅವನೇ ಪ್ರತಿಯೊಂದು ಯುಗದಲ್ಲಿಯೂ ಅವತರಿಸಿ ಸಮಸ್ತ ಸೃಷ್ಟಿಯ ರಕ್ಷಣೆಯನ್ನು ಮಾಡುತ್ತಿದ್ದಾನೆಂದೂ, ಪುನಃ ಕಲ್ಪಾಂತ್ಯದಲ್ಲಿ ತಾನೇ ರುದ್ರರೂಪದಲ್ಲಿ ಅವತರಿಸಿ ಸಮಸ್ತ ಜೀವಿಗಳ ಅಂತ್ಯಕ್ಕೂ ಕಾರಣನಾಗುತ್ತಾನೆಂದೂ, ನಂತರ ಸ್ವತಃ ತಾನು ಆದಿಶೇಷನೆಂಬ ಹಾಸಿಗೆಯಲ್ಲಿ ಮಲಗುತ್ತಾನೆಂದೂ, ಪುನಃ ಎಚ್ಚರಗೊಂಡು ಬ್ರಹ್ಮನ ರೂಪ ಧರಿಸಿ ಸೃಷ್ಟಿ ಕ್ರಿಯೆಯನ್ನು ಆರಂಭಿಸುತ್ತಾನೆಂದೂ ಪದ್ಮಪುರಾಣದಲ್ಲಿ ವರ್ಣಿಸಿದೆ. ಅಂದರೆ ಭಗವಂತನಾದ ಜನಾರ್ದನನೇ ಬ್ರಹ್ಮ–ವಿಷ್ಣು–ಮಹೇಶ್ವರರೆಂಬ ಹೆಸರಿನಿಂದ ಪ್ರಪಂಚದ ಸೃಷ್ಟಿ, ಸ್ಥಿತಿ, ಲಯವನ್ನು ಮಾಡುವವನು. ಈ ವಿಷಯದಲ್ಲಿ ಪದ್ಮಪುರಾಣದಲ್ಲಿ ಶ್ರೀಕೃಷ್ಣನು ಹೇಳಿದ ಮಾತು ಪುಷ್ಟಿದಾಯಕವಾಗಿದೆ.

ಸೃಷ್ಟಿಸ್ಥಿತ್ಯಂತಕರಣಾದ್ ಬ್ರಹ್ಮವಿಷ್ಣುಶಿವಾತ್ಮಕಃ ।
ಸ ಸಂಜ್ಞಾಂ ಯಾತಿ ಭಗವಾನೇಕ ಏವ ಜನಾರ್ದನಃ ॥
(ಪದ್ಮ.ಪು. ಸೃಷ್ಟಿ. 2–114)

ಸೂರ್ಯ, ಶಿವ, ಗಣೇಶ, ವಿಷ್ಣು ಮತ್ತು ಶಕ್ತಿದೇವತೆಗಳ ಉಪಾಸನೆ ಮಾಡುವ ಎಲ್ಲ ಭಕ್ತರೂ ನನ್ನನ್ನೇ ಹೊಂದುತ್ತಾರೆ. ಹೇಗೆ ಎಲ್ಲ ಕಡೆಯಿಂದ ಹರಿದು ಬರುವ ಮಳೆಗಾಲದ ನೀರು ಸಮುದ್ರವನ್ನೇ ಸೇರುತ್ತದೆಯೋ ಹಾಗೆ ಎಲ್ಲ ಪಂಚಮೂರ್ತಿ ಉಪಾಸಕರು ನನ್ನಲ್ಲಿಗೆ ಬರುತ್ತಾರೆ. ವಸ್ತುತಃ ನಾನು ಒಬ್ಬನೇ. ನನ್ನ ಲೀಲೆಯಿಂದಾಗಿ ಐದು ರೂಪಗಳನ್ನು ಧರಿಸುತ್ತೇನೆ. ಹೇಗೆ ಒಬ್ಬನೇ (ದೇವದತ್ತನನ್ನು) ತಂದೆ, ಮಗ ಮುಂತಾದ ಹೆಸರುಗಳಿಂದ ಕರೆಯುತ್ತಾರೋ ಹಾಗೆ ಭಕ್ತರು ನನ್ನನ್ನು ಬೇರೆ ಬೇರೆ ಹೆಸರುಗಳಿಂದ ಕರೆಯುತ್ತಾರೆ.

ಸೌರಾಶ್ಚ ಶೈವಾ ಗಾಣೇಶಾ ವೈಷ್ಣವಾಃ ಶಕ್ತಿಪೂಜಕಾಃ ।
ಮಾಮೇವ ಪ್ರಾಪ್ನುವಂತೀಹ ವರ್ಷಾಪಃ ಸಾಗರಂ ಯಥಾ ॥
ಏಕೋಽಹಂ ಪಂಚಧಾ ಜಾತಃ ಕ್ರೀಡಯಾ ನಾಮಭಿಃ ಕಿಲ ।
ದೇವದತ್ತೋ ಯಥಾ ಕಶ್ಚಿತ್ ಪುತ್ರಾದ್ಯಾಹ್ವಾನ ನಾಮಭಿಃ ॥
(ಪದ್ಮ. ಉತ್ತರ. 90–63–64)

ಪದ್ಮಪುರಾಣದಲ್ಲಿ ಮಹಾವಿಷ್ಣುವಿನ ಮಹಿಮೆಯ ಜೊತೆಗೆ ಅವನ ಅವತಾರಗಳ, ಪರಾತ್ಪರರೂಪದ ವೈಶಿಷ್ಟ್ಯವನ್ನು ವಿಶದವಾಗಿ

ವರ್ಣಿಸಿದೆ. ಸೃಷ್ಟಿಖಂಡದ ಪ್ರಾರಂಭದಲ್ಲಿ ಭೀಷ್ಮ ಮತ್ತು ಪುಲಸ್ತ್ಯರ ಸಂವಾದದಲ್ಲಿ ಪ್ರಪಂಚದ ಸೃಷ್ಟಿಯ ವರ್ಣನೆ ಹಾಗೂ ಭಗವಾನ್ ವಿಷ್ಣುವಿನ ಮಹಿಮಾ ವರ್ಣನೆ ಮನೋಜ್ಞವಾಗಿದೆ. ಬ್ರಹ್ಮನ ಆಯುಷ್ಯ, ಯುಗಗಳು, ಅವುಗಳ ಕಾಲ ಮತ್ತು ಬ್ರಹ್ಮನಿಂದ ರಚಿಸಲ್ಪಟ್ಟ ವಿವಿಧ ಸರ್ಗಗಳ ವರ್ಣನೆಯಿದೆ. ಬ್ರಾಹ್ಮಣಾದಿ ವರ್ಣಗಳ ಉತ್ಪತ್ತಿ, ಸ್ವಾಯಂಭುವ ಮನುವಿನ ಸೃಷ್ಟಿ – ಅವನ ಸಂತಾನ ಪರಂಪರೆಯ ವರ್ಣನೆಯಿದೆ. ಸಮುದ್ರಮಥನದ ಕಥೆ – ಅಮೃತ–ಲಕ್ಷ್ಮಿ–ದೇವ–ದಾನವ–ಗಂಧರ್ವ–ನಾಗ ಮತ್ತು ರಾಕ್ಷಸರ ಉತ್ಪತ್ತಿಯ ವರ್ಣನೆ ಹಾಗೂ ಹದಿನಾಲ್ಕು ಮನ್ವಂತರಗಳ, ಸೂರ್ಯವಂಶದ ಮತ್ತು ಮರುದ್ಗಣಗಳ ವರ್ಣನೆಯಿದೆ.

ಪಿತೃಶ್ರಾದ್ಧದ ವಿಭಿನ್ನ ಅಂಗಗಳ ವಿಷಯ, ಏಕೋದ್ದಿಷ್ಟ ಶ್ರಾದ್ಧ ಮೊದಲಾದ ವಿವಿಧ ಶ್ರಾದ್ಧಗಳ ವಿಧಿವಿಧಾನಗಳು, ಶ್ರಾದ್ಧೋಪಯೋಗಿ ತೀರ್ಥಗಳ ವಿಷಯಗಳು ವಿವರಿಸಲ್ಪಟ್ಟಿವೆ.

ಆದಿತ್ಯಶಯನ ಮತ್ತು ರೋಹಿಣೀ ಚಂದ್ರಶಯನ ಮೊದಲಾದ ವಿವಿಧ ವ್ರತಗಳ ಮಹಿಮೆ, ಸ್ನಾನ ಮತ್ತು ತರ್ಪಣಗಳ ವಿಚಾರ, ಸತ್ಸಂಗದ ಪ್ರಭಾವದಿಂದ ಪಂಚಪ್ರೇತಗಳ ಉದ್ಧಾರಗಳ ವಿಷಯಗಳಿವೆ. ಪಿತೃಭಕ್ತಿ, ಪಾತಿವ್ರತ್ಯ, ಸಮತೆ, ಅದ್ರೋಹ ಮತ್ತು ವಿಷ್ಣುಭಕ್ತಿಯೆಂಬ ಪಂಚಮಹಾಯಜ್ಞಗಳ ವಿಷಯ, ಸತ್ಯ, ತ್ಯಾಗ ಮೊದಲಾದ ಸದ್ಗುಣಗಳ ಪ್ರಭಾವ, ಮಾರ್ಕಂಡೇಯ ಮುನಿಯ ವೃತ್ತಾಂತ, ಸಂಕ್ರಮಣದ ಪುಣ್ಯವಿಚಾರ, ರುದ್ರಾಕ್ಷ–ತುಲಸಿ ಮೊದಲಾದ ದಿವ್ಯವಸ್ತುಗಳ ಉತ್ಪತ್ತಿ ಹಾಗೂ ಮಹಿಮೆಯ ವರ್ಣನೆಗಳು ಸೃಷ್ಟಿಖಂಡದಲ್ಲಿವೆ.

ಮಾತೃಮಹಿಮೆ :

ನಾಸ್ತಿ ಮಾತೃಸಮೋ ನಾಥಃ ನಾಸ್ತಿ ಮಾತೃಸಮಾ ಗತಿಃ ।
ನಾಸ್ತಿ ಮಾತೃಸಮಃ ಸ್ನೇಹಃ, ನಾಸ್ತಿ ಮಾತೃ ಸಮಂ ಸುಖಮ್ ॥
ನಾಸ್ತಿ ಮಾತೃಸಮೋವೇವಃ ಇಹಲೋಕೇ ಪರತ್ರ ಚ ।
(ಪದ್ಮ. 18/353–54)

ಪತಿವ್ರತಾಸ್ತ್ರೀಯ ವರ್ಣನೆ :

ಪತಿವ್ರತಾ ಚ ಯಾ ನಾರೀ ಪತ್ಯುರ್ನಿತ್ಯಂ ಹಿತೇರತಾ ।
ಕುಲದ್ವಯಸ್ಯ ಪುರಾಷಾನುದ್ಧರೇತ್ತಾ ಶತಂ ಶತಮ್ ॥
ಕಾರ್ಯೇ ವಾಸೀ ರತೌ ವೇಶ್ಯಾ ಭೋಜನೇ ಜನನೀ ಸಮಾ ।
ವಿಪತ್ಸು ಮಂತ್ರಿಣೀ ಭರ್ತುಃ ಸಾ ಚ ಭಾರ್ಯಾ ಪತಿವ್ರತಾ ॥
(ಪದ್ಮ. 47/51,53)

ಸತ್ಯದ ಮಹಿಮೆ

ಯೋ ವದೇತ್ ಸರ್ವಕಾರ್ಯೇಷು ಸತ್ಯಂ ಮಿಥ್ಯಾಂ ಪರಿತ್ಯಜೇತ್ ।
ಸ ನಿಸ್ತರತಿ ದುರ್ಗಾಣಿ ಸ್ವರ್ಗಮಕ್ಷಯಮಶ್ನುತೇ ॥
(ಪದ್ಮ.45/17)

ಸತ್ಯೇನ ಸಮಭಾವೇನ ಜಿತಂ ಯೇನ ಜಗತ್ರಯಮ್ ।
ತೇನಾತೃಪ್ಯಂತ ಪಿತರೋ ವೇವಾ ಮುನಿಗಣೈಃ ಸಹ ॥
ಭೂತಭವ್ಯಪ್ರವೃತ್ತಂಚ ತೇನ ಜಾನಾತಿ ಧಾರ್ಮಿಕಃ ।
ನಾಸ್ತಿ ಸತ್ಯಾತ್ಪರೋ ಧರ್ಮೋ ನಾನೃತಾತ್‌ಪಾತಕಂ ಪರಮ್ ॥
(ಪದ್ಮ. ಸೃಷ್ಟಿ. 47/92)

ಭೂಮಿಖಂಡದಲ್ಲಿ–ಶಿವಶರ್ಮಾಮತ್ತು ಅವನ ನಾಲ್ವರು ಮಕ್ಕಳ ಪಿತೃಭಕ್ತಿಯ ಕಥೆ, ತನ್ಮೂಲಕ ವಿಷ್ಣುಲೋಕಪ್ರಾಪ್ತಿಯ ಕಥೆ, ಧರ್ಮಾತ್ಮರ ಹಾಗೂ ಪಾಪಿಗಳ ಮರಣದ ವರ್ಣನೆ, ಶುಭಾಶುಭ ಕರ್ಮಗಳ ಫಲ, ಸ್ವರ್ಗ–ನರಕಕ್ಕೆ ಹೋಗುವ ನರರ ಸ್ಥಿತಿ–ಗತಿಗಳ ವರ್ಣನೆಗಳಿವೆ. ಇವುಗಳ ಜೊತೆಗೆ ಯಯಾತಿಯ ಮತ್ತು ಚ್ಯವನನ ಪೂರ್ವವೃತ್ತಾಂತದ ಕಥೆಯಿದೆ. ಖಂಡದ ಕೊನೆಯಲ್ಲಿ ಪದ್ಮಪುರಾಣದ ಮಹಿಮೆಯನ್ನು ವರ್ಣಿಸಿದೆ.

ಧರ್ಮಾಚರಣೆಯ ಅಂಗಗಳು :

ಬ್ರಹ್ಮಚರ್ಯೇಣ ತಪಸಾ ಮಖಪಂಚಕವರ್ತನೈಃ ।
ದಾನೇನ ನಿಯಮೈಶ್ಚಾಪಿ ಕ್ಷಮಾಶೌಚೇನವಲ್ಲಭ ॥

ಅಹಿಂಸಯಾ ಸುಶಕ್ತ್ಯಾಚ ಹ್ಯಸ್ತೇಯೇನಾಪಿವರ್ತನೈಃ ।
ಏತೈರ್ವಶಿಭಿರಂಶೈಸ್ತು ಧರ್ಮಮೇವ ಪ್ರಪೂರಯೇತ್ ॥
(ಪದ್ಮ. ಭೂಮಿ. 12/44–45)

ಶಿವ–ವಿಷ್ಣು–ಅಭೇದ ವರ್ಣನೆ :

ಶೈವಂ ಚ ವೈಷ್ಣವಂ ಲೋಕಮೇಕರೂಪಂ ನರೋತ್ತಮ ।
ದ್ವಯೋಶ್ಚಾಪ್ಯಂತರಂ ನಾಸ್ತಿ ಏಕರೂಪಂ ಮಹಾತ್ಮನೋಃ ॥
ಶಿವಾಯ ವಿಷ್ಣುರೂಪಾಯ ವಿಷ್ಣವೇ ಶಿವರೂಪಿಣೇ ।
ಶಿವಸ್ಯ ಹೃದಯೇ ವಿಷ್ಣುಃ ವಿಷ್ಣೋಶ್ಚ ಹೃದಯೇ ಶಿವಃ ॥
ಏಕಮೂರ್ತಿಸ್ತ್ರಯೋ ದೇವಾಃ ಬ್ರಹ್ಮವಿಷ್ಣುಮಹೇಶ್ವರಾಃ ।
ತ್ರಯಾಣಾಮಂತರಂ ನಾಸ್ತಿ ಗುಣಭೇದಾಃ ಪ್ರಕೀರ್ತಿತಾಃ ॥
(ಪದ್ಮ. ಭೂಮಿ 71/18–20)

ಸ್ವರ್ಗಖಂಡದಲ್ಲಿ ಉಪಕ್ರಮದಲ್ಲಿ ಭಾರತವರ್ಷದ ತೀರ್ಥಕ್ಷೇತ್ರಗಳು, ಪರ್ವತ, ರಾಜರ, ಜನಪದದ, ನದಿಗಳ, ಪೂರ್ವೋತ್ತರ–ದಕ್ಷಿಣದೇಶದ ಪ್ರದೇಶಗಳ ವಿಶೇಷ ವರ್ಣನೆಯಿದೆ. ಬ್ರಹ್ಮಚರ್ಯ ಮತ್ತು ಬ್ರಹ್ಮಚಾರಿಯ ಧರ್ಮ, ಸ್ನಾತಕ ಮತ್ತು ಗೃಹಸ್ಥನ ಧರ್ಮದ ವರ್ಣನೆಯಿದೆ. ವ್ಯಾವಹಾರಿಕ ಶಿಷ್ಟಾಚಾರದ ಮಹತ್ವ, ಗೃಹಸ್ಥಧರ್ಮ ಪಾಲನೆಯಲ್ಲಿ ಭಕ್ಷ್ಯ–ಅಭಕ್ಷ್ಯ ವಿಚಾರ, ವಾನಪ್ರಸ್ಥ ಮತ್ತು ಸಂನ್ಯಾಸ ಧರ್ಮದ ವಿವರಗಳಿವೆ. ಕೊನೆಯಲ್ಲಿ ಶ್ರೀಹರಿಯ ಪದ್ಮಪುರಾಣದ ಸ್ವರೂಪದ ವರ್ಣನೆಯಿದೆ.

ತ್ರಿವಿಧ ಸಂನ್ಯಾಸ ವಿಚಾರ :

ಜ್ಞಾನಸಂನ್ಯಾಸಿನಃ ಕೇಚಿತ್ ವೇದಸಂನ್ಯಾಸಿನೋಽಪರೇ ।
ಕರ್ಮಸಂನ್ಯಾಸಿನಸ್ತ್ವನ್ಯೇ ತ್ರಿವಿಧಾಃ ಪರಿಕೀರ್ತಿತಾಃ ॥
ಯಃ ಸರ್ವತ್ರ ವಿನಿರ್ಮುಕ್ತೋ ನಿರ್ದ್ವಂದ್ವಶ್ಚೈವ ನಿರ್ಭಯಃ ।
ಪ್ರೋಚ್ಯತೇ ಜ್ಞಾನಸಂನ್ಯಾಸೀ ಆತ್ಮನ್ಯೇವ ವ್ಯವಸ್ಥಿತಃ ॥
ವೇದಮೇವಾಭ್ಯಸೇನ್ನಿತ್ಯಂ ನಿರಾಶೀರ್ನಿಷ್ಪರಿಗ್ರಹಃ ।
ಪ್ರೋಚ್ಯತೇ ವೇದ ಸಂನ್ಯಾಸೀ ಮುಮುಕ್ಷುರ್ವಿಜಿತೇಂದ್ರಿಯಃ
ಯಸ್ತ್ವಗ್ನಿಮಾತ್ಮಸಾತ್ ಕೃತ್ವಾ ಬ್ರಹ್ಮಾರ್ಪಣಪರೋದ್ವಿಜಃ ।
ಜ್ಞೇಯಃ ಸಃ ಕರ್ಮಸಂನ್ಯಾಸೀ ಮಹಾಯಜ್ಞಪರಾಯಣಃ ॥

ಶ್ರೀಹರಿ ಸೇವಾ ಫಲ :

ಸತತ ನಿಯತಚೆತ್ತೋ ವಿಷ್ಣುಪಾದಾರವಿಂದೇ
ವಿತರಣಮನಶಕ್ತಿ ಪ್ರೀತಯೇ ತಸ್ಯಕುರ್ಯಾತ್ ।
ನತಿಮತಿರತಿಮಸ್ಯಾಂಘ್ರಿ ದ್ವಯೇ
ಸ ಹಿ ಖಲು ನರಲೋಕೋ ಪೂಜ್ಯತಾಮಾಪ್ನುಯಾಚ್ಚ ॥

ಪಾತಾಲಖಂಡದ ಪ್ರಾರಂಭದಲ್ಲಿ, ಲಂಕೆಯಿಂದ ಅಯೋಧ್ಯೆಗೆ ಶ್ರೀರಾಮಚಂದ್ರನ ಆಗಮನ ಮತ್ತು ರಾಮಾಶ್ವಮೇಧಯಾಗದ ಪೂರ್ಣ ವರ್ಣನೆಯಿದೆ. ಅಶ್ವಮೇಧಕಥೆಯ ಶ್ರವಣಫಲವನ್ನು ವರ್ಣಿಸಿದೆ. ನಂತರ ವೃಂದಾವನದ ವರ್ಣನೆ, ಶ್ರೀಕೃಷ್ಣನ ಮಹಿಮಾ ವರ್ಣನೆ, ಶ್ರೀಕೃಷ್ಣನ ಮೂಲಕ ದ್ವಾರಕಾನಿವಾಸಿಗೆ ಮುಕ್ತಿ, ವೈಷ್ಣವರ ದ್ವಾದಶಶುದ್ಧಿಯ ವಿಚಾರ, ಶಾಲಗ್ರಾಮದ ಸ್ವರೂಪ ಮತ್ತು ಮಹಿಮೆ, ಭಗವಂತನ ನಾಮಸಂಕೀರ್ತನೆಯ ಫಲ, ವೈಶಾಖ ಸ್ನಾನದ ಮಹಿಮೆ ಮತ್ತು ಫಲ, ಅಂಬರೀಷ ಮತ್ತು ನಾರದರ ಸಂವಾದದ ಕಥೆ, "ಪಾಪ ಪ್ರಶಮನ" ಸ್ತೋತ್ರದ ವರ್ಣನೆ, ಸ್ವರ್ಗ ಮತ್ತು ನರಕಗಳಿಗೆ ಕೊಂಡೊಯ್ಯುವ ಕರ್ಮಗಳ ವರ್ಣನೆಗಳಿವೆ. ಹರಿನಾಮ ಸ್ಮರಣೆ – ಮಹಾವಿಷ್ಣುವಿನ ಸ್ತುತಿಯ ಫಲಗಳನ್ನು ವಿವರಿಸುವ ಅನೇಕ ಶ್ಲೋಕಗಳು ಪದ್ಮಪುರಾಣದ ಪಾತಾಲಖಂಡದಲ್ಲಿವೆ. ಕೆಲವು ಹೀಗಿವೆ:–

ಅಶುಚಿರ್ವಾ ಶುಚಿರ್ವಾ ಸರ್ವಕಾಲೇಶು ಸರ್ವದಾ ।
ನಾಮಸಂಸ್ಮರಣಮೇವ ಸಂಸಾರಾನ್ಮುಚ್ಯತೇಕ್ಷಣಾತ್ ॥
ಅಪವಿತ್ರಃ ಪವಿತ್ರೋ ವಾ ಸರ್ವಾವಸ್ಥಾಂಗತೋಽಪಿ ವಾ ।
ಯಃ ಸ್ಮರೇತ್ ಪುಂಡರೀಕಾಕ್ಷಂ ಸಬಾಹ್ಯಾಭ್ಯಂತರಃ ಶುಚಿಃ ॥
(ಪದ್ಮ ಪಾತಾಲ. 8 / 7, 11)

ನರಕೇಽಪಿ ಚಿರಂ ಮಗ್ನಾಃ ಪೂರ್ವಜಾ ಯೆ ಕುಲದ್ವಯೇ ।
ತದೈವ ಯಾಂತಿ ತೇ ಸ್ವರ್ಗಂ ಯವಾರ್ಚತಿ ಸುತೋ ಹರಿಮ್ ॥
(ಪದ್ಮ. ಪಾತಾಲ. 84/72)

ಅನಿಚ್ಛಯಾಪಿ ವಹತಿ ಸ್ಪೃಷ್ಟೋ ಹುತವಹೋ ಯಥಾ ।
ತಥಾ ದಹತಿ ಗೋವಿಂದನಾಮ ವ್ಯಾಜಾವಪೀರಿತಮ್ ॥
(ಪದ್ಮ. ಪಾತಾಲ. 87/8)

ಯೇಽರ್ಚಯಂತಿ ಹರಿಂ ದೇವಂ ವಿಷ್ಣುಂ ಜಿಷ್ಣುಂ ಸನಾತನಮ್ ।
ನಾರಾಯಣಮಜಂ ದೇವಂ ವಿಷ್ಣುರೂಪಂ ಚತುರ್ಭುಜಮ್ ॥
ಧ್ಯಾಯಂತಿ ಪುರುಷಂ ದಿವ್ಯಮಚ್ಯುತಂ ಯೇ ಸ್ಮರಂತಿ ಚ ।
ಲಭಂತೇ ತೇ ಹರಿಸ್ಥಾನಂ ಶ್ರುತಿರೇಷಾ ಸನಾತನೀ ॥
(ಪದ್ಮ. ಪಾತಾಲ.92/10)

ಪದ್ಮಪುರಾಣದಲ್ಲಿ ಉತ್ತರಖಂಡವು ವಿಶಾಲವಾದುದು ಮತ್ತು ಅನೇಕ ವಿಷಯಗಳನ್ನೊಳಗೊಂಡ ಬಹಳ ಶ್ರೇಷ್ಠವಾದ ಭಾಗವಾಗಿದೆ. ಇದರ ಉಪಕ್ರಮದಲ್ಲಿ ನಾರದ-ಮಹಾದೇವರ ಸಂವಾದ, ಗಂಗಾವತರಣದ ಸಂಕ್ಷಿಪ್ತ ಕಥೆ, ಪ್ರಯಾಗ, ಕಾಶೀ, ಗಯಾ ಕ್ಷೇತ್ರಗಳ ಮಹತ್ವದ ವರ್ಣನೆಗಳಿವೆ. ವಿಶೇಷವಾಗಿ - ಏಕಾದಶೀ ವ್ರತದ ಸ್ವರೂಪ ಮತ್ತು ಮಹಿಮೆ - ಪ್ರತಿಮಾಸದಲ್ಲಿ ಬರುವ ಏಕಾದಶಿಯ ಹೆಸರುಗಳು, ಇವುಗಳ ಆಚರಣೆಯ ವಿಧಿ-ವಿಧಾನಗಳು, ಅವುಗಳ ಮಹಿಮೆ, ಆಚರಣೆಯ ಫಲಗಳನ್ನು ವಿವರವಾಗಿ ತಿಳಿಸಿದೆ.

ಚೈತ್ರ-ವೈಶಾಖ ಮಾಸಗಳಲ್ಲಿ ಆಚರಿಸುವ ಧಾರ್ಮಿಕ ಉತ್ಸವಗಳ ವರ್ಣನೆ, ವರ್ಷವಿಡೀ ಉಪಾಸನೆ ಮಾಡುವ ಶ್ರೀಹರಿಯ ಹಬ್ಬಗಳ ವರ್ಣನೆ, ಕಾರ್ತಿಕ ಮಾಸದ ವ್ರತಗಳು- ಮಹಿಮೆ ಮತ್ತು ಫಲಗಳ ವಿಚಾರವನ್ನು ವಿಶೇಷವಾಗಿ ತಿಳಿಸಿದೆ.

ಭಗವತ್ ಸ್ಮರಣೆಯ ಪ್ರಕಾರ, ಭಕ್ತಿಯ ಉತ್ಕೃಷ್ಟತೆ, ಭಗವತ್ ತತ್ವಜ್ಞಾನ, ಭಕ್ತಿಯೋಗದ ಶ್ರೇಷ್ಠತೆಯನ್ನು ತಿಳಿಸಿವೆ. ಭಗವದ್ಗೀತೆಯ 18 ಅಧ್ಯಾಯಗಳ ಮಹಾತ್ಮ್ಯವನ್ನು ಬಹಳ ವಿಶದವಾಗಿ ವರ್ಣಿಸಿದ್ದಾರೆ. ದೇವರ್ಷಿ ನಾರದರು ಸನಕಾದಿಗಳಿಗೆ ಉಪದೇಶಿಸಿದ ಭಕ್ತಿ, ಜ್ಞಾನ ಮತ್ತು ವೈರಾಗ್ಯದ ವೃತ್ತಾಂತವಿದೆ.

ಪತಿವ್ರತಾಸ್ತ್ರೀಯರ ಲಕ್ಷಣ ಹಾಗೂ ಸದಾಚಾರದ ಬಗ್ಗೆ ಅನೇಕ ವಿಧಗಳ ವರ್ಣನೆಯಿದೆ. ಮಹಾವಿಷ್ಣುವಿನ - ನೃಸಿಂಹ - ವಾಮನ - ಪರಶುರಾಮಾದಿ ಅವತಾರಗಳ ವರ್ಣನೆ, ಶ್ರೀರಾಮನ ಪಟ್ಟಾಭಿಷೇಕ ಹಾಗೂ ನಿರ್ವಾಣದ ಕಥೆಯಿದೆ. ಶ್ರೀಕೃಷ್ಣನ ಅವತಾರ ಕಥೆ, ಜರಾಸಂಧ, ಶಿಶುಪಾಲಾದಿ ದುಷ್ಟರ ಸಂಹಾರದ ಕಥೆ, ಸುಧಾಮನ ಕಥೆಗಳು ಇವೆ. ವಿಶೇಷವಾಗಿ ಶ್ರೀರಾಮನ 108 ನಾಮಗಳ ಮಹಿಮೆಯ ವರ್ಣನೆಯಿದೆ. ಈ ಖಂಡದಲ್ಲಿ ಅನೇಕ ವಿಶಿಷ್ಟವಾದ ಶ್ಲೋಕಗಳಿವೆ. ಅವುಗಳಲ್ಲಿ ಕೆಲವು ಇಂತಿವೆ.

ಷಟ್‌ತಿಲ ವಿಚಾರ

ತಿಲಸ್ನಾಯೀ ತಿಲೋದ್ವರ್ತೀ ತಿಲಹೋಮೀ ತಿಲೋದಕೀ ।
ತಿಲವಾತಾಚ ಭೋಕ್ತಾಚ ಷಟ್‌ತಿಲಾ ಪಾಪನಾಶಿನೀ ॥

ಅಮಲಕವೃಕ್ಷದ ಮಹಿಮೆ

ತಸ್ಯಾ ಮೂಲೇ ಸ್ಥಿತೋ ವಿಷ್ಣುಸ್ತಮಾದ್ಧ್ವಂ ಚ ಪಿತಾಮಹಃ ।
ಸ್ಕಂಧೇ ಚ ಭಗವಾನ್ ರುದ್ರಃ ಸಂಸ್ಥಿತಃ ಪರಮೇಶ್ವರಃ ॥
ಶಾಖಾಸು ಮುನಯಃ ಸರ್ವೇ ಪ್ರಶಾಖಾಸು ಚ ದೇವತಾಃ ।
ಪರ್ಣೇಷು ವಸವಃ ದೇವಾಃ ಪುಷ್ಪೇಷು ಮರುತಸ್ತಥಾ ॥
ಪ್ರಜಾನಾಂ ಪತಯಃ ಸರ್ವೇ ಫಲೇಷ್ವೇವ ವ್ಯವಸ್ಥಿತಾ ।
ಸರ್ವದೇವಮಯೀ ಹ್ಯೇಷಾ ಧಾತ್ರೀ ಚ ಕಥಿತಾ ಮಯಾ ॥
(ಪದ್ಮ. ಉತ್ತರ. 47/20-23)

ದ್ವಾದಶಿಯಂದು ವರ್ಜ್ಯವಾದವುಗಳು

ಕಾಂಸ್ಯಂ ಮಾಷಂ ಸುರಾಂ ಕ್ಷಾದ್ರಂ ತೈಲಂ ಪತಿತಭಾಷಕಾಮ್ ।
ವ್ಯಾಯಾಮಂ ಚ ಪ್ರವಾಸಂ ಚ ಪುನರ್ಭೋಜನ ಮೈಥುನೇ ।
ವೃಷಪೃಷ್ಠಂ ಮಸೂರಾನ್ನಂ ದ್ವಾದಶ್ಯಾಂ ಪರಿವರ್ಜಯೇತ್ ॥

ಕ್ಷತ್ರಿಯೋ ವಾಥ ವೈಶ್ಯೋ ವಾ ಶೂದ್ರೋ ವಾ ಸುರಸತ್ತಮೇ ।
ಭಕ್ತಿಂ ಕುರ್ವನ್ ವಿಶೇಷೇಣ ಮುಕ್ತಿಂ ಯಾತಿ ನ ಸಂಶಯಃ ॥
(ಪದ್ಮ. ಉತ್ತರ. 126/19)

ಸಂಸಾರಕರ್ದಮಾಲೇಪ ಪ್ರಕ್ಷಾಲನ ವಿಶಾರದಃ ।
ಪಾವನಃ ಪಾವನಾಂಚ ವಿಷ್ಣು ಭಕ್ತೋ ನ ಸಂಶಯಃ ॥
(ಪದ್ಮ. ಉತ್ತರ. 127/29)

ಭಕ್ತ್ಯಾ ವಾ ಸ್ನೇಹಭಾವೇನ ದ್ವೇಷಭಾವೇನ ವಾ ಪುನಃ ।
ಕೇಪಿ ಸ್ವಾಮಿತ್ವಭಾವೇನ ಬುದ್ಧ್ಯಾವಾ ಬುದ್ಧಿಪೂರ್ವಕಮ್ ॥
ಯೇನ ಕೇನಾಪಿ ಭಾವೇನ ಚಿಂತಯಂತಿ ಜನಾರ್ದನಮ್ ।
ಇಹ ಲೋಕೇ ಸುಖಂ ಭುಕ್ತ್ವಾ ಯಾಂತಿ ವಿಷ್ಣೋಃ ಸನಾತನಮ್ ॥
(ಪದ್ಮ. ಉತ್ತರ. 128/20)

ಪದ್ಮಪುರಾಣವು ಸರಳ-ಸುಂದರ ಶ್ಲೋಕಗಳಿಂದ ಕೂಡಿದ್ದು ರಮಣೀಯವಾದ ವರ್ಣನೆಗಳಿಂದ ಆಕರ್ಷಕವಾದ ಕಥೆಗಳಿಂದ ಶೋಭಿಸಿದೆ. ಲೌಕಿಕ-ಪಾರಲೌಕಿಕ ವಿಷಯಗಳನ್ನೊಳಗೊಂಡ ಈ ಪುರಾಣವು ಗಾತ್ರದ ದೃಷ್ಟಿಯಿಂದ, ವಿಷಯದ ದೃಷ್ಟಿಯಿಂದ ಜನಪ್ರಿಯವೂ, ಸರ್ವಶ್ರೇಷ್ಠವೂ ಆಗಿದೆ. ಇದನ್ನು ಪ್ರತಿದಿನ ಜಪಿಸುವುದರಿಂದ, ಇದರಲ್ಲಿರುವ ಶ್ಲೋಕಗಳ ಶ್ರವಣದಿಂದ ಕಲಿಯುಗದಲ್ಲಿ ಯಾವ ಕೆಲಸಕ್ಕೂ ಯಾವುದೇ ರೀತಿ ವಿಘ್ನಗಳು ಉಂಟಾಗುವುದಿಲ್ಲ. ಮನುಷ್ಯನ ಪಾಪಗಳೆಲ್ಲವೂ ಪರಿಹಾರವಾಗಿ ಅಶ್ವಮೇಧಯಾಗ ಮಾಡಿದ ಫಲವು ಪದ್ಮಪುರಾಣದ ಪಾರಾಯಣದಿಂದ ಲಭಿಸುತ್ತದೆ. ಧರ್ಮಾರ್ಥಕಾಮಮೋಕ್ಷಗಳು ಸಿದ್ಧಿಸುತ್ತವೆ. ಪದ್ಮಪುರಾಣವು ಶ್ರೀಹರಿಯ ಸಾಕ್ಷಾತ್ ಸ್ವರೂಪವೇ ಆಗಿರುವುದರಿಂದ ಇದರ ಒಂದೊಂದು ಅಧ್ಯಾಯ, ಒಂದೊಂದು ಖಂಡದ ಅಧ್ಯಯನದಿಂದ, ಪಾಠ-ಶ್ರವಣದಿಂದ ಮನುಷ್ಯನು ಪುನೀತನಾಗುತ್ತಾನೆ. ಇದು ಶಾಸ್ತ್ರಗಳಲ್ಲಿ ಉತ್ತಮವಾದುದು. ಇದು ಸಮಸ್ತ ವೇದದ ಫಲವನ್ನು ನೀಡುವ ಶ್ರೇಷ್ಠ ಗ್ರಂಥವಾಗಿದೆ. ❑

॥ ಓಂ ಸ್ವಸ್ತಿ ॥

ಶೈವ ಪುರಾಣಗಳು

—ವಿದ್ವಾನ್ ಗಣಪತಿ ಹೆಗಡೆ
ಬೆಂಗಳೂರು

ಅಪೌರುಷೇಯಗಳೆನಿಸಿಕೊಂಡಿರುವ ವೇದಗಳಲ್ಲಿ ಅನೇಕ ಧರ್ಮರಹಸ್ಯಗಳು ಹುದುಗಿವೆ. ಅಂತಹ ಧರ್ಮರಹಸ್ಯಗಳನ್ನು ಸಾಮಾನ್ಯ ಜನರಿಗೂ ತಿಳಿಹೇಳುವ ರೀತಿಯಲ್ಲಿ ವಿವರಿಸಲು ಪುರಾಣಗಳು ಪ್ರಯತ್ನಿಸಿವೆ. ಅತ್ಯಂತ ಪವಿತ್ರ ಹಾಗೂ ಸ್ತುತ್ಯರ್ಹವಾದ ಈ ಪುರಾಣಸಾಹಿತ್ಯ ರಾಶಿಯು ವೇದಗಳಂತೆಯೇ ಆಧ್ಯಾತ್ಮಿಕ ತತ್ವವನ್ನು ಪ್ರಸ್ತುತಪಡಿಸಿ ಲೋಕೋದ್ಧಾರವನ್ನು ಮಾಡುವ ಗುರಿಯನ್ನು ಹೊಂದಿದೆ. ಈ ಕಾರಣದಿಂದಲೇ ಪುರಾಣಗಳನ್ನು ಐದನೇ ವೇದವೆಂದೂ ಕರೆಯುತ್ತಾರೆ.

ಈ ಹಿನ್ನಲೆಯಲ್ಲಿ ಶೈವಪುರಾಣಗಳ ಮಹತ್ವವನ್ನು ಇಲ್ಲಿ ನಿರೂಪಿಸಲಾಗಿದೆ.

ಪೀಠಿಕೆ

ಅಪೌರುಷೇಯಗಳೆನಿಸಿಕೊಂಡಿರುವ ವೇದಗಳಲ್ಲಿ ಅನೇಕ ಧರ್ಮರಹಸ್ಯಗಳು ಹುದುಗಿವೆ. ಅಂತಹ ಧರ್ಮರಹಸ್ಯಗಳನ್ನು ಸಾಮಾನ್ಯ ಜನರಿಗೂ ತಿಳಿಹೇಳುವ ರೀತಿಯಲ್ಲಿ ವಿವರಿಸಲು ಪುರಾಣಗಳು ಪ್ರಯತ್ನಿಸಿವೆ. ಅತ್ಯಂತ ಪವಿತ್ರ ಹಾಗೂ ಸ್ತುತ್ಯರ್ಹವಾದ ಈ ಪುರಾಣಸಾಹಿತ್ಯ ರಾಶಿಯು ವೇದಗಳಂತೆಯೇ ಆಧ್ಯಾತ್ಮಿಕ ತತ್ವವನ್ನು ಪ್ರಸ್ತುತಪಡಿಸಿ ಲೋಕೋದ್ಧಾರವನ್ನು ಮಾಡುವ ಗುರಿಯನ್ನು ಹೊಂದಿದೆ. ಈ ಕಾರಣದಿಂದಲೇ ಪುರಾಣಗಳನ್ನು ಐದನೇ ವೇದವೆಂದೂ ಕರೆಯುತ್ತಾರೆ. ಭಗವಾನ್ ವೇದವ್ಯಾಸ ಮಹರ್ಷಿಗಳಿಂದ ಪ್ರಣೀತವಾದ ಮಹಾಭಾರತದಲ್ಲಿ ಪುರಾಣಗಳ ಮಹತ್ವ ಹೀಗೆ ಉಲ್ಲೇಖಿಸಲ್ಪಟ್ಟಿದೆ.

ಯದಿ ವಿದ್ಯಾತ್ ಚತುರ್ವೇದಾನ್ ಸಾಂಗೋಪನಿಷದಾನ್ ದ್ವಿಜಃ ।
ನ ಚೇತ್ಪುರಾಣಂ ಸಂವಿದ್ಯಾತ್ ನೈವ ನ ಸ್ಯಾತ್ ವಿಚಕ್ಷಣಃ ॥

ಚತುರ್ವೇದಗಳನ್ನು ಅಧ್ಯಯನ ಮಾಡಿ ಅವುಗಳಲ್ಲಿ ಪಾರಂಗತನಾಗಿ ಸಾಂಗವಾಗಿ ಉಪನಿಷತ್ತುಗಳನ್ನೆಲ್ಲಾ ತಿಳಿದಿದ್ದರೂ ಕೂಡ ಪುರಾಣಗಳನ್ನು ಅಧ್ಯಯನ ಮಾಡದ ಮನುಷ್ಯನು ವಿಚಕ್ಷಣನೆನಿಸಿಕೊಳ್ಳಲಾರ ಎಂಬುದಾಗಿ ಹೇಳುತ್ತಾ ಪುರಾಣಗಳನ್ನು ವೇದಗಳ ಸಾಲಿನಲ್ಲಿಯೇ ಸೇರಿಸಿ ಅದರ ಮಹತ್ವವನ್ನು ವಿದ್ವಾಂಸರು ತಿಳಿಹೇಳಿದ್ದಾರೆ. ವೇದಗಳಲ್ಲಿ ಅಡಗಿರುವ ಅನೇಕ ಗೂಢಾರ್ಥಗಳನ್ನು ಆಖ್ಯಾನ ವ್ಯಾಖ್ಯಾನ ಉಪಾಖ್ಯಾನಗಳ ಮೂಲಕ ಅತ್ಯಂತ ಸರಳಗೊಳಿಸಿಕೊಡಲು ಪುರಾಣಗಳು ಪ್ರಯತ್ನಿಸಿವೆ. (ಆಖ್ಯಾನವೆಂದರೆ ಸ್ವತಃ ಕಣ್ಣಿಂದ ನೋಡಿದ ಘಟನೆಯನ್ನು ವಿವರಿಸುವುದು. ಉಪಾಖ್ಯಾನವೆಂದರೆ ಇತರರಿಂದ ಕೇಳಿತಿಳಿದ ಘಟನೆಯನ್ನು ವಿವರಿಸುವುದು) ಅತ್ಯಂತ ಸರಳ ಹಾಗೂ ಸರಸವಾದ ಭಾಷೆಯಲ್ಲಿ ರಚಿಸಲ್ಪಟ್ಟ ಪುರಾಣಗಳು ಭಾರತೀಯ ಸಂಸ್ಕೃತಿಯ ಸಾರಸರ್ವಸ್ವ.

ಅಂತಹ ಭಗವಾನ್ ವೇದವ್ಯಾಸ ರಚಿತವೆಂದು ನಂಬಲಾಗಿರುವ ಪ್ರಖ್ಯಾತ ಪುರಾಣಗಳು 18. ಬೋಧಪ್ರದವೂ, ನಿತ್ಯನೂತನವಾದವೂ ಆದ ಈ ಪುರಾಣಗಳ ಉಲ್ಲೇಖ ಭಾಗವತದಲ್ಲಿ ಕಂಡು ಬರುತ್ತದೆ. ಭಾಗವತದ **12/7/23.24.** ಶ್ಲೋಕಗಳಲ್ಲಿ **18** ಮುಖ್ಯ ಪುರಾಣಗಳೆಂದು ಹೇಳಲಾಗಿದೆ.

ಪುರಾಣಗಳಲ್ಲಿ ವಿಶೇಷವಾಗಿ ರಾಜನೀತಿ, ಧರ್ಮನೀತಿ, ಇತಿಹಾಸ, ಸಮಾಜವಿಜ್ಞಾನ, ಗ್ರಹನಕ್ಷತ್ರವಿಜ್ಞಾನ, ಆಯುರ್ವೇದ, ಅಲಂಕಾರ, ವ್ಯಾಕರಣ, ಭೂಗೋಳ, ಜ್ಯೋತಿಷ ಮುಂತಾದ ವಿವಿಧ ವಿದ್ಯೆಗಳ ಪ್ರತಿಪಾದನೆಯಿದೆ. ಹಾಗೂ ಇನ್ನೂ ಅನೇಕ ವಿದ್ಯಾ ವಿಷಯಗಳ ಪ್ರತಿಪಾದನೆಯಿದೆ. ಪ್ರಪಂಚದ ಪುರಾತನ ಸಂಸ್ಕೃತಿಯ ಆಧಾರಭೂತವಾದ ಭಾರತೀಯ ಸಾಹಿತ್ಯ ಪ್ರಕಾರಗಳಲ್ಲಿ ಪುರಾಣಗಳಿಗೆ ವಿಶೇಷವಾದ ಮಹತ್ವವನ್ನು ಕಲ್ಪಿಸಲಾಗಿದೆ.

ಭಾರತೀಯ ಸಂಸ್ಕೃತಿಯ ವೈಶಿಷ್ಟ್ಯ, ಜನಜೀವನದ ಸ್ವಾರಸ್ಯ ಮತ್ತು ನಾಗರಿಕತೆ ಇವುಗಳನ್ನು ಕಥೆಗಳ ಮೂಲಕ ಸಾಮಾನ್ಯ ಜನರಲ್ಲೂ ಪ್ರಚುರಪಡಿಸಿದ ಶ್ರೇಯಸ್ಸು ಈ ಪುರಾಣಗಳಿಗೆ ಸೇರುತ್ತದೆ. ಈಗಲೂ ಸಹ ನಮ್ಮ ಹಿಂದೂ ಧರ್ಮಕ್ಕೆ ಈ ಪುರಾಣಗಳು ಮತ್ತು ಅದರಲ್ಲಿರುವ ಕಥೆಗಳೇ ಮೂಲಾಧಾರ. ಹಾಗಂತ ಪುರಾಣಗಳು ಕೇವಲ ಸಂಗ್ರಹವಲ್ಲ. ಒಂದೊಂದು ಸಹ ಜ್ಞಾನದ ಭಂಡಾರವೇ ಆಗಿದೆ. ಭಾರತದ ವಿದ್ವತ್ಪರಂಪರೆ ಮತ್ತು ಪಾಶ್ಚಾತ್ಯ ವಿದ್ವಾಂಸರೂ ಇಂದು ಪುರಾಣಗಳನ್ನು ಸಮಗ್ರವಾಗಿ ಅಧ್ಯಯನ ಮಾಡಿ ಅವುಗಳ ಮಹತ್ವವನ್ನು ಗಮನಿಸಿ ಅವುಗಳನ್ನು ಭಾರತೀಯ ಇತಿಹಾಸದ ಅಮೂಲ್ಯ ಗ್ರಂಥಗಳೆಂದು ಪರಿಗಣಿಸಿದ್ದಾರೆ.

ಭಾರತೀಯ ಸಂಸ್ಕೃತಿಯ ವಿವಿಧ ಆಯಾಮಗಳು ಪುರಾಣಗಳಲ್ಲಿ ಹಾಸುಹೊಕ್ಕಾಗಿವೆ. ಅಧ್ಯಾತ್ಮಶಾಸ್ತ್ರ, ಜೀವನಕೋಶ, ಧರ್ಮಶಾಸ್ತ್ರ, ಸನಾತನ ಆರ್ಯಸಂಸ್ಕೃತಿಯ ಸ್ವರೂಪ, ವೇದಗಳ ಸರಳ ಸರಸ ವ್ಯಾಖ್ಯಾನ, ಇದರಲ್ಲಿ ತೀರ್ಥ ರಹಸ್ಯ, ತೀರ್ಥ ಮಹಾತ್ಮೆ, ಮತ್ತು ತೀರ್ಥಗಳ ಇತಿಹಾಸವಿದೆ. ಇಲ್ಲಿ ದುಃಖ ನಿವೃತ್ತಿಯ ಉಪಾಯಗಳನ್ನು ನೋಡಬಹುದು. ಪರಲೋಕ ವಿಜ್ಞಾನ, ಜನ್ಮಾಂತರ ಮತ್ತು ಲೋಕಾಂತರಗಳ ರಹಸ್ಯಗಳು ವಿವೃತವಾಗಿವೆ. ಪುರಾಣಗಳ

ಅಧ್ಯಯನದಿಂದ ನಮ್ಮ ಸಂಸ್ಕೃತಿಯ ಆಳವಾದ ವಿಸ್ತೃತವಾದ ಜ್ಞಾನಪ್ರಾಪ್ತಿಯಾಗುತ್ತದೆ. ಕರ್ಮರಹಸ್ಯ, ಕರ್ಮಫಲಗಳ ನಿರೂಪಣೆ, ನಕ್ಷತ್ರ ವಿಜ್ಞಾನ, ರತ್ನ ವಿಜ್ಞಾನ, ಶಕುನ ಶಾಸ್ತ್ರ, ಮುಂತಾದ ಮಹತ್ವಪೂರ್ಣ ವಿಷಯಗಳನ್ನು ಸರಳವೂ, ರೋಚಕವೂ ಆದ ಭಾಷೆಯಲ್ಲಿ ಸ್ಪಷ್ಟವಾಗಿ ನಿರೂಪಿಸುವುದು ವೇದ್ಯವಾಗುತ್ತದೆ.

ವೇದ ಅಥವಾ ಶಾಸ್ತ್ರಗಳಲ್ಲಿ ಸೂತ್ರರೂಪದಲ್ಲಿ ಕೊಡಲಾಗಿರುವ ಜೀವನದ ಮಾರ್ಗದರ್ಶಕ ವಿಚಾರಗಳನ್ನು ಹಾಗೂ ನಿರ್ದಿಷ್ಟ ಉಪದೇಶಗಳನ್ನು ಉದಾಹರಣೆಗಳ ಮೂಲಕ ವಿವರವಾದ ವ್ಯಾಖ್ಯಾನಗಳೊಂದಿಗೆ ಅದೇ ಉಪದೇಶಗಳನ್ನು ಪುರಾಣವು ಹೆಚ್ಚು ಪ್ರಭಾವಪೂರ್ಣವಾಗಿ ತಿಳಿಸಿಕೊಡುತ್ತದೆ.

ಸೂತ್ರರೂಪದಲ್ಲಿರುವ ಉಪದೇಶಗಳನ್ನು ಕೇವಲ ಜ್ಞಾನ ಪಡೆದವರು ಮಾತ್ರವೇ ಅರಿಯಬಹುದು. ಆದರೆ ಅದೇ ಉಪದೇಶಗಳು ಪುರಾಣಗಳ ಮೂಲಕ ಜಗತ್ತಿಗೆ ಬಂದಾಗ ಒಬ್ಬ ಸಾಮಾನ್ಯನೂ ಕೂಡ ಅದನ್ನರಿತು ಜೀವನದಲ್ಲಿ ಅಳವಡಿಸಿಕೊಳ್ಳುತ್ತಾನೆ ಮತ್ತು ಬಹುಕಾಲ ನೆನಪಿನಲ್ಲಿಟ್ಟುಕೂಳ್ಳುತ್ತಾನೆ.

ಉದಾ: ಸತ್ಯಂ ವದ–ಉಪನಿಷತ್ ವಾಕ್ಯ, ಈ ರೀತಿಯಾಗಿ ಬಹಳಷ್ಟು ವೇದಮಂತ್ರಗಳಲ್ಲಿ ಜೀವನಕ್ಕೆ ಬೇಕಾದಂತಹ ಮಾರ್ಗದರ್ಶನಗಳನ್ನು ಕೊಡಲಾಗಿದೆ. ಅದೇ ಸತ್ಯವನ್ನೇ ಹೇಳು ಎಂಬ ವಿಚಾರವನ್ನು ಸತ್ಯಪ್ರತಿಬೋಧಕವಾದ ಸತ್ಯಹರಿಶ್ಚಂದ್ರನ ಕಥೆಯ ಮೂಲಕ ಹೇಳಲಾಗಿದೆ. ಈ ಕಥೆಯನ್ನು ಓದಿದಾಗ ಅಥವಾ ಕೇಳಿದಾಗ ಜನರ ಮನಸ್ಸಿನ ಮೇಲೆ ಅಗಾಧವಾದ ಆಳವಾದ ಸ್ಥಿರವಾಗಿ ನಿಲ್ಲಬಲ್ಲ ಪರಿಣಾಮವಾಗುತ್ತದೆ. ಹೀಗೆ ಪುರಾಣಗಳು ಸಾಮಾನ್ಯ ಜನರನ್ನು ತಲುಪುವಲ್ಲಿ ಪ್ರಯತ್ನಶಾಲಿಗಳಾಗಿವೆ.

ಧರ್ಮಂ ಚರ–ವೇದವಾಕ್ಯ. ಮಾತೃದೇವೋ ಭವ ಇತ್ಯಾದಿಗಳನ್ನು ಸೂಕ್ತವಾದ ಕಥೆಗಳ ಮೂಲಕ ತಿಳಿಹೇಳಿದಾಗ ಅದರ ಪರಿಣಾಮವೇ ಬೇರೆ ರೀತಿಯದ್ದಾಗಿರುತ್ತದೆ. ಸಹಜವಾಗಿಯೇ ಮಾನವನಲ್ಲಿ ಬಿತ್ತಬೇಕಾದ ಕ್ಷಮಾ, ದಾನ, ಕರುಣೆ ಮುಂತಾದ ಉತ್ತಮ ಗುಣಗಳನ್ನು ಸುಲಭವಾಗಿಯೇ ಪುರಾಣಗಳ ಮಾಧ್ಯಮದಲ್ಲಿ ಹೇಳಿಬಿಡಬಹುದು. ಒಳ್ಳೆಯ ಗುಣಗಳನ್ನು ತಿಳಿ ಹೇಳಲು ಒಳ್ಳೆಯ ಕಥೆಗಳಿರುವಂತೆ ಕೆಟ್ಟ ಸ್ವಭಾವವನ್ನು ದೂರಮಾಡಲು ಬೇಕಾದ ದುಷ್ಟ ಪಾತ್ರಗಳ ಕಥೆಗಳನ್ನು ಹೆಣೆದು ಅವುಗಳನ್ನು ತ್ಯಜಿಸುವಂತೆ ಹೇಳಲಾಗಿದೆ. ಹೀಗಾಗಿ ಪುರಾಣಗಳು ಅತ್ಯಂತ ಪ್ರಭಾವಪೂರ್ಣವಾದ ಮಾಧ್ಯಮಗಳಾಗಿವೆ.

ರಸರಹಿತವಾಗಿರುವ, ಆಚರಿಸಲು ಕಷ್ಟಕರವಾದ ಉಪದೇಶಗಳನ್ನು ಜೀವನದಲ್ಲಿ ಪಾಲಿಸುವುದು ಕಷ್ಟಕರ. ಆದರೆ ಪುರಾಣೋಕ್ತವಾಗಿ ಬಂದಿರುವ ಅದೇ ವಿಚಾರಗಳನ್ನು ಜನಸಾಮಾನ್ಯರು ಅತ್ಯಂತ ಆಸಕ್ತಿಯಿಂದ ಪಾಲನೆ ಮಾಡತೊಡಗುತ್ತಾರೆ. ಕಥಾ ಶ್ರವಣದಿಂದ ಅವರ ಚಿತ್ತವು ಶುದ್ಧವಾಗಿ ಮನಸ್ಸಿನಲ್ಲಿ ಏಳುತ್ತಿರುವ ಅನೇಕ ರೀತಿಯ ಸಂದೇಹಗಳು ನಿವಾರಣೆಯಾಗುತ್ತವೆ.

ವೇದಗಳನ್ನು ಅಧ್ಯಯನ ದೃಷ್ಟಿಯಿಂದ ವಿಭಜಿಸಿದವರೂ ವ್ಯಾಸರೇ. ಪುರಾಣಗಳನ್ನು ರಚಿಸಿದವರು ವ್ಯಾಸರೇ. ವೇದಗಳ ಜ್ಞಾನವೇ ಇಲ್ಲದ ವ್ಯಕ್ತಿಯೂ ಕೂಡ ಅಷ್ಟೇ ಮಹತ್ತರವಾದ ಜ್ಞಾನ ಮೋಕ್ಷವನ್ನು ಹೊಂದಲು ಬೇಕಾದಂತಹ ರಚನೆ ಪುರಾಣಗಳ ಮೂಲಕ ಆಯಿತು. ವೇದ ಶಾಸ್ತ್ರಗಳ ಅರಿವಿಲ್ಲದವರೂ ಜ್ಞಾನಿಗಳಾಗಬಹುದು ಎಂಬುದನ್ನು ಹೇಳಲಾಗಿದೆ. ವೇದ ಹಾಗೂ ಪುರಾಣಗಳೆರಡರ ಗುರಿಯೂ ಒಂದೇ. ಅದೇನೆಂದರೆ ಮಾನವನನ್ನು ಈ ಬಂಧನದಿಂದ ಮುಕ್ತಗೊಳಿಸುವುದು. ಈ ಗುರಿ ತಲುಪುವಲ್ಲಿ ಪುರಾಣಗಳೂ ವೇದಗಳಷ್ಟೇ ಪ್ರಭಾವಪೂರ್ಣವಾದ ಕಾರ್ಯ ಮಾಡಿವೆ. ಆಧುನಿಕ ಸಮಾಜದಲ್ಲಿ ಪುರಾಣಗಳಿಂದಲೇ ಧರ್ಮರಕ್ಷಣೆಯಾಗುವುದು. ಆಕರ್ಷಕ ಶೈಲಿಯಿರುವುದರಿಂದ ಜನರು ಅದರತ್ತ ಆಕರ್ಷಿತರಾಗುತ್ತಾರೆ.

'ಪುರಾಣಮ್' ಎಂಬ ಶಬ್ದ ಅಥರ್ವವೇದದಲ್ಲಿ ಕಂಡುಬರುತ್ತದೆ. ಅಷ್ಟೇ ಅಲ್ಲ ಶತಪಥ ಬ್ರಾಹ್ಮಣ, ಬೃಹದಾರಣ್ಯಕೋಪನಿಷತ್ ಮತ್ತು

ಛಾಂದೋಗ್ಯೋಪನಿಷತ್ತು ಹೀಗೆ ಅನೇಕ ಪ್ರಾಚೀನ ಸಾಹಿತ್ಯಗಳಲ್ಲಿ ಉಕ್ತವಾಗಿದೆ. ಪುರಾಣಗಳ ಪ್ರಾಚೀನತೆಯ ಬಗ್ಗೆ ವಿದ್ವಾಂಸರಲ್ಲಿ ಅಭಿಪ್ರಾಯಭೇದಗಳಿದ್ದರೂ ಶಬ್ದಾರ್ಥಕ್ಕನುಗುಣವಾಗಿ 'ಪುರಾ ಭವಂ ಪುರಾಣಂ' ಅಂದರೆ ಪುರಾತನ ಸಾಹಿತ್ಯವೇ ಪುರಾಣ ಎಂಬರ್ಥವೂ 'ಪುರಾಪಿ ನವಂ ಪುರಾಣಮ್' ಅಂದರೆ ಸನಾತನವೂ ಮತ್ತು ನಿತ್ಯ ನೂತನವೂ ಆದ ಧರ್ಮವನ್ನು ನಿರೂಪಿಸುವ ಸಾಹಿತ್ಯವೇ ಪುರಾಣ ಎಂಬುದಾಗಿ ಅರ್ಥನಿರ್ದೇಶ ಮಾಡಲ್ಪಟ್ಟಿದೆ.

ಮತ್ಸ್ಯ ಮಹಾಪುರಾಣದ 51ನೇ ಅಧ್ಯಾಯದಲ್ಲಿ ಪುರಾಣದ ಪ್ರಾಚೀನತೆಯ ಬಗ್ಗೆ ಒಂದು ಶ್ಲೋಕವಿದೆ.

ಪುರಾಣಂ ಸರ್ವಶಾಸ್ತ್ರಾಣಾಂ ಪ್ರಥಮಂ ಬ್ರಹ್ಮಣಾ ಸ್ಮೃತಮ್ ।
ಅನಂತರಂ ಚ ವಕ್ತ್ರೇಭ್ಯೋ ವೇದಾಸ್ತಸ್ಯ ವಿನಿರ್ಗತಾಃ ॥

ಬೇರೆಲ್ಲ ಶಾಸ್ತ್ರಗಳಿಗಿಂತಲೂ ಮೊದಲು ಬ್ರಹ್ಮನ ಸ್ಮೃತಿಪಥಕ್ಕೆ ಬಂದದ್ದು ಪುರಾಣಗಳು. ತದನಂತರ ಅವನ ಚತುರ್ಮುಖಗಳಿಂದ ವೇದಗಳು ಉದ್ಭವವಾದವು ಎಂಬುದು ಈ ಶ್ಲೋಕದ ತಾತ್ಪರ್ಯ. ಈ ಅಷ್ಟಾದಶ ಪುರಾಣಗಳಲ್ಲಿ ಮಾರ್ಕಂಡೇಯ ಪುರಾಣ ಕೇವಲ 9000 ಶ್ಲೋಕಗಳಿಂದ ಕೂಡಿದ್ದು ಅತ್ಯಂತ ಚಿಕ್ಕ ಪುರಾಣವೆನಿಸಿಕೊಂಡಿದೆ. ಹಾಗೆಯೇ ಸುಮಾರು 89 ಸಾವಿರಕ್ಕೂ ಹೆಚ್ಚು ಶ್ಲೋಕಗಳಿಂದ ಕೂಡಿರುವ ಸ್ಕಾಂದ ಪುರಾಣವು ಅತ್ಯಂತ ದೊಡ್ಡದಾಗಿದೆ.

ಸರ್ಗಶ್ಚ ಪ್ರತಿಸರ್ಗಶ್ಚ ವಂಶೋ ಮನ್ವಂತರಾಣಿ ಚ ।
ವಂಶಾನಚರಿತಂ ಚೇತಿ ಪುರಾಣಂ ಪಂಚ ಲಕ್ಷಣಂ ॥

ಎಂಬುದಾಗಿ ಮತ್ಸ್ಯ, ವಿಷ್ಣು ಮತ್ತು ಬ್ರಹ್ಮಾಂಡ ಪುರಾಣಗಳಲ್ಲಿ ಪುರಾಣದ ಲಕ್ಷಣವನ್ನು ಹೇಳಿದ್ದಾರೆ. ಪುರಾಣಗಳಿಗೆ ಐದು ಲಕ್ಷಣಗಳಿವೆ. ಅವು ಯಾವುವೆಂದರೆ ಸರ್ಗ, ಪ್ರತಿಸರ್ಗ, ವಂಶ, ಮನ್ವಂತರ ಮತ್ತು ವಂಶಾನುಚರಿತೆ ಎಂಬುದಾಗಿ 5 ಲಕ್ಷಣಗಳಿಂದ ಕೂಡಿದ್ದರೆ ಅದನ್ನು ಪುರಾಣವೆಂದು ಹೇಳಲಾಗುತ್ತದೆ.

ಹಲವಾರು ಪುರಾಣಗಳಲ್ಲಿ ಧರ್ಮ, ವೇದಾಂತ, ಆದ್ಯಾತ್ಮಿಕ ಸಾಧನೆಗಳು, ಯೋಗ, ಜ್ಯೋತಿಷ, ಯಂತ್ರ, ಮಂತ್ರ, ವೈದ್ಯ, ವ್ಯಾಕರಣವೇ ಮೊದಲಾದ ಅನೇಕ ಶಾಸ್ತ್ರಗಳ ಬಗ್ಗೆ ಅಮೂಲ್ಯವಾದ ಹಲವಾರು ವಿಷಯಗಳು ನಿರೂಪಿಸಲ್ಪಟ್ಟಿವೆ.

ಪದ್ಮಪುರಾಣದಲ್ಲಿ ಉಲ್ಲೇಖಿತವಾದ ಈ ಕೆಳಕಂಡ ಶ್ಲೋಕವು 'ವೇದವ್ಯಾಸರ ರೂಪದಲ್ಲಿ ಸ್ವಯಂ ನಾರಾಯಣನೇ ಅವತರಿಸಿ ಪುರಾಣಗಳನ್ನು ಪ್ರಪಂಚಕ್ಕೆ ನೀಡಿದನು' ಎಂಬುದಾಗಿ ಹೇಳುತ್ತದೆ.

ನಿಸ್ತಾರಾಯ ತು ಲೋಕಾನಾಂ ಸ್ವಯಂ ನಾರಾಯಣಪ್ರಭುಃ ।
ವ್ಯಾಸರೂಪೇಣ ಕೃತವಾನ್ ಪುರಾಣಾನಿ ಮಹೀತಲೇ ॥

ವೇದಾರ್ಥಗಳನ್ನು ನಿರ್ಣಯಿಸುವ ಗ್ರಂಥರಾಶಿಯಾದ ಪುರಾಣಗಳು ಮಹಾಪುರಾಣಗಳು ಹಾಗೂ ಉಪಪುರಾಣಗಳೆಂದು ಎರಡು ವಿಧವಾಗಿ ವಿಂಗಡಿಸಲಾಗಿದೆ. ಈ 18 ಪುರಾಣಗಳನ್ನು ಸಾತ್ವಿಕ ಪುರಾಣಗಳು ರಾಜಸ ಪುರಾಣಗಳು ಮತ್ತು 'ತಾಮಸ ಪುರಾಣ'ಗಳೆಂದು 3 ಭಾಗಗಳಾಗಿ ವಿಂಗಡಿಸಲಾಗಿದೆ.

ವೈಷ್ಣವಂ ನಾರದೀಯಂ ಚ ತಥಾ ಭಾಗವತಂ ಶುಭಂ ।
ಗಾರುಡಶ್ಚ ತಥಾ ಪಾದ್ಮಂ ವಾರಾಹಂ ಶುಭದರ್ಶನೇ
ಸಾತ್ವಿಕಾನಿ ಪುರಾಣಾನಿ ವಿಜ್ಞೇಯಾನಿ ಶುಭಾನಿ ವೈ ॥

(1) ವಿಷ್ಣುಪುರಾಣ (2) ನಾರದ ಪುರಾಣ (3) ಭಾಗವತ ಪುರಾಣ (4) ಗರುಡ ಪುರಾಣ (5) ಪದ್ಮ ಪುರಾಣ (6) ವರಾಹ ಪುರಾಣಗಳು 'ಸಾತ್ವಿಕ ಪುರಾಣಗಳು' ಎಂಬುದಾಗಿ ಈ ಮೇಲೆ ಹೇಳಿದ ಶ್ಲೋಕವು ವಿವರಿಸುತ್ತದೆ.

ಅದರಂತೆಯೇ

ಬ್ರಹ್ಮಾಡಂ ಬ್ರಹ್ಮವೈವರ್ತಂ ಮಾರ್ಕಂಡೇಯಂ ತಥೈವ ಚ ।
ಭವಿಷ್ಯಂ ವಾಮನಂ ಬ್ರಾಹ್ಮಂ ರಾಜಸಾನಿ ನಿಬೋಧತ ॥

ಎಂಬ ಶ್ಲೋಕಾನುಸಾರವಾಗಿ (1) ಬ್ರಹ್ಮಾಂಡಪುರಾಣ (2) ಬ್ರಹ್ಮವೈವರ್ತಪುರಾಣ (3) ಮಾರ್ಕಂಡೇಯಪುರಾಣ (4) ಭವಿಷ್ಯಪುರಾಣ (5) ವಾಮನಪುರಾಣ ಮತ್ತು (6) ಬ್ರಾಹ್ಮ ಪುರಾಣ ಇವುಗಳು 'ರಾಜಸ ಪುರಾಣ'ಗಳು.

ಇನ್ನು ತಾಮಸ ಪುರಾಣಗಳು.

ಮಾತ್ಸ್ಯಂ ಕೌರ್ಮಂ ತಥಾ ಲೈಂಗಂ ಶೈವಂ ಸ್ಕಾಂದಂ ತಥೈವ ಚ ।
ಆಗ್ನೇಯಂ ಚ ಷಡೇತಾನಿ ತಾಮಸಾನಿ ನಿಬೋಧತ ॥

(1) ಮತ್ಸ್ಯಪುರಾಣ (2) ಕೂರ್ಮಪುರಾಣ (3) ಲಿಂಗಪುರಾಣ (4) ಶೈವಪುರಾಣ (5) ಸ್ಕಂದಪುರಾಣ ಮತ್ತು (6) ಅಗ್ನಿಪುರಾಣ, ಈ ಆರು ಪುರಾಣಗಳು 'ತಾಮಸ ಪುರಾಣ'ಗಳ ಗುಂಪಿಗೆ ಸೇರುತ್ತದೆ.

ಪುರಾಣಗಳಲ್ಲಿ ಕೆಲವು ವಿಷ್ಣು ಸಂಬಂಧೀ, ಕೆಲವು ಶಿವ ಸಂಬಂಧೀ, ಇನ್ನು ಕೆಲವು ಅನ್ಯ ದೇವತಾ ಸಂಬಂಧೀ ಪುರಾಣಗಳಿವೆ. ವಿಷ್ಣುಸಂಬಂಧೀ ಪುರಾಣಗಳನ್ನು ವೈಷ್ಣವ ಪುರಾಣಗಳೆಂದೂ, ಶಿವ ಸಂಬಂಧೀ ಪುರಾಣಗಳನ್ನು ಶೈವ ಪುರಾಣಗಳೆಂದೂ ಕರೆಯಲಾಗಿದೆ. ಪುರಾಣಗಳನ್ನು ವಿಂಗಡಿಸುವಾಗಿನ ಕ್ರಿಯೆಯಲ್ಲಿ ಸ್ವಲ್ಪ ಪ್ರಮಾಣದಲ್ಲಿ ಭೇದವಿರುವುದು ಕಂಡುಬರುತ್ತದೆ. ಪ್ರಸಿದ್ಧ ಗ್ರಂಥವಾದ 'ಪುರಾಣಭಾರತ' ಕೋಶದ ಅನುಗುಣವಾಗಿ 18 ಪುರಾಣಗಳಲ್ಲಿ 10 ಶಿವಪುರಾಣಗಳಿವೆ. ಅದರಂತೆಯೇ ನಾಲ್ಕು ಮಾತ್ರ ವಿಷ್ಣುಪುರಾಣಗಳು. ನಾವಿಂದು ಶಿವನಿಗೆ ಸಂಬಂಧಿಸಿದ ಕೆಲವು ಪುರಾಣಗಳ ಸಾಮಾನ್ಯ ಪರಿಚಯ ಮಾಡಿಕೊಳ್ಳೋಣ.

ನಮಗೆಲ್ಲ ತಿಳಿದಿರುವಂತೆ ಭಗವಾನ್ ವೇದವ್ಯಾಸರು ಪ್ರಪಂಚಕ್ಕೆ ಕೊಟ್ಟಿರುವ 18 ಮಹಾಪುರಾಣಗಳು ಈ ಕೆಳಗೆ ನಿರ್ದೇಶಿಸಿರುವಂತೆ ಪ್ರಸಿದ್ಧವಾಗಿವೆ.

ಬ್ರಾಹ್ಮಂ ಪಾದ್ಮಂ ವೈಷ್ಣವಂ ಚ ವಾಯವೀಯಂ ತಥೈವ ಚ ।
ಭಾಗವತಂ ನಾರದೀಯಂ ಮಾರ್ಕಂಡೇಯಂ ಚ ಕೀರ್ತಿತಂ ॥

ಆಗ್ನೇಯಂ ಚ ಭವಿಷ್ಯಂ ಚ ಬ್ರಹ್ಮವೈವರ್ತಲಿಂಗಕೇ ।
ವಾರಾಹಂ ಚ ತಥಾ ಸ್ಕಾಂದಂ ವಾಮನಂ ಕೂರ್ಮ ಸಂಹಿತಂ ।
ಮತ್ಸ್ಯಂ ಚ ಗಾರುಡಂ ತದ್ವತ್ ಬ್ರಹ್ಮಾಂಡಾಖ್ಯಮಿತಿ ತ್ರಿಷಟ್ ॥

'ಮ'ದ್ವಯಂ 'ಭ'ದ್ವಯಂ ಚೈವ 'ಬ್ರ'ತ್ರಯಂ 'ವ' ಚತುಷ್ಟಯಂ ।
ಅ' ನಾ' ಪ' ಲಿಂ' ಗ' ಕೂ' ಸ್ಕಾ' ನಿ ಪುರಾಣಾನಿ ಪ್ರಚಕ್ಷತೇ ॥

ಬ್ರಹ್ಮ ಪುರಾಣ

ಮುಖ್ಯ ಶೈವಪುರಾಣಗಳನ್ನು ಗಮನಿಸುವುದಾದರೆ ಬ್ರಹ್ಮಪುರಾಣ. ಮಹಾತ್ಮರಾದ ವ್ಯಾಸರು ಸಕಲಲೋಕಹಿತಕ್ಕಾಗಿ ಆದಿಯಲ್ಲಿ ಬ್ರಹ್ಮಪುರಾಣವನ್ನು ರಚಿಸಿದರು. ಪೂರ್ವ ಮತ್ತು ಉತ್ತರಭಾಗಗಳೆಂಬ ಎರಡು ವಿಭಾಗಗಳಿಂದ ಕೂಡಿರುವ ನಾನಾ ಉಪಾಖ್ಯಾನ ಮತ್ತು ಇತಿಹಾಸಗಳಿಂದ ಯುಕ್ತವಾದ 10,000 ಶ್ಲೋಕಗಳಿಂದೊಳಗೊಂಡ ಈ ಪುರಾಣವು ಧರ್ಮಾರ್ಥಕಾಮಮೋಕ್ಷದಾಯಕವಾಗಿದ್ದು ಅತ್ಯಂತ ಶ್ರೇಷ್ಠ ಪುರಾಣವೆನಿಸಿದೆ. ವಿಶ್ವಸೃಷ್ಟಿ ಹಾಗೂ ದೇವತೆಗಳ ಸೃಷ್ಟಿ, ದೇವತೆಗಳು ರಾಕ್ಷಸರು ದಕ್ಷನೇ ಮೊದಲಾದ ಪ್ರಜೇಶ್ವರರ ಉತ್ಪತ್ತಿ, ತೀರ್ಥಗಳ ಮಹಾತ್ಮೆ, ತದನಂತರದಲ್ಲಿ ಶ್ರವಣದಿಂದ ಮಹಾಪಾಪಗಳನ್ನು ಪರಿಹರಿಸುವುದು, ಮತ್ತು ಸೂರ್ಯದೇವನ ವಂಶಾನುಕೀರ್ತನೆ, ಸೂರ್ಯವಂಶದಲ್ಲಿ ಬಂದ ಸಕಲ ನಯನಾಭಿರಾಮನಾದ ಶ್ರೀರಾಮನ ಅವತಾರ ವರ್ಣನೆ, ಅನಂತರದಲ್ಲಿ ಚಂದ್ರವಂಶದ ವಿವರಣೆ, ಜಗದೀಶ್ವರನಾದ ಶ್ರೀಕೃಷ್ಣ ಪರಮಾತ್ಮನ ಅವತಾರ ಇತ್ಯಾದಿ ವಿವರಣೆಗಳಿವೆ. ದ್ವೀಪ, ಸಮುದ್ರ, ಖಂಡಗಳು, ಪಾತಾಳ, ಸ್ವರ್ಗ, ನರಕ, ಇವುಗಳ ವರ್ಣನೆ ಪೂರ್ವಭಾಗದಲ್ಲಿದೆ. ಶಿವಸಂಬಂಧಿ ಪುರಾಣವೆನ್ನಲು ಕಾರಣೀ ಭಾಗದಲ್ಲಿ ದೇವಿ ಪಾರ್ವತಿಯ ಅವತಾರ, ಆಕೆಯ ವಿವಾಹ ಮಹೋತ್ಸವ, ದಕ್ಷಪ್ರಜೇಶ್ವರನ ಕಥೆ ಮುಂತಾದವು ಈ ಪುರಾಣದಲ್ಲಿ ಅತಿ ವಿಸ್ತಾರವಾಗಿ ಹೇಳಲ್ಪಟ್ಟಿದೆ. ಆ ಕಾರಣದಿಂದಲೇ ಇದನ್ನು ಶೈವ ಪುರಾಣವೆನ್ನಬಹುದು. ತೀರ್ಥಯಾತ್ರಾವಿಧಾನ, ಪುರುಷೋತ್ತಮಕ್ಷೇತ್ರದ ವರ್ಣನೆ, ವಿಸ್ತಾರ ಕೃಷ್ಣಚರಿತೆ, ಯಮಲೋಕದ ವರ್ಣನೆ, ಪಿತೃಶ್ರಾದ್ಧ

ವಿಧಾನ, ವರ್ಣಾಶ್ರಮ ಧರ್ಮ, ನಿವೃತ್ತ ಧರ್ಮ, ಪ್ರಳಯದ ವರ್ಣನೆ, ಸಾಂಖ್ಯಯೋಗ ವಿವರಣೆ, ಬ್ರಹ್ಮವಿಚಾರ, ಹಾಗೂ ಪುರಾಣಗಳ ಪ್ರಶಂಸೆ, ಈ ವಿಷಯಗಳು ಅತ್ಯಂತ ವಿವರಣಾತ್ಮಕವಾಗಿ ಹೇಳಲ್ಪಟ್ಟಿವೆ.

ಪದ್ಮ ಪುರಾಣ

ಪದ್ಮಪುರಾಣದಲ್ಲೂ ಶಿವವಿಷಯವು ಅಂತರ್ಗತವಾಗಿದೆ. ಪದ್ಮಪುರಾಣದಲ್ಲಿ ಸೃಷ್ಟಿ ಖಂಡ, ಭೂಖಂಡ, ಸ್ವರ್ಗಖಂಡ, ಪಾತಾಳ ಖಂಡ, ಉತ್ತರ ಖಂಡ ಎಂಬುದಾಗಿ 5 ಖಂಡಗಳಿವೆ. ಸೃಷ್ಟಿ ಖಂಡದಲ್ಲಿ ಗಿರಿಜಾ ಕಲ್ಯಾಣ ಮತ್ತು ತಾರಕೋಪಾಖ್ಯಾನಗಳು ವಿವರಿಸಲ್ಪಟ್ಟಿವೆ. ಜೊತೆಗೆ ಧರ್ಮ, ಬ್ರಹ್ಮ ಯಜ್ಞವಿಧಾನ, ವೇದಪಾಠಾದಿಗಳ ಲಕ್ಷಣಗಳು, ದಾನ, ಅನ್ಯಾನ್ಯ ವ್ರತಗಳು ಗೋಮಾಹಾತ್ಮೆ, ನವಗ್ರಹಗಳ ಪೂಜಾವಿಧಾನ, ಹೀಗೆ ವಿಶಿಷ್ಟವಾದ ವಿಚಾರಗಳನ್ನು ವೇದವ್ಯಾಸರು ನಿರೂಪಿಸಿದ್ದಾರೆ. ಮುಂದಿನ ಖಂಡಗಳಲ್ಲಿ ಬ್ರಹ್ಮಾಂಡದ ಉತ್ಪತ್ತಿ, ಭೂಲೋಕದ ಸ್ಥಿತಿ, ಪುಣ್ಯತೀರ್ಥಗಳ ಕಥೆ, ಕಾಶಿ, ಗಯಾ, ಪ್ರಯಾಗ ಕ್ಷೇತ್ರಗಳ ಮಹಾತ್ಮೆ ಹೀಗೆ ಇನ್ನೂ ಹಲವಾರು ವಿಚಾರಗಳ ಪ್ರಸ್ತುತಿ ಇದೆ. ಐದನೆಯದಾದ ಉತ್ತರಖಂಡದಲ್ಲಿ ಮಹೇಶ್ವರನು ಪಾರ್ವತಿದೇವಿಗೆ ಉಪದೇಶ ಮಾಡಿದ ಪರ್ವತೋಪಾಖ್ಯಾನ, ಜಲಂಧರನ ಕಥೆ ಹೀಗೆ ಶ್ರೀಶೈಲಾದ್ಯನುವರ್ಣನೆ, ಗಂಗಾದಿತೀರ್ಥಕ್ಷೇತ್ರಗಳ ಪುಣ್ಯ ಮಹಿಮೆ ಅನ್ನಾದಿ ದಾನಗಳ ಮಹತ್ವ, ಮಹಾದ್ವಾದಶೀ ವ್ರತ ಹೀಗೆ ನೂರಾರು ವಿಚಾರಗಳ ವಿವರಣೆ ಇದೆ.

ವಾಯು ಪುರಾಣ

ಶೈವಪುರಾಣಗಳ ಸಾಲಿನಲ್ಲಿರುವ ಇನ್ನೊಂದು ಪುರಾಣವೆಂದರೆ ಅದು ವಾಯುಪುರಾಣ. ಈ ಪುರಾಣವನ್ನು ಶ್ರೀಬ್ರಹ್ಮದೇವರು ಮರೀಚಿ ಮಹರ್ಷಿಗಳಿಗೆ ಹೇಳುತ್ತಾರೆ. ಈ ಪುರಾಣದಲ್ಲಿ 24,000 ಶ್ಲೋಕಗಳಿವೆ. ವಾಯುದೇವನು ಶ್ವೇತಕಲ್ಪ ಪ್ರಸಂಗದಿಂದ ಧರ್ಮಗಳನ್ನು ಉಪದೇಶ ಮಾಡಿರುವ ಕಾರಣ ಇದು ವಾಯುಪುರಾಣ ಎಂದು ಹೆಸರಾಯಿತು. ಪೂರ್ವ ಮತ್ತು ಉತ್ತರಭಾಗಗಳೆಂಬ ಎರಡು ವಿಭಾಗಗಳಿಂದ ಕೂಡಿರುವ ಈ ಪುರಾಣದಲ್ಲಿ ಸ್ವರ್ಗಾದಿ ಲಕ್ಷಣ, ಸೃಷ್ಟಿವರ್ಣನೆ, ಮನ್ವಂತರ, ರಾಜವಂಶ, ಮಾಸಗಳ ಮಹಾತ್ಮೆ, ದಾನಧರ್ಮಗಳು, ರಾಜಧರ್ಮ, ಭೂಮಿ ಪಾತಾಳ ಅಂತರಿಕ್ಷಗಳಲ್ಲಿ ಸಂಚರಿಸುವವರ ವಿಚಾರ, ವ್ರತ ಕಾರ್ಯಾದಿಗಳ ನಿರ್ಣಯ ಇತ್ಯಾದಿ ಹಲವು ವಿಚಾರಗಳು ಪೂರ್ವಭಾಗದಲ್ಲಿವೆ. 'ಶಿವಸಂಹಿತೆ' ಈ ಪುರಾಣದ ಉತ್ತರ ಭಾಗದ ವಿಶೇಷ. ನರ್ಮದಾನದಿಯ ತೀರ್ಥವರ್ಣನೆ, ಇದರಲ್ಲಿ ವಿಶಿಷ್ಟವಾದ ಅಂಶ. ಈಶ್ವರನು ತನ್ನ ಶರೀರದಿಂದಲೇ ಒಂದು ಶಕ್ತಿಯನ್ನು ನದಿಯ ರೂಪದಲ್ಲಿ ಭೋಲೋಕಕ್ಕೆ ಕಳಿಸಿದನು, ಅದೇ ನರ್ಮದಾ ನದಿ ಎಂದು ಇಲ್ಲಿ ವಿವರಿಸಲಾಗಿದೆ. ಈ ನದಿಯ ಉತ್ತರ ತೀರದಲ್ಲಿ ವಾಸವಾಗಿರುವ ರುದ್ರಭಕ್ತರು ಮತ್ತು ದಕ್ಷಿಣತೀರದಲ್ಲಿ ವಾಸವಾಗಿರುವ ಸಕಲರೂ ಕೂಡ ವೈಕುಂಠವನ್ನು ಹೊಂದುತ್ತಾರೆ. ಓಂಕಾರೇಶ್ವರದಿಂದ ಪಶ್ಚಿಮ ಸಮುದ್ರವನ್ನು ಸೇರುವವರೆಗೆ ನರ್ಮದಾನದಿಗೆ 34 ಸಂಗಮಗಳಾಗುತ್ತವೆ. ಸಮುದ್ರಸಂಗಮವೂ ಸೇರಿದರೆ 35 ಸಂಗಮಗಳಾಗುತ್ತವೆ. ಈ ನದೀ ತೀರದಲ್ಲಿ ಸಾವಿರಾರು ಪವಿತ್ರ ತೀರ್ಥಕ್ಷೇತ್ರಗಳಿವೆ ಇತ್ಯಾದಿ ವಿಚಾರಗಳನ್ನೊಳಗೊಂಡ ಈ ನರ್ಮದಾನದಿಯ ಮಹಿಮೆ ಮತ್ತು ಚರಿತ್ರೆಯನ್ನು ವಾಯುದೇವನು ಹೇಳುತ್ತಾನೆ. ಶಿವಪರಮಾತ್ಮನ ಈ ಸಂಹಿತೆಯು ಅತ್ಯಂತ ಪುಣ್ಯಕರವಾದದ್ದು ಎಂದು ತಿಳಿಯಲಾಗಿದೆ.

ನಾರದೀಯ ಪುರಾಣ

ಭಕ್ತಿಯ ತತ್ವಗಳನ್ನು ಹೇಳುವ ವಿಶೇಷ ಪುರಾಣವಾಗಿದೆ. ಬ್ರಹ್ಮದೇವರು ಮರೀಚಿ ಮಹರ್ಷಿಗಳಿಗೆ ಹೇಳಿದ ಪುರಾಣ ನಾರದೀಯ ಪುರಾಣ. 25,000 ಶ್ಲೋಕಗಳ ಮೂಲಕ ಬೃಹತ್ ಕಲ್ಪಕಥೆಯನ್ನು ವಿವರಿಸಲಾಗಿದೆ. ಈ ಪುರಾಣದಲ್ಲಿ ನಾಲ್ಕು ಪಾದಗಳಲ್ಲಿರುವ ಪೂರ್ವಭಾಗ ವಿಶೇಷವಾಗಿದೆ. ಮೋಕ್ಷದ ಉಪಾಯಗಳು, ವೇದಾಂಗಗಳು, ಬಂಧಮೋಕ್ಷ, ಮಂತ್ರಶೋಧನ, ದೀಕ್ಷೆ, ಮಂತ್ರೋದ್ಧಾರ, ನಾನಾವಿಧಪ್ರಯೋಗಗಳು, ಕವಚ, ಸಹಸ್ರನಾಮಸ್ತೋತ್ರ, ಪಂಚಾಯತನ ದೇವತೆಗಳ ಮಂತ್ರಗಳು, ಇವುಗಳ ವಿವರಣೆಯಿದೆ. ವಿವಿಧ ಮಾಸಗಳಲ್ಲಿ ಮತ್ತು ವಿವಿಧ ತಿಥಿಗಳಲ್ಲಿ ಮಾಡಬೇಕಾದ ವ್ರತಗಳು ಮೊದಲಾದವನ್ನು ನಾವಿಲ್ಲಿ ನೋಡಬಹುದು.

ಉತ್ತರಭಾಗದಲ್ಲಿ ಗಂಗೆಯ ಕಥೆ, ಗಯಾಯಾತ್ರೆ, ಕಾಶೀಮಹಾತ್ಮೆ, ಗೋಕರ್ಣಕ್ಷೇತ್ರಮಹಾತ್ಮೆ ಇತ್ಯಾದಿ ವಿಚಾರಗಳು ವಿವರಣಾತ್ಮಕವಾಗಿ ಲಭ್ಯವಿದ್ದು ಈ ಪುರಾಣಪಠನ ಅಥವಾ ಶ್ರವಣ ಮಾಡುವವನು ಸ್ವರ್ಗಲೋಕವನ್ನು ಹೊಂದುತ್ತಾನೆಂದು ಹೇಳಲಾಗಿದೆ.

ಅಗ್ನಿ ಪುರಾಣ

ಅಗ್ನಿ ಪುರಾಣದಲ್ಲಿ 15,000 ಶ್ಲೋಕಗಳಿದ್ದು, ಬ್ರಹ್ಮನು ಮರೀಚಿ ಮಹರ್ಷಿಗಳಿಗೆ ಉಪದೇಶಿಸಿದನೆಂದು ಹೇಳಲ್ಪಟ್ಟಿದೆ.

ಈ ಪುರಾಣದಲ್ಲಿ ಎಲ್ಲ ಅವತಾರಗಳ ವರ್ಣನೆ, ವಿಷ್ಣುಪೂಜೆ, ಅಗ್ನಿಕಾರ್ಯ, ಮಂತ್ರ, ಮುದ್ರಾ ಮುಂತಾದವುಗಳ ಲಕ್ಷಣ, ಸೃಷ್ಟಿ ವರ್ಣನೆ, ಸರ್ವದೇವತೆಗಳ ಪ್ರತಿಷ್ಠಾ ವಿಧಾನ, ಗಾಯತ್ರ್ಯರ್ಥ ಕಥನ, ಲಿಂಗಸ್ತೋತ್ರ, ಆಯುರ್ವೇದ, ಧನುರ್ವಿದ್ಯೆ, ನಾನಾ ಪೂಜೆಗಳು, ಜ್ಯೋತಿಷ, ರಾಜನೀತಿ, ಶಿಲ್ಪ, ದೇವಾಲಯ, ಕೆಲವು ದೇವತಾ ಉಪಾಸನೆಗಳು, ಆಗಮಶಾಸ್ತ್ರ, ಆಯುರ್ವೇದ ಚಿಕಿತ್ಸಾ ಪದ್ಧತಿಗಳು, ಕೆಲವು ವ್ರತಗಳ ವಿವರಣೆ, ನಾಟಕ, ನೃತ್ಯ, ಅಭಿನಯ, ಅಲಂಕಾರ ವ್ಯಾಕರಣ ಛಂದಸ್ ಯಮಗೀತೆ ಗಣೇಶಗೀತೆ ರಾಮಾಯಣ ಮಹಾಭಾರತ ಮುಂತಾದವುಗಳಿದೆ.

ಲಿಂಗ ಪುರಾಣ

ಧರ್ಮಸಿದ್ಧಿಗಾಗಿ ಶಿವನು ಅಗ್ನಿಲಿಂಗದಲ್ಲಿ ನಿಂತು ಅಗ್ನಿ ಕಲ್ಪಕಥಾವಿಷಯವನ್ನು ಹೇಳುತ್ತಾನೆ. ಅದೇ ಲಿಂಗ ಪುರಾಣ. ಇದನ್ನು ವೇದವ್ಯಾಸರು ಅನೇಕ ಉಪಾಖ್ಯಾನಗಳಿಂದ ಚಿತ್ರಿಸಿ ಹೇಳುತ್ತಾರೆ. ಇದು ಎರಡು ಭಾಗಗಳಿಂದ ಕೂಡಿದೆ. ಈ ಪುರಾಣವು ವಿಶೇಷವಾಗಿ ಈಶ್ವರನ ಮಹಾತ್ಮ್ಯವನ್ನು ವರ್ಣಿಸುತ್ತದೆ. ಈ ಪುರಾಣವು ಎಲ್ಲ ಪುರಾಣಗಳ ಸಾರರೂಪವೇ ಆಗಿದೆ. ದಾರುಕಾವನ ಪ್ರಸಂಗ, ಲಿಂಗೋದ್ಭವ, ಲಿಂಗಪೂಜೆ, ಯೋಗಾಖ್ಯಾನ, ಕಲ್ಪಾಖ್ಯಾನ, ಸನತ್ಕುಮಾರ ನಂದಿ ಸಂವಾದ, ದಧೀಚಿ ಚರಿತೆ, ಪ್ರಶ್ನಪೂರ್ವಕ ಸಂಕ್ಷೇಪ ಸೃಷ್ಟಿ ಕಥನ, ಶಿವ ಚರಿತ್ರೆ, ನೃಪಾಖ್ಯಾನ, ಯುಗಧರ್ಮ, ಭುವನ ಕೋಶಾಖ್ಯಾನ, ಸೂರ್ಯಚಂದ್ರವಂಶ, ತ್ರಿಪುರಾಖ್ಯಾನ, ಲಿಂಗಪ್ರತಿಷ್ಠೆ, ಶಿವವ್ರತ, ಸದಾಚಾರ, ಪಶುಪಾಶವಿಮೋಚನೆ, ಪ್ರಾಯಶ್ಚಿತ್ತ, ಅರಿಷ್ಟ, ಕಾಶಿ, ಶ್ರೀಶೈಲವರ್ಣನೆ, ಅಂಧಕಾಸುರಾಖ್ಯಾನ, ವರಾಹ ಚರಿತ್ರೆ, ನರಸಿಂಹ ಚರಿತ್ರೆ, ಜಲಂಧರ ವಧೆ, ದಕ್ಷಯಜ್ಞವಿನಾಶ, ಕಾಮದಹನ, ಗಿರಿಜಾಪಾಣಿಗ್ರಹಣ, ಶಿವಸಹಸ್ರನಾಮ, ವಿನಾಯಕೋಪಾಖ್ಯಾನ, ಉಪಮನ್ಯುವಿನ ಕಥೆ ಇವು ಪೂರ್ವಭಾಗದಲ್ಲಿ ಹೇಳಲ್ಪಟ್ಟಿವೆ.

ಶಿವಪೂಜೆ, ಬಹುವಿಧ ದಾನಗಳು, ಶಿವ ಮಹಾತ್ಮ್ಯ, ವಿಷ್ಣು ಮಹಾತ್ಮ್ಯ, ಸನತ್ಕುಮಾರ ನಂದೀಶ ಸಂವಾದ, ಅಂಬರೀಷನ ಕಥೆ, ಸ್ನಾನಯಾಗಾದಿಗಳು, ಶ್ರಾದ್ಧಪ್ರಕರಣ, ಪ್ರತಿಷ್ಠಾತಂತ್ರ, ಸೂರ್ಯಪೂಜಾವಿಧಾನ, ಅಘೋರಕೀರ್ತನೆ, ತ್ರ್ಯಂಬಕಮಾಹಾತ್ಮ್ಯ, ಗಾಯತ್ರೀಮಹಿಮೆ, ವಜ್ರೇಶ್ವರೀವಿದ್ಯೆ ಇವುಗಳು ಉತ್ತರ ಭಾಗದಲ್ಲಿರುವ ಅಂಶಗಳು. ಈ ಪುರಾಣವನ್ನು ಶಿವನ ಮಹಾತ್ಮ್ಯವನ್ನು ಜನರಿಗೆ ತಿಳಿಸುವ ಉದ್ದೇಶದಿಂದ ಭಗವಾನ್ ವೇದವ್ಯಾಸರೇ ರಚನೆ ಮಾಡಿದರು.

ಸ್ಕಾಂದ ಪುರಾಣ

ಶಿವ ಮಾಹಾತ್ಮ್ಯವನ್ನು ವಿವರಿಸುವ, ಬ್ರಹ್ಮದೇವನಿಂದ ಹೇಳಲ್ಪಟ್ಟ ಬಹು ದೀರ್ಘವಾದ ಹಾಗೂ ವಿಸ್ತಾರವಾದ ಪುರಾಣವೇ ಸ್ಕಾಂದಪುರಾಣ. ಎಲ್ಲ ಪಾಪಗಳನ್ನು ಪರಿಹಾರ ಮಾಡುವ ಈ ಪುರಾಣದಲ್ಲಿ 7 ಖಂಡಗಳಿದ್ದು, ಒಟ್ಟು 89,000 ಶ್ಲೋಕಗಳಿವೆ. ಸ್ಕಾಂದಪುರಾಣವನ್ನು ವೇದವ್ಯಾಸರೇ ರಚನೆ ಮಾಡಿದರು. ಅಧ್ಯಯನ ಮಾಡಿರುವ ಪ್ರತಿಯೊಬ್ಬ ವಿದ್ವಾಂಸರೂ ಕೂಡ 'ಇದರಲ್ಲಿರುವ ಪ್ರತಿಯೊಂದು ಪದದಲ್ಲಿಯೂ ಸಾಕ್ಷಾತ್ ಶಿವನ ಸಾನ್ನಿಧ್ಯವಿದೆ' ಎಂದು ಹೇಳುತ್ತಾರೆ.

ಮಾಹೇಶ್ವರ ಖಂಡ

ಅತ್ಯಂತ ಬೃಹತ್ ಪುರಾಣ. ಈ ಪುರಾಣದ ಮೊದಲ ಖಂಡವನ್ನು ಮಾಹೇಶ್ವರ ಖಂಡ ಎನ್ನುತ್ತಾರೆ. ತತ್ಪುರುಷ ಕಲ್ಪದಲ್ಲಿ ನಡೆದ ಮಾಹೇಶ್ವರ ಧರ್ಮಗಳು ಸ್ಕಂದನಿಂದ ಹೇಳಲ್ಪಟ್ಟಿವೆ.

ದಕ್ಷಯಜ್ಞ ಕಥೆ, ಕೇದಾರ ಮಹಾತ್ಮ್ಯ, ದೇವೇಂದ್ರ ಚರಿತ್ರೆ, ಶಿವಲಿಂಗಾರ್ಚನೆಯ ಫಲ, ಸಮುದ್ರಮಥನ, ಪಾರ್ವತ್ಯುಪಾಖ್ಯಾನ, ನಾರದ ಸಮಾಗಮ, ಕುಮಾರ ಮಹಾತ್ಮ್ಯ, ದ್ಯೂತಪ್ರವರ್ತನಾಖ್ಯಾನ, ಪಂಚತೀರ್ಥಕಥೆ, ನದೀಸಾಗರ ಕೀರ್ತನೆ, ಪಂಚಲಿಂಗ ನಿವೇಶನ, ದ್ವೀಪಾಖ್ಯಾನ, ಊರ್ಧ್ವಲೋಕಸ್ಥಿತಿ, ಬ್ರಹ್ಮಾಂಡಸ್ಥಿತಿ, ನಾನಾತೀರ್ಥ ಸಮಾಖ್ಯಾನ, ಅರುಣಾಚಲ ಮಹಾತ್ಮೆ, ಇತ್ಯಾದಿಗಳು ಮಹೇಶ್ವರಖಂಡದಲ್ಲಿವೆ.

ವೈಷ್ಣವ ಖಂಡ

ಪುರುಷೋತ್ತಮ ಮಹಾತ್ಮೆ, ರಥಯಾತ್ರಾವಿಧಿ, ಜನ್ಮಸ್ಥಾನವಿಧಿ, ದಕ್ಷಿಣಾಮೂರ್ತಿಯ ಉಪಾಖ್ಯಾನ, ರಥರಕ್ಷಾ ವಿಧಾನ, ದೇವಾಲಯಗಳಲ್ಲಿ ಶಯನೋತ್ಸವಕೀರ್ತನೆ, ಡೋಲೋತ್ಸವ, ಯೋಗಸಾಧನೆ, ನಾನಾಯೋಗಗಳು, ಸ್ನಾನಾದಿ ವಿಧಾನ, ಮಾಲಾಧಾರಣ ಪುಣ್ಯ, ಪಂಚಾಮೃತಸ್ನಾನಪುಣ್ಯ, ಘಂಟಾನಾದದ ಫಲ, ವಿವಿಧ ಪುಷ್ಪ ಹಾಗೂ ತುಲಸೀ ಅರ್ಚನೆಗಳ ಫಲ, ನೈವೇದ್ಯದ ಫಲ, ಜಾಗರಣೆಗಳ ಫಲ, ಉತ್ಸವವಿಧಾನ ಇತ್ಯಾದಿ ನೂರಾರು ವಿಚಾರಗಳು ಈ ವೈಷ್ಣವಖಂಡ ವಿಭಾಗದಲ್ಲಿ ಕಂಡುಬರುತ್ತದೆ.

ಹೀಗೆಯೇ ಬ್ರಹ್ಮಖಂಡದ ಪೂರ್ವಭಾಗ, ಬ್ರಹ್ಮಖಂಡದ ಉತ್ತರಭಾಗ, ಕಾಶಿಖಂಡ, ಅವಂತೀಖಂಡ, ನಾಗರಖಂಡ, ಪ್ರಭಾಸಖಂಡ ಹೀಗೆ ಎಲ್ಲಾ ಖಂಡಗಳಲ್ಲಿಯೂ ಶಿವಸಂಬಂಧಿಸಿದ ಹಾಗೂ ಶಿವಲೋಕಾಂತರ್ಗತ ವಿಚಾರಗಳೇ ತುಂಬಿಕೊಂಡಿವೆ. ಜೊತೆಗೆ ನೂರಾರು ಉತ್ಸವ, ವ್ರತ ಇತ್ಯಾದಿ ವಿವರಣೆಗಳು ಈ ವಿಭಾಗಗಳಲ್ಲಿ ಕಂಡುಬರುತ್ತವೆ. ಪುರಾಣಗಳಲ್ಲೆಲ್ಲ ಅತ್ಯಂತ ಬೃಹತ್ ಗಾತ್ರದ ಪುರಾಣವೇ ಸ್ಕಾಂದ ಪುರಾಣ.

ಕೂರ್ಮಪುರಾಣ

ಮಹಾವಿಷ್ಣುವು ಕೂರ್ಮನ ರೂಪದಲ್ಲಿ ಅವತರಿಸಿ ಲಕ್ಷ್ಮೀಚರಿತ್ರೆಯನ್ನು ಋಷಿಗಳಿಗೆ ಹೇಳಿರುವ ಈ ಕೂರ್ಮಪುರಾಣವನ್ನು ಬ್ರಹ್ಮದೇವನು ಮರೀಚಿ ಮುನಿಗಳಿಗೆ ಹೇಳಿದನು. ಈ ಪುರಾಣ ನಾನಾ ಕಥಾಪ್ರಸಂಗಗಳಿಂದ ಕೂಡಿದ್ದು ನಾಲ್ಕು ಸಂಹಿತೆಗಳಿಂದ ಕೂಡಿದೆ.

ಈ ಪುರಾಣದಲ್ಲಿ ತ್ರೈಲೋಕ್ಯವರ್ಣನೆ, ವೇದಶಾಖಾ ನಿರೂಪಣೆ, ವಾರಣಾಸೀ-ಪ್ರಯಾಗ ಮುಂತಾದ ದಿವ್ಯಕ್ಷೇತ್ರಗಳ ಮಹಾತ್ಮ್ಯ, ಶಂಕರ ಚರಿತ್ರೆ, ಸೃಷ್ಟಿಯ ವರ್ಣನೆ, ಪಾರ್ವತೀಸಹಸ್ರನಾಮ, ಯುಗಧರ್ಮಕಥನ, ಯೋಗಧರ್ಮ ನಿರೂಪಣೆ, ವರ್ಣಾಶ್ರಮಾಚಾರ ಕಥೆ, ಲಕ್ಷ್ಮೀ-ಇಂದ್ರದ್ಯುಮ್ನ ಸಂವಾದ, ಕಾಲಸಂಖ್ಯೆ, ಕೂರ್ಮ ಋಷಿಗಳ ಸಂಭಾಷಣೆ, ಜಗದುತ್ಪತ್ತಿ ಕಥನ, ಪ್ರಳಯಾಂತ್ಯದಲ್ಲಿ ಸ್ವಾಮಿಯ ಸ್ತೋತ್ರ, ವ್ಯಾಸ ಜೈಮಿನಿ ಸಂವಾದ ಇವು ಪೂರ್ವಭಾಗದಲ್ಲಿ ಸೇರಿವೆ. ವರ್ಣಾಶ್ರಮಧರ್ಮ ವರ್ಣನೆ, ವರ್ಣಾಶ್ರಮದ ವಿವರಣೆ, ಪ್ರಾಕೃತಸರ್ಗವಿವರ, ಕಾಲಸಂಖ್ಯಾವಿವರ, ಪೃಥ್ವಿಯ ಉದ್ಧಾರವರ್ಣನೆ, ರುದ್ರಸೃಷ್ಟಿಯ ವಿವರಣೆ, ದೇವಿ ಅವತಾರವರ್ಣನೆ, ಲಿಂಗೋತ್ಪತ್ತಿ ವಿವರಣೆ, ಯುಗವಂಶಾನುಕೀರ್ತನೆ, ಭುವನವಿನ್ಯಾಸ ವಿವರಣೆ, ಜ್ಯೋತಿ ಸನ್ನಿವೇಶ ವರ್ಣನೆ, ಆದಿತ್ಯವ್ಯೂಹ ವರ್ಣನೆ ಇತ್ಯಾದಿ ಹಲವು ವಿಚಾರಗಳು ಪ್ರಥಮಖಂಡದಲ್ಲಿವೆ. ಪುಷ್ಕರದ್ವೀಪ ವರ್ಣನೆ, ವೈವಸ್ವತಮನ್ವಂತರದಲ್ಲಿ ಶಿವಾವತಾರ ವರ್ಣನೆ ಮುಂತಾದವು ಪೂರ್ವಾರ್ಧ ಭಾಗದಲ್ಲಿಯೇ ಸೇರಿವೆ.

ಉತ್ತರಭಾಗದಲ್ಲಿ ಎರಡು ಸಂಹಿತೆಗಳಿವೆ. ಅವು ಬ್ರಾಹ್ಮೀ ಸಂಹಿತಾ ಮತ್ತು ಭಾಗವತೀ ಸಂಹಿತಾ.

ಬ್ರಾಹ್ಮೀಸಂಹಿತೆಯಲ್ಲಿ ಈಶ್ವರಗೀತಾ, ನಾನಾಧರ್ಮ ಬೋಧಕ ವ್ಯಾಸಗೀತಾ, ನಾನಾವಿಧ ತೀರ್ಥಮಹಾತ್ಮ್ಯ ಮುಂತಾದ ವಿಚಾರಗಳು ವಿವೃತವಾಗಿದ್ದರೆ, ಭಾಗವತೀ ಸಂಹಿತೆಯಲ್ಲಿ ವರ್ಣಧರ್ಮಗಳ ನಿರೂಪಣೆಯಿದೆ. ಬ್ರಾಹ್ಮಣರ ಸದಾಚಾರ ಸ್ಥಿತಿಯು ಪ್ರಥಮಪಾದದಲ್ಲಿ ದ್ವಿತೀಯ ಪಾದದಲ್ಲಿ ಕ್ಷತ್ರಿಯ ವೃತ್ತಿ ನಿರೂಪಣೆ, ತೃತೀಯಪಾದದಲ್ಲಿ ವೈಶ್ಯವರ್ಣದ ಚತುರ್ವಿಧ ವೃತ್ತಿಗಳ ನಿರೂಪಣೆ, ನಾಲ್ಕನೆಯ ಪಾದದಲ್ಲಿ ಮಾನವನಿಗೆ ಶ್ರೇಯಸ್ಸನ್ನು ಕೊಡುವ ಶ್ರೀ ವಿಷ್ಣುವು ಸಂತುಷ್ಟನಾಗುವಂತಹ

ಶೂದ್ರವೃತ್ತಿಯ ನಿರೂಪಣೆಯಿದೆ. ಐದನೆಯ ಪಾದದಲ್ಲಿ ಸಂಕರಜಾತಿಧರ್ಮಗಳ ನಿರೂಪಣೆ ಇದೆ.

ಶಿವಪುರಾಣಮ್

> ಏಕೋಜರಾಮರಃ ಸ್ಯಾದ್ವೈ ಪಿಬನ್ನೇವಾಮೃತಂ ಪುಮಾನ್ ।
> ಶಂಭೋಃ ಕಥಾಮೃತಂ ಕುರ್ಯಾತ್ ಕುಲಮೇವಾಜರಾಮರಮ್ ॥

ಅಮೃತವನ್ನು ಪಾನ ಮಾಡಿದ ವ್ಯಕ್ತಿ ತಾನೊಬ್ಬ ಮಾತ್ರವೇ ಜರಾಮರಣ ರಹಿತನಾಗಿ ಅಮರನಾಗುತ್ತಾನೆ. ಆದರೆ ಶಿವಪುರಾಣದ ಕಥಾಮೃತವನ್ನು ಶ್ರವಣ ಮಾಡಿದ ವ್ಯಕ್ತಿಯ ಕುಲವೇ ಜರಾಮರಣ ರಹಿತವಾಗುತ್ತದೆ. ತಾನು ಅಮರನಾಗುವುದರ ಜೊತೆಗೆ ತನ್ನ ಕುಲಕ್ಕೂ ಸದ್ಗತಿಯನ್ನು ಕರುಣಿಸುವಂತವನಾಗುತ್ತಾನೆ. ಅಂದರೆ ಅವನ ವಂಶವೇ ಉದ್ಧಾರವಾಗುತ್ತದೆ ಎಂದರ್ಥ. ಅಷ್ಟು ಮಹಿಮೆ ಈ ಶಿವಪುರಾಣಕ್ಕಿದೆ. ಶಿವಪುರಾಣದಲ್ಲಿ 24,000 ಶ್ಲೋಕಗಳಿವೆ.

ಬ್ರಹ್ಮವೈವರ್ತ ಪುರಾಣ

ಸಾಕ್ಷಾತ್ ಬ್ರಹ್ಮನಿಂದ ನಿರೂಪಿಸಲ್ಪಟ್ಟ ವೇದಮಾರ್ಗಪ್ರತಿಪಾದಕವಾದ ಬ್ರಹ್ಮವೈವರ್ತ ಪುರಾಣದಲ್ಲಿ ಶಿವಸಂಬಂಧೀ ವಿಚಾರ ಅತ್ಯಂತ ಸ್ಪಷ್ಟವಾಗಿ ನಿರ್ದಿಷ್ಟವಾಗಿದೆ. ಈ ಪುರಾಣದ ಬ್ರಹ್ಮಖಂಡವೆಂಬ ಮೊದಲ ವಿಭಾಗದಲ್ಲಿ ಶಿವಲೋಕ ಗಮನ ಮತ್ತು ಶಿವನ ಉಪದೇಶದಿಂದಾಗುವ ಜ್ಞಾನಲಾಭ ಎಂಬೆರಡು ವಿಭಾಗಗಳನ್ನು ಇಲ್ಲಿ ನೋಡಬಹುದು. ಇನ್ನುಳಿದಂತೆ ಮೂರನೆಯ ವಿಘ್ನೇಶಖಂಡದಲ್ಲಿ ಗಣೇಶ ಜನ್ಮವಿಷಯದಲ್ಲಿ ಪ್ರಶ್ನೋತ್ತರ, ಪಾರ್ವತೀದೇವಿಯಲ್ಲಿ ಕಾರ್ತಿಕೇಯನ ಮತ್ತು ಗಣೇಶನ ಉತ್ಪತ್ತಿ ಇತ್ಯಾದಿ ವಿಚಾರಗಳು ವಿವರಿಸಲ್ಪಟ್ಟಿವೆ.

ವರಾಹ ಪುರಾಣ

ವಿಷ್ಣುಮಹಾತ್ಮೆಯನ್ನು ತಿಳಿಸುವ ವರಾಹಪುರಾದಲ್ಲಿಯೂ ಕೂಡ ಶೈವ ವಿಚಾರಗಳನ್ನು ಗಮನಿಸಬಹುದು. ಇದರಲ್ಲಿ ಮುಖ್ಯವಾಗಿ ಆದಿಕೃತಯುಗದ ವೃತ್ತಾಂತ, ದುರ್ಜಯ ಚರಿತ್ರೆ, ಶ್ರಾದ್ಧಕಲ್ಪ, ಮಹಾತಪಸ್ಸಿನಕಥೆ, ಗೌರಿಯ ಉತ್ಪತ್ತಿ, ವಿನಾಯಕ ವಿಚಾರ, ಅಗಸ್ತ್ಯಗೀತೆ, ರುದ್ರಗೀತೆ, ಶ್ರಾದ್ಧವಿಧಾನ, ಯಮಲೋಕ ವರ್ಣನೆ, ಪಾಪನಾಶಕವಾದ ಗೋಕರ್ಣ ಕ್ಷೇತ್ರ ಮಹಾತ್ಮೆ ಇತ್ಯಾದಿಗಳು ಈ ಪುರಾಣದ ಪೂರ್ವಭಾಗದಲ್ಲಿ ಕಂಡುಬರುತ್ತವೆ.

ಉಪಸಂಹಾರ

ಈ ರೀತಿಯಾಗಿ ಉಪಯುಕ್ತವಾದ ಹೆಚ್ಚಿನ ಪುರಾಣಗಳಲ್ಲಿ ಶಿವನಿಗೆ ಸಂಬಂಧಿಸಿದ ವಿಚಾರಗಳನ್ನು ನಾವಿಲ್ಲಿ ಗಮನಿಸಿದ್ದೇವೆ. ಶೈವ ಹಾಗೂ ವೈಷ್ಣವ ಪುರಾಣಗಳೆಂಬ ವಿಭಾಗಕರಣದಲ್ಲಿಯೇ ಗೊಂದಲಗಳು ಕಾಣುತ್ತಿದ್ದರೂ ಪುರಾಣಗಳಲ್ಲಿ ಶಿವಸಂಬದ್ಧವಾದ ವಿಚಾರಗಳಿಗೆ ಮಹತ್ವ ಕೊಡಲಾಗಿದೆ. ಸಾತ್ವಿಕ ಪುರಾಣಗಳು, ರಾಜಸ ಪುರಾಣಗಳು, ತಾಮಸ ಪುರಾಣಗಳು ಎಂಬ ಭೇದವಿದ್ದರೂ ಕೇವಲ ತಾಮಸ ಪುರಾಣಗಳಲ್ಲಿ ಶಿವವಿಚಾರಗಳು ಎನ್ನುವುದು ಅಷ್ಟು ಸಮಂಜಸವಲ್ಲ. ಏಕೆಂದರೆ ಶಿವವಿಷ್ಣು ಭೇದಗಳಿಲ್ಲದೇ ಸಾಮಾನ್ಯವಾಗಿ ಪ್ರತಿಯೊಂದು ಪುರಾಣದಲ್ಲಿಯೂ ಚಿಂತನೆಗಳು ನಡೆದಿರುವುದು ಅನುಭವಕ್ಕೆ ಬರುತ್ತದೆ. ಪುರಾಣಗಳು ಕೇವಲ ಕಥೆಗಳ ಗೂಡಾಗಿರದೇ ನಮ್ಮ ದೈನಂದಿನ ಆಚರಣೆಗಳಲ್ಲಿ ಸ್ವೀಕರಿಸಬಹುದಾದ ಅನೇಕ ವಿಚಾರಗಳನ್ನು ಪ್ರಸ್ತುತಪಡಿಸುತ್ತವೆ. ಪುರಾಣಗಳ ಅಧ್ಯಯನವು ನಮ್ಮನ್ನು ಹಲವು ವಿಧಗಳಲ್ಲಿ ಚಿಂತನೆಯ ಒರೆಗೆ ಹಚ್ಚುವುದರಲ್ಲಿ ಯಾವ ಸಂಶಯವೂ ಇಲ್ಲ. ಇಂತಹ ಪುರಾಣಗಳು ಮಾನವ ಜೀವನದ ಏಳ್ಗೆಯಲ್ಲಿ ಪ್ರಮುಖವಾದ ಪಾತ್ರವನ್ನು ನಿರ್ವಹಿಸುತ್ತವೆ ಎಂಬುದನ್ನು ನಾವು ಗಮನಿಸಬಹುದಾಗಿದೆ.

❑

ವೈಷ್ಣವ ಪುರಾಣಗಳು

—ವಿದ್ವಾನ್. ಸೂರ್ಯನಾರಾಯಣ

ವಿಷ್ಣುವಿಗೆ ಸಂಬಂಧಪಟ್ಟ ಪುರಾಣಗಳು, ವೈಷ್ಣವ ಪುರಾಣಗಳು. ವೈಷ್ಣವ ಪುರಾಣಗಳನ್ನು ಸಾತ್ವಿಕ ಪುರಾಣಗಳೆಂದೂ ಕರೆಯುವರು. ಅವುಗಳೆಂದರೆ ವಿಷ್ಣು ಪುರಾಣ, ನಾರದ ಪುರಾಣ, ಪದ್ಮ ಪುರಾಣ, ಗರುಡ ಪುರಾಣ, ವರಾಹ ಪುರಾಣ ಮತ್ತು ಭಾಗವತ ಪುರಾಣಗಳು ಅಡಕವಾಗಿವೆ.

ಭಾರತೀಯ ಸಂಸ್ಕೃತಿ, ಆಧ್ಯಾತ್ಮ, ನೈತಿಕತೆ ಧರ್ಮವನ್ನು ಅರಿಯಲು ಪುರಾಣಗಳು ಅಡಿಗಲ್ಲಾಗುವುವು. ಭಾರತೀಯ ಸನಾತನ ಧರ್ಮದ ಅರಿವು ಪುರಾಣಗಳ ಅಧ್ಯಯನದಿಂದ ಮಾತ್ರ ಸಾಧ್ಯ.

ವಿಷ್ಣೋಃ ಇದಂ - ವೈಷ್ಣವಯ್.

ವಿಷ್ಣುವಿಗೆ ಸಂಬಂಧಪಟ್ಟ ಪುರಾಣಗಳು, ವೈಷ್ಣವ ಪುರಾಣಗಳು. ವೈಷ್ಣವ ಪುರಾಣಗಳನ್ನು ಸಾತ್ವಿಕ ಪುರಾಣಗಳೆಂದೂ ಕರೆಯುವರು. ಅವುಗಳೆಂದರೆ ವಿಷ್ಣು ಪುರಾಣ, ನಾರದ ಪುರಾಣ, ಪದ್ಮ ಪುರಾಣ, ಗರುಡ ಪುರಾಣ, ವರಾಹ ಪುರಾಣ ಮತ್ತು ಭಾಗವತ ಪುರಾಣಗಳು ಅಡಕವಾಗಿವೆ.

ಭಾರತೀಯ ಸಂಸ್ಕೃತಿ, ಆಧ್ಯಾತ್ಮ, ನೈತಿಕತೆ ಧರ್ಮವನ್ನು ಅರಿಯಲು ಪುರಾಣಗಳು ಅಡಿಗಲ್ಲಾಗುವುವು. ಭಾರತೀಯ ಸನಾತನ ಧರ್ಮದ ಅರಿವು ಪುರಾಣಗಳ ಅಧ್ಯಯನದಿಂದ ಮಾತ್ರ ಸಾಧ್ಯ.

ಪದ್ಮಪುರಾಣದ ಉತ್ತರಕಾಂಡದ 235ನೇ ಅಧ್ಯಾಯದಲ್ಲಿ ಬರುವ ಶ್ಲೋಕ ಸಾತ್ವಿಕ ಪುರಾಣದ ವಿಚಾರವಾಗಿ

वैष्णवं नारदीयं च तथा भागवतं शुभम् ।
गरूडंचवं तथा पाद्मं वाराहं शुभदर्शने
सात्विकानि पुराणानि विज्ञेथानि शुभानि वै ।

ಮಹಾಭಾರತದ ಕರ್ತೃ ವ್ಯಾಸನೇ ಇವೆಲ್ಲ ಅಷ್ಟಾದಶ ಪುರಾಣದ ಕರ್ತೃ ಎಂಬುದು ಭಾರತೀಯರ ಅಚಲ ವಿಶ್ವಾಸ.

ಬೃಹದಾರಣ್ಯಕ ಉಪನಿಷತ್ತಿನಲ್ಲಿ 'इतिहासपुराणं पञ्चमं वेदानाम्' ಎಂಬುದಾಗಿ ವರ್ಣಿಸಿರುವುದು ಪುರಾಣಗಳ ಮಾಹಾತ್ಮೆಯನ್ನು ತಿಳಿಸುತ್ತದೆ.

ಶ್ರೀ ಭಾಗವತ ಮಹಾಪುರಾಣ

निगमकल्पतरोर्गलितं फलं ।
शुकमुखादमृतद्रव संयुतम्
पिबत भागवतं रसमालयं
मुहुरहो रसिका भुवि भावुका: ॥

ಶ್ರೀಮದ್ಭಾಗವತ ಮಹಾಪುರಾಣವು ಭಾಗ್ಯವಂತರಾದ ಭಗವದ್ಭಕ್ತರಿಗೆ ಆರ್ಷವಾಙ್ಮಯರೂಪವಾದ ಪರಮೋತ್ತ ಜ್ಞಾನಧನವಾಗಿದೆ. ಇದು ಅನುಪಮವೂ ಅದ್ವಿತೀಯವೂ ಆದ ಮುಕ್ತಿಸಾಧನವಾಗಿದೆ. ಆದ್ದರಿಂದಲೇ "ಏಕಂ ಭಾಗವತಂಶಾಸ್ತ್ರಂ ಮುಕ್ತಿದಾನೇನ ಗರ್ಜತಿ" ಎಂಬ ವಾಣಿಯು ಭೋರ್ಗರೆಯುತ್ತದೆ. ಭಾಗವತವು ಪರಿಪೂರ್ಣವಾಗಿ ಭಗವಂತನಾದ ಕೃಷ್ಣನ ತೇಜಸ್ಸಿನಿಂದ ಬೆಳಗುತ್ತಿದೆ. ಇದು ಪರಮಾತ್ಮನ ವಾಙ್ಮಯವಾದ ಅವತಾರವಾಗಿದೆ.

ಭಾಗವತ ಮಹಾಪುರಾಣದ ವಿಷಯದಲ್ಲಿ ಪದ್ಮಪುರಾಣದಲ್ಲಿ ಈ ರೀತಿ ಉಲ್ಲೇಖಿತವಾಗಿದೆ.

"ಸ್ವಕೀಯಂ ಯದ್ ಭವೇತ್ತೇಜಃ ತಚ್ಚಭಾಗವತೇಧರಾತ್ ತಿರೋಧಾಯ ಪ್ರವಿಷ್ಟೋಽಯಂ ಶ್ರೀಮಬ್ಭಾಗವತಾರ್ಣವಮ್. ಅದ್ವೈತ, ದ್ವೈತ, ವಿಶಿಷ್ಟಾದ್ವೈತ, ನಿಂಬಾರ್ಕಮತ, ವಲ್ಲಭ ಮತ - ಹೀಗೆ ಎಲ್ಲ ಮತದ ಆಚಾರ್ಯರೂ ಈ ಪುರಾಣರತ್ನವನ್ನು ಪ್ರಮಾಣವಾಗಿ ಪುರಸ್ಕರಿಸಿ ಪರಮತತ್ತ್ವವನ್ನು ಪ್ರತಿಪಾದಿಸಿದ್ದಾರೆ. ಭಿನ್ನ ಭಿನ್ನ ಮತಸಂಪ್ರದಾಯಗಳಿಗೆ ಅನುಸಾರವಾದ ಹತ್ತಾರು ವ್ಯಾಖ್ಯಾನಗಳು ಸಂಸ್ಕೃತ ಭಾಷೆಯಲ್ಲಿ ರಚಿತವಾಗಿದೆ.

ಉದಾ :

1. ಭಾಗವತ ಭಾವಾರ್ಥ ದೀಪಿಕಾ - ಕ್ರಿ.ಶ. 14ನೇ ಶತಮಾನದಲ್ಲಿರಬಹುದಾದ ಶ್ರೀಧರಸ್ವಾಮಿ ವಿರಚಿತ ಅದ್ವೈತ ವ್ಯಾಖ್ಯಾನ. ಇದು ಲಭ್ಯವಾಗಿರುವ ವ್ಯಾಖ್ಯಾನಗಳಲ್ಲೆಲ್ಲಾ ಅತಿ ಪ್ರಾಚೀನವಾದುದು. ಶ್ರೀಧರಸ್ವಾಮಿಗಳು ಸ್ವತಃ ಇನ್ನೊಂದು ವ್ಯಾಖ್ಯಾನವನ್ನು ಉದಾಹರಿಸಿದ್ದಾರೆ. ಅದನ್ನು ಬರೆದವರು

ನೃಸಿಂಹೋಪಾಸಕರಾದ ಚಿತ್ಸುಖಾಚಾರ್ಯ. ಚಿತ್ಸುಖಾಚಾರ್ಯರು ವಿಷ್ಣುಪುರಾಣದ ಮೇಲೂ ಭಗವದ್ಗೀತೆಯ ವ್ಯಾಖ್ಯಾನವನ್ನು ಮಾಡಿದ್ದಾರೆ. ಭಾಗವತದ ಶೈಲಿ ಬಿಗಿಯಾದದ್ದು ಎಂಬುದಕ್ಕೆ "ವಿದ್ಯಾವತಾಂ ಭಾಗವತೇ ಪರೀಕ್ಷಾ" ಎಂಬ ನುಡಿಯೇ ಸಾಕ್ಷಿ. ವ್ಯಾಖ್ಯಾನದ ನೆರವಿಲ್ಲದೆ ಅರ್ಥಮಾಡಿಕೊಳ್ಳುವುದು ಕಠಿಣವೇ ಸರಿ. ಶ್ರೀಧರಸ್ವಾಮಿಗಳ ವ್ಯಾಖ್ಯಾನವು ಭಾಗವತದ ಕಗ್ಗಂಟುಗಳನ್ನು ಯಶಸ್ವಿಯಾಗಿ ಬಿಡಿಸಿದೆ.

2. ವೀರ ರಾಘವ ಭಾಗವತ ಚಂದ್ರಿಕಾ.
3. ವಿಜಯಧ್ವಜ ಕೃತ ಪದರತ್ನಾವಲೀ. ಆನಂದತೀರ್ಥರ – "ಭಾಗವತ ತಾತ್ಪರ್ಯ ನಿರ್ಣಯ" ಎಂಬ ವ್ಯಾಖ್ಯಾನವು ಅಸಂಪೂರ್ಣವಾಗಿದ್ದು, ಅದನ್ನು ಅವರ ಶಿಷ್ಯರಾದ ವಿಜಯಧ್ವಜ ಅವರು ಮುಂದುವರೆಸಿದರು.
4. ವಲ್ಲಭ ಸಂಪ್ರದಾಯದ ವಲ್ಲಭಾಚಾರ್ಯರ "ಸುಬೋಧಿನೀ".
5. ನಿಂಬಾರ್ಕ ಅಥವಾ ಹಂಸ ಸಂಪ್ರದಾಯ : ಸುಖದೇವಾಚಾರ್ಯ ಕೃತ ಸಿದ್ಧಾಂತ ಪ್ರದೀಪ.
6. ಚೈತನ್ಯ ಸಂಪ್ರದಾಯ ಅಥವಾ ಗೌಡೀಯ ವೈಷ್ಣವ ಸಂಪ್ರದಾಯ ಸನಾತನ ಗೋಸ್ವಾಮಿ ವಿರಚಿತ – ಬೃಹತ್ ವೈಷ್ಣವತೋಷಿಣೀ.
7. ಸಿದ್ಧಾಂತ ದೀಪಿಕಾ – ಶ್ರೀ ಶುಕದೇವ ಕೃತ ಭಾಗವತಮತವ್ಯಾಖ್ಯಾನ
8. ದೀಪಿನೀ – ರಾಧಾರಮಣಕೃತ
9. ಸಾರಾರ್ಥ ದರ್ಶಿನೀ – ಶ್ರೀ ವಿಶ್ವನಾಥ ಚಕ್ರವರ್ತಿಕೃತ
10. ಗೂಡಾರ್ಥ ದೀಪಿಕಾ – ಧನಪತಿಸೂರಿಕೃತ

ಭಕ್ತಿಸಂಪ್ರದಾಯದ ಕವಿಯಾದ ಶ್ರೀಹರಿಯ 5000 ಶ್ಲೋಕಗಳುಳ್ಳ ವ್ಯಾಖ್ಯಾನ – ಇದು ದಶಮಸ್ಕಂದದ ಪ್ರಥಮಾರ್ಥಕ್ಕೆ ಸಂಬಂಧಪಟ್ಟಿದೆ. ಹೀಗೆ 28ಕ್ಕೂ ಹೆಚ್ಚಿನ ವ್ಯಾಖ್ಯಾನಗಳನ್ನೊಳಗೊಂಡಿದೆ ಈ ಗ್ರಂಥರತ್ನ.

ಮೂಲ ಶ್ಲೋಕಗಳಿಲ್ಲದಿದ್ದರೆ ವೇದಾಂತಗ್ರಂಥದ ಪ್ರಾಮಾಣ್ಯವು ಕುಗ್ಗುತ್ತದೆ. ಶಾಸ್ತ್ರದ ವಿಷಯದಲ್ಲಿ ಮೂಲದ ಅವಶ್ಯಕತೆ ಇದ್ದೇ ಇರುತ್ತದೆ. ಭಾಗವತದಲ್ಲಿ ಭಕ್ತಿಗೆ ಪ್ರಧಾನ ಸ್ಥಾನವನ್ನು ನೀಡಿದ್ದಾರೆ.ಕರ್ಮಕಾಂಡಕ್ಕೆ ಯಥಾರ್ಥಸ್ಥಾನವುಂಟು. ಪರಮಗಮ್ಯವಾದ ಜ್ಞಾನಕಾಂಡವನ್ನು ಮನಮುಟ್ಟುವಂತೆ ವಿವರಿಸಿದ್ದಾರೆ.

ಗರುಡ ಪುರಾಣವು. ಈ ಪುರಾಣವನ್ನು

पुराणानां साररूपः साक्षात् भागवतोदितः

ಭಾಗವತವನ್ನು ಪುರಾಣವೆಂದೇ ನಿರ್ದೇಶಿಸುವುದು ವಾಡಿಕೆ. ಆದರೆ ಅದರ ಸ್ವರೂಪವೇನೂ ಪುರಾಣದ್ದಲ್ಲ. ಕಾವ್ಯವೆಂದರೂ ಒಪ್ಪೀತು. ರಸಿಕರೂ ಭಾವುಕರೂ ಇತರ ಪುರಾಣಗಳನ್ನು ಮೆಚ್ಚಿಕೊಳ್ಳುವುದು ಕಷ್ಟ. ಭಾಗವತವನ್ನು ಅವಶ್ಯ ಮೆಚ್ಚುವರು, ಪ್ರತಿ ಶ್ಲೋಕದಲ್ಲೂ ರಸವಿದೆ. ಇದು ದ್ರಾಕ್ಷ ಪಾಕವಲ್ಲ, ನಾರಿಕೇಳ ಪಾಕ. ಶ್ರಮಪಡದೆ ರುಚಿಸಲಾರದು. ಇತರ ಪುರಾಣಗಳಲ್ಲಿರುವಂತೆ ಇಲ್ಲಿನ ಶ್ಲೋಕಗಳು ಬಹುಮಟ್ಟಿಗೆ ಅನುಷ್ಟಪ್ ಶ್ಲೋಕಗಳಲ್ಲ.

ಸಪ್ತದಶ ಪುರಾಣಾನಿ ಕೃತ್ವಾ ಸತ್ಯವತೀ
ನಾಪ್ತವಾರ್ ಮನಸಾತೋಷಂ ಭಾರತೇನಾಪಿ ಭಾಮಿನಿ
ಚಕಾರ ಸಂಹಿತಾಮೇತಾಂ ಶ್ರೀಮದ್ಭಾಗವತೀಂಪರಾಂ (मात्स्य)

ಭಾಗವತಸಂಹಿತೆಯನ್ನು एकायन, एकायनश्रुति, सात्त्वतविधि, एकान्तिधर्म महोपनिषत् पाञ्चरात्र, नारायणीय भागवतशास्त्र ಮುಂತಾಗಿ ಕರೆದಿದ್ದಾರೆ.

ಭಾಗವತ ಸಿದ್ಧಾಂತ ನಿಂತಿರುವುದು ಭಕ್ತಿಯ ಮೇಲೆ. ಭಾಗವತ ಮಹಾತ್ಮೆಯು ಇದನ್ನು ಸ್ಪಷ್ಟಪಡಿಸುತ್ತದೆ.

अलं कलौ व्रत्तै स्तीर्थैयोगैः शास्त्रैरलं भुखैः
अलं गानकथालापैर्भक्तिरकैव मुक्तिदा

ಕೃತಯುಗದಲ್ಲಿ ತಪಸ್ಸು, ತ್ರೇತಾಯುಗದಲ್ಲಿ ಯಜ್ಞ, ದ್ವಾಪರಯುಗದಲ್ಲಿ ದಾನಗಳು ಇದ್ದಂತೆ ಕಲಿಯುಗದಲ್ಲಿ ಭಕ್ತಿ ವಿಶಿಷ್ಟವಾದುದು.

ಭಾಗವತ ರಚನೆಯ ಮುಖ್ಯ ಉದ್ದೇಶ ಭಕ್ತಿಯ ಉಪದೇಶ ಪ್ರಸಿದ್ಧಿಗೆ ಕಾರಣ. ಇನ್ನೊಂದು ಈ ಪುರಾಣದಲ್ಲಿ ಸ್ವಾರಸ್ಯವಾಗಿ, ಸುಂದರವಾಗಿ, ಸಮಗ್ರವಾಗಿ, ವಿಸ್ತೃತವಾಗಿ ಮೂಡಿಬಂದಿರುವ ಕೃಷ್ಣನ ಕಥೆ.

ದಶಮಸ್ಕಂಧದಲ್ಲಿ ತೊಂಬತ್ತು ಸರ್ಗಗಳನ್ನು ಪೂರ್ವಾರ್ಧ (1–49), ಉಳಿದ ಸರ್ಗಗಳು ಉತ್ತರಾರ್ಧ ಎಂಬೆರಡು ವಿಭಾಗಗಳಲ್ಲಿ ಅಳವಡಿಸಲಾಗಿದೆ. ಭೂಭಾರವನ್ನು ಇಳಿಸುವುದೇ ಕೃಷ್ಣಾವತಾರದ ಪ್ರಯೋಜನ.

ಭಾಗವತ ಪುರಾಣ ಕೃಷ್ಣಚರಿತ್ರೆಗೆ ಪ್ರಮುಖ ಆಕರವಾಗಿದೆ. ಕೃಷ್ಣಭಕ್ತಿಗಂತೂ ಅದರ ನೆರವು ಅಪಾರ. ಇವೆರಡೂ ಮುಖಗಳ ಪರಿಚಯ ಬಹಳ ಜನರಿಗಿದೆ. ಅದರೊಡನೆ ಇದು ತತ್ತ್ವಜಿಜ್ಞಾಸೆಗೂ ಎತ್ತಿದ್ದು ಎಂಬುದು "ಪ್ರೇಕ್ಷಾವತಾಂ ಭಾಗವತೇ ಪರೀಕ್ಷಾ" ಎಂಬ ಮಾತಿನಿಂದ ತಿಳಿಯುವುದು. ಭಾಗವತದ ಮೊದಲ ಶ್ಲೋಕವೇ ಬ್ರಹ್ಮಸೂತ್ರದ ಆರಂಭವನ್ನೊಳಗೊಂಡಿದೆ.

ಜನ್ಮಾದ್ಯಸ್ಯ ಯತೋಽನ್ವಯಾತ್ ಎಂದು ಆರಂಭವಾಗಿ 'ಸತ್ಯಂ ಪರಂ ಧೀಮಹಿ' ಎಂದು ಮುಗಿಯುವ ಈ ಶ್ಲೋಕವು ವೇದಾಂತಾರ್ಥ ಸಂಗ್ರಹವೇ.

ಭಾಗವತದ ಗೋಪಿಯೊಬ್ಬಳ ವಿರಹವೇದನೆಯು 'ಭ್ರಮರಗೀತ'ವಾಗಿ ಅಭಿವ್ಯಕ್ತಿ ತಳೆದದ್ದು ಭಾಗವತದ ಸೊಗಸಾದ ಇನ್ನೊಂದು ಸಂದರ್ಭ.

ದಶಮಸ್ಕಂದದ ಕೊನೆಯ ಸರ್ಗ ಕೃಷ್ಣನ "ಸರ್ವಕಥಾಸಂಗ್ರಹ"ವೇ ಆಗಿದೆ.

भगवति कृतचित्तो याति तत् क्षेमधाम

ಗರುಡ ಪುರಾಣ

ಹದಿನೆಂಟು ಪುರಾಣಗಳಲ್ಲಿ ಮೂರನೆಯ ಮುಖ್ಯ ಪುರಾಣವಿದು. ವಿಷ್ಣುವಿನ ಕೀರ್ತನೆ ಪ್ರಮುಖವಾಗಿದೆ. ಇಲ್ಲಿ ಆಚಾರಕಾಂಡ (ಕರ್ಮಕಾಂಡ), ಧರ್ಮಕಾಂಡ (ಪ್ರೇತಕಾಂಡ), ಬ್ರಹ್ಮಕಾಂಡ (ಮೋಕ್ಷಕಾಂಡ) ಎಂಬುದಾಗಿ ಕಾಂಡತ್ರಯಗಳಿವೆ. ಅಲ್ಲಿ 8800 ಶ್ಲೋಕಗಳಿವೆ. ಈ ಪುರಾಣದ ಮೊದಲನೆಯ ಭಾಗವು ವಿಷ್ಣು ಮತ್ತು ಗರುಡರ ಸಂವಾದರೂಪದಲ್ಲಿದೆ. ದ್ವಿತೀಯ ಭಾಗದಲ್ಲಿ ಮರಣೋತ್ತರ ಜೀವನದ ವರ್ಣನೆ, ಅಪರಕ್ರಿಯೆ, ಪುನರ್ಜನ್ಮದ ವ್ಯವಸ್ಥೆಗಳು, ಇವುಗಳನ್ನು ವರ್ಣಿಸಲಾಗಿದೆ. ಅಂತ್ಯೇಷ್ಟಿಯಲ್ಲಿ ಇದನ್ನು ಓದುವ ಪರಿಪಾಠವಿದೆ. ಧರ್ಮಕಾಂಡದಲ್ಲಿ 49 ಅಧ್ಯಾಯಗಳು, ಬ್ರಹ್ಮಕಾಂಡದಲ್ಲಿ 29 ಅಧ್ಯಾಯಗಳು, ಆಚಾರಕಾಂಡದಲ್ಲಿ 240 ಅಧ್ಯಾಯಗಳಿವೆ.

ಯಾವ ತಪ್ಪಿಗೆ ಯಾವ ಶಿಕ್ಷೆ ಮತ್ತು ಯಾವ ನರಕ ಎಂಬುದಾಗಿ ನಿರೂಪಿತವಾಗಿದೆ. ಉದಾಹರಣೆಗೆ ಆಹಾರಕ್ಕಾಗಿ ಪರಪ್ರಾಣಹರಣ ಮಾಡಿದರೆ ಕುಂಭಿಪಾಕವೆಂಬ ನರಕ. ಅಲ್ಲಿ ಯಮಕಿಂಕರರು ಬಿಸಿ ಎಣ್ಣೆಯ ಕೆರೆಯಲ್ಲಿ ಹಾಕುವರು.

ಹದಿನಾಲ್ಕು ಲೋಕಗಳ ವಿಚಾರದಲ್ಲಿ ಹೀಗೆ ಹೇಳಲಾಗಿದೆ.

पादा धस्तात्तलं ज़ेयं पादोर्ध्वं वितलं तथा ।
जानुनोः सुतलं विद्धि सक्थिदेशे महातलम् ॥
तलातलं सक्थिमूले गुह्यदेशे रसातलम् ।
पातालं कटिसंस्थं च सप्तलोकाः प्रकीर्तिताः ॥

भूर्लोकं नाभिमहथे तु भुवर्लोकं तदूर्ध्वके ।
स्वर्लोकं हृदये विद्यात्कण्ठदेशे महस्तथा ॥
जनलोकं वक्त्रदेशे तपोलोकं ललाटके ।
सत्यलोकं ब्रह्मरन्ध्रं भुवनानि चतुर्दश ॥

ಶ್ರಾದ್ಧದಿಂದ ಆಗುವ ಲಾಭಗಳ ಬಗ್ಗೆ ಹೀಗೆ ತಿಳಿಸಿದೆ.

आयुः पुत्रान् यशः स्वर्गं
कीर्तिं पुष्टिं बलं श्रियम् ।
पशून् सौख्यं धनं धान्य
प्राप्नुयात् पितृपूजनात् ।

ಕರ್ಮದ ಫಲ :

अवश्यमेव भोक्तव्यं कृतं कर्म शुभाशुभम् ।
नाभुक्तां क्षीयते कर्म कल्पकोटिशतौरपि ।

ಹಿತೋಪದೇಶದ ಕಥೆಗಳಲ್ಲಿ ಗರುಡ ಪುರಾಣದ ಶ್ಲೋಕಗಳನ್ನು ನೋಡಬಹುದು.

दुष्टाभार्या शठं मित्रंः भृत्यश्चोत्तरदायक
ससर्पे चगृहे वासः भृत्युरेवनसंशयः
ग.पु. 2-206-25

ವಿಷ್ಣು ಪುರಾಣ

ನಿಸ್ತಾರಾಯ ತು ಲೋಕಾನಾಂ ಸ್ವಯಂ ನಾರಾಯಣಃ ಪ್ರಭುಃ ।
ವ್ಯಾಸರೂಪೇಣ ಕೃತವಾನ್ ಪುರಾಣಾನಿ ಮಹೀತರೇ ॥

ಎಂಬ ಪದ್ಮಪುರಾಣದ ಶ್ಲೋಕದಂತೆ ಸತ್ಯವತೀ ಸುತಃ ಅಷ್ಟಾದಶ ಪುರಾಣಾನಾಂ ಕರ್ತಾ ಎಂದು ಸಂಪ್ರದಾಯ.

ವಿಷ್ಣು ಪುರಾಣವು ಪುರಾಣದ ಪಂಚಲಕ್ಷಣಗಳಿಂದ ಸಮನ್ವಿತವಾಗಿದೆ. ಇದರಲ್ಲಿ ಅನ್ಯ ಪುರಾಣಗಳಲ್ಲಿ ಸಾಮಾನ್ಯವಾಗಿ ಬರುವಂತೆ ವ್ರತಗಳ ವಿಷಯವಿಲ್ಲ. ವಿಧಿಸಿರುವ ಅನುಷ್ಠಾನಗಳು ವೇದಾನುಸಾರಿಯಾಗಿ ಧರ್ಮಸೂತ್ರಗಳಿಗೆ ಅನುಗುಣವಾಗಿ ಯಾವುದೊಂದು ಧಾರ್ಮಿಕ ವಿಚಾರವು ಅತಿ ದೀರ್ಘವಾಗಿ ಉಕ್ತವಾಗಿಲ್ಲ. ಈ ಕಾರಣದಿಂದ ಇದು ಪ್ರಾಮಾಣಿಕವಾಗಿದ್ದು ಹೆಚ್ಚಿನ ಪ್ರಕ್ಷೇಪಗಳಿಗೆ ಅವಕಾಶವನ್ನಿತ್ತಿಲ್ಲವೆನ್ನಬಹುದು.

ವಿಷ್ಣುಪುರಾಣದ ಭಾಷಾಶೈಲಿ ಲಲಿತವಾಗಿದೆ. ಅಲ್ಲಲ್ಲಿ ಬರುವ ಗದ್ಯವಾಕ್ಯಗಳು ರಮಣೀಯವಾಗಿದೆ. ಆರ್ಷಪ್ರಯೋಗಗಳು ಬಹಳ ಪರಿಮಿತವಾಗಿರುವುದು ಈ ಪುರಾಣದ ಮತ್ತೊಂದು ವೈಶಿಷ್ಟ್ಯ. ಪೌರಾಣಿಕವಾದ ಯಾವ ಆಖ್ಯಾನವನ್ನೂ ಅತಿಯಾಗಿ ಬೆಳೆಸಿಲ್ಲ. ಧ್ರುವ ಚರಿತ್ರೆ ಮತ್ತು ಪ್ರಹ್ಲಾದ ಚರಿತ್ರಗಳು ಉತ್ತಮ ಕಾವ್ಯದಂತೆ ರಮಣೀಯವಾಗಿದೆ.

ಪಂಚಮಾಂಶದಲ್ಲಿ ಬರುವ ಶ್ರೀ ಕೃಷ್ಣಚರಿತ್ರೆಯು ಒಂದು ಉತ್ತಮ ಕಾವ್ಯವೇ ಸರಿ.

ಪರಾಶರ ಮುನಿಗಳು ತಮ್ಮ ಶಿಷ್ಯರಾದ ಮೈತ್ರೇಯವರಿಗೆ ಈ ಪುರಾಣವನ್ನು ಹೇಳಿದ್ದಾರೆ. ಇದರಲ್ಲಿ ಆರು ಅಂಶಗಳಿದ್ದು, ಒಂದೊಂದು ಅಂಶವೂ ಹಲವಾರು ಅಧ್ಯಾಯಗಳಿಂದ ಕೂಡಿದೆ. ಇದರಲ್ಲಿರುವ ಶ್ಲೋಕಗಳ ಸಂಖ್ಯೆ 20,000 ಆಗಬಹುದು.

ಈ ಪುರಾಣಕ್ಕೆ ಶ್ರೀಧರಸ್ವಾಮಿಗಳು 'ಆತ್ಮಪ್ರಕಾಶ' ಎಂಬ ವ್ಯಾಖ್ಯಾನವನ್ನು ಬರೆದಿದ್ದಾರೆ. ಇವರು ಶ್ರೀಮದ್ಭಾಗವತಕ್ಕೂ ವ್ಯಾಖ್ಯಾನವನ್ನು ಬರೆದಿದ್ದಾರೆ.

ವಿಷ್ಣುಪುರಾಣದಲ್ಲಿ ಪ್ರತಿಪಾದಿತವಾಗಿರುವ ವಿಷಯಗಳು :

ಪ್ರಥಮಾಂಶ: ಇಪ್ಪತ್ತನಾಲ್ಕು ತತ್ತ್ವಗಳ ವಿಚಾರಪೂರ್ವಕವಾಗಿ ಜಗತ್ತಿನ ಉತ್ಪತ್ತಿ; ಪ್ರಜಾಪತಿಗಳು, ದೇವತೆಗಳು, ಪಿತೃಗಣಗಳು

ಇತ್ಯಾದಿಗಳ ಸೃಷ್ಟಿಕ್ರಮ, ಧ್ರುವ ಚರಿತ್ರೆ, ಪ್ರಹ್ಲಾದ ಚರಿತ್ರೆ, ಮರುದ್ ಗಣಗಳ ಉತ್ಪತ್ತಿ, ವಿಷ್ಣುವಿನ ಮಹಿಮೆ.

ದ್ವಿತೀಯಾಂಶ : ಭೂಗೋಳದ ವಿವರಣೆ, ನವಖಂಡಗಳ ವಿಭಾಗ; ಅಧೋಲೋಕ ಮತ್ತು ಊರ್ಧ್ವಲೋಕಗಳು; ಜ್ಯೋತಿಶ್ಚಕ್ರ ಮತ್ತು ನವಗ್ರಹಗಳ ವರ್ಣನೆ; ಜಡಭರತ, ಋಭು, ನಿದಾಘರ ಆಖ್ಯಾನ.

ತೃತೀಯಾಂಶ : ಮನುಪುತ್ರರ ವರ್ಣನೆ, ಚತುರ್ಯುಗಾನುಸಾರ ಭಿನ್ನ ಭಿನ್ನ ವ್ಯಾಸರು; ಚತುರ್ವೇದಗಳ ವಿಭಾಗ; ಚಾತುರ್ವರ್ಣ್ಯ ಧರ್ಮ; ಬ್ರಹ್ಮಚರ್ಯ ಮತ್ತು ಗಾರ್ಹಸ್ಥ್ಯದ ಆಚಾರಗಳು; ವಿಸ್ತೃತವಾದ ಶ್ರಾದ್ಧವಿಧಿ.

ಚತುರ್ಥಾಂಶ : ವೈವಸ್ವತ ಮನುವಿನ ವಂಶ; ಇಕ್ಷ್ವಾಕುವಂಶ; ಶ್ರೀರಾಮನ ಸಂಕ್ಷಿಪ್ತ ಕಥೆ, ಸೋಮ ವಂಶ, ಯದುವಂಶ ವರ್ಣನೆ, ಕುರುವಂಶ, ಭವಿಷ್ಯತ್ತಿನಲ್ಲಿ ಆಳುವ ರಾಜರು ಮಗಧ ವಂಶ; ಕಲಿಯುಗದ ರಾಜರು ಮತ್ತು ಕಲಿಧರ್ಮ.

ಪಂಚಮಾಂಶ : ವಿಸ್ತಾರವಾಗಿ ಶ್ರೀಕೃಷ್ಣಚರಿತ್ರೆ; ಯಾದವರ ಅಂತ್ಯ ಪರೀಕ್ಷಿತರಾಜನ ಪಟ್ಟಾಭಿಷೇಕ; ಪಾಂಡವರ ಸ್ವರ್ಗಾರೋಹಣ.

ಷಷ್ಠಾಂಶ : ಕಲಿಧರ್ಮ ನಿರೂಪಣೆ; ಶೂದ್ರ ಮತ್ತು ಸ್ತ್ರೀಯರ ಮಹತ್ತ್ವ; ಕಾಲವಿಚಾರ, ನೈಮಿತ್ತಿಕ ಪ್ರಳಯ; ಪ್ರಾಕೃತ ಪ್ರಳಯ; ಭಗವಂತನ ಪಾರಮಾರ್ಥಿಕ ಸ್ವರೂಪ; ಬ್ರಹ್ಮಯೋಗ; ಶಿಷ್ಯ ಪರಂಪರೆ; ಉಪಸಂಹಾರ.

ಇದು ವೇದಸಂಮತವೆಂದು ಪರಾಶರರೇ ಹೇಳಿದ್ದಾರೆ.

एतत्ते यन्मयाख्यातं पुराणं वेदसम्मतम् (6-8-12)

ರಘುವನ್ನು ವರ್ಣಿಸುವಾಗ "राजा प्रकृतिरञ्जनात्" (4–12) ಎಂದು ಕಾಳಿದಾಸನ ಮಾತಿಗೆ ಸಾಮ್ಯವಾದ ವಾಕ್ಯ राजाभूज्जनरञ्जनात् (1–13–93).

ವಿಷ್ಣುಪುರಾಣದಲ್ಲಿ ರಾಷ್ಟ್ರಭಕ್ತಿ ಪ್ರಚೋದಕವಾದ ಶ್ಲೋಕಗಳು ಗಮನಾರ್ಹವಾಗಿವೆ. ಭರತಖಂಡ ಕರ್ಮಭೂಮಿ.

अत्र जन्मसहस्राणां सहस्रैरपि सत्तम ।
कदाचिल्लभते जन्तुमानुष्यं पुण्यसञ्चयात् ॥
गायन्ति देवाः किल गीतकानि
धन्यास्तु ते भारतभूमिभागे ।
स्वर्गापवर्गास्पद मार्गभूते
भवन्ति भूयः पुरूषाः सुरत्वात् ॥ (2-3-23,24)

ಅಧ್ಯಾತ್ಮ

ಇಲ್ಲಿ ಉಕ್ತವಾದದ್ದು ವೇದಾಂತ ಅಥವಾ ಔಪನಿಷದವಾಗಬಹುದೇ ಹೊರತು ಇನ್ನೊಂದಾಗಲು ಶಕ್ಯವಿಲ್ಲ. ಅನ್ಯದರ್ಶನಗಳ ನಿಂದೆ ಇಲ್ಲಿಲ್ಲ.

ಈ ಪುರಾಣದಲ್ಲಿ ವಿಷ್ಣುವನ್ನು ವರ್ಣಿಸಲಾಗಿದೆ. ವಿಷ್ಣುಮೂರ್ತಿ ಸತ್ತ್ವಗುಣ ಪ್ರಧಾನವಾದ್ದರಿಂದ ವಿಷ್ಣುರೂಪಕ್ಕೆ ಪ್ರಾಶಸ್ತ್ಯವನ್ನಿತ್ತು ವಿಶೇಷವಾಗಿ ಸ್ತುತಿಸಲಾಗಿದೆ.

ವಾಕ್ಕುಗಳಿಗೆ ಅಗೋಚರವಾಗಿಯೂ, ಅನಭವೈಕಗಮ್ಯವಾಗಿರುವ ಜ್ಞಾನವೇ ಬ್ರಹ್ಮ –

प्रत्यस्तमित भेदं यत् सत्तामात्रमगोचरम् ।
वचसामात्मसंवेद्यं तज्ज्ञानं ब्रह्मसंसितम् (6-7-53)

ಬ್ರಹ್ಮ, ವಿಷ್ಣು ಮತ್ತು ಶಿವ - ಎಂಬುವರು ಒಬ್ಬನೇ ಪರಮಾತ್ಮನ ವಿಭಿನ್ನ ರೂಪಗಳು. ಪರಮಾತ್ಮನ ಸತ್ವಗುಣವನ್ನಾಶ್ರಯಿಸಿ ವಿಷ್ಣುವೆನಿಸುತ್ತಾನೆ, ರಜೋಗುಣವನ್ನಾಶ್ರಯಿಸಿ ಬ್ರಹ್ಮನೆಂದೂ, ತಮೋಗುಣವನ್ನಾಶ್ರಯಿಸಿ ಶಿವನೆಂದೂ ಆರಾಧಿತನಾಗುತ್ತಾನೆ. ಗುಣೋಪಾಧಿಯಿಂದ ಹೆಸರು ಬೇರೆ ಬೇರೆಯಾಗಿವೆಯೇ ಹೊರತು ತಾತ್ವಿಕವಾಗಿ ವಸ್ತುವಿನಲ್ಲಿ ಯಾವ ಭೇದವೂ ಇಲ್ಲ. ಸೃಷ್ಟಿ, ಸ್ಥಿತಿ, ಲಯಗಳು ಒಬ್ಬನೇ ಈಶ್ವರನಿಂದ ತ್ರಿಮೂರ್ತಿರೂಪವನ್ನಾಶ್ರಯಿಸಿ ನಡೆಯುತ್ತವೆ. ಇದನ್ನು ವಿಷ್ಣುಪುರಾಣಗಳ ಶ್ಲೋಕಗಳಲ್ಲಿ ನಾವು ಕಾಣಬಹುದು.

प्रसीद सर्व सर्वात्मन् क्षराक्षरमयेश्वर ।
ब्रह्मविष्णुशिवाख्याभिः कल्पनाभिरूदीरित:॥ (5-18-51)

सर्गस्थिति विनाशानां कर्ता कर्तृपतिर्भवान् ।
ब्रह्मविष्णुशिवाख्याभि:आत्ममूर्तिभिरीश्वर ॥ (5-30-10)

ಸಾಧನ ಮಾರ್ಗ

ವಿಷ್ಣುಪುರಾಣವು ಶಾಸ್ತ್ರೋಕ್ತ ಕರ್ಮವನ್ನು ಭಗವದ್‌ಭಕ್ತಿಯನ್ನು ಮೋಕ್ಷಸಾಧನ ಮಾರ್ಗಗಳೆಂದು ಅಂಗೀಕರಿಸಿದೆ. ಕರ್ಮಾನುಷ್ಠಾನದಿಂದ ಅಂತಃಕರಣವು ಶುದ್ಧವಾಗುತ್ತದೆ. ಆ ಅಂತಃಕರಣದಲ್ಲಿ ಭಗವಂತನು ನೆಲೆಸುತ್ತಾನೆ. ಆಗ ಶುದ್ಧಜ್ಞಾನವುಂಟಾಗಿ "विष्णु" ಎಂಬ ಪರಮಪದವು ಲಭಿಸುತ್ತದೆ (1–6–12, 13).

ಭಕ್ತಿಯ ಸ್ವರೂಪವನ್ನು ತೋರಿಸುವ ಈ ಶ್ಲೋಕ ಮನೋಹರವಾಗಿದೆ.

या प्रीतिरविवेकानां विषयेष्वनपायिनी ।
त्वामनुस्मरतः सा मे हृदयान्नापसर्पतु॥ (1-20-19)

ಯಾವ ಯಾವ ಜನ್ಮ ಬಂದರೂ ನನಗೆ ನಿನ್ನಲ್ಲಿ ಅವ್ಯಭಿಚಾರಿಣೀ ಭಕ್ತಿ ಇರಲೆಂದು ಪ್ರಹ್ಲಾದನು ವಿಷ್ಣುವನ್ನು ಪ್ರಾರ್ಥಿಸಿಕೊಳ್ಳುತ್ತಾ ಈ ಮಾತನ್ನು ಹೇಳಿದ್ದಾನೆ.

ವಿವೇಕಹೀನರಿಗೆ ವಿಷಯಸುಖಗಳನ್ನು ಕೊಡುವ ವಸ್ತುಗಳಲ್ಲಿ ಅವಿಚ್ಛಿನ್ನವಾದ ಯಾವ ಪ್ರೀತಿ ಇರುತ್ತದೋ, ಅಂತಹ ಪ್ರೀತಿಯು ಸದಾ ನಿನ್ನನ್ನು ಧ್ಯಾನಿಸುತ್ತಿರುವ ನನ್ನ ಹೃದಯದಿಂದ ಯಾವಾಗಲೂ ಚಲಿಸದಿರಲಿ ಎಂದು ಪ್ರಾರ್ಥಿಸುತ್ತಾನೆ. **मुक्तिस्तस्य करे स्थिता ।**

ನಾರದೀಯ ಪುರಾಣ

ಈ ಪುರಾಣದಲ್ಲಿ ಹಲವಾರು ಪವಿತ್ರ ಸ್ಥಾನಗಳ ವರ್ಣನೆ ಇದೆ. ಇದರಲ್ಲಿ ನಾರದ ಮತ್ತು ಸನತ್ಕುಮಾರರ ಸಂವಾದ ಇದೆ. ಇದರಲ್ಲಿ 125 ಅಧ್ಯಾಯಗಳಿವೆ. ಇದರಲ್ಲಿ ಹಲವಾರು ಕಥೆಗಳಿವೆ. ಅದರಲ್ಲಿ ಮುಖ್ಯವಾದುದು ಮಾರ್ಕಂಡೇಯನ ಕಥೆ. ವಿಷ್ಣು ಭಕ್ತನಾದ ಅವನು ಪುರಾಣಕರ್ತನೂ ಹೌದು. ಆದರೆ ನಾರದ ಪುರಾಣದಲ್ಲಿ ಮಾರ್ಕಂಡೇಯನು ಶಿವಭಕ್ತನೆಂದೂ, ಆದ್ದರಿಂದಲೇ ಮೃತ್ಯುಮುಕ್ತನೂ ಆದನು ಎಂಬುದಾಗಿ ಹೇಳಲ್ಪಟ್ಟಿದೆ.

ಅಕಾಲ ಮೃತ್ಯುಹರಣಂ ಸರ್ವ ವ್ಯಾಧಿ ನಿವಾರಣಂ
ಸರ್ವ ಪಾಪಕ್ಷಯಕರಂ ವಿಷ್ಣುಪಾದೋದಕಂ ಶುಭಂ

ಎಂಬುದಾಗಿ ವಿಷ್ಣುವಿನ ಮಹಿಮೆಯನ್ನು ಕುರಿತು ಈ ಪುರಾಣದಲ್ಲಿ ಕೊಂಡಾಡಲಾಗಿದೆ.

ರಾಜಾ ರುಕ್ಮಾಂಗದನ ಕಥೆ ನಿರೂಪಿತವಾಗಿದೆ. ವಿಷ್ಣುಭಕ್ತನಾದ ರುಕ್ಮಾಂಗದ ಏಕಾದಶೀ ವ್ರತಾಚರಣೆಯಿಂದ ವಿಷ್ಣುವಿನ ಅನುಗ್ರಹಕ್ಕೆ ಪಾತ್ರನಾಗುತ್ತಾನೆ.

ರುಕ್ಮಾಂಗದ ಒಮ್ಮೆ ದುರದೃಷ್ಟವಶಾತ್ ಮೋಹಿನಿ ಎಂಬ ಸುಂದರಿಯಿಂದ ಆಕರ್ಷಿತನಾಗುತ್ತಾನೆ. ಅವಳು ಇಷ್ಟಬಂದಂತೆ ಕಾರ್ಯವನ್ನು ಮಾಡಲು ಅನುಮತಿ ನೀಡುವನು.

ಒಮ್ಮೆ ಏಕಾದಶಿಯಂದು ರುಕ್ಮಾಂಗದ ಉಪವಾಸ ವ್ರತವನ್ನು ಮಾಡುತ್ತಿರುವಾಗ, ಮೋಹಿನಿ ಅವನಿಗೆ ಹೇಳುವಳು, "ನೀನು ಏಕಾದಶೀ

ವ್ರತವನ್ನು ನಿಲ್ಲಿಸು ಅಥವಾ ಧರ್ಮಾಂಗದನನ್ನು (ಹಿರಿಯರಾಣಿ ಸಂಧ್ಯಾವರಿಯ ಪುತ್ರ) ಕೊಲ್ಲು" ಎಂದು.

ರುಕ್ಮಾಂಗದನಿಗೆ ಒಂದನೆಯದನ್ನು ಮಾಡಲು ಅಂದರೆ ಏಕಾದಶೀ ವ್ರತವನ್ನು ಬಿಡಲು ಮನಸ್ಸಿಲ್ಲ, ಪುತ್ರವಧೆಗೂ ಹಿಂಜರಿದ.

ಯಾವಾಗ ಮಗನೇ ಸ್ವಯಂ ಬಲಿಗೆ ಸಿದ್ಧನಾದನೋ ಆಗ ವಿಷ್ಣು ಅಲ್ಲಿ ಬಂದು ಅವನ ಕುಟುಂಬವನ್ನು ವೈಕುಂಠಕ್ಕೆ ಕರೆದೊಯ್ದನು.

ಮೋಹಿನಿಯನ್ನು ಬ್ರಹ್ಮನೆ ರುಕ್ಮಾಂಗದನ ಸಮೀಪ ಕಳುಹಿಸಿದ್ದ. ರುಕ್ಮಾಂಗದನ ವಿಷ್ಣುಭಕ್ತಿಯನ್ನು ಪರೀಕ್ಷಿಸಿಸಲು. ಯಾವ ಏಕಾದಶಿಯಂದು ಇದು ಸಂಭವಿಸಿತೋ ಅದನ್ನು ಇಂದೂ ವೈಕುಂಠ ಏಕಾದಶಿ ಎಂದು, ಲೋಕದಲ್ಲಿ ಮಾರ್ಗಶಿರ ಮಾಸದ ಶುಕ್ಲಪಕ್ಷದ ಏಕಾದಶಿಯಂದು ಜನರು ಆಚರಿಸುತ್ತಾ ಬಂದಿರುವರು.

ಹದಿನೆಂಟು ಪುರಾಣಗಳ ವಿಷಯಾನುಕ್ರಮಣಿಕೆ ಈ ಪುರಾಣದಲ್ಲಿ ಲಭ್ಯವಿದೆ. ಇದರಿಂದ 18 ಪುರಾಣಗಳ ಸಂಕ್ಷಿಪ್ತ ಪರಿಚಯವಾಗುವುದು.

ಕಾರ್ತಿಕ ಮಹಾತ್ಮೆ, ಪಾರ್ಥಿವಲಿಂಗ ಮಹಾತ್ಮೆ, ದತ್ತಾತ್ರೇಯ ಸ್ತೋತ್ರ, ಸಂಕಟ ಗಣಪತಿ ಸ್ತೋತ್ರ, ಶ್ರೀಕೃಷ್ಣ ಮಹಾತ್ಮೆ, ಯಾದವಗಿರಿ ಮಹಾತ್ಮೆ, ಮೃಗವ್ಯಾಧ ಕಥೆ ಮುಂತಾದವು ಇಲ್ಲಿ ವರ್ಣಿತವಾಗಿವೆ.

ಇದಲ್ಲದೆ ವೇದಾಂಗಗಳ ನಿರೂಪಣೆಯು ಇಲ್ಲಿದೆ.

ಪುನರ್ವಕ್ಷ್ಯಾಮಿ ಮಾಹಾತ್ಮ್ಯಂ ದೇವದೇವಸ್ಯ ಚಕ್ರಿಣಃ
ಪಠತಾಂ ಶೃಣ್ವತಾಂ ಸದ್ಯಃ ಪಾಪರಾಶಿಃ ಪ್ರಣಶ್ಯತಿ ॥

पूर्वार्ण ಅಧ್ಯಾಯ 35 - 1

ಈ ಶ್ಲೋಕಗಳಿಂದ ಪುರಾಣಶ್ರವಣದ ಫಲವನ್ನು ಅರಿಯಬಹುದು.

ಪುರಾಣಶ್ರವಣಂ ಚೈವ ಪುರಾಣ ಪಠನಂ ತಥಾ ।
ವೇದಾಂತ ಪಠನಂ ಚೈವ ಪ್ರತ್ಯಹಂಕುರುಶಕ್ತಿತಃ ॥

– ಪೂರ್ವಾರ್ಧ ಅಧ್ಯಾಯ 35–55

ನ ಕಾರ್ತಿಕ ಸಮೋ ಮಾಸೋ ನ ಕೃತೇನ ಸಮಂ ಯುಗಂ ।
ನ ಭೂಮ್ಯಾ ಸದೃಶಂ ದಾನಂ ನ ಸುಖಂ ಭಾರ್ಯಯಾಸಮಂ ॥

ನ ಕೃಷ್ಯಾ ತು ಸಮಂ ವಿತ್ತಂ ನ ಲಾಭಃ ಸುರಭೀಸಮಃ ।
ನ ತಪೋಽನಶನಾದನ್ಯ ನ್ಯ ಸಮೇನ ಸಮಂಶಿವಮ್ ॥ (22–21)

ಹೀಗೆ ಪುರಾಣಗಳಲ್ಲಿ ಕೇವಲ ಕಥೆಗಳು ಮಾತ್ರವಲ್ಲ, ನಿತ್ಯ ವ್ಯವಹಾರಗಳ ವಿಚಾರವಿದೆ. ಭಾರತೀಯ ಪರಂಪರೆಗೆ ಇವು ಆದರ್ಶಪ್ರಾಯವಾಗಿವೆ.

ವರಾಹ ಪುರಾಣ

ಹದಿನೆಂಟು ಪುರಾಣಗಳಲ್ಲಿ ಇದು 12ನೆಯದು. ಇದೊಂದು ವೈಷ್ಣವ ಪುರಾಣ. ವಿಷ್ಣುವಿನ ಮೂರನೆಯ ಅವತಾರವಾದ ವರಾಹವು ಭೂದೇವಿಗೆ ತಿಳಿಸಿದ ವಿಚಾರ ಇದರಲ್ಲಿದೆ. ಇದರಲ್ಲಿ 218 ಅಧ್ಯಾಯಗಳಿವೆ. 17,000 ಶ್ಲೋಕಗಳಿವೆ. ಆರು ಅಧ್ಯಾಯಗಳು ಗದ್ಯರೂಪದಲ್ಲಿದೆ.

ಇದರಲ್ಲಿ ಹಲವಾರು ಕಥೆಗಳು ಇವೆ. ಹಲವಾರು ವ್ರತಗಳ ದೀರ್ಘ ನಿರೂಪಣೆ ಇದೆ. ತೀರ್ಥಗಳ ವರ್ಣನೆಯಿದೆ. ಧರ್ಮಶಾಸ್ತ್ರದಲ್ಲಿ ತಿಳಿಸಿರುವ ಶ್ರಾದ್ಧ, ಪ್ರಾಯಶ್ಚಿತ್ತ, ದಾನ, ಮೂರ್ತಿ ಮತ್ತು ಅದರ ಉಪಾಸನೆ, ನರಕ ಇತ್ಯಾದಿಗಳ ವರ್ಣನೆಯಿದೆ.

ಧರ್ಮಶಾಸ್ತ್ರದಲ್ಲಿ ಈ ಪುರಾಣದಿಂದ ಹಲವಾರು ಶ್ಲೋಕಗಳು ಉದ್ಧೃತವಾಗಿವೆ.

ಹಿರಣ್ಯಾಕ್ಷನ ನಾಶಕ್ಕಾಗಿ ವರಾಹಾವತಾರವನ್ನೆತ್ತುತ್ತಾನೆ ಶ್ರೀ ವಿಷ್ಣು.

ನಾರದ ಪುರಾಣದ 103ನೆ ಅಧ್ಯಾಯದಲ್ಲಿ ವರಾಹಪುರಾಣದ ಲಕ್ಷಣವು ಈ ರೀತಿಯಾಗಿ ಹೇಳಲ್ಪಟ್ಟಿದೆ. ಇದು ಎರಡು ಭಾಗಗಳಿಂದ ಕೂಡಿದ ಪುರಾಣ.

श्रृण्डवत्स । प्रवक्ष्यामि वाराहं वै पुराणकम् ।
भागद्ययुतं शश्वद्विष्णुभाहात्म्यसूचकम् ॥

महावराहस्य पुनर्माहात्म्यमधिकृत्य च ।
विष्णुनाभिहितं क्षौण्यै तद्वाराहमिहोच्यतें ॥
मानवस्य प्रसङ्गेन कल्पस्य मुनिसत्तमा: ।
चतुर्विंज्ञासहस्राणि तत्पुराणमिहोच्यते ॥

ಮಥುರಾ ಮಹಾತ್ಮೆ ಅವುಗಳಲ್ಲಿ ಒಂದು. ನಚಿಕೇತ ಉಪಾಖ್ಯಾನ, ದ್ವಾದಶೀ ವ್ರತಾ, ಗೋದಾನ ಶಾಲಿಗ್ರಾಮ ಪೂಜಾ, ಯಮ–ನಚಿಕೇತ ಸಂವಾದ ರೂಪದ ಕಥೆ ಇಲ್ಲಿದೆ. ಸ್ವರ್ಗ–ನರಕಗಳ ನಿರೂಪಣೆಯೂ ಇದೆ. ಕಠೋಪನಿಷತ್ತಿನ ಕಥೆಯ ಛಾಯೆಯನ್ನು ಇಲ್ಲಿ ಕಾಣಬಹುದು.

ದಾನಗಳಲ್ಲಿ ತಿಲಧೇನುದಾನ, ಜಲಧೇನುದಾನ, ರಸಧೇನುದಾನ, ಗುಡಧೇನುದಾನ, ಶರ್ಕರಾಧೇನುದಾನಗಳು ನಿರೂಪಿತವಾಗಿವೆ.

ಭೂಮಿದೇವಿಯ ಬಾಯಲ್ಲಿ ಬರುವ ಈ ಶ್ಲೋಕ ಭಗವದ್ಭಕ್ತಿಗೆ ಉದಾಹರಣೆ.

अहं शिष्या च दासीच भक्तावा त्वयि माधव ।

ಈ ಪ್ರಕರಣದಿಂದ ತಿಳಿಯುವ ಇನ್ನೊಂದು ಅಂಶ ಸನತ್‌ಕುಮಾರ ಮುಂತಾದ ಮುನಿಶ್ರೇಷ್ಠರಿಗೆ ದ್ವಾರಪಾಲಕರಾದ ಜಯ–ವಿಜಯರಿಂದ ಉಂಟಾದ ಅಪಚಾರ. ಭಗವಂತ ತನ್ನ ದಾಸರಿಂದ ಉಂಟಾದ ಅಪಚಾರವನ್ನು ಸಹಿಸುವುದಿಲ್ಲ, ತನ್ನ ಭಕ್ತರ ರಕ್ಷಣೆ ಮುಖ್ಯ ಎಂದು ತಿಳಿಯುವುದು.

ಪದ್ಮ ಪುರಾಣ

ಈ ಪುರಾಣವು ವೈಷ್ಣವ ಪುರಾಣಗಳಲ್ಲಿ ಒಂದು. ಮಹಾಪುರಾಣಗಳಲ್ಲಿ ಎರಡನೆಯದು. ಇದರಲ್ಲಿ 55,000 ಶ್ಲೋಕಗಳು, 690 ಅಧ್ಯಾಯಗಳು, 6 ಕಾಂಡಗಳು ಇವೆ. ಇದರ ಸಂಕ್ಷಿಪ್ತ ವಿವರಣೆ – ಇದಕ್ಕೆ ಗೀತಾಮಹಾತ್ಮ್ಯೆ ಎಂದೂ ಕರೆಯುತ್ತಾರೆ.

1) **ಆದಿಕಾಂಡ / ಸೃಷ್ಟಿಕಾಂಡ** – ಈ ಕಾಂಡಕ್ಕೆ 'ಸ್ವರ್ಗಕಾಂಡ'ವೆಂದೂ ಕರೆಯುತ್ತಾರೆ. ಇದರಲ್ಲಿ ಪ್ರಾಚೀನ ಭಾರತದ ವರ್ಣನೆ ಇದೆ. ಹಲವಾರು ತೀರ್ಥಸ್ಥಾನಗಳ ವರ್ಣನೆಗಳು ಇವೆ. ಪ್ರಯಾಗದ ವರ್ಣನೆ ಇವುಗಳಲ್ಲಿ ಪ್ರಮುಖವಾದುದು. ನಾಲ್ಕು ಆಶ್ರಮಗಳ ವಿಚಾರ ಇದರಲ್ಲಿ ವರ್ಣಿಸಲ್ಪಟ್ಟಿದೆ; ಈ ಕಾಂಡದಲ್ಲಿ 62 ಅಧ್ಯಾಯಗಳಿವೆ.

2) **ಭೂಮಿಕಾಂಡ** – ಈ ಕಾಂಡಕ್ಕೆ ಈ ಹೆಸರು ಬರಲು ಕಾರಣ ಆಧ್ಯಾತ್ಮಿಕ ಚಿಂತನೆಗೆ ಭೂಮಿಯೇ ಕಾರಣವಾಗಿರುವುದು. ಮನುಷ್ಯನು ತನ್ನ ಕರ್ತವ್ಯವನ್ನು ನಿರ್ವಹಿಸುವುದು ಅತ್ಯಂತ ಮುಖ್ಯ ಎಂಬುದನ್ನು ತಿಳಿಸಲು ಇಲ್ಲಿ ಹಲವಾರು ಕಥೆಗಳು ನಿರೂಪಿತವಾಗಿವೆ. ತಂದೆ–ತಾಯಿಗಳ ವಿಷಯದಲ್ಲಿ ಭಕ್ತಿ, ಹರಿನಾಮಸ್ಮರಣೆ ಇವು ಧರ್ಮದ ಅಂಗಗಳು. ಸ್ವರ್ಗ ಮತ್ತು ನರಕಗಳನ್ನು ಕೂಡಾ ಸಂಕ್ಷಿಪ್ತವಾಗಿ ವಿವರಿಸಿದ್ದಾರೆ. ಇದರಲ್ಲಿ 125 ಅಧ್ಯಾಯಗಳಿವೆ.

3) **ಬ್ರಹ್ಮಕಾಂಡ** – ವಿಷ್ಣುವಿನ ವಿಷಯದಲ್ಲಿ ಭಕ್ತಿ, ದೇವಾಲಯಗಳಲ್ಲಿ ಕೈಂಕರ್ಯ, ಕೃಷ್ಣಜಯಂತಿಯ ವಿಶೇಷತೆ., ಏಕಾದಶಿ ವ್ರತದ ಮಹಿಮೆ, ಹರಿನಾಮದ ಶಕ್ತಿ ಇವುಗಳು ಇಲ್ಲಿ ವರ್ಣಿಸಲ್ಪಟ್ಟಿವೆ. ಇದರಲ್ಲಿ 26 ಅಧ್ಯಾಯಗಳಿವೆ.

4) **ಪಾತಾಳಕಾಂಡ** – ಇದರಲ್ಲಿ ರಾಮನು ಮಾಡಿದ ಅಶ್ವಮೇಧ ಯಾಗದ ಕಥೆ ಸುದೀರ್ಘವಾಗಿ ವರ್ಣಿತವಾಗಿದೆ. ಲವ ಮತ್ತು ಕುಶ ಇವರು ರಾಮನ ಸೈನ್ಯದೊಡನೆ ಮಾಡಿದ ಯುದ್ಧವು ಇದರಲ್ಲಿ ನಿರೂಪಿಸಲ್ಪಟ್ಟಿದೆ. ಮುಂದೆ ಕೃಷ್ಣನ ಮಹಿಮೆ, ವೃಂದಾವನದ ಗೋಪಿಕೆಯರ ಬಗ್ಗೆ ವಿವರಣೆ ಇದೆ.

ತ್ರೇತಾಯುಗದಲ್ಲಿದ್ದ ಋಷಿಗಳ ವರ್ಣನೆ ಇಲ್ಲಿ ನಿರೂಪಿತವಾಗಿದೆ. ಇದರಲ್ಲಿ ಶಿವನ ಮಹಿಮೆ, ಅವನ ಚಿಹ್ನೆಯಾದ ಲಿಂಗ, ಭಸ್ಮದ ಪ್ರಾಧಾನ್ಯತೆಯನ್ನು ದೀರ್ಘವಾಗಿ ಹೇಳಲಾಗಿದೆ. ಇದರಲ್ಲಿ 113 ಅಧ್ಯಾಯಗಳಿವೆ.

5) **ಸೃಷ್ಟಿಕಾಂಡ** – ಸೃಷ್ಟಿಯ ಬಗ್ಗೆ ದೀರ್ಘ ವಿವರಣೆ ಇಲ್ಲ. ದೇವದಾನವರ ಕಥೆ, ಶ್ರಾದ್ಧ ಇವುಗಳನ್ನು ವಿವರವಾಗಿ ಇದರಲ್ಲಿ ಹೇಳಲಾಗಿದೆ. ಉಳಿದ ವಿಚಾರಗಳೆಂದರೆ ಬ್ರಹ್ಮನು ಮಾಡಿದ ಯಜ್ಞ, ಅಗಸ್ತ್ಯರು ವಿಂಧ್ಯ ಪರ್ವತವನ್ನು ಅಧೀನಪಡಿಸಿಕೊಂಡದ್ದು, ಮಹಿಷಾಸುರ ಕಥೆ, ವಿಷ್ಣುವಿನ ನಾಭಿಕಮಲದಿಂದ ಆವಿರ್ಭವಿಸಿದ ಸ್ವರ್ಣಕಮಲ, ಬ್ರಹ್ಮನ ಜನನ, ಒಳ್ಳೆಯ ಮತ್ತು ನೀಚ ಬ್ರಾಹ್ಮಣರ ಕುರಿತ ವಿವರಣೆ, ಪತಿವ್ರತೆಯರ ಮಹಿಮೆ, ಹಲವಾರು ದಾನಗಳ ಕುರಿತ ವಿವರಣೆ, ರುದ್ರಾಕ್ಷಿ ಮತ್ತು ತುಳಸಿ ಎಲೆಗಳ ಮಹತ್ವ, ಗಣೇಶನ ಆರಾಧನೆಯ ಫಲ, ನವಗ್ರಹ ಮತ್ತು ದುರ್ಗಾಪೂಜೆಯ ಮಹತ್ವವು ವರ್ಣಿತವಾಗಿದೆ. ಇದರಲ್ಲಿ 82 ಅಧ್ಯಾಯಗಳಿವೆ.

6) **ಉತ್ತರಕಾಂಡ** – ಈ ಕಾಂಡದಲ್ಲಿ ಶ್ರೀಶೈಲ, ಹರಿದ್ವಾರ ಮುಂತಾದ ಪವಿತ್ರ ಕ್ಷೇತ್ರಗಳ ವರ್ಣನೆ ಇದೆ. ಗಂಗಾ, ಯಮುನಾ ನದಿಗಳ ಮಹತ್ವವು ಹೇಳಲ್ಪಟ್ಟಿದೆ. ಅನ್ನದಾನದ ಫಲ ವರ್ಣಿತವಾಗಿದೆ. 24 ಏಕಾದಶಿಗಳ ವರ್ಣನೆ, ವಿಷ್ಣುಭಕ್ತರ ಮಾಹಾತ್ಮೆ, ಸಾಲಿಗ್ರಾಮದ ಆರಾಧನೆ, ದೀಪಾವಳಿಯ ಆಚರಣೆ, ಭಗವದ್ಗೀತೆಯ ಮಹಿಮೆ, ಭಾಗವತದ ಹಿರಿಮೆ, ಮಾಘಮಾಸದ ಮಾಘಸ್ನಾನ, ಸಮುದ್ರ ಮಥನ, ದಶಾವತಾರ ಇವುಗಳು ವರ್ಣಿತವಾಗಿವೆ. ಯದ್ಯಪಿ ವಿಷ್ಣುವಿನ ಪ್ರಾಧಾನ್ಯವನ್ನು ಹೇಳಿದ್ದರೂ ಇದು ಶಿವನ ವಿಚಾರವಾಗಿಯೂ ಹೇಳುತ್ತದೆ. ಭಾರತದ ಹಲವಾರು ತೀರ್ಥಸ್ನಾನಗಳ ವರ್ಣನೆ ಇಲ್ಲಿ ನಿರೂಪಿತವಾಗಿದೆ. ಇದರಲ್ಲಿ 282 ಅಧ್ಯಾಯಗಳಿವೆ.

ಭೀಷ್ಮನು ಲಕ್ಷ್ಮಿಯ ವಿಚಾರವಾಗಿ ಕೇಳಲಾಗಿ ಪುಲಸ್ತ್ಯನು ಅವಳ ಜನ್ಮದ ವಿಚಾರವನ್ನು ಹೇಳುವನು.

ಶಯನ ಸಮಯದಲ್ಲಿ ಪೂರ್ವಕ್ಕೆ ತಲೆಮಾಡಿ ಮಲಗುವುದರಿಂದ ದೀರ್ಘಾಯುಷ್ಯವು, ದಕ್ಷಿಣಕ್ಕೆ ತಲೆಮಾಡಿ ಮಲಗುವುದರಿಂದ ಕೀರ್ತಿಯು ಲಭಿಸುವುದು (1–49–125).

ಉತ್ತರಕಾಂಡದಲ್ಲಿ ಶಿವ ಹಾಗೂ ಪಾರ್ವತಿಯರ ನಡುವಿನ ಸಂಭಾಷಣೆಯ ರೂಪದಲ್ಲಿ ಧರ್ಮದ ವಿವಿಧ ವಿಷಯಗಳ ಬಗ್ಗೆ ಮಾಹಿತಿಗಳಿವೆ.

ಯುಗದ ಬಗ್ಗೆ ಹೇಳುತ್ತಾ – ಬ್ರಹ್ಮನ ಅವಧಿ 100 ವರ್ಷಗಳು. ಅದಕ್ಕೆ ಪರ ಎಂದೂ ಕರೆಯುತ್ತಾರೆ. ಅದರ ಅರ್ಧಭಾಗಕ್ಕೆ ಪರಾರ್ಧ ಎಂತಲೂ, ಒಂದು ಕಾಷ್ಠಾ 15 ನಿಮೇಷ, ಒಂದ ಕಲಾ 30 ಕಾಷ್ಠಾ. ಒಂದು ಮುಹೂರ್ತ 30 ಕಲಾ 30 ಮುಹೂರ್ತ. ಮನುಷ್ಯನ ಒಂದು ರಾತ್ರಿ ಮತ್ತು ಹಗಲು. ಒಂದು ಮಾಸವೆಂದರೆ 30 ದಿನಗಳು. 6 ತಿಂಗಳಿಗೆ ಒಂದು ಆಯನ, ವರ್ಷಕ್ಕೆ ಎರಡು ಆಯನ (ದಕ್ಷಿಣ ಮತ್ತು ಉತ್ತರ). ದಕ್ಷಿಣಾಯನ ದೇವತೆಗಳಿಗೆ ರಾತ್ರಿ, ಉತ್ತರಾಯಣ ದೇವತೆಗಳಿಗೆ ಹಗಲು.

ನಾಲ್ಕು ಯುಗಗಳು 12 ಸಾವಿರ ವರ್ಷಗಳಿಗೆ ಸಮ (ದೇವತೆಗಳಿಗೆ). ಅವು ಸತ್ಯ, ತ್ರೇತಾ, ದ್ವಾಪರ ಮತ್ತು ಕಲಿ.

ಪುರಾಣದ ಅಂತ್ಯದಲ್ಲಿ ಪರಶುರಾಮನ ಕಥೆಯೂ ಇದೆ.

❑

ಪುರಾಣಗಳು ಮತ್ತು ದಿವ್ಯ ಪ್ರಬಂಧಗಳು

—ವಿದುಷಿ ಗೋದಾ ಗೋಪಾಲ್

ದ್ರಾವಿಡ ವೇದವೆಂಬುದು ಕಲಿಯುಗದಲ್ಲಿ ಆವಿರ್ಭಾವವಾಗುವ ದಿವ್ಯಪ್ರಬಂಧಗಳು. "ವೇದಂ ತಮಿಳ್ ಸೆಯ್ದಮಾರನ್" ಎಂದು ನಮ್ಮಾಳ್ವಾರ್‌ಗೆ ಒಂದು ಹೆಗ್ಗಳಿಕೆ. ಹೀಗೆ ತಾಮ್ರಪರ್ಣೀ ಕಾವೇರಿ ಮುಂತಾದ ನದಿಗಳ ತೀರದಲ್ಲಿ ನಾರಾಯಣನ ಭಕ್ತರು ಅವತರಿಸಿ ಭಕ್ತಿಯನ್ನು ಸಿದ್ಧಾಂತವಾಗಿ ತೋರಿಸಿಕೊಡುವರೆಂದು ಭಾಗವತ ಮುಂತಾದ ಪುರಾಣಗಳಲ್ಲಿ ಹೇಳಲಾಗಿದೆ. ಈ ಲೇಖನದಲ್ಲಿ ಪುರಾಣಗಳ ಹಾಗೂ ದಿವ್ಯಪ್ರಬಂದಗಳ ಪರಸ್ಪರ ಸಂಬಂಧವನ್ನು ನಿರೂಪಿಸಲಾಗಿದೆ.

श्रीः
श्रीमते रामानुजाय नमः ।

ದ್ರಾವಿಡ ವೇದವೆಂಬುದು ಕಲಿಯುಗದಲ್ಲಿ ಆವಿರ್ಭಾವವಾಗುವ ದಿವ್ಯಪ್ರಬಂಧಗಳು. "ವೇದಂ ತಮಿಳ್ ಸೆಯ್ದಮಾರನ್" ಎಂದು ನಮ್ಮಾಳ್ವಾರ್‌ಗೆ ಒಂದು ಹೆಗ್ಗಳಿಕೆ. ಹೀಗೆ ತಾಮ್ರಪರ್ಣೀ ಕಾವೇರಿ ಮುಂತಾದ ನದಿಗಳ ತೀರದಲ್ಲಿ ನಾರಾಯಣನ ಭಕ್ತರು ಅವತರಿಸಿ ಭಕ್ತಿಯನ್ನು ಸಿದ್ಧಾಂತವಾಗಿ ತೋರಿಸಿಕೊಡುವವರೆಂದು ಭಾಗವತ ಮುಂತಾದ ಪುರಾಣಗಳಲ್ಲಿ ಹೇಳಲಾಗಿದೆ.

कलौ खलु भविष्यन्ति नारायण परायणा : ॥
ताम्रपर्णी नदीयत्र कृतमाला पयस्विनी ।
कावेरीच महाभागा प्रतीची च महानदी ।
ये षिबन्ति जलं तासां मनुजां मनुजेश्वर ।
प्रायो भक्ता भगवति वासुदेवेऽमलाशयाः ॥ (11/5 38-39-40)

ವಿಶ್ವಸಾಹಿತ್ಯದಲ್ಲಿ ತಮಿಳುನಾಡಿನ ಹರಿದಾಸ ಶಿರೋಮಣಿಗಳಾದ ಆಳ್ವಾರುಗಳು ಲೋಕವನ್ನು ವ್ಯಾಪಿಸಿರುವ ಅಜ್ಞಾನವೆಂಬ ಕತ್ತಲೆಯನ್ನು ನೀಗಲು ಸಂಸ್ಕೃತದಲ್ಲಿರುವ ವೇದದ ಸಾರವನ್ನು ಎಲ್ಲರೂ ಅರಿಯುವಂತೆ ದೇಶೀಯ ಭಾಷೆಯಾದ ತಮಿಳಿನಲ್ಲಿ ಹಾಡಿರುವ "ನಾಲಾಯಿರ ದಿವ್ಯ ಪ್ರಬಂಧಂ" ಎಂಬ ಸಿರಿನುಡಿಗಳಿಗೆ ಒಂದು ವಿಲಕ್ಷಣ ಸ್ಥಾನವಿದೆ. ಆಳ್ವಾರ್ ಎಂದರೆ ಭಗವದ್ ಭಕ್ತಿಯಲ್ಲಿ ಮುಳುಗಿದವರು ಎಂದರ್ಥ. ಈ ದಿವ್ಯಪ್ರಬಂಧಗಳೇ ದ್ರಾವಿಡವೇದವೆಂದು ಪ್ರಸಿದ್ಧವಾಗಿವೆ. ತಮ್ಮ ಅನುಭವಗಳನ್ನು 24 ದಿವ್ಯ ಪ್ರಬಂಧಗಳಲ್ಲಿ 4000 ವಚನಗಳಲ್ಲಿ ನೀಡಿದ ಆಳ್ವಾರುಗಳು ಅನುಭಾವಿಗಳು. ಭಗವಂತನನ್ನು ಪ್ರತ್ಯಕ್ಷ ಕಂಡು ಅವನನ್ನು ಹಾಡಿಹೊಗಳಿ ಆನಂದಿಸಿ ಅನುಭವಿಸಿದವರು.

ಬ್ರಹ್ಮ ಗಾಯತ್ರಿಯ 24 ಅಕ್ಷರಗಳೇ ಈ 24 ದಿವ್ಯ ಪ್ರಬಂಧಗಳಿಗೆ ಬೀಜವಾಗಿವೆ. तैत्तिरीय आरण्यक ಇಂತಹ ಸಾಹಿತ್ಯವನ್ನು ಅನೂದಿತ ವೇದವೆಂದು ಕರೆದಿದೆ.

उदित वेद ಸಂಸ್ಕೃತ ಭಾಷೆಯಲ್ಲಿವೆ. ಆ ವೇದಗಳನ್ನು ಸಾಕ್ಷಾತ್ಕರಿಸಿದವರು ಮಂತ್ರಕರ್ತರು. ಅನೂದಿತ ವೇದಗಳನ್ನು ದಿವ್ಯಸೂರಿಗಳಾಗಿ ರಕ್ಷಿಸಿದ ಆಳ್ವಾರ್‌ಗಳು ಮಂತ್ರಪತಿಗಳು.

नमो वाचे याच उदिता याच अनुदिता तस्यै वाचे नमः
नमः ऋषिभ्यः मन्त्रकृद्भ्यः मन्त्रपतिभ्यः

ಹೀಗೆ ವೇದದಲ್ಲಿ ದಿವ್ಯಪ್ರಬಂಧಗಳ ಬಗ್ಗೆ ಸೂಕ್ಷ್ಮ ಉಲ್ಲೇಖವಿದೆ.

ವೇದಗಳಿಗೆ ಉಪಬೃಂಹಣ (enlargement of vedas) ಮಾಡಿ ತೋರಿಸಿರುವ ಕಾರ್ಯ ಪುರಾಣಗಳದ್ದು. ಪುರಾಣಗಳಲ್ಲಿ ಹೇಳಿರುವ ಪರಮಾತ್ಮನ ಅವತಾರಗಳೂ ದಿವ್ಯಚರಿತ್ರೆಗಳೂ ಎಲ್ಲವೂ ದ್ರಾವಿಡವೇದವೆಂಬ ದಿವ್ಯಪ್ರಬಂಧಗಳಲ್ಲಿ ಅಡಕವಾಗಿ ಶುದ್ಧವಾಗಿ ನಿರೂಪಿತವಾಗಿದೆ.

24 ಪ್ರಬಂಧಗಳಲ್ಲಿ ಕಲಿಯುಗದ ಪ್ರಧಾನ ದೇವರಾದ ಕೃಷ್ಣನ ಭಕ್ತಿಯೇ ಮುಖ್ಯ ವಿಷಯ. ಶ್ರಿಯಃಪತಿಯಾದ ನಾರಾಯಣನ ಅವತಾರಾದಿ ವಿಷಯಗಳಲ್ಲದೆ ಇತರ ಲೌಕಿಕ ವಿಷಯಗಳು ಇವುಗಳಲ್ಲಿ ಏನೂ ಇರುವುದಿಲ್ಲ. ಆದುದರಿಂದ ದಿವ್ಯಪ್ರಬಂಧಗಳಿಗೆ ಅದರಲ್ಲೂ ಮುಖ್ಯವಾದ ತಿರುವಾಯ್‌ಮೊಳಿಗೆ भगवद्विषय ವೆಂದೆ ಹೆಸರು.

परमात्मನಿಗೆ 5 ರೂಪಗಳುಂಟು अम्भस्य पारे ಎಂದು ವೇದವು ಸಾಗರಶಯನನಾದ ಪರಮಾತ್ಮನ ವ್ಯೂಹರೂಪವನ್ನು ತಿಳಿಸುತ್ತದೆ. भुवनस्य मध्ये ಎಂಬ ವೇದವು ಈ ಭೂಮಿಯಲ್ಲಿ ರಾಮ, ಕೃಷ್ಣ, ನೃಸಿಂಹ, ವರಾಹ, ಆದಿ ವಿಭವಾವತಾರಗಳನ್ನು ತಿಳಿಸುತ್ತದೆ. नाकस्य पृष्टे ಎಂಬ ವೇದವು ಪ್ರಕೃತಿ ಮಂಡಲಕ್ಕೆ ಮೇಲೆ ನಿತ್ಯ-ವೈಕುಂಠದಲ್ಲಿರುವ ವಾಸುದೇವನೆಂಬ ಪರಮಾತ್ಮನ ಪರಸ್ವರೂಪವನ್ನು ತಿಳಿಸುತ್ತದೆ. ज्योतींषि समनुप्रविष्टः ಎಂಬ ವೇದವು ಶುಕ್ರವೆಂಬ ಘನಪದಾರ್ಥವಾದ ಕಲ್ಲು, ಲೋಹ, ರತ್ನ, ಮಣ್ಣು, ಮರ ಮುಂತಾದ ಅರ್ಚಾವಿಗ್ರಹಗಳನ್ನು

ತಿಳಿಸುತ್ತದೆ. प्रजापतिश्चरति गर्भे अन्त: ಎಂಬ ವೇದವು ಎಲ್ಲ ವಸ್ತುಗಳೊಳಗೆ ಅಂತರ್ಯಾಮಿ ಆಗಿರುವ ರೂಪವನ್ನು ತಿಳಿಸುತ್ತದೆ. ಇದೇ ಮಾತುಗಳು ಇತಿಹಾಸ ಪುರಾಣಗಳಲ್ಲಿ ಆಗಮಗಳಲ್ಲಿ ವಿಸ್ತಾರವಾಗಿ ವರ್ಣಿತವಾಗಿದೆ.

ಇದನ್ನು ದಿವ್ಯಪ್ರಬಂಧದಲ್ಲಿ ನಮ್ಮಾಳ್ವಾರರ ತಿರುವಾಯ್‌ಮೊಳಿ (6.9.5) ವಿಣ್ ಮೀದಿರುಪ್ಪಾಯ್ ಮಲ್ಲೈಮೇಲ್ ನಿರ್‌ಪಾಯ್ ಕಡಲ್ ಶೇರ್‌ವಾಯ್ ಮುಂತಾದ ಹಾಡುಗಳಲ್ಲಿ ಹಾಗೆಯೇ ವರ್ಣಿಸಲಾಗಿದೆ.

ದಿವ್ಯಕ್ಷೇತ್ರಗಳ ಒಂದೊಂದು ಅರ್ಚಾವತಾರದಲ್ಲೂ ಆಳ್ವಾರುಗಳು ಪರಮಾತ್ಮನ ಈ ಐದೂ ರೂಪಗಳನ್ನು ಅಂತರ್ಭಾವಿಸಿ ಸ್ತೋತ್ರ ಮಾಡಿರುತ್ತಾರೆ. ದಿವ್ಯಪ್ರಬಂಧಗಳಿಗೆ ಅರ್ಚಾವತಾರದಲ್ಲಿಯೇ ಮುಖ್ಯ ದೃಷ್ಟಿ. ಹೀಗೆಯೇ ಪುರಾಣಗಳಲ್ಲಿ ಬರುವ ಆಯಾ ದಿವ್ಯ ಕ್ಷೇತ್ರ ಮಹಾತ್ಮ್ಯಗಳು ಅರ್ಚಾಮೂರ್ತಿಯ ಪರವಾಗಿಯೇ ಇವೆ.

अत्र संकीर्तनेनैव सर्वस्वार्थोऽभिलभ्यते (ಭಾಗ 11.5.36) ಹಾಗೂ कलौ खलु नाम संकीर्तनम् ಎಂಬೆಲ್ಲಾ ವಚನಗಳಂತೆ ಪುರಾಣಗಳಲ್ಲಿ ಹಾಗೂ ದ್ರಾವಿಡವೇದಗಳಲ್ಲಿ ನಾಮಸಂಕೀರ್ತನೆಯೇ ಪ್ರಧಾನವಾದದ್ದು. बहूनां जन्मनामन्ते ज्ञानवान् मां प्रपद्यते ಎಂದು ಹೇಳುವ ಹಾಗೆ ಹಲವಾರು ಜನ್ಮಗಳನ್ನು ಪಡೆದು ಕಲಿಯುಗದಲ್ಲಿ ನಾಮಸಂಕೀರ್ತನೆಯಿಂದ ಪರಿಷ್ಕೃತ ಚೇತನನಾಗಿ ಮುಕ್ತಿ ಪಡೆಯುವುದೇ ಪ್ರತಿಯೊಬ್ಬರ ಲಕ್ಷ್ಯವಾಗಿದೆ. ಆದ್ದರಿಂದಲೇ (ಭಾಗ. 11.5.38)ದಲ್ಲಿ कृतादिषु प्रजा: राजन् कलौ इच्छन्ति सम्भयवम् ಎಂದಿದ್ದಾರೆ. ಅದನ್ನೇ ಪೆರಿಯಾಳ್ವಾರರು ತಮ್ಮ ತಿರುಪ್ಪಲ್ಲಾಂಡ್ ಎಂಬ ಪ್ರಬಂಧದಲ್ಲಿ "ನಾಡುಂನಗರಮುಂ ನಮೋ ನಾರಾಯಣಾಯ ಎನ್ರು" (ಗ್ರಾಮಿಗರು-ನಗರಿಗರು ಚಂದದಿಂ ತಿಳಿಯೇ ನಮೋ ನಾರಾಯಣಾಯ ಎಂದು) ಮತ್ತು ತೋಂಡಕ್ಕುಲತ್ತಿಲುಳ್ಳೀರ್ ವಂದಡಿ ತೊಳುದು ಆಯಿರನಾಮಂ ಶೋಲ್ಲಿ ಪಂಡೈಕುಲತ್ತೈ ತವಿರ್‌ನ್‌ದು ಪಲ್ಲಾಯಿರತ್ತಾಂಡೆನ್ಮಿನೇ (ದಾಸ ಕುಲದ ನೀವೆಲ್ಲಾ ಬಂದು ಪಾದಸೇವೆಯ ಮಾಡಿ ಸಾಸಿರನಾಮವನು ಹೇಳಿ ಹಳೆಯ ಸಂಗವ ತೊರೆದು ಬಾಳು ಬಾಳಯ್ಯಾ-ಎಂದು ಮಂಗಳವ ಹಾಡಿರಯ್ಯ) ಇಲ್ಲಿ ದಾಸರ ಕುಲವೆಂದು ಹೇಳಿದುದರ ಉದ್ದೇಶವೇನೆಂದು ತಿಳಿಯೋಣ. ಆಳ್ವಾರರುಗಳೆಲ್ಲಾ ಒಂದೇ ಕುಲದಲ್ಲಿ ಜನಿಸಿದವರಲ್ಲ ಆದರೆ ಎಲ್ಲರೂ ಭಕ್ತಿಪಂಥದವರು. ಭಕ್ತಿ ಕುಲಕ್ಕೆ ಸೇರಿದ ಇವರೆಲ್ಲಾ ಮಹನೀಯರು. ಪೂಜನೀಯರು ಭಕ್ತಿಗೆ ಯಾವ ಜಾತಿ, ಕುಲ, ಎಂಬ ಭೇದವಿಲ್ಲ सुभाषितं ग्राह्यं बालादपि शुकादपि ಎಂಬಂತೆ.

ಪುರಾಣಗಳನ್ನು ಪಠಿಸುವಾಗ ಪರಾಶರರ ಸ್ಮರಣೆ ಮುಖ್ಯವಾದುದು. ಏಕೆಂದರೆ ಅವರು "ಈ ಒಂದು ದಿವ್ಯಮುಹೂರ್ತದಲ್ಲಿ ಜನಿಸುವ ಶಿಶು ಲೋಕೋದ್ಧಾರಕನಾಗುವನು ಲೋಕಕ್ಕೆ ಕಲ್ಯಾಣವುಂಟುಮಾಡುವನು" ಎಂದರಿತು ಆ ಕ್ಷಣದಲ್ಲಿ ಅವರಿದ್ದದ್ದು ದ್ವೀಪದ ಮಧ್ಯದ ಹಡಗಿನಲ್ಲಿ. ಆಗ ಅವರು ಸಮೀಪದಲ್ಲಿದ್ದ ಸತ್ಯವತಿಯನ್ನು ಆಹ್ವಾನಿಸಿ ಮಂಜುಗೆಡ್ಡೆಯ ನಡುವೆ ಶುಭಮೂಹೂರ್ತದಲ್ಲಿ ದಿವ್ಯ ಶಿಶುವನ್ನು ಪಡೆದು ಲೋಕಾರ್ಪಣೆ ಮಾಡಿದರು. ಆ ಶಿಶುವೇ ವೇದವ್ಯಾಸರೆಂದು ಪ್ರಖ್ಯಾತಿ ಪಡೆದ ಅಷ್ಟಾದಶ ಪುರಾಣಗಳ ಕರ್ತಾ. ದ್ರಾವಿಡ ವೇದಗಳನ್ನು ಪಠಿಸುವಾಗ ನಾಥಮುನಿಗಳನ್ನು ಸ್ಮರಿಸತಕ್ಕದ್ದು.

ಆಳ್ವಾರ್‌ಗಳು ಒಟ್ಟು ಹನ್ನೆರಡು ಜನ. ಇವರಲ್ಲಿ ಆಂಡಾಳ್ ಎಂಬ ಗೋದಾದೇವಿಯು ಸೇರಿದ್ದಾಳೆ. ನಾಥಮುನಿಗಳು ಮಧುರಕವಿ ಆಳ್ವಾರರ "ಕಣ್ಣಿನುಣ್ ಶಿರಿತ್ತಾಂಬು" ಎಂಬುದು 10 ಪಾಶುರಗಳನ್ನು ಹನ್ನೆರಡು ಸಾವಿರ ಬಾರಿ ಜಪಿಸಿದ್ದರಿಂದ ನಮ್ಮಾಳ್ವಾರರು ಇವರಿಗೆ ಧ್ಯಾನದ ಮೂಲಕ ಪ್ರತ್ಯಕ್ಷರಾಗಿ ತಾವು ಹಾಡಿದ "ತಿರುವಾಯ್ ಮೊಳಿ" ಮತ್ತು ಇತರ ಆಳ್ವಾರರು ಹಾಡಿದ ದಿವ್ಯ ಪ್ರಬಂಧಗಳನ್ನು ಉಪದೇಶ ಮಾಡಿದರು ಎಂದು ವ್ಯಾಖ್ಯಾನಗಳಲ್ಲಿ ಕಾಣುತ್ತೇವೆ. ಆದ್ದರಿಂದ 4 ಸಾವಿರ ದಿವ್ಯ ಪ್ರಂಬಧಗಳು ಮೊದಲು ನಮಗೆ ದೂರಕಿದ್ದು ನಾಥಮುನಿಗಳ ಮೂಲಕ. ಆಳ್ವಾರುಗಳು ಒಂದೇ ಬಾರಿ ನೂರಾರು ಹಾಡುಗಳನ್ನು ಹಾಡಿದಾಗಿ ಕಂಡುಬರುವುದಿಲ್ಲ. ಆಯಾಯ ದಿವ್ಯಕ್ಷೇತ್ರಗಳನ್ನು ಸಂದರ್ಶಿಸಿದಾಗ ಅಥವಾ ಆಗಿಂದಾಗಲೇ ಪರಮಾತ್ಮನಲ್ಲಿ ಮನ ತುಂಬಿ ಪ್ರೇಮ

ಉಂಟಾದಾಗ ಮಧುರ ಶಬ್ದಗಳಲ್ಲಿ ಅವನ ದಿವ್ಯ ಅನುಭವವನ್ನು ವರ್ಣಿಸಿದ್ದಾರೆ. ಈ ಮೂಲಕ ವೇದಾಂತ ರಹಸ್ಯಗಳನ್ನು ವಿಶದೀಕರಿಸುವುದೇ ಪ್ರಬಂಧಗಳ ವೈಶಿಷ್ಟ್ಯ. ಅನುಭವವೇ ಹರಿದು ಬಂದಂತಿದೆ ಇಲ್ಲಿ. ಪುರಾಣಗಳಲ್ಲಿ ಆ ಅನುಭವದರ್ಶನವನ್ನು ತಾತ್ತ್ವಿಕವಾಗಿ ವರ್ಣಿಸಿದೆ. (The langauge of purana is conceptual while that of Tiruvayoli is perceptual).

ಸಂಸ್ಕೃತ ವೇದಗಳಂತೆ ಈ ದ್ರಾವಿಡವೇದಗಳಿಗೆ ಅಧಿಕಾರಿ ನಿಯಮವಾಗಲಿ, ಕಾಲನಿಯಮವಾಗಲಿ ಇಲ್ಲ. ಪ್ರಬಂಧಗಳನ್ನು ಯಾರು ಹೇಗೆ, ಎಲ್ಲಿ ಬೇಕಾದರೂ ಹೇಳಬಹುದಾಗಿದೆ. ಸಾಂಪ್ರದಾಯಿಕ ಪರಂಪರೆಯಲ್ಲಿ ಬಂದ ಅರೈಯರ್ ಸೇವೆಯನ್ನು ಕೆಲವು ದೇವಸ್ಥಾನಗಳಲ್ಲಿ ಈಗಲೂ ನಡೆಸಿಕೊಂಡು ಬರುತ್ತಿದ್ದಾರೆ. ನಾಲಾಯಿರ ಪ್ರಬಂಧಗಳಲ್ಲಿ 3 ಸಾವಿರಕ್ಕೆ ಇಶೈಪಾ ಎಂದರೆ ಹಾಡುವುದು, ಅದನ್ನೇ ಅರೈಯರ್ ವಂಶದವರು ಹಾಡುತ್ತಾರೆ. ಇನ್ನೊಂದು ಸಾವಿರಕ್ಕೆ ಇಯಲ್‌ಪಾ ಎಂದರೆ ಗೋಷ್ಠಿಯಲ್ಲಿ ಹೇಳುವುದು ಎಂದು ರೂಢಿ.

ಏನೇ ಆದರೂ ಪರಮಾತ್ಮನನ್ನು ಹಾಡಿ ಹೊಗಳಲು ಯಾವ ನಿರ್ಬಂಧವೂ ಇಲ್ಲ. ಆಳ್ವರ್ರುಗಳ ಪೈಕಿ ಪೇರಿಯಾಳ್ವಾರರಿಗೆ ಒಂದು ವಿಶಿಷ್ಟ ಸ್ಥಾನವಿದೆ. ಅವರು ತಮ್ಮ ತಿರುಮೊಳಿಯಲ್ಲಿ ಕೃಷ್ಣನ ಲೀಲೆಗಳನ್ನು ಸೊಗಸಾಗಿ ವರ್ಣಿಸಿದ್ದಾರೆ. ಪರಮಾತ್ಮನು ಭೇದವಿಲ್ಲದೆ ಎಲ್ಲರೊಡನೆ ಸೇರಿ ಹೇಗೆ ಕೃಷ್ಣಾವತಾರದಲ್ಲಿ ನಡೆದುಕೊಂಡನೆಂದು ಹೇಳಿದ್ದಾರೆ. ಶ್ರೀಕೃಷ್ಣನು ವ್ರಜಬಾಲಕರೊಂದಿಗೆ ಪ್ರಕೃತಿಯಲ್ಲಿರುವ ಮಕ್ಕಳಂತೆ ತಾನೂ ಕ್ರೀಡಿಸಿ ಅವರೆಲ್ಲರಿಗೂ ಸಂತೋಷಪಡಿಸಿದನು. ಇದು ಅವನ ಅತ್ಯದ್ಭುತವಾದ ಸೌಲಭ್ಯವನ್ನು ತೋರಿಸಿಕೊಡುತ್ತದೆ.

ಇದನ್ನು ಪೆರಿಯಾಳ್ವಾರರ ತಿರುಮೊಳಿಯ 3.4.3 ರಲ್ಲಿ ಕಾಣಬಹುದು.

ಶುರಿಗೈಯುಮ್ ತೆರಿವಿಲ್ಲುಮ್ ಶೆಂಡುಕೋಲುಂ ಮೇಲಾಡೈಯುಂ
ತೋಳನ್ ಮಾರ್‌ಕೊಂಡೋಡ. ಒರು ಕೈಯಾಲ್ ಒರುವನ್
ತನ್‌ತೋಳೈ ಊನ್ರಿ ಆನಿರೈ ಇನಮೀಳ ಕುರಿತ್ತಶಂಕಮ್ ಒರುಕೈಯಿಲ್
ಆಡಿಯ ಪಿಳ್ಳೈ ಕಣ್ಣನ್..........

(ಚಿಕ್ಕ ಕತ್ತಿಯನು ಪವಣಿಕಲ್ಲುಗಳುಂ ಚೆಂಡುಕೋಲನು
ಉತ್ತರೀಯವನುಂ ಗೆಳೆಯರು ತೆಗೆದುಕೂಂಡು ಓಡಿ ಬರೆ ಒಂದು
ಕೈಯುಂ ಒಬ್ಬನ ತೋಳನುಂ ಹಸುಮಂದೇ ಇಂಪಾಗಿ ಕೇಳ್ವ ದನಿಯ
ಶಂಖವ ಪಿಡಿದು ಬರುತಿರಲು ಮಗ ಕೃಷ್ಣ......)

ಇದೇ ಭಾವವನ್ನು ಬೇರೆ ಪದಗಳಲ್ಲಿ ಭಾಗವತ ಪುರಾಣದ 10.11.27 ಮತ್ತು 28ನೇ ಶ್ಲೋಕಗಳಲ್ಲಿ ಕಾಣಬಹುದು.

अविदूरे व्रजभुवः सहगोपालदारकैः चारयामासतुः वत्सान्
नाना क्रिडापरिच्छदौ ॥ क्वचिद्वादयतो वेणुं क्षेपणै : क्षिपतः
क्वचित् । क्वचित्पादैः किंकिणीभिः क्वचित्कृत्रिम गौवृषैः

ಗೋಕುಲದ ಬಳಿಯಲ್ಲಿಯೇ ಓರಗೆಯ ಗೊಲ್ಲ ಹುಡುಗರೊಡಗೂಡಿ ಬಗೆಯ ಆಟದ ಸಾಮಾನುಗಳನ್ನು ಅಣಿ ಮಾಡಿಕೂಂಡು ಕರುಗಳನ್ನು ಕಾಯುತ್ತಿದ್ದರು. ಆಗ ಒಮ್ಮೆ ಇಂಪಾದ ಕೊಳಲನ್ನು ಬಾರಿಸುವರು, ಇನ್ನೊಮ್ಮೆ ಕವಣೆಗಲ್ಲುಗಳಿಂದ ಬೇಲ ಮೊದಲಾದ ಕಾಯಿಗಳನ್ನು ಕೆಡಹುವರು ಮತ್ತೊಮ್ಮೆ ಕಾಲಿಗೆ ಗೆಜ್ಜೆಗಳನ್ನು ಕಟ್ಟಿಕೂಂಡು ಕುಣಿಯುವರು.

ಇಂತಹ ಪರಮ ಸೌಲಭ್ಯಗುಣವುಳ್ಳ ಪರಮಾತ್ಮ ಹೇಗೆ ಸೃಷ್ಟಿಗೆ ಕಾರಣನಾಗುತ್ತಾನೆ ಎಂದು ತಿಳಿಯೋಣ.

ಪಂಚಭೂತಗಳ ಸಮ್ಮಿಶ್ರಣದಿಂದ ಉತ್ಪನ್ನವಾಗಿರುವ ಪ್ರಪಂಚಕ್ಕೆ ಪಂಚಭೂತಗಳು ಕಾರಣ. ಅದರಲ್ಲಿ ಅಂತರಾತ್ಮ ಆಗಿ ಪರಮಾತ್ಮ ಇದ್ದಾನೆಂದು ವಿಷ್ಣು ಪುರಾಣ 1.2.32 ಹಾಗೂ 38ನೇ ಶ್ಲೋಕಗಳಲ್ಲಿ ಹೇಳಿದೆ.

विकासाणुस्वरुपैश्च ब्रह्मरुपादिभिस्तथा ।
व्यक्तरुपश्चतथा विष्णुः सर्वेश्वरेः ॥

ससर्ज शब्दतन्मात्रादाकाशं शब्दलक्षणम् ।
शब्दमात्रं तथाकाशं भूतादिः स समावृणोत् ॥

ಈ ವಿಷಯವನ್ನು ತಿರುಮಳಿಶೈ ಆಳ್ವಾರರು ಅನುಗ್ರಹಿಸಿರುವ ತಿರುಚ್ಚಂದ ವಿರುತ್ತಂ ಎಂಬ ಪ್ರಬಂಧದಲ್ಲಿ ಮೊದಲನೇ ಶ್ಲೋಕದಲ್ಲಿ ಹೇಳಿದ್ದಾರೆ.

ಪೂನಿಲಾಯ ಐನ್ದುಮಾಯ್ ಪುನರ್ಕಣಿನ್ರನಾನ್ಗುಮಾಯ್ । ತೀನಿಲಾಯ ಮೂನ್ರುಮಾಯ್ ಶಿರನ್ದಕಾಲಿರಂಡುಮಾಯ್ । ಮೀನಿಲಾಯ ದೂನ್ರು ಮಾಕಿ ವೇರುವೇರುತನ್ಮಯಾಯ್ ನೀನಿಲಾಯ ವಣ್ಣಂ ನಿನ್ನೈಯಾರ್ ನಿನ್ನೈಕ್ಕವಲ್ಲರೇ.

ಭೂಮಿಯಲ್ಲಿ ವರ್ತಿಸುವ ಶಬ್ದ, ಸ್ಪರ್ಶ, ರೂಪ, ರಸ, ಗಂಧಗಳೆಂಬ 5 ಗುಣಗಳ ಸ್ವರೂಪನಾಗಿಯೂ ನೀರಿನಲ್ಲಿರುವ ಶಬ್ದ ಸ್ಪರ್ಶ, ರೂಪ, ರಸವೆಂಬ 4 ಗುಣಗಳ ಸ್ವರೂಪನಾಗಿಯೂ ಅಗ್ನಿಯಲ್ಲಿರುವ ಶಬ್ದ, ಸ್ಪರ್ಶ, ರೂಪ ಎಂಬ 3 ಗುಣಗಳ ಸ್ವರೂಪನಾಗಿಯೂ, ಚೇತನರಿಗೆ ಆಧಾರವಾಗಿರುವ ವಾಯುವಿನಲ್ಲಿರುವ ಶಬ್ದ, ಸ್ಪರ್ಶ, ಎಂಬ 2 ಗುಣಗಳ ಸ್ವರೂಪನಾಗಿಯೂ, ಆಕಾಶದಲ್ಲಿರುವ ಶಬ್ದವೆಂಬ 1 ಗುಣಸ್ವರೂಪನಾಗಿಯೂ ಜಗತ್ತಿನ ಉಪಾದಾನ ಕಾರಣನಾಗಿ ಎಲ್ಲಕ್ಕೂ ಅಂತರ್ಯಾಮಿಯಾಗಿದ್ದಾನೆ ಈ ಸರ್ವೇಶ್ವರ ವಿಷ್ಣು.

ಹೀಗೆ ಸೃಷ್ಟಿ ಮಾಡಿದ ಭಗವಂತನು ಲೀಲಾವಿಭೂತಿಯಲ್ಲಿ ಸ್ಥಿತಿ ಕಾರಕನೂ, ಲಯಕಾರಕನೂ ಆಗಿರುವನೆಂದು ಇಲ್ಲಿ ಹೇಳಿದೆ.

ನಮ್ಮಾಳ್ವಾರರ ತಿರುವಾಯ್ ಮೊಳಿಯ 10.10.3 ರಲ್ಲಿ ಹೇಳಿದೆ.

ಮೇವಿತೊಳುಂ ಪಿರಮನ್ ಶಿವನ್ ಇಂದಿರನ್ ಆದಿಕ್ಕೆಲ್ಲಾಂ
ನಾಭಿಕಮಲ ಮುದಲ್ ಕಿಳಂಗೇ ಉಂಬಿರಂದದಿವೋ
ಉಂಬರ್ ತಣ್ ಪಾಳೇಯೋ ಅದನುಳ್ ಮಿಶೈನೀಯೇಯೋ
ಅಂಬರಂ ನಲ್ ಜ್ಯೋತಿ ಅದನುಳ್ ಪಿರಮಿನ್ನರನ್ ನೀ.

ಆದರದಿ ಸೇವಿಸುವ ಬ್ರಹ್ಮ, ಇಂದ್ರ ಮೊದಲಾದವರ್ಗೆಲ್ಲ ನಾಭಿಕಮಲಕ್ಕೂ ಜಗತ್ಕಾರಣ ಮೂಲಭುತನೇ ಅಮರರಿಗೂ ಅಂತಿರ್ಪವನೇ ಮೇಲಿರುವ ರಮಣೀಯ ಶೀತಲ ಮೂಲ ಪ್ರಕೃತಿಯವನೇ ಅದರೊಳಗೆ ಸೇರ್ದವನು ನೀನೇಯೋ ಆಕಾಶಮುಂ ದಿವ್ಯಜ್ಯೋತಿಯುಂ ಅದರೂಳಗೆ ಬ್ರಹ್ಮ ಶಿವನೀನೇ

ಇದನ್ನೇ नरसिंहपुराण (सृष्टिकाण्ड 1.65) ದಲ್ಲಿ ಹೀಗೆ ಹೇಳಿದೆ.

ब्रह्मेण रुपेण सृज्यन्तः जगत्समस्तं परिपातुमिच्छन् ।
रामादि रुपं स तु प्राप्य पाति भूत्वायं रुद्रः करोति नाशम् ॥
श्रीविष्णु पुराण 1.22.66 ರಲ್ಲಿ ಹೇಳಿದೆ.

सष्टिस्थित्यन्तकरणीं ब्रह्मविष्णुशिवात्मिकम् ।
स संज्ञां याति भगवान् एक एव जनार्दनः ।

ಪರಮಾತ್ಮ ಸೃಷ್ಟಿಸ್ಥಿತಿ ಲಯಕ್ಕಾಗಿ ಮೂರು ದೇವತೆಗಳ ರೂಪಗಳಲ್ಲಿ ವ್ಯಕ್ತಪಡಿಸಿಕೊಳ್ಳುತ್ತಾನೆ ಎಂದು ಈ ಮೂರು ಕಡೆಗಳಲ್ಲಿ ಹೇಳಿದೆ. ಈ ರೀತಿಯಾದ ಪರಮಾತ್ಮ ಹೇಗಿರುವನು? ಎಂದು ಕೇಳಿದಾಗ ಒಬ್ಬೊಬ್ಬರು ಒಂದೊಂದು ರೀತಿಯಾಗಿ ಹೇಳುತ್ತಾರೆ. ಗಜೇಂದ್ರಮೋಕ್ಷ ಸಂದರ್ಭದಲ್ಲಿ ಗಜೇಂದ್ರನು ಭಗವಂತನನ್ನು ಸ್ತುತಿಸುವಾಗ ಹೇಳಿದ ಮಾತುಗಳಿವು. ಶ್ರೀಮದ್ಭಾಗವತ ಪುರಾಣದ 8.3.24ರಲ್ಲಿ ಹೀಗೆ ಹೇಳಿದೆ.

स वै न देवासुरमर्त्यतिर्यक् न स्त्री न षण्डो न पुमान् न जन्तुः

ಆ ಭಗವಂತನು ದೇವತೆಯಲ್ಲ, ರಾಕ್ಷಸನಲ್ಲ, ಮನುಷ್ಯನಲ್ಲ, ತಿರ್ಯಕ್ ಜಂತುವಲ್ಲ, ಹೆಣ್ಣಲ್ಲ, ಗಂಡಲ್ಲ, ನಪುಂಸಕನಲ್ಲ, ಪ್ರಾಣಿಯಲ್ಲ.

ಇದನ್ನೇ ನಮ್ಮಾಳ್ವಾರರ ತಿರುವಾಯ್‌ಮೊಳಿಯ 2.5.10ರಲ್ಲಿ ಹೀಗೆ ಹೇಳಿದೆ.

ಆಣಲ್ಲನ್ ಪೆಣ್ಣಲ್ಲನ್ ಅಲ್ಲಾ ಅಲಿಯುಂ ಅಲ್ಲನ್
ಎನ್ನೊಡೆಯ ಗಂಡಲ್ಲ, ಹೆಣ್ಣಲ್ಲ, ಇವೆರಡುಂ ಅಲ್ಲದ ನಪುಂಸಕನೂ ಅಲ್ಲ

ಇಂತಹ ಕಣ್ಣಿಗೆ ಕಾಣದ ಅನುಭವ ವೇದ್ಯನಾದ ಪರಮಾತ್ಮನು ವಿಭವಾವತಾರಗಳಲ್ಲಿ ತನ್ನನ್ನಾಶ್ರಯಿಸಿ ಬಂದವರಿಗೆ ಶರಣ್ಯನಾಗಿದ್ದಾನೆ.

ಪರಮಾತ್ಮನ ಆಶ್ರಿತವಾತ್ಸಲ್ಯವನ್ನು ವರ್ಣಿಸದವರೇ ವಿರಳ.

विष्णुपुराण ದಲ್ಲಿ (5.11. ರ 12, 22, 23) ಗೋವರ್ಧನ ಗಿರಿಧಾರಿಯಾಗಿ ಹೇಗೆ ವ್ರಜಭೂಮಿಯಲ್ಲಿದ್ದವರನ್ನು ಕಾಪಾಡಿದ ಎಂದು ಹೇಳಿದೆ.

> **गावो विवत्साश्च कृता वारिपूरेण चापराः ॥**
> **वत्साश्च दीनवदना वाताकम्पितकन्धराः ।**
> **त्राहि त्राहीत्यल्पशब्दाः कृष्णमूचुरिवातुराः ॥**
> **सप्तरात्रं महामेघा ववर्षुर्नन्दगोकुले ।**
> **इन्द्रेण चोदिता विप्र गोपानां नाशकारिणा ॥**
> **ततो धृते महाशैले परित्राते च गोकुले ।**

ಕೆಲವು ಹಸುಗಳು ಪ್ರವಾಹದ ಹೊಡೆತದಿಂದ ಕರುಗಳನ್ನು ಕಳೆದುಕೊಂಡವು. ಬಿರುಗಾಳಿಯಿಂದ ಕಂಪಿಸುತ್ತಿದ್ದ ಕತ್ತುಗಳುಳ್ಳ ಕರುಗಳು ಕರುಣಾಪೂರ್ಣಮುಖದಿಂದ ಕೃಷ್ಣನನ್ನು ಕುರಿತು ಮೆಲುದನಿಯಲ್ಲಿ ಆಕ್ರಂದಿಸುತ್ತಾ ತ್ರಾಹಿತ್ರಾಹಿ ಎಂದು ಬೇಡುತ್ತಿರುವಂತೆ ಕಂಡಿತು.

ಆ ನಂದಗೋಕುಲದಲ್ಲಿ ಮೇಘಗಳು ಏಳು ರಾತ್ರಿಗಳವರೆಗೆ ಸತತವಾಗಿ ಮಳೆಗರೆದವು. ಗೋಪಾಲರನ್ನು ನಾಶಪಡಿಸಬೇಕೆಂಬ ಇಂದ್ರನ ಪ್ರೇರಣೆಯಿಂದ ಹಾಗೆ ಮಾಡಿದವು. ಆಗ ಕೃಷ್ಣನು ಮಹಾಶೈಲವನ್ನು ಎತ್ತಿ ಗೋಕುಲವನ್ನು ರಕ್ಷಿಸಿದನು.

ಇದೇ ಗೋವರ್ಧನಗಿರಿಧಾರಿಯಾಗಿ ಹೇಗೆ ಕಾಪಾಡಿದ ಎಂದು ಪೆರಿಯಾಳ್ವಾರರ ತಿರುಮೊಳಿಯಲ್ಲಿ (3–5–2 ಮತ್ತು 3) ಕಾಣಬಹುದು.

ಅಮ್ಮೈತಡಂಕಣ್ ಮಡಆಯ್ಚಿ ಯರುಂ ಆನಾಯರುಂ ನಿರಯುಂ ಅಲರಿಎಮ್ಮೈ ಶರಣಿನ್ರು ಕೊಳ್ಳೆನ್ರಿರುಪ್ಪ.....

ಗೋಪಿಯರುಂ ಗೋವಳರುಂ ಗೋಮಂದೆಗಳುಂ ಅರಚುತ್ತೆ ನಮ್ಮನ್ನು ಶರಣಾಗತರಾಗಿ ಬಂದವರೆಂದುಕೊಳ್ಳಿರಯ್ಯ ಎಂದು ಬೇಡುತಿರೆ.... ಮತ್ತು

> ವಳವೊನ್ನುಮಿಲ್ಲಾ ಶೇಯ್‌ಗೈ ವಾನವರ್‌ಗೋನ್
> ವಲಿ ಪಟ್ಟು ಮುನಿಂದು ವಿಡುಕ್ಕಪಟ್ಟ ಮಳೈವೊಂದು ಏಳುನಾಳ್
> ಪೆಯ್ದುಮಾತ್ತಡುಪ್ಪ ಮಧುಸೂದನನ್ ಎಡುತ್ತು ಮರಿತ್ತಮಲೈ....

ತಡೈಯೊಂದುಮಿಲ್ಲದಿಹಕೈಗಳ ದೇವತೆಗಳೊಡೆಯ ನೋವನನುಭವಿಸಿ ಮುನಿದು ಕಳುಹಿದ ಮಳೆಬಂದು 7 ದಿನ ಸುರಿಯೆ ತಡೆದು ನಿಲ್ಲಿಸಿದ ಮಧುಸೂದನನು ಎತ್ತಿ ಬುಡಮೇಲುಗೈದ ಪರ್ವತವು.

ಪುರಾಣದಲ್ಲಿ ತ್ರಾಹಿತ್ರಾಹಿ ಎಂಬ ಶಬ್ದವು ದ್ರಾವಿಡವೇದದಲ್ಲಿ ಶರಣೆನ್ರು ಎಂದಿದೆ.

इन्द्रेण चोदिता ಎನ್ನುವುದನ್ನು ವಾನವರ್‌ಗೋನ್‌ವಲಿಪಟ್ಟು ಮುನಿಂದು ಎಂದಿದೆ.

ಈ ರೀತಿಯಾಗಿ ಆಶ್ರಿತ ವಾತ್ಸಲ್ಯಮಯಿ ಭಗವಂತನ ಚರಿತ್ರೆಯನ್ನು ಎಲ್ಲಾ ಪುರಾಣಗಳಲ್ಲೂ ದ್ರಾವಿಡ ವೇದದಲ್ಲೂ ಕಾಣಬಹುದು.

ಮಾರ್ಕಂಡೇಯ ಚರಿತ್ರೆ ಎಲ್ಲರಿಗೂ ವಿದಿತವಾದುದು. ಅವನು ಶಿವನ ಪರಮಭಕ್ತ. ಹೇಗೆ ಅವನು ಮೃತ್ಯುವನ್ನು ಗೆದ್ದ ಅದಕ್ಕೆ ಯಾರು ಕಾರಣವೆಂದು ನರಸಿಂಹ ಪುರಾಣದ (7ನೇ ಅಧ್ಯಾಯ 75ನೇ ಶ್ಲೋಕ) ಮಾರ್ಕಂಡೇಯ ಚರಿತ್ರೆಯ ಕೊನೆಯ ಶ್ಲೋಕದಲ್ಲಿ ಉಲ್ಲೇಖವಿದೆ. ಪರಮಭಾಗವತನಾದ ಶಿವನು ನಾರಾಯಣನನ್ನು ಕುರಿತು ತಪಸ್ಸು ಮಾಡಲು ಹೋಗುವಾಗ ತನ್ನ ಭಕ್ತನಾದ ಮಾರ್ಕಂಡೇಯನಿಗೆ ನಾರಾಯಣನನ್ನು ನೆನೆ ಎಂದು ಹೇಳುತ್ತಾನೆ. ನಂತರ ಮಾರ್ಕಂಡೇಯನು ತಾನು ಶ್ರೀಮನ್ನಾರಾಯಣನಿಂದ ಕಾಪಾಡಲ್ಪಟ್ಟನೆಂದು ಅರಿಯುತ್ತಾನೆ.

हृत्पद्ममध्ये पुरुषं पुराणं नारायणं शाश्वतमादिदेवम् ।
सञ्चिन्त्य सूर्यादतिराजमानं मृत्युं स योगी जितवान् तथैव ॥

ಹೃದಯ ಕಮಲದಲ್ಲಿರುವ ನಾರಾಯಣನನ್ನು ಚಿಂತನೆ ಮಾಡಿ ಆ ಯೋಗಿಯಾದ ಮಾರ್ಕಂಡೇಯನು ಮೃತ್ಯುವನ್ನು ಜಯಿಸಿದನು.

ಇದನ್ನೇ ನಮ್ಮಾಳ್ವಾರರ ತಿರುವಾಯ್ ಮೊಳಿ (4–10–8) ಯಲ್ಲಿ
ಪುಕ್ಕಡಿಮೈಯಿನಾಲ್ ತನ್ನೈ ಮಾರ್ಕಂಡೇಯನವನ್ನೈ
ನಕ್ಕಪಿರಾನುಂ ಅನ್ರುಯ್ಯಕೂಂಡದು ನಾರಾಯಣನರುಳೇ
ಹೂಕ್ಕುದಾಸ್ಯದಿಂ ತನ್ನ ಕಂಡ ಮಾರ್ಕಂಡೇಯನವನನು
ದಿಗಂಬರನುಂ
(ಶಿವ) ಅಂದು ಉದ್ಧಾರಗೈದುದು ನಾರಾಯಣನ ಕೃಪೆಯೇ

ಶ್ರೀಮನ್ನಾರಾಯಣನ ಕೃಪೆಗೆ ಪಾತ್ರರಾಗದವರಾರು? ಅಂತಹ ಪರಮಾತ್ಮನನ್ನು ಹೃದಯದಲ್ಲಿಟ್ಟುಕೊಂಡಿದ್ದ ಪ್ರಹ್ಲಾದ ಚರಿತ್ರೆಯನ್ನು ನೂಡೋಣ.

ಸದಾನಾರಾಯಣ ಸ್ಮರಣೆಯಲ್ಲೇ ಜೀವಿಸಿದ್ದ ಪ್ರಹ್ಲಾದನು व्यापकात् विष्णु : ಎಂಬಂತೆ ಎಲ್ಲೆಡೆಯಲ್ಲಿಯೂ ಅವನಿರುವನು ಎಂದು ತೋರಿಸಿಕೊಟ್ಟ ಪರಮಭಕ್ತನು.

ಈ ವಿಷಯವನ್ನು ನಮ್ಮಾಳ್ವಾರರ ತಿರುವಾಯ್ ಮೊಳಿ (2.8.9) ರಲ್ಲಿ ಕಾಣಬಹುದು.
ಎಂಗು ಉಳನ್ ಕಣ್ಣನ್ ಎನ್ರು ಮಗನೈಕಾಯಾನ್ದು ಇಂಗಿಲ್ಲೈಯಾಲೆನ್ರು
ಇರಣಿಯನ್ ತೂಣ್ ಪುಡ್ಯೆಪ್ಪ ಅಂಗಪ್ಪೂಳುದೇ ಅವನ್ ವೀಯು
ತೋನ್ರಿಯ
ಎನ್ ಶಿಂಗಪಿರಾನ್ ಪೆರುಮೈ ಆರಾಯಂ ಶೀರ್ಮೈತ್ತೇ
(ಎಲ್ಲಡೆಯಲ್ಲಿಯೂ ಇರುವ ಕೃಷ್ಣ ಎಂದ ಮಗನ ಧಿಕ್ಕರಿಸಿ ಇಲ್ಲಿ ಇಲ್ಲವೇ ಇಲ್ಲ ಎಂದು ಹಿರಣ್ಯನು ಕಂಬವನೊಡೆಯೆ ಅಲ್ಲಿ ಆ ಕ್ಷಣವೇ ಅವನು ಬೀಳುವೂಲು ತೋರ್ದ ಎನ್ನ ಸಿಂಹಸ್ವಾಮಿಯ ಹಿರಿಮೆಯನು ನಿರ್ಣಹಿಸೆ ಸಾಧ್ಯಮೇ?)

ಈ ಸಂದೇಶವನ್ನು ನರಸಿಂಹ ಪುರಾಣದ ಹರ್ರ್ಯವತಾರಾದಿ ನಿರೂಪಣಂನ 44 ನೇ ಅಧ್ಯಾಯದ 10 ರಿಂದ 13 ಶ್ಲೋಕಗಳಲ್ಲಿ ಕಾಣಬಹುದು.

यदि पश्यामितंविष्णुमधुना स्तम्भमध्यगं ।
तर्हि त्वं न वधिष्यामि भविष्यति द्विधाऽन्यथा ॥
तावत्प्रस्फुटित स्तम्भोविक्षीतो दैत्यसूनुना ।
आदर्शरुपे दैत्यस्य खङ्गजः यः प्रतिष्ठितः ॥

ಇಲ್ಲಿ ಪ್ರಹ್ಲಾದನಿಗೆ ಕಂಬದಲ್ಲಿ ನರಸಿಂಹ ಕಾಣಿಸಿದರೆ ಹಿರಣ್ಯಕಶಿಪುವಿಗೆ ತನ್ನ ಖಡ್ಗದ ತುದಿಯಲ್ಲೇ ಕಂಡನು.

ಹಿರಣ್ಯಕಶಿಪು ಮಾರೀಚ ಅಂಥಹವರು ಪರಮಾತ್ಮನನ್ನು ಯಮನಂತೆ ಕಂಡರು. ಆದರೆ ಕೆಲವರು ಕಾಣದೆಯೇ ಹೋಗುತ್ತಾರೆ. ಅವರಿಗೇನನ್ನಬೇಕು? ಮನುಷ್ಯ ಜೀವನ ಶಾಶ್ವತವಾದುದಲ್ಲ. ತಾರುಣ್ಯದಲ್ಲಿ ಆಧ್ಯಾತ್ಮಿಕ ಗಂಧವಿಲ್ಲದವರು ತಮಗೆ ಇಷ್ಟ ಬಂದಹಾಗೆ ನಡೆದುಕೊಳ್ಳುತ್ತಾರೆ. ಆದರೆ ವದ್ಧಾಪ್ಯದಲ್ಲಿ ಅವರ ಕಷ್ಟ ಹೇಳತೀರದು. ಈ ವಿಷಯವನ್ನು ಶ್ರೀವಿಷ್ಣುಪುರಾಣ (6–5–4–41) ದಲ್ಲಿ ಹೀಗೆ ಹೇಳಿರುತ್ತಾರೆ.

संशुष्यमाण ताल्वोष्ठपुटो घुरधुरायते ।
निरुद्धगुणो दोषोघैः उदानश्वासपीडितः ॥

(ತುಟಿ ದವಡೆಗಳು ಒಣಗುವುವು ಈತನು ಘುರ್‌ಘುರ್ ಎಂದು ಶಬ್ದ ಮಾಡುತ್ತಿರುವನು. ಏಕೆಂದರೆ ಶ್ಲೇಷ್ಮಾದಿ ದೋಷಗಳಿಂದ ಕಂಠದೇಶವು ಕಟ್ಟಿಕೊಳ್ಳುವುದು. ಉದಾನವಾಯುವಿನಿಂದ ಮೇಲುಸಿರಿನ ಬಾಧೆಗೆ ಒಳಗಾಗುವನು.)

ಇದನ್ನೇ ನಮ್ಮಾಳ್ವಾರರ ತಿರುವಾಯ್ ಮೊಳಿ(1.3.6) ಯಲ್ಲಿ ಏಯ್ತ್ತ
ಶೊಲ್ಲೋಡು ಈಳೈ ಏಂಗಿ ಇರುಮಿ ಇಳೈತ್ತು ಉಡಲುಂ
ಪಿತ್ತರ್ಪೋಲ ಚಿತ್ತಮ್ ವೇರಾಯ್ ಎಂದು ಹೇಳಿದ್ದಾರೆ.

(ಬಲಹೀನ ಮಾತು ಕಫವು ಬಂದು ತಂಗಲು ಕೆಮ್ಮಿ ಶರೀರವು ಕೃಶವಾಗಿ ಹುಚ್ಚು ಹಿಡಿದವರ ಹಾಗೆ ಆಗುತ್ತಾನೆ.)

ಈ ರೀತಿಯ ಕಷ್ಟಗಳಿಗೆ ಪರಿಹಾರ ಉಂಟೆ? ಹೌದು ಎಂದು ವಿಷ್ಣುಪುರಾಣದಲ್ಲಿ (1.17.70,78) ಹೇಳಿದೆ.

भवतां कथ्यते सत्यं विष्णुरेकः परायणम् ।
प्रयासः स्मरणे कोऽस्य स्मृतोयच्छति शोभनम् ।
पापाक्षयश्च भवति स्मरतां तमहर्निशम् ।

ಎಲ್ಲರ ಕಷ್ಟವನ್ನು ನೀಗಲು ಸಮರ್ಥನೊಬ್ಬನೆ ಇದ್ದಾನೆ ಅವನೇ ವಿಷ್ಣು. ಅವನನ್ನು ಧ್ಯಾನಿಸಲು ಪ್ರಯಾಸವೇಕೆ? ಅಹರ್ನಿಶಿ ಅವನ ಸ್ಮರಣೆಯಿಂದ ಸಂಚಿತ ಪಾಪವೂ ನಶಿಸುತ್ತದೆ ಮತ್ತು ಶುಭವುಂಟಾಗುತ್ತದೆ. ಈ ವಿಷಯವನ್ನು ನಮ್ಮಾಳ್ವಾರರ ತಿರುವಾಯ್ ಮೊಳಿ (4.6.9) ರಲ್ಲಿ ಹೀಗೆ ಹೇಳಿದೆ.

ಏಳ್ಪ್ರೈ ಪಿರಪ್ಪುಕ್ಕುಂ ಶೇಮಮ್ ಇನೋಯ್‌ಕ್ಕು ಈದೇ ಮರಂದು
ಊಳ್ಪ್ರೈಯಿನ್ ಕಣ್ಣ ಪಿರಾನ್ ಕಳಲ್ ವಾಳ್‌ತುಮಿನ್ ಉನ್ನಿತ್ತೇ

ಏಳೇಳು ಜನ್ಮಗಳಿಗುಂ ಕ್ಷೇಮಮಾಗಿರ್ಪ ಈ ವ್ಯಾಧಿಗಿದೇ ಔಷಧವು. ಕೃಷ್ಣ ಪರಮಾತ್ಮನ ಪಾದಗಳ ಮಂಗಳಾಶಾಸನವ ಮಾಡಿರೋ ಧ್ಯಾನಿಸುತ.

ಪರಮಾತ್ಮನ ಲೀಲೆ ಅಪಾರವಾದುದು. ಅದನ್ನು ಅರಿತುಕೊಳ್ಳಲು ಕಷ್ಟಸಾಧ್ಯ. ಮಾರ್ಕಂಡೇಯನು ಶ್ರೀಮನ್ನಾರಾಯಣನನ್ನು ನೋಡಿ "ನಿನ್ನ ಮಾಯೆಯನ್ನು ನೋಡಬೇಕು" ಎನ್ನುತ್ತಾನೆ. ಆನಂತರ ಒಮ್ಮೆ ಶ್ರೀಹರಿಯನ್ನೇ ಧ್ಯಾನಮಾಡುತ್ತಿರಲಾಗಿ ಬಿರುಗಾಳಿಯಲ್ಲಿ ಸಿಲುಕಿ ಪ್ರವಾಹದಲ್ಲಿ ತೇಲುತ್ತಾ ಮುಳುಗುತ್ತಾ ಮೂರ್ಛೆಗೂಂಡು ಅನೇಕ ಸಂವತ್ಸರಗಳು ಕಳೆಯುತ್ತವೆ. ತರುವಾಯ ಆ ಮುನಿಯು ಎತ್ತರವಾದ ಒಂದು ಭೂಪ್ರದೇಶದಲ್ಲಿ ಬಂದಾಗ ಒಂದು ವಟವೃಕ್ಷದ ಪತ್ರದಲ್ಲಿ ಮಲಗಿರುವ ಒಂದು ಶಿಶುವನ್ನು ಕಂಡನು.

न्यग्रोधपोतं ददृशोफलपल्लवशोभितम् ॥
प्रागुत्तरस्यां शाखायां तस्यापि ददृशे शिशुम् ।
महामरकतश्यामम् श्रीमद्वदनपङ्कजम् ॥ भाग.पु. (12.9.20.21)

ಸುಂದರಬಾಲಕನ ದರ್ಶನದಿಂದ ನಷ್ಟವಾದ ಆಯಾಸವುಳ್ಳವನಾಗಿ ಬಾಲಕನನ್ನು ಪ್ರಶ್ನಿಸಲು ಸಮೀಪಕ್ಕೆ ಹೋದನು.

ಅಷ್ಟರಲ್ಲಿ ಆ ಬಾಲಕನ ಉಛ್ವಾಸದಿಂದ ಮಶಕದಂತೆ ಅವನ ಶರೀರದಲ್ಲಿ ಪ್ರವೇಶಿಸಿ ಆ ಮಗುವಿನ ಹೊಟ್ಟೆಯಲ್ಲಿ ಪ್ರಳಯಕ್ಕಿಂತಲೂ ಪೂರ್ವದಲ್ಲಿ ಯಾವ ರೀತಿ ಇದ್ದಿತೋ ಆ ರೀತಿಯಲ್ಲಿರುವ ಸಕಲ ಪ್ರಪಂಚವನ್ನು ನೋಡಿ ಅತ್ಯಾಶ್ಚರ್ಯ ಪರವಶನಾದನು. ಈರೇಳು ಲೋಕಗಳನ್ನು ಸಮುದ್ರಪರ್ವತಗಳನ್ನೂ ಪ್ರಪಂಚವನ್ನೆಲ್ಲಾ ಅಲ್ಲಿ ಕಂಡನು. ಆ ಭಗವಂತನನ್ನು ಅಪ್ಪಿಕೂಳ್ಳಬೇಕೆಂದು ಬಯಸಿದಾಗ ಆ ಮೂರ್ತಿ ಅಂತರ್ಧಾನವಾಯಿತು.

ಈ ವಿಚಾರವನ್ನು ದ್ರಾವಿಡ ಪ್ರಬಂಧದಲ್ಲಿ ತಿರುಪ್ಪಾಣಾಳ್ವಾರರ ಅಮಲನಾದಿಪಿರಾನ್ ಎಂಬ ಪ್ರಬಂಧದಲ್ಲಿ ಕಾಣಬಹುದು. ಪಾಣರ್ ಕುಲದವರು ಪಂಚಮರು. ಅವರಿಗೆ ದೇವಸ್ಥಾನದಲ್ಲಿ ಪ್ರವೇಶವಿರಲಿಲ್ಲ. ಬೀದಿಯಲ್ಲಿ ಹಾಡಿಕೊಂಡು ಹೋಗುವವರು.

ಒಮ್ಮೆ ಶ್ರೀರಂಗದಲ್ಲಿ ಕಾವೇರಿ ನದಿಯಲ್ಲಿ ಪ್ರಾತರಾಹ್ನಿಕಗಳನ್ನು ಮಾಡಲು ಲೋಕಸಾರಂಗ ಮುನಿಗಳು ಬರುತ್ತಾರೆ. ರಂಗನಾಥನಲ್ಲೇ ಮೈಮರೆತು ಹಾಡುತ್ತಿರುವ ಪಾಣರನ್ನು ಸಾರಂಗರು ದೂರ ಸರಿ ಎನ್ನುತ್ತಾರೆ.ಪರಮಾತ್ಮನಲ್ಲಿಯೇ ಲಗ್ನವಾದ ಮನಸ್ಸುಳ್ಳ ಅವರಿಗದು ಕೇಳಿಸಲಿಲ್ಲ. ಸಾರಂಗರ ಶಿಷ್ಯರು ಅವರನ್ನೆಚ್ಚರಿಸಲು ಒಂದು ಕಲ್ಲಿನಿಂದ ಅವರಿಗೆ ಹೊಡೆದರು. ಅವರ ತಲೆಗೆ ಕಲ್ಲು ತಾಗಿ ರಕ್ತ ಹರಿಯಿತು.

ಆ ಮುನಿಗಳು ಆಹ್ನಿಕಗಳನ್ನು ಮುಗಿಸಿಕೊಂಡು ರಂಗನಾಥನಲ್ಲಿಗೆ ಬಂದು ನೋಡಿದಾಗ ರಂಗನಾಥನ ಹಣೆಯಿಂದ ರಕ್ತ ಹರಿದು ಬರುತ್ತಿರುತ್ತದೆ. ಇದನ್ನು ಕಂಡು ಭಯಭೀತರಾದ ಲೋಕಸಾರಂಗ ಮುನಿಗಳು ರಂಗನಾಥನಲ್ಲಿ ಪರಿಹಾರವೇನೆಂದು ಕೇಳಿದಾಗ ಪರಮಾತ್ಮನು ಆ ಪಾಣನನ್ನು ನಿನ್ನ ಹೆಗಲಮೇಲಿರಿಸಿಕೊಂಡು ನನ್ನ ದರ್ಶನ ಮಾಡಿಸು ಎಂದನು. ಆಗ ಅವರು ಪಾಣಕುಲದ ಭಕ್ತನನ್ನು ತನ್ನ ಹೆಗಲ ಮೇಲೆ ಬಿಜಯಮಾಡಿಕೊಂಡು ಶ್ರೀರಂಗನಾಥನ ಸನ್ನಿಧಿಗೆ ಆಗಮಿಸುತ್ತಾರೆ. ಮುನಿಯ ಹೆಗಲನ್ನು ವಾಹನವನ್ನಾಗಿ ಉಳ್ಳದ್ದರಿಂದ ಪಾಣರಿಗೆ ಮುನಿವಾಹನ ಎಂಬ ಹೆಸರು ಬರುತ್ತದೆ.

ಶ್ರೀರಂಗನಾಥನನ್ನು ನೋಡಿ ಆಳ್ವಾರರು ಭಕ್ತಿಪರವಶದಿಂದ
ಆಲಮಾಮರತ್ತಿನ್ ಇಲೈಮೇಲ್ ಒರು ಬಾಲಕನಾಯ್
ಜ್ಞಾನಮೇಳುಮುಂಡಾನ್ ಅರಂಗತ್ತರವಿನಣೈಯಾನ್
ಕೋಲಮಾಮಣಿಯಾರಮುಂ ಮುತ್ತುತ್ತಾಮಮುಮ್
ಮುಡಿವಿಲ್ಲದೋರೆಳಿಲ್,ನೀಲಮೇನಿಐಯ್ಯೋನಿರೈಕೊಂಡದ್
ಏನ್ನೆಂಜಿನೈಯೇ

ಎಂದು ತಾವು ಹಾಡಿದ ಹತ್ತೇ ಶ್ಲೋಕಗಳ ಪ್ರಬಂಧದಲ್ಲಿ 9ನೇ ಶ್ಲೋಕದಲ್ಲಿ ಹೀಗೆ ಹೇಳುತ್ತಾರೆ.

ಅಂದು ಮಾರ್ಕಂಡೇಯನಿಗೆ ಹೊರಗೆ ನಿಂತು ನಿನ್ನ ಮಾಯೆ ತೋರಿಸಿ ಲೋಕವೆಲ್ಲ ಇದನ್ನು ತಿಳಿಯಲೆಂದು ಅವನನ್ನು ಹೊರಗಿರಿಸಿದೆ. ಇಂದು ಶ್ರೀರಂಗದಲ್ಲಿ ಅದೇ ವಟಪತ್ರಶಾಯಿಯಾದ ನೀನು ಶ್ರೀರಂಗನಾಥನಾಗಿ ಮಲಗಿರುವೆಯಾ? ಎನ್ನುತ್ತಾರೆ.

ಅಘಟಿತ ಘಟನಾ ಸಾಮರ್ಥ್ಯವನ್ನು ಪ್ರಕಾಶಪಡಿಸಲು ಅಂದು ಆ ಮಾರ್ಕಂಡೇಯನಿಗೆ ಅನುಗ್ರಹಮಾಡಿ ಪ್ರಳಯ ದರ್ಶನ ಮಾಡಿಸಿ ತೋರ್ಪಡಿಸಿಕೊಂಡೆ. ನನಗೆ ಮುನಿವರರನ್ನು ಕಳುಹಿಸಿ ತೋರಿಸಿಕೊಂಡೆಯಾ? ಎನ್ನುತ್ತಾರೆ. ಅವರು ಶ್ರೀರಂಗನಾಥನ ದರ್ಶನವನ್ನು ಮೊದಲ ಬಾರಿ ಮಾಡಿದರು ಹತ್ತು ಪಾಶುರಳನ್ನು ಹಾಡಿದರು. "ಕಾಟ್ಟವೇ ಕಂಡಪಾದಕಮಲಮ್ ನಲ್ಆಡೈ ಉಂದಿ, ತೇಟ್ಟರುಮುದರಬಂದಮ್ ತಿರುಮಾರ್ವುಕಂಡಮ್ಮೈವ್ವಾಯ್" ಎಂಬಂತೆ ಶ್ರೀರಂಗನ ಪಾದಪದ್ಮಗಳನ್ನು ಚತುರ್ಭುಜಗಳನ್ನು ಕಂಡೊಡನೆ ಸಾಕ್ಷಾತ್ಕಾರ ಮಾಡಿಕೊಂಡರು. ಕೊನೆಯಲ್ಲಿ ಎನ್ನಮುದಿನೈ ಕಂಡಕಣ್ಣಳ್ ಮತೊನ್ರಿನೈ ಕಾಣಾವೇ (ನಿನ್ನನ್ನು ಕಂಡ ಕಂಗಳು ಮತ್ತೊಂದನ್ನು ನೋಡವು) ಎಂದು ಭಗವಂತನಲ್ಲಿ ಐಕ್ಯವಾದರು. "ಕಂಗಳಿನ್ಯಾತಕೋ ಕಾವೇರಿರಂಗನ ನೋಡದ" ಎಂಬ ದಾಸರ ಪದಗಳಂತೆ ಇಲ್ಲಿ ಕಂಗಳವೆನ್ನು ನೋಡಿ ಮುಕ್ತಿಹೊಂದಿದ ಮಹಾತ್ಮರು ಈ ತಿರುಪ್ಪಾಣ್ ಆಳ್ವಾರರು.

ಆಳ್ವಾರ್ಗಳಲ್ಲಿ ಹೆಣ್ಣಾಗಿ ಇರುವವಳೊಬ್ಬಳೇ. ಅವಳೇ ಆಂಡಾಳ್ ಎಂದು ಗೋದಾ ಎಂದು ವಿಷ್ಣು ಚಿತ್ತಾತ್ಮಜಾ ಎಂದು ಪ್ರಸಿದ್ಧಳಾಗಿದ್ದಾಳೆ ಇವಳ ತಿರುಪ್ಪಾವೈ ಎಂಬ 30 ಪಾಶುರಗಳ ಪ್ರಬಂಧ ನಿತ್ಯಾನುಸಂಧಾನವಾಗಿದೆ. ಭಾಗವತ ಪುರಾಣದಲ್ಲಿ ಗೋಪಿಕೆಯರು(10–22–4)

नन्दगोपसुतं देवि पतिं मे कुरु ते नमः ಎಂದು.

ಕಾತ್ಯಾಯನೀ ವ್ರತವನ್ನಾಚರಿಸುತ್ತಾರೆ. ಅದೇ ಗೋಪೀ ಭಾವದಲ್ಲಿ ಆಂಡಾಳ್ ಕೃಷ್ಣನನ್ನು ಪತಿಯನ್ನಾಗಿ ಪಡೆಯಲು ವ್ರತಮಾಡುವುದಕ್ಕಾಗಿ "ಕೂಡಿ ಇರುಂದು ಕುಳಿರ್ನ್ದ್" ಎಂಬಂತೆ ತನ್ನೆಲ್ಲಾ ಗೆಳತಿಯರನ್ನೂ ಕರೆದೆಬ್ಬಿಸುತ್ತಾಳೆ. ಅದನ್ನೇ ಮೊದಲ ಪಾಶುರದಲ್ಲಿ ಮಾರ್ಗಳಿ ತಿಂಗಳ್
ಮದಿನಿರೈಂದ ನನ್ನಾಳಾಲ್ ನೀರಾಡಪ್ಪೋದುವೀರ್
ಪ್ಪೋದುಮಿನೋನೇರಿಳೈಯೀರ್ ಶೀರ್ ಮಲ್ಗುಮ್ ಆಯಪ್ಪಾಡಿ ಶೆಲ್ವ
ಚ್ಚಿರುಮೀರ್ಗಾಳ್ ಕೂರ್ವೇಲ್ ಕೊಡುಂತೊಳಿಲನ್ ನಂದಗೋಪನ್
ಕುಮರನ್.....ನಾರಾಯಣನೇ ನಮಕ್ಕೇ ಪರೈತರುವಾನ್ ಎಂದು ಹಾಡಿದ್ದಾಳೆ.

ನಾರಾಯಣನೇ ಪರಬ್ರಹ್ಮ ಆದ್ದರಿಂದ ಅವನನ್ನು ಪಡೆಯಲು ಅವನೇ ನಮಗೆ ಕೈಂಕರ್ಯಗಳನ್ನೊದಗಿಸುತ್ತಾನೆ, ಎಲ್ಲರೂ ಬನ್ನಿರಿ ವ್ರತಾನುಷ್ಠಾನಕ್ಕೆ ಎಂದು ಇದರ ಅರ್ಥ.

ಅಂಡಾಳ್ ಅನುಗ್ರಹಿಸಿದ ಈ ಪ್ರಬಂಧದಲ್ಲಿ ಒಂದೊಂದು ಪದಕ್ಕೂ ಗೂಢಾರ್ಥಗಳಿವೆ. ಇದೇ ತಿರುಪ್ಪಾವೈನ 5ನೇ ಪಾಶುರದಲ್ಲಿ ತಾಯ್ಯೈಕುಡಲ್ ವಿಳಕ್ಕಂ ಶೈದ ದಾಮೋದರನ್ನೈ ಎಂದು ಮಾರ್ಮಿಕವಾಗಿ ದಾಮೋದರನಾಗಿ ತಾಯಿ ಯಶೋದೆಗೆ ಸಂತಸ ತಂದ ಎಂದು ಹೇಳಿದೆ. ಅವಳ ಸಂತೋಷಕ್ಕಾಗಿ ಪುಟ್ಟ ಬಾಲನಂತೆ ಅವಳಿಗೆ ಕಟ್ಟುಬಿದ್ದನು. ಇದನ್ನು ವಿವರವಾಗಿ ಮಧುರಕವಿ ಆಳ್ವಾರರು ತಮ್ಮ ಕಣ್ಣಿನುಣ್ ಶಿರುತ್ತಾಂಬು ಎಂಬ ಪ್ರಬಂಧದ ಮೊದಲ ಪಾಶುರದಲ್ಲಿ ಹೀಗೆ ಹೇಳಿದ್ದಾರೆ. ಕಣ್ಣಿನುಣ್ ಶಿರುತ್ತಾಂಬಿನಾಲ್ ಕಟ್ಟುಣ್ಣಪ್ಪಣ್ಣಿಯ ಪೆರುಮಾಯನ್ ಎಂದು. ಚಿಕ್ಕ ಚಿಕ್ಕ ಗಂಟುಗಳನ್ನುಳ್ಳ ನುಣುಪಾದ ಚಿಕ್ಕ ಹಗ್ಗದಿಂದ ತನ್ನನ್ನು ತಾನೇ ಕಟ್ಟಿಸಿಕೂಳ್ಳುವ ರೀತಿಯಲ್ಲಿ ವಶನಾದ ಹಾಗೂ ಆಶ್ಚರ್ಯಚೇಷ್ಟಿತನಾದ ಸ್ವಾಮಿ ಶ್ರೀಕೃಷ್ಣ ಇದನ್ನೇ ವಿಷ್ಣು ಪುರಾಣ (5–6–13–,14) ರಲ್ಲಿ ಹೀಗೆ ಹೇಳಿದೆ.

शशाक नो वारयितुं कीडन्तावति चञ्चलौ ।
दाम्ना मध्ये ततो बद्ध्वा बबन्ध तमुलूखले ॥

ಅವನ ತುಂಟತನವನ್ನು ತಡೆಯಲಾರದೆ ಆಟವಾಡುತ್ತಿದ್ದ ಆ ಕೃಷ್ಣನ ಸೊಂಟಕ್ಕೆ ಹಗ್ಗವನ್ನು ಕಟ್ಟಿ ಒಂದು ಒರಳುಕಲ್ಲಿಗೆ ಬಂಧಿಸಿದಳು.

ಇದನ್ನು ಭಾಗವತ ಮಹಪುರಾಣದಲ್ಲಿ (10–9–14 ರಿಂದ 17) ಹೀಗೆ ಹೇಳಿದೆ.

तं मत्वात्मजमव्यक्तं मर्त्यलिङ्गमधोक्षजम् ।
गोपिकोलूखले धाम्ना बबन्ध प्राकृतं यथा ॥
तददाम बध्यमानस्य स्वार्भकस्य कृतागसः ॥
द्व्यङ्गुलोनमभूत्तेन सन्दधेऽन्यच्छ गोपिका ॥

ಮಗನೆಂದು ತಿಳಿದು ಆ ಪರಮಾತ್ಮನಾದ, ಅವ್ಯಕ್ತ ಅಧೋಕ್ಷಜನನ್ನು ಒರಳಿಗೆ ಕಟ್ಟು ಹಾಕಿದಳು ಪ್ರಾಕೃತ ಶಿಶುವಿನಂತೆ. ಕಟ್ಟಲು ಹೋದಾಗ ಹಗ್ಗ 2 ಅಂಗುಲ ಕಡಿಮೆ ಆಯಿತು. ಮತ್ತೆ ಒಂದು ಚಿಕ್ಕ ಹಗ್ಗವನ್ನು ಸೇರಿಸಿದಳು ಮತ್ತೆ 2 ಅಂಗುಲ ಚಿಕ್ಕದಾಯಿತು. ಹೀಗೇ ಮಾಡುತ್ತಿರಲು ಎಲ್ಲರೂ ನಗಲಾಗಿ ತಾಯಿ ಯಶೋದೆಯ ಪ್ರಯತ್ನವನ್ನು ಕಂಡು ಕನಿಕರಗೊಂಡು ತನಗೆ ತಾನೇ ಕಟ್ಟಿಗೊಳಗಾದನು.

ಇಂತಹ ಕೃಷ್ಣನ ಲೀಲೆಗಳು ಅಪಾರವಾಗಿವೆ. ಪರಂಧಾಮನಾಗಿಯೂ ಶ್ರೀಮನ್ನಾರಾಯಣನು ಈ ರೀತಿ ವಿಭವಾವತಾರಗಳಲ್ಲಿ ಬಂದು ಪ್ರಕೃತಿಯಲ್ಲಿರುವ ಜನರಿಗೆ ಅನುಭವ ಕೂಟ್ಟಿರುವುದು ಅದ್ಭುತವೇ ಸರಿ.

ಈ ರೀತಿ ವೇದದಲ್ಲಿ ಹೇಳಿರುವ ಹಾಗೆ वाङ्मनसातिभूमिः ಆ ಪರಮಾತ್ಮ ಆದರೆ ದ್ರಾವಿಡ ವೇದದಲ್ಲಿ ಪುರಾಣಗಳಲ್ಲಿ वाड्मनसैकभूमिः ಏಕೆಂದರೆ ಗೋಪಿಯರಿಗೆ, ಭಕ್ತರಿಗೆ ಸುಲಭನು. ಈ ರೀತಿಯಾದ ಕೃಷ್ಣನ ಚರಿತ್ರೆಗಳನ್ನು ಹಾಡಿ ಹೊಗಳಿ ಕೃತಾರ್ಥರಾಗೋಣ.

कृष्णाय वासुदेवाय देवकीनन्दनाय च
नन्दगोपकुमाराय श्रीधराय नमो नमः

॥ सर्वं श्रीकृष्णार्पणमस्तु ॥

❑

ಹರಿವಂಶ

—ಪ್ರೊ. ಎಂ.ಎನ್. ಚಂದ್ರಶೇಖರ

ಹೀಗೆ ಹರಿಹರರಲ್ಲಿ ಭೇದವಿಲ್ಲವೆಂಬ ಭಾವನೆಯನ್ನು ತೋರಿಸಿಕೊಡುವ ಪುರಾಣವೇ ಹರಿವಂಶ. ವೇದಗಳು ಅನಂತವಾಗಿದ್ದರೂ, ಅವು ಸಾರುವ – ಭೋರ್ಗರೆಯುತ್ತಿರುವ ಧ್ವನಿ “ಏಕಂ ಸತ್ ವಿಪ್ರಾ ಬಹುಧಾವದಂತಿ” ಎಂದು. ಇಂತಹ ಸುಂದರವಾದ ಹೃದಯಸ್ಪರ್ಶಿಯಾದ ಮಾತನ್ನೇ ಕವಿಕುಲಗುರು ಕಾಳಿದಾಸ “ಏಕೈವ ಮೂರ್ತಿಃ ಬಿಭಿಧೇ ತ್ರಿಧಾ ಸಾ” ಎಂದು ತನ್ನ ಕಾವ್ಯ, ನಾಟಕಗಳಲ್ಲಿ ತೋರಿಸಿದ್ದಾನೆ. ಈ ಹಿನ್ನಲೆಯಲ್ಲಿ ಹರಿವಂಶದ ಮಹತ್ವವನ್ನು ಈ ಲೇಖನ ನಿರೂಪಿಸುತ್ತದೆ.

ನಾರಾಯಣಂ ನಮಸ್ಕೃತ್ಯ ನರಂ ಚೈವ ನರೋತ್ತಮಮ್
ದೇವೀಂ ಸರಸ್ವತೀಂ ಚೈವ ತತೋ ಜಯಮುದೀರಯೇತ್ ॥

ಪಾಯಾತ್ ಕುಮಾರಜನಕಃ ಶಶಿಖಂಡಮೌಳಿಃ
ಶಂಖಪ್ರಭಶ್ಚ ನಿಧನಶ್ಚಗವೀಶಯಾನಃ ।
ಗಂಗಾಂ ಚ ಪನ್ನಗಧರಶ್ಚ ಉಮಾವಿಲಾಸಃ
ಆದ್ಯಕ್ಷರೇಣ ರಹಿತಸ್ಸಹಿತೋಽಪಿದೇವಃ ॥

ಹೀಗೆ ಹರಿಹರರಲ್ಲಿ ಭೇದವಿಲ್ಲವೆಂಬ ಭಾವನೆಯನ್ನು ತೋರಿಸಿಕೊಡುವ ಪುರಾಣವೇ ಹರಿವಂಶ. ವೇದಗಳು ಅನಂತವಾಗಿದ್ದರೂ, ಅವು ಸಾರುವ – ಭೋರ್ಗರೆಯುತ್ತಿರುವ ಧ್ವನಿ "ಏಕಂ ಸತ್ ವಿಪ್ರಾ ಬಹುಧಾವದಂತಿ" ಎಂದು. ಇಂತಹ ಸುಂದರವಾದ ಹೃದಯಸ್ಪರ್ಶಿಯಾದ ಮಾತನ್ನೇ ಕವಿಕುಲಗುರು ಕಾಳಿದಾಸ "ಏಕೈವ ಮೂರ್ತಿಃ ಬಿಭಿಧೇ ತ್ರಿಧಾ ಸಾ" ಎಂದು ತನ್ನ ಕಾವ್ಯ, ನಾಟಕಗಳಲ್ಲಿ ತೋರಿಸಿದ್ದಾನೆ. ಇಂತಹ ರಮಣೀಯ ವಿಷಯವನ್ನು ಸುಲಲಿತವಾಗಿ, ಬಾಲಕರಿಗೂ ಅರ್ಥವಾಗುವಂತೆ ನಮ್ಮ ಪುರಾಣಜ್ಞರು – ಪೂರ್ವಿಕರು "ಆಕಾಶಾತ್ ಪತಿತಂ ತೋಯಂ ಯಥಾಗಚ್ಛತಿ ಸಾಗರಂ, ಸರ್ವ ದೇವ ನಮಸ್ಕಾರಃ ಕೇಶವಂ ಪ್ರತಿಗಚ್ಛತಿ" ಈ ಶ್ಲೋಕದ ಮೂಲಕ ಪ್ರತಿಬಿಂಬಿಸಿದ್ದಾರೆ. ಇಂತಹ ಉಪಯುಕ್ತವಾದ, ವೇದಪ್ರತಿಪಾದ್ಯವಾದ ವಿಚಾರಗಳನ್ನು ತಿಳಿಸುವುದಕ್ಕಾಗಿ, ನಮ್ಮ ಮೇಲಿನ ಕರುಣೆಯಿಂದ ವೇದವ್ಯಾಸರು ಹದಿನೆಂಟು ಪುರಾಣಗಳನ್ನು, ಮಹಾಭಾರತ, ಬ್ರಹ್ಮಸೂತ್ರ, ಭಗವದ್‌ಗೀತೆಗಳನ್ನು ನಮಗೆ ದಯಪಾಲಿಸಿದ್ದಾರೆ. ಕೆಲವು ಸಂದರ್ಭಗಳಲ್ಲಿ ವೇದದ ಅರ್ಥವು ತಿಳಿಯದೆ ಇರಬಹುದು. ಪರಕೀಯರಿಂದ ಆಳಲ್ಪಟ್ಟು ನಾವು ನಮ್ಮ ಹಿರಿಮೆ–ಗರಿಮೆಗಳನ್ನು ಮರೆತುಬಿಟ್ಟಿದ್ದೇವೆ. ಭರದ್ವಾಜ, ವಸಿಷ್ಠ, ಗೌತಮಾದಿ ಋಷಿಪರಂಪರೆಯಲ್ಲಿ ಬಂದಿದ್ದೇವೆ ಎಂಬ ಹೆಮ್ಮೆಯೇ ನಮಗೆ ನಮ್ಮ ಮಕ್ಕಳಿಗೆ ಇಲ್ಲವಾಗಿದೆ. ಕಾಲದ ವೈಪರೀತ್ಯದಿಂದ, ಭವಿಷ್ಯಪರ್ವದಲ್ಲಿ ಹೇಳಿರುವಂತೆ ನಮ್ಮ ನೆನಪಿನ ಶಕ್ತಿಯೇ ಕುಂಠಿತವಾಗುತ್ತಿದೆ. ಅಲ್ಲಿ ಇಲ್ಲಿ ವಿವೇಕಾನಂದ, ಅರಬಿಂದೋ, ಕಾವ್ಯಕಂಠ ಗಣಪತಿಮುನಿ, ದೇವರಾತ, ಗಣೇಶ ಶತಾವಧಾನೀ ನಾಲ್ಕು ವೇದಗಳನ್ನು ಕಂಠಪಾಠ ಮಾಡಿಕೊಂಡಂತಹ ನಮ್ಮ ಕ್ರಮ, ಘನಪಾಠಿಗಳು ಓಯಸಿಸ್ ಹಾಗೆ ನಮ್ಮ ದೇಶದಲ್ಲಿ ಇದ್ದರು, ಇದ್ದಾರೆಂಬುದೇ ಮಹಾನ್ ಸಂತಸದ ವಿಚಾರ. ಅಂದು, ವೇದಗಳು ಎಲ್ಲಿ ಲುಪ್ತವಾಗುತ್ತವೆಯೋ ಎಂಬ ಕಾರಣದಿಂದ ಅನಂತವಾದ ವೇದಗಳನ್ನು ಪ್ರಪಂಚದ ಒಳಿತಿಗಾಗಿ ನಾಲ್ಕು ಭಾಗಗಳನ್ನಾಗಿ ಮಾಡಿದ ಕೃಷ್ಣದ್ವೈಪಾಯನರು "ವಿವ್ಯಾಸ ವೇದಾನ್" ಎಂಬ ಕಾರಣದಿಂದ ಭಗವಾನ್ ವೇದವ್ಯಾಸರೇ ಆದರು. ಪಿಪ್ಪಲ, ವೈಶಂಪಾಯನ, ಸುಮಂತು ಜೈಮಿನಿಯರಿಗೆ ಕೊಟ್ಟು ಮಹದುಪಕಾರ ಮಾಡಿದರು.

ಅವರೇ ವೇದಗಳ ಸಾರವಾದ ಮಹಾಭಾರತವನ್ನು ("ಭಾರತಃ ಪಂಚಮೋ ವೇದಃ") ಪ್ರಪಂಚದ ಒಳಿತಿಗಾಗಿ ದಯಪಾಲಿಸಿದ್ದಾರೆ. ಮಹಾಭಾರತದಲ್ಲಿ 100 ಪರ್ವಗಳಿವೆ ಎಂದು ನಾವು ತಿಳಿದಿದ್ದೇವೆ. ಈ ನಮ್ಮ ಹರಿವಂಶದ, ಹರಿವಂಶಪರ್ವ, ವಿಷ್ಣುಪರ್ವ ಮತ್ತು ಭವಿಷ್ಯಪರ್ವಗಳನ್ನು ಸೇರಿಸಿದಾಗ ಮಾತ್ರ ಭಾರತವು ಆ 100 ಪರ್ವಗಳ ಬೃಹದ್‌ಗ್ರಂಥವಾಗುತ್ತದೆ.

ಧರ್ಮಶಾಸ್ತ್ರಮಿದಂ ಪ್ರೋಕ್ತಂ ಅರ್ಥಶಾಸ್ತ್ರಮಿದಂ ಪರಂ
ಕಾಮಶಾಸ್ತ್ರಮಿದಂ ಪ್ರೋಕ್ತಂ ವ್ಯಾಸೇನಾಮಿತ ಬುದ್ಧಿನಾ ॥

ಹರಿವಂಶವು ಮಹಾಭಾರತದ ಭಾಗವೇ, ಅಲ್ಲವೇ? ಎಂಬ ವಿಚಾರವಾಗಿ ನಾನಾ ವಿಚಾರಧಾರೆಗಳು ವಿದ್ವಾಂಸರ ಮನಸ್ಸಿನಲ್ಲಿ ಏಳುತ್ತಲೇ ಇರುತ್ತವೆ. ಆದರೆ ಹರಿವಂಶಪುರಾಣವು ಇದರ ಅಂಗ ಎಂಬುದಕ್ಕೆ ಗ್ರಂಥದಲ್ಲಿಯೇ ಅನೇಕ ಉದಾಹರಣೆಗಳಿವೆ.

ಹರಿವಂಶಸ್ತತಃ ಪರ್ವ ಪುರಾಣಂ ಖಿಲಸಂಜ್ಞಿತಂ
ವಿಷ್ಣುಪರ್ವ ಶಿಶೋಶ್ಚರ್ಯಾ ವಿಷ್ಣೋಃ ಕಂಸವಧಸ್ತಥಾ ।
ಭವಿಷ್ಯಂ ಪರ್ವ ಚಾಪ್ಯುಕ್ತಂ ಖಿಲೇಷ್ವೇನಾದ್ಭುತಂ ಮಹತ್
ಏತತ್ ಪರ್ವಶತಂ ಪೂರ್ಣಂ ವ್ಯಾಸೇನೋಕ್ತಂ ಮಹಾತ್ಮನಾ ॥

– ಆದಿಪರ್ವ 2.82

ಆದ್ದರಿಂದ ಹರಿವಂಶವು ಭಾರತದ ಖಿಲಭಾಗವೂ ಹೌದು, ಪುರಾಣವೂ ಹೌದು. ವೈಶಂಪಾಯನರು ಜನಮೇಜಯನಿಗೆ ಯಯಾತಿಯ ಕಥೆಯನ್ನು ಹೇಳುವಾಗ ಹಿಂದೊಮ್ಮೆ, ಆದಿಪರ್ವದಲ್ಲಿ ನಿನಗೆ ಈ ಕಥೆ ಹೇಳಿದ್ದೇನೆ. ಈಗ ಮತ್ತೊಮ್ಮೆ ಕೇಳು ಎನ್ನುತ್ತಾರೆ.

ಯಥಾ ತೇ ಕಥಿತಂ ಪೂರ್ವಂ ಮಯಾ ರಾಜರ್ಷಿಸತ್ತಮ (ಹ.30) ಹಾಗೆಯೇ ದುಷ್ಯಂತ – ಶಕುಂತಲೆಯರ ಕಥೆ ಹೇಳುವಾಗ ತ್ವಂ ಚಾಸ್ಯ ಧಾತಾ ಗರ್ಭಸ್ಯ ಸತ್ಯಮಾಹ ಶಕುಂತಲಾ (ಹ.32)

ಶ್ರೀಕೃಷ್ಣನ ಕೈಲಾಸ ಯಾತ್ರೆಯನ್ನು ಆದಿಪರ್ವದಲ್ಲಿ ಸಂಕ್ಷೇಪವಾಗಿ ತಿಳಿಸಿ, ಇಲ್ಲಿ ದೀರ್ಘವಾಗಿ ಕೊಟ್ಟಿದೆ.

ಸರ್ಗಶ್ಚ ಪ್ರತಿಸರ್ಗಶ್ಚ ವಂಶೋ ಮನ್ವಂತರಾಣಿ ಚ ।
ವಂಶಾನುಚರಿತಂ ಚೇತಿ ಪುರಾಣಂ ಪಂಚಲಕ್ಷಣಂ ॥

ಎಂಬಂತೆ, ಈ ಐದು ಲಕ್ಷಣಗಳಿಂದ ಕೂಡಿ, ಹರಿವಂಶವು ಪುರಾಣವಾಗುತ್ತದೆ. ಆದರೆ ಮಹಾಭಾರತವು ಪ್ರಸಿದ್ಧ ಇತಿಹಾಸ ಎಂಬುದಾಗಿ ಯಾರಾದರೂ ಪ್ರಶ್ನಿಸಿದರೆ, ಮಹಾಭಾರತವು ತನ್ನನ್ನು ಪುರಾಣವೆಂದೂ ತಿಳಿಸಿಕೊಟ್ಟಿದೆ.

ಪುರಾಣ ಪೂರ್ಣಚಂದ್ರೇಣ ಶ್ರುತಿಜ್ಯೋತ್ಸ್ನಾಃ ಪ್ರಕಾಶಿತಾಃ ॥

ಇಂತಹ ಹರಿವಂಶವು ಅಸಾಮಾನ್ಯ ಪುರಾಣ. ಶ್ರೇಷ್ಠ ಪುರಾಣ.

ಅಷ್ಟಾದಶ ಪುರಾಣಾನಾಂ ಶ್ರವಣಾತ್ ಯತ್ಫಲಂ ಭವೇತ್ ।
ತತ್ಫಲಂ ಸಮವಾಪ್ನೋತಿ ವೈಷ್ಣವೋ ನಾತ್ರ ಸಂಶಯಃ ॥

ಸೂರ್ಯೋದಯದಿಂದ ಎಲ್ಲ ಕತ್ತಲೆಯು ಧ್ವಂಸವಾಗುವಂತೆ, ಹರಿವಂಶ ಶ್ರವಣದಿಂದ ಕಾಯಿಕ, ವಾಚಿಕ ಮತ್ತು ಮಾನಸಿಕ ಸಮಸ್ತ ಪಾಪಗಳೂ ಭಸ್ಮವಾಗುತ್ತವೆ.

ಶಬ್ದಬ್ರಹ್ಮಮಯಂ ವಿದ್ಧಿ ಹರಿವಂಶಂ ಸನಾತನಂ
ಕಾಯಿಕಂ ವಾಚಿಕಂ ಪಾಪಂ ಮನಸಾ ಸಮುಪಾರ್ಜಿತಂ
ತತ್ಸರ್ವಂ ನಾಶಮಾಯಾತಿ ತಮಃ ಸರ್ಯೋದಯೇ ಯಥಾ ॥

ಈ ಹರಿವಂಶ ಪಾರಾಯಣ ಮಾಡುವ ಎಲ್ಲರೂ ವಿಷ್ಣುವಿನ ಪರಮಪದವನ್ನು ಹೊಂದುತ್ತಾರೆ. ಹೀಗೆ ಅನೇಕ ಫಲಗಳಿದ್ದರೂ ಪುತ್ರಕಾಮರಾದವರಿಗೆ ಇದು ಕಲ್ಪವೃಕ್ಷವೇ ಆಗಿದೆ.

ಸ್ತ್ರೀಭಿಶ್ಚ ಪುತ್ರಕಾಮಾಭಿಃ ಶ್ರೋತವ್ಯಂ ವೈಷ್ಣವಂ ಯಶಃ ॥

ಈ ಹರಿವಂಶ ಅನೇಕ ಸುಂದರ, ಮಾರ್ಮಿಕ ಸನ್ನಿವೇಶವುಳ್ಳ ಕಥೆಗಳ ಕಥಾಸರಿತ್ ಸಾಗರವೇ. ಇನ್ನೆಲ್ಲೂ ಸಿಗದ ಕೃಷ್ಣನ ಬಾಲ್ಯ – ಜೀವನ ಮತ್ತು ಮಹಿಮೆಗಳ ಉಗಮವೇ ಆಗಿದೆ. ಮುಂದಿನ ಭಕ್ತಿಗ್ರಂಥಗಳಿಗೆ ಸೃಷ್ಟಿ, ವಂಶಚರಿತೆ ಮುಂತಾದವುಗಳಿಗೆ ಆಕರಸ್ರೋತವಾಗಿದೆ. ಮನು, ಇಕ್ಷ್ವಾಕು, ನಹುಷ, ಯಯಾತಿ ಭರತಾದಿ ನೂರಾರು ಮಹಾತ್ಮರ ಕಥೆಯನ್ನು ನಮ್ಮ ಕಣ್ಮುಂದೆ ನಿಲ್ಲಿಸುವ, ಅವರ ಶ್ರೇಷ್ಠತೆಯನ್ನು ನಮ್ಮ ಮಕ್ಕಳಿಗೆ ಕೊಡುವ ಉದ್ಬೋಧ ಗ್ರಂಥ. ಪಿತೃದೇವತೆಗಳನ್ನು, ಅವರ ಪ್ರಭಾವ, ಅವರ ಕರುಣೆಯನ್ನು ತೋರಿಸುವ, ಪಿತೃಕರ್ಮದ ವಿಧಿವಿಧಾನಗಳನ್ನು ತೋರಿಸುವ ಮಹಾನ್ ಗ್ರಂಥ ಈ ಹರಿವಂಶ.

ಹರಿವಂಶದ ಎರಡನೇ ಪರ್ವವು ಕೃಷ್ಣನ ಪೂರ್ವಚರಿತೆಯನ್ನೂ, ಕೃಷ್ಣನ ಅತ್ಯಾಕರ್ಷಕ ಬಾಲ್ಯಲೀಲೆ ಅವನ ಸಾಧನೆಗಳನ್ನು, ಅವನ ಪ್ರಕೃತಿ, ಗೋ ಪ್ರೇಮವನ್ನೂ, ಅಮ್ಮ-ಅಪ್ಪಂದಿರ ಬಗ್ಗೆ ಇದ್ದ ಪ್ರೀತಿ, ಜನಗಳ ಮೇಲೆ ಇದ್ದ ವಾತ್ಸಲ್ಯ, ಗುರುಭಕ್ತಿ, ಧರ್ಮಸಂಸ್ಥಾಪನೆಗಾಗಿ ಅವನು ದುಷ್ಟಶಕ್ತಿಗಳೊಡನೆ ನಡೆಸಿದ ಹೋರಾಟವನ್ನು ನಮ್ಮ ಕಣ್ಮುಂದೆ ಎಳೆ ಎಳೆಯಾಗಿ, ಪದರ, ಪದರವಾಗಿ ಬಿಚ್ಚಿಡುತ್ತದೆ.

ಮೂರನೆಯ ಭವಿಷ್ಯಪರ್ವದಲ್ಲಿ ಕೃಷ್ಣನ ಉತ್ತರಕಥೆಯು ಚೆನ್ನಾಗಿ ನಿರೂಪಿಸಲ್ಪಟ್ಟಿದೆ. ದಶ ಅವತಾರ ಕಥೆಗಳೂ, ಯುಗಧರ್ಮ ವಿಚಾರ, ಕಲಿಕಾಲದ ವಿಚಾರಗಳು ಮನಮುಟ್ಟುವಂತೆ ಚಿತ್ರಿಸಲ್ಪಟ್ಟಿದೆ. ಪತಿವ್ರತಾಧರ್ಮ, ವ್ರತಕಥೆಗಳು, ನೀತಿ, ಭಕ್ತಿವಿಚಾರಗಳು ಎಲ್ಲ ಪರ್ವಗಳಲ್ಲೂ ಕಾಣಸಿಗುತ್ತವೆ.

ಈ ಹರಿವಂಶವು ದೇವನೊಬ್ಬ ನಾಮ ಹಲವು "ಏಕಂ ಸತ್ ವಿಪ್ರಾ ಬಹುಧಾ ವದಂತಿ" ಎಂಬ ತತ್ವವನ್ನು ಸಾರುವ ಮಹಾನ್ ಗ್ರಂಥ.

ಇದರಲ್ಲಿ ಶಿವ, ವಿಷ್ಣು, ಬ್ರಹ್ಮ, ಶಕ್ತಿ ಮುಂತಾದ ದೇವತೆಗಳು ಒಂದೇ ಪರಮಾತ್ಮನ ಭಿನ್ನ, ಭಿನ್ನ ರೂಪಗಳು ಎಂಬುದಾಗಿ ಮನೋಜ್ಞವಾಗಿ ನಿರೂಪಿಸಲ್ಪಟ್ಟಿದೆ. ಮತಗಳು ಭಿನ್ನ ಭಿನ್ನವಾಗಿದ್ದರೂ ಎಲ್ಲರೂ ಸಾಮರಸ್ಯದಿಂದ ಜೀವನ ನಡೆಸುವಂತೆ ತೋರಿಸುವ ದಾರಿದೀಪ ಇದು. ಶಿವ-ಕೃಷ್ಣರಲ್ಲಿ ಭೇದವೇ ಇಲ್ಲ ಎಂದು ತೋರಿಸುವ ಕೃಷ್ಣನ ಕೈಲಾಸಯಾತ್ರಾ ಪ್ರಸಂಗವು ತುಂಬ ಹೃದಯಂಗಮವಾಗಿದೆ.

ರುಕ್ಮಿಣಿಯ ಪ್ರಾರ್ಥನೆಯಂತೆ ಮಹಾನ್‌ಪುತ್ರ ಪ್ರಾಪ್ತಿಗಾಗಿ ಕೃಷ್ಣನು ಕೈಲಾಸ ಪರ್ವತದಲ್ಲಿ ತಪಸ್ಸು ಮಾಡುತ್ತಿದ್ದಾನೆ. ಅದೇ ಸಂದರ್ಭದಲ್ಲಿ, ವಿಷ್ಣುವಿನ ಹೆಸರನ್ನೇ ಕೇಳಬಾರದೆಂದು ಕಿವಿಗೆ ಘಂಟೆ ಕಟ್ಟಿಕೊಂಡ ಘಂಟಾಕರ್ಣ, ಶಿವನ ಆದೇಶದಂತೆ ವಿಷ್ಣುವನ್ನೇ ಪ್ರಾರ್ಥಿಸಲು ಬಂದಿದ್ದಾನೆ. "ಮೋಕ್ಷಂ ಇಚ್ಛೇತ್ ಜನಾರ್ದನಾತ್" (ವಿಷ್ಣುವಿನಿಂದ ಮೋಕ್ಷವನ್ನು ಪಡೆಯಬೇಕು). ಕೃಷ್ಣನನ್ನು ಕಂಡ ಮೇಲೆ, ತನ್ನ ಅಂತರಂಗದಲ್ಲಿ ಘಂಟಾಕರ್ಣನು ಕೃಷ್ಣ ಸ್ವರೂಪ ವಿಷ್ಣುವನ್ನೇ ಕಂಡು ಪುಳಕಾಂಕಿತನಾಗಿದ್ದಾನೆ. ಒಳಗೂ-ಹೊರಗೂ ಒಂದೇ ದೈವವೆಂದು ತಿಳಿದು ಹಿರಿ ಹಿರಿ ಹಿಗ್ಗಿದ್ದಾನೆ. ತನ್ನ ಪಿಶಾಚ ಜೀವನದಂತೆ, ತನ್ನ ಭಕ್ತಿಯ ಪರಾಕಾಷ್ಠೆಯಲ್ಲಿ ಸತ್ತ ಬ್ರಾಹ್ಮಣನ ದೇಹವನ್ನೇ ನೈವೇದ್ಯವಾಗಿ ಸಮರ್ಪಿಸುತ್ತಾನೆ. ಅವನ ನಿಷ್ಕಪಟ ಭಕ್ತಿಯನ್ನು ಕಂಡು, ಆ ಬ್ರಾಹ್ಮಣನನ್ನು ಬದುಕಿಸಿ, ಅವನಿಗೆ ದಿವ್ಯರೂಪವನ್ನು ಕೊಡುತ್ತಾನೆ. ನಂತರ ಘಂಟಾಕರ್ಣನಿಗೂ ಮೋಕ್ಷವನ್ನು ಕರುಣಿಸುತ್ತಾನೆ.

ಅದೇ ಸಂದರ್ಭದಲ್ಲಿ ಶಿವ ಅಲ್ಲಿಗೆ ಬಂದಾಗ ಕೃಷ್ಣನು ಶಿವನನ್ನೇ ಸೃಷ್ಟಿ-ಸ್ಥಿತಿ-ಸಂಹಾರಕಾರಕ ಎಂದು ವರ್ಣಿಸುತ್ತಾನೆ. ನಂತರ ಕೃಷ್ಣನನ್ನು ಕುರಿತು, ಋಷಿಗಳಿಗೆ, ಭಕ್ತರಿಗೆ ಕೃಷ್ಣನ - ವಿಷ್ಣುವಿನ ಪಾರಮ್ಯವನ್ನು ಕೊಂಡಾಡುತ್ತಾನೆ. ಆಗ ಅಲ್ಲಿ ನೆರೆದಿದ್ದ ಎಲ್ಲ ಋಷಿಗಳೂ, ಸಾಧುಸಂತರೂ ಶಿವಕೇಶವರನ್ನು ಕೊಂಡಾಡುತ್ತಾ ಜಯಕಾರ ಮಾಡುತ್ತಾರೆ. ಶ್ಲೋಕದ ಪೂರ್ವಾರ್ಧ ವಿಷ್ಣು ಪರವಾದರೆ, ಉತ್ತರಾರ್ಧ ಶಿವ ಪರ.

ಜಯದೇವ ಜಗನ್ನಾಥ ಜಯ ರುದ್ರ ಜನಾರ್ದನ ।
ಜಯ ರುದ್ರ ಪುರಾಣಾತ್ಮನ್ ಜಯದೇವ ಹರೇಶ್ವರ ॥

ಶ್ರೀಕೃಷ್ಣನು ಸಮಾಧಿಯಿಂದ ಎದ್ದು, ಶ್ರೀರುದ್ರಮಂತ್ರದ ಸಾರವಾದ ಸ್ತೋತ್ರಗಳಿಂದ ಶಿವನನ್ನು ಸ್ತುತಿಸುತ್ತಾನೆ. ಶಿವನು ಕೃಷ್ಣನನ್ನು ಸ್ತೋತ್ರಮಾಡುವುದಂತೂ ಪುರುಷಸೂಕ್ತದ ಸಾರವೇ ಆಗಿದೆ. ಶಿವನು ಕೃಷ್ಣನಿಗೆ, ನನ್ನಿಂದ ಹಿಂದೆ ಸುಡಲ್ಪಟ್ಟ ಮನ್ಮಥನೇ ನಿನಗೆ ಮಗನಾಗಿ ಹುಟ್ಟಿ ಬರುತ್ತಾನೆ ಎಂದು ಅನುಗ್ರಹಿಸುತ್ತಾನೆ. ಋಷಿಗಳಿಗೆ, ಬೇರೆ ಬೇರೆಯ ಭಕ್ತರಿಗೆ ಯಾವ ಯಾವ ದೇವ ಶ್ರೇಷ್ಠ ಅನ್ನುವ ಜಿಜ್ಞಾಸೆ ಈ ಪ್ರಸಂಗದಿಂದ ಸಂಪೂರ್ಣವಾಗಿ ನಿವಾರಿತವಾಗುತ್ತದೆ. ಶಿವನೇ ಮುಂದೆ "ಹೇ ಕೃಷ್ಣ! ನಿನ್ನ ನಾಮಗಳೇ ನನ್ನ ನಾಮವಾಗಿವೆ. ನಿನ್ನನ್ನು ದ್ವೇಷಿಸುವವನು ನನ್ನನ್ನು ದ್ವೇಷಿಸಿದಂತೆಯೇ. ನಮ್ಮಿಬ್ಬರಿಗೂ ಶಬ್ದದಲ್ಲಾಗಲೀ, ಅರ್ಥದಲ್ಲಾಗಲೀ ಏನೂ ವ್ಯತ್ಯಾಸವಿಲ್ಲ.

ಯಾನ್ಯೇವ ತವ ನಾಮಾನಿ ಮಮನಾಮಾನಿ ಚಾಚ್ಯುತ
ಯಸ್ತು ತ್ವಾ ದ್ವೇಷ್ಟಿ ದೇವೇಶ ಸ ಮಾಂ ದ್ವೇಷ್ಟಿ ನ ಸಂಶಯಃ ।
ಆವಯೋ: ಅಂತರಂ ನಾಸ್ತಿ ಅರ್ಥತಃ ಶಬ್ದತೋಽಪಿ ವಾ
ಶಿವಸ್ಯ ಹೃದಯಂ ವಿಷ್ಣುಃ ವಿಷ್ಣೋಶ್ಚ ಹೃದಯಂ ಶಿವಃ ॥

ಎಲೈ ಮುನಿಗಳಿರಾ! ಪ್ರಯತ್ನಪೂರ್ವಕವಾಗಿ, ಭಕ್ತಿಪುರಸ್ಸರವಾಗಿ ನನ್ನನ್ನು ಚಿಂತಿಸುತ್ತಾ ಕೇಶವನನ್ನೇ ಧ್ಯಾನಿಸಿ. ಈ ಉಪಾಸ್ಯನಲ್ಲಿ ನಾನೂ ಉಪಾಸ್ಯನಾಗಿದ್ದೇನೆ. ಉಪಾಸ್ಯ, ಉಪಾಸಕ ಭಾವವು ನಮ್ಮಿಬ್ಬರಿಗೂ ಪರಸ್ಪರವಾಗಿ ಇದ್ದೇ ಇದೆ.

ಓಮಿತ್ಯೇವಂ ಸದಾ ವಿಪ್ರಾಃ ಪಠತ ಧ್ಯಾತ ಕೇಶವಂ ।
ತತೋ ನಿಃಶ್ರೇಯಸಪ್ರಾಪ್ತಿಃ ಭವಿಷ್ಯತಿ ನ ಸಂಶಯಃ
ಉಪಾಸ್ಯೋಽ ಹಂ ಸದಾ ವಿಪ್ರಾಃ ಉಪಾಸ್ಯೇಽಸ್ಮಿನ್ ಹರೌಸ್ಮೃತಃ ॥

ಋಷಿ-ಮುನಿಗಳಂತೆ ಇಂದು ನಾವೂ ಶಿವ-ವೈಷ್ಣವ ಭಕ್ತರು ನಮ್ಮ ದೇವರು ಹೆಚ್ಚು, ನಮ್ಮ ದೇವರು ಹೆಚ್ಚೆಂದು, ಭ್ರಾಂತಚಿತ್ತರಾಗದೇ ಒಂದೊಂದು ಉದ್ದೇಶಕ್ಕಾಗಿ ಅವತರಿಸಿದ್ದಾರೆ ಎಂಬ ಉನ್ನತ ಭಾವನೆ ಇಟ್ಟುಕೊಂಡರೆ, ನಾವೆಲ್ಲ ಅಣ್ಣ-ತಮ್ಮಂದಿರಂತೆ ಒಂದೇ ಭಾರತಮಾತೆಯ ಮಕ್ಕಳಂತೆ ಸಂತೋಷವಾಗಿ ನಲಿದಾಡಬಹುದು.

ಭವಿಷ್ಯಪರ್ವದಲ್ಲಿ – ಶ್ರವಣ – ಮನನ ಮಾಡುವವರಿಗೆ ವಿಶೇಷ ಫಲಗಳನ್ನು ಹೇಳಿದೆ. ಹಾಗೆಯೇ ವಾಚನ–ಶ್ರವಣ ಮಾಡುವವರು ಪರಿಶುದ್ಧರಾಗಿರಬೇಕು. ಸತ್ಯನಿಷ್ಠೆ, ಶುಚಿತ್ವ, ಶ್ರದ್ಧೆ ಶಾಂತಿ ಮುಂತಾದ ಗುಣಗಳನ್ನು ಹೊಂದಿದ್ದರೆ ಅಶ್ವಮೇಧಯಾಗದ ಫಲವೇ ಸಿಗುತ್ತದೆ. ತಾಯಿ ಹುಲಿ, ಮರಿಗಳನ್ನು ಕಚ್ಚಿಕೊಂಡು ಒಂದು ಕಡೆಯಿಂದ ಮತ್ತೊಂದೆಡೆಗೆ ಹೋಗುವಾಗ, ಅವುಗಳಿಗೆ ಹೇಗೆ ನೋವಾಗುವುದಿಲ್ಲವೋ, ಹಾಗೆಯೇ ನಾವೂ ಅಕ್ಷರಗಳನ್ನು ಉಪಯೋಗಿಸಬೇಕು. ತದೇಕನಿಷ್ಠೆಯಿಂದ ಸಂಸ್ಕೃತದ 63 ವರ್ಣಗಳನ್ನೂ ಉಚ್ಚರಿಸಬೇಕು.

ಹರಿವಂಶವು ಶ್ರೀಕೃಷ್ಣನ ಲೀಲಾವಿಭೂತಿಯಾದರೂ, ಪರಮಾತ್ಮನ ಯೋಗಮಾಯಾಶಕ್ತಿಯು ಜಗನ್ಮಾತೆಯಾಗಿ ಪೂಜಿತಳಾಗಿದ್ದಾಳೆ. ಭಗವಾನ್ ವಿಷ್ಣುವಿಗೂ, ಅವನ ಯೋಗಶಕ್ತಿ ದೇವಿಗೂ ಭೇದವೇ ಇಲ್ಲ. ನಿದ್ರಾದೇವಿಯು ಅವನ ಯೋಗಮಾಯೆಯೇ ಆಗಿದ್ದಾಳೆ. ವಿಷ್ಣುಪರ್ವದ ಎರಡನೇ ಅಧ್ಯಾಯದಲ್ಲಿ ದೇವಿಯು ಸಂಪೂರ್ಣ ಜಗತ್ತಿನಲ್ಲಿ ವಿಷ್ಣುವಿಗೆ ಸಮಾನವಾಗಿ ಆರಾಧ್ಯಳಾಗಿದ್ದಾಳೆ ಎಂಬ ವಿಷಯವು ಸುಂದರವಾಗಿ ವರ್ಣಿತವಾಗಿದೆ. ವಿಷ್ಣುವು ದೇವಿಯನ್ನು ಕುರಿತು, “ನನ್ನ–ನಿನ್ನ ಮಹಿಮೆಯನ್ನು ತಿಳಿದ ಜನರು ನಿನಗೆ ನಮಸ್ಕರಿಸುತ್ತಾರೆ. ಅಂತಹವರು ಪುತ್ರ ಸಂಪತ್ತನ್ನೂ, ಧನಸಂಪತ್ತನ್ನೂ ಪಡೆಯುತ್ತಾರೆ. ಅರಣ್ಯಾದಿಗಳಲ್ಲಿ ಸಂಕಟಕ್ಕೆ ಒಳಗಾದವರು ನಿನ್ನ ಮರೆಹೊಕ್ಕರೆ ನೀನೇ ರಕ್ಷಕಳಾಗುವೆ. ನೀನೇ ಪರಮಾಶ್ರಯಳಾಗುವೆ. ಮುಂದಿನ ಅಧ್ಯಾಯದಲ್ಲಿ ದೇವಿಯ – ವಾಗ್ರೂಪದ ಮಹಿಮೆಯು ಕೊಂಡಾಡಲ್ಪಟ್ಟಿದೆ.

ತ್ರಿಷಷ್ಟಿ ವರ್ಣಸಂಯುಕ್ತಮಷ್ಟಸ್ಥಾನ ಸಮೀರಿತಂ (ಸ)
ವಾಚಯೇತ್ ವಾಚಕಃ ಸ್ವಸ್ಥಃ ಸ್ವಾಧೀನಃ ಸುಸಮಾಹಿತಃ ॥

ಪರಾ, ಪಶ್ಯಂತೀ, ಮಧ್ಯಮಾ, ವೈಖರೀ ಎಂಬ ನಾಲ್ಕು ದೆಶೆಗಳಲ್ಲಿಯೂ ಮೌಳಿನಿಂದ ತುದಿಯವರೆವಿಗೂ ನಾದ, ಸ್ವರ, ಅಕ್ಷರರೂಪವಾಗಿ ವಿಕಾಸವಾಗುತ್ತಾ ಪ್ರಕಾಶಕ್ಕೆ ವಿರೋಧವಿಲ್ಲದೆ ಹೊರಬರುವ ವಾಣಿಯೇ ಸಂಸ್ಕೃತವಾಣೀ. ಈ ವಾಗ್ದೇವಿಯ ವಾಣೀ. ಸಂಸ್ಕಾರಸಂಪನ್ನವಾದ ಮಾತನ್ನು ಮಹರ್ಷಿಗಳು ವಾಕ್‌ಯೋಗವೆಂದು ಕರೆದಿದ್ದಾರೆ. ಮಾತು ಭಾವದ ಮೂಲಕ ಆತ್ಮಮೂಲಕ್ಕೆ ಒಯ್ಯುವಂತಿರಬೇಕು. ಪರಾವಾಕ್ ಮೂಲಾಧಾರ ಚಕ್ರದಲ್ಲಿ ನೆಲಸಿದೆ. ಪಶ್ಯಂತಿಯು ನಾಭಿ ಚಕ್ರದಲ್ಲಿದೆ. ಮಧ್ಯಮಾವಾಕ್ ಹೃದಯದಲ್ಲಿ ಬೆಳಗುತ್ತದೆ. ವೈಖರಿಯು ಕಂಠದೇಶದಲ್ಲಿ ಹರಿದು ಮುಖದ ನಾನಾ ಸ್ಥಾನಗಳಲ್ಲಿ ವರ್ಣರೂಪವಾಗಿ ವ್ಯಕ್ತವಾಗುತ್ತದೆ. ಶಬ್ದದ ಅಭಿವ್ಯಕ್ತಿಯಲ್ಲಿ ಆತ್ಮಾ, ಬುದ್ಧಿ, ಮನಸ್ಸುಗಳ ವ್ಯಾಪಾರವು ಹಿನ್ನೆಲೆಯಾಗಿ ನಡೆಯುತ್ತದೆ. ಸಂಕಲ್ಪಯುತವಾದ ಮನಸ್ಸು ಶರೀರದೊಳಗಿನ ಅಗ್ನಿಯನ್ನು ಬಡಿದು ಪ್ರಜ್ವಲಗೊಳಿಸುತ್ತದೆ. ಆ ಶರೀರಾಗ್ನಿಯು ಪ್ರಾಣವಾಯುವನ್ನು ಪ್ರೇರೇಪಿಸುತ್ತದೆ. ಹೀಗೆ ಪ್ರಾಣಾಗ್ನಿಗಳ ಸಂಬಂಧದಿಂದ ಶಬ್ದವು ಅಭಿವ್ಯಕ್ತವಾಗುತ್ತದೆ. ಹೀಗೆ ಶಬ್ದತತ್ವವನ್ನು ತಿಳಿದವನು ವಾಕ್‌ಯೋಗವಿದನಾಗುತ್ತಾನೆ.

ಈ ಹರಿವಂಶಗ್ರಂಥದ ಕೊನೆಯಲ್ಲಿ ಹರಿವಂಶಮಹಾತ್ಮ್ಯ ಸಂತಾನಗೋಪಾಲಮಂತ್ರ ಹಾಗೂ ಅದರ ವಿಧಿವಿಧಾನಗಳು ಇರುವುದರಿಂದ ವಾಚಕರಿಗೆ ಅತ್ಯಂತ ಉಪಯುಕ್ತವಾಗಿದೆ. ಹರಿವಂಶವು ಶಬ್ದಬ್ರಹ್ಮವೂ, ತ್ರಿಮೂರ್ತಿಸ್ವರೂಪವೂ ಆಗಿದೆ. ತ್ರಿಮೂರ್ತಿಸ್ವರೂಪದ ಈ ಮಹಾನ್ ಗ್ರಂಥವನ್ನು ತ್ರಿಮೂರ್ತಿಸ್ವರೂಪರಾದ ಭಗವಾನ್ ಬಾದರಾಯಣರೇ ಬರೆದರೆಂಬುದು ಎಷ್ಟು ಔಚಿತ್ಯಪೂರ್ಣ.

ಅಚತುರ್ವದನೋ ಬ್ರಹ್ಮಾ, ದ್ವಿಬಾಹುರಪರೋ ಹರಿಃ ।
ಅಫಾಲಲೋಚನಃ ಶಂಭುಃ ಭಗವಾನ್ ಬಾದರಾಯಣಃ

ಗ್ರಂಥ ಋಣ : ಪೂಜ್ಯ ರಂಗಪ್ರಿಯಸ್ವಾಮಿಗಳು
ಪೂಜ್ಯ ಶೇಷಾಚಲಶರ್ಮರು
ಭಾರತದರ್ಶನ ಪ್ರಕಾಶಕರು

❑

ಪುರಾಣಗಳಲ್ಲಿ ಪರಿಸರ ಪ್ರಜ್ಞೆ

—ಡಾ. ಆರ್. ಗಣೇಶ್

ಸನಾತನಧರ್ಮದ ವಿಶ್ವಕೋಶಗಳಂತೆ, ಸಮಸ್ತ ಜನತಾಸಾಮಾನ್ಯಕ್ಕೂ ಎಟುಕುವಂಥ ಲೋಕಶಿಕ್ಷಣಶಾಲೆಯಂತೆ, ಈ ಕಾಲದ ವಿಕೀಪೀಡಿಯದಂತೆ ನಮ್ಮ ಪರಂಪರಾಪ್ರಾಪ್ತವಾದ ಪುರಾಣಸಾಹಿತ್ಯವು ವಿಸ್ಮಯಾನಂದಪ್ರದವಾಗಿದೆ.

ಇಂಥ ವಾಙ್ಮಯದಲ್ಲಿ ನಾವಿಂದು ಆಧುನಿಕ ಸಂವೇದನೆಯೆಂದು ಭಾವಿಸಿರುವ ಪರಿಸರಪ್ರಜ್ಞೆಯು ಹೇಗೆ ತನ್ನ ತತ್ತ್ವ ಮತ್ತು ಅನ್ವಯಗಳೆಂಬ ಎರಡು ಮುಖಗಳಿಂದ ಅಪಾರವಿಸ್ತಾರವನ್ನು ಹೊಂದಿದೆಯೆಂಬುದನ್ನು ಸದ್ಯದ ಪುಟ್ಟ ಪ್ರಬಂಧದ ಮೂಲಕ ಮನಗಾಣಬಹುದು.

ಸನಾತನಧರ್ಮದ ವಿಶ್ವಕೋಶಗಳಂತೆ, ಸಮಸ್ತ ಜನತಾಸಾಮಾನ್ಯಕ್ಕೂ ಎಟುಕುವಂಥ ಲೋಕಶಿಕ್ಷಣಶಾಲೆಯಂತೆ, ಈ ಕಾಲದ ವಿಕೀಪೀಡಿಯದಂತೆ ನಮ್ಮ ಪರಂಪರಾಪ್ರಾಪ್ತವಾದ ಪುರಾಣಸಾಹಿತ್ಯವು ವಿಸ್ಮಯಾನಂದಪ್ರದವಾಗಿದೆ.

ಇಂಥ ವಾಙ್ಮಯದಲ್ಲಿ ನಾವಿಂದು ಆಧುನಿಕ ಸಂವೇದನೆಯೆಂದು ಭಾವಿಸಿರುವ ಪರಿಸರಪ್ರಜ್ಞೆಯು ಹೇಗೆ ತನ್ನ ತತ್ತ್ವ ಮತ್ತು ಅನ್ವಯಗಳೆಂಬ ಎರಡು ಮುಖಗಳಿಂದ ಅಪಾರವಿಸ್ತಾರವನ್ನು ಹೊಂದಿದೆಯೆಂಬುದನ್ನು ಸದ್ಯದ ಪುಟ್ಟ ಪ್ರಬಂಧದ ಮೂಲಕ ಮನಗಾಣಬಹುದು.

ಇಡಿಯ ಪೃಥ್ವೀಪರ್ಯಾವರಣವನ್ನೇ, ನೆಲ, ಜಲ, ಅನಿಲಗಳನ್ನೇ ಕಲುಷೀಕರಿಸಿ ಇದೀಗ ಕೇವಲ ಸ್ವಾರ್ಥೈಕದೃಷ್ಟಿಯಿಂದ ನಮ್ಮ ಅಸ್ತಿತ್ವ ಉಪಭೋಗಗಳಿಗೋಸುಗವೇ ಪರಿಸರಪ್ರಜ್ಞೆಯೆಂದು ಹಪಹಪಿಸುತ್ತಿರುವ ನವನಾಗರಿಕರಾದ ನಾವೆಲ್ಲಿ? ನಿಸರ್ಗವೇ ಒಂದು ಪ್ರತಿಸ್ಪರ್ಧಿಯೆಂಬಂತೆ ಸವಾಲೊಡ್ಡಿ ನಿಂತು ಕೃಷಿ–ಪ್ರಯಾಣ–ನಗರೀಕರಣಗಳಿಗೆಲ್ಲ ಸಡ್ಡು ಹೊಡೆದಂತೆ ಮಲೆತು ಮೆರೆಯುತ್ತಿದ್ದ ಆ ಕಾಲದಲ್ಲಿಯೂ ಅಪಾರ ಸಮೃದ್ಧಿಯಿಂದ ತುಂಬಿತುಳುಕುತ್ತಿದ್ದ ಸಸ್ಯ–ಪ್ರಾಣಿಗಳ ಉತ್ಪನ್ನ, ನೆಲ–ನೀರುಗಳ ಬಾಹುಳ್ಯಗಳ ನಡುವಿದ್ದು ನಿಸರ್ಗದ ಕೊರತೆಯನ್ನೇ ಕಾಣದಿದ್ದ ಆ ಹೊತ್ತಿನಲ್ಲಿಯೂ ಪ್ರಕೃತಿಪಾವಿತ್ರ್ಯವನ್ನೂ ಪರಿಸರಪ್ರಜ್ಞೆಯನ್ನೂ ಸೃಷ್ಟಿಸಮರ್ಚೆಯನ್ನೂ ಮೆರೆದ ನಮ್ಮ ಆರ್ಷಸಂಸ್ಕೃತಿಯ ಪೂರ್ವಜರೆಲ್ಲಿ. ಹೀಗಾಗಿ ವೇದ–ಶಾಸ್ತ್ರಗಳಲ್ಲಿ, ಪುರಾಣೇತಿಹಾಸಗಳಲ್ಲಿ ಜಾನಪದ ಜೀವನದಲ್ಲಿ ಕಂಡುಬರುವ ಪರಿಸರಪ್ರಜ್ಞೆಯು ಅರ್ಥಕಾಮಪ್ರಾವಣ್ಯದ, ಫಲಕೃಪಣತೆಯ ಕುರೂಪವಲ್ಲ; ಧರ್ಮದೀಪ್ತವೂ ಆತ್ಮೈಕದರ್ಶನಧನ್ಯವೂ ಆದ ವಿಶ್ವರೂಪ. ಮುಖ್ಯವಾಗಿ ಸನಾತನಧರ್ಮದ ಜೀವಾಳವೆನಿಸಿದ ಅದ್ವಿತೀಯವೂ, ಅನಾದ್ಯನಂತವೂ ಆದ ಸಚ್ಚಿದಾನಂದೈಕಸ್ವರೂಪವೆನಿಸಿದ ಬ್ರಹ್ಮವಿವರ್ತವಾದದ ಕಾರಣದಿಂದಲೇ ಈ ಸಂಸ್ಕೃತಿಯಲ್ಲಿ ವಿಕಸಿಸಿದ ಯಾವುದೇ ವಿದ್ಯಾಸ್ಥಾನವಾಗಲಿ, ಕಲಾವಿಶೇಷವಾಗಲಿ, ಜೀವನಪದ್ಧತಿಯಾಗಲಿ ಬ್ರಾಹ್ಮವೆನಿಸಿ, ಭೂಮವೆನಿಸಿ ಸಾರ್ವತ್ರಿಕವಾಗಿ ಉಪಾದೇಯತೆಯನ್ನು ಗಳಿಸಿದೆ. ಇದನ್ನರಿಯದೆ ಕೇವಲ ಬಹಿರಂಗದ ಮಹತ್ತ್ವಗಳನ್ನು ಹೆಕ್ಕಿಕೊಳ್ಳಲು ಹೊರಡುವುದೆಂದರೆ ಅದು ದೇವರ ವಿಗ್ರಹವನ್ನೇ ಮಾರಿ ಜಾತ್ರೆ–ರಥೋತ್ಸವಗಳನ್ನು ನಡೆಸಿದಂತೆ–ಉಪಹಾಸ್ಯ; ಪರಿಶೋಚ್ಯ. ಆದುದರಿಂದ ಮೊದಲಿಗೆ ಪುರಾಣಗಳಲ್ಲಿ ಹಾಸುಹೊಕ್ಕಾಗಿರುವ ತತ್ತ್ವದಲ್ಲಿಯೇ ಪರಿಸರಪ್ರಜ್ಞೆಯನ್ನು ಕಾಣಬಹುದು. ಈ ಪ್ರಕಾರವಾಗಿ ಪರಿಶೀಲಿಸಿದಾಗ ಸ್ಥಾವರ–ಜಂಗಮಾತ್ಮಕವೂ ದೇಶ–ಕಾಲ ವಸ್ತುಪರಿಚ್ಛೇದಗಳ ಮೂಲಕ ತೋರಿಕೊಳ್ಳುತ್ತಿರುವುದೂ ಆದ ಈ ನಾಮ–ರೂಪಾತ್ಮಕವಿಶ್ವವೆಲ್ಲ ಪರಬ್ರಹ್ಮದ ವಿವರ್ತ ಅಥವಾ ತೋರಿಕೆಯೆಂದೂ ಈ ಮಹಾತತ್ತ್ವವನ್ನು ಮನಗಾಣದವರಿಗಾಗಿ ಇದೆಲ್ಲವೂ ಸಗುಣಬ್ರಹ್ಮದ ಸೃಷ್ಟಿಲೀಲೆಯೆಂದೂ ಇವಕ್ಕೆಲ್ಲ ಆ ಸಚ್ಚಿದಾನಂದಘನವೇ ಅಭಿನ್ನೋಪಾದಾನನಿಮಿತ್ತಕಾರಣವೆಂದೂ ಸಗುಣಬ್ರಹ್ಮವು ಈ ವಿಶ್ವವನ್ನು ತನ್ನಿಂದ ತಾನು ರಚಿಸಿ ತಾನೇ ಆ ಬಳಿಕ ಅದರ ಒಳಹೊರಗೆಲ್ಲ ವ್ಯಾಪಿಸಿತೆಂದೂ ಸಕಲಪುರಾಣಗಳ ಹೃದ್ಭಾಗದಲ್ಲಿರುವ ವೇದಾಂತದರ್ಶನವು ಒಕ್ಕಣಿಸಿದೆ. ಅನಂತರ ಈ ಮಹಾಜಗತ್ತಿನಲ್ಲಿ ನಮ್ಮ ಇಂದ್ರಿಯಗಳಿಗೆ ಎಟುಕುವ ಯಾವುದೇ ಭವ್ಯಾಸ್ತಿತ್ವವಾಗಲಿ ಭಗವದ್ವಿಭೂತಿಯೆಂದು ಗುರುತಿಸಿಕೊಟ್ಟು ಅದರ ಉಪಾಸನೆಯನ್ನು ಹವಣಿಸಿಯೂ ಇದೆ. ಅನಂತರ ಇಂಥ ಎಲ್ಲ ಚಿಂತನೆಗಳನ್ನೂ ಸಂಕೇತರೂಪದ ಕಥೆಗಳಲ್ಲಿ ಕಮನೀಯಕ್ರಮದಿಂದ ಕಂಡರಿಸಿದೆ. ಹೀಗಾಗಿಯೇ ವೇದಗಳಲ್ಲಿ ತತ್ತ್ವ–ಕಲ್ಪ–ಕಥೆ–ಆಖ್ಯಾಯಿಕೆ–ಸಂಕೇತ–ಸಂದೇಶಗಳ ರೂಪದಲ್ಲಿ ಹೊಮ್ಮಿದ ಬ್ರಹ್ಮಜ್ಞಾನವು ದರ್ಶನಶಾಸ್ತ್ರಗಳಲ್ಲಿ ಕೇವಲ ತತ್ತ್ವ–ಸಂದೇಶಗಳ ಮೂಲಕವೂ ಪುರಾಣಗಳಲ್ಲಿ ಈ ಎರಡಂಶಗಳು ಗೌಣವಾಗಿ, ಕಥೆ–ಅಖ್ಯಾಯಿಕೆ–ಕಲ್ಪ–ಸಂಕೇತಗಳು ವಿಪುಲವಾಗಿ ಒಟ್ಟಾರೆ ಲೋಕಸಾಮಾನ್ಯಕ್ಕೆ ಇನಿದಾಗುವಂತೆಯೂ ಪ್ರಸ್ತುತವಾಗಿದೆ. ಹೀಗಾಗಿ ನಾವಿಲ್ಲಿ ಮುಖ್ಯವಾಗಿ ಕಥೆ–ಕಲ್ಪ–ಸಂಕೇತ–ಆಖ್ಯಾಯಿಕೆಗಳನ್ನೇ ಕಾಣಬಹುದು; ತನ್ಮೂಲಕ ಪರಿಸರಪ್ರಜ್ಞೆಯ ತತ್ತ್ವ–ಸಂದೇಶಗಳನ್ನು ಗ್ರಹಿಸಬಹುದು.

I

ಮೊದಲಿಗೆ ತತ್ತ್ವವನ್ನು ಗಮನಿಸುವುದಾದರೆ ಪ್ರಾಯಿಕವಾಗಿ ಎಲ್ಲ ಪುರಾಣಗಳೂ ಬ್ರಹ್ಮವಿವರ್ತ ಹಾಗೂ ತದಧೀನವಾಗುವಂತೆ ಬ್ರಹ್ಮಪರಿಣಾಮವಾದಗಳ ಮೂಲಕ ಪಾಂಚಭೌತಿಕವಾದ ಈ ಜಗತ್ತು

ನಮ್ಮಿಂದ ಪರಮಾರ್ಥತಃ ಭಿನ್ನವಲ್ಲ ಹಾಗೂ ಜೀವರಾಶಿಯಲ್ಲಿ ಸೇರಿಹೋಗುವ ನಾವೂ ಬ್ರಹ್ಮದಿಂದ ಬೇರೆಯಲ್ಲ ಎಂಬ ನಿಲವನ್ನೇ ಅಧಿಕಾರಿಭೇದಾನುಗುಣವಾಗಿ ಆರಂಭವಾದದಿಂದ ಮೊದಲ್ಗೊಂಡು ಅಜಾತಿವಾದದವರೆಗೆ ಪ್ರಸ್ತಾವಿಸುತ್ತವೆ. ಪುರಾಣಸಾಮಾನ್ಯದ ಪಂಚಲಕ್ಷಣಗಳಲ್ಲಿ ಒಂದಾದ ಸರ್ಗ ಅಥವಾ ಸೃಷ್ಟಿಕಥನವು ಪ್ರಾಯಿಕವಾಗಿ ಎಲ್ಲ ಪುರಾಣಗಳಲ್ಲಿಯೂ ಕಂಡುಬರುವ ಸಂಗತಿ. ಇಲ್ಲಿ ಮೇಲ್ಕಂಡ ಅಂಶವೇ ತೋರಿಕೊಳ್ಳುತ್ತದೆ. ಪಾಂಚಭೌತಿಕವೂ ತ್ರಿಗುಣಾತ್ಮಕವೂ ಚಿದಚಿದ್ರೂಪವೂ ಆದ ಈ ವಿಶ್ವದಲ್ಲಿ ಎಲ್ಲವೂ ಪರಸ್ಪರ ಸಂಬದ್ಧ, ಸಂನಿಹಿತ, ಸಾಪೇಕ್ಷ, ಸಮವಾಯ, ಸಮನ್ವಿತ ಎಂಬೆಲ್ಲ ಹಂತಗಳಲ್ಲಿ ಸಾಗುವ ಈ ಕಥನದ ಮೂಲಕ ಇಡಿಯ ಸೃಷ್ಟಿಯ ಯಾವೊಂದು ಅಂಶಕ್ಕೆ ಹಾನಿಯಾದರೂ ಅದು ಆತ್ಮಕ್ಕೆಸಗಿದ ಅಪಚಾರ, ಬ್ರಹ್ಮಕ್ಕೆ ಮಾಡಿದ ಘಾಸಿ ಎಂಬ ಪ್ರಜ್ಞೆಯು ಯಾರಿಗೇ ಆಗಲಿ ಮೂಡದಿರದು; ಪಿಂಡಾಂಡದಲ್ಲಿರುವುದೇ ಬ್ರಹ್ಮಾಂಡದಲ್ಲಿಯೂ ತುಂಬಿದೆಯೆಂಬ ತಿಳಿವು ಬೆಳಗದಿರದು. ಅಂತೆಯೇ ಈ ವಿಶ್ವದ ಯಾವುದೇ ಶಾಂತ–ಘೋರಸಂಗತಿಯೂ ರುದ್ರ–ರಮಣೀಯಸ್ವರೂಪವೂ ಬ್ರಹ್ಮದ ಅನ್ಯಾನ್ಯ ಮುಖಗಳೆಂಬ ಅರಿವಿನ ಮೂಲಕ ಪರಮಾರ್ಥವಾಗಿ ದುಷ್ಟವೆಂಬುದಾಗಿಲಿ ಶಿಷ್ಟವೆಂಬುದಾಗಲಿ ಇಲ್ಲವೆಂಬ ದರ್ಶನವುದಿಸುತ್ತದೆ. ಇದು ತಾನೇತಾನಾಗಿ ಸಕಲಾಸ್ತಿತ್ವದಲ್ಲಿಯೂ ಮುದಿತ, ಮೈತ್ರಿ, ಉಪೇಕ್ಷೆ ಮತ್ತು ಕರುಣೆಗಳೆಂಬ ನಾಲ್ಕು ಭಾವಗಳನ್ನು ಬಿಂಬಿಸಿ ತನ್ಮೂಲಕ ಸಂಗವು ಸತ್ಸಂಗವಾಗಿ, ಸತ್ಸಂಗವು ನಿಸ್ಸಂಗದತ್ತ ದಾಪಿಡಲು ಕಾರಣವಾಗುವುದು.

ಒಟ್ಟಿನಲ್ಲಿ ಈ ಎಲ್ಲ ಸಂಗತಿಗಳೂ ನಮ್ಮೊಳಗಿನ ಹಾಗೂ ಹೊರಗಿನ ಪರಿಸರದ ಪರಿಶುದ್ಧಿಗೆ ಬುನಾದಿಯಾಗುತ್ತವೆ.

II

ಇಂಥ ತತ್ತ್ವದ ಹಿನ್ನೆಲೆಯಲ್ಲಿ ಹುಟ್ಟಿದ ಕಥಾಖ್ಯಾಯಿಕೆಗಳು ಸಾವಿರಾರು. ಅವುಗಳ ಪೈಕಿ ಸೃಷ್ಟಿಯನ್ನು ಕುರಿತು ಹೇಳುವಾಗ ಕಶ್ಯಪಮಹರ್ಷಿಯ ಸಂತಾನವೇ ಸಮಸ್ತ ದೇವ–ದಾನವ–ದೈತ್ಯ–ಪ್ರಾಣಿ–ಪಕ್ಷಿ–ಸಸ್ಯ ಸಂಕುಲವೆಂಬ ಉದಂತವು ತುಂಬ ಧ್ವನಿಪೂರ್ಣ. ವಿಷ್ಣು–ವಾಯು–ಮತ್ಸ್ಯ–ಭಾಗವತಾದಿಗಳಲ್ಲೆಲ್ಲ ಪ್ರಚುರವಾಗಿರುವ ಈ ಕಥೆಯ ಪ್ರಕಾರ ಕಶ್ಯಪನ ಅನೇಕ ಪತ್ನಿಯರ ಪೈಕಿ ಸುರಸೆ ಮತ್ತು ಕದ್ರೂದೇವಿಯಿಂದ ಎಲ್ಲ ಸವಿಷ–ನಿರ್ವಿಷಸರ್ಪಗಳೂ ಇನ್ನಿತರ ಸರೀಸೃಪಗಳೂ ಜನಿಸಿದುವು; ಸುರಭಿಯ ಮೂಲಕ ಎಲ್ಲ ಬಗೆಯ ಗೋ–ಮಹಿಷ–ಪಶುಸಂಪತ್ತಿಯೂ ಹುಟ್ಟಿತು. ಇನ್ನು ವಿನುತೆ ಮತ್ತು ತಾಮ್ರೆಯ ಉದರದಲ್ಲಿ ಸಮಸ್ತ ಪಕ್ಷಿಸಂಕುಲವು ಉದ್ಭವಿಸಿತು; ಕ್ರೋಧವಶೆಯ ಪುತ್ರ–ಪುತ್ರಿ–ಪೌತ್ರ–ಪೌತ್ರೀಪರಿವಾರದಲ್ಲಿ ಎಲ್ಲ ವನ್ಯಜೀವಿಗಳೂ ಹಿಂಸ್ರಮೃಗಗಳು ಹೊಮ್ಮಿದುವು. ಇರಾದೇವಿಯ ಗರ್ಭದಲ್ಲಿ ಅವತರಿಸಿದ ಲತಾ–ವಲ್ಲೀ–ವೀರುಧ್ ಎಂಬ ಕನ್ಯೆಯರೇ ಮುಂದೆ ಸಕಲಪ್ರಕಾರವಾದ ವೃಕ್ಷ–ಗುಲ್ಮ–ತೃಣ–ವನಸ್ಪತಿ–ವಾನಸ್ಪತ್ಯಗಳಿಗೆ ಕಾರಣರಾದರು. ಇವೆಲ್ಲದರ ತಾತ್ಪರ್ಯವಿಷ್ಟೆ: ಸಮಸ್ತ ಜೀವಜಗತ್ತೂ ನಮ್ಮ ಒಡಹುಟ್ಟು, ನಾವದನ್ನು ಹಾಳ್ಗೆಡವಬಾರದು. ಜಡಜಗತ್ತಿಗಾದರೂ ಇದೇ ತರ್ಕ ಅನ್ವಯಿಸುತ್ತದೆ; ಪ್ರತಿಯೊಂದು ಭೂತವೂ ದೇವರು. ಇವುಗಳಿಗೆ ಸದಾ ಗೌರವ–ಪ್ರೀತಿಗಳು ಸಲ್ಲಬೇಕು.

ಹಗಲು (ದಿವಾ), ಮುಂಜಾನೆ (ಉಷಾ), ಇರುಳು (ರಾತ್ರಿ), ಬೆಳದಿಂಗಳು (ರಾಕಾ, ಪೂರ್ಣಿಮ, ಅನುಮತಿ), ಕರ್ದಿಂಗಳು, (ಅಮಾವಾಸ್ಯಾ, ಕುಹೂ, ಸಿನೀವಾಲಿ), ಪಕ್ಷಗಳು, ಮಾಸಗಳು, ಋತುಗಳು, ಆಯನಗಳು ಮತ್ತು ಸಂವತ್ಸರಗಳೇ ಮುಂತಾದ ಎಲ್ಲ ಕಾಲಘಟಕಗಳೂ ಹರಿ–ಹರಸ್ವರೂಪಿಗಳೇ. ದೀರ್ಘಕಾಲಾವಧಿಗಳಾದ ಯುಗ–ಮನ್ವಂತರ–ಕಲ್ಪಾದಿಗಳ ಬಗೆಗಂತೂ ಹೇಳುವುದೇ ಬೇಡ.

ಹೀಗೆಯೇ ಸಪ್ತೋರ್ಧ್ವಲೋಕಗಳು, ಸಪ್ತಾಧೋಲೋಕಗಳು, ಭೂಮಿಯ ಸಪ್ತದ್ವೀಪಗಳು, ಸಪ್ತಸಾಗರಗಳು, ನವವರ್ಷಗಳು, ಭಾರತದ ಐವತ್ತಾರು ಪ್ರಾಂತಗಳು, ಸಪ್ತಕುಲಾಚಲಗಳೂ ಸೇರಿದಂತೆ ಅಸಂಖ್ಯ ಪರ್ವತಗಳು, ಕಾಮ್ಯಕ, ನೈಮಿಷ, ದ್ವೈತ, ದಾರುಕ, ಕುಮಾರ, ದಂಡಕ, ಚಂಪಕ, ಬಿಲ್ವ, ಕದಲಿಕಾದ್ಯರಣ್ಯ–ವನಗಳು, ಸಪ್ತ–ಸಪ್ತಸಿಂಧುಗಳು ಸೇರಿದಂತೆ ಅಸಂಖ್ಯ ನದಿಗಳು, ಸಾವಿರಾರು ಪುಣ್ಯಕ್ಷೇತ್ರಗಳು ತಟಾಕಗಳೇ ಮುಂತಾದ ಅನೇಕಾನೇಕ ದೇಶಘಟಕಗಳೂ ದೇವತೆಗಳೇ ಎಂಬ ಪರಮಾರ್ಥಭಾವವೂ ಸ್ಮರಣೀಯ. ಹೀಗೆ ಕಾಲ–ದೇಶಗಳಂಥ ತತ್ತ್ವಗಳೂ ಆರಾಧ್ಯ, ಸಚೇತನ, ಆತ್ಮಾಭಿನ್ನವೆಂದಬಳಿಕ ಹೇಳುವುದೇನಿದೆ?

ಭೂಮಿಯನ್ನು 'ಮುಳುಗಿಸಲು' ಯತ್ನಿಸಿದ ಹಿರಣ್ಯಾಕ್ಷ ಮತ್ತು ಧರೆಯನ್ನು ಗೋರೂಪಿಣಿಯಾಗಿ ಕಂಡು ಆಧರಿಸಿ ಅಭೀಷ್ಟವನ್ನು ಹಾಲಿನಂತೆ ಕರೆದುಕೊಂಡ ಪೃಥುಮಹಾರಾಜರಿಬ್ಬರೂ ಪೃಥ್ವೀಪರಿಸರಪ್ರಜ್ಞೆಯ ನಾಶ ಹಾಗೂ ಉದ್ಧಾರಗಳಿಗೆ ಕ್ರಮವಾಗಿ ನಿಲ್ಲುವ ಎರಡು ನಿದರ್ಶನಗಳಾಗಿ ಭಾಗವತಪುರಾಣದಲ್ಲಿ ತೋರಿಕೊಳ್ಳುತ್ತಾರೆ.

ನಾರದಪುರಾಣದಲ್ಲಿ ಬರುವ (ಧರ್ಮಾಖ್ಯಾನ ಮತ್ತು ಧರ್ಮಾನುಕಥನ, ಅಧ್ಯಾಯ 12 ಮತ್ತು 13) ಕಥೆಯೊಂದಂತೂ ಪರಿಸರಪ್ರಜ್ಞೆಯ ಮೂಲಧಾತುಗಳಲ್ಲಿ ಒಂದಾದ ಜಲಸಂಪನ್ಮೂಲಗಳ ಅಭಿವೃದ್ಧಿಗೂ ಇಂಥ ಸತ್ಕಾರ್ಯಗಳಲ್ಲಿ ಭಾಗಸ್ವಾಮಿಗಳಾದ ಪಶುಪಕ್ಷಿಗಳಂಥ ತಿರ್ಯಗ್ಜಂತುಗಳಿಗೆ ಕೂಡ ಸಲ್ಲಬೇಕಾದ ಯಥಾರ್ಹಗೌರವದ ಬಗೆಗೂ ಇರುವ ಅತಿಹೃದ್ಯನಿದರ್ಶನ.

ವೀರಭದ್ರನೆಂಬ ರಾಜನೊಬ್ಬನು ಬೇಟೆಗೆ ತೆರಳಿ ಅಲ್ಲಿದ್ದ ಒಂದು ಸಣ್ಣ ನೀರಿನ ಸೆಲೆಯನ್ನು ವಿಸ್ತರಿಸಿ ಬರುತ್ತಾನೆ. ಆತನ ಮಂತ್ರಿ ಬುದ್ಧಿಸಾಗರ ಅದನ್ನು ಮತ್ತಷ್ಟು ಆಳ-ಅಗಲವಾಗಿಸಿ ಸೋಪಾನಾದಿಗಳಿಂದ ಒಪ್ಪಮಾಡುತ್ತಾನೆ. ಕಾಲಾನಂತರದಲ್ಲಿ ರಾಜ-ಮಂತ್ರಿಗಳಿಬ್ಬರೂ ಈ ಸತ್ಕಾರ್ಯದ ಕಾರಣ ಸ್ವರ್ಗಕ್ಕೆ ಸಾಗುತ್ತಾರೆ. ಆಗ ಅವರ ವಿಮಾನದಲ್ಲಿ ಈ ಜಲಾಶಯಕ್ಕಾಗಿ ದುಡಿದ ಲಾವಿಗೆ ಹಕ್ಕಿ, ಕಾಡುಹಂದಿ ಮತ್ತು ಆನೆಗಳಿಗೂ ಎಡೆಯಾಗುತ್ತದೆ; ಎಲ್ಲರೂ ಸಂತಸದಿಂದ ಸಗ್ಗ ಸೇರುತ್ತಾರೆ. ಮೊತ್ತಮೊದಲಿಗೆ ಆ ಲಾವಿಗೆಹಕ್ಕಿ ನೀರಿಗಾಗಿ ತನ್ನ ಕೊಕ್ಕಿನಲ್ಲಿ ಎರಡಂಗುಲ ಅಗೆದು ಜಲದ ಕಣ್ಣನ್ನು ಮುಟ್ಟಿತ್ತು. ಅನಂತರ ಕಾಡುಹಂದಿಯು ತನ್ನ ಮುಸುಡಿ-ದಾಡೆಗಳಿಂದ ಒಂದೆರಡು ಮೊಳ ಅಗೆದು ವಿಸ್ತರಿಸಿತ್ತು. ಆ ಬಳಿಕ ಆನೆಯು ತನ್ನ ದಂತಗಳಿಂದ ಮೂರು ಮಾರು ಅಗೆದು ನೀರನ್ನು ಮೊಗೆದಿತ್ತು. ಆ ತರುವಾಯವಷ್ಟೇ ಈ ನೀರಿನ ಸೆಲೆಯು ರಾಜ-ಮಂತ್ರಿಗಳ ಗೆಯ್ಮೆಗೆ ದಕ್ಕಿತ್ತು. ಹೀಗಾಗಿ ಮೊತ್ತಮೊದಲು ಆ ಜಲಾಶಯಕ್ಕಾಗಿ ದುಡಿದ ಜೀವಿಗಳಿಗೆ ಪುಣ್ಯವೂ ಸದ್ಗತಿಯೂ ಸಲ್ಲುವುದು ಯುಕ್ತವಾಗಿತ್ತೆಂದು ಪುರಾಣಾಭಿಮತ. ಎಂಥ ಮೌಲ್ಯ ಈ ಕಥೆಯಲ್ಲಡಗಿದೆ!

III

ಹೀಗೆ ಕಥೆಗಳ ರೂಪದಲ್ಲದೆ ಶಾಸ್ತ್ರಸ್ವರೂಪದಲ್ಲಿಯೇ ಪರಿಸರಪ್ರಜ್ಞೆಯ ಮೂಲಾಧಾರವಾದ ನೆಲ-ಜಲ-ಕಾಡು-ಗುಡ್ಡಗಳ ಅರಿವನ್ನು ನಮಗೆ ಮುಟ್ಟಿಸುವ ಪುರಾಣಭಾಗಗಳು ಬಹಳಷ್ಟು. ಪರಿಸರಪ್ರಜ್ಞೆ, ತತ್ಸಂರಕ್ಷಣೆಗಳ ಮುನ್ನ ಇಡಿಯ ಪ್ರಕೃತಿಯನ್ನು ನಾವು ತಿಳಿಯಲು ಯಥಾರ್ಹವಾದ ಮಾಹಿತಿ ಬೇಕಷ್ಟೆ! ಅದನ್ನು ಈ ಬಗೆಯ ಹತ್ತಾರು-ನೂರಾರು ಭಾಗಗಳು ನಮಗೆ ದಕ್ಕಿಸಿಕೊಡುತ್ತವೆ.

ಮೊತ್ತಮೊದಲಿಗೆ ಜಗತ್ತಿನ, ಮತ್ತೂ ವಿಶಿಷ್ಟವಾಗಿ ನಮ್ಮೀ ಭೂಮಿಯ ಬಗೆಗೆ ವಿವರಗಳನ್ನೀಯುವ ಭುವನಕೋಶವು ಸ್ಮರಣೀಯ.ಇಲ್ಲಿಯ ಹಲವು ಮಾಹಿತಿಗಳು ಇಂದು ಪರಿಷ್ಕಾರಾರ್ಹವಾಗಿದ್ದರೂ ಹಲಕೆಲವು ಅವಾಸ್ತವಗಳೇ ಆಗಿದ್ದರೂ ಇವುಗಳೆಲ್ಲವುಗಳ ಹಿನ್ನೆಲೆಯಾದ ಕಾಳಜಿ ಮಾತ್ರ ಎಂದೂ ಪ್ರಸ್ತುತ. ಪದ್ಮ (ಸ್ವರ್ಗ ಖಂಡ, ಅಧ್ಯಾಯ 2 ಮತ್ತು 3), ವಾಯು (ಅಧ್ಯಾಯ 34ರಿಂದ 49), ಅಗ್ನಿ (ಅಧ್ಯಾಯ 108 ಮತ್ತು 120), ಮಾರ್ಕಂಡೇಯ (ಅಧ್ಯಾಯ 51ರಿಂದ 57) ಮುಂತಾದ ಹತ್ತಾರು ಪುರಾಣಗಳ ಭುವನಕೋಶವಿಚಾರಗಳಲ್ಲಿ ಸ್ಮರಣೀಯ.

ಇದೇ ರೀತಿ ಸಸ್ಯಗಳನ್ನೂ ಪ್ರಾಣಿಗಳನ್ನೂ ಅವುಗಳಿಗೆ ಬರುವ ರೋಗ-ರುಜಿನಗಳ ನಿವಾರಣೋಪಾಯಗಳನ್ನೂ ವಿಸ್ತರಿಸುವ ಆಯಾ ಆಯುರ್ವೇದಭಾಗಗಳೂ ಗಮನಾರ್ಹ. ಇಲ್ಲಿ ಅನೇಕ ತರು-ಲತೆಗಳ ಪರಿಚಯವೂ ಪ್ರಾಣಿ-ಪಕ್ಷಿಗಳ ಸ್ವಭಾವವೂ ವಿವೃತವಾಗಿವೆ.

ಮುಖ್ಯವಾಗಿ ಗರುಡ (ಪೂರ್ವಖಂಡ, ಅಧ್ಯಾಯ 202), ಮತ್ಸ್ಯ (ಅಧ್ಯಾಯ 217 ಮತ್ತು 218), ವಿಷ್ಣುಧರ್ಮೋತ್ತರ (ಅಧ್ಯಾಯ 30), ಅಗ್ನಿ (ಅಧ್ಯಾಯ 282) ನೀಡುವ ವೃಕ್ಷಾಯುರ್ವೇದದ ವಿವರಗಳೂ ಮಧುರ, ಕಟು, ಆಮ್ಲ, ತಿಕ್ತ ಮತ್ತು ಕಷಾಯವೆಂಬ ಐದು ಗಣಗಳಲ್ಲಿ ಔಷಧಿಸಸ್ಯಗಳನ್ನು ವಿಭಜಿಸಿಕೊಡುವ ಬಗೆಯೂ ಸ್ಮರಣೀಯ.

ಇದೇ ರೀತಿ ವಿಷ್ಣುಧರ್ಮೋತ್ತರವು ವಿಸ್ತರಿಸುವ ಗೋವೈದ್ಯ (ಅಧ್ಯಾಯ 43, 44), ಅಶ್ವಾಯುರ್ವೇದ (ಅಧ್ಯಾಯ 45, 46, 47) ಮತ್ತು ಹಸ್ತ್ಯಾಯುರ್ವೇದಗಳ (ಅಧ್ಯಾಯ 48, 49, 50) ಭಾಗಗಳು ಗಮನಾರ್ಹ. ಇವಲ್ಲದೆ ಗೋಮಹಿಮೆ (ಪದ್ಮ ಸೃಷ್ಟಿಖಂಡ, ಅಧ್ಯಾಯ 45), ವೃಕ್ಷೋತ್ಸವ (ಮತ್ಸ್ಯ, ಅಧ್ಯಾಯ 59), ಗೋಶಾಸ್ತ್ರ-ಅಶ್ವಶಾಸ್ತ್ರ-ಗಜಶಾಸ್ತ್ರಗಳು (ಅಗ್ನಿ ಅಧ್ಯಾಯ 287, 288, 289, 290, 291, 292, 294) ಪುಣ್ಯಕೋಟಿಯ ಕಥೆಗೆ ಮೂಲವೆನಿಸುವ ನಂದಾ ಎಂಬ ಹಸು ಹಾಗೂ ಪ್ರಭಂಜನ ಎಂಬ ಹುಲಿಗಳ ಆಖ್ಯಾಯಿಕೆ (ಪದ್ಮಪುರಾಣದ ಸೃಷ್ಟಿಖಂಡ, ಅಧ್ಯಾಯ 18) ಮುಂತಾದ ಎಷ್ಟೆಷ್ಟೋ ಭಾಗಗಳು ನಮಗೆ ಉಪಾದೇಯವಾಗಿವೆ.

ಇನ್ನು ವಾಪೀಕೂಪತಡಾಗಾದಿಗಳ ನಿರ್ಮಾಣಕ್ಕೆ ಸಂಬಂಧಿಸಿದಂತೆಯೂ ವಿವಿಧ ರೀತಿಯ ವೃಕ್ಷಾರೋಪಣಗಳನ್ನು ಕುರಿತಂತೆಯೂ ಕರ್ಮಕಾಂಡೀಯ ವಿಧಿಗಳಲ್ಲದೆ ಲೌಕಿಕವಿಚಾರಗಳೂ ಸಾಕಷ್ಟಿವೆ. ಅದಕ್ಕೆ ಮತ್ಸ್ಯ (ಅಧ್ಯಾಯ 58 ಮತ್ತು 59), ಪದ್ಮ (ಸೃಷ್ಟಿಖಂಡ, ಅಧ್ಯಾಯ 54, 55, 56) ಮುಂತಾದವು ಆಕರಗಳು.

IV

ಕರ್ಮಕಾಂಡೀಯವಾಗಿ, ಹಬ್ಬ-ಹರಿದಿನಗಳ ಅಂಗವಾಗಿ ಅವೆಷ್ಟೋ ನೂರು ಸಸ್ಯಪ್ರಪಂಚದ ಸದಸ್ಯರ ಹಾಗೂ ಹತ್ತಾರು ಪ್ರಾಣಿಗಳ ಬಗೆಗೆ ಅರಿವು, ಆರಾಧನೆ, ಅನ್ವಯ, ಕೃತಜ್ಞತೆಗಳು ನಮ್ಮ ಪುರಾಣ ವಾಙ್ಮಯದಲ್ಲಿವೆ. ಈ ಬಗೆಗೆ ನಾನೊಂದು ಪ್ರತ್ಯೇಕ ಲೇಖನವನ್ನೇ ಬರೆದಿರುವ ಕಾರಣ (ನೋಡಿ: Plants in Dharma Sāstra, P 56-62, Relevance of Plants, herbs and Materials used in the Rituals, Canara College, Mangalore, 1999) ಇಲ್ಲಿ ಪ್ರತ್ಯೇಕವಾಗಿ ವಿಸ್ತರಿಸಲಾರೆ. ಕೇವಲ ಅಶೋಕ-ತ್ರಿರಾತ್ರ, ಅಶೋಕಪ್ರತಿಪತ್, ಅಶ್ವತ್ಥವ್ರತ, ಆಮಲಕೀವ್ರತ, ಆಮ್ರಪುಷ್ಪಭಕ್ಷಣ, ಕದಲೀವ್ರಾತ, ಕಮಲಷಷ್ಠೀ, ಕರವೀರ ಪ್ರತಿಪತ್, ಕುಂದಚತುರ್ಥಿ, ಕೂಷ್ಮಾಂಡ ದಶಮೀ, ಚಂಪಕದ್ವಾದಶೀ, ತಿಂದುಕಾಷ್ಟಮೀ, ತಿಲಚತುರ್ಥಿ, ದೂರ್ವಾಷ್ಟಮೀ, ಧಾನ್ಯಸಪ್ತಮೀ, ಫಲಷಷ್ಠೀ, ಬಕುಲಾಮಾವಾಸ್ಯಾ, ಮಂದಾರಷಷ್ಟೀ, ರಥಸಪ್ತಮೀ, ವಿಜಯದಶಮೀ, ವಟಸಾವಿತ್ರೀ ವ್ರತ, ಶ್ರೀವೃಕ್ಷೋತ್ಸವಿಧಿ ಮುಂತಾದುವನ್ನು ಹೆಸರಿಸಿದರೆ ಸಾಕು, ಇಲ್ಲಿರುವ ತರು-ಲತೆಗಳ ಪ್ರಾಶಸ್ತ್ಯವೆಷ್ಟೆಂದು ತಿಳಿಯುತ್ತದೆ. ನಮ್ಮ ಅತ್ಯಂತ ಪ್ರಸಿದ್ಧ ಪರ್ವತಗಳನ್ನೇ ನೋಡಿದರೂ ಸಾಕು, ತರು-ಲತೆಗಳ ಪ್ರಚುರತೆ ಅವುಗಳಲ್ಲೆಷ್ಟೆಂದು ಅರಿವಾಗದಿರದು. ಯುಗಾದಿ (ಮಾವು-ಬೇವು), ವಿನಾಯಕ ವ್ರತ (ಇಪ್ಪತ್ತೊಂದು ಬಗೆಯ ಪತ್ರಗಳು), ವರಲಕ್ಷ್ಮೀ/ಸ್ವರ್ಣಗೌರೀವ್ರತ (ಹದಿನಾರು ಬಗೆಯ ಹೂಗಳು), ವಿಜಯದಶಮೀ (ಶಮೀ), ಸಂಕ್ರಾಂತಿ (ಸುಗ್ಗಿಯ ಸರ್ವಸ್ವ) ಎಲ್ಲರಿಗೂ ತಟ್ಟನೆ ನೆನಪಾಗುವಂಥವು. ಇದೇ ರೀತಿ ಗೋವತ್ಸಪ್ರತಿಪತ್, ಕುಕ್ಕುರತ್ರಯೋದಶಿ, ವಾಜಿನೀರಾಜನ, ಗಜನೀರಾಜನ ಮುಂತಾದ ಹಬ್ಬಗಳಲ್ಲಿ ಪ್ರಾಣಿಗಳಿಗಿರುವ ಪ್ರಾಶಸ್ತ್ಯವೂ ಗಮನಾರ್ಹ. ಚೈತ್ರೀ ಆಶ್ವಯುಜೀ ಆಗ್ರಹಾಯಣ, ನವೋದಕಗ್ರಹಣ ಮುಂತಾದ ಕಾಲಿಕಪರ್ವಗಳ ಹಿಂದಿರುವ ಋತುಪರಿವರ್ತನಪ್ರಜ್ಞೆಯೂ ಸ್ಮರಣೀಯ. ಇವೆಲ್ಲ ವ್ರತ-ಪರ್ವ ಉತ್ಸವಗಳೂ ಪದ್ಮ, ಸ್ಕಂದ, ಭವಿಷ್ಯ, ಭವಿಷ್ಯೋತ್ತರಾದಿ ಪುರಾಣಗಳಲ್ಲಿ ಪ್ರಸಿದ್ಧವೆಂಬುದನ್ನು ನಾವು ಮರೆಯುವಂತಿಲ್ಲ.

ಇವಲ್ಲದೆ ಮರ-ಗಿಡಗಳನ್ನು ನೆಡುವುದೂ ಒಂದು ಹಬ್ಬವಾಗಿ, ವ್ರತವಾಗಿ ಪುರಾಣಗಳಲ್ಲಿ ವಿಹಿತವಾಗಿದೆ. ಮುಖ್ಯವಾಗಿ ಅಶ್ವತ್ಥ, ಆಮಲಕ, ನ್ಯಗ್ರೋಧ, ಶಮೀ, ಬಿಲ್ವ, ನಿಂಬ ಮುಂತಾದ ವೃಕ್ಷಗಳ ಆರೋಪಣ-ಆರಾಧನೆಗಳಿಗಾಗಿಯೇ ವಿಸ್ತೃತಕಲ್ಪಗಳಿವೆ; ತೋಟ-ತುಡಿಕೆಗಳನ್ನು ನಿರ್ಮಿಸುವುದೇ ಒಂದು ಪೂಜೆಯಾಗಿದೆ.

ಹೀಗೆಯೇ ಗಂಗಾಷ್ಟಮಿ, ಕಾವೇರೀತೀರ್ಥೋದ್ಭವ, ಕೃಷ್ಣ-ಗೋದಾವರೀ ಪುಷ್ಕರಗಳು, ಯಮುನಾಪೂಜೆಯೇ ಮುಂತಾದ ಅನೇಕ ಪರ್ವ-ಕಲ್ಪವಿಧಿಗಳು ಪುರಾಣಪ್ರೋಕ್ತವಾಗಿದ್ದು, ಇಲ್ಲೆಲ್ಲ ಜಲಸಂಪನ್ಮೂಲಗಳ ಮಹಾತ್ಮ್ಯವೇ ಧ್ವನಿಸಿದೆ.

ನಮ್ಮೀ ಕರ್ಮಕಾಂಡಗಳಲ್ಲಿಯೇ ವಿವಿಧ ದೇವತೆಗಳಿಗೆ ಪ್ರೀತಿಪಾತ್ರವೆನಿಸಿದ ತರು-ಲತಾ-ಗುಲ್ಮ-ತೃಣ-ಪುಷ್ಪ-ಫಲಗಳ ವಿವರಗಳೂ ಅವರೊಲಿದ ವಾಹನಗಳಾದ ಪ್ರಾಣಿ-ಪಕ್ಷಿಗಳೂ ಅವರಿಗೆ ನಚ್ಚೆನಿಸಿದ ಬೆಟ್ಟ-ಗುಡ್ಡ-ಕಾಡು-ಊರು-ನದಿ-ಕೆರೆ-ಝರಿಗಳೂ ಇದೇ ರೀತಿ ಪೂಜಾಪಾತ್ರವೂ ರಕ್ಷಾಯೋಗ್ಯವೂ ಆಗಿದ್ದು ನಮ್ಮ ಪುರಾಣಗಳ ಪರಿಸರಪ್ರಜ್ಞಾಮಾಧುರ್ಯವನ್ನು ಭಂಗ್ಯಂತರಗಳಿಂದ ಎತ್ತಿಹಿಡಿದಿದೆ. ಹೀಗಾಗಿಯೇ ನಮ್ಮಲ್ಲಿ ಪವಿತ್ರವಲ್ಲದ ಮರ-ಗಿಡಗಳಿಲ್ಲ, ಕೆರೆ-ಬಾವಿಗಳಿಲ್ಲ, ತೊರೆ-ಝರಿಗಳಿಲ್ಲ, ಬೆಟ್ಟ-ಗುಡ್ಡಗಳಿಲ್ಲ, ಪ್ರಾಣಿ-ಪಕ್ಷಿಗಳಿಲ್ಲ. ಹೆಚ್ಚೇನು, ಈ ವಿಶ್ವದ ಪ್ರತಿಯೊಂದು ಕಣಕಣವೂ ಆರಾಧ್ಯವಾಗಿದೆ.

ಇದೇ ರೀತಿ ವಿವಿಧ ಪರ್ವಕಾಲಗಳಲ್ಲಿ ಸಾವಿರಾರು ಪುಣ್ಯ ನದಿ-ವಾಪೀ ತಡಾಕ-ಸಾಗರಗಳಲ್ಲಿ ಸ್ನಾನಮಾಡುವುದೊಂದು ವಿಶೇಷಕಲ್ಪವೇ ಆಗಿದೆ. ಹೀಗೆಯೇ ನಾನಾ ಗಿರಿಶಿಖರಾಗ್ರಗಳಿಗೂ ಕ್ಷೇತ್ರಗಳಿಗೂ ಪಯಣಿಸಿ ಅಲ್ಲಿ ಪ್ರತಿಷ್ಠಿತನಾದ ಪರಮಾತ್ಮನನ್ನು ಪ್ರಕೃತಿ-ಸಂಸ್ಕೃತಿಗಳಲ್ಲಿ ಕಂಡು ಆರಾಧಿಸಿ ಧನ್ಯರಾಗುವ ತೀರ್ಥಯಾತ್ರಾಕ್ರಮವು ಅನೇಕ ಪುರಾಣಗಳ ಅಂಗವಾಗಿದೆ. ವಿಶೇಷತಃ ಸ್ಕಾಂದಪುರಾಣವಂತೂ ಈ ಬಗೆಯ ವಿಶ್ವಕೋಶವೇ ಆಗಿದೆ. ಇದಲ್ಲದೆ ಬ್ರಹ್ಮ, ಪದ್ಮ, ಬ್ರಹ್ಮವೈವರ್ತ, ವರಾಹ, ವಾಮನ ಮುಂತಾದ ಮತ್ತೂ ಹತ್ತಾರು ಪುರಾಣಗಳ ಗಣನೀಯಾಂಶವು ತೀರ್ಥ-ಕ್ಷೇತ್ರ ಪರ್ಯಟನ ಮಹಾತ್ಮ್ಯವೇ ಆಗಿದೆ.

ಇನ್ನು ದಾನರೂಪದಲ್ಲಿ ಸಹ ವೃಕ್ಷ-ಲತಾ-ಗುಲ್ಮದಾನಗಳು, ಜಲಕುಂಭದಾನ, ವಾಪೀ-ಕೂಪ-ಆರಾಮ-ವನ-ವಾಟೀ ನಿರ್ಮಾಣ ಮತ್ತು ಪ್ರದಾನಗಳೇ ಮುಂತಾದುವು, ಧಾನ್ಯ-ಫಲ-ಪುಷ್ಪಗಳನ್ನೆಲ್ಲ ಬೆಟ್ಟದಂತೆ ಒಟ್ಟಿ ನೀಡುವ ಮೇರುದಾನಾದಿಗಳೆಲ್ಲ ಮತ್ತೆ ಪುರಾಣಗಳ ಪರಿಸರ ಸಂರಕ್ಷಾಪ್ರಜ್ಞೆಗೇ ಬೇರೊಂದು ಬಗೆಯಿಂದ ನಿದರ್ಶನಗಳಾಗಿವೆ.

ಹೀಗೆಯೇ ಹೋಮಾದಿಗಳಿಗೆ ಬೇಕಾದ ವಿವಿಧ ಸಮಿತ್ ಕುಶ-ಯೂಪಾದಿಗಳ ರೂಪದಲ್ಲಿ ರಾಜ್ಯಾಭಿಷೇಕಾದಿಗಳಿಗೆ ಅವಶ್ಯವಾದ ವಿವಿಧ ಪುಣ್ಯತೀರ್ಥರೂಪದಲ್ಲಿ ಪುನಃ ಸಸ್ಯಲೋಕ ಹಾಗೂ ಜಲಲೋಕದ ಸಂರಕ್ಷೆಯ ತುರ್ತೇ ತೋರಿದೆಯೆಂದರೆ ತಪ್ಪಲ್ಲ.

V

ಕಡೆಯದಾಗಿ ನಾವಿನ್ನು ಪುರಾಣಗಳಲ್ಲಿ ಕಂಡುಬರುವ ಪರಿಸರಪ್ರಜ್ಞಾದ್ಯೋತಕ ಸೂಕ್ತಿಗಳನ್ನೇ ನೇರವಾಗಿ ನೋಡೋಣ. ಇವು ಅಕ್ಷರಶಃ ಸಾವಿರಾರು. ಇಲ್ಲಿ ಕೆಲವೊಂದು ಮುಖ್ಯ ಶ್ಲೋಕಗಳನ್ನಷ್ಟೇ ಗಮನಿಸಬಹುದು. ಶ್ರೀಕೃಷ್ಣನ ಬದುಕಿನಲ್ಲಿ ಪರಿಸರಪ್ರಜ್ಞೆಯು ಅದೆಂತು ಬಿಂಬಿತವಾಗಿದೆಯೆಂದು ನಾನೇ ಹಿಂದೊಮ್ಮೆ ಮಹಾಭಾರತ, ಹರಿವಂಶ, ವಿಷ್ಣುಪುರಾಣ, ಭಾಗವತ ಮತ್ತು ಭವಿಷ್ಯಪುರಾಣಗಳನ್ನು ಆಧರಿಸಿ ಬರೆದ ಲೇಖನವೊಂದನ್ನಿಲ್ಲಿ ನೆನೆದರೆ ಸಾಕು (ಪುರಾಣೇಷು ಭಗವಾನ್ ಶ್ರೀಕೃಷ್ಣಶ್ಚ ಪರ್ಯಾವರಣಮ್, Environment in Purana, ಬೆಂಗಳೂರು, 2000). ಇಂಥ ಸೂಕ್ತಿ-ಸಂದರ್ಭಗಳ ಬಾಹುಳ-ವೈಪುಲ್ಯಗಳು ಅರಿವಾಗುತ್ತವೆ. ಸದ್ಯಕ್ಕೆ ನನ್ನೀ ಪೂರ್ವೋಕ್ತ ಸಂಸ್ಕೃತ ಲೇಖನಕ್ಕೆ ಹೊರತಾದ ಮಿಕ್ಕ ಕೆಲವು ಉಲ್ಲೇಖಗಳನ್ನು ಪರಿಶೀಲಿಸಬಹುದು.

> **ಪ್ರಾವೃಟ್ಕಾಲೇ ಸ್ಥಿತೇ ತೋಯೇ ಹ್ಯಗ್ನಿಷ್ಟೋಮಫಲಂ ಸ್ಮೃತಮ್ ।**
> **ಶರತ್ಕಾಲೇ ಸ್ಥಿತಂ ಯತ್ ಸ್ಯಾತ್ ತದುಕ್ತಫಲದಾಯಕಮ್ ॥**
> **ವಾಜಪೇಯಾತಿರಾತ್ರಾಭ್ಯಾಂ ಹೇಮಂತೇ ಶಿಶಿರೇ ಸ್ಥಿತಮ್ ।**
> **ಅಶ್ವಮೇಧಸಮಂ ಪ್ರಾಹುರ್ವಸಂತಸಮಯೇ ಸ್ಥಿತಮ್ ॥**
> **ಗ್ರೀಷ್ಮೇಽಪಿ ತತ್ಸ್ಥಿತಂ ತೋಯಂ ರಾಜಸೂಯಾದ್ವಿಶಿಷ್ಯತೇ ॥**
> (ಮತ್ಸ್ಯ ಪು. 58–53,54)

ತಾವು ಕಟ್ಟಿಸಿದ ಕೆರೆಯಲ್ಲಿ ವಿವಿಧ ಋತುಗಳಲ್ಲಿ ಚೆನ್ನಾಗಿ ನೀರನ್ನುಳಿಸಿಕೊಳ್ಳುವಂತಾದರೆ ಎಷ್ಟು ಪುಣ್ಯಪ್ರದವೆಂಬ ಆಶಂಸೆ ಇಲ್ಲಿದೆ. ಮಳೆಗಾಲ, ಶರತ್ಕಾಲ, ಚಳಿಗಾಲ, ವಸಂತಕಾಲ ಮತ್ತು ಬೇಸಿಗೆಗಳಲ್ಲಿ ಕ್ರಮಕ್ರಮವಾಗಿ ನೀರಿನ ಕಾಪಾಡಿಕೊಳ್ಳುವಿಕೆಯಿಂದ ಅಗ್ನಿಷ್ಟೋಮ, ಜ್ಯೋತಿಷ್ಟೋಮ, ವಾಜಪೇಯ, ಅತಿರಾತ್ರ, ಅಶ್ವಮೇಧ ಮತ್ತು ರಾಜಸೂಯಗಳಂಥ ಉತ್ತರೋತ್ತರಮಹಿಷ್ಠಯಾಗಗಳ ಫಲವು ದಕ್ಕುವುದೆಂಬ ಆಶ್ವಾಸನೆಯನ್ನು ನೀಡುವ ಈ ಪುರಾಣಭಾಗವು ನಮ್ಮ ಆಧುನಿಕ ಜಗತ್ತಿನ ಜಲಸಂರಕ್ಷಣದ ಕಾಳಜಿಗೆ ಕನ್ನಡಿ ಹಿಡಿದಿದೆ.

ಇದೇ ಪುರಾಣವು ಮರಗಳ ತೋಪನ್ನೂ ನೆಟ್ಟು ಅವುಗಳಿಗೆ ಹೆಸರಿಟ್ಟು, ಕರ್ಣವೇಧಾದಿ ಸಂಸ್ಕಾರಗಳನ್ನೆಲ್ಲ ಮಾಡಿ ಉಡಿಗೆ-ತೊಡಿಗೆ, ಕಾಡಿಗೆ-

ಕುಂಕುಮಗಳನ್ನೆಲ್ಲ ಹೊಂದಿಸಿ ಆರಾಧಿಸುವ ಬಗೆಗೆ ಭಾವಪೂರ್ಣವಾಗಿ ವಿವರಿಸಿದೆ. ಅಲ್ಲದೆ ವೃಕ್ಷಾರೋಪಣದ ಫಲಗಳನ್ನು ಹೀಗೆ ಹಾಡಿದೆ:

> **ಯಶ್ಚೈಕಮಪಿ ರಾಜೇಂದ್ರ ! ವೃಕ್ಷಂ ಸಂಸ್ಥಾಪಯೇನ್ನರಃ ।**
> **ಸೋಽಪಿ ಸ್ವರ್ಗೇ ವಸೇದ್ರಾಜನ್ ! ಯಾವದಿಂದ್ರಾಯುತತ್ರಯಮ್ ॥**
> **ಭೂತಾನ್ ಭವ್ಯಾಂಶ್ಚ ಮನುಜಾಂಸ್ತಾರಯೇದ್ದ್ರುಮಸಂಸ್ಥಿತಾನ್ ।**
> **ಪರಮಾಂ ಸಿದ್ಧಿಮಾಪ್ನೋತಿ ಪುನರಾವೃತ್ತಿದುರ್ಲಭಾಮ್ ॥ (59–18,19)**

ಒಂದಾದರೂ ಮರವನ್ನು ನೆಟ್ಟು ಬೆಳೆಸಿದವರು ಅನಂತಕಾಲವೂ ಸ್ವರ್ಗವನ್ನನುಭವಿಸುವುದಲ್ಲದೆ ತಮ್ಮ ಹಿಂದಿನ ಮುಂದಿನ ಪೀಳಿಗೆಯನ್ನೂ ಮುಕ್ತಿಗೇರಿಸುವರೆಂಬ ಈ ಮಾತುಗಳ ಮಹತ್ತ್ವ ಮನನೀಯ.

ಪದ್ಮಪುರಾಣವು ನದಿಗಳ ಹಾಗೂ ತಾವು ಕಟ್ಟಿಸಿದ ಕೆರೆ–ಕುಂಟೆಗಳ ತೀರಗಳಲ್ಲಿ (ಮಣ್ಣಿನ ಸವಕಳಿಯಾಗದಂತೆ) ಬೆಳೆಸಿದ ಮರಗಳಿದ್ದಲ್ಲಿ ತುಂಬ ಒಳಿತೆಂಬುದನ್ನು ಕಾವ್ಯಮಯವಾಗಿ ಒಕ್ಕಣಿಸಿದೆ.

> **ಪತಂತಿ ಯಾನಿ ಪತ್ರಾಣಿ ಜಲೇ ಪರ್ವಣಿ ಪರ್ವಣಿ ।**
> **ತಾನಿ ಪಿಂಡಸಮಾನೀಹ ಪಿತೃಣಾಮಕ್ಷಯಂ ಯಯುಃ ॥**
> (ಸೃಷ್ಟಿಖಂಡ, 55–6)

ನೀರಿನಲ್ಲಿ ಬಿದ್ದ ಎಲೆಗಳು (ಆಯಾ ಕೆರೆಗಳನ್ನು ಕಟ್ಟಿಸಿ, ಮರಗಳನ್ನು ನೆಟ್ಟವರ) ಪಿತೃಗಳ ಪಾಲಿಗೆ ಅಕ್ಷಯಪಿಂಡಪ್ರದಾನವಾಗಿ ಪರ್ವದಿನಗಳಲ್ಲಿ ಸಂಭವಿಸುತ್ತವೆ.

ಮರಗಳಲ್ಲಿಯೇ ದೇವಾಸುರಸಂಗ್ರಾಮತ್ರಸ್ತರಾದ ದೇವತೆಗಳು ಬಂದು ಗುಟ್ಟಾಗಿ ಅವಿತ ಕಾರಣ ಅವುಗಳು ತುಂಬ ಪೂಜನೀಯವೆಂದು ಇದೇ ಪುರಾಣವು ಮತ್ತೊಂದೆಡೆ ಹೇಳಿದೆ:

> **ಪುರಾ ಕೋಲಾಹಲೇ ಯುದ್ಧೇ ದಾನವೈರ್ನಿರ್ಜಿತಾಸ್ಸುರಾಃ ।**
> **ವೃಕ್ಷೇಷು ವಿವಿಶುಸ್ತತ್ರ ಸೂಕ್ಷ್ಮಾಃ ಪ್ರಾಣಪರೀಪ್ಸಯಾ ॥**
> (ಉತ್ತರಖಂಡ, 151–2)

ಸ್ಕಾಂದಪುರಾಣವು ದೇವತಾಮೂರ್ತಿಗಳಿಗೆ ಬದಲಾಗಿ ಮರಗಳನ್ನೇ ಪೂಜಿಸಲು ತಿಳಿಸಿದೆ; ಹರಿಯು ಅರಳಿಗೂ ಹರನು ಆಲಕ್ಕೂ ಪ್ರತೀಕವೆಂದಿದೆ :

> **ಮೂರ್ತ್ಯಭಾವೇ ಪೂಜನೀಯೋಽಶ್ವತ್ಥೋ ವಾಥ ವಟೋಽಥವಾ ।**
> **ಅಶ್ವತ್ಥರೂಪೀ ವಿಷ್ಣುಃ ಸ್ಯಾತ್ ವಟರೂಪೀ ಶಿವೋ ಯತಃ ॥**
> (ವೈಷ್ಣವಖಂಡ, 4–3–38)

ಇದೇ ಪುರಾಣವು ಪಿತೃ ಋಣ ಪರಿಹಾರಕ್ಕಾಗಿ ಅಶ್ವತ್ಥಪ್ರತಿಷ್ಠೆಯನ್ನು ವಿಸ್ತರಿಸಿದೆ. ಮರ–ಗಿಡಗಳನ್ನು ದೇವರಂತೆ ಮಾತ್ರವಲ್ಲದೆ ಮಕ್ಕಳಂತೆಯೂ ಕಾಣುವ ಬಲ್ಮೆ ಇಲ್ಲಿದೆ.

> **ಪಿತೃಣಾಂ ಗುಪ್ತಯೇ ತೇನ ಸ್ಥಾಪ್ಯೋಽಶ್ವತ್ಥಃ ಸಮಾಧಿನಾ ।**
> **ಪುತ್ರವತ್ಪರಿಪಾಲ್ಯಶ್ಚ ನಿರ್ವಿಶೇಷಂ ನರಾಧಿಪ ॥**
> (ನಾಗರಖಂಡ, 245–43)

ಕೂರ್ಮ ಮತ್ತು ಮತ್ಸ್ಯ ಪುರಾಣಗಳು ಪ್ರಾಣಿ–ಪಕ್ಷಿವಧೆಗೂ ತರು–ಲತಾಚ್ಛೇದಕ್ಕೂ ಬಗೆಬಗೆಯ ದಂಡ–ಪ್ರಾಯಶ್ಚಿತ್ತಗಳನ್ನು ವಿಧಿಸಿರುವುದು ಗಮನಾರ್ಹ. ಇಂಥವನ್ನು ಧರ್ಮಶಾಸ್ತ್ರಗ್ರಂಥಗಳಲ್ಲಿಯೂ ಕಾಣಬಹುದು. ಮೂಲವು ತುಂಬ ದೀರ್ಘವಾದ ಕಾರಣ ಕೇವಲ ಅವುಗಳ ಆಕರಸೂಚಿಯನ್ನಷ್ಟೇ ನಾವಿಲ್ಲಿ ನೀಡಬಹುದು. (ಕೂರ್ಮ ಪು.2–32, 40–59 ಹಾಗೂ ಮತ್ಸ್ಯ ಪು. 227–88–93).

ಇದೇ ರೀತಿಯ ಭಾವಗಳನ್ನು ಮತ್ತಿತರ ಪುರಾಣಗಳಲ್ಲಿಯೂ ಕಾಣಬಹುದು.

> **ಅಸಿಪತ್ರವನಂ ಯಾತಿ ವೃಕ್ಷಚ್ಛೇದೀ ವೃಥೈವ ಯಃ ।**
> (ಶಿವಪುರಾಣ 5–16–18)
> **ಅಂಬರಿಯೇ ಗೋಸ್ವರ್ಣಹೃತಾದ್ರುಮಚ್ಛಿತ್ ವಜ್ರಶಸ್ತ್ರಕೇ ।**
> (ಅಗ್ನಿ ಪು.80–16)

ಭವಿಷ್ಯಪುರಾಣವನ್ನು ಪರಿಸರಪ್ರಜ್ಞೆಯ ವಿಶ್ವಕೋಶವೆಂದೇ ಹೇಳಬಹುದು. ಇಲ್ಲಿ ಧರ್ಮರಾಜನಿಗೆ ಶ್ರೀಕೃಷ್ಣನು ತರುಸಂಸ್ಕೃತಿಯನ್ನು ಕುರಿತು ಅನೇಕಾನೇಕ ಮನನೀಯ ಸಂಗತಿಗಳನ್ನರುಹುತ್ತಾನೆ. ಅಲ್ಲಿಯ ಕೆಲವೊಂದು ಮಾತುಗಳಿಂತಿವೆ:

ಯಸ್ತು ವೃಕ್ಷಂ ಪ್ರಕುರುತೇ ಛಾಯಾಪುಷ್ಪಫಲೋಪಗಮ್ ।
ಪಥಿ ದೇವಾಲಯೇ ಚಾಪಿ ಪಾಪಾತ್ತಾರಯತೇ ಪಿತೄನ್ ॥
(ಮಧ್ಯಮಪರ್ವ, 10–35)

ಪುತ್ರಾಸ್ಸಂವತ್ಸರಸ್ಯಾಂತೇ ಶ್ರಾದ್ಧಂ ಕುರ್ವಂತಿ ವಾ ನ ವಾ ।
ಪ್ರತ್ಯಹಾ ಪಾದಪಾಃ ಪುಷ್ಟಿಂ ಶ್ರೇಯೋಽರ್ಥಂ ಜನಯಂತಿಹಿ ॥
(ಉತ್ತರಪರ್ವ, 128–6)

ನ ತತ್ಕರೋತ್ಯಗ್ನಿಹೋತ್ರಂ ಸುಖಂ ಯದ್ಯೋಷಿತಃ ಸುತಃ ।
ಉತ್ಕರೋತಿ ಘನಚ್ಛಾಯಃ ಪಾದಪಃ ಪಥಿ ರೋಪಿತಃ ॥
(ಅದೇ, 128–7)

ವೃಕ್ಷಾಯುರ್ವೇದವಿಧಿನಾ ವ್ಯಾಧಿತಾಂಸ್ತು ಯಥಾಕ್ರಮಮ್ ।
ನೀರುಜೋಮಾನವಃ ಕೃತ್ವಾ ಸ್ವರ್ಗಲೋಕಮವಾಪ್ನುಯಾತ್ ॥
(ವಿಷ್ಣುಧರ್ಮೋತ್ತರ, 3–297)

ನ ಖಾನಿತಾಃಪುಷ್ಕರಿಣ್ಯೋ ರೋಪಿತಾ ನ ಮಹೀರುಹಾಃ ।
ಮಾತುರ್ಯೌವನಚೋರೇಣ ತೇನ ಜಾತೇನ ಕಿಂ ಕೃತಮ್? ॥
(ಭವಿಷ್ಯ ಪು., ಉತ್ತರಪರ್ವ 128–14)

ಅಹೋ ಏಷಾಂ ವರಂ ಜನ್ಮ ಸರ್ವಪ್ರಾಣ್ಯುಪಜೀವನಮ್ ।
ಸುಜನಸ್ಯೈವ ಯೇಷಾಂ ವೈ ವಿಮುಖಾ ಯಾಂತಿ ನಾರ್ಥಿನಃ ॥
(ಭಾಗವತ ಪು. 10–33)

ಯಾರು ದೇಗುಲದಲ್ಲಾಗಲಿ, ಹಾದಿಗಳಲ್ಲಾಗಲಿ, ನೆಳಲು–ಮಲರು–ಹಣ್ಣುಗಳನ್ನೀಯುವ ಮರಗಳನ್ನು ನೆಟ್ಟು ಬೆಳೆಸುವರೋ ಅವರ ಪಿತೃಗಳೆಲ್ಲ ಪಾಪಮುಕ್ತರಾಗುತ್ತಾರೆ. ಮಕ್ಕಳು ಪ್ರತಿವರ್ಷವೂ ಶ್ರಾದ್ಧವನ್ನು ಮಾಡದಿರಬಹುದು. ಆದರೆ ಪ್ರತಿದಿನವೂ ನಾವೆ ನೆಟ್ಟ ಮರಗಳು ನಮಗೆ ಇಹಪರಾಭಿವೃದ್ಧಿಯನ್ನು ನೀಡುತ್ತಿರುತ್ತವೆ.

ನಾವು ಬೆಳೆಸಿದ ಮಕ್ಕಳು ಬೆಳೆದು ಬುದ್ಧಿವಂತರಾಗಿ ಯಜ್ಞಾದಿಗಳನ್ನು ಮಾಡದಿರಬಹುದು. ಆದರೆ ನಾವೇ ನೆಟ್ಟು ಬೆಳೆಸಿದ ತಣ್ಣೆಳಲಿನ ಸಾಲುಮರಗಳು ಇದಕ್ಕಿಂತ ಮಿಗಿಲಾಗಿ ಯಾಗಫಲವನ್ನು ನೀಡುತ್ತಿರುತ್ತವೆ.

ವೃಕ್ಷಾಯುರ್ವೇದವಿಧಿಯಂತೆ ಮರ–ಗಿಡಗಳ ರೋಗಗಳನ್ನು ನೀಗಿಸಿ ಅವುಗಳ ಪಾಲನೆ–ಪೋಷಣೆ ಮಾಡುವಾತನು ಸ್ವರ್ಗವನ್ನೇ ಸೇರುವನು.

ಯಾವನು ಕೆರೆ–ಬಾವಿಗಳನ್ನು ಅಗೆಸನೋ, ಮರ–ಗಿಡಗಳನ್ನು ಬೆಳೆಸನೋ ಅಂಥ ಮಾತೃಯೌವನಚೋರನ ಹುಟ್ಟಿಂದ ಏನು ತಾನೆ ಒಳಿತಾಯಿತು?

ಆಹಾ ಈ ಮರ–ಗಿಡಗಳ ಸರ್ವಲೋಕೋಪಕಾರಕವಾದ ಬಾಳೇ ಬಾಳು. ಇವುಗಳಿಂದ ಎಂದೂ ಸಜ್ಜನರು–ಯಾಚಕರು ನಿರಾಶೆಗೊಳ್ಳರು.

ಇಂಥ ಮತ್ತೆಷ್ಟೋ ಸೂಕ್ತಿಗಳಿಂದ, ಸ್ಫೂರ್ತಿದಾಯಕ ವಾಕ್ಯಗಳಿಂದ, ಮಾರ್ಗದರ್ಶಕ ಮಹಾಕಥನಗಳಿಂದ, ಪ್ರಜ್ಞೋನ್ಮೇಷಕ ಶಾಸ್ತ್ರಪ್ರಸ್ತಾವಗಳಿಂದ ನಮ್ಮ ಪರಂಪರೆಯ ಮಹಾಪುರಾಣ–ಉಪಪುರಾಣ–ಉಪೋಪಪುರಾಣ ಸಮೂಹವು ಇಡಿಕಿರಿದಿದೆ. ಇವುಗಳ ಕಡೆಗೆ ನಮ್ಮ ಸಮಾಜದ ಗಮನವು ಹಾಯಲೆಂದೂ ಜಗತ್ಕಲ್ಯಾಣವು ಸಾಗಲೆಂದೂ ಆಶಿಸಿ ವಿರಮಿಸಬಹುದು.

❑

ಆಧುನಿಕ ದಿನಗಳಿಗೆ ಪದ್ಮಪುರಾಣದ ಪ್ರಸಂಗೋಚಿತತೆ

—ವಿದ್ವಾನ್ ಜಿ. ಎಸ್. ನಟೇಶ್

ಪುರಾಣಗಳು ಭಾರತೀಯ ಸಂಸ್ಕೃತಿಯನ್ನು ಪ್ರತಿಬಿಂಬಿಸುತ್ತವೆ. ಸನಾತನ ಧರ್ಮದ ಆಚಾರವಿಚಾರಗಳನ್ನು ತಿಳಿಸಿ ಅಂದಿನ ಜನಜೀವನದ ಸ್ವರೂಪವನ್ನು ಪ್ರಸ್ತುತಪಡಿಸುತ್ತವೆ. ನಾಡಿನ ಹಿರಿಯರು ಬಾಳಿ ಬದುಕಿದ ರೀತಿಯನ್ನು ತಿಳಿಸಿ, ನ್ಯಾಯ, ನೀತಿಗಳ ಆದರ್ಶ ಇಂದಿಗೂ ಎಷ್ಟು ಅನುಸಂಧಾನಯೋಗ್ಯವಾಗಿದೆ ಎಂಬುದನ್ನು ಮನದಟ್ಟು ಮಾಡುತ್ತವೆ. ಈ ಲೇಖನದಲ್ಲಿ ಆಧುನಿಕ ಕಾಲಕ್ಕೆ ಪದ್ಮಪುರಾಣದ ಪ್ರಸಂಗೋಚಿತತೆ ನಿರೂಪಿಸುವ ಪ್ರಯತ್ನ ನಡೆದಿದೆ.

ಪುರಾಣಗಳು ಭಾರತೀಯ ಸಂಸ್ಕೃತಿಯನ್ನು ಪ್ರತಿಬಿಂಬಿಸುತ್ತವೆ. ಸನಾತನ ಧರ್ಮದ ಆಚಾರವಿಚಾರಗಳನ್ನು ತಿಳಿಸಿ ಅಂದಿನ ಜನಜೀವನದ ಸ್ವರೂಪವನ್ನು ಪ್ರಸ್ತುತಪಡಿಸುತ್ತವೆ. ನಾಡಿನ ಹಿರಿಯರು ಬಾಳಿ ಬದುಕಿದ ರೀತಿಯನ್ನು ತಿಳಿಸಿ, ನ್ಯಾಯ, ನೀತಿಗಳ ಆದರ್ಶ ಇಂದಿಗೂ ಎಷ್ಟು ಅನುಸಂಧಾನಯೋಗ್ಯವಾಗಿದೆ ಎಂಬುದನ್ನು ಮನದಟ್ಟು ಮಾಡುತ್ತವೆ. [ಪರಬ್ರಹ್ಮನ ಮುಖದಿಂದ ಮೊಟ್ಟಮೊದಲು ಪುರಾಣಗಳು ಹೊರಬಂದವಂತೆ. ನಂತರ ವೇದಗಳು ಹೊರಬಂದವು.]

ವಿಶೇಷವಾಗಿ ಈ ಪುರಾಣಗಳು ಧರ್ಮ, ಅರ್ಥ, ಕಾಮ, ಮೋಕ್ಷ ಈ ಪುರುಷಾರ್ಥಗಳ ಸಾಧನೋಪಾಯಗಳನ್ನು ಬೋಧಿಸುತ್ತವೆ. ಮೊದಲು ಈ ಗ್ರಂಥಗಳು ಅತಿ ವಿಸ್ತಾರವಾಗಿದ್ದು, ಕಾಲಕ್ರಮೇಣ ಜನಸಾಮಾನ್ಯರಿಗೆ ಎಟುಕುವ ದೃಷ್ಟಿಯಿಂದ ದ್ವಾಪರಯುಗದಲ್ಲಿ ವೇದವ್ಯಾಸಮುನಿಗಳ ರೂಪದಲ್ಲಿ ಭಗವಂತ ಅವತರಿಸಿ ಸಂಕ್ಷಿಪ್ತವಾಗಿ ಹದಿನೆಂಟು ಪುರಾಣಗಳನ್ನಾಗಿ ವಿಭಾಗ ಮಾಡಿದನು. ಅವುಗಳಲ್ಲಿ ಪದ್ಮಪುರಾಣವೂ ಒಂದು.

ಪದ್ಮಪುರಾಣವು ಗಾತ್ರದಲ್ಲಿ ಐವತ್ತೈದು ಸಾವಿರ ಗ್ರಂಥ ಸಂಖ್ಯೆಯನ್ನು ಹೊಂದಿದ ಬೃಹತ್ ಪುರಾಣ. ಇದು ಶ್ರೇಷ್ಠ ಪುರಾಣವೂ ಹೌದು. ಇದರಲ್ಲಿ ಐದು ಖಂಡಗಳಿವೆ.

ಪ್ರಥಮಂ ಸೃಷ್ಟಿಖಂಡಂಚ ದ್ವಿತೀಯಂ ಭೂಮಿ ಖಂಡಕಂ
ಪಾತಾಲಂ ಚ ತೃತೀಯಂ ಸ್ಯಾತ್ ಚತುರ್ಥಂ ಪುಷ್ಕರಂ ತಥಾ ।
ಉತ್ತರಂ ಪಂಚಮಂ ಪ್ರೋಕ್ತಂ ಖಂಡಾನ್ಯನುಕ್ರಮೇಣವೈ ॥

ಸೃಷ್ಟಿಖಂಡ, ಭೂಮಿಖಂಡ, ಪಾತಾಳಖಂಡ, ಪುಷ್ಕರಖಂಡ ಹಾಗೂ ಉತ್ತರಖಂಡ ಇವು ಪದ್ಮಪುರಾಣದ ಐದು ಖಂಡಗಳು. ಪೌಷ್ಕರ ಪರ್ವ, ತೀರ್ಥಪರ್ವ, ತೃತೀಯ ಪರ್ವ, ರಾಜವಂಶಪರ್ವ ಹಾಗೂ ಮೋಕ್ಷಪರ್ವ ಇವು ಐದು ಸೃಷ್ಟಿಖಂಡದ ಐದು ಪರ್ವಗಳು.

ಮುಖ್ಯವಾಗಿ ಈ ಪದ್ಮಪುರಾಣವು ವೈಷ್ಣವಪುರಾಣವಾಗಿದೆ. ಇಲ್ಲಿಯ ಹೆಚ್ಚಿನ ಭಾಗವು ವಿಷ್ಣುವಿನ ಪರಮೋತ್ಕರ್ಷವನ್ನು ತಿಳಿಸುವುದರಲ್ಲಿ ಮಹತ್ತ್ವದ ಪಾತ್ರವನ್ನು ವಹಿಸುತ್ತದೆ. ಇಲ್ಲಿ ಇತರ ದೇವತಾನಿಂದೆ, ತಿರಸ್ಕಾರದ ಧ್ವನಿ ಕಾಣುವುದಿಲ್ಲ. ಒಬ್ಬನೇ ಪರಮಾತ್ಮ ಬ್ರಹ್ಮ, ಹರ ಹಾಗೂ ಹರಿಯ ರೂಪದಿಂದ ಸೃಷ್ಟಿ, ಲಯ ಹಾಗೂ ಸ್ಥಿತಿಗಳನ್ನು ಮಾಡುತ್ತಾನೆಂದು ವಿವರಿಸಿ, ಏಕದೇವತ್ವವನ್ನು ಪ್ರತಿಪಾದಿಸಿ ಪರಮಾತ್ಮನ ಬಗೆಗಿನ ಗೊಂದಲವನ್ನು ನಿವಾರಿಸುತ್ತದೆ. ರುದ್ರದೇವರ ಹಾಗೂ ಬ್ರಹ್ಮದೇವರ ಮಹಾಮಹಿಮೆಗಳೂ ಇಲ್ಲಿ ಚೆನ್ನಾಗಿ ವರ್ಣಿಸಲ್ಪಟ್ಟಿವೆ. ಹರಿಹರರಿಗೆ ಎಲ್ಲೆಡೆ ಪ್ರಾಶಸ್ತ್ಯವಿರುವುದನ್ನು ಮನಗಂಡು ಬ್ರಹ್ಮನ ವಿವಾಹದ ಕಥೆಯನ್ನು ಹುಟ್ಟಿಸಿ ಸಾವಿತ್ರಿ ಎಂಬ ಬ್ರಹ್ಮನ ಹೊಸಪತ್ನಿಯ ಮುಖಾಂತರ ಬ್ರಹ್ಮನ ಪೂಜೆಯನ್ನೂ ಪುನಃ ಜಾರಿಗೆ ತರುವ ಪ್ರಯತ್ನ ಇಲ್ಲಿ ಸಾಗಿದೆ. ಪದ್ಮಪುರಾಣದ ಮುಖ್ಯ ಗುರಿ – ವೈದಿಕಧರ್ಮ, ವಿಷ್ಣುಭಕ್ತಿ, ಭಾರತೀಯ ಸಂಸ್ಕೃತಿ, ಪೂರ್ವಕಾಲದ ಜನಜೀವನದ ನೈಜ ಇತಿಹಾಸ, ಮೋಕ್ಷಮಾರ್ಗ ಪ್ರದರ್ಶನ ಮುಂತಾದವುಗಳು.

ಎಲ್ಲಾ ಜಾತಿಯ ಧರ್ಮದ ಜನರೂ, ವೇದಗಳನ್ನು ಓದಲು ಬಾರದವರೂ ಸದ್ಗತಿಯನ್ನು ಪಡೆಯಲಿ ಎಂಬ ಉದ್ದೇಶದಿಂದ ಈ ಪುರಾಣಸಂಹಿತೆಯನ್ನು ಬಾದರಾಯಣರೂಪೀ ಭಗವಂತನು ನಿರ್ಮಿಸಿದನು. ಅಲ್ಲದೆ ಬ್ರಾಹ್ಮಣೇತರನಾದ ಸೂತಜಾತಿಯ ರೋಮಹರ್ಷಣನಿಗೆ ಇದನ್ನು ಉಪದೇಶಿಸಿ ಎಲ್ಲೆಡೆ ಅದನ್ನು ಪ್ರಚುರಪಡಿಸಲು ಆಜ್ಞಾಪಿಸಿದ. ಇದರಿಂದಾಗಿ ಅನೇಕರು ಪೌರಾಣಿಕ ಮಹಾಪಂಡಿತರಾಗಿ ಪೌರಾಣಿಕ ವಾಙ್ಮಯವನ್ನು ಬಿತ್ತರಿಸಿ ವೇದಾದಿಗಳು ಸರ್ವರಿಗೂ ಸಂಗತವಾದವುಗಳೆಂದು ಪ್ರಚುರಪಡಿಸಿದರು.

ಉಗ್ರಶ್ರವನ ಉಪಾಖ್ಯಾನದಿಂದ ಪದ್ಮಪುರಾಣದ ಸೃಷ್ಟಿಖಂಡ ಆರಂಭವಾಗುತ್ತದೆ. ಲೋಮಹರ್ಷ ವೇದವ್ಯಾಸರ ಶಿಷ್ಯ ಹಾಗೂ ಪರಮಜ್ಞಾನಿ. ಅವನು ತನ್ನ ಮಗನಾದ ಉಗ್ರಶ್ರವನಿದ್ದಲ್ಲಿಗೆ ತೆರಳಿ, "ಋಷಿಗಳ ಪುಣ್ಯಾಶ್ರಮಗಳಿಗೆ ಹೋಗಿ ಧರ್ಮದ ಮರ್ಮವನ್ನು

ಅರಿತುಕೊಳ್ಳಬೇಕೆಂಬ ಕುತೂಹಲವನ್ನು ಹೊಂದಿದ ಅವರಿಗೆ ಧರ್ಮರಹಸ್ಯಗಳನ್ನು ವಿವರಿಸಿ ಹೇಳು, ಅಲ್ಲದೆ ನಾನು ಕಲಿಸಿದ ಪುರಾಣಗಳ ರಹಸ್ಯವನ್ನೂ ತಿಳಿಸಿಕೊಡು" ಎಂದು ಹೇಳುತ್ತಾನೆ.

ಹೀಗೆ ಪದ್ಮಪುರಾಣವನ್ನು ಮೊದಲು ಭಗವಂತನು ಬ್ರಹ್ಮದೇವರಿಗೆ, ಬ್ರಹ್ಮದೇವರು ಪುಲಸ್ತ್ಯ ಮುನಿಗೆ, ಪುಲಸ್ತ್ಯ ಮುನಿಯು ಭೀಷ್ಮಾಚಾರ್ಯರಿಗೆ ಗಂಗಾದ್ವಾರದಲ್ಲಿ ಉಪದೇಶಿಸಿದರು.

"ಇತಿಹಾಸ ಪುರಾಣಾಭ್ಯಾಂ ವೇದಂ ಸಮುಪಬೃಂಹಯೇತ್" ಎಂಬ ಮಾತಿನಂತೆ ವೇದಾರ್ಥಗಳನ್ನು ಇತಿಹಾಸ ಪುರಾಣಗಳನ್ನು ಅಧ್ಯಯನ ಮಾಡುವುದರ ಮೂಲಕವೇ ತಿಳಿಯಬೇಕು. ಇದರಿಂದಲೇ ಮನುಷ್ಯನಿಗೆ ಸದ್ಗತಿ ದೊರೆಯುತ್ತದೆ.

ಸೃಷ್ಟಿಖಂಡದಲ್ಲಿ ಭೀಷ್ಮಾಚಾರ್ಯರ ಪ್ರಶ್ನೆಗನುಸಾರವಾಗಿ ಪುಲಸ್ತ್ಯ ಮುನಿಗಳು ಸೃಷ್ಟಿಯ ಕ್ರಮವನ್ನು ವರ್ಣಿಸುತ್ತಾರೆ. ಪ್ರಪಂಚವನ್ನು ನಿರ್ಮಿಸುವ ಪರಾತ್ಪರ ವಸ್ತುವೇ ಪರಮಾತ್ಮ. ಅವನು ಕೇವಲ ಜ್ಞಾನಸ್ವರೂಪಿ ಹಾಗೂ ಚಿನ್ಮಯಿ. ನಮ್ಮಂತೆ ರೂಪಗುಣಾದಿಗಳು ಅವನಿಗಿಲ್ಲ. ಅವನು ಎಲ್ಲ ಜೀವಿಗಳ ಒಳಗೆ ಪುರುಷರೂಪದಿಂದಲೂ, ಹೊರಗೆ ಕಾಲರೂಪದಿಂದಲೂ ನಿಂತುಕೊಂಡು ಸುಖದುಃಖಾದಿಗಳನ್ನು ನೀಡುತ್ತಾನೆ. ಸ್ಥಾವರ ಜಂಗಮಾತ್ಮಕವಾದ ಈ ಜಗತ್ತಿನ ಸೃಷ್ಟಿ-ಸ್ಥಿತಿ-ಲಯಗಳನ್ನು ಮಾಡುವವ ವಿಷ್ಣುವೊಬ್ಬನೇ. ಆ ಒಬ್ಬನೇ ವಿಷ್ಣು ಬ್ರಹ್ಮರುದ್ರರೂಪಗಳನ್ನು ಧರಿಸಿ ಸೃಷ್ಟ್ಯಾದಿಗಳನ್ನು ನಿರ್ವಹಿಸುತ್ತಾನೆ. ಇಲ್ಲಿ ಯಾವುದೇ ಭೇದಭಾವವಿಲ್ಲ. ಎಲ್ಲಾ ಧರ್ಮಗಳೂ ಒಪ್ಪುವ ಆ ಒಂದು ಶಕ್ತಿಯೇ ಭಗವಂತ. ಬೇರೆ ಬೇರೆ ಭಾಷೆಗಳಲ್ಲಿ ನೀರಿಗೆ ನಾನಾ ಹೆಸರುಗಳು ಇರುವಂತೆ ಅವನಿಗೆ ನಾನಾ ಹೆಸರುಗಳು ಇದ್ದರೂ, ನೀರು ಒಂದೇ ಆದಂತೆ ಅವನೊಬ್ಬನೇ. ದೇವರ ಹೆಸರಿನಲ್ಲಿ ಗೊಂದಲ ಸಲ್ಲದು ಎಂದು ಸಾರಿ ಸಾಮರಸ್ಯದ ಭಾವವನ್ನು ಈ ಪುರಾಣ ಇಂದಿನ ಸಮಾಜಕ್ಕೆ ತುಂಬಿ ಸಮಗ್ರತೆಗೆ ವೇದಿಕೆಯನ್ನು ನಿರ್ಮಿಸಿಕೊಡುತ್ತದೆ.

ಬೃಹತ್ತಾದ ಅರಳೀಮರದ ಸಣ್ಣ ಬೀಜದಲ್ಲಿ ಅದರ ಸಂಕ್ಷಿಪ್ತರೂಪ ಹೇಗೆ ಅಡಗಿರುತ್ತದೆಯೋ, ಹಾಗೆ ಈ ಸಮಗ್ರ ಪ್ರಪಂಚ ಪ್ರಳಯ ಕಾಲದಲ್ಲಿ ಬೀಜರೂಪವಾದ ಆಪರಮಾತ್ಮನಲ್ಲಿ ಅಡಗಿರುತ್ತದೆ. ಸೃಷ್ಟಿ, ಸಂರಕ್ಷಣ ಹಾಗೂ ಸಂಹಾರ ರೂಪವಾದ ಜಗತ್ತಿನ ಚಕ್ರಧಾರಿ ಆ ಪರಮಾತ್ಮನೊಬ್ಬನೇ.

'ಸಮುದ್ರ ಮಂಥನ'ದ ಪ್ರಕರಣವೂ ಸೃಷ್ಟಿಖಂಡದಲ್ಲಿಯೇ ಬರುತ್ತದೆ. ಅತ್ರಿಮುನಿಯ ಮಗನಾದ ದೂರ್ವಾಸರು ಭೂಮಂಡಲದಲ್ಲಿ ಸಂಚಾರ ಕೈಗೊಂಡಾಗ ಒಬ್ಬ ವಿದ್ಯಾಧರ ವನಿತೆಯ ದರ್ಶನವಾಗುತ್ತದೆ. ಅವಳ ಕೈಯಲ್ಲಿ ದೇವಲೋಕದ ನಂದನವನದಲ್ಲಿ ಬೆಳೆದ ಮಂದಾರ ಪುಷ್ಪಗಳ ಮಾಲಿಕೆಯಿತ್ತು. ಅದರ ಸುಗಂಧದಿಂದ ಆಕರ್ಷಿತರಾದ ಅವರು, ಅವಳಲ್ಲಿ ಆಹಾರವನ್ನು ಕೊಡುವಂತೆ ಕೇಳಿಕೊಂಡರು. ಅವಳು ಅದನ್ನು ಕೊಟ್ಟು ನಮಸ್ಕರಿಸಿ ಮುನ್ನಡೆದಳು. ಆಗ ದೂರ್ವಾಸರು ಆಕ್ಷಣದಲ್ಲಾದ ತಮ್ಮ ಚಿತ್ತಚಾಂಚಲ್ಯದಿಂದಾಗಿ ಮರುಗಿದರು. ಮತ್ತೆ ತಮ್ಮನ್ನು ಸುಧಾರಿಸಿಕೊಂಡರು. ಹಾಗೆಯೇ ಮುನ್ನಡೆಯುತ್ತಿರುವಾಗ ದೇವೇಂದ್ರ ಎದುರಾದ. ಆ ಹಾರವನ್ನು ದೇವೇಂದ್ರನಿಗಿತ್ತರು. ದೇವೇಂದ್ರ ತನ್ನ ಐರಾವತದ ಮೇಲೆ ಆ ಹಾರವನ್ನಿರಿಸಿದ. ಅದು ಮದದಿಂದ ಅದನ್ನು ಕೆಳಕ್ಕೆ ಎಸೆಯಿತು. ಇದನ್ನು ದೂರ್ವಾಸರು ತಮಗಾದ ಅಪಚಾರವೆಂದು ಬಗೆದು ದೇವೇಂದ್ರನ ಐಶ್ವರ್ಯ ಮಣ್ಣುಪಾಲಾಗುವಂತೆ ಶಪಿಸಿದರು. ದೇವತೆಗಳಿಗೂ ರಾಕ್ಷಸರಿಗೂ ನಡೆದ ಯುದ್ಧದಲ್ಲಿ ದೇವತೆಗಳು ಸೋತುಹೋದರು. ಇದನ್ನರಿತ ಬ್ರಹ್ಮದೇವರು ದೇವತೆಗಳನ್ನು ವಿಷ್ಣುವಿದ್ದಲ್ಲಿಗೆ ಕರೆದೊಯ್ದರು. ವಿಷ್ಣುವು ದೇವತೆಗಳು ರಾಕ್ಷಸರಲ್ಲಿ ಮಿತ್ರತ್ವವನ್ನು ಸಂಪಾದಿಸುವಂತೆಯೂ, ಸಮುದ್ರವನ್ನು ಮಥಿಸುವಂತೆಯೂ ಹೇಳಿ ಅದರಿಂದ ಉತ್ಪತ್ತಿಯಾಗುವ ಅಮೃತವನ್ನು ಕುಡಿದು ಅಮರತ್ವವನ್ನು ಪಡೆಯುವಂತೆಯೂ ದೇವತೆಗಳಿಗೆ ಅರುಹಿ ಆ ವಿಚಾರದಲ್ಲಿ ತಾನು ಸಹಾಯ ಮಾಡುವುದಾಗಿಯೂ ಹೇಳಿದ. ಅದರಂತೆ ಸಮುದ್ರವನ್ನು ಕಡೆದಾಗ ಕಾಮಧೇನು, ವಾರುಣೀದೇವಿ, ಪಾರಿಜಾತ, ಅಪ್ಸರೆಯರು, ಚಂದ್ರ, ಕಾಲಕೂಟ, ಲಕ್ಷ್ಮಿ, ಅಮೃತ ಇವುಗಳ

ಉತ್ಪತ್ತಿಯಾಯಿತು. ರಾಕ್ಷಸರು ಧನ್ವಂತರಿ ಕೈಯಿಂದ ಅಮೃತಕಲಶವನ್ನು ಕಿತ್ತುಕೊಂಡಾಗ, ವಿಷ್ಣುವು ಒಂದು ಸುಂದರ ಹೆಣ್ಣಿನ ರೂಪವನ್ನು ಧರಿಸಿ ತಾನು ಅಮೃತವನ್ನು ಹಂಚುವುದಾಗಿ ಹೇಳಿ ದೇವತೆಗಳಿಗೆ ಹಂಚಿ ಅವರನ್ನು ಅಮರರನ್ನಾಗಿ ಮಾಡಿದ.

ಈ ಪ್ರಕರಣ ಅನೇಕ ಸೂಕ್ಷ್ಮ ವಿಚಾರಗಳನ್ನು ತಿಳಿಸುತ್ತದೆ. ಅಧಿಕಾರ ಎಂದೂ ಶಾಶ್ವತವಲ್ಲ. ಅಧಿಕಾರ ಬಂದಾಗ ಅಹಂಕಾರ ಬರದಂತೆ ಕಾಪಾಡಿಕೊಳ್ಳುವುದೇ ಜಾಣತನ. ಇಲ್ಲದಿದ್ದರೆ ಅದು ಎಂಥವರಿಗೂ ಪಾಠ ಕಲಿಸುತ್ತದೆ. ಭಗವಂತ ಸದಾ ಸಜ್ಜನರ ಪರವಾಗಿ ಕೆಲಸ ಮಾಡುತ್ತಾನೆ. ಕಾಲಕೂಟದಂತಹ ಕಷ್ಟಕಾರ್ಪಣ್ಯಗಳನ್ನು ನುಂಗಲು ಶಿವನಿದ್ದಾನೆ. ಸುವಸ್ತುಗಳು ಸದಾ ಸಜ್ಜನರ ವಶವಾಗಿದ್ದರೆ ಸಮಾಜಕ್ಕೆ ಕ್ಷೇಮ. ಈ ಎಲ್ಲಾ ವಿಷಯಗಳು ಆಧುನಿಕ ಕೊಳ್ಳುಬಾಕ ಸಂಸ್ಕೃತಿಯ ಜಗತ್ತಿಗೆ ಸೂಕ್ತ ಮಾರ್ಗದರ್ಶನವನ್ನು ನೀಡುತ್ತವೆ. ಮುಂದೆ ದಕ್ಷನ ಯಜ್ಞ, ಸತೀದೇವಿ ಯೋಗಾಗ್ನಿಯಿಂದ ತನ್ನನ್ನು ದಹಿಸಿಕೊಂಡದ್ದು, ಶಂಕರನ ಕೋಪ, ವೀರಭದ್ರನ ಸೃಷ್ಟಿ, ದಕ್ಷಯಜ್ಞದ ನಾಶ, ದಕ್ಷನಿಂದ ಶಂಕರನ ಪ್ರಾರ್ಥನೆ, ಅವನಿಗೆ ಶಂಕರನ ಅನುಗ್ರಹ, ಸತೀದೇವಿ ಹಿಮಗಿರಿಯಲ್ಲಿ ಹುಟ್ಟಿದ್ದು, ಶಂಕರ ಅವಳನ್ನು ಸ್ವೀಕರಿಸಿದ್ದು ಮುಂತಾದ ವಿಚಾರಗಳು ಸೃಷ್ಟಿಖಂಡದಲ್ಲಿ ಬರುತ್ತವೆ. ನಂತರ ದಕ್ಷ ಪ್ರಜಾಪತಿ ದೇವದಾನವ ಜೀವಿಗಳ ಸೃಷ್ಟಿಯನ್ನು ಮಾಡಿದ. ದಿತಿದೇವಿಯ ವ್ರತಾಚರಣೆ, ಕಶ್ಯಪಮುನಿಯು ವರ ನೀಡಿದ್ದು, ಪರಿಣಾಮ ದಿತಿ ಇಂದ್ರನನ್ನು ಕೊಲ್ಲುವ ಮಗನನ್ನು ಪಡೆಯುವಂತೆ ಪ್ರಾರ್ಥಿಸಿ ದೈತ್ಯರನ್ನು ಪಡೆದುದು. ಇದೇ ಸಂದರ್ಭದಲ್ಲಿ ಕಶ್ಯಪಮುನಿ, ತನ್ನ ಪತ್ನಿಯಾದ ದಿತಿಗೆ ಗರ್ಭವತಿಯಾದ ಸಮಯದಲ್ಲಿ ಯಾವ ನಿಯಮಗಳನ್ನು ಪಾಲಿಸಬೇಕೆಂಬುದಾಗಿ ಉಪದೇಶ ನೀಡುತ್ತಾನೆ. ಆ ಉಪದೇಶ ಇಂದಿಗೂ ಬಹಳ ಪ್ರಸ್ತುತವಾಗಿದೆ. ವೈಜ್ಞಾನಿಕವಾಗಿಯೂ ಪ್ರಸ್ತುತವೆನಿಸುತ್ತದೆ. ಇದು ನಾರಿಯರ ಧರ್ಮವಾಗಿಯೂ ರೂಪಿತವಾಗಿದೆ. ಅವರು ನೀಡಿದ ಉಪದೇಶದ ಸಾರ ಇಂತಿದೆ:

"ಮುಸ್ಸಂಜೆಯ ಹೊತ್ತು ಊಟ ಮಾಡಬಾರದು, ಗಿಡದ ಕೆಳಗಡೆ ನಿಲ್ಲಬಾರದು. ಒನಿಕೆ, ಒರಳು, ಹಾರೆ ಮುಂತಾದ ಮನೆಕೆಲಸದ ಸಾಮಾನುಗಳ ಮೇಲೆ ಕುಳಿತುಕೊಳ್ಳಬಾರದು. ನೀರಿನಲ್ಲಿ ಮುಳುಗು ಹಾಕಿ ಸ್ನಾನ ಮಾಡಬಾರದು. ಯಾರೂ ಇಲ್ಲದ ಮನೆಯಲ್ಲಿ ಪ್ರವೇಶಿಸಬಾರದು. ಹಾವಿನ ಹುತ್ತದ ಮೇಲೆ ನಿಲ್ಲಬಾರದು. ಚಿಂತೆ ಮಾಡಬಾರದು. ಸಂತಸ ಸಮಾಧಾನವಿರಬೇಕು. ಉಗುರಿನಿಂದ ನೆಲ ಕೊರೆಯಬಾರದು. ಬೂದಿಯಿಂದ ಬರೆಯಬಾರದು. ಸೋಮಾರಿಯಾಗಬಾರದು. ಅತಿ ಶ್ರಮದ ಕೆಲಸ ಕೂಡದು. ಇದ್ದಿಲು, ಮೂಳೆ, ಬೂದಿ, ಒಡೆದ ಮಡಕೆಯ ಚೂರುಗಳ ಮೇಲೆ ನಿಲ್ಲಬಾರದು. ಯಾರೊಡನೆಯೂ ಬಡಿದಾಡಬಾರದು. ಮೈಮುರಿಯಬಾರದು. ಕೂದಲು ಕೆದರಿಕೊಂಡು ಕುಳಿತುಕೊಳ್ಳಬಾರದು. ಮೈಲಿಗೆಯಲ್ಲಿ ಬಹಳ ಹೊತ್ತು ಇರಬಾರದು. ನಿಸರ್ಗಕ್ರಿಯೆಯ ನಂತರ ಅಗತ್ಯವಾಗಿ ಕೈಕಾಲುಗಳನ್ನು ತೊಳೆದುಕೊಳ್ಳಬೇಕು. ಉತ್ತರಕ್ಕೆ ತಲೆ ಇಟ್ಟು ಮಲಗಬಾರದು. ಯಾವಾಗಲೂ ಬೆತ್ತಲೆ ಇರಬಾರದು. ಅಮಂಗಳ ಮಾತು, ಅತಿಹಾಸ್ಯ ಮಾಡಬಾರದು. ಗುರುಪೂಜೆ ದೇವೀಪೂಜೆಗಳನ್ನು ಪ್ರತಿದಿನ ಮಾಡಬೇಕು. ಗಿಡಮೂಲಿಕೆ ಬೆರೆಸಿದ ನೀರಿನಿಂದ ಪ್ರತಿದಿನ ಸ್ನಾನ ಮಾಡಬೇಕು. ಒಳ್ಳೆಯ ಮಾತು, ನಗುಮುಖ ಸದಾ ಇರಬೇಕು. ಗಂಡನಿಗೆ ಹಿತವನ್ನುಂಟುಮಾಡಬೇಕು. ಎಂಥ ಅವಸ್ಥೆಯಲ್ಲಿಯೂ ಪತಿಯನ್ನು ಹೀಗಳೆಯಬಾರದು. ಪತಿಯನ್ನು ಕುರಿತು 'ನೀನು ನನ್ನನ್ನು ಭೋಗಿಸಿ ಮುದುಕಿಯನ್ನಾಗಿ ಮಾಡಿದೆ. ನಿನ್ನ ಕಾರಣದಿಂದ ನಾನು ಸೊರಗಿದೆ, ಮೈ ಸುಕ್ಕಾಗಿದೆ' ಇತ್ಯಾದಿ ಅಧಿಕ್ಷೇಪ ಮಾಡಬಾರದು. ಇದು ಗರ್ಭಿಣಿ ಹೆಣ್ಣುಮಕ್ಕಳ ಧರ್ಮವೂ ಹೌದು. ಎಲ್ಲ ನಾರಿಯರ ಧರ್ಮವೂ ಹೌದು. ಈ ಉಪದೇಶ ಇಂದಿನ ಸಮಾಜಕ್ಕೆ ಅಕ್ಷರಶಃ ಅನ್ವಯವಾಗುವಂಥದ್ದು. ಕೆಲವು ಮೇಲ್ನೋಟಕ್ಕೇ ಅರ್ಥವಾಗುವಂಥವಾದರೂ ಇನ್ನು ಕೆಲವು ಸಂಶೋಧನಾಗಮ್ಯಗಳು ಆಗಿವೆ. ಇವುಗಳನ್ನು ಗಮನಿಸಿದರೆ ಪುರಾಣಗಳು ಕೇವಲ ಪುರಾಣಗಳಲ್ಲ, ನವೀನವೂ ಹೌದು ಎಂಬ ಅಂಶ ತಿಳಿದುಬರುತ್ತದೆ. ಅವು ಇಂದಿಗೂ ಅನುಸರಣೀಯವಾಗಿವೆ.

ಬ್ರಹ್ಮನ ಊರ್ಧ್ವವದನವು ಶಿವನಿಂದ ಭಿನ್ನವಾದ ಪ್ರಸಂಗವೂ ಈ ಸೃಷ್ಟಿಖಂಡದಲ್ಲಿದೆ. ಬ್ರಹ್ಮನ ಐದನೇ ಮುಖವು ಮೇಲ್ಮುಖವಾಗಿತ್ತು. ಅದರಿಂದ ಅವನ ಅಹಂಕಾರ ಹೆಚ್ಚಾಯಿತು. ಇದರಿಂದಾಗಿ ದೇವತೆಗಳು ನಿಸ್ತೇಜರಾದರು. ದೇವತೆಗಳು ಶಿವನಿಗೆ ದೂರಿತ್ತರು. ಶಿವನು ಎಡಗೈ ಹೆಬ್ಬೆರಳ ತುದಿಯಿಂದ ಬ್ರಹ್ಮನ ಪಂಚಮಶಿರವನ್ನು ಕತ್ತರಿಸಿದ. ಅದು ಅವನ ಕೈಗೇ ಅಂಟಿಕೊಂಡಿತು. ಬ್ರಹ್ಮಹತ್ಯಾದೋಷದಿಂದ ಪಾರುಮಾಡುವಂತೆ ಬ್ರಹ್ಮನನ್ನು ಪ್ರಾರ್ಥಿಸಿದ. ಬ್ರಹ್ಮ ವಿಷ್ಣುವ್ರತವನ್ನು ಆಚರಿಸುವಂತೆ ಹೇಳಿದ. ಪುಷ್ಕರಾರಣ್ಯಕ್ಕೆ ಬಂದಾಗ ಬ್ರಹ್ಮ ಶಿವನಿಗೆ ಹೇಳಿದ. "ಅವಿಮುಕ್ತ ಎಂಬ ಪುರಾತನ ಕ್ಷೇತ್ರವಿದೆ. ಅದು ನಿನ್ನ ಕೈಯನ್ನು ಕಪಾಲದಿಂದ ವಿಮೋಚನಗೊಳಿಸುತ್ತದೆ. ವರುಣಾ ಮತ್ತು ಅಸಿ ಎಂಬ ಎರಡು ನದಿಗಳ ಸಂಗಮವದು. ಗಂಗೆಯೂ ಅಲ್ಲಿ ನೆಲೆಸಿ ಆ ಕ್ಷೇತ್ರವನ್ನು ಪಾವನಗೊಳಿಸಿದ್ದಾಳೆ. ಅಲ್ಲಿ ಸ್ನಾನ ಮಾಡಿದ ತಕ್ಷಣ ಕಪಾಲವು ಕಳಚುವುದು. ಉತ್ತರವಾಹಿನಿಯಾದ ಗಂಗೆಯ ಜೊತೆ ಪೂರ್ವವಾಹಿನಿಯಾದ ಸರಸ್ವತೀ ನದಿಯೂ ಅಲ್ಲಿ ಪಾವಿತ್ರ್ಯವನ್ನು ಹೆಚ್ಚು ಮಾಡುತ್ತದೆ. ಆ ಪ್ರದೇಶವೇ 'ವಾರಣಾಸಿ' ಎಂಬ ಹೆಸರಿನಿಂದ ಪ್ರಸಿದ್ಧವಾದ ಪುಷ್ಕರಕ್ಷೇತ್ರವಾಗಿದ್ದು ಎಲ್ಲರಿಗೂ ಮೋಕ್ಷಪ್ರದವಾಗಿದೆ". ಬ್ರಹ್ಮನ ಈ ಮಾತು ವಾರಣಾಸಿಯ ಮಹತ್ವವನ್ನು ತಿಳಿಸಿಕೊಡುತ್ತದೆ.

ಹೀಗೆ ಈ ಸೃಷ್ಟಿಖಂಡದಲ್ಲಿ ಅನೇಕ ವ್ರತವಿಧಾನಗಳನ್ನು ತಿಳಿಸಲಾಗಿದೆ. ಜಲಾಶಯಗಳನ್ನು ನಿರ್ಮಾಣ ಮಾಡುವುದು ಪುಣ್ಯಪ್ರದವೆಂದು ಹೇಳಲಾಗಿದೆ. ಇದರಿಂದ ಪ್ರಕೃತಿಪ್ರಿಯತೆ ವ್ಯಕ್ತವಾಗುತ್ತದೆ. ಇಂದಿಗೂ ಇದು ಅನುಸರಣಯೋಗ್ಯವಾಗಿದೆ. ಗಂಗೆಯ ಮಹಾತ್ಮೆ ಸೂರ್ಯೋಪಾಸನೆ ಇವೆಲ್ಲ ಪ್ರಕೃತಿಯನ್ನು ನಾವು ರಕ್ಷಿಸಿಟ್ಟುಕೊಳ್ಳಬೇಕಾದ ಅಗತ್ಯವನ್ನು ಒತ್ತಿ ಹೇಳುತ್ತವೆ.

ಭೂಮಿಖಂಡದಲ್ಲಿ ಪಿತೃಭಕ್ತಿಯ ಮಹಿಮೆ, ಶಿವಶರ್ಮನಿಗಾದ ಸದ್ಗತಿ, ಪೃಥುರಾಜನ ಚರಿತೆ, ರೋಮಹರ್ಷಣ ವೃತ್ತಾಂತ, ಅಧ್ಯಾತ್ಮ ವಿಚಾರ, ಹುಂಡ ವಧ, ಚ್ಯವನಕುಂಡಲ ಸಂವಾದ, ವಿಹುಂಡ ವಧ ಇತ್ಯಾದಿಗಳ ವಿವರಣೆಯಿದೆ.

ಒಂದು ಸಾವಿರ ವರ್ಷಗಳ ಕಾಲ ತಪಸ್ಸು ಮಾಡಿದ 'ಪಿಪ್ಪಲ' ಎಂಬ ಬ್ರಾಹ್ಮಣ ಎಲ್ಲವನ್ನೂ ವಶೀಕರಿಸಿಕೊಳ್ಳುವ ಶಕ್ತಿಯನ್ನು ಪಡೆದು ವಿದ್ಯಾಧರನಾದ. ಒಮ್ಮೆ ಅವನು ಸರೋವರದಲ್ಲಿ ಸ್ನಾನ ಮಾಡಲು ಹೋದಾಗ ಸಾರಸಪಕ್ಷಿಯೊಂದು ಸುಕರ್ಮನ ವಿಚಾರವನ್ನು ಪ್ರಸ್ತಾಪಿಸಿ ಅವನು ತನ್ನ ಮಾತಾಪಿತೃಗಳ ಶುಶ್ರೂಷೆಯಿಂದಲೇ ಎಲ್ಲವನ್ನೂ ವಶೀಕರಿಸಿಕೊಂಡಿದ್ದಾನೆಂದು ಹೇಳಿತು. 'ನೀನು ಯಾರು' ಎಂದು ಕೇಳಿದಾಗ ಸುಕರ್ಮನೇ ಎಲ್ಲವನ್ನೂ ಹೇಳುತ್ತಾನೆಂದಿತು. ಅವನಲ್ಲಿಗೆ ತೆರಳಿದಾಗ ಅವನು ತನ್ನ ಮಾತಾಪಿತೃಗಳ ಆರೈಕೆಯಲ್ಲಿದ್ದ. ಇವನನ್ನು ಆದರದಿಂದ ಸತ್ಕರಿಸಿದ ಸಾರಸಪಕ್ಷಿ ಕಳುಹಿಸಿತೇನು ಎಂದು ಅವನೇ ಕೇಳಿದ. ಅದು ಯಾರೆಂದು ಕೇಳಿದಾಗ 'ಪರಮೇಶ್ವರ ಬ್ರಹ್ಮಸ್ವರೂಪ'ನೆಂದು ತಿಳಿಸಿದ. ಜಗತ್ತು ಸುಕರ್ಮನ ವಶದಲ್ಲಿರುವುದನ್ನು ಪ್ರತ್ಯಕ್ಷವಾಗಿ ತೋರಿಸಲು ಹೇಳಿದಾಗ ದೇವತೆಗಳನ್ನು ಸ್ಮರಿಸಿದ. ಅವರು ಬಂದು ಅನುಗ್ರಹಿಸಿದರು. ಸುಕರ್ಮ ಎಲ್ಲವನ್ನೂ ವಿವರಿಸಿದ. 'ಪ್ರಾಚೀನ' ಅಂದರೆ ಸರ್ವತ್ರ ವ್ಯಾಪ್ತನಾದ ಜಗನ್ನಾಥನ ಒಂದು ರೂಪ. ಅದನ್ನು ಯೋಗಿಗಳೂ ಕಾಣಲಾರರು. ಅರ್ವಾಚೀನವನ್ನು ವ್ಯಾಸ, ಮಾರ್ಕಂಡೇಯ ಮುಂತಾದ ಮುನಿಗಳು ಮಾತ್ರ ಕಂಡಿದ್ದಾರೆ. ಇದಕ್ಕೆ ರೂಪವಿದೆ. ಯೋಗಿಗಳು ಕಾಣುವ ಶುದ್ಧವಾದ ಪರಬ್ರಹ್ಮವೇ ಪ್ರಾಚೀನ. ಬ್ರಹ್ಮನಿಂದಾರಂಭಿಸಿ ಎಲ್ಲ ಲೋಕವೂ ಅರ್ವಾಚೀನ". ಹೀಗೆ ಹೇಳಿ ಸುಕರ್ಮ ಈ ಜ್ಞಾನವನ್ನು ತಾನು ತಂದೆ-ತಾಯಿಯರ ಸೇವೆ ಮಾಡುವುದರಿಂದಲೇ ತಿಳಿದೆ ಅಂದ. ಎಲ್ಲ ಸಿದ್ಧಿಯೂ ತಂದೆತಾಯಿಯರ ಸೇವೆಯನ್ನು ಪ್ರಾಮಾಣಿಕವಾಗಿ ಮಾಡುವುದರಿಂದಲೇ ಸಿದ್ಧಿಸುತ್ತದೆ ಎಂದು ಹೇಳಿದ. "ನಾಸ್ತಿ ಮಾತೃಸಮಂ ತೀರ್ಥಂ ಪುತ್ರಾಣಾಂಚ ಪಿತುಃ ಸಮಂ। ತಾರಣಾಯ ಹಿತಾಯ್ಶೈವ ಇಹೈವಚ ಪರತ್ರಚ"॥ ಪುರು ಮುಂತಾದವರ ನಿದರ್ಶನವನ್ನಿತ್ತು ಮಾತಾಪಿತೃಗಳ ಮಹಿಮೆಯನ್ನು ತಿಳಿಸಿದ.

ಸ್ವಾರ್ಥವೇ ಜಗತ್ತನ್ನು ಆವರಿಸಿಕೊಂಡಿರುವ ಆಧುನಿಕ ಜಗತ್ತಿನಲ್ಲಿ, ಮಾನವೀಯತೆ ಮರೆಯಾಗುತ್ತಿರುವ ಇಂದಿನ ವಿದ್ಯಮಾನಗಳಲ್ಲಿ

ವೃದ್ಧಾಶ್ರಮಗಳ ಸಂಖ್ಯೆ ದಿನೇ ದಿನೇ ಹೆಚ್ಚುತ್ತಿರುವುದು ಸಮಾಜದ ನೈತಿಕ ಅಧಃಪತನದ ಸೂಚನೆಯಾಗಿದೆ. ಇಂಥ ಪ್ರವೃತ್ತಿಗಳಿಗೆ ಪದ್ಮಪುರಾಣದ ಈ ಪ್ರಕರಣ ಕಡಿವಾಣ ಹಾಕಲು ಅನುವು ಮಾಡಿಕೊಡುತ್ತದೆ. ಇದೇ ಪ್ರಕರಣದಲ್ಲಿ ಗುರುವಿನ ಮಹತ್ವವನ್ನೂ ವಿವರಿಸಲಾಗಿದೆ.

ಮುಂದೆ ಗೃಹಸ್ಥಧರ್ಮದ ವಿಶ್ಲೇಷಣೆ ಮಾಡಲಾಗಿದೆ. ತಂದೆತಾಯಿಗಳ ಸೇವೆ ಗೃಹಸ್ಥಧರ್ಮದ ಪ್ರಮುಖವಾದ ಅಂಶ. ಗೃಹಸ್ಥನಾದವನು ದಾನಧರ್ಮಗಳನ್ನು, ಯಾಗಗಳನ್ನು ಸದಾ ಮಾಡಬೇಕು. ದೈವಭಕ್ತಿ ಅವನಿಗಿರಬೇಕು. ಕ್ಷಮೆ, ದಯಾದಿ ಗುಣಗಳು ಅವನಲ್ಲಿರಬೇಕು. ಮದುವೆಯಾದ ಮಾತ್ರಕ್ಕೆ ಅವನು ಗೃಹಸ್ಥನೆನಿಸುವುದಿಲ್ಲ. ಕ್ಷಮೆ, ದಯೆ, ವಿಜ್ಞಾನ, ಸತ್ಯ, ದಮ, ಶಮ, ಅಧ್ಯಾತ್ಮ ನಿಷ್ಠೆ, ಜ್ಞಾನ ಇವೆಲ್ಲವೂ ಗೃಹಸ್ಥನ ಲಕ್ಷಣಗಳು. ಧರ್ಮಸಾಧನೆ ಅವನ ಪರಮಗುರಿ. ಆ ಮೂಲಕ ಅವನು ಭಗವಂತನನ್ನು ಪಡೆಯಬೇಕು. ಧರ್ಮಸಾಧನವಾದ ಶರೀರವನ್ನು ಯತ್ನದಿಂದ ಕಾಪಾಡಿಕೊಳ್ಳಬೇಕು. ಅವನ ಅರ್ಥಕಾಮಗಳು ಧರ್ಮವಿರುದ್ಧವಾಗಿರಬಾರದು. ಪ್ರಾಣಿಗಳ ಹಿತವನ್ನು ಬಯಸಬೇಕು. ಪರದ್ರೋಹ ಮಾಡಬಾರದು. ವೇದಗಳ ಹಾಗೂ ದೇವತೆಗಳ ನಿಂದೆ ಮಾಡಬಾರದು. ಸುಳ್ಳು ಹೇಳಬಾರದು. ಅಹಿತ ಹಾಗೂ ಅಪ್ರಿಯ ವಚನಗಳ್ನಾಡಬಾರದು. ಕಳ್ಳತನ ಸಲ್ಲದು. ಸದಾ ಬೇಡುತ್ತಿರಬಾರದು. ಗುರು ದ್ರೋಹವನ್ನು ಎಂದೂ ಮಾಡಬಾರದು. ಜನಾಪವಾದಕ್ಕೆ ಗುರಿಯಾಗಬಾರದು. ನಾಸ್ತಿಕತೆ ಮಹಾಪಾಪ. ಬಹುಜನರ ವಿರೋಧದಿಂದ ಕಲಹ ಮಾಡಬಾರದು. ತನಗೆ ಅಹಿತವೆನಿಸಿದ್ದನ್ನು ಇತರರಿಗೆ ಮಾಡಬಾರದು. ಆತ್ಮಪ್ರಶಂಸೆಯನ್ನೂ ಪರನಿಂದೆಯನ್ನೂ ಮಾಡಬಾರದು. ಮದ್ಯದ ದರ್ಶನ, ಸ್ಪರ್ಶನ, ದಾನ ಹಾಗೂ ಪಾನ ಎಲ್ಲವೂ ನಿಷಿದ್ಧ. ಸತ್ಪಾತ್ರರಿಗೆ ದಾನ ಮಾಡುವುದೂ ಅವನ ಕರ್ತವ್ಯಗಳಲ್ಲೊಂದು. ಎಲ್ಲಾ ದಾನಗಳಲ್ಲಿ ವಿದ್ಯಾದಾನ ಪರಮಶ್ರೇಷ್ಠವಾದುದು.

ಶೇಷ ವಾತ್ಸ್ಯಾಯನ ಸಂವಾದದಿಂದ ಪಾತಾಳಖಂಡ ಆರಂಭವಾಗುತ್ತದೆ. ಶ್ರೀರಾಮನ ನಂದಿಗ್ರಾಮ ದರ್ಶನ, ಶ್ರೀರಾಮನ ಪುರಪ್ರವೇಶ, ಶ್ರೀರಾಮ ರಾಜ್ಯಾಭಿಷೇಕ, ರಾವಣನ ಉತ್ಪತ್ತಿ, ಅಗಸ್ತ್ಯರ ಉಪದೇಶ, ಸೀತಾ ಪರಿತ್ಯಾಗ, ಲವ-ಕುಶರ ಜನನ, ಶ್ರೀಕೃಷ್ಣ ಮಹಿಮೆ, ವೈಷ್ಣವ ಧರ್ಮ ವರ್ಣನೆ, ವಿಷ್ಣು ಪೂಜಾ ವಿಧಾನ, ಶಿವರಾಘವರ ಸಂವಾದ, ಭಸ್ಮಧಾರಣೆಯ ಮಹತ್ವ, ಶಿವಪೂಜೆಯ ಮಹಿಮೆ ಇತ್ಯಾದಿಗಳು ಇಲ್ಲಿ ವರ್ಣಿತವಾಗಿವೆ. ಈ ಶೇಷರಾಮಾಯಣವೇ ಕವಿ ಮುದ್ದಣ್ಣನ ಶ್ರೀರಾಮಾಶ್ವಮೇಧಕ್ಕೆ ವಸ್ತು ಎಂಬುದು ಇಲ್ಲಿ ಗಮನಾರ್ಹ.

ರಾವಣನ ಸಂಹಾರದಿಂದ ಲೋಕಕ್ಕೆ ಮಂಗಳವಾದರೂ, ಮುನಿಗಳ ಪೀಡೆ ದೂರವಾದರೂ, ತಾನು ಬ್ರಹ್ಮಹತ್ಯೆಯ ದೋಷಕ್ಕೆ ಒಳಗಾದೆನೆಂದು ಶ್ರೀರಾಮ ಪರಿತಪಿಸುವ ಸಂದರ್ಭದಲ್ಲಿ ಅಗಸ್ತ್ಯರು ಅವನಿಗೆ ಉಪದೇಶ ನೀಡಿ ಸಾಂತ್ವನಗೈಯುತ್ತಾರೆ. ಅಲ್ಲದೆ ಅಶ್ವಮೇಧಯಾಗವನ್ನು ಮಾಡಿ ಆ ಎಲ್ಲಾ ಪಾಪಗಳನ್ನು ತೊಳೆದುಕೊಳ್ಳುವಂತೆ ಸಲಹೆ ನೀಡುತ್ತಾರೆ. ಅದರಂತೆ ಶ್ರೀರಾಮ ಅಶ್ವಮೇಧಯಾಗವನ್ನು ನೆರವೇರಿಸುತ್ತಾನೆ. ಹೀಗೆ ಯಾಗದ ಸುಸಂದರ್ಭದಲ್ಲಿ ಋಷಿಗಳೆಲ್ಲ ಒಂದೆಡೆ ಸೇರಿದ್ದರಿಂದ ವರ್ಣಾಶ್ರಮಗಳ ಬಗ್ಗೆ ವಿಚಾರಗಳು ನಡೆದವು. ದಾನಧರ್ಮಗಳನ್ನು ಮಾಡಬೇಕು. ಗೃಹಸ್ಥನಾದವನು ಎಂದೂ ನೀಚ ಕೆಲಸಗಳನ್ನು ಮಾಡಬಾರದು. ಪರಸ್ತ್ರೀಯರನ್ನು ಎಂದೂ ಬಯಸಬಾರದು. ಸತ್ಪಾತ್ರನಿಗೆ ಅನ್ನ ನೀರು ಹಣ್ಣು ಗಡ್ಡೆಗಳನ್ನು ನೀಡಿದರೆ ಗೋದಾನದ ಫಲ ಸಿಗುತ್ತದೆ. ಬೆಂಕಿಯಲ್ಲಿ ಕಾಲುಗಳನ್ನು ಕಾಯಿಸಬಾರದು. ಅಶುಚಿಯಾದ ಪದಾರ್ಥಗಳನ್ನು ಬೆಂಕಿಯಲ್ಲಿ ಹಾಕಬಾರದು. ಪ್ರಾಣಿಹಿಂಸೆ ಕೂಡದು. ಸಂಧ್ಯಾಕಾಲದಲ್ಲಿ ಊಟ ಮಾಡಬಾರದು. ಇನ್ನೊಬ್ಬರ ಬಟ್ಟೆ, ಪಾದರಕ್ಷೆಗಳನ್ನು ಬಳಸಬಾರದು. ಮಲಗಿ ಊಟ ಮಾಡಬಾರದು. ಕಾಲು ಒದ್ದೆ ಇರುವಾಗ ಮಲಗಬಾರದು. ಊಟ ಮಾಡಿದ ಮೇಲೆ ಬಾಯಿ-ಕೈ-ಕಾಲು ತೊಳೆಯದೆ ಎಲ್ಲಿಗೂ ಪ್ರಯಾಣ ಮಾಡಬಾರದು. ತಲೆ ಮುಟ್ಟಿಕೊಳ್ಳಬಾರದು. ಮನುಷ್ಯರ ಸ್ತುತಿ, ಆತ್ಮನಿಂದೆ, ಪರರ ರಹಸ್ಯಗಳನ್ನು ಬಯಲು ಮಾಡುವುದು ಇವನ್ನು ಬಿಡಬೇಕು. ಹೀಗೆ ಗೃಹಸ್ಥಧರ್ಮವನ್ನು ಆಚರಿಸಿ ಮುಂದೆ ಪತ್ನಿಯೊಂದಿಗೆ ಅಥವಾ ಅವಳನ್ನು ಬಿಟ್ಟು

ವಾನಪ್ರಸ್ಥಾಶ್ರಮವನ್ನು ಸ್ವೀಕರಿಸಿ ಕೊನೆಗೆ ಸಂನ್ಯಾಸವನ್ನು ಸ್ವೀಕರಿಸಬೇಕು. ಹೀಗೆ ಶ್ರೀರಾಮನು ಧರ್ಮಾಚರಣೆಯ ರಹಸ್ಯವನ್ನು ಮುನಿಗಳಿಂದ ಕೇಳಿ ತಿಳಿದನು. ಇದು ಧರ್ಮಾಚರಣೆಯ ರಹಸ್ಯವೂ ಹೌದು, ಆರೋಗ್ಯಶಾಸ್ತ್ರವೂ ಹೌದು. ಇವೆಲ್ಲ ಇಂದಿಗೂ ಆಚರಣೆಯೋಗ್ಯವೇ ಆಗಿವೆ. ಇಂಥ ಆಚರಣೆಗಳು ಆತ್ಮೋದ್ಧಾರಕ್ಕೂ ಕಾರಣವಾಗುತ್ತವೆ ಹಾಗೂ ಸಮಾಜದ ಸ್ವಾಸ್ಥ್ಯವನ್ನೂ ವರ್ಧಿಸಬಲ್ಲವು.

ಶ್ರೀರಾಮ ಅಯೋಧ್ಯೆಯನ್ನು ಆಳುತ್ತಿರಬೇಕಾದರೆ ರಾಜನಾದವನು ಆಳ್ವಿಕೆಯನ್ನು ಹೇಗೆ ನಡೆಸಬೇಕೆಂಬುದನ್ನು ತಿಳಿಸಿಕೊಡುತ್ತಾನೆ. ಪ್ರಜೆಗಳ ಯೋಗಕ್ಷೇಮವೇ ಶ್ರೀರಾಮನ ಪ್ರಥಮ ಆದ್ಯತೆಗಳಲ್ಲೊಂದು. ಎಲ್ಲ ಪ್ರಜೆಗಳನ್ನು ಮಕ್ಕಳಂತೆ ಪಾಲಿಸುತ್ತಿದ್ದನು. ಮೊಲೆಯುಣಿಸುವ ತಾಯಿಯೂ ಮಗುವಿಗೆ ಹೇಳುತ್ತಿದ್ದಳಂತೆ – "ಮಗೂ, ಈಗಲೇ ಬೇಕಾದಷ್ಟು ಹಾಲನ್ನು ಕುಡಿದುಬಿಡು. ಶ್ರೀರಾಮನ ಪ್ರಭಾವದಿಂದ ಮುಂದೆ ಜನನ–ಮರಣಗಳಿಲ್ಲದುದರಿಂದ ಇಂಥ ಅವಕಾಶ ಮುಂದೆಂದೂ ಬರದು". ಪ್ರಣಯಕಾಲದಲ್ಲಿಯೂ ಶ್ರೀರಾಮನನ್ನು ನೆನೆಸಿಕೊಳ್ಳುತ್ತಿದ್ದರಂತೆ. ಲೋಕದ ವಿಚಾರಗಳನ್ನು ಸರಿಯಾಗಿ ತಿಳಿದುಕೊಳ್ಳಲು ಗೂಢಚರರನ್ನು ನೇಮಿಸಿದ್ದ. ಅದರಿಂದಾಗಿ ಪ್ರಜೆಗಳ ನಿಜವಾದ ಅಭಿಪ್ರಾಯಗಳು ರಾಜನಿಗೆ ತಿಳಿಯುತ್ತಿದ್ದವು. ಗೂಢಚರರಿಲ್ಲದ ರಾಜ್ಯ ನಾಶವಾಗುತ್ತದೆ. ಪ್ರಜೆಗಳಿಗೆ ನ್ಯಾಯ ಒದಗಿಸಬೇಕೆಂಬ ಉದ್ದೇಶವನ್ನು ಹೊಂದಿದ ರಾಜ ತಾನೂ ಗುಪ್ತ ವೇಷದಿಂದ ಸಂಚರಿಸಬೇಕಾಗುವುದು. ಇದೀಗ ಬೇಲಿಯೇ ಹೊಲವನ್ನು ತಿನ್ನುತ್ತಿರುವ ಕಾಲ ಒದಗಿ ಬಂದಿದೆ. ರಾಮರಾಜ್ಯದ ಆದರ್ಶ ಎಲ್ಲರಿಗೂ ಸುಖವೀಯುವಂಥದ್ದು. ಒಬ್ಬ ಅಗಸನ ಮಾತಿಗೆ ನೊಂದ ಶ್ರೀರಾಮ ಸೀತೆಯನ್ನೇ ಕಾಡಿಗೆ ಅಟ್ಟಿದ. ಅಂದಮೇಲೆ ಶ್ರೀರಾಮನ ಪ್ರಥಮ ಆದ್ಯತೆ ಪ್ರಜಾಸುಖ. ನಿಸ್ವಾರ್ಥದ ಆಡಳಿತ ಎಲ್ಲ ಪ್ರಜೆಗಳಿಗೂ ನೆಮ್ಮದಿ ಸುಖವನ್ನು ತಂದುಕೊಡುತ್ತದೆ. ಆದರೆ ಬಲವಾದ ಇಚ್ಛಾಶಕ್ತಿ ಪ್ರಾಮಾಣಿಕತೆಗಳು ಆಡಳಿತಗಾರರಿಗಿರಬೇಕು.

ಶ್ರೀರಾಮ ಪ್ರಾಸಂಗಿಕವಾಗಿ ಶಂಭುಮುನಿಯನ್ನು ಕುರಿತು, ಯಾವ ಯಾವ ಯುಗದಲ್ಲಿ ಯಾವ ಯಾವ ಧರ್ಮಾಚರಣೆಗೆ ಪ್ರಾಶಸ್ತ್ಯವಿದೆ ಎಂದು ಕೇಳಿದಾಗ ಆ ಶಂಭುಮುನಿಯು ಈ ಕೆಳಕಂಡಂತೆ ಹೇಳುತ್ತಾನೆ.

> **ಧ್ಯಾನಮೇವ ಕೃತೇಶ್ರೇಷ್ಠಂ ತ್ರೇತಾಯಾಂ ಯಜ್ಞ ಏವಚ ।**
> **ದ್ವಾಪರೇ ಚಾರ್ಚನಂ ಚೈವ ದಾನಂ ಚ ಹರಿಕೀರ್ತನಂ ॥**

ಕೃತಯುಗದಲ್ಲಿ ಧ್ಯಾನ ಶ್ರೇಷ್ಠವಾದರೆ, ತ್ರೇತಾಯುಗದಲ್ಲಿ ಯಜ್ಞ ಶ್ರೇಷ್ಠವಾದುದು. ದ್ವಾಪರದಲ್ಲಿ ಪೂಜೆ ಶ್ರೇಷ್ಠವಾದರೆ ಕಲಿಯುಗದಲ್ಲಿ ದಾನ ಮಾಡುವುದು ಹಾಗೂ ಭಗವಂತನ ನಾಮಕೀರ್ತನೆ ಶ್ರೇಷ್ಠ.

ಕಲಿಯುಗದಲ್ಲಿ ಧ್ಯಾನ ನಡೆಯುವುದು ಬಹಳ ಕಷ್ಟ. ಈ ಯುಗದ ಜನರ ಮನಸ್ಸು ಅಷ್ಟೊಂದು ಪಕ್ವವಾಗಿರುವುದಿಲ್ಲ. ವಿಷಯಸುಖದ ಕಡೆಗೇ ಹೆಚ್ಚು ಗಮನವಿರುವುದರಿಂದ ಭಗವಂತನ ಧ್ಯಾನ ಮಾಡುವುದು ವಿರಳ. ಹೆಚ್ಚು ಕಾಲಾವಕಾಶವನ್ನು ಅಪೇಕ್ಷಿಸುವ ವೇದಾಭ್ಯಾಸ, ಪುರಾಣ ಶ್ರವಣ, ತೀರ್ಥಯಾತ್ರೆ, ಜಪ ಮುಂತಾದವನ್ನು ಮಾಡಲು ಜನ ಅಪೇಕ್ಷಿಸುವುದಿಲ್ಲ. ದಾನಕ್ಕೆ ಹೆಚ್ಚು ಕಾಲ ಬೇಕಾಗಿಲ್ಲವಾದ್ದರಿಂದ ಅದು ಕಲಿಯುಗದಲ್ಲಿ ಪ್ರಶಸ್ತವಾದುದು. ಭಜನೆಯ ಮೂಲಕವೂ ಭಗವಂತನನ್ನು ಕಲಿಯುಗದಲ್ಲಿ ಒಲಿಸಿಕೊಳ್ಳಲು ಸಾಧ್ಯ. ಕಲಿಯುಗದಲ್ಲಿ ಪುರಾಣಾದಿಗಳ ಶ್ರವಣ ಮಾಡುವುದರಿಂದ ಪಾಪ ನಾಶವಾಗುತ್ತದೆ.

ಉತ್ತರಖಂಡದಲ್ಲಿ ಅನೇಕ ತೀರ್ಥಕ್ಷೇತ್ರಗಳ ವರ್ಣನೆಯಿದೆ. ಶ್ರೀಶೈಲ, ಹರಿದ್ವಾರ, ಗಂಗೆಯ ಮಹತ್ವ, ಪ್ರಯಾಗ, ದಾನಗಳ ಪ್ರಶಂಸೆ, ಏಕಾದಶೀ ಮಹತ್ವ, ತೀರ್ಥಕ್ಷೇತ್ರಗಳಲ್ಲಿ ಆಯಾ ಸಂದರ್ಭಕ್ಕನುಗುಣವಾಗಿ ಮಾಡುವ ಸ್ನಾನ, ಮಾಸಗಳಲ್ಲಿ ಆಚರಿಸಲಾಗುವ ಧರ್ಮಾಚರಣೆ, ಚಾತುರ್ಮಾಸ್ಯ ವ್ರತ, ವಿಷ್ಣುವಿನ ಮಹಾತ್ಮ್ಯ, ವಿಷ್ಣುವಿನ ವ್ರತ, ದೀಪಾವಳಿ ಮಹತ್ವ, ಸಾಲಿಗ್ರಾಮ ಪೂಜೆಯ ಮಹತ್ವ ಮೊದಲಾದವುಗಳನ್ನು ವಿವರಿಸಲಾಗಿದೆ. ನಾವು ಆಚರಿಸುವ ಧರ್ಮಾಚರಣೆಗಳಿಗೆ ಸಮರ್ಪಕ ಆಧಾರಗಳನ್ನು ಈ ಪದ್ಮಪುರಾಣ ಒದಗಿಸುತ್ತದೆ.

ವೇದಗಳನ್ನು ಬಿಟ್ಟರೆ ಪುರಾಣಗಳಿಗೇ ಹೆಚ್ಚು ಮಹತ್ವವಿದೆ. ಇವುಗಳನ್ನು ಪಂಚಮ ವೇದವೆಂದೂ ಕರೆಯುತ್ತಾರೆ. ಇಲ್ಲಿ ಬರುವ ಅನೇಕ ಕಥೆಗಳು ಕೇವಲ ಕಥೆಗಳಾಗಿರದೆ ಬದುಕಿಗೆ ಮೌಲ್ಯವನ್ನು ತುಂಬುವ ಕೆಲಸ ಮಾಡುತ್ತವೆ. ಹತ್ತಾರು ಕಡೆ ಹರಿದು ಹಂಚಿ ಹೋಗುವ ಸ್ವಭಾವವುಳ್ಳ ನಮ್ಮ ಮನಸ್ಸನ್ನು ತಹಬಂದಿಗೆ ತರುವಲ್ಲಿ ಈ ಪುರಾಣಗಳು ಯಶ ಕಾಣುತ್ತವೆ. ಭಗವಂತನ ಬಗ್ಗೆ ಶ್ರದ್ಧೆ ಮೂಡುತ್ತದೆ. ಭಗವಂತನ ಮಹಾತ್ಮ್ಯವನ್ನು ತಿಳಿದವನು ಧರ್ಮಭೀರುವಾಗಿ ಬದುಕನ್ನು ನಡೆಸುತ್ತಾನೆ. ಇದರ ಪರಿಣಾಮ ಮನುಷ್ಯ ಸಮಾಜಕ್ಕೆ ಕಂಟಕನಾಗಿ ಬಾಳದೇ ಹಿತಕಾರಿಯಾಗಿ ಬದುಕುತ್ತಾನೆ. ವೇದಗಳನ್ನು ಅಧ್ಯಯನ ಮಾಡಲಾಗದ ಯಾವುದೇ ವ್ಯಕ್ತಿ ಪುರಾಣಗಳ ಶ್ರವಣದಿಂದ ಅಷ್ಟೇ ಪುನೀತನಾಗುತ್ತಾನೆ. ಭಾರತೀಯ ಸಂಸ್ಕೃತಿಯನ್ನು ಎತ್ತಿಹಿಡಿಯಬಲ್ಲ ಇಂಥ ಗ್ರಂಥಗಳು ಮನುಷ್ಯನನ್ನು ಸಮಾಜಮುಖಿಯಾಗಿ ಮಾಡುವುದರ ಜೊತೆಗೆ ಬದುಕಿನ ಪರಮಗುರಿಯಾದ ಮೋಕ್ಷವನ್ನು ಸಂಪಾದಿಸುವತ್ತ ದಿಕ್ಸೂಚಿಯಾಗಿ ನಿಲ್ಲುತ್ತವೆ. ಇವುಗಳನ್ನೆಲ್ಲಾ ಓದದೇ ಜಗತ್ತಿನಲ್ಲಿ ಕೆಟ್ಟವರುಂಟೇ ಹೊರತು ಓದಿ ಕೆಟ್ಟವರಿಲ್ಲ. ಏಕೆಂದರೆ ನಮ್ಮ ಹಿರಿಯ ಋಷಿಗಳ ತಪಸ್ಸು ಇದರಲ್ಲಿದೆ. ಅವರ ದೂರದರ್ಶಿತ್ವ, ಪ್ರಕೃತಿಪ್ರಿಯತೆ, ವಿಶ್ವಾತ್ಮತಾಭಾವ ಎಲ್ಲವನ್ನೂ ನಾವಿಲ್ಲಿ ಕಾಣಬಹುದು. ಉತ್ತರಖಂಡದ ಭಗೀರಥನ ವೃತ್ತಾಂತ ಪುರುಷ ಪ್ರಯತ್ನ ಹೇಗೆ ಸಾಗಬೇಕು ಎಂಬುದನ್ನು ತಿಳಿಸಿಕೊಡುತ್ತದೆ. ಭಗೀರಥ ಗಂಗೆಯನ್ನು ತನ್ನ ಸ್ವಾರ್ಥಕ್ಕಾಗಿ ಭೂಮಿಗೆ ತರದೇ ಸಕಲ ಜೀವಾತ್ಮರಿಗೆ ಲೇಸನ್ನೇ ಬಯಸಿ, ಸಕಲೋದ್ಧಾರಕ್ಕೆ ಆ ಕೆಲಸವನ್ನು ಮಾಡಿ ಇಂದಿಗೂ ಪ್ರಶಂಸೆಗೆ ಪಾತ್ರನಾಗಿದ್ದಾನೆ. ಇತರರಿಗಾಗಿ ಬದುಕನ್ನು ಸವೆಸುವಾತನೇ ನಿಜವಾದ ಮನುಷ್ಯ. ಈ ಪುರಾಣಗಳಲ್ಲಿ ಬರುವ ಅನೇಕ ದುಷ್ಟಶಕ್ತಿಗಳು ತಮ್ಮ ದುಷ್ಟತನದಿಂದಲೇ ನಾಶವಾದರು. ದುಷ್ಟರ ನಾಶ ಹಾಗೂ ಶಿಷ್ಟರ ಉದ್ಧಾರಕ್ಕಾಗಿಯೇ ಭಗವಂತ ಅವತರಿಸುತ್ತಾನೆ ಎಂಬ ಭರವಸೆಯನ್ನು ದೃಢವಾಗಿ ಇಲ್ಲಿಯ ಪ್ರಸಂಗಗಳು ಮೂಡಿಸುತ್ತವೆ.

ಕರ್ಮಾಧೀನಂ ಜಗತ್ಸರ್ವಂ ವಿಷ್ಣುನಾನಿರ್ಮಿತಂ ಪುರಾ ।
ತತ್ಕರ್ಮ ಕೇಶವಾಧೀನಂ ರಾಮನಾಮ್ನಾವಿನಶ್ಯತಿ ॥

ಈ ಸಮಸ್ತ ಜಗತ್ತು ಕರ್ಮಾಧೀನ. ಆ ಕರ್ಮಗಳೆಲ್ಲ ವಿಷ್ಣುವಿನ ಅಧೀನವಾದವು. ಸಾಕ್ಷಾತ್ ಹರಿಯೇ ಇದೆಲ್ಲದರ ಕರ್ತೃ. ಹರಿಯನಾಮಸ್ಮರಣೆಯಿಂದಲೇ ನಾವು ಮಾಡಿದ ಕರ್ಮಗಳೆಲ್ಲ ಕಳಚಿಕೊಳ್ಳುತ್ತವೆ. "ಕಾಮ್ ಕರತೇ ರಹೋ ನಾಮ್ ಜಪತೇ ರಹೋ" ಇದು ಪುರಾಣಗಳು ನಮಗೆ ನೀಡುವ ಉಪದೇಶ.

"ಆನೋ ಭದ್ರಾ : ಕ್ರತವೋಯಂತು ವಿಶ್ವತಃ". ವಿಶ್ವದ ಎಲ್ಲೆಡೆಯಿಂದಲೂ ಒಳಿತನ್ನು ನಮ್ಮೆಡೆಗೆ ಸ್ವಾಗತಿಸೋಣ.

॥ ಇತಿ ಶಂ ॥

❑

ವಾಯುಪುರಾಣದಲ್ಲಿ ಸೃಷ್ಟಿಕ್ರಮ

—ವಿದ್ವಾನ್ ಗುಂಡ್ಮಿ ಗಣಪಯ್ಯ ಹೊಳ್ಳ,

ಋಕ್, ಯಜುಃ, ಸಾಮ, ಅಥರ್ವ- ಈ ಚತುರ್ವೇದಗಳು ತ್ರಿಕಾಲಾಬಾಧಿತ ಮುಕ್ತಿಸಾಧನಗಳು. ಅಖಂಡ ವೇದರಾಶಿಯನ್ನು ವಿಭಜಿಸಿ, ನಾಲ್ಕು ವೇದಗಳ ರೂಪಕೊಟ್ಟವರು ವ್ಯಾಸಮಹರ್ಷಿಗಳು. ಈ ಕಾರಣದಿಂದಲೇ ಅವರು ವೇದವ್ಯಾಸರೆನಿಸಿದರು. ಜೊತೆಗೆ ವೇದಪ್ರತಿಪಾದಿತವಾದ ತತ್ವಜ್ಞಾನವನ್ನು ಆಖ್ಯಾನಗಳ ಮೂಲಕ ವಿಶದವಾಗಿ ತಿಳಿಸಲು ಅಷ್ಟಾದಶ ಪುರಾಣಗಳನ್ನು ವ್ಯಾಸರು ರಚಿಸಿದರು. ಈ ಲೇಖನದಲ್ಲಿ ವಾಯುಪುರಾಣದಲ್ಲಿ ನಿರೂಪಿತವಾದ ಸೃಷ್ಟಿ ಕ್ರಮವನ್ನು ವಿವೇಚಿಸಲಾಗಿದೆ.

ಜಯತಿ ಪರಾಶರಸೂನುಃ ಸತ್ಯವತೀಹೃದಯನಂದನೋ ವ್ಯಾಸಃ ।
ಯಸ್ಯಾಸ್ಯಕಮಲಗಲಿತಂ ವಾಙ್ಮಯಮಮೃತಂ ಜಗತ್ ಪಿಬತಿ ॥

ಋಕ್, ಯಜುಃ, ಸಾಮ, ಅಥರ್ವ – ಈ ಚತುರ್ವೇದಗಳು ತ್ರಿಕಾಲಾಬಾಧಿತ ಮುಕ್ತಿಸಾಧನಗಳು. ಅಖಂಡ ವೇದರಾಶಿಯನ್ನು ವಿಭಜಿಸಿ, ನಾಲ್ಕು ವೇದಗಳ ರೂಪಕೊಟ್ಟವರು ವ್ಯಾಸಮಹರ್ಷಿಗಳು. ಈ ಕಾರಣದಿಂದಲೇ ಅವರು ವೇದವ್ಯಾಸರೆನಿಸಿದರು. ಜೊತೆಗೆ ವೇದಪ್ರತಿಪಾದಿತವಾದ ತತ್ವಜ್ಞಾನವನ್ನು ಆಖ್ಯಾನಗಳ ಮೂಲಕ ವಿಶದವಾಗಿ ತಿಳಿಸಲು ಅಷ್ಟಾದಶ ಪುರಾಣಗಳನ್ನು ವ್ಯಾಸರು ರಚಿಸಿದರು.

ಅಷ್ಟಾದಶ ಪುರಾಣಾನಾಂ ವಕ್ತಾ ಸತ್ಯವತೀಸುತಃ । –

ಎನ್ನುತ್ತದೆ ರೇವಾಖಂಡ.

ಪುರಾ ನೀಯತೇ ಇತಿ ಪುರಾಣಂ, ಪುರಾಭವಂ ಪುರಾಣಂ – ಎಂಬ ನಿರ್ವಚನದಂತೆ ಭಗವಂತನ ಪುರಾತನ ವೃತ್ತಾಂತವೇ ಪುರಾಣ. ಪುರಾ ಅಪಿ ನವಂ– ಎಂಬುದು ಶಾಂಕರಭಾಷ್ಯದಲ್ಲಿ ಬರುವ ವ್ಯಾಖ್ಯೆ.

ಪದ್ಮ ಪುರಾಣದಲ್ಲಿಯ ವ್ಯಾಖ್ಯೆ ಹೀಗಿದೆ:

ಪುರಾ ಪರಂಪರಾಂ ವಕ್ತಿ ಪುರಾಣಂ ತೇನ ವೈ ಸ್ಮೃತಂ ।

ಅಥರ್ವವೇದದಲ್ಲಿ ಬರುವ ಮಂತ್ರ ಇದು :–

ತಮಿತಿಹಾಸಶ್ಚ ಪುರಾಣಂ ಚ ಗಾಥಾಶ್ಚ ನಾರಾಶಂಸೀಶ್ಚಾನುವ್ಯಚಲತ್ ।
– ಅ.ವೇ. 15.2.1.4

'ಅಸ್ಯ ಮಹತೋ ಭೂತಸ್ಯ ನಿಶ್ವಸಿತಮೇತದ್ ಯದ್ ಋಗ್ವೇದೋ
ಯಜುರ್ವೇದೋ ಸಾಮವೇದೋಽಥರ್ವಾಂಗಿರಸಃ ।

ಇತಿಹಾಸಃ ಪುರಾಣಂ ವಿದ್ಯೋಪನಿಷದಃ ಶ್ಲೋಕಃ ಸೂತ್ರಾಣ್ಯನುವ್ಯಾಖ್ಯಾನಾನೀತಿ' – ಎಂಬುದು ಶತಪಥ ಬ್ರಾಹ್ಮಣದ ವಚನ (14.6.100).

ಪುರಾಣಗಳು ಪ್ರಧಾನವಾಗಿ ನಾಲ್ಕು ವಿಧ:–

1. ಪುರಾಣ 2, ಅತಿಪುರಾಣ 3. ಮಹಾಪುರಾಣ 4. ಉಪ ಪುರಾಣ

ಪುರಾಣದ ಸ್ವರೂಪವನ್ನು ಹೀಗೆ ವಿವರಿಸಿದೆ:–

ಸರ್ಗಶ್ಚ ಪ್ರತಿಸರ್ಗಶ್ಚ ವಂಶೋ ಮನ್ವಂತರಾಣಿ ಚ ।
ವಂಶಾನುಚರಿತಂ ಚೇತಿ ಪುರಾಣಂ ಪಂಚಲಕ್ಷಣಂ ॥

– ಇವು ವಿಷ್ಣು, ಬ್ರಹ್ಮಾಂಡಾದಿ ಪುರಾಣಗಳಲ್ಲಿ ಹೇಳಿದ ಪುರಾಣದ ಐದು ಲಕ್ಷಣಗಳು.

1. ಸೃಷ್ಟಿ ತತ್ವ 2. ಪುನಃ ಸೃಷ್ಟಿ ಮತ್ತು ಲಯ 3. ದೇವ, ಪಿತೃಗಳ ವಂಶಾವಳಿ
4. ಮನ್ವಂತರಗಳ ವಿವೃತಿ. ಯಾವ ಮನು ಎಷ್ಟು ಕಾಲದವರೆಗೆ ಆಧಿಪತ್ಯದಲ್ಲಿದ್ದ ಎಂಬುದರ ವಿವರ ಹಾಗೂ 5. ಸೂರ್ಯ, ಚಂದ್ರರ ವಂಶಜರಾದ ರಾಜರ ವಂಶಗಳ ವರ್ಣನೆ – ಇವೈದೂ ಲಕ್ಷಣಗಳಿದ್ದರೆ ಅದು ಪುರಾಣ.

ಆಖ್ಯಾನೈಶ್ಚಾಪ್ಯುಪಾಖ್ಯಾನೈರ್ಗಾಥಾಭಿಃ ಕಲ್ಪಶುದ್ಧಿಭಿಃ ।
ಪುರಾಣಸಂಹಿತಾಂ ಚಕ್ರೇ ಪುರಾಣಾರ್ಥವಿಶಾರದಃ ॥

ಎಂದೂ ಪುರಾಣದ ಸ್ವರೂಪವನ್ನು ಹೇಳಲಾಗಿದೆ.

ಕಥೆ, ಉಪಕಥೆ, ಶಿವಗೀತೆ, ಕಪಿಲಗೀತೆ ಮುಂತಾದ ಗಾಥಾಗಳಿಂದ ಮತ್ತು ಬ್ರಾಹ್ಮಕಲ್ಪ, ವಾರಾಹಕಲ್ಪ ಮುಂತಾದ ಕಲ್ಪಗಳಿಂದ ಪುರಾಣಗಳ ಅರ್ಥದಲ್ಲಿ ನಿಪುಣನಾದವನು ಪುರಾಣಸಂಹಿತೆಯನ್ನು ಮಾಡಿದನು.

ಬೃಹದ್ವಿಷ್ಣುಪುರಾಣ ಮುಂತಾದ ಅಷ್ಟಾದಶ ಪುರಾಣಗಳಲ್ಲಿ ವಾಯುಪುರಾಣವೂ ಸೇರಿದೆ.

2. ಅತಿಪುರಾಣದಲ್ಲೂ ಕಾರ್ತವಾದಿ ಹದಿನೆಂಟು ಭೇದಗಳಿವೆ.

3. ಮಹಾಪುರಾಣ ಹನ್ನೊಂದು ಲಕ್ಷಣಗಳನ್ನು ಹೊಂದಿದೆ:–

> ಸೃಷ್ಟಿಶ್ಚಾಪಿ ವಿಸೃಷ್ಟಿಶ್ಚ ಸ್ಥಿತಿಸ್ತೇಷಾಂ ಚ ಪಾಲನಂ ।
> ಕರ್ಮಣಾಂ ವಾಸನಾ ವಾರ್ತಾ ಮನೂನಾಂ ಚ ಕ್ರಮೇಣ ಚ ॥
>
> ವರ್ಣನಂ ಪ್ರಲಯಾನಾಂ ಚ ಮೋಕ್ಷಸ್ಯ ಚ ನಿರೂಪಣಂ ।
> ಉತ್ಕೀರ್ತನಂ ಹರೇರೇವ ದೇವಾನಾಂ ಚ ಪೃಥಕ್ ಪೃಥಕ್ ॥
> ದಶಾಧಿಕಂ ಲಕ್ಷಣಂ ಚ ಮಹತಾಂ ಪರಿಕೀರ್ತಿತಂ ।

ಎಂದು ಬ್ರಹ್ಮವೈವರ್ತದಲ್ಲಿ ಹೇಳಿದೆ. ಸೃಷ್ಟಿ, ವಿಸೃಷ್ಟಿ, ಸ್ಥಿತಿ, ರಕ್ಷಣೆ, ಕರ್ಮವಾಸನಾ, ಕ್ರಮವಾಗಿ ಮನುಗಳ ವರ್ಣನೆ, ಪ್ರಲಯಗಳ ವರ್ಣನೆ, ಮೋಕ್ಷದ ನಿರೂಪಣೆ, ಹರಿಸಂಕೀರ್ತನೆ, ಬೇರೆ ಬೇರೆ ದೇವತೆಗಳ ಸಂಕೀರ್ತನೆಗಳನ್ನು ಮಹಾಪುರಾಣ ಒಳಗೊಂಡಿರುತ್ತದೆ.
ಮಹಾಪುರಾಣಗಳೂ ಹದಿನೆಂಟು. ಅವುಗಳ ಗಣನೆ ಹೀಗಿದೆ:-

> ಮದ್ವಯಂ ಭದ್ವಯಂ ಚೈವ ಬ್ರತ್ರಯಂ ವಚತುಷ್ಟಯಂ ।
> ಅನಾಪಲಿಂಗಕೂಸ್ಕಾನಿ ಪುರಾಣಾನಿ ಪ್ರಚಕ್ಷತೇ ॥

ಮತ್ಸ್ಯ, ಮಾರ್ಕಂಡೇಯ (ಮ 2) ಭವಿಷ್ಯತ್, ಭಾಗವತ (ಭ 2) ಬ್ರಹ್ಮ, ಬ್ರಹ್ಮವೈವರ್ತ, ಬ್ರಹ್ಮಾಂಡ (ಬ್ರ 3) ವಿಷ್ಣು, ವಾಮನ, ವಾಯು, ವರಾಹ (ವ 4) ಅಗ್ನಿ (ಅ) ನಾರದ (ನಾ) ಪದ್ಮ (ಪ), ಲಿಂಗ (ಲಿಂ), ಗರುಡ (ಗ), ಕೂರ್ಮ (ಕೂ), ಸ್ಕಂದ (ಸ್ಕ) – ಈ ಅಷ್ಟಾದಶ ಮಹಾಪುರಾಣಗಳಲ್ಲಿಯೂ ವಾಯುಪುರಾಣ ಸೇರಿದೆ.

ಶಿವ ಪುರಾಣಕ್ಕೇನೆ ವಾಯುಪುರಾಣ – ಎಂದು ಹೆಸರು ಎಂಬುದು ಹಲವರ ಅಭಿಮತ. ವಾಯುಪ್ರೋಕ್ತವಾದ ಕಾರಣ ಆ ಹೆಸರು. ಆದರೆ ಮುದ್ಗಲಪುರಾಣದಲ್ಲಿ ಶಿವ ಮತ್ತು ವಾಯುಪುರಾಣಗಳು ಬೇರೆ ಬೇರೆ ಎಂಬಂತೆ ನಿರೂಪಿಸಲಾಗಿದೆ. ಅದನ್ನೇ ಆಧಾರವಾಗಿಟ್ಟುಕೊಂಡು ವಾಯುಪುರಾಣದ ಬಗ್ಗೆ ಇಲ್ಲಿ ಹೇಳಬಹುದಾಗಿದೆ.

ವಾಯುವು ಈ ಪುರಾಣವನ್ನು ಹೇಳಿದ ಕಾರಣ ಇದು ವಾಯುಪುರಾಣ:-

ಪುರಾಣಂ ಸಂಪ್ರವಕ್ಷ್ಯಾಮಿ ಯದುಕ್ತಂ ಮಾತರಿಶ್ವನಾ । (ವಾ.ಪು. 1.47) (ಮಾತರಿಶ್ವ = ವಾಯು) – ಎಂಬುದು ಅಲ್ಲಿಯದೇ ವಾಕ್ಯ. ಪ್ರಥಮ ಅಧ್ಯಾಯದ ಅನುಕ್ರಮಣಿಕೆಯಲ್ಲಿ ವಾಯುವಿನಿಂದ ಹೇಳಲಾದ ಪುರಾಣವಿದು ಎಂದು ಸ್ಪಷ್ಟವಾಗುತ್ತದೆ. ವಾಕ್ಯ ಹೀಗಿದೆ:-

> ತದಾ ವೈ ನೈಮಿಷೇಯಾಣಾಂ ಸತ್ರೇ ದ್ವಾದಶವಾರ್ಷಿಕೇ
> (ವಾ.ಪು. 1.191)
> ಕಥ್ಯತೇ ಯತ್ರ ವಿಪ್ರಾಣಾಂ ವಾಯುನಾ ಬ್ರಹ್ಮವಾದಿನಾ ।
> ಧನ್ಯಂ ಪ್ರಶಸ್ಯಮಾಯುಷ್ಯಂ ಸರ್ವಪಾಪಪ್ರಣಾಶನಂ ॥
> ಕೀರ್ತನಂ ಶ್ರವಣಂ ಚಾಸ್ಯ ಧಾರಣಂ ಚ ವಿಶೇಷತಃ ।
> ಅನೇನ ಹಿ ಕ್ರಮೇಣೇದಂ ಪುರಾಣಂ ಸಂಪ್ರಚಕ್ಷ್ಯತೇ ।
> (ವಾಯುಪು. 1.196.7)

ನೈಮಿಷಾರಣ್ಯವಾಸಿಗಳು ಹನ್ನೆರಡು ವರ್ಷಗಳಲ್ಲಿ ನಡೆಸಿದ ಸತ್ರದಲ್ಲಿ ಬ್ರಹ್ಮವಾದಿಯಾದ ವಾಯುವು ವಿಪ್ರರಿಗೆ ಹೇಳಿದ ಪುರಾಣವಿದು. ಇದರ ಕೀರ್ತನ, ಶ್ರವಣ, ವಿಶೇಷವಾಗಿ ಧಾರಣವು ಧನ್ಯವೂ, ಪ್ರಶಸ್ತವೂ, ಆಯುಷ್ಕಾರಕವೂ, ಸರ್ವಪಾಪನಾಶಕವೂ ಆಗಿದೆ. ಈ ಪುರಾಣ 112 ಅಧ್ಯಾಯಗಳಿಂದಲೂ, 10991 ಶ್ಲೋಕಗಳಿಂದಲೂ ಕೂಡಿದೆ.

ಶಿವಬ್ರಹ್ಮವಾಯುಮಹೇಂದ್ರರನ್ನೂ, ವಶಿಷ್ಠ, ಜಾತೂಕರ್ಣ ಹಾಗೂ ವ್ಯಾಸರನ್ನೂ ವಂದಿಸಿ, ಆರಂಭಗೊಳ್ಳುವ ಮೊದಲ ಅಧ್ಯಾಯ ಅನುಕ್ರಮಣಿಕೆ. 2. ದ್ವಾದಶವಾರ್ಷಿಕ ಸತ್ರ. 3. ಪ್ರಜಾಪತಿಸೃಷ್ಟಿಕಥನ 4.
5. 6. ಸೃಷ್ಟಿ ಪ್ರಕರಣ 7. ಪ್ರತಿಸಂಧಿಕೀರ್ತನ
8. ಚತುರಾಶ್ರಮ ವಿಭಾಗ 9. ದೇವಾದಿ ಸೃಷ್ಟಿ; ಇದಲ್ಲದೆ 103ನೇ ಅಧ್ಯಾಯದಲ್ಲಿ ಸೃಷ್ಟಿ ವರ್ಣನೆ ಇದೆ.

ಪ್ರಸ್ತುತ ವಾಯುಪುರಾಣದಲ್ಲಿ ಸೃಷ್ಟಿಕ್ರಮದ ಬಗ್ಗೆ ಅವಲೋಕಿಸೋಣ. ಸೃಷ್ಟಿ ಎಂಬುದು ಪುರಾಣದ ಪಂಚಲಕ್ಷಣದಲ್ಲಾಗಲೀ, ಮಹಾಪುರಾಣದ ಹನ್ನೊಂದು ಲಕ್ಷಣದಲ್ಲಾಗಲೀ ಮೊದಲನೆಯದು. ಆದ್ದರಿಂದ ಅಷ್ಟಾದಶ ಪುರಾಣಗಳಲ್ಲೂ ಸೃಷ್ಟಿಯ ವಿವರಣೆಗಾಗಿ ಹಲವಾರು ಅಧ್ಯಾಯಗಳು

ಮೀಸಲಾಗಿರುತ್ತವೆ. ವಾಯು ಪುರಾಣದಲ್ಲಿ 3ರಿಂದ 6ರ ವರೆಗಿನ ನಾಲ್ಕು ಅಧ್ಯಾಯಗಳೂ, ದೇವಾದಿಸೃಷ್ಟಿಯ 9ನೇ ಅಧ್ಯಾಯವೂ ಸೃಷ್ಟಿಯ ವಿವರಣೆಯನ್ನೊಳಗೊಂಡಿವೆ. ಜೊತೆಗೆ ಬೇರೆ ಅಧ್ಯಾಯಗಳಲ್ಲೂ ಸೃಷ್ಟಿ ಪ್ರಾಸಂಗಿಕವಾಗಿ ಬರುತ್ತದೆ.

ಮಹಾಪ್ರಳಯವಾದಾಗ ಜಗತ್ತು ಏಕಾರ್ಣವವಾಯಿತು. ಎಲ್ಲೆಡೆ ಸಮುದ್ರವೇ ತುಂಬಿತು. ಅಲ್ಲಿ ನಾರಾಯಣನು ಯೋಗನಿದ್ರೆಯಲ್ಲಿರುತ್ತಾನೆ. ಇದು ಸತ್ವಗುಣವುಳ್ಳ ಸಮಾಧಿಸ್ಥಿತಿ. ಸ್ವಲ್ಪಕಾಲಾನಂತರ ರಜೋಗುಣದ ಪ್ರಾಬಲ್ಯದಿಂದ ಸೃಷ್ಟಿಯ ಸಂಕಲ್ಪವಾಗುತ್ತದೆ. ಮೊದಲು ಬ್ರಹ್ಮನ ಜನನ. ಆತನ ಮನಸ್ಸಿನಿಂದ ಪ್ರಜಾಪತಿಗಳ ಉದ್ಭವ. ಅವರೆಲ್ಲರೂ ಸೃಷ್ಟಿಯ ಸಂಕಲ್ಪದಿಂದ ಸತ್ರ(ಮಹಾಯಜ್ಞ)ವನ್ನು ಮಾಡಲು ಇಚ್ಛಿಸಿ ಬ್ರಹ್ಮನಲ್ಲಿ ಸಮುಚಿತ ಸ್ಥಳ ತೋರಿಸಲು ಕೇಳಿಕೊಳ್ಳುತ್ತಾರೆ.

ಬ್ರಹ್ಮನು ತನ್ನ ಚಕ್ರವನ್ನೆಸೆದು ಅದು ಬೀಳುವ ಸ್ಥಳ ಪವಿತ್ರವಾಗಿದ್ದು ಅಲ್ಲಿ ಯಜ್ಞವನ್ನು ನೆರವೇರಿಸಲು ಹೇಳುತ್ತಾನೆ. ಚಕ್ರವು ಜಂಬೂದ್ವೀಪದ ಹೃದಯದಂತಿರುವ ಭಾರತವರ್ಷದಲ್ಲಿ ಬಿದ್ದಿತು. ಅದು ಬಿದ್ದ ರಭಸಕ್ಕೆ ಅಲ್ಲಿದ್ದ ದೊಡ್ಡ ಬಂಡೆ ಚೂರಾಗಿ ನದೀ ಉದ್ಭವಿಸಿತು. ಅದೇ ಚಕ್ರತೀರ್ಥ. ಚಕ್ರದ ಸುತ್ತಪಟ್ಟಿ (ನೇಮಿ) ಬಿದ್ದ ಜಾಗದಲ್ಲಿ ನೈಮಿಷಾರಣ್ಯವಾಯಿತು. ಅಲ್ಲಿ ಹನ್ನೆರಡು ವರ್ಷಗಳ ಕಾಲ ಸತ್ರ ನೆರವೇರಿತು.

ಪ್ರಜಾಪತಿಗಳ ಸೃಷ್ಟಿಯನ್ನು ಮೂರನೇ ಅಧ್ಯಾಯದಲ್ಲಿ ಹೀಗೆ ವಿವರಿಸಲಾಗಿದೆ:-

ಪ್ರಣಮ್ಯ ವಕ್ಷ್ಯೇ ಕಲಿಪಾಪನಾಶಿನೀಂ ಪ್ರಜಾಪತೇಃ
ಸೃಷ್ಟಿಮಿಮಾಮನುತ್ತಮಾಂ ।
ಸುರೇಶದೇವರ್ಷಿಗಣೈರಲಂಕೃತಾಂ
ಶುಭಾಮತುಲ್ಯಾಮಮದಾಮೃಷಿಪ್ರಿಯಾಂ ॥ 3.6

ಇಂದ್ರ, ದೇವತೆಗಳು ಮತ್ತು ಋಷಿಗಣದಿಂದ ಭೂಷಿತವಾದ ಸೃಷ್ಟಿಯನ್ನು ಹೇಳುವುದಾಗಿ ಇಲ್ಲಿ ನಿವೇದಿಸಲಾಗಿದೆ. ಪ್ರಕೃತಿ ಮತ್ತು ಪುರುಷರ ಯೋಗದಿಂದ ಸೃಷ್ಟಿ ಪ್ರಕ್ರಿಯೆ ಆರಂಭಗೊಂಡಿತು. ಪ್ರಧಾನವೆಂಬುದು ಪ್ರಕೃತಿಯ ಮತ್ತೊಂದು ಹೆಸರು. ಮೊದಲಲ್ಲಿ ಪ್ರಧಾನದ ಪ್ರವೃತ್ತಿ. ಸ್ವಯಂಭುವನಾದ ಲೋಕದ ಪಿತಾಮಹನು ಉತ್ಪಾದಕನಾಗಿ ರಜೋಗುಣದ ಆಧಿಕ್ಯದಿಂದ ಪ್ರಕೃತಿಯಿಂದ ಸೃಷ್ಟಿಕಾರ್ಯ ನೆರವೇರಿಸುತ್ತಾನೆ. ಮಹೇಶ್ವರನ ಸಂಕಲ್ಪಮಾತ್ರದಿಂದ ದೇವ, ಅಸುರಾದಿಗಳು, ವೃಕ್ಷ, ಸಮುದ್ರಗಳು, ಗಂಧರ್ವ, ಯಕ್ಷ, ಉರಗ ಮತ್ತು ಮನುಷ್ಯರು, ಮನು, ಪ್ರಜಾಪತಿ, ಋಷಿ, ಪಿತೃ, ದ್ವಿಜರು, ಪಿಶಾಚ, ಯಕ್ಷ, ಉರಗ ಮತ್ತು ರಾಕ್ಷಸರು, ತಾರೆ, ಗ್ರಹ, ಸೂರ್ಯ, ನಕ್ಷತ್ರ ಮತ್ತು ಚಂದ್ರರು, ಮಾಸ, ಋತು, ಸಂವತ್ಸರ, ರಾತ್ರಿ ಮತ್ತು ಹಗಲುಗಳು, ದಿಕ್ಕು, ಕಾಲ, ಯೋಗ ಮುಂತಾದವು ಯುಗ ಮತ್ತು ಅಯನಗಳು ವನ, ಔಷಧಿ ಮತ್ತು ಲತೆಗಳು, ಜಲಚರಗಳು, ಅಪ್ಸರರು ಮತ್ತು ಪಶುಗಳು, ವಿದ್ಯುತ್, ನದೀ, ಮೇಘ ಮತ್ತು ಪಕ್ಷಿಗಳು, ಒಟ್ಟಿನಲ್ಲಿ ಅತ್ಯಂತ ಸೂಕ್ಷ್ಮ ವಸ್ತು, ಭೂಮಿಯಲ್ಲಿ, ಆಕಾಶದಲ್ಲಿ ಇರುವ ಸ್ಥಾವರವಾದ ಎಲ್ಲೆಲ್ಲಿ ಯಾವ್ಯಾವ ವಸ್ತುವಿದೆಯೋ ಅವೆಲ್ಲವುಗಳಲ್ಲಿ ಬ್ರಹ್ಮದವರೆಗೆ ಈ ಪ್ರವೃತ್ತಿ ಉಂಟಾಗಿದೆ.

ಯಸ್ಯಾಂ ಚ ಬದ್ಧಾ ಪ್ರಥಮಾ ಪ್ರವೃತ್ತಿಃ ಪ್ರಾಧಾನಿಕೀ ಚೇಶ್ವರಕಾರಿಣೀ ಚ ।
ಶುಕ್ರಂ ತಪ: ಸತ್ವಮಭಿಪ್ರಕಾಶಂ ತದ್ವ್ಯಷ್ಟಿನಿತ್ಯಂ ಪುರುಷಂ ದ್ವಿತೀಯಂ ।

ತಮಪ್ರಮೇಯಂ ಪುರುಷೇಣ ಯುಕ್ತಂ ಸ್ವಯಂಭುವಾ
    ಲೋಕಪಿತಾಮಹೇನ
ಉತ್ಪಾದಕತ್ವಾದ್ ರಜಸೋಽತಿರೇಕಾತ್ ಕಾಲಸ್ಯ
    ಯೋಗಾನ್ನಿಯಮಾವಧೇಶ್ಚ
ಕ್ಷೇತ್ರಜ್ಞಯುಕ್ತಾನ್ನಿಯತಾನ್ ವಿಕಾರಾನ್ ಲೋಕಸ್ಯ
    ಸಂತಾನವಿವೃದ್ಧಿಹೇತೂನ್
ಪ್ರಕೃತ್ಯವಸ್ಥಾ ಸುಷುವೇ ತಥಾಽಷ್ಟೌ ಸಂಕಲ್ಪಮಾತ್ರೇಣ ಮಹೇಶ್ವರಸ್ಯ ॥

ದೇವಾಸುರಾದಿದ್ರುಮಸಾಗರಾಣಾಂ ಗಂಧರ್ವಯಕ್ಷೋರಗಮಾನುಷಾಣಾಂ ।
ಮನುಪ್ರಜೇಶರ್ಷಿಪಿತೃದ್ವಿಜಾನಾಂ ಪಿಶಾಚಯಕ್ಷೋರಗರಾಕ್ಷಸಾನಾಂ ॥

ತಾರಾಗ್ರಹಾರ್ಕರ್ಕ್ಷನಿಶಾಕರಾಣಾಂ ಮಾಸರ್ತುಸಂವತ್ಸರರಾತ್ರ್ಯಹಾಣಾಂ ।
ದಿಕ್ಕಾಲಯೋಗಾದಿಯುಗಾಯನಾನಾಂ ವನೌಷಧೀನಾಮಪಿ ವೀರುಧಾಂ ಚ
ಜಲೌಕಸಾಮಪ್ಸರಸಾಂ ಪಶೂನಾಂ ವಿದ್ಯುತ್ಸರಿನ್ಮೇಘವಿಹಂಗಮಾನಾಂ ।
ಯತ್ ಸೂಕ್ಷ್ಮಗಂ ಯದ್ಭುವಿ ಯದ್ವಿಯತ್ಸ್ಥಂ ಯತ್ ಸ್ಥಾವರಂ ಯತ್ರ
ಯದಸ್ತಿಕಿಂಚಿತ್ ॥

ಸರ್ವಸ್ಯ ತಸ್ಯಾಸ್ತಿ ಗತಿರ್ವಿಭಕ್ತಿರಾಬ್ರಹ್ಮಣೀ ಯಾವದಿಯಂ ಪ್ರವೃತ್ತಿಃ ।
3.11ತ:15

ನಾಲ್ಕನೇ ಅಧ್ಯಾಯದಲ್ಲೂ ವೇದಸದೃಶವಾದ ವಾಯುಪುರಾಣವನ್ನು ಹೇಳುವೆನೆಂದು ತಿಳಿಸುತ್ತಾ, ಪ್ರಬೋಧ, ಉತ್ಪತ್ತಿ (ಸೃಷ್ಟಿ), ಸ್ಥಿತಿ ಮತ್ತು ಲಯಗಳು, ಅದರಲ್ಲಿ ಮೊದಲನೆಯ ಪ್ರಕ್ರಿಯಾ ಪಾದವೆಂಬ ಕಥಾವಸ್ತುಪರಿಗ್ರಹದೊಂದಿಗೆ, ಉಪೋದ್ಘಾತ, ಅನುಷಂಗ ಮತ್ತು ಉಪಸಂಹಾರಗಳೆಂಬ ಪಾದಗಳನ್ನು ಪ್ರಸ್ತುತಪಡಿಸಿದೆ:-

ಪುರಾಣಂ ಸಂಪ್ರವಕ್ಷ್ಯಾಮಿ ಮಾರುತಂ ವೇದ ಸಂಮಿತಂ ।
ಪ್ರಬೋಧಃ ಪ್ರಲಯಶ್ಚೈವ ಸ್ಥಿತಿರುತ್ಪತ್ತಿರೇವ ಚ ॥
ಪ್ರಕ್ರಿಯಾ ಪ್ರಥಮಃ ಪಾದಃ ಕಥಾವಸ್ತುಪರಿಗ್ರಹಃ ।
ಉಪೋದ್ಘಾತೋನುಷಂಗಶ್ಚ ಉಪಸಂಹಾರ ಏವ ಚ ॥ - 4.12.13

ಅದೇ ಅಧ್ಯಾಯದಲ್ಲಿ ಸೃಷ್ಟಿಯ ಇಚ್ಛೆಯಿಂದ ಪ್ರಚೋದನೆಗೊಂಡ ಮಹತ್ ತತ್ವವು ಸೃಷ್ಟಿಯನ್ನು ಆರಂಭಿಸುತ್ತದೆ - ಎಂದು ಹೇಳುತ್ತಾ ಮನಸ್ಸು, ಮಹತ್, ಮತಿ, ಬ್ರಹ್ಮಾ, ಭೂಮಿ, ಬುದ್ಧಿ, ಈಶ್ವರ, ಪ್ರಜ್ಞಾ, ಚಿತಿ, ಸ್ಮೃತಿ ಮತ್ತು ಸಂವಿತ್‌ಗಳನ್ನು ವಿಪುರವೆಂದು ಹೇಳಲಾಗಿದೆ:-

ಮಹಾಂಸ್ತು ಸೃಷ್ಟಿಂ ಕುರುತೇ ನೋದ್ಯಮಾನಃ ಸಿಸೃಕ್ಷಯಾ ।
ಮನೋ ಮಹಾನ್ ಮತಿರ್ಬ್ರಹ್ಮಾ ಭೂರ್ಬುದ್ಧಿಃ ಖ್ಯಾತಿರೀಶ್ವರಃ ।
ಪ್ರಜ್ಞಾ ಚಿತಿಃ ಸ್ಮೃತಿಃ ಸಂವಿತ್ ವಿಪುರಂ ಚೋಚ್ಯತೇ ಬುಧೈಃ ।

ಸೂಕ್ಷ್ಮತೆಯಿಂದ ಬೆಳೆಯುವ ಎಲ್ಲ ಪ್ರಾಣಿಗಳ ಚೇಷ್ಟಾಫಲವನ್ನು ತಿಳಿಯುವ ಸಾಧನವು ಮನಸ್ಸು. ಮನುತೇ ಇತಿ ಮನಃ. ಪರಮಾತ್ಮನನ್ನು ತಿಳಿದುಕೊಳ್ಳುವ ಸಾಧನ ಮನಸ್ಸು:

ಮನುತೇ ಸರ್ವಭೂತಾನಾಂ ಯಸ್ಮಾಚ್ಚೇಷ್ಟಾಫಲಂ ವಿಭುಃ ।
ಸೂಕ್ಷ್ಮತ್ವೇನ ವಿವೃದ್ಧಾನಾಂ ತೇನ ತನ್ಮನ ಉಚ್ಯತೇ॥

ಎಲ್ಲಾ ಸೃಷ್ಟಿ ತತ್ವಗಳಿಗೆ ಆದಿಯಾಗಿದ್ದು, ಪರಿಮಾಣದಲ್ಲೂ ಮಹತ್ತಾದ ಕಾರಣ ಮಹತ್ ತತ್ವಕ್ಕೆ ಮಹಾನ್ ಎಂಬ ಹೆಸರು:-

ತತ್ವಾನಾಮಗ್ರಜೋ ಯಸ್ಮಾನ್ಮಹಾಂಶ್ಚ ಪರಿಮಾಣತಃ ॥ - 4.27ತ.29

ಐದನೇ ಅಧ್ಯಾಯದಲ್ಲಿ ಸೃಷ್ಟಿಪ್ರಕ್ರಿಯೆಯನ್ನು ಹೀಗೆ ವಿವರಿಸಲಾಗಿದೆ:-

ತಮಃಸತ್ವಗುಣಾವೇತೌ ಸಮತ್ವೇನ ವ್ಯವಸ್ಥಿತೌ ।
ಅತ್ರೋದ್ರಿಕ್ತೌ ಪ್ರಸೂತೌ ಚ ತೌ ತಥಾ ಚ ಪರಸ್ಪರಮ್ ॥
ಗುಣಸಾಮ್ಯೇ ಲಯೋ ಜ್ಞೇಯೋ ವೈಷಮ್ಯೇ ಸೃಷ್ಟಿರುಚ್ಯತೇ ।
ಫಲೇಷು ವಾ ಯಥಾ ತೈಲಂ ಘೃತಂ ಪಯಸಿ ವಾ ಸ್ಥಿತಮ್ ।
ತಥಾ ತಮಸಿ ಸತ್ವೇ ಚ ರಜೋವ್ಯಕ್ತಾಶ್ರಿತಂ ಸ್ಥಿತಮ್ ।
ಉಪಾಸ್ಯ ರಜನೀಂ ಕೃತ್ಸ್ನಾಂ ಪರಾಂ ಮಾಹೇಶ್ವರೀಂ ತಥಾ ॥
5.8,9,10

ಸತ್ವ, ರಜಃ, ತಮಃ - ಎಂಬ ಮೂರು ಗುಣಗಳಲ್ಲಿ ತಮಸ್ಸು ಮತ್ತು ಸತ್ವಗುಣಗಳೆರಡು ಸಮಸ್ಥಿತಿಯಲ್ಲಿ ಇದ್ದವು. ಅವು ಪರಸ್ಪರ ಉದ್ರೇಕಗೊಂಡು ಸೃಷ್ಟಿಯಲ್ಲಿ ತೊಡಗುತ್ತವೆ. ಗುಣಗಳು ಸಮವಾಗಿದ್ದರೆ ಲಯ, ವಿಷಮವಾದಾಗ ಸೃಷ್ಟಿ ಎಂದು ಹೇಳಲಾಗುತ್ತದೆ. ಹಣ್ಣುಗಳಲ್ಲಿ ತೈಲವಿರುವಂತೆ, ಹಾಲಿನಲ್ಲಿ ತುಪ್ಪವಿರುವಂತೆ ತಮಸ್ಸು ಮತ್ತು ಸತ್ವ ಗುಣಗಳಲ್ಲಿ ರಜಸ್ಸು ಅವ್ಯಕ್ತವಾಗಿ ಆಶ್ರಿತವಾಗಿರುತ್ತದೆ. ಆರನೇ ಅಧ್ಯಾಯದಲ್ಲಿ ಮಹತ್ತತ್ವದಿಂದಾರಂಭಿಸಿ ದೇವಸೃಷ್ಟಿಯವರೆಗೆ ಆರು ವಿಧ ಸೃಷ್ಟಿಯನ್ನು ವಿವರಿಸಲಾಗಿದೆ.

ಪ್ರಥಮೋ ಮಹತಃ ಸರ್ಗೋ ವಿಜ್ಞೇಯೋ ಮಹತಸ್ತು ಸಃ ।
ತನ್ಮಾತ್ರಾಣಾಂ ದ್ವಿತೀಯಸ್ತು ಭುತಸರ್ಗಃಸ ಉಚ್ಯತೇ ।

ವೈಕಾರಿಕಸ್ತೃತೀಯಸ್ತು ಸರ್ವ ಐಂದ್ರಿಯಕಃ ಸ್ಮೃತಃ ॥
ಇತ್ಯೇಷ ಪ್ರಾಕೃತಃ ಸರ್ಗಃ ಸಂಭೂತೋ ಬುದ್ಧಿಪೂರ್ವಕಃ ।

ಮುಖ್ಯಸರ್ಗಶ್ಚತುರ್ಥಸ್ತು ಮುಖ್ಯಾ ವೈ ಸ್ಥಾವರಾಃ ಸ್ಮೃತಾಃ ॥
ತಿರ್ಯಕ್ಸ್ರೋತಾಶ್ಚಯಃ ಸರ್ಗಸ್ತಿರ್ಯಗ್ಯೋನಿಃ ಸ ಪಂಚಮಃ ।
ತಥೋರ್ಧ್ವಸ್ರೋತಸಾಂ ಷಷ್ಠೋ ದೇವಸರ್ಗಸ್ತು ಸ ಸ್ಮೃತಃ ॥
– 6.60 ತಃ 63
ಬುದ್ಧಿಪೂರ್ವಂ ಪ್ರವರ್ತಂತೇಷಟ್ ಸರ್ಗಾ ಬ್ರಹ್ಮಣಸ್ತು ತೇ । 66

ಮೊದಲಲ್ಲಿ ಮಹತ್ವದ ಸೃಷ್ಟಿ, ಮಹತ್ತಿನಿಂದ ಪಂಚತನ್ಮಾತ್ರಗಳ (ರೂಪ, ರಸ, ಗಂಧ, ಸ್ಪರ್ಶ, ಶಬ್ದ) ಸೃಷ್ಟಿ, ತನ್ಮಾತ್ರಗಳಿಂದ ಪಂಚಭೂತಗಳ (ಪೃಥ್ವೀ, ಜಲ, ತೇಜಸ್ಸು, ವಾಯು, ಆಕಾಶ) ಸೃಷ್ಟಿ. ಇದನ್ನು ಭೂತಸರ್ಗ ಎನ್ನಲಾಗುತ್ತದೆ. ಇದು ದ್ವಿತೀಯ ಸೃಷ್ಟಿ. ಮೂರನೆಯದು ವೈಕಾರಿಕ ಸೃಷ್ಟಿ. ಎಲ್ಲ ಇಂದ್ರಿಯಗಳ ಸೃಷ್ಟಿ ಒಳಗೊಂಡಿದೆ. ಇಂದ್ರಿಯಗಳು ಹತ್ತು ವಿಧ. ಅವುಗಳಲ್ಲಿ ಪಂಚ ಜ್ಞಾನೇಂದ್ರಿಯಗಳು. ಅವು ನೇತ್ರ, ಕರ್ಣ, ಜಿಹ್ವಾ, ತ್ವಕ್, ನಾಸಿಕಗಳು. ಪಂಚ ಕರ್ಮೇಂದ್ರಿಯಗಳು. ಅವು ವಾಕ್, ಪಾಣಿ, ಪಾದ, ಪಾಯು (ಗುದ), ಉಪಸ್ಥ (ಮೂತ್ರಾಂಗ)ಗಳು. ಈ ಮೂರು ಸೃಷ್ಟಿಗಳು ಪ್ರಾಕೃತಿಕ ಸರ್ಗ ಎನಿಸಿವೆ. ಇವು ಬುದ್ಧಿಯಿಂದಾದ ಸೃಷ್ಟಿ.

Artists performing during the drama - Sambhavami Uge Uge

ಭಾಗವತ ಮಹಾಪುರಾಣದಲ್ಲಿ ರುಕ್ಮಿಣೀ ಸ್ವಯಂವರದ ವೈಶಿಷ್ಟ್ಯ

—ವಿದುಷಿ ಗಂಗಮ್ಮ ಕೇಶವಮೂರ್ತಿ
ಮತ್ತು
ವಿದುಷಿ ಶಾಂತಾ ಗೋಪಾಲ್

ಭಾರತೀಯ ಕಲೆ ಮತ್ತು ಸಂಸ್ಕೃತಿಯ ಎಲ್ಲ ಆಯಾಮಗಳನ್ನೂ ಭಾಗವತ ಮಹಾಪುರಾಣ ಪ್ರಭಾವಿಸುತ್ತಾ ಬಂದಿದೆ. ಮಿಕ್ಕಪುರಾಣಗಳ ತುಲನೆಯಲ್ಲಿ ಅತ್ಯಧಿಕ ಜನಪ್ರೀತಿ ಸಂದಿರುವುದು ಈ ಪುರಾಣಕ್ಕೇ ಎಂಬುದು ನಿರ್ವಿವಾದವಾದ ಸತ್ಯ ಹಾಗಾಗಿಯೇ ಇದು ನಮ್ಮ ಪರಂಪರೆಯಲ್ಲಿ ರಾಮಾಯಣ, ಮಹಾಭಾರತದ ಜೊತೆ “ಪ್ರವಚನತ್ರಯ” ಗ್ರಂಥಗಳಲ್ಲಿ ಒಂದಾಗಿದೆ.

ವ್ಯಾಸರಿಂದ ರಚಿತವಾಗಿರುವ ಪುರಾಣ ಪ್ರಪಂಚದಲ್ಲಿ ಭಾಗವತ ಪುರಾಣಕ್ಕೆ ಮೂರ್ಧನ್ಯವಾದ ಸ್ಥಾನವಿದೆ. ಜ್ಞಾನವೃಕ್ಷದಿಂದ ತೊಟ್ಟು ಕಳಚಿಬಿದ್ದ ಪರಿಪಕ್ವಫಲ, ಶುಕಕಚ್ಚಿದ (ಶುಕಮುನಿಗಳಿಂದ ಹೇಳಲ್ಪಟ್ಟ) ರುಚಿಯಾದ ಮಾಗಿದ ಹಣ್ಣು, ಜ್ಞಾನವೆಂಬ ತುಪ್ಪದಲ್ಲಿ ಕರಿದು ಭಕ್ತಿಯೆಂಬ ಶರ್ಕರ ಪಾಕದಲ್ಲಿ ಅದ್ದಿ ತೆಗೆದ ಸವಿ ತಿನಿಸು, ನಿಗಮ ಕಲ್ಪತರುವಿನಿಂದ ಭೂಮಿಗೆ ಜಾರಿಬಿದ್ದ ಅಮೃತಫಲ ಎಂಬೆಲ್ಲ ಹೆಗ್ಗಳಿಕೆಗಳು ಈ ಮಹಾಪುರಾಣಕ್ಕೆ ಉಂಟು. ಭಾಗವತ ಪುರಾಣದ ಮೇಲೆ ನಮ್ಮ ಭಾರತೀಯರ ಪ್ರೀತ್ಯಾದರಗಳು ಅವಿಚ್ಛಿನ್ನವಾಗಿ ಹರಿದುಬಂದಿದೆ. ಅದಕ್ಕೆ ಸಾಕ್ಷಿಯಾಗಿ ಇಂದಿಗೂ ಭಾಗವತಸಪ್ತಾಹಗಳೂ, ಭಾಗವತವನ್ನಾಧರಿಸಿದ ನೃತ್ಯ-ನಾಟಕಾದಿ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯುತ್ತಲೇ ಇರುತ್ತವೆ. ಸಾಹಿತ್ಯ, ಸಂಗೀತ, ನೃತ್ಯ, ನಾಟಕ, ಯಕ್ಷಗಾನ, ಬಯಲಾಟ, ಶಿಲ್ಪ-ಹೀಗೆ ಭಾರತೀಯ ಕಲೆ ಮತ್ತು ಸಂಸ್ಕೃತಿಯ ಎಲ್ಲ ಆಯಾಮಗಳನ್ನೂ ಭಾಗವತ ಮಹಾಪುರಾಣ ಪ್ರಭಾವಿಸುತ್ತಾ ಬಂದಿದೆ. ಮಿಕ್ಕಪುರಾಣಗಳ ತುಲನೆಯಲ್ಲಿ ಅತ್ಯಧಿಕ ಜನಪ್ರೀತಿ ಸಂದಿರುವುದು ಈ ಪುರಾಣಕ್ಕೇ ಎಂಬುದು ನಿರ್ವಿವಾದವಾದ ಸತ್ಯ ಹಾಗಾಗಿಯೇ ಇದು ನಮ್ಮ ಪರಂಪರೆಯಲ್ಲಿ ರಾಮಾಯಣ, ಮಹಾಭಾರತದ ಜೊತೆ "ಪ್ರವಚನತ್ರಯ" ಗ್ರಂಥಗಳಲ್ಲಿ ಒಂದಾಗಿದೆ.

ಭಾಗವತಪುರಾಣದ ಜನಪ್ರಿಯತೆ ಎಷ್ಟೆಂದರೆ ಹೆಚ್ಚು ಕಡಿಮೆ ಪ್ರತಿಯೊಂದು ಮತಸಂಪ್ರದಾಯಕ್ಕೆ ಸೇರಿದ ಎಲ್ಲ ಆಚಾರ್ಯರುಗಳು ಇದಕ್ಕೆ ವ್ಯಾಖ್ಯಾನ ಬರೆದಿದ್ದಾರೆ. ಶಂಕರಾಚಾರ್ಯ ಪರಂಪರೆಯಲ್ಲಿ ಬಂದ ಶ್ರೀಧರರ ಶ್ರೀಧರೀಯ ವ್ಯಾಖ್ಯಾನ "ಭಾವಾರ್ಥದೀಪಿಕಾ", ಮಧ್ವಾಚಾರ್ಯರ "ತಾತ್ಪರ್ಯ ನಿರ್ಣಯ", ರಾಮಾನುಜ ಸಂಪ್ರದಾಯಕ್ಕೆ ಸೇರಿದ ವೀರರಾಘವಾಚಾರ್ಯರ ವಿಶಿಷ್ಟಾದ್ವೈತಪರವಾದ ಭಾಗವತಚಂದ್ರಿಕಾ, ಉಡುಪಿಯ ಅಷ್ಟಮಠಗಳ ಯತಿಗಳಲ್ಲಿ ಒಬ್ಬರಾಗಿದ್ದ ವಿಜಯಧ್ವಜರ ವಿಜಯಧ್ವಜೀಯ ಎನ್ನುವ "ಪದರತ್ನಾವಲಿ" ವ್ಯಾಖ್ಯಾನ, ಯಾದವಾಚಾರ್ಯರ "ಯಾದುಪತ್ಯ", ಶಂಕರಾಚಾರ್ಯರ ಶಿಷ್ಯರಾದ ಪದ್ಮಪಾದರಿಂದ ಪ್ರವರ್ತಿತವಾಯಿತು ಎಂದು ಹೇಳಲಾಗುವ ಭಾಗವತ ಸಂಪ್ರದಾಯದ "ಸಿದ್ಧಾರ್ಥ ದೀಪಿಕೆ" ಎನ್ನುವ ಶುಕದೇವ ವ್ಯಾಖ್ಯೆ ವಲ್ಲಭಾಚಾರ್ಯ ರಚಿತ ಶುದ್ಧಾದ್ವೈತಮತದ "ಸುಬೋಧಿನಿ". ಗೌಡೀಯ ವೈಷ್ಣವ ಸಂಪ್ರದಾಯದ ಜೀವಗೋಸ್ವಾಮಿಯ "ಕ್ರಮಸಂದರ್ಭ" ರಾಧಾರಮಣರ "ದೀಪಿನಿ" ವ್ಯಾಖ್ಯಾನ-ಹೀಗೆ ಅಸಂಖ್ಯವಾದ ವ್ಯಾಖ್ಯಾನ ಪರಂಪರೆಯೇ ಚೆಲ್ಲಿವರೆದಿದೆ.

ಭಾಗವತಮಹಾಪುರಾಣವು ತುಂಬಾ ಪ್ರೌಢ ಗಂಭೀರವಾದ ವೇದಾಂತ ಪರವಾದ ವಿಷಯವನ್ನು ಪ್ರತಿಪಾದಿಸುವ, ಪೆಡಸಾದ ಭಾಷಾ ಶೈಲಿಯಲ್ಲಿ ರಚಿತವಾಗಿದೆ ಎಂಬುದು ವಿದ್ವಾಂಸರ ಅಭಿಪ್ರಾಯವಾಗಿದೆ. ಹಾಗಾಗಿಯೇ "ವಿದ್ಯಾವತಾಂಭಾಗವತೇ ಪರೀಕ್ಷಾ" ಎಂಬ ಮಾತು ರೂಢಿಯಲ್ಲಿದೆ. "ನಿಗಮ ಕಲ್ಪತರೋರ್ಗಲಿತ ಫಲಂ" ಆಗಿರುವ ಈ ಪುರಾಣವು ವೇದ-ವೇದಾಂತದ ಗಹನವಾದ ವಿಷಯಗಳನ್ನು ಹೆಜ್ಜೆ- ಹೆಜ್ಜೆಗೂ ಪ್ರಸ್ತಾಪಿಸುತ್ತದೆಯಾದರೂ ಮುಖ್ಯವಾಗಿ ಇದು ಭಕ್ತಿರಸ ಪ್ರಧಾನವಾದ್ದು. ಭಕ್ತಿಮಾರ್ಗದಿಂದ ಮೋಕ್ಷಪ್ರಾಪ್ತಿಯನ್ನು ಬೋಧಿಸುವ ಗ್ರಂಥ. ಭಕ್ತಿಯಿಂದಲೇ ಜ್ಞಾನ-ವೈರಾಗ್ಯಗಳು ಪುಷ್ಟಿಗೊಂಡು ದೃಢವಾಗಿ ಹೇಗೆ ನಿಲ್ಲಬಲ್ಲುದು ಎಂಬುದನ್ನು ದೃಷ್ಟಾಂತಪೂರ್ವಕವಾಗಿ ತಿಳಿಯಪಡಿಸುವ ಗ್ರಂಥ.

ಕೇವಲ ಭಕ್ತಿ, ವೇದಾಂತಪರವಾದ ಗಹನ ತತ್ವಚಿಂತನೆ ಮಾತ್ರವಲ್ಲದೆ, ಈ ಮಹಾಪುರಾಣವು ತನ್ನೊಳಗೆ ಭಾರತದೇಶಕ್ಕೆ ಸಂಬಂಧಿಸಿದ ಅನೇಕ ಸೂಕ್ಷ್ಮ ಐತಿಹಾಸಿಕ ಸತ್ಯಗಳನ್ನೂ ಅಡಗಿಸಿಕೊಂಡಿದೆ ಎಂಬುದು ಇತ್ತೀಚಿನ ಸಂಶೋಧನೆಗಳಿಂದ ನಿರೂಪಿತವಾಗಿದೆ. ಉದಾಹರಣೆಗೆ, ಕೃಷ್ಣಕೇವಲ ವ್ಯಾಸಕಲ್ಪಿತ ಪಾತ್ರವಲ್ಲ, ಸುಮಾರು ಕ್ರಿ.ಪೂ. 3000 ವರ್ಷಗಳ ಹಿಂದೆ, 125 ವರ್ಷಗಳ ಕಾಲ ಬಾಳಿ ಬದುಕಿದ, ಹಲವು ಸಾವಿರ ವರ್ಷಗಳಿಗೊಮ್ಮೆ ಮಾತ್ರ ಸಂಘಟಿಸುವ ಗ್ರಹ ನಕ್ಷತ್ರ ಯೋಗಗಳಿದ್ದ ಅತಿ ವಿಲಕ್ಷಣ ಜಾತಕವನ್ನು ಹೊಂದಿದ್ದ ಪ್ರಸಿದ್ಧ ಐತಿಹಾಸಿಕ ವ್ಯಕ್ತಿ ಎಂಬುದು

ಜ್ಯೋತಿರ್ಶಾಸ್ತ್ರಾಧಾರಿತ ಲೆಕ್ಕಾಚಾರ, ಖಗೋಳಶಾಸ್ತ್ರಾಧಾರಿತ ಅಧ್ಯಯನಗಳಿಂದ ದೃಢಪಟ್ಟಿದೆ ಎಂಬುದು ತಿಳಿದುಬರುತ್ತದೆ.

ಇನ್ನು ಜರಾಸಂಧನ ಉಪಟಳವನ್ನು ನಿವಾರಿಸಿಕೊಳ್ಳಲು ಸಮುದ್ರ ಮಧ್ಯದೊಳಗೆ ನಿರ್ಮಿಸಿಕೊಂಡ ದ್ವಾರಕೆ ಇತ್ತು ಎಂಬುದನ್ನು ಸಮುದ್ರೀಯ ಉತ್ಖನನಗಳಿಂದ ದೊರೆತ ಆಧಾರಗಳು ನಿರೂಪಿಸಿವೆ.

ಅಲ್ಲದೆ ಈ ಪುರಾಣವು ಮಾನವಶಾಸ್ತ್ರವೇ ಮುಂತಾದ ಶಾಸ್ತ್ರಗಳ ಸಂಬಂಧವನ್ನು ಹೊಂದಿದೆ ಎಂಬುದು ಬಲ್ಲವರ ಅಭಿಪ್ರಾಯವಾಗಿದೆ. ಹೀಗೆ ಹಲವು ಹತ್ತು ದೃಷ್ಟಿಗಳಿಂದ ಮಹತ್ವಪೂರ್ಣವಾಗಿರುವ ಭಾಗವತದ ಮಹಿಮೆಯನ್ನು ನಮ್ಮ ಹಿರಿಯರು ಅರಿತಿದ್ದರಿಂದಲೇ ಅದನ್ನು ಪಾರಾಯಣದ ಗ್ರಂಥವನ್ನಾಗಿಸಿ ಮುಂದಿನ ತಲೆಮಾರಿಗೆ ಹಸ್ತಾಂತರ ಮಾಡುವಲ್ಲಿ ಯಶಸ್ವಿಯಾಗಿದ್ದಾರೆ. ಪೂರ್ವೋತ್ತರ ಭಾಗಗಳೂ ಸೇರಿ ಸುಮಾರು 18000 (14000 ಎಂಬ ಅಭಿಪ್ರಾಯವೂ ಉಂಟು) ಶ್ಲೋಕಗಳಿರುವ ಈ ಮಹಾಪುರಾಣದ ಗದ್ಯಾನುವಾದ, ಪದ್ಯಾನುವಾದಗಳು ಎಲ್ಲ ದೇಶ ಭಾಷೆಗಳಲ್ಲೂ ಕಾಣಸಿಗುತ್ತವೆ. ದೇಶ ಭಾಷೆಗಳ ಅನುವಾದಗಳು ಭಾಗವತವು ಹೆಚ್ಚು ಹೆಚ್ಚು ಜನರನ್ನು ತಲುಪುವಲ್ಲಿ ದೊಡ್ಡ ಸಹಾಯವನ್ನು ಮಾಡಿವೆ. ಅದರಲ್ಲೂ ದಶಮಸ್ಕಂದದ ರುಚಿಕರವಾದ, ಶ್ರವಣಾನಂದಕರವಾದ ಕೃಷ್ಣನ ಕಥೆಯಿರುವ ಕಾವ್ಯ ರೂಪಗಳು ಎಲ್ಲಾ ಭಾಷೆಗಳಲ್ಲೂ ಕಾಣಸಿಗುತ್ತವೆ.

ಅಷ್ಟೇಕೆ ಇದರ ಪ್ರಭಾವ ಬೇರೆಯ ಮತ ಧರ್ಮಗಳ ಮೇಲೂ ಆಗಿದೆ ಎನ್ನುವುದಕ್ಕೆ ಕೇರಳದ ಕ್ರೈಸ್ತ ಪಾದ್ರಿಯೊಬ್ಬರಿಂದ ಸಂಸ್ಕೃತದಲ್ಲಿ ರಚಿತವಾಗಿರುವ "ಕ್ರೈಸ್ತ ಭಾಗವತಂ" ಸಾಕ್ಷಿಯಾಗಿದೆ.

ಕನ್ನಡ ಭಾಷೆಯಲ್ಲಿಯೂ ಭಾಗವತದ ಪದಶಃ ಅನುವಾದ, ಗದ್ಯಾನುವಾದ, ಕಾವ್ಯಗಳು, ಭಾಗವತದ ಹಲವು ಪ್ರಸಂಗ ಮುಖ್ಯವಾಗಿ ಕೃಷ್ಣಕಥೆಗೆ ಸಂಬಂಧಿಸಿದ ಪ್ರಸಂಗಗಳನ್ನಾಧರಿಸಿದ ಹರಿದಾಸರ ಅಸಂಖ್ಯ ಹಾಡುಗಳೂ ದೊರೆಯುತ್ತವೆ. ಸ್ವರ್ಗೀಯ ಆಸ್ಥಾನ ವಿದ್ವಾನ್ಮೋಟಗಾನಹಳ್ಳಿ ರಾಮಶೇಷಶಾಸ್ತ್ರಿಗಳು ಪ್ರತಿಪದಾರ್ಥಟೀಕೆಯೊಂದಿಗೆ ಮಾಡಿರುವ ಅನುವಾದ ಕನ್ನಡ ಭಾಷೆಯ ಮೊದಲ ಭಾಗವತದ ಉಪಯುಕ್ತವಾದ ಅನುವಾದವಾಗಿದೆ. ಇದನ್ನು ಇತ್ತೀಚೆಗೆ ಶ್ರೀ ವಿದ್ಯಾಗಣಪತಿ ಟ್ರಸ್ಟ್‌ನವರು 8 ಸಂಪುಟಗಳಲ್ಲಿ ಪ್ರಕಟಿಸಿದ್ದಾರೆ ಕೂಡ. ತ.ಸು. ಶಾಮರಾಯರು ಮಾಡಿರುವ ಗದ್ಯಾನುವಾದ "ವಚನ ಭಾರತ" ತುಂಬಾ ಸರಳವಾದ, ಸುಂದರವಾದ, ಎಲ್ಲ ವಯಸ್ಸಿನವರ ಓದಿಗೂ ಒದಗಬಲ್ಲ ಅನುವಾದವಾಗಿದೆ. ಭಾರತದರ್ಶನದವರ ಮೂಲ ಮತ್ತು ಕನ್ನಡ ಅನುವಾದ. ಗೋರಖಪುರದ ಗೀತಾಪ್ರೆಸ್‌ನವರ ಮೂಲದೊಂದಿಗಿನ ಅನುವಾದ, ಇವು ಕನ್ನಡದಲ್ಲಿ ಕಾಣಸಿಗುವ ಕೆಲವು ಭಾಗವತದ ಅನುವಾದಗಳು. ಇನ್ನು ಕಾವ್ಯಗಳಲ್ಲಿ ಚಾಟುವಿಟ್ಠಲನ ಭಾಗವತದ ಕನ್ನಡ ಪದ್ಯಾನುವಾದ, ವಿಷ್ಣುಪುರಾಣವನ್ನು ಆಕರವಾಗಿ ಹೊಂದಿದ್ದರೂ ಭಾಗವತದ ಪ್ರಭಾವವೂ ಇರುವ ರುದ್ರಭಟ್ಟನ "ಜಗನ್ನಾಥ ವಿಜಯ". ನಿತ್ಯಾತ್ಮ ಶುಕಯೋಗಿಗಳ ಭಾಮಿನಿಷಟ್ಪದಿಯಲ್ಲಿರುವ "ಕರ್ನಾಟಕ ಭಾಗವತ", ಮೈ.ಶೇ. ಅನಂತಪದ್ಮನಾಭರಾಯರ ವಾರ್ಧಕ ಷಟ್ಪದಿಯಲ್ಲಿರುವ "ಶ್ರೀಕೃಷ್ಣಚರಿತೆ" (ದಶಮಸ್ಕಂದದ ಕಾವ್ಯರೂಪ) ಇವು ಕೆಲವು ಹೆಸರಿಸತಕ್ಕ ಕಾವ್ಯಗಳು.

ಹರಿದಾಸರ ಹಾಡುಗಳನ್ನು ಸಂಗೀತಗಾರರೂ, ಸಾಮಾನ್ಯ ಜನರೂ ಹಾಡಿ ಆನಂದಿಸುತ್ತಾರಾದರೆ, ಕಾವ್ಯಗಳನ್ನು ಗಮಕಿಗಳು ಗಮಕದ ಶೈಲಿಯಲ್ಲಿ ಹಾಡಿ ಜನರಿಗೆ ರಂಜನೆ ಉಂಟು ಮಾಡುವುದರ ಜೊತೆಗೆ ಭಾಗವತ ಸಂದೇಶದ ಪ್ರಸಾರವನ್ನೂ ಪರೋಕ್ಷವಾಗಿ ಮಾಡುತ್ತಾ ಬಂದಿದ್ದಾರೆ. ಈ ಅಂತರರಾಷ್ಟ್ರೀಯ ಭಾಗವತ ನಮ್ಮ ಪಾಲಿಗೆ "ರುಕ್ಮಣೀ ಸ್ವಯಂವರ"ದ ಸುಂದರ ಕಥಾಪ್ರಸಂಗವನ್ನು ಗಮಕದ ಮೂಲಕ ಪ್ರಸ್ತುತ ಪಡಿಸುವ ಅವಕಾಶ ಒದಗಿ ಬಂದಿದೆ. ಮೈ.ಶೇ. ಅನಂತಪದ್ಮನಾಭರಾಯರ "ಶ್ರೀ ಕೃಷ್ಣ ಚರಿತಾಮೃತಂ"ನ ಆಯ್ದ ವಾರ್ಧಕ ಷಟ್ಪದಿಗಳ ವಾಚನದ ಮೂಲಕ ರುಕ್ಮಿಣೀ ಸ್ವಯಂವರವನ್ನು ಪ್ರಸ್ತುತ ಪಡಿಸುತ್ತಿದ್ದೇವೆ.

ರುಕ್ಮಿಣಿ ಸ್ವಯಂವರ

ಕೃಷ್ಣನ ಜೀವನದ ಕಥೆ ಭಾಗವತ ಮಹಾಪುರಾಣದ ಒಂದು ಅಂಶವಾಗಿದೆ. ಆದರೂ ಭಾಗವತ ಎಂದರೆ ಕೃಷ್ಣಲೀಲೆಯನ್ನೇ ಆದ್ಯಂತವಾಗಿ ಒಳಗೊಂಡಿರುವ ದಶಮಸ್ಕಂದವೇ ಎನ್ನುವಷ್ಟರಮಟ್ಟಿಗೆ ಕೃಷ್ಣಭಾಗವತವನ್ನು ಆವರಿಸಿಕೊಂಡಿದ್ದಾನೆ. ಕೃಷ್ಣನ ಜೀವನದ ಪ್ರಮುಖ ಘಟನೆಗಳಲ್ಲಿ ರುಕ್ಮಿಣಿ ಸ್ವಯಂವರವೂ ಒಂದು. ರುಕ್ಮಿಣಿಯೊಂದಿಗೆ ಆದ ವಿವಾಹ ಕೃಷ್ಣನ ಜೀವನದಲ್ಲಿ ನಡೆದ ಮೊದಲ ವಿವಾಹ. ರುಕ್ಮಿಣಿ ಬಯಸಿ ಬಯಸಿ ಪಡೆದ ಪತಿ ಕೃಷ್ಣ. ಆ ಹೊತ್ತಿಗಾಗಲೇ ಆನರ್ತ ದೇಶದಲ್ಲಿದ್ದ ಕೃಷ್ಣನ ಜಾಣ್ಮೆ, ವೀರ, ರೂಪ-ಗುಣ, ನಡತೆ, ಚುರುಕುತನ, ಚಾತುರ್ಯ ಎಲ್ಲವೂ ರಾಷ್ಟ್ರದೆಲ್ಲೆಡೆ ಜನಜನಿತವಾಗಿದ್ದವು ಎನಿಸುತ್ತದೆ. ಇದು ಕರ್ಣಾಕರ್ಣಿಯಾಗಿ ವಿದರ್ಭದೇಶದ ಭೀಷ್ಮಕನ ಮಗಳಾದ ರುಕ್ಮಿಣಿಯ ಕಿವಿಗೂ ಬಿದ್ದು ಅವಳು ತನ್ನ ಮನಸ್ಸನ್ನು ಅವನಿಗೆ ಅರ್ಪಿಸಿಬಿಟ್ಟಿದ್ದಳು. ಮದುವೆಯಾದರೆ ಅವನನ್ನೇ ಎಂಬ ನಿರ್ಧಾರ ತಳೆದಿದ್ದಳು. ಆ ಹೊತ್ತಿಗೆ ಕೃಷ್ಣ ಎಷ್ಟೇ ಜನಪ್ರಿಯ ನಾಯಕನಾಗಿದ್ದರೂ, ತನ್ನ ನಿರ್ದುಷ್ಟವಾದ ನಿರ್ಧಾರ-ನಡೆಗಳಿಂದ ಕೆಲವರಿಗೆ ಆಗದವನೂ ಆಗಿದ್ದನು. ಅಲ್ಲದೆ ಕಂಸವಧೆಯ ಬಳಿಕ ಉಂಟಾದ ಯಾದವರ ಅಭ್ಯುದಯವನ್ನು, ಸಹಿಸದ ಇತರ ಕ್ಷತ್ರಿಯ ರಾಜರುಗಳನೇಕರು ಇದ್ದರು. ಇದು ಆ ಕಾಲಘಟ್ಟದಲ್ಲಿ ಸಾಮಾನ್ಯವಾಗಿದ್ದ ಕ್ಷತ್ರಿಯ ರಕ್ತಗುಣವೇ ಆಗಿತ್ತು. ಹಾಗೆ ವಿರೋಧಿಗಳಾಗಿದ್ದವರೆಂದರೆ, ಮಾಗಧ ಜರಾಸಂಧ, ಚೇದಿಯ ಶಿಶುಪಾಲ ಮುಂತಾದವರು. ಜರಾಸಂಧನಿಗಂತೂ ಅಳಿಯನಾದ ಕಂಸನನ್ನು ಕೊಂದು ತನ್ನ ಮಕ್ಕಳಾದ ಅಸ್ತಿ-ಪ್ರಾಪ್ತಿಯರ ವೈಧವ್ಯಕ್ಕೆ ಕಾರಣನಾದವ ಕೃಷ್ಣ ಎಂಬುದೇ "ಅಯಾದವೀಂ ಮಹೀಂ ಕರ್ತುಂ ಚಕ್ರೇ ಪರಮಮುದ್ಯಮಮ್" ಎನ್ನುವ ಪ್ರತಿಜ್ಞೆ ಮಾಡುವಷ್ಟರ ಮಟ್ಟಿಗೆ ಸಿಟ್ಟು ಇತ್ತು. ರುಕ್ಮಿಣಿಯ ಅಣ್ಣ ರುಕ್ಮಿಗೂ ಕೃಷ್ಣನ ಜೊತೆ ವಿರೋಧ ಇತ್ತು ಎಂಬುದು ಕೃಷ್ಣ ರುಕ್ಮಿಣಿಯ ಸಂದೇಶವನ್ನು ಹೊತ್ತು ತಂದ ಬ್ರಾಹ್ಮಣನಿಗೆ ಹೇಳುವ "ವೇದಾಹಂರುಕ್ಮಿಣಾದ್ವೇಷಾನ್ಮ ಮೋದ್ವಾ ಹೋನಿವಾರಿತಃ" ಎಂಬ ಮಾತುಗಳಿಂದ ವೇದ್ಯವಾಗುತ್ತದೆ. ಜೊತೆಗೆ ರುಕ್ಮಿಗೆ ಶಿಶುಪಾಲ ಜರಾಸಂಧರ ಗೆಳೆತನವೂ ಕೃಷ್ಣ ದ್ವೇಷಕ್ಕೆ ಕಾರಣವೂ ಆಗಿದ್ದಿರಬಹುದು. ತನ್ನ ಸುಂದರಿಯಾದ ತಂಗಿಯನ್ನು ಶಿಶುಪಾಲನಿಗೆ ಕೊಟ್ಟು ಮದುವೆ ಮಾಡಬೇಕೆಂಬುದು ಅವನ ಬಯಕೆ-ನಿರ್ಧಾರ ಎರಡೂ ಆಗಿತ್ತು. ವೃದ್ಧ ಭೀಷ್ಮಕನದು ನಿರ್ಣಾಯಕವಾದ ಪಾತ್ರವಾಗಿರದೇ ಗಂಡು ಮಕ್ಕಳ ಮಾತಿನಂತೆ ನಡೆಯಬೇಕಾದ ಅನಿವಾರ್ಯತೆ ಇದ್ದಿರಬಹುದು. ಹೀಗಾಗಿ ರುಕ್ಮಿಣಿಯೇ ತನ್ನ ಮನಮೆಚ್ಚಿದ ವರನನ್ನು ಪಡೆಯಲು ಧೈರ್ಯವಾಗಿ ಮುನ್ನಡಿ ಇಡುತ್ತಾಳೆ. ನಿಜವಾದ ಅರ್ಥದಲ್ಲಿ "ಸ್ವಯಂವರ"ಕ್ಕೆ ಮುಂದಾಗುತ್ತಾಳೆ. ತನ್ನರಮನೆಯ ಬ್ರಾಹ್ಮಣನೊಬ್ಬನ ಕೈಯಲ್ಲಿ ಕೃಷ್ಣನಿಗೆ ಪತ್ರ ಬರೆದು ಕಳುಹಿಸುತ್ತಾಳೆ. ಪ್ರಾಯಶಃ ಇದು ಜಗತ್ತಿನ ಮೊದಲ ಪ್ರೇಮಪತ್ರವಾಗಿರಬೇಕು. ತಾನು ಬರೆದ ಪತ್ರದಲ್ಲಿ ಅವಳು ಪ್ರಾಂಜಲವಾಗಿ ಕೃಷ್ಣನಿಗೆ ಮನಸೋತಿರುವುದನ್ನು ಒಪ್ಪಿಕೊಳ್ಳುತ್ತಾ, ತನ್ನನ್ನು ಶಿಶುಪಾಲನಿಗೆ ಕೊಡಲು ಬಿಡದೆ ವೀರಶುಲ್ಕವಾಗಿ ಅಪಹರಿಸಿಕೊಂಡು ಹೋಗಿ, ರಾಕ್ಷಸ ವಿವಾಹಮಾಡಿಕೊಳ್ಳುವ ಸಲಹೆಯನ್ನೂ ಸ್ವಲ್ಪವೂ ಅಳುಕಿಲ್ಲದೆ ಕೊಡುವ, ಅಪಹರಣದ ಸಮಸ್ತ ಯೋಜನೆಯನ್ನು ರೂಪಿಸಿದ ರುಕ್ಮಿಣಿಯ ಧೈರ್ಯ, ಮುಂದಾಲೋಚನೆ, ತಂತ್ರಗಾರಿಕೆ ಮೆಚ್ಚಬೇಕಾದ್ದೇ. ಹೆಣ್ಣೊಬ್ಬಳಿಗೆ ಈ ಮಟ್ಟದ ಸ್ವಾತಂತ್ರ್ಯ, ಧೈರ್ಯ-ಸ್ಥೈರ್ಯಗಳು ಇದ್ದವೆಂದರೆ, ಪ್ರಾಚೀನ ಭಾರತೀಯ ಸಮಾಜದಲ್ಲಿ ಹೆಣ್ಣುಗಳು ಎಷ್ಟು ಮುಕ್ತವಾಗಿ ತಮ್ಮ ಬೇಕು-ಬೇಡಗಳನ್ನು ವ್ಯಕ್ತಪಡಿಸುತ್ತಿದ್ದರು ಎಂಬುದರ ಕುರಿತು ಒಂದು ಸಣ್ಣ ಹೊಳಹು ಸಿಗುತ್ತದೆ. ಇದಕ್ಕೆ ಪೂರಕವಾಗಿ ನಂತರ ನಡೆಯುವ ಕೃಷ್ಣನ ಕಾಳಿಂದಿಯೊಂದಿಗಿನ ವಿವಾಹದ ಸಂದರ್ಭವನ್ನೂ ಉದಾಹರಿಸಬಹುದು. ಸೂರ್ಯಪುತ್ರಿ ಕಾಲಿಂದಿಯು ಲಕ್ಷ್ಮೀದೇವಿಗೆ ಪರಮಾಶ್ರಯವಾದ ಭಗವಾನ್ವಿಷ್ಣುವನ್ನು ಬಿಟ್ಟು ಬೇರೆ ಯಾರನ್ನೂ ವರಿಸುವುದಿಲ್ಲ ಎಂದು ಯಮುನಾ ನದಿಯಲ್ಲಿ ತಪಸ್ಸು ಮಾಡುತ್ತಿರುತ್ತಾಳೆ. ಅವಳು ತಪಸ್ಸು ಮಾಡಲು ತಂದೆಯಾದ ಸೂರ್ಯನೇ ಮನೆಯಲ್ಲಿ ಒಂದು ಭವನವನ್ನು ನಿರ್ಮಿಸಿಕೊಟ್ಟು ಅನುವುಮಾಡಿಕೊಟ್ಟಿರುತ್ತಾನೆ. ಅಂದರೆ ಹೆಣ್ಣಿನ ಬಯಕೆ-ಭಾವನೆಗಳನ್ನು

ಗೌರವಿಸುತ್ತಾ ಬಂದ ಪರಂಪರೆ ಭಾರತೀಯರದು ಎಂಬುದರ ಹೊಳಹನ್ನೂ ನಾವಿಲ್ಲಿ ಕಾಣಬಹುದು.

ಹೀಗೆ ರುಕ್ಮಿಣಿಯನ್ನು ವೀರ ಶುಲ್ಕವನ್ನಾಗಿ ಅಪಹರಿಸಿಕೊಂಡು ದ್ವಾರಕೆಗೆ ಬಂದು ಅದ್ದೂರಿಯಿಂದ ಅವಳೊಂದಿಗೆ ವಿವಾಹ ಮಾಡಿಕೊಳ್ಳುತ್ತಾನೆ ಕೃಷ್ಣ. ರುಕ್ಮಿಣಿಯನ್ನು ವಿವಾಹವಾದ ನಂತರ ಕೃಷ್ಣನಿಗೆ ಇನ್ನೂ ಅನೇಕ ಮದುವೆಗಳಾದವು ಎಂಬುದರ ವಿವರಗಳು ವಿಷ್ಣುಪುರಾಣ, ಹರಿವಂಶ, ಮಹಾಭಾರತ ಗ್ರಂಥಗಳಲ್ಲಿ ದೊರಕುತ್ತದೆ. ಅಲ್ಲಿ ಈ ಮದುವೆಗಳ ಸಂಖ್ಯೆಯ ವಿಷಯದಲ್ಲಾಗಲೀ, ಮದುವೆಯಾದ ಕನ್ಯೆಯರ ಹೆಸರುಗಳ ವಿಷಯದಲ್ಲಾಗಲೀ, ವ್ಯತ್ಯಯಗಳು ಕಂಡುಬರುತ್ತವೆ. ಆದರೆ ಎಲ್ಲದರಲ್ಲೂ ರುಕ್ಮಿಣಿಯೇ ಪ್ರಥಮ ಪತ್ನಿ ಎಂಬುದಾಗಿ ಹೇಳಿವೆ. ಭಾಗವತ ಮಹಾಪುರಾಣವನ್ನು ಅಧಿಕರಿಸಿ ಹೇಳುವುದಾದರೆ ರುಕ್ಮಿಣಿಯ ವಿವಾಹದ ತರುವಾಯ ಬೇರೆ-ಬೇರೆ ಏಳುಕನ್ಯೆಯರೊಂದಿಗೆ ಮತ್ತು ನರಕಾಸುರನ ಸೆರೆಯಲ್ಲಿದ್ದ ರಾಜಕುಮಾರಿಯರೊಂದಿಗೆ ಬೇರೆ-ಬೇರೆ ಕಾರಣಗಳಿಗಾಗಿ ಮದುವೆ ನಡೆಯುತ್ತದೆ. ಆದರೆ ರುಕ್ಮಿಣಿಯನ್ನು ಮದುವೆಯಾಗುವ ಸಂದರ್ಭದ ಸವಾಲಾಗಲೀ, ರೋಚಕತೆಯಾಗಲೀ, ರಾಜನೈತಿಕ ತಂತ್ರಗಾರಿಕೆಯಾಗಲೀ ಮಿಕ್ಕ ವಿವಾಹಗಳಲ್ಲಿ ಕಂಡುಬರುವುದಿಲ್ಲ. ಜಾಂಬವತಿಯು ಕೃಷ್ಣನಲ್ಲಿ ಭಗವಂತ ಸ್ವರೂಪವನ್ನು ಗುರುತಿಸಿಕೊಂಡ ಜಾಂಬವತನಿಂದ ಭಗವಂತನಿಗೆ ಸಮರ್ಪಿಸಲ್ಪಟ್ಟ ಕಾಣಿಕೆಯಾಗಿ ಕೃಷ್ಣನ ಮಡದಿಯಾದವಳು.

ಇನ್ನು ಕೃಷ್ಣನ ಮೇಲೆ ಸ್ಯಮಂತಕಮಣಿಯ ಚೌರ್ಯದ ಮಿಥ್ಯಾಪವಾದವನ್ನು ಹೊರೆಸಿದ ಸತ್ರಾಜಿತನ ಮಗಳಾದ ಸತ್ಯಭಾಮೆ, ತನ್ನ ತಂದೆಯಿಂದ ತಪ್ಪು ಕಾಣಿಕೆಯ ರೂಪದಲ್ಲಿ ಕೃಷ್ಣನಿಗೆ ದಕ್ಕಿದವಳು. ಸತ್ಯಭಾಮೆಯಾದರೋ ಶೀಲ-ಸ್ವಭಾವ ಸೌಂದರ್ಯ, ಔದಾರ್ಯ ಮೊದಲಾದ ಗುಣಗಳಿಂದ ಸಂಪನ್ನಳಾಗಿದ್ದಳು. ಅವಳು ತಮಗೆ ಸಿಗಲಿ ಎಂದು ("ಬಹುಭಿರ್ಯಾಚಿತಾಂಶೀಲರೂಪೌದಾರ್ಯಗುಣಾನ್ವಿತಂ") ಬಹು ಮಂದಿ ಆಶಿಸುತ್ತಿದ್ದರು ಎನ್ನುತ್ತದೆ ಭಾಗವತ. ಅಂತಹ ಸತ್ಯಭಾಮೆಗೆ ಕೃಷ್ಣನಲ್ಲಿ ಮನಸ್ಸಿತ್ತೋ ಇಲ್ಲವೋ ಇದರ ಬಗೆಗೆ ಭಾಗವತ ಏನನ್ನೂ ಸ್ಪಷ್ಟಪಡಿಸಿಲ್ಲ.

ಇನ್ನು ಮಿತ್ರವಿಂದೆಯೊಂದಿಗಿನ ವಿವಾಹ

ಅದು ಸಹ ಒಂದು ರೀತಿಯ ರಾಜತಾಂತ್ರಿಕ ಹುನ್ನಾರದಿಂದ ಕೂಡಿದ ವಿವಾಹ ಎನ್ನಬಹುದು. ಮಿತ್ರವಿಂದೆ ಸ್ವಯಂವರದಲ್ಲಿ ಕೃಷ್ಣನನ್ನೇ ತನ್ನ ಪತಿಯಾಗಿಸಿ ಕೊಳ್ಳಬೇಕೆಂದು ಬಯಸಿದ್ದಳು. ಮಿತ್ರವಿಂದೆ ವಾಸ್ತವವಾಗಿ ಕೃಷ್ಣನ ಸೋದರತ್ತೆ ರಾಜಾಧಿದೇವಿಯ ಮಗಳೇ. ಅವಂತಿ ದೇಶದ ರಾಜಾರಾಗಿದ್ದ ವಿಂದ-ಅನುವಿಂದರ ತಂಗಿ. ವಿಂದ-ಅನುವಿಂದರು ಹಸ್ತಿನಾವತಿಯ ದುರ್ಯೋಧನನ ಸಾಮಂತರಾಗಿದ್ದವರು. ಹಾಗಾಗಿ ಅವರು ತಂಗಿಯನ್ನು ಕೃಷ್ಣನಿಗೆ ಕೊಡಲು ಒಪ್ಪುತ್ತಿರಲಿಲ್ಲ. ಇದಕ್ಕೆ ಪ್ರತಿಯಾಗಿ ಕೃಷ್ಣ ರಾಜರಿಂದ ತುಂಬಿದ ಸಭೆಯಲ್ಲಿ ರಾಜಾ ರೋಷವಾಗಿ ಮಿತ್ರವಿಂದೆಯನ್ನು ಅಪಹರಿಸಿಕೊಂಡು ಹೋಗಿ ವಿವಾಹವಾಗುತ್ತಾನೆ. ಇದರಲ್ಲಿ ದುರ್ಯೋಧನನ ಸಾಮಂತರಿಗೆ ಬುದ್ಧಿಕಲಿಸಬೇಕೆಂಬುದು ಒಂದು ಆಯಾಮವಾದರೆ, ಅವಂತಿಯ ಜನತೆಯ ಮನಸ್ಸಿನಲ್ಲಿ ದುರ್ಯೋಧನನ ಬಗೆಗೆ ಇದ್ದಿರಬಹುದಾದ ಅಭಿಪ್ರಾಯದಲ್ಲಿ ಒಡಕು ಉಂಟುಮಾಡುವ ತಂತ್ರವೂ ಇದ್ದಿರಬಹುದು.

ಇನ್ನು ನಗ್ನಜಿತರಾಜನ ಮಗಳಾದ ನಾಗ್ನಜಿತಿ ಅಥವಾ ಸತ್ಯಾ ಸಹವೀರ್ಯ ಶುಲ್ಕವಾಗಿ ದೊರೆತ ವಧು, ಅಲ್ಲದೆ ನಾಗ್ನಜಿತಿ ರಾಜ ತುಂಬಾ ಧಾರ್ಮಿಕ ಪ್ರವೃತ್ತಿಯವನು. ಕೃಷ್ಣನನ್ನು ಕಂಡೊಡನೆಯೇ ತನ್ನ ಮಗಳನ್ನು ಅವಳಿಗೆ ಕೊಡುವ ನಿರ್ಧಾರ ಮಾಡಿಬಿಡುತ್ತಾನೆ.

ಆದರೆ ತನ್ನಲ್ಲಿದ್ದ ಏಳು ಬಲಿಷ್ಠ ಗೂಳಿಗಳನ್ನು ಯಾವ ರಾಜಕುಮಾರ ಮಣಿಸುತ್ತಾನೋ ಅವನಿಗೆ ತನ್ನ ಮಗಳನ್ನು ವೀರ್ಯ ಶುಲ್ಕವಾಗಿ ಕೊಡಬೇಕು ಎಂಬುದು ಅವರ ವಂಶದಲ್ಲಿ ನಡೆದುಕೊಂಡು ಬಂದ

ಪದ್ಧತಿಯಾಗಿರುತ್ತದೆ. ಆದರೆ ಯಾರೂ ಆ ಶರತ್ತನ್ನು ಪೂರ್ತಿ ಮಾಡಲಾಗದೆ ಹೋಗಿದ್ದಾರೆ ಎಂಬ ಸುದ್ದಿ ಕೃಷ್ಣನಿಗೆ ತಿಳಿಯಿತು. ಅವನು ಅದನ್ನೊಂದು ಸವಾಲನ್ನಾಗಿ ತೆಗೆದುಕೊಂಡು ಅಪಾರವಾದ ಸೈನ್ಯದೊಡನೆ ಬಂದು ಗೂಳಿಗಳನ್ನು ಗೆದ್ದು ನಾಗ್ನಜಿತಿಯನ್ನು ಪಡೆಯುತ್ತಾನೆ. ಕೃಷ್ಣನಂತಹ ಲೋಕೋತ್ತರ ಚೆಲುವ ಮತ್ತು ವ್ಯಕ್ತಿತ್ವದವನೇ ತನಗೆ ದೊರೆತದ್ದು ನಾಗ್ನಜಿತಿಗೂ ಸಂತೋಷವನ್ನೇ ತರುತ್ತದೆ. ಅಲ್ಲದೆ ನಗ್ನಜಿತರಾಜನೊಂದಿಗೆ ವಿವಾಹದ ಮೂಲಕ ಸೌಹಾರ್ದದ ಸಂಬಂಧ ಬೆಳೆಸಿ ಯಾದವ ಪಕ್ಷವನ್ನು ಬಲಗೊಳಿಸುವ ಸನ್ನಾಹವೂ ಇದ್ದಿರಬಹುದು. ನಂತರ ಕೃಷ್ಣನ ಮತ್ತೊಬ್ಬ ಸೋದರತ್ತೆ ಶ್ರುತಕೀರ್ತಿಯ ಮಗಳು ಭದ್ರಾಳನ್ನು ಅವಳ ಸೋದರರೇ ಇಷ್ಟಪಟ್ಟು ಕೃಷ್ಣನೊಂದಿಗೆ ವಿವಾಹಮಾಡಿಕೊಡುತ್ತಾರೆ. ಹೀಗೆ ತವರಿನ ಬಳ್ಳಿಯನ್ನು ಹಿಂದಿರುಗಿಸುವ ಲೋಕ ರೂಢಿ ಇಲ್ಲಿ ಕಂಡುಬರುತ್ತದೆ.

ಮತ್ತೊಬ್ಬಳು ಮದ್ರದೇಶದ ರಾಜಕುಮಾರಿ

ಸುಲಕ್ಷಣೆಯಾದ ಲಕ್ಷಣಾ ಎಂಬುವಳನ್ನು ಸಹ ಸ್ವಯಂವರದಲ್ಲಿ ಅಪಹರಿಸಿ ತಂದು ವಿವಾಹವಾಗುತ್ತಾನೆ. ಆ ಕಾಲದಲ್ಲಿ ಕ್ಷತ್ರಿಯರಲ್ಲಿ ಸ್ವಯಂವರ ಇಲ್ಲವೇ ಕನ್ಯಾಪಹರಣ ಅಥವಾ ಸ್ವಯಂವರದಲ್ಲಿ ಕನ್ಯಾಪಹರಣ ಮತ್ತು ವಿವಾಹ ಒಂದು ವೀರ ಪ್ರಥೆಯಾಗಿತ್ತು ಎಂಬುದು ನಮಗೆ ಮಹಾಭಾರತದ ಕಾಶೀರಾಜನ ಮಕ್ಕಳಾದ ಅಂಬೆ, ಅಂಬಿಕೆ ಅಂಬಾಲಿಕೆಯರ ಸ್ವಯಂವರದ ಕಾಲದಿಂದಲೂ ಕಾಣಸಿಗುತ್ತದೆ. ಸುಭದ್ರಾಪಹರಣ ಕೂಡ ಇಂಥಹುದೇ ಮತ್ತೊಂದು ಉದಾಹರಣೆಯಾಗಿ ತೋರುತ್ತದೆ.

ಮುಂದೆ ನರಕಾಸುರನು ಬಲವಂತವಾಗಿ ರಾಜರುಗಳಿಂದ ಅಪಹರಿಸಿ ಸೆರೆಯಲ್ಲಿ ಇರಿಸಿದ್ದ ಹದಿನಾರು ಸಹಸ್ರ ರಾಜಕನ್ಯೆಯರನ್ನು ವಿವಾಹವಾದದ್ದು ಅವರನ್ನು ಉದ್ಧರಿಸಿ ಬದುಕು ಕೊಡುವ ಉದಾತ್ತ ಮನೋಭಾವದಿಂದ. ಭಾಗವತವು ನರಕಾಸುರನನ್ನು ಕೊಂದು ಶ್ರೀ ಕೃಷ್ಣನು ಅವನ ಅಂತಃಪುರವನ್ನು ಪ್ರವೇಶಿಸಿದಾಗ, ಸೆರೆಯಲ್ಲಿದ್ದ ರಾಜಕುಮಾರಿಯರೆಲ್ಲರೂ, ಅವನ ದರ್ಶನ ಮಾತ್ರದಿಂದಲೇ, ತಮ್ಮ ಹೃದಯಗಳನ್ನು ಅವನಿಗೆ ಸಮರ್ಪಿಸಿ ಅವನನ್ನು ಪತಿಯಾಗಿ ಸ್ವೀಕರಿಸಿ ಧನ್ಯತೆಯ ಭಾವವನ್ನು ಅನುಭವಿಸಿದರು ಎಂದು ಹೇಳುತ್ತಾ ಜೀವಾತ್ಮ-ಪರಮಾತ್ಮದ ಮಿಲನದ ಧನ್ಯತೆಯ ರೂಪಕಾತ್ಮಕ ಅಭಿವ್ಯಕ್ತಿಯನ್ನೂ ಸೂಚಿಸುತ್ತದೆ. ಆ ಹದಿನಾರೂ ಸಹಸ್ರ ಕನ್ಯೆಯರನ್ನು ಕೃಷ್ಣ ಒಂದೇ ಶುಭಮೂಹರ್ತದಲ್ಲಿ ಪ್ರತ್ಯೇಕ-ಪ್ರತ್ಯೇಕವಾಗಿ ವಿಧಿಪೂರ್ವಕವಾಗಿ ಪಾಣಿಗ್ರಹಣ ಮಾಡುತ್ತಾನೆ. ಸಾಮಾಜಿಕವಾಗಿ ಎಲ್ಲರಿಗೂ ಕೃಷ್ಣಪತ್ನಿಯರ ಸ್ಥಾನಮಾನ ಕೊಡುತ್ತಾನೆ. ಈ ವಿವಾಹದ ಆಧ್ಯಾತ್ಮಿಕ ವಿವರಣೆ ಬೇರೆಯೇ ಇರಬಹುದು, ಆದರೆ ದುರುಳನೊಬ್ಬನ ದೌರ್ಜನ್ಯಕ್ಕೆ ಒಳಗಾಗಿದ್ದ ಹೆಣ್ಣುಗಳಿಗೆ ಮತ್ತೆ ಸಾಮಾಜಿಕವಾಗಿ ಸುಭದ್ರತೆಯ ನೆಲೆ ಒದಗಿಸಿದ್ದು, ಮತ್ತೆ ಶುಚಿತೆಯಿಂದ ಕೂಡಿದ ಗೃಹಸ್ಥ ಜೀವನ ನಡೆಸುವಂತೆ ಮಾಡಿದ್ದು ಕೃಷ್ಣನ ಉದಾತ್ತ-ಗಂಭೀರ ಚಿಂತನೆಗೆ ಹಿಡಿದ ಕನ್ನಡಿಯಂತೆ ಈ ವಿವಾಹ ತೋರಿಕೊಳ್ಳುತ್ತದೆ.

ಹೀಗೆ ಭಾಗವತಮಹಾಪುರಾಣದಲ್ಲಿ ಪ್ರಣೀತವಾಗಿರುವ ಕೃಷ್ಣನ ವಿವಾಹಗಳ ಹಿನ್ನೆಲೆಯಲ್ಲಿ ನೋಡಿದಾಗ ರುಕ್ಮಿಣಿಯ ಸ್ವಯಂವರ ವಿಶಿಷ್ಟವಾಗಿ ತೋರುತ್ತದೆ. ರುಕ್ಮಿಣಿಯಂತೆಯೇ ಕೃಷ್ಣನೂ ಅವಳನ್ನು ಬಯಸಿದ್ದನು, ಅವಳ ನೆನಪಿನಲ್ಲಿ ನಿದ್ರೆಯಿಲ್ಲದ ರಾತ್ರಿಗಳನ್ನು ಕಳೆಯುತ್ತಿದ್ದನು ಎಂಬುದು ಅವನು ರುಕ್ಮಿಣಿಯ ಪತ್ರ ತಂದ ಬ್ರಾಹ್ಮಣನೊಂದಿಗೆ ಹೇಳುವ "ತಥಾಹಮಪಿತಚ್ಚಿತ್ತೋನಿದ್ರಾಂಚನಲಭೇನಿಶಿ" ಎಂಬ ಮಾತುಗಳಿಂದ ಗೊತ್ತಾಗುತ್ತದೆ. ಪರಸ್ಪರರು ಬಯಸಿ ಆದ ವಿವಾಹ ಇದು. ಗಟ್ಟಿಯಾಗಿನಿಂತ ಸಂಬಂಧ. ಆದ್ದರಿಂದಲೇ ಇಂದಿಗೂ ನಮ್ಮ ಪರಂಪರೆಯಲ್ಲಿ ರುಕ್ಮಿಣಿ ಕಲ್ಯಾಣದ ಉತ್ಸವ ನಡೆಸುವ ಪದ್ಧತಿ ನಡೆದು ಬಂದಿದೆ. ಈ ವಿವಾಹದ ನೆನಪು ಜನಮಾನಸದಲ್ಲಿ ಎಷ್ಟು ಆಳವಾಗಿ ಬೇರು ಬಿಟ್ಟಿದೆ ಎಂದರೆ ಇಂದಿಗೂ ಗುಜರಾತು ರಾಜ್ಯದಲ್ಲಿರುವ ದ್ವಾರಕೆಯ ದ್ವಾರಕಾಧೀಶನ ಮಂದಿರದಲ್ಲಿ ಸಂಧ್ಯಾ ಆರತಿಯ ನಂತರ

ಭಾಗವತದಲ್ಲಿ ಬರುವ "ರುಕ್ಮಿಣಿಪತ್ರ" ವನ್ನು ವಾಚಿಸುವ ಧಾರ್ಮಿಕ ಪರಿಪಾಟ ನಡೆದುಕೊಂಡು ಬಂದಿದೆ.

ದೇಶ ಭಾಷೆಯಲ್ಲಿ ಆಯಾ ಭಾಷೆಗೆ ಒಗ್ಗಿಬಂದ ಛಂದಸ್ಸುಗಳಲ್ಲಿ ಕಾವ್ಯ ಬರೆಯುವಾಗ, ಮೂಲದ ಸಾಮಗ್ರಿಗೆ ನಿಷ್ಠರಾಗಿರುತ್ತಲೇ, ಆಯಾ ಪ್ರಾಂತೀಯ ಸಾಂಸ್ಕೃತಿಕ ಪರಿವೇಶ, ಆಚರಣೆ, ರೂಢಿಗನುಗುಣವಾಗಿ ಅಲ್ಪ-ಸ್ವಲ್ಪ ಮಾರ್ಪಾಟುಗಳನ್ನು ಮಾಡಿಕೊಳ್ಳುವ ಸ್ವಾತಂತ್ರ್ಯ ಕವಿಗಳಿಗೆ ಇದ್ದೇ ಇರುತ್ತದೆ. ಇದು ಕವಿಯ ಚಿತ್ತವೃತ್ತಿಯನ್ನೂ ಸ್ವಲ್ಪಮಟ್ಟಿಗೆ ಅವಲಂಬಿಸಿರುತ್ತದೆ. ಪ್ರಸ್ತುತ ಕನ್ನಡ ಕಾವ್ಯ "ಶ್ರೀ ಕೃಷ್ಣ ಚರಿತಾಮೃತಂ"ನಲ್ಲಿ ಸಹ ಕಾವ್ಯ ಕರ್ತೃವಿನ ಕೃಷ್ಣಭಕ್ತಿಯ ಅಂಶವೇ ಮೇಲುಗೈಯಾಗಿರುವುದು ಗೋಚರಿಸುತ್ತದೆ. ರುಕ್ಮಿಣಿ ಸ್ವಯಂವರದ ಸಂದರ್ಭದಲ್ಲಿ, "ಶ್ರೀ ಕೃಷ್ಣ ಚರಿತಾಮೃತಂ ಕಾವ್ಯವು", ವಿದರ್ಭದ ನರೇಶ ಭೀಷ್ಮಕನನ್ನು ಅಪ್ಪಟ ಧಾರ್ಮಿಕ, ಭಾಗವತ ಶಿರೋಮಣಿಯಂತೆ, ರಾಜರ್ಷಿಯಂತೆ, ವಿರಕ್ತನಂತೆ, ತನ್ನರಮನೆಯಲ್ಲಿ ದಿನ ನಿತ್ಯವೂ ಹರಿದಾಸರ ಸೇವೆ ನಡೆಸಿ, ಹರಿಕಥಾಮೃತಪಾನ ಮಾಡುತ್ತಿದ್ದಂತೆ ಚಿತ್ರಿಸಿದ್ದಾರೆ. ಇನ್ನು ಇಲ್ಲಿ ರುಕ್ಮಿಣಿಗೆ ದ್ವಾರಕಾಧೀಶನಿಗೆ ಪತ್ರ ಬರೆಯುವ ಸಲಹೆ ಕೊಡುವವಳು ಒಬ್ಬಳು ಸಖಿ. ವಿಪ್ರನನ್ನು ಗೊತ್ತುಮಾಡಿ ಪತ್ರ ಕಳುಹಿಸುವವಳೂ ಸಖಿಯೇ. ಪತ್ರ ಬರೆಯುವುದಕ್ಕೆ ಮುನ್ನವೂ, ನಂತರವೂ ರುಕ್ಮಿಣಿಯ ಮನಸ್ಸಿನ ಕಾತರತೆ, ತೊಳಲಾಟಗಳನ್ನು ಮೂಲಕ್ಕಿಂತಲೂ ವಿಸ್ತಾರವಾಗಿ ಚಿತ್ರಿಸಿದ್ದಾರೆ. ಅಂತೆಯೇ ಭೀಷ್ಮಕ-ರುಕ್ಮಿಣಿಯ ಸಂವಾದವೂ ಸಹ ನಾಟಕೀಯ ಅಂಶಗಳನ್ನು ಒಳಗೊಂಡಿದೆ. ಕೃಷ್ಣನ ನಿಂದಾಸ್ತುತಿ ರೂಪದ ವರ್ಣನೆಯೂ ಇದೆ. ವಿವಾಹದ ವರ್ಣನೆಯೆಲ್ಲಾ ಮೂಲಕ್ಕಿಂತಲೂ ವಿಸ್ತಾರವಾಗಿ ವರ್ಣಿತವಾಗಿವೆ. ಈ ಅಂಶಗಳೆಲ್ಲವೂ ಭಾಗವತ ಮಹಾಪುರಾಣ, ಅದರಲ್ಲೂ ಕೃಷ್ಣಮಯವಾದ ದಶಮಸ್ಕಂದಪರವರ್ತಿ ಕವಿಗಳನ್ನು ಯಾವ ರೀತಿಯಲ್ಲಿ ಪ್ರಭಾವಿಸಿ ವಿಸ್ತಾರ ಪಡೆದಿದೆ, ಪಡೆಯಬಲ್ಲದು ಎಂಬುದನ್ನು ಸೂಚಿಸುತ್ತದೆ. ನಿಗೂಢ, ವಿಸ್ಮಯಾವಹ, ರಮಣೀಯ, ಕೃಷ್ಣ ಪ್ರಭಾವದಿಂದ ಮುಕ್ತರಾಗಲು ಯಾರಿಗೆ ತಾನೇ ಸಾಧ್ಯ? ಪೂಜ್ಯ ಡಿ.ವಿ.ಜಿ. ಯವರು ಹೇಳುವಂತೆ

ಗತಿ ಸರ್ವರ್ಗಂ ಕೃಷ್ಣಂ ।
ಯತಿಗಂಕಾಮಿಗಮ ಸಂಸೃತಂಗಂ ವ್ರತಿಗಂ ।
ಪತಿತಂಗಂ ಕೃತಮತಿಗಂ ।
ಹಿತಪಥಮಂ ತತ್ತದುಚಿತನಯದಿಂ ತೋರ್ಪನ್ ॥

(ಲೇಖಕರು ತ.ಸು. ಶಾಮರಾಯರ ವಚನ ಭಾಗವತ, ಗೀತಾಪ್ರೆಸ್‌ನವರ ಭಾಗವತ ಅನುವಾದ (ಮೂಲಸಹಿತ), ಮದ್ರಾಸಿನ ರಾಮಕೃಷ್ಣ ಮಠದ ಭಾಗವತ ಮೂಲ ಮತ್ತು ಇಂಗ್ಲೀಷ್ ಅನುವಾದ, ಶ್ರೀ ಆರ್. ವ್ಯಾಸರಾಯರ "ಶ್ರೀ ಕೃಷ್ಣ ಚರಿತ್ರೆ" (ಬಂಕಿಂ ಚಂದ್ರರ ಬಂಗಾಳಿ ಭಾಷೆಯ ಕೃಷ್ಣಚರಿತ್ರೆಯ ಕನ್ನಡ ರೂಪ) ಮತ್ತು ಗೋಖಲೆ ಸಾರ್ವಜನಿಕ ಸಂಸ್ಥೆಯಲ್ಲಿ ನಡೆದ ಶತಾವಧಾನಿ ರಾ. ಗಣೇಶರ ಶ್ರೀಮದ್ಭಾಗವತ ಪ್ರವಚನದ ಸಿ.ಡಿ.ಗಳಿಗೆ ಋಣಿಯಾಗಿದ್ದಾರೆ).

❑

ಬ್ರಹ್ಮಾಂಡ ಪುರಾಣಾಂತರ್ಗತ ಲಲಿತಾ

—ವಿದುಷಿ ಲಲಿತಾ ನಾರಾಯಣಸ್ವಾಮಿ

ಸಿಂದೂರದಂತೆ ಕೆಂಪು ವರ್ಣವುಳ್ಳವಳೂ,
ಮೂರು ಕಣ್ಣುಳ್ಳವಳೂ,
ಮಾಣಿಕ್ಯಮುಕುಟದಲ್ಲಿ ಪ್ರಕಾಶಿಸುತ್ತಿರುವ
ಚಂದ್ರನನ್ನು ಚೂಡಾಮಣಿಯಾಗಿ
ಹೊಂದಿರುವವಳೂ, ಹಸನ್ಮುಖಿಯೂ,
ಪೀನಪಯೋಧರಿಯೂ, ತನ್ನ ಎರಡು ಕೈಗಳಲ್ಲಿ
ರಕ್ತವರ್ಣದ ಕಮಲವನ್ನು ಮತ್ತು
ಮದ್ಯಪೂರ್ಣವಾದ ರತ್ನಪಾತ್ರೆಯನ್ನು
ಹಿಡಿದಿರುವವಳೂ, ಸೌಮ್ಯರೂಪಳೂ,
ರತ್ನಘಟದ ಮೇಲೆ ಇಡಲ್ಪಟ್ಟ ರಕ್ತವರ್ಣದ
ಚರಣಗಳುಳ್ಳವಳೂ ಆದ ಪರಮಾಂಬಿಕೆಯನ್ನು
ಧ್ಯಾನಿಸಬೇಕು ಎಂದು ಬ್ರಹ್ಮಾಂಡ ಪುರಾಣ
ಲಲಿತೆಯನ್ನು ನಿರೂಪಿಸುತ್ತದೆ.

ಸಿಂದೂರಾರುಣ ವಿಗ್ರಹಾಂ ತ್ರಿನಯನಾಂ
ಮಾಣಿಕ್ಯ ಮೌಲಿಸ್ಫುರ –
ತ್ತಾರಾನಾಯಕಶೇಖರಾಂ ಸ್ಮಿತಮುಖೀ
ಮಾಪೀನವಕ್ಷೋರುಹಾಮ್ ।
ಪಾಣಿಭ್ಯಾಮಲಿಪೂರ್ಣರತ್ನಚಪಕಂ
ರಕ್ತೋತ್ಪಲಂ ಬಿಭ್ರತೀಂ
ಸೌಮ್ಯಾಂ ರತ್ನಘಟಸ್ಥ ರಕ್ತಚರಣಾಂ
ಧ್ಯಾಯೇತ್ ಪರಾಮಂಬಿಕಾಮ್ ॥

ಸಿಂದೂರದಂತೆ ಕೆಂಪು ವರ್ಣವುಳ್ಳವಳೂ, ಮೂರು ಕಣ್ಣುಳ್ಳವಳೂ, ಮಾಣಿಕ್ಯಮುಕುಟದಲ್ಲಿ ಪ್ರಕಾಶಿಸುತ್ತಿರುವ ಚಂದ್ರನನ್ನು ಚೂಡಾಮಣಿಯಾಗಿ ಹೊಂದಿರುವವಳೂ, ಹಸನ್ಮುಖಿಯೂ, ಪೀನಪಯೋಧರಿಯೂ, ತನ್ನ ಎರಡು ಕೈಗಳಲ್ಲಿ ರಕ್ತವರ್ಣದ ಕಮಲವನ್ನು ಮತ್ತು ಮದ್ಯಪೂರ್ಣವಾದ ರತ್ನಪಾತ್ರೆಯನ್ನು ಹಿಡಿದಿರುವವಳೂ, ಸೌಮ್ಯರೂಪಳೂ, ರತ್ನಘಟದ ಮೇಲೆ ಇಡಲ್ಪಟ್ಟ ರಕ್ತವರ್ಣದ ಚರಣಗಳುಳ್ಳವಳೂ ಆದ ಪರಮಾಂಬಿಕೆಯನ್ನು ಧ್ಯಾನಿಸಬೇಕು.

ಶ್ರೀಲಲಿತಾಮಾತೆಯ ಬಗ್ಗೆ ಲಲಿತಾ ಸಹಸ್ರನಾಮದ ರೂಪದಲ್ಲಿ ಬ್ರಹ್ಮಾಂಡಪುರಾಣದಲ್ಲಿ ಅಂತರ್ಗತವಾದ ಶ್ರೀಲಲಿತೋಪಾಖ್ಯಾನದ ಉತ್ತರಭಾಗದಲ್ಲಿರತಕ್ಕಂತಹ ಲಲಿತೆಯ ಅಂತರಾರ್ಥವನ್ನು ಈ ಮೂಲಕ ವಿವರಿಸುತ್ತಿದ್ದೇನೆ. ಲಲಿತೋಪಾಖ್ಯಾನವು ಮೂರು ಭಾಗಗಳನ್ನೊಳಗೊಂಡಿದೆ. ಪೀಠಿಕಾರೂಪವಾದ ಪೂರ್ವಭಾಗ, ಸಹಸ್ರನಾಮ ಹಾಗೂ ಫಲಶೃತಿ. ಲಲಿತೋಪಾಖ್ಯಾನವನ್ನು ಕಥಿಸಿದ ಹಯಗ್ರೀವ ಮುನಿಯೇ ಲಲಿತಾಸಹಸ್ರನಾಮವನ್ನು ಅಗಸ್ತ್ಯನಿಗೆ ವಿವರಿಸಿದ್ದಾರೆ.

ಲಲಿತೋಪಾಖ್ಯಾನದಲ್ಲಿ ವಿವರಿಸಿರುವ ಲಲಿತಾದೇವಿಯ ಅವತಾರ, ಪಟ್ಟಾಭಿಷೇಕ, ಭಂಡಾಸುರ ವಧೆ ಮೊದಲಾದವುಗಳು ಅತ್ಯಂತ ಮುಖ್ಯವಾದುವು.

ಲಲಿತೆ ಎಂದರೆ "ಲಲಾಟ ಲಿಖಿತವನ್ನು ತಾರತಮ್ಯವಿಲ್ಲದಂತೆ ಬರೆದವಳು". ಅವಳೇ ಲಲಾಟಲಿಖಿತಳು, ಶೋಭಿಸುವವಳು ಅಥವಾ ಲಾಲಿತ್ಯವುಳ್ಳವಳು ಎಂದಾಗುತ್ತದೆ. ಲಲಿತೆಯು ಅಂಬಿಕೆಯೂ ಆಗಿರುವಳು. ಆದ್ದರಿಂದಲೇ ಅವಳು ಲಲಿತಾಂಬಿಕೆ. ಇಲ್ಲಿ ಶೋಭೆ, ವಿಲಾಸ, ಮಾಧುರ್ಯ, ಗಾಂಭೀರ್ಯ, ಸ್ಥೈರ್ಯ, ತೇಜಸ್ಸು, ಲಾಲಿತ್ಯ; ಮತ್ತು ಔದಾರ್ಯ ಎಂಬ ಎಂಟು ಅರ್ಥಗಳೂ ಲಲಿತೆ ಪದಕ್ಕೆ ಇವೆ. ಅಲ್ಲದೆ ಲೋಕಗಳನ್ನು ಅತಿಕ್ರಮಿಸಿ ಶೋಭಿಸುವುದರಿಂದ ಲಲಿತಾ ಎಂದು ಹೇಳಲ್ಪಟ್ಟಿದ್ದಾಳೆ. "ಲೋಕಾನತೀತ್ಯಾ ಲಲಿತೇ ಲಲಿತಾ ತೇನಸೋಚ್ಯತೇ" ಎಂದು ಪದ್ಮಪುರಾಣದಲ್ಲೂ ಹೇಳಿದೆ. 'ಲೋಕಾನ್' ಎಂದರೆ ಆವರಣ ದೇವತೆಗಳು. 'ಅತೀತ್ಯ' ಎಂದರೆ ಆ ದೇವತಾಸ್ಥಾನಗಳ ಮೇಲಿರುವ ಬಿಂದುವಿನಲ್ಲಿ, 'ಲಲತೇ' ಎಂದರೆ ಅತಿತರವಾಗಿ ಶೋಭಿಸುವವಳು. ಶಬ್ದಾರ್ಣವದಲ್ಲಿ ಸಹಾ ಲಲಿತಾ ಎಂದರೆ ಸುಂದರವು "ಲಲಿತೇ ಸುಂದರಮ್" ಎಂದು ಹೇಳಲಾಗಿದೆ. ಲಲಿತಾದೇವಿಯು ಪ್ರಯಾಣಪೀಠದ ಅಧಿಷ್ಠಾತೃದೇವತೆ.

ಒಮ್ಮೆ ಶಿವನು ಮನ್ಮಥನನ್ನು ತನ್ನ ಮೂರನೆಯ ಕಣ್ಣಿನಿಂದ ದಹಿಸಿದ ಮೇಲೆ ಚಿತ್ರಕರ್ಮನೆಂಬ ಗಣೇಶ್ವರನು ಮನ್ಮಥನ ಬೂದಿಯನ್ನು ಒಟ್ಟುಗೂಡಿಸಿ ಅದರಿಂದ ಒಂದು ಪುರುಷಾಕೃತಿಯನ್ನು ಮಾಡಿದನು. ತನ್ನ ಎದುರು ಇದ್ದ ಆ ವಿಚಿತ್ರ ತನುವನ್ನು ಶಿವನು ನೋಡಿದ ಕೂಡಲೇ ಅದಕ್ಕೆ ಜೀವವುಂಟಾಯಿತು. ಸಾಕ್ಷಾತ್ ಮನ್ಮಥನಂತೆ ಇದ್ದ ಅತಿ ತೇಜಸ್ವಿಯಾದ ಆ ಪುರುಷನನ್ನು ಚಿತ್ರಕರ್ಮನು ಆಲಂಗಿಸಿ – ಎಲೈ ಬಾಲಕನೇ, ಮಹಾದೇವನನ್ನು ಸ್ತುತಿಸು, ಅವನು ಸರ್ವಾರ್ಥಸಾಧಕನು ಎಂದು ಹೇಳಿದನು. ಆ ವಿಚಿತ್ರ ತನುವುಳ್ಳ ಪುರುಷನು ಚಿತ್ರಕರ್ಮನಿಂದ ಶತರುದ್ರೀಮಂತ್ರವನ್ನು ಕಲಿತು ಅದನ್ನೇ ಜಪಿಸುತ್ತಾ ರುದ್ರನನ್ನು ಪೂಜಿಸಿದನು. ಇದರಿಂದ ಪ್ರೀತನಾದ ಪರಮೇಶ್ವರನು ಇವನಿಗೆ ಅರವತ್ತುಸಾವಿರ ವರುಷಗಳವರೆಗೂ ಚಕ್ರವರ್ತಿ ಪದವಿಯನ್ನು ಅನುಗ್ರಹಿಸಿದನು. ಪರಶಿವನ ನಡತೆಯನ್ನು ಕಂಡ ಬ್ರಹ್ಮನು "ಭಂಡ್ ಭಂಡ್" ಎಂದನು. ಆದ್ದರಿಂದಲೇ ಆ ಪುರುಷನು ಭಂಡನೆಂದು ಪ್ರಸಿದ್ಧನಾದನು.

ರುದ್ರನ ಕೋಪಾನಲದಿಂದ ಹುಟ್ಟಿದ ಭಂಡನು ರೌದ್ರಸ್ವರೂಪವುಳ್ಳವನಾಗಿ ಮಯನಿಂದ ಕಟ್ಟಿಸಲ್ಪಟ್ಟ ಶ್ಲೊ 115

'ಈ' ಅಕ್ಷರವು ಆನಂದವನ್ನೂ ಅಂದರೆ "ಈಶಾವಾಸ್ಯಮಿದಂಸರ್ವಂ" ಎನ್ನುವ ಹಾಗೆ ಸರ್ವವೂ ಶಿವ-ಶಿವೆಯರಮಯವಾಗಿ ಮಂಗಳಮಯ ಎನ್ನುವುದನ್ನೂ, '0' ಅನುಸ್ವಾರವು ಪ್ರಪಂಚದ ಪ್ರಕೃತಿಬೀಜಭೂತವನ್ನೂ ಪ್ರತಿಪಾದಿಸುತ್ತದೆ.

ಪ್ರಪಂಚದ ಸೃಷ್ಟಿಯಾಗುವ ಸಮಯದಲ್ಲಿ ಪರಬ್ರಹ್ಮಸ್ವರೂಪವಾದ ಶ್ರೀಂ ಬೀಜಾಕ್ಷರದಲ್ಲಿನ ಅನುಸ್ವಾರವು ಸೊನ್ನೆಯ ಬೀಜದಿಂದ ಮೊಳಕೆ ಹೊಡೆಯುವಂತೆ ಹೊರಹೊಮ್ಮುವುದೇ ಸೃಷ್ಟಿಗೆ ಪ್ರಾರಂಭ. ಸೃಷ್ಟಿ ಪ್ರಾರಂಭವಾದ ಮೇಲೆ ಪ್ರಪಂಚ ಬೀಜಶಕ್ತಿಯಾದ ಅನುಸ್ವಾರವು ಸೃಷ್ಟಿಕ್ರಮವನ್ನು ಅನುಸರಿಸಿ ಗರ್ಭರೂಪವಾಗುವುದು. ಶ್ರೀ ಅಕ್ಷರದಲ್ಲಿನ 'ರ' ಅಕ್ಷರದ ತತ್ವವಾದ ಚಿಚ್ಛಕ್ತಿಯು ಪರಬ್ರಹ್ಮ ತತ್ವದಿಂದ ಈಶ್ವರೀಶಕ್ತಿಯಾಗಿ ಉದಯಿಸಿ ಗರ್ಭರೂಪವಾಗಿರುವ ಅನುಸ್ವಾರವನ್ನು ಧರಿಸಿ ಗರ್ಭಿಣಿ ಎನಿಸಿಕೊಳ್ಳುವಳು. ಆದ್ದರಿಂದ ಈಶ್ವರೀಶಕ್ತಿಯೇ ಪ್ರಪಂಚರೂಪವಾದ ಗರ್ಭವನ್ನು ಧರಿಸುವುದರಿಂದ ಲಲಿತೆಯು ಶ್ರೀಮಾತಾ ಎನಿಸಿಕೊಳ್ಳುವಳು. "ಮಾತಿವರ್ತತೇ ಅತ್ರಗರ್ಭೋಮಾತಾ ಋ ಸೀ ಮಾವನೆ ವರ್ತನೇ ಚ" ಎನ್ನುವ ಅರ್ಥವೂ ಮಾತಾ ಪದಕ್ಕೆ ಇದೆ. ಸಹಸ್ರನಾಮದ ಪ್ರಥಮನಾಮವು ಶ್ರೀಮಾತಾ ಎಂದಿದೆ. ಅಂತ್ಯದ ನಾಮವು ಲಲಿತಾಂಬಿಕಾ ಎಂದಿದೆ. ಎರಡನ್ನೂ ಸೇರಿಸಿದರೆ "ಶ್ರೀಮಾತಾಲಲಿತಾಂಬಿಕಾ" ಎಂದಾಗುತ್ತದೆ. ಅಂದರೆ ಮಹಾಲಕ್ಷ್ಮಿಯು ಅವಳೇ ಲಲಿತೆಯೂ ಅವಳೇ ಎಂದರ್ಥವಾಗುತ್ತದೆ. ಅನಂತರ ಬ್ರಹ್ಮಾದಿಗಳ ಇಚ್ಛೆಯಂತೆ ಲಾವಣ್ಯವತಿಯಾದ ದೇವಿಯು ಕಾಮೇಶ್ವರನ ರೂಪದಲ್ಲಿದ್ದ ಶಿವನನ್ನು ವರಿಸಿ ಮಹಾರಾಜ್ಞಿಯಾದಳು, ಕಾಮಾಕ್ಷಿ ಕಾಮೇಶ್ವರೀ ಎಂಬ ಬಿರುದುಗಳನ್ನೂ ಪಡೆದಳು.

ಮಹಾರಾಜ್ಞಿ ಎಂದರೆ "ಪ್ರಜಾನಾಂ ರಂಜಯತೀತಿ ರಾಜ್ಞಿ ರಾಜಿತ ಇತಿ ರಾಜ್ಞೆ" ಎಂಬ ವ್ಯುತ್ಪತ್ತಿಗಳನ್ನು ಅನುಸರಿಸಿ ಪ್ರಜೆಗಳನ್ನು ಸಂತೋಷಪಡಿಸುವವಳು ಮತ್ತು ಪ್ರಕಾಶಿಸುವವಳು ಎಂಬ ಅರ್ಥಗಳಿರುವುದರಿಂದ ಜೀವಿಗಳನ್ನು ಸೃಷ್ಟಿಸಿದ ನಂತರ ಕಾಪಾಡತಕ್ಕವಳೆಂಬುದನ್ನು ಪ್ರತಿಪಾದಿಸುವುದೇ ಮಹಾರಾಜ್ಞಿ ಎಂದಾಗುತ್ತದೆ. ಅಂದರೆ "ಯೇನ ಜಾತಾನಿ ಜೀವಂತಿ" - ಯಾರಿಂದ ಜೀವಿಗಳು ಹುಟ್ಟಿ ಜೀವಿಸುತ್ತವೆಯೋ ಅವಳೇ ಮಹಾರಾಜ್ಞಿ - ಇದು ಶೃತಿ ವಾಕ್ಯ. ತೈತ್ತಿರೀಯ ಉಪನಿಷತ್ತಿನಲ್ಲಿ ಇದರ ಉಲ್ಲೇಖವಿದೆ.

ಅವಳು "ಶ್ರೀಮತ್ಸಿಂಹಾಸನೇಶ್ವರಿ", ಸಿಂಹದ ಮೇಲೆ ಕುಳಿತುಕೊಂಡು ನಿಯಾಮಕಳಾಗಿರುವವಳು ಎಂಬುದು ಸಾಧಾರಣ ಅರ್ಥವಾದರೆ, "ಸಿಂಚತಿ ತೇಜಃ ಪಶುಷು ಇತಿ ಸಿಂಹಃ" ಎಂಬ ವ್ಯುತ್ಪತ್ತಿಯು ಶಿವಸಹಸ್ರನಾಮದ ಭಾಷ್ಯದಲ್ಲಿದೆ. ಅಂದರೆ "ಪಶುಷು" ಅಜ್ಞಾನಾವೃತರಾಗಿರುವ ಜೀವರುಗಳಿಗೆ "ಸಿಂಚತಿ ತೇಜಃ" ಅಜ್ಞಾನವನ್ನು ಹೋಗಲಾಡಿಸತಕ್ಕಂತಹ ಪ್ರಭೆಯನ್ನು ಅನುಗ್ರಹಿಸತಕ್ಕವಳು. ಅಲ್ಲದೆ ಇಂತಹ ಪ್ರಭೆಯನ್ನೇ ಆಸನವನ್ನಾಗಿ ಮಾಡಿಕೊಂಡು ಅದರಲ್ಲಿ ನೆಲೆಸಿ ಜಗನ್ನಿಯಾಮಕಳಾಗಿರುವಳೆಂದು ತತ್ವಾರ್ಥವಾಗಿರುವುದು ಅಥವಾ ಜಡ ಮತ್ತು ಅಂಧಕಾರಸ್ವರೂಪವಾದ ಪ್ರಪಂಚಕ್ಕೆ ತೇಜಸ್ಸನ್ನು ಎರಚತಕ್ಕವನು ಸೂರ್ಯನು - "ಏಷೋಂತರಾದಿತ್ಯೋಹಿರಣ್ಮಯಃ ಪುರುಷಃ" ಎಂಬ ಶೃತಿಯ ಆಧಾರದಂತೆ ಸೂರ್ಯನ ಅಂತರ್ಗತವಾಗಿ ಪರಬ್ರಹ್ಮವೂ ಈಶ್ವರನೂ ಇರುತ್ತಾರೆ. ಈಶ್ವರಸ್ವರೂಪಿಣಿಯಾದ ಶ್ರೀದೇವಿಯು ಜಗನ್ನಿಯಾಮಕಳಾಗಿ ಸೂರ್ಯನಲ್ಲಿ ನೆಲೆಸಿರುವಳೆಂಬ ತತ್ವಾರ್ಥವಿದೆ.

ಸಿಂಹ ಎನ್ನುವ ಶಬ್ದಕ್ಕೆ "ಸಿಂಹ (ಹಿಸಿ) ಹಿಂಸಾಯಾಂ" ಹಿಂಸೆ ಮಾಡುವುದು ಎಂಬ ಅರ್ಥವೂ ಆಗುವುದರಿಂದ ಶುದ್ಧ ಸತ್ವಗುಣದಲ್ಲಿ ನೆಲೆಸಿರುವ ಶ್ರೀದೇವಿಯು ರಜಸ್ತಮೋಗುಣಗಳನ್ನು ಅವುಗಳ ಸ್ವೇಚ್ಛೆಗೆ ಬಿಡದೆ ಪ್ರತಿಬಂಧಕದಲ್ಲಿಟ್ಟು ರಜಸ್ತಮೋರೂಪವಾದ ಜಡ ಪ್ರಪಂಚವನ್ನೇ ಆಸನವನ್ನಾಗಿ ಮಾಡಿಕೊಂಡು ಜಗನ್ನಿಯಾಮಕಳಾಗಿರುವಳೆಂಬ ಅರ್ಥವೂ ಇದೆ. ಸಿಂಹಾಸನಕ್ಕೆ ಈ ಅರ್ಥವಾದರೆ ಈಶ್ವರೀ ಎಂದರೆ ಸಮರ್ಥಳಾದವಳು, ಜಗತ್ತನ್ನು ಪಾಲಿಸುವವಳು ಎಂದರ್ಥವಾಗುತ್ತದೆ.

ಅಂತಹ ಮಹಾತಾಯಿಯನ್ನು ಸ್ತುತಿಸಿ ಪತಿಯ ಮೃತ್ಯುವಿನಿಂದ ವಿಶೇಷವಾಗಿ ನೊಂದಿದ್ದ ರತಿಯನ್ನು ಅನುಗ್ರಹಿಸಬೇಕೆಂದು ರತಿ ಬೇಡಿಕೊಂಡಿದ್ದರಿಂದ ಕರುಣಾಮಯಿಯಾದ ದೇವಿಯು ರತಿಯ ದುಃಖವನ್ನು ಸಹಿಸಲಾರದೆ ತನ್ನ ಕೃಪಾ ಕಟಾಕ್ಷದಿಂದ ಮನ್ಮಥನನ್ನು ಪುನಃ ಬದುಕಿಸಿದಳು. ನಂತರದಲ್ಲಿ ವಿಶ್ವಕರ್ಮ ಹಾಗೂ ಮಯನು ಮೇರುಪರ್ವತದ ಮಧ್ಯದ ಶಿಖರದಲ್ಲಿ ದೇವಿಗಾಗಿ ಶ್ರೀಪುರವೆಂಬ ಪಟ್ಟಣ ನಿರ್ಮಿಸಿ ಸುಮೇರುಮಧ್ಯಶೃಂಗಸ್ಥಾ ಶ್ರೀಮನ್ನಗರನಾಯಕಿ "ಸುಮೇರು ಪರ್ವತದ ಮಧ್ಯಶೃಂಗದಲ್ಲಿ ಇರುವವಳು" ಇವಳು ಶ್ರೀಮನ್ನಗರದನಾಯಿಕಾ. ಮೊದಲನೆಯದು ಹಿಂದೆ ಹೇಳಿದ ಮೇರುಪರ್ವತದ ಮಧ್ಯಶಿಖರ. ಎರಡನೆಯದು ಸುಧಾಸಾಗರದ ಮಧ್ಯದಲ್ಲಿರುವ ರತ್ನದ್ವೀಪದಲ್ಲಿದೆ. ಇದು ಸಮಸ್ತ ಬ್ರಹ್ಮಾಂಡಕ್ಕೆ ಹೊರಗೂ ಮೇಲೂ ಇರುವುದು. ಅಥವಾ ಶ್ರೀಮನ್ನಗರವೆಂದರೆ ಶ್ರೀಚಕ್ರಗೌಡಪಾದೀಯ ಸೂತ್ರದ ಭಾಷ್ಯಕಾರನು ಶ್ರೀಪುರವನ್ನು ಶ್ರೀಚಕ್ರವೆಂದು ವ್ಯಾಖ್ಯಾನ ಮಾಡಿದ್ದಾನೆ. ಇದೇ ಆಕಾಶಾಂತರ್ಗತವಾದ ಕಳಾಸ್ಥಾನ. ಇಂತಹ ಕಳಾಸ್ಥಾನದಲ್ಲಿ ವಾಸಿಸುವವಳು ಸಹಸ್ರಾರು ಕಮಲದ ಮೂಲಾಧಾರ ಚಕ್ರದಲ್ಲಿರುವವಳು. ಶ್ರೀಪುರದಲ್ಲಿ ಚಿಂತಾಮಣಿಗಳಿಂದ ಕಟ್ಟಿದ ಗೃಹದಲ್ಲಿ ವಾಸಿಸುವವಳು. ಅಂದರೆ ಚಿಂತಿಸಿದ ವಸ್ತುಗಳನ್ನೆಲ್ಲಾ ಅನುಗ್ರಹಿಸುವ ಮಂತ್ರಗಳ ನಿರ್ಮಾಣಸ್ಥಾನವು ಚಿಂತಾಮಣಿಗೃಹಾ ಎಂದು ಗೌಡಪಾದೀಯ ಭಾಷ್ಯವು ಹೇಳಿದೆ. ಅಂದರೆ ಸಕಲೇಷ್ಟದಾಯಕವಾದುದು ಮೂಲಾಧಾರ ಚಕ್ರದ ಸಹಸ್ರಾರ ಕಮಲ ಮಧ್ಯದಲ್ಲಿರುವ ಕರ್ಣಿಕಾ ಪ್ರದೇಶವೇ ಚಿಂತಾಮಣಿ ಗೃಹ. ಇದರ ಮಧ್ಯದಲ್ಲಿ ಬಿಂದುಪೀಠವೆಂಬ ಪ್ರಸಿದ್ಧ ಪೀಠವಿದೆ. ಆ ಮಹಾಪೀಠದಲ್ಲಿ ಶ್ರೀದೇವಿಯ ಪಂಚರತ್ನವು ವಿರಾಜಿಸುತ್ತಿರುವುದು. ಅವಳು ಇರುವ ಪೀಠವು ಎಂದರೆ "ಪಂಚ ಬ್ರಹ್ಮಾಸನಸ್ಥಿತಾ". ಐದು ಬ್ರಹ್ಮಕೀ ಆಸನವಾಗಿರುವ ಮಂಚದಲ್ಲಿ ಸ್ಥಿತಳಾಗಿರುವವಳು. ಅಂತಹ ದೇವಿಯ ಉತ್ತಮ ಮಂದಿರವು ಚಿಂತಾಮಣಿಯಾಗಿದೆ. ಸದಾಶಿವನೇ ಮಹಾಮಂಚವಾಗಿದ್ದಾನೆ. ಅಂತಹ ರಮ್ಯವಾದ ಹಾಸಿಗೆಯ ಮೇಲೆ ಸದಾಶಿವನೇ ಚಾಪೆ ಅಂದರೆ ಹಲಗೆ, ಬ್ರಹ್ಮ, ವಿಷ್ಣು, ರುದ್ರ, ಈಶ್ವರರೆಂಬ ಮಂಚದ ನಾಲ್ಕು ಕಾಲುಗಳಿಂದಲೂ ಸದಾಶಿವಪರಬ್ರಹ್ಮನೆಂದು ಮಂಚದ ಹಲಗೆಯುಳ್ಳ ಆಸನದಲ್ಲಿ ನೆಲೆಸಿರುವವಳು. ಆದಿಶಕ್ತಿಯು ಸರ್ವವ್ಯಾಪಿಯಾದ ಪರಬ್ರಹ್ಮ ಸ್ವರೂಪಿಣಿಯಾದುದರಿಂದ ಸದಾಶಿವನೆಂದರೆ, ಸರ್ವವ್ಯಾಪಿಯೆಂದರೆ ಪರಬ್ರಹ್ಮ ಚೈತನ್ಯವನ್ನು ಅಭೇದದಿಂದ ಅನುಸರಿಸುತ್ತದೆಯೆಂಬುದಕ್ಕೆ ಪರಬ್ರಹ್ಮಸ್ವರೂಪವಾದ ಹಲಗೆಯಲ್ಲೂ ಸಗುಣದಲ್ಲಿ ವಿಭಾಗವಾದ ಈಶ್ವರ, ಚತುರ್ಮುಖ ಬ್ರಹ್ಮ, ವಿಷ್ಣು, ರುದ್ರ ಇವರುಗಳಿಗೆ ಆದಿಯಾಗಿ ತಾನು ಇರುತ್ತೇನೆಂಬ ಸೂಚನೆಗೆ ಈ ಚತುರ್ಮೂರ್ತಿಗಳ ಸ್ವರೂಪವಾದ ಕಾಲುಗಳುಳ್ಳ ಮಂಚದಲ್ಲೂ ಶ್ರೀ ಲಲಿತೆಯು ನೆಲೆಸಿರುವುದೇ "ಪಂಚಬ್ರಹ್ಮಾಸನಸ್ಥಿತಾ" ಎಂಬುದಾಗಿದೆ. ಈ ತತ್ವವು ನಮ್ಮ ದೇಹದಲ್ಲೂ ಇದೆ. ಮೂಲಾಧಾರ ಚಕ್ರವು ಚತುರ್ಮುಖ ಬ್ರಹ್ಮನಿಗೂ, ಅನಾಹತ ಚಕ್ರವು ವಿಷ್ಣುವಿಗೂ, ಆಜ್ಞಾ ಚಕ್ರವು ರುದ್ರನಿಗೂ ಸ್ಥಾನಗಳಾಗಿವೆ. ಆಜ್ಞಾಚಕ್ರದ ಮೇಲಿರುವ ದಹರಾಕಾಶವೆನಿಸುವ ಕಳೆಯೇ ಈಶ್ವರನಿಗೆ ಸ್ಥಾನವಾಗಿದೆ. ಈ ಸಗುಣಗಳಿಗೆ ಆದಿಯಾಗಿರುವ ಶ್ರೀದೇವಿಯು ಸದಾಶಿವತತ್ವದಲ್ಲಿ ನೆಲೆಸಿರುವ ಸ್ಥಾನವೇ ಸಹಸ್ರಾರವಾಗಿದೆ (ಎಲ್ಲ ಚಕ್ರಗಳಲ್ಲಿ ದೇವಿ ಹೇಗೆ ನೆಲೆಸುತ್ತಾಳೆ, ಶಿವ-ಶಿವೆಯರ ಮಹಿಮೆ ಏನು ಎಂಬುದನ್ನು ಮುಂದೆ ಹೇಳುತ್ತೇನೆ). ಮೇಲೆ ಹೇಳಿರುವುದೇ ಪಂಚಬ್ರಹ್ಮಾಸನಗಳು. ಬ್ರಹ್ಮ, ವಿಷ್ಣು, ರುದ್ರ, ಈಶ್ವರ, ಸದಾಶಿವರು-ಈ ಐವರೂ ಈಶಾನ, ತತ್ಪುರುಷ, ಅಘೋರ, ವಾಮದೇವ, ಸದ್ಯೋಜಾತರು-ಈ ಐವರೂ ವಾಸುದೇವ, ಸಂಕರ್ಷಣ, ಪ್ರದ್ಯುಮ್ನ, ಅನಿರುದ್ಧ, ನಾರಾಯಣರು-ಈ ಐವರೂ ಪಂಚಬ್ರಹ್ಮರು. ಈ ಪಂಚಬ್ರಹ್ಮಗಳನ್ನು ಹೊಂದಿದಂತಹ ಸ್ವರೂಪಿಣಿಯು ಈಕೆ.

ಲಲಿತೆಯನ್ನು ಶ್ವೇತಾಶ್ವತರ ಉಪನಿಷತ್ತಿನಲ್ಲಿ ಈ ಪರತತ್ವದ ಬಗ್ಗೆ ಕುರಿತು ಹೀಗೆ ಹೇಳಲಾಗಿದೆ. "ತ್ವಂ ಸ್ತ್ರೀ ತ್ವಂ ಪುಮಾನಸಿ, ತ್ವಂ ಕುಮಾರ, ವಾ ಕುಮಾರೀ, ತ್ವಾಂ ಜೀರ್ಣೋದಂಡೇನ ವಂಚಸಿ, ತ್ವಾಂ ಜಾತೋ ಭವಸಿ ವಿಶ್ವತೋ ಮುಖಃ" - ಅಂದರೆ ಸ್ತ್ರೀ, ನೀನು ಪುರುಷ, ನೀನು ಕುಮಾರ, ನೀನು ಕುಮಾರಿ, ನೀನು ಕೋಲನ್ನು ಹಿಡಿದು ತತ್ತರಿಸುತ್ತಿರುವ ಮುದುಕ, ನೀನು ಸರ್ವತೋಮುಖ, ಅಂದರೆ ಇಡೀ ಬ್ರಹ್ಮಾಂಡವೇ ಲಲಿತೆ, ಪರತತ್ವ

ಎಂಬುದಾಗಿ ಹೇಳಿದೆ. ಅಲ್ಲದೆ "ನೀಲಃ ಪತಂಗೋ ಹರಿತೋ ಲೋಹಿತಾಕ್ಷಸ್ತಡಿದರ್ಭಋತವಃ ಸಮುದ್ರಃ". ನೀನು ನೀಲವಾದ ಪತಂಗ, ಕೆಂಪಾದ ಕಣ್ಣುಗಳುಳ್ಳ ಹಸಿರು ಬಣ್ಣದ ಗಿಳಿ. ಗುಡುಗುತ್ತಿರುವ ಮೋಡ, ಋತುಗಳೂ ನೀನೇ, ಸಮುದ್ರವೂ ನೀನೇ ಎಂದು ರಮ್ಯವಾಗಿ ಪರತತ್ವದ ಬಗ್ಗೆ ಹೇಳಲಾಗಿದೆ.

ಲಲಿತೆಯು ಹೇಗಿರುವಳೆಂದರೆ "ನಿಜಾರುಣ ಪ್ರಭಾಪೂರಾ ಮಜ್ಜದ್ಬ್ರಹ್ಮಾಂಡ ಮಂಡಲಾ" – ಅವಳು ಉದಯಿಸುತ್ತಿರುವ ಬಾಲಸೂರ್ಯನಂತೆ ನಸುಗೆಂಪುಳ್ಳವಳು. ವಸ್ತ್ರಾಭರಣಗಳೆಲ್ಲವೂ ಅರುಣಾರುಣವಾಗಿದೆ. "ಮನೋರೂಪೇಕ್ಷು ಕೋದಂಡಾ" ಮನೋರೂಪವಾದ ಕಬ್ಬಿನ ಬಿಲ್ಲು ಕೋದಂಡವನ್ನು ಹಿಡಿದಿರುವವಳು, "ಕ್ರೋಧಾಕಾರಾಂಕುಶೋಜ್ವಲಾ" – ಕ್ರೋಧರೂಪವಾದ ಅಂಕುಶ ಹಿಡಿದಿರುವವಳು. ಅವಳ ಮನಸ್ಸು ಕಬ್ಬಿನ ಬಿಲ್ಲು, ರಾಗವೇ ಪಾಶ, ದ್ವೇಷವೇ ಅಂಕುಶ, ಪಂಚತನ್ಮಾತ್ರೆಗಳೇ ಪುಷ್ಪಬಾಣಗಳು ಅವಳ ಅಸ್ತ್ರಗಳು.

"ಚಂಪಕಾಶೋಕ ಪುನ್ನಾಗಸೌಗಂಧಿಕಲಸತ್ಕಚಾ" – ಚಂಪಕ, ಅಶೋಕ, ಪುನ್ನಾಗ, ಸೌಗಂಧಿಕಾ ಮುಂತಾದ ಪುಷ್ಪಗಳಿಂದ ಅವಳ ಕೇಶಪಾಶ ಅಲಂಕೃತವಾಗಿದೆ.

"ಅಷ್ಟಮೀ ಚಂದ್ರವಿಭ್ರಾಜ" – ಅಷ್ಟಮೀಚಂದ್ರನಂತೆ ವಿರಾಜಿಸುತ್ತಿರುವ ಅವಳ ಮುಖಚಂದ್ರಕ್ಕೆ ಕಸ್ತೂರಿ ತಿಲಕವು ಕಳಂಕಪ್ರಾಯವಾಗಿದೆ.

"ವಕ್ತ್ರ ಲಕ್ಷ್ಮಿ ಪರಿವಾಹ ಚಲನ್ಮೀನಾಭಲೋಚನಾ" – ತನ್ನ ಮುಖಶ್ರೀ ಎಂಬ ಜಲಪ್ರವಾಹದಲ್ಲಿ ಅವಳ ಕಣ್ಣುಗಳು ಮೀನುಗಳಂತೆ ಚಲಿಸುತ್ತಿರುವುವು.

"ತಾರಾಕಾಂತಿ ತಿರಸ್ಕಾರಿ ನಾಸಾಭರಣ ಭಾಸುರಾ" – ನಕ್ಷತ್ರಕಾಂತಿಯನ್ನು ತಿರಸ್ಕರಿಸುವ ಮೂಗಿನ ಆಭರಣದಿಂದ ವಿರಾಜಿಸುತ್ತಿರುವವಳು. ಮೂಗಿನ ಆಭರಣವು ಮುತ್ತು ಮಾಣಿಕ್ಯ (ರವಿ, ಚಂದ್ರ)ಗಳಿಂದ ಮಾಡಿರುವುದು.

"ತಾಟಂಕಯುಗಲೀಭೂತ ತಪನೋಡುಪ ಮಂಡಲಾ" – ಸೂರ್ಯಚಂದ್ರರ ಮಂಡಲಗಳನ್ನೇ ಕಿವಿಯ ಎರಡು ಆಭರಣಗಳನ್ನಾಗಿ ಉಳ್ಳವಳು, ಸೂರ್ಯಚಂದ್ರರೇ ಅವಳ ಎರಡು ಕುಚಗಳು, ಕಣ್ಣುಗಳು ಹಾಗೂ ಕರ್ಣಾಭರಣಗಳು ಎಂದು ಶೃತಿ ಹೇಳುತ್ತದೆ.

"ನಿಜ ಸಲ್ಲಾಪ ಮಾಧುರ್ಯ ವಿನಿರ್ಭರ್ತ್ಸಿತಕಚ್ಛಪೀ" – ದೇವಿಯ ಸಲ್ಲಾಪ ಮಾಧುರ್ಯವು ಸರಸ್ವತಿಯ ಕಚ್ಛಪೀ ವೀಣೆಯನ್ನು ಮೀರಿಸಿದೆ. ವಿಶ್ವಾವಸುವಿನ ವೀಣೆಗೆ ಬೃಹತೀ ಎಂದೂ, ತುಂಬುರುವಿನ ವೀಣೆಗೆ ಕಲಾವತೀ ಎಂದೂ, ನಾರದನ ವೀಣೆಗೆ ಮಹತೀ ಎಂದೂ ಸರಸ್ವತಿಯ ವೀಣೆಗೆ ಕಚ್ಛಪೀ ಎಂದೂ ಹೆಸರುಗಳುಂಟು. ಸರಸ್ವತಿಯ ಕಚ್ಛಪೀ ವೀಣೆಯಲ್ಲಿ ಶುಕಸಾರಿಕಾದಿ ಪಕ್ಷಿಗಳ ಮಾತಿನಂತೆ ವರ್ಣಗಳ ಅಭಿವ್ಯಕ್ತತೆ ಇದೆ. ಸರಸ್ವತಿಯು ಪಶುಪತಿಯ ಲೀಲಾಗೀತೆಗಳನ್ನು ವೀಣೆಯಲ್ಲಿ ನುಡಿಸುತ್ತಿರುವಾಗ ಎಲ್ಲರೂ ತಲೆಯನ್ನು ಅಂತಃಸಂತೋಷದಿಂದ ಅಲ್ಲಾಡಿಸುತ್ತಾ ಹೊಗಳಲು ಪ್ರಾರಂಭಿಸಿದರೆ, ಮಾತಿನ ಮಾಧುರ್ಯದಿಂದ ಅವಳ ವೀಣೆ ತಂತೀ ಕಲರವವೂ ತಿರಸ್ಕರಿಸಲ್ಪಡುವುದು. ಆಗ ವಾಣಿಯು ತನ್ನ ವೀಣೆಯನ್ನು ಗವುಸಿನಿಂದ ಮುಚ್ಚುತ್ತಾಳೆ. "ವಿಪಂಚ್ಯಾಗಾಯಂತೀ ವಿವಿಧ ಮಸದೀನಂ ಪಶುಪತೇಸ್ತಯಾರಬ್ಧೇ ವಕ್ತುಂ ಚಲಿತ ಶಿರಸಾ ಸಾಧುಪಚನೇ ತದೀಯೇರ್ಮಾದುರ್ಯೈರಪಲಷ್ಟಿತ ತಂತ್ರೀಕಲರವಾಂ ನಿಜಾಂ ವೀಣಾಂ ವಾಣೀ ನಿಚುಲಯತಿ ಚೋಲೇನ ನಿಭೃತಮ್" ಎಂದು ಸೌಂದರ್ಯ ಲಹರಿಯಲ್ಲಿ ಶ್ರೀ ಶಂಕರ ಭಗವತ್ಪಾದರು ಹೇಳಿದ್ದಾರೆ.

ಅವಳು ಶಾಸ್ತ್ರದ ಸಾರಳು. ಛಂದಸ್ಸಿನ ಸಾರಭೂತಳು. ಚೈತನ್ಯಕುಸುಮಪ್ರಿಯಳು. ತತ್ವಮಯಿಯು. ತತ್ವಾರ್ಥಸ್ವರೂಪಿಣಿ. ಜನ್ಮಮೃತ್ಯುಜರಾರೋಗಗಳಿಂದ ತಪ್ತರಾದವರಿಗೆ ವಿಶ್ರಾಂತಿ ಕೊಡುವವಳು, ಮನೋರಥಗಳನ್ನು ಅನುಗ್ರಹಿಸುವವಳು. "ಭಂಡಾಸುರ ಪದೋದ್ಯುಕ್ತಾ ಶಕ್ತಿಸೇನಾ ಸಮನ್ವಿತಾ" – ಭಂಡಾಸುರನನ್ನು ವಧಿಸಲು ಉದ್ಯುಕ್ತವಾದ ಶಕ್ತಿಸೇನೆಯಿಂದ ಕೂಡಿರುವವಳು ಅವಳು ಬಂದಿದ್ದೇ "ದೇವಕಾರ್ಯ ಸಮುದ್ಯತಾ" ದೇವತಾಕಾರ್ಯಕ್ಕಾಗಿ.

ಚಿತ್ರಕರ್ಮನೆಂಬ ಗಣೇಶನು ಮನ್ಮಥನ ಬೂದಿಯನ್ನು ನೋಡಿ ಚಿತ್ರಾಕಾರದ ಒಬ್ಬ ಪುರುಷನನ್ನು ಮಾಡಿದ. ಇದನ್ನು ನೋಡಿ ಬ್ರಹ್ಮನು "ಭಂಡ್ ಭಂಡ್" ಎಂದು ಹೇಳಿದನು. ಭಂಡನೆಂದರೆ ಲಜ್ಜೆಗೇಡಿತನ. ಅವನು ಅಸುರನೂ ಆದನು. ಮಹಾಬಲನಾದ ಭಂಡನು ರುದ್ರಕೋಪಾಗ್ನಿಯಿಂದ ಹುಟ್ಟಿದ್ದರಿಂದ ರೌದ್ರನಾಗಿ ದಾನವನಾದನು. ಅವನನ್ನು ಆಕೆ ಸಂಹರಿಸಲಿಲ್ಲ. ಅವನಲ್ಲಿದ್ದ ಲಜ್ಜೆಗೇಡಿತನವನ್ನು ಅಸುರತ್ವವನ್ನು ಸಂಹರಿಸಿದಳು.

ಇಂತಹ ಜಗನ್ಮಾತೆಯು ಶಿವಶಕ್ತಿಯ ಸ್ವರೂಪ ಹೇಳುವಾಗ 36 ತತ್ವಗಳನ್ನು ಅಂಗೀಕರಿಸಿದೆ. ಅದರಲ್ಲಿ ಐದು ಮುಖ್ಯವಾದುವು. ಅವುಗಳೆಂದರೆ ಶಿವ, ಶಕ್ತಿ, ನಾದ, ಬಿಂದು, ಶುದ್ಧವಿದ್ಯೆ. ಶಿವನು ಪ್ರಕಾಶಸ್ವರೂಪನು. ಎಂದರೆ ಶುದ್ಧಜ್ಞಾನಸ್ವರೂಪನು. ಶಕ್ತಿಯು ವಿಮರ್ಶಸ್ವರೂಪಳು. ನಾದಬಿಂದುಗಳು ಸೃಷ್ಟಿಯ ಉನ್ಮುಖಾವಸ್ಥೆಯನ್ನು ಸೂಚಿಸುತ್ತವೆ. ಅವಳು ಶಿವಶಕ್ತ್ಯೈಕರೂಪಿಣೀ, ಶಿವಮೂರ್ತಿಃಸ್ವಪ್ರಕಾಶಾ ವಿಮರ್ಶರೂಪಿಣೀ, ನಾದರೂಪಿಣೀ, ಬಿಂದುಮಂಡಲವಾಸಿನೀ, ಇಚ್ಛಾಶಕ್ತಿ, ಜ್ಞಾನಶಕ್ತಿ, ಕ್ರಿಯಾಶಕ್ತಿಸ್ವರೂಪಿಣಿ ಎಂಬ ನಾಮಗಳು ಶಿವಶಕ್ತಿಗಳ ಏಕತ್ವವನ್ನು, ಪ್ರಕಾಶ ವಿಮರ್ಶಸ್ವರೂಪಗಳನ್ನೂ ಇತರ ಸೃಷ್ಟಿಯ ಪರಿಣಾಮಗಳನ್ನೂ ಸೂಚಿಸುತ್ತದೆ. ಅವಳು ಮಾತೃಕಾವರ್ಣರೂಪಿಣೀ. ಪರಾ, ಪಶ್ಯಂತೀ, ಮಧ್ಯಮಾ, ವೈಖರೀರೂಪಾ ಸಂಯೋಜಿತದಿಂದಿರುವಳು. ಶ್ರೀಮಧ್ಭಾಗವಕೂಟ್ಯೈಕಸ್ವರೂಪ ಮುಖ ಪಂಕಜಾ, ಕಠಾಂಧಃಪಟಿಪರ್ಯಂತ ಮಧ್ಯಕೂಟಸ್ವರೂಪಿಣೀ ಶಕ್ತಿಕೂಟ್ಯೈಕತಾಪನ್ನ ಕಟ್ಯಧೋಭಾಗಧಾರಿಣೀ ಎಂಬವುಗಳೂ ಸಹ ಶ್ರೀ ಶೋಡಶಾಕ್ಷರೀ ವಿದ್ಯೆಯಿಂದ ಕೂಡಿದೆ.

ಭೂತ ಭೌತಿಕ ಮಾತೃಕೆಗಳಲ್ಲಿಯೂ ಶಕ್ತಿಯು ಅಂತರ್ಗತವಾಗಿದ್ದು ಜಗದ್ವ್ಯಾಪಾರವನ್ನು ನಡೆಸುವಂತೆ ಮನುಷ್ಯ ಶರೀರದಲ್ಲಿಯೂ ವ್ಯಾಪಿಸಿದೆ. ಮಾನವರಲ್ಲಿ ಅಂತರ್ಗತವಾಗಿರುವ ಶಕ್ತಿಯನ್ನು ಎಚ್ಚರಗೊಳಿಸುವುದೇ ಇದರ ಮುಖ್ಯ ಸಾಧನೆಯಾಗಿದೆ.

ಅವಳು ಸಮಯಾಚಾರದಲ್ಲಿ ತತ್ಪರಳಾಗಿರುವಳು. ರುದ್ರಯಾಮಲದಲ್ಲಿ ಹತ್ತು ಅಧ್ಯಾಯದಲ್ಲಿ ಉಪದಿಷ್ಟವಾದ ಆಚಾರಗಳಿಗೆ ಸಮಯಾಚಾರವೆಂದು ಹೆಸರು.

ಗುರುಕಟಾಕ್ಷದಿಂದ ದೀಕ್ಷಾಬದ್ಧನು ಷಡ್ವಿಧವಾದ ಐಕ್ಯತೆ ಅಥವಾ ಚತುರ್ವಿಧವಾದ ಐಕ್ಯದ ಅನುಸಂಧಾನದಾರ್ಢ್ಯವನ್ನು ಹೊಂದಿದ ನಂತರ ಮಹಾವೇಧ ಎಂಬ ಸಂಸ್ಕಾರ ಪಡೆದ ಮೇಲೆ ಮಹಾನವಮಿಯ ದಿನ ದೇವಿಯು ಮೂಲಾಧಾರಚಕ್ರದಿಂದ ಎದ್ದು ಸ್ವಾಧಿಷ್ಠಾನ ಹಾಗೂ ಮಣಿಪುರ ಚಕ್ರದಲ್ಲಿ ಅವನಿಗೆ ಪ್ರತ್ಯಕ್ಷಳಾಗುತ್ತಾಳೆ. ಈ ಚಕ್ರದಲ್ಲಿ ದೇವಿಗೆ ಮಣೆ ಹಾಕಿ ಪಾದ್ಯದಿಂದ ಆರಂಭಿಸಿ ಆಭೂಷಣದವರೆಗೆ ಉಪಚಾರ ಮಾಡಿ ಅರ್ಪಿಸಬೇಕು.ಶೋಡಶೋಪಚಾರ ಪೂಜೆ ಹೇಳಬೇಕು. ಅಲ್ಲಿಂದ ಅವಳನ್ನು ಅನಾಹತ (ಹೃದಯ) ಚಕ್ರಕ್ಕೆ ಕರೆದುಕೊಂಡು ಹೋಗಿ ತಾಂಬೂಲದವರೆಗೆ ಸೇವಿಸಬೇಕು. ಅನಂತರ ವಿಶುದ್ಧಿ ಚಕ್ರದಲ್ಲಿರುವ ಚಂದ್ರಕಲಾರೂಪವಾದ ಮಣಿಗಳಿಂದ ದೇವಿಯನ್ನು ಸಂತುಷ್ಟಿಗೊಳಿಸಬೇಕು. ಆನಂತರ ಆಜ್ಞಾಚಕ್ರ ಅಲ್ಲಿ ನೀರಾಜನದಿಂದ ಅವಳನ್ನು ಪೂಜಿಸಬೇಕು. ಕೊನೆಗೆ ಸಹಸ್ರದಳ ಕಮಲದಲ್ಲಿರುವ ಸಹಸ್ರಾರು ಚಕ್ರದಲ್ಲಿ ಸರಘಾ ಮಧ್ಯದಲ್ಲಿ ಅವಳನ್ನು ಸದಾಶಿವನೊಂದಿಗೆ ಸಂಯೋಜಿಸಬೇಕು. ಆನಂತರ ತೆರೆಯಿಂದ ಮುಚ್ಚಿ ಭಗವತಿಯು ಹಿಂತಿರುಗಿ ಮೂಲಾಧಾರಕ್ಕೆ ಹೋಗುವವರೆಗೂ ಸಾಧಕನು ಸಮೀಪದಲ್ಲಿರುವ ಮಂದಿರದಲ್ಲಿರಬೇಕು. ಈ ಅನುಸಂಧಾನಕ್ರಮವನ್ನು ಗುರುವಿನಿಂದ ತಿಳಿಯಬೇಕು. ಇದೇ ಸಮಯಾಚಾರ. ಅಲ್ಲದೆ ಧರ್ಮಮಾರ್ಗವು ಮೋಕ್ಷಕ್ಕೆ ಸಹಕಾರಿ. ಇದನ್ನು ಶ್ರೀ ಶಂಕರಭಗವತ್ಪಾದರು ಸೌಂದರ್ಯ ಲಹರಿಯಲ್ಲಿ ತಿಳಿಸಿರುತ್ತಾರೆ.

"ಮೂಲಾಧಾರೇಕನಿಲಯಾ" - ಮೂಲಾಧಾರದಲ್ಲಿ ಸರ್ಪದಂತೆ ಸುತ್ತಿಕೊಂಡು ಸುಪ್ತವಾಗಿರುವ ಕುಂಡಲಿನೀ ಶಕ್ತಿಯನ್ನು ಮೇಲೆ ಮೇಲಿರುವ ಚಕ್ರಗಳ ಮೂಲಕ ಸಹಸ್ರಾರಕ್ಕೆ ಸೇರಿಸಿ ಅಲ್ಲಿ ಪರಶಿವನೊಂದಿಗೆ ಐಕ್ಯ ಹೊಂದುವುದೇ ಈ ಕುಂಡಲಿನೀ ಯೋಗದ ಚರಮೋದ್ದೇಶ. ಈ ಚಕ್ರಗಳು ನಮ್ಮ ಶರೀರದಲ್ಲಿರುವ

ಸ್ನಾಯುಖಂಡಗಳನ್ನು ಎಲುಬಿಗೆ ಬಿಗಿಯುವ ತಂತುಗಳ ಜಾಲವೆಂದು ತಿಳಿಯಬಾರದು. ಈ ಚಕ್ರಗಳೆಲ್ಲವೂ ಅಭೌತಕೇಂದ್ರಗಳು. ಇವುಗಳಿಗೆ ಪದ್ಮಗಳೆಂದೂ ಹೆಸರಿದೆ. ಎಂಟು ಚಕ್ರಗಳು ವಿಶೇಷವಾಗಿದ್ದರೂ ಮುಖ್ಯವಾಗಿ ಆರನ್ನು ಪರಿಗಣಿಸಲಾಗಿದೆ. ಅವುಗಳೆಂದರೆ ಮೂಲಾಧಾರ, ಸ್ವಾದಿಷ್ಠಾನ, ಮಣಿಪೂರ, ಅನಾಹತ, ವಿಶುದ್ಧಿ ಮತ್ತು ಆಜ್ಞಾಚಕ್ರ. ಈ ಆರು ಚಕ್ರಗಳು ಪುನಃ ಮೂರು ಭಾಗಗಳಾಗಿ ವಿಂಗಡಿಸಲ್ಪಟ್ಟಿವೆ. ಬೆನ್ನುಮೂಳೆಯ ಕೊನೆಯಲ್ಲಿರುವ ಮೂಲಾಧಾರಕ್ಕೂ, ಜನನೇಂದ್ರಿಯಗಳ ಮೇಲ್ಭಾಗದಲ್ಲಿರುವ ಸ್ವಾಧಿಷ್ಠಾನಕ್ಕೂ ಮಧ್ಯೆ ಇರುವ ಪ್ರದೇಶಕ್ಕೆ ಅಗ್ನಿಖಂಡವೆಂದು ಹೆಸರು. ಇದರ ಮೇಲಿರುವುದು ಬ್ರಹ್ಮಗ್ರಂಥಿ. ಅಂತಹ ಬ್ರಹ್ಮಗ್ರಂಥಿಯನ್ನು ಬೇಧಿಸುವವಳು.

ನಾಭಿಯ ಸಮೀಪದಲ್ಲಿರುವ ಮಣಿಪೂರಕ್ಕೂ, ಹೃದಯದ ಸಮೀಪದಲ್ಲಿರುವ ಅನಾಹತಕ್ಕೂ ನಡುವೆ ಇರುವ ಪ್ರದೇಶವು ಸೂರ್ಯಖಂಡವೆನಿಸುವುದು. ಇದರ ಮೇಲಿರುವುದು ವಿಷ್ಣುಗ್ರಂಥಿ. ಅಂತಹ ವಿಷ್ಣುಗ್ರಂಥಿಯನ್ನು ಬೇಧಿಸುವವಳು. ಕಂಠದ ಸಮೀಪದಲ್ಲಿರುವ ವಿಶುದ್ಧ ಚಕ್ರಕ್ಕೂ, ಭ್ರೂಮಧ್ಯದಲ್ಲಿರುವ ಆಜ್ಞಾಚಕ್ರಕ್ಕೂ ನಡುವೆ ಇರುವ ಪ್ರದೇಶವು ಚಂದ್ರಖಂಡವೆನಿಸುವುದು. ಇದರ ಮೇಲಿರುವುದು ರುದ್ರಗ್ರಂಥಿ. ಈ ರುದ್ರಗ್ರಂಥಿಯನ್ನು ಬೇಧಿಸುವವಳು. ಈ ಷಟ್‌ಚಕ್ರದ ಮೇಲಿರುವ ಶಿರಸ್ಸಿನಲ್ಲಿ ಸಹಸ್ರಾರವಿದೆ. ಇದೇ ಶಿವಶಕ್ತಿಯರ ಸ್ಥಾನ. "ಮೂಲಾಧಾರೇಕ ನಿಲಯಾ" ಅಂದರೆ ಮೂಲಾಧಾರದಲ್ಲಿ ಪ್ರಧಾನವಾಗಿ ನೆಲೆಸಿರುವವಳು, ಅಂದರೆ ಶ್ರೀಕುಂಡಲಿನೀ ಶಕ್ತಿಯೇ ಇಲ್ಲಿ ಶ್ರೀದೇವಿ ಲಲಿತೆಯು. ಅದು ಅವಳ ಮುಖ್ಯತಾಣವೆಂದಾಯಿತು. ಮೂಲಾಧಾರವೆಂದರೆ ಚತುರ್ದಳ ಪದ್ಮ. ಅದರ ಕರ್ಣಿಕೆಯ ಮಧ್ಯದಲ್ಲಿ ಕುಲಕುಂಡವೆಂಬ ಬಿಂದುವಿದೆ. ಇದರಲ್ಲಿ ಕುಂಡಲಿನಿಯು ಮುಖವನ್ನು ಮುಚ್ಚಿಕೊಂಡು ಯಾವಾಗಲೂ ಸುಪ್ತಳಾಗಿರುತ್ತಾಳೆ. ಸುಷುಮ್ನೆಗೆ ಮೂಲವಾಗಿರುವುದರಿಂದಲೂ ಕುಂಡಲಿನಿಗೆ ಆಧಾರವಾಗಿರುವುದರಿಂದಲೂ ಮೂಲಾಧಾರವೆಂದು ಹೇಳಲ್ಪಡುವುದು.

ಮೇಲೆ ಹೇಳಿರುವ ಮೂರು ಖಂಡಗಳೂ ಪಂಚದಶಾಕ್ಷರೀ ಮಂತ್ರದ ಮೂರು ಕೂಟಗಳಿಗೂ ಪರಸ್ಪರ ಸಾಮ್ಯವಿದೆ. ಇವುಗಳನ್ನೇ
ಮೂಲಾಧಾರೇಕನಿಲಯಾ ಬ್ರಹ್ಮಗ್ರಂಥಿ ವಿಬೇಧಿನೀ,
ಮಣಿಪೂರಾಂತರುದಿತಾ ವಿಷ್ಣುಗ್ರಂಥಿ ವಿಬೇಧಿನೀ,
ಆಜ್ಞಾಚಕ್ರಾಂತರಾಲಸ್ಥಾ ರುದ್ರಗ್ರಂಥ ವಿಬೇಧಿನೀ,
ಸಹಸ್ರಾರಾಂಬುಜಾರೂಢಾ ಇವೇ ಮೊದಲಾದುವು.

ಅವಳು ಭಕ್ತಿಪ್ರಿಯಾ, ಭಕ್ತಿಗಮ್ಯಾ, ಭಕ್ತಿವಶ್ಯಾ, ಭಯಾಪಹಾ, ಶಾಂಭವೀ, ಶರ್ವಾಣೀ, ಶರ್ಮದಾಯಿನೀ, ಶಾಂಕರೀ, ಶ್ರೀಕರೀಸಾಧ್ವೀ, ಶರಚ್ಚಂದ್ರ ನಿಭಾನನಾ, ಶಾತೋದರೀ, ಶಾಂತಿಮತೀ, ನಿರಾಧಾರಾ, ನಿರಂಜನಾ, ನಿರ್ಲೇಪಾ, ಅಂದರೆ ಕರ್ಮಗಳಿಗೆ ಅಂಟಿಕೊಳ್ಳದೇ ಇರುವವಳು. "ನಮೇ ಕರ್ಮಾಣಿ ಲಿಂಪಂತಿ" ಎನ್ನುವ ಹಾಗೆ ನಿರ್ಲೇಪಳು, ನಿರ್ಮಲಾ, ನಿತ್ಯಶುದ್ಧಳು, ನಿತ್ಯಾ, ನಿರಾಕಾರಾ, ಸಾಕಾರಾ, ನಿರಾಕುಲಾ, ನಿರ್ಗುಣಾ, ನಿಷ್ಕಲಾ, ನಿಷ್ಕಾಮಾ, ನೀರಾಗಾ, ನಿತ್ಯಮುಕ್ತಾ, ನಿರ್ವಿಕಾರಾ, ನಿಷ್ಪ್ರಪಂಚಾ, ನಿತ್ಯಶುದ್ಧಾ, ನಿತ್ಯಬುದ್ಧಾ, ನಿರಂತರಾ, ನಿಷ್ಕಳಂಕಾ, ನಿಶ್ಚಿಂತಾ, ನಿರಹಂಕಾರಾ, ನಿಷ್ಪಾಪಾ, ನಿರ್ಭಾವಾ, ಭವನಾಶಿನೀ, ನಿರ್ನಾಶಾ, ದುರ್ಗಾ (ದುರಿತಾನಿ ದೂರಂ ಕರೋತಿಸಾ ದುರ್ಗಾ) ದುಃಖಹಂತ್ರೀ, ಸುಖಪ್ರದಾ, ಸರ್ವಜ್ಞಾ, ಸರ್ವಮಂಗಳಾ, ಸರ್ವೇಶ್ವರೀ, ಮನೋನ್ಮನೀ, ಸರ್ವಯಂತ್ರಾತ್ಮಿಕಾ, ಸರ್ವತಂತ್ರಾತ್ಮಿಕೆ, ಮಾಹೇಶ್ವರೀ, ಮಹಾದೇವೀ, ಮಹಾಲಕ್ಷ್ಮೀ, ಮೃಡಪ್ರಿಯಾ, ಮಹಾಪೂರಾ, ಮಹಾಮಯಾ, ಮಹಾಸಿದ್ಧೀ, ಪಾರ್ವತೀ, ಪದ್ಮನಯನಾ, ಚಾರುರೂಪಾ, ಚಾರುಹಾಸಾ ಅಂದರೆ ಸುಂದರವಾದ ಲಾವಣ್ಯ ಮುಗುಳ್ನಗೆಯುಳ್ಳವಳು.

ಯಂತ್ರಾತ್ಮಿಕಾ ಅಂದರೆ ಯಂತ್ರಗಳಲ್ಲಿ ಶ್ರೀಚಕ್ರಕ್ಕಿಂತ ಉತ್ತಮವಾದುದು ಯಾವುದೂ ಇಲ್ಲ. ಶ್ರೀಚಕ್ರಕ್ಕೂ ಮಹೇಶ್ವರಿಗೂ ಭೇದವೇ ಇಲ್ಲವೆಂದು ಬ್ರಹ್ಮಾಂಡ ಪುರಾಣ ಹೇಳುತ್ತದೆ. ಶ್ರೀಚಕ್ರವು ಶಿವಶಕ್ತಿಯರ ಸಂಜ್ಞೆ ಮಾತ್ರವಲ್ಲದೆ ಇಡೀ ಬ್ರಹ್ಮಾಂಡ-ಪಿಂಡಾಂಡಗಳ ಮತ್ತು ವರ್ಣಮಾಲೆಯ ಸಂಜ್ಞೆಯಾಗುತ್ತದೆ. ಯಾರು ಪ್ರತಿದಿನ ಒಂಬತ್ತು ಸಲ

ವರ್ಣಮಾಲೆಯನ್ನು ಶ್ರದ್ಧೆಯಿಂದ ಹೇಳುತ್ತಾರೋ ಅವರಿಗೆ ದೇವಿ ಸಂಪೂರ್ಣವಾಗಿ ಒಲಿಯುತ್ತಾಳೆ.

ಈ ಶ್ರೀಚಕ್ರವು ಪರಸ್ಪರವಾಗಿ ಸೇರಿಕೊಂಡಿರುವ ರೇಖಾಕೃತಿ. ಇದು ಮಧ್ಯದಲ್ಲಿ ಬಿಂದುವಿರುವ ವೃತ್ತದಿಂದ ಕೂಡಿದ್ದಾಗಿದೆ. ಈ ವೃತ್ತದಲ್ಲಿ ಕೆಳಗಡೆ ತುದಿಯುಳ್ಳ ಐದು ಕೋನಗಳೂ, ಮೇಲುಗಡೆ ತುದಿಯುಳ್ಳ ನಾಲ್ಕು ತ್ರಿಕೋನಗಳೂ ಇವೆ. ಶಕ್ತಿಸೂಚಕವಾದ ಐದು ತ್ರಿಕೋನಗಳು ಶಿವಯುವತಿಯರೆಂದೂ, ಶಿವಸೂಚಕವಾದ ನಾಲ್ಕು ತ್ರಿಕೋನಗಳು ಶ್ರೀಕಂಠರೆಂದೂ ಪ್ರಸಿದ್ಧವಾಗಿವೆ. ಈ ನವತ್ರಿಕೋನವನ್ನು ಒಳಗೊಂಡಿರುವ ವೃತ್ತವು ಪುನಃ ಪದ್ಮಗಳೆಂದು ಹೇಳಲ್ಪಡುವ ಸಮಾನ ಕೇಂದ್ರವುಳ್ಳ ಎರಡು ವೃತ್ತಗಳಿಂದ ಆವರಿಸಲ್ಪಟ್ಟಿದೆ. ಮೊದಲನೆಯ ವೃತ್ತವು ಅಷ್ಟದಳಪದ್ಮವೂ, ಎರಡನೆಯ ವೃತ್ತವು ಷೋಡಶದಳ ಪದ್ಮವೂ ಆಗಿದೆ. ಈ ಷೋಡಶದಳ ಪದ್ಮವು ಪುನಃ ನಾಲ್ಕು ಆವರಣ ರೇಖೆಗಳಿಂದ ಸುತ್ತುವರಿಯಲ್ಪಟ್ಟಿದೆ. ಕೊನೆಗೆ ಈ ಆಕೃತಿಯು ಮೂರು ರೇಖೆಗಳುಳ್ಳ ಚಚ್ಚೌಕದಿಂದ ಆವರಿಸಲ್ಪಟ್ಟಿದೆ.

ಮೇಲೆ ಹೇಳಿದ ರೀತಿಯಲ್ಲಿ ಉಂಟಾದ ಶ್ರೀಚಕ್ರಕ್ಕೆ ಚಕ್ರಗಳೆಂದು ಹೇಳಲ್ಪಡುವ ಒಂಬತ್ತು ಭಾಗಗಳಿವೆ. ಲಯ ಕ್ರಮದ ಪ್ರಕಾರ ಎಂದರೆ ಹೊರಗಿನಿಂದ ಒಳಕ್ಕೆ ಹೋದರೆ: (1) ಮೂರು ರೇಖೆಗಳುಳ್ಳ ಸಮ ಚತುಷ್ಕೋನ (2) ಮೂರು ವೃತ್ತಗಳು (3) ಹದಿನಾರು ದಳಗಳ ಪದ್ಮ (4) ಏಳು ದಳಗಳ ಪದ್ಮ (5) 14 ತ್ರಿಕೋನಗಳಿರುವ ಚಕ್ರ (ಚತುರ್ದಶಾರ) (6) ಹತ್ತು ತ್ರಿಕೋನಗಳಿರುವ ಎರಡು ಚಕ್ರಗಳು (ದಶಾರ ಯುಗ್ಮ) (7) ಎಂಟು ತ್ರಿಕೋನಗಳಿರುವ ಚಕ್ರ (ಅಷ್ಟಕೋನ) (8) ತ್ರಿಕೋನ (9) ಬಿಂದು.

ಈ ಒಂಬತ್ತು ಚಕ್ರಗಳಿಗೆ ಆವರಣ ದೇವತೆಗಳು ಅಧಿಷ್ಠಾತೃಗಳಾಗಿದ್ದಾರೆ. ಬಿಂದುವಿನಲ್ಲಿ ಹದಿನೈದು ನಿತ್ಯದೇವತೆಗಳು ದೇವಿಯನ್ನು ಆವರಿಸಿಕೊಂಡಿರುತ್ತಾರೆ. ಸರ್ವಾನಂದಮಯವೆನಿಸಿದ ಮಧ್ಯಬಿಂದುವು ಲಲಿತಾಂಬಿಕೆಯಾದ ಕಾಮೇಶ್ವರ-ಕಾಮೇಶ್ವರಿಯ ಸಂಜ್ಞೆಯಾಗಿದೆ. ಈ ರೀತಿ ಶ್ರೀಚಕ್ರವು ತಂತ್ರಶಾಸ್ತ್ರದ ಸಮಸ್ತ ತತ್ವಗಳ ಪ್ರತೀಕವಾಗಿದೆ. ಶ್ರೀಚಕ್ರರಾಜನಿಲಯಾ, ಚಕ್ರರಾಜನಿಕೇತನಾ, ತ್ರಿಕೋನಗಾ, ತ್ರಿಕೋನಾಂತರ ದೀಪಿಕಾ ಎಂಬ ನಾಮಗಳಿಂದ ಸಹಸ್ರನಾಮಗಳು ಶ್ರೀಚಕ್ರಸ್ಥಳಾದ ಭಗವತಿಯನ್ನು ಸೂಚಿಸುತ್ತದೆ. ಭಕ್ತಿಪ್ರಿಯಾ, ಭಕ್ತಿಗಮ್ಯಾ, ಭಕ್ತಿವಶ್ಯಾ ಮುಂತಾದುವು ಭಕ್ತಿ ಪ್ರಸನ್ನತೆಯನ್ನು ಸೂಚಿಸುತ್ತದೆ.

ಲಲಿತೆಯು ಅಂತರ್ಮುಖ ಸಮಾರಾಧ್ಯಾ ಬಹಿರ್ಮುಖ ಸಾದುರ್ಲಭಾ. ಅವಳು ಅಂತರ್ಮುಖಿಗಳಿಂದ ಆರಾಧಿಸಲ್ಪಡುವವಳು. ಯಾರ ಚಿತ್ತವೃತ್ತಿಗಳು ಸ್ವಾತ್ಮ ಪ್ರವಣತೆ ಹೊಂದಿವೆಯೋ ಅವರಿಗೆ ದೇವಿಯ ಉಪಾಸನೆ ಸುಲಭ. ಅಂತರ್ಮುಖವೆಂದರೆ ಆತ್ಮಾಭಿಮುಖವಾಗಿ ಧ್ಯಾನದಿಂದ ಸಾಯುಜ್ಯ ಪದವಿಯನ್ನು ಪಡೆಯಲು ಉಪಾಸನೆ ಮಾಡಲ್ಪಡುವವಳು. ಸಮಾರಾಧ್ಯವೆಂದು ಇರುವುದರಿಂದ "ಸಮಾಧಿಸ್ಸಮತಾವಸ್ಥಾಜೀವಾತ್ಮ ಪರಮಾತ್ಮನೋ" ಎಂಬ ನ್ರುತ್ಯಾಧಾರದಂತೆ ಜೀವನು ಪರಬ್ರಹ್ಮನಾಗಲು ಅಂತರ್ಮುಖದ ಆರಾಧನಾ ರೂಪವಾಗಿರುವುದು.

ಬಹಿರ್ಮುಖ ವಿಷಯಗಳಲ್ಲಿ ಪ್ರವಣತೆಯನ್ನು ಹೊಂದಿರುವವರಿಗೆ ದೇವಿಯನ್ನು ಹೊಂದುವ ಅಸಾಧ್ಯ ಚಂಚಲಚಿತ್ತರಿಗೆ ಸುಲಭಸಾಧ್ಯವಾದ "ತರಲಕರಣಾ ನಾಮ ಸುಲಭಾ" ಎಂದು ಸೌಂದರ್ಯ ಲಹರಿಯಲ್ಲಿ ಹೇಳಿದೆ.

ಬಹಿರ್ಮುಖದಲ್ಲಿ ಮಾಡುವ ಅರ್ಚನೆ ಮುಂತಾದ ಕರ್ಮಗಳಿಂದ ಪರಬ್ರಹ್ಮಸ್ವರೂಪಿಣಿಯಾದ ಶ್ರೀದೇವಿಯು ದುರ್ಲಭವಾದವಳು. ಒಳಗಡೆಯ ಜ್ಞಾನಚಕ್ಷು ತೆರೆಯದೆ ಸಗುಣಮೂರ್ತಿಯಾದ ಶ್ರೀದೇವಿಯ ದರ್ಶನವು ಕೂಡಾ ಬಹಿರ್ಮುಖದಲ್ಲಿ ದುರ್ಲಭವಾದುದು. ಭಗವತಿಯ ನಾಮಗಳ ತತ್ವ ಸಮರ್ಥನೆಗೆ ಶ್ರೀಶಂಕರಭಗವತ್ಪಾದರು ಸರ್ವ ವೇದಾಂತ

ಸಿದ್ಧಾಂತ ಸಾರ ಸಂಗ್ರಹದಲ್ಲಿ :

“ದೇವರ್ಷಿ ಪಿತೃಮರ್ತ್ಯರ್ಣ ಬಂಧ ಮುಕ್ತಾಸುಕೋಟಿಶಃ
ಭವ ಬಂಧಮುಕ್ತಾಸ್ತು ಯಃಕಶ್ಚಿದ್ಬ್ರಹ್ಮವಿತ್ತಮಃ
ಅಂತರ್ಬಂಧೇನಬದ್ಧಸ್ಯ ಕಿಂ ಬಹಿರ್ಬಂಧಮೋಚನೈಃ
ತದಂತರ್ಬಂಧಮುಕ್ತ್ಯರ್ಥಂ ಕ್ರಿಯಾಂತಾಂಕೃತಿಭಿಃ ಕೃತಿಃ”

ಅಂದರೆ ಕರ್ಮಕಾಂಡದಂತೆ ಆಚರಿಸಬೇಕಾದ ದೇವ, ಋಷಿ, ಪಿತೃ ಮುಂತಾದ ಯಜ್ಞಗಳ ಅನುಷ್ಠಾನದ ಋಣಬಂಧನದಿಂದ ಬಿಡುಗಡೆ ಹೊಂದಿದವರು ಕೋಟ್ಯಾಂತರ ಜನಗಳು ಸಿಕ್ಕುವರು. ಅಜ್ಞಾನ ಬಂಧನದಿಂದ ಬಿಡುಗಡೆ ಹೊಂದಿದ ಜ್ಞಾನಿಯು ಎಲ್ಲೋ ಒಬ್ಬೊಬ್ಬರಿರುತ್ತಾರೆ. ಒಳಗಡೆ ಅಜ್ಞಾನದ ಬಂಧನವಿರುವಾಗ ಹೊರಗಡೆ ಆರಾಧನಾ ಯಜ್ಞ ಮುಂತಾದ ಕರ್ಮಬಂಧನಗಳ ಋಣವಿಮುಕ್ತತೆಯಿಂದ ಅಜ್ಞಾನ ನಿವರ್ತಿಯಾಗುವುದಿಲ್ಲ. ಆದ್ದರಿಂದ ಅಂತರ್ಬಂಧನದಿಂದ ಮುಕ್ತನಾಗುವ ವೇದಾಂತ ಶ್ರವಣ, ಮನನ, ಧ್ಯಾನಾಭ್ಯಾಸಸ್ವರೂಪವಾದ ಕರ್ಮಗಳನ್ನು ಭಕ್ತಿಯಿಂದ ಮಾಡುತ್ತಿರಬೇಕು. ಅಂತರ್ಮುಖದ ದಾರಿಯೇ ಮಂಡಲ ಬ್ರಾಹ್ಮಣೋಪನಿಷತ್ತಿನಲ್ಲಿ “ಅಂತರ್ಲಕ್ಷ್ಯಂ ಜಲಜ್ಯೋತಿಸ್ವರೂಪಂ ಭವತಿ” ಎಂಬುದಾಗಿ ಹೇಳಿರುವಂತೆ ಅಮೃತಸ್ವರೂಪವಾಗಿಯೂ, ಸ್ವಯಂಪ್ರಕಾಶಸ್ವರೂಪವಾಗಿಯೂ ಜನನ ಮರಣ ಪ್ರವಾಹವನ್ನು ನಾಶ ಮಾಡತಕ್ಕದ್ದಾಗಿಯೂ ಇರುವುದು ಎಂದರ್ಥ.

“ಅಭ್ಯಾಸಾತಿಶಯಜ್ಞಾತಾ” – ಅಭ್ಯಾಸದ ಅತಿಶಯದಿಂದ ತಿಳಿಯಲ್ಪಡುವವಳು. ನಿದ್ರೆ ಬರುವವರೆಗೆ, ಸಾಯುವವರಿಗೆ ವೇದಾಂತ ಚಿಂತೆಯಿಂದ ಕಾಲವನ್ನು ಕಳೆಯಬೇಕು.

ಆಸುಪ್ತೇ ರಾಮೃತೇಃ ಕಾಲಂ ನಯೇದ್ವೇದಾಂತ ಚಿಂತಯಾ” ಎಂದು ಹೇಳಿರುವಂತೆ ಬ್ರಹ್ಮಾತ್ಮೈಕ್ಯಾನುಸಂಧಾನದ ಅಭ್ಯಾಸಾತಿಶಯದಿಂದ ದೇವಿಯು ತಿಳಿಯಲ್ಪಡುವವಳು. “ಆವೃತ್ತಿರಸಕೃದುಪದೇಶಾತ್” ಎಂದು ವೇದಾಂತ ಸೂತ್ರಗಳಲ್ಲಿ ಹೇಳಿದೆ. ಜ್ಞಾನವೇ ಅಂಗಗಳಾಗಿ ಉಳ್ಳವಳೂ, ವಿದ್ಯೆಯೇ ಆತ್ಮವಾಗಿರುವವಳೂ, ಹೃದಯದಲ್ಲಿ ಆಸ್ಪದವಾಗಿರುವವಳೂ ಆದ ದೇವಿಯು ಧ್ಯಾನದಿಂದ ನೋಡಲ್ಪಡುವವಳು, ದೀರ್ಘಾನುಷ್ಠಾನದಿಂದ ಆತ್ಮೈಕ್ಯದ ಮೂಲಕ ವ್ಯಕ್ತವಾಗುವವಳು.

“ಧ್ಯಾನೇಕದೃಶ್ಯಾಜ್ಞಾನಾಂಗೀ ವಿದ್ಯಾತ್ಮಾ ಹೃದಯಾಸ್ಪದಾ ।
ಆತ್ಮೈಕ್ಯಾದ್ವ್ಯಕ್ತಿ ಮಾಯಾತಿ ಚಿರಾನುಷ್ಠಾನ ಗೌರವಾತ್”

ಎಂದು ಬ್ರಹ್ಮಾಂಡ ಪುರಾಣವೇ ಹೇಳಿದೆ.

“ಷಡಧ್ವಾತೀತರೂಪಿಣೀ” ಶ್ರೀಕುಂಡಲಿನೀಶಕ್ತಿಯ ಆರು ವಿಧ ತತ್ವ ಮಾರ್ಗಗಳನ್ನು ದಾಟಿರುವವಳು ಅಂದರೆ ಧ್ಯಾನಾಭ್ಯಾಸ ಮಾಡುತ್ತಾ ಶ್ರೀಕುಂಡಲಿನೀ ಶಕ್ತಿಯು ಮೂಲಾಧಾರಾದಿ ಷಟ್ಚಕ್ರಗಳ ತತ್ವಗಳನ್ನು ದಾಟಿಕೊಂಡು, ಏಳನೆಯದಾದ ಪರಬ್ರಹ್ಮಸ್ಥಾನವಾದ ಸಹಸ್ರಾರ ಕಮಲವನ್ನು ಸೇರಿ ತನ್ನ ಪದವಾದ ಪರಬ್ರಹ್ಮಸ್ವರೂಪಿಣಿ ಎನಿಸಿಕೊಳ್ಳುತ್ತಾಳೆ. ಇದೇ ಮಾನವನಿಗೆ ಉಂಟಾಗುವ ಮೋಕ್ಷದ ಸ್ಥಿತಿಯು. ಇದೇ ಬ್ರಹ್ಮಾಂಡ ಪುರಾಣದಂತೆ ಷಡದ್ವಾತೀತರೂಪಿಣೀ ತತ್ವವಾಗಿದೆ. “ಆವ್ಯಾಜಕರುಣಾಮೂರ್ತಿ” – ದೇವಿಯ ಕಾರುಣ್ಯವುನಿರ್ಹೇತುಕವೂ ಅಸೌಸಾಧಿಕವೂ ಆಗಿದೆ. ಜಯತಿಕರುಣಾಕಾಚಿದರುಣಾ” ಎಂದು ಅಭಿಯುಕ್ತರು ಹೇಳಿದ್ದಾರೆ. “ಅಜ್ಞಾನ ಧ್ವಾಂತದೀಪಿಕಾ” ಅಜ್ಞಾನವೆಂಬ ಕತ್ತಲೆಗೆ ದೀಪವಾಗಿರುವವಳು. ಅವರಿಗೆ ಅನುಕಂಪೆಯನ್ನು ತೋರಿಸಬೇಕು. ನಾನು ಅವರ ಬುದ್ಧಿಯಲ್ಲಿ ಸ್ಥಿತನಾಗಿ ಪ್ರಕಾಶಿಸುತ್ತಿರುವ ಜ್ಞಾನದೀಪದಿಂದ ಅಜ್ಞಾನಜನ್ಯವಾದ ತಮಸ್ಸನ್ನು ನಾಶ ಮಾಡುತ್ತೇನೆ.

“ತೇಷಾಮೇವಾನುಕಂಪಾರ್ಥ ಮಹಾಜ್ಞಾನಜಂತಮಃ ।
ನಾಶಯಾಮ್ಯಾತ್ಮಭಾವಸ್ಥೋ ಜ್ಞಾನದೀಪೇನ ಭಾಸ್ವತಾ”

– ಎಂದು ಭಗವಂತನು ಗೀತೆಯಲ್ಲಿ ಹೇಳಿರುವನು.

ಲಲಿತೆಯು ಅನವರತವೂ ಪೂಜಿಸುವ ಮತ್ತು ಉಪಾಸನೆ ಮಾಡತಕ್ಕವರಲ್ಲಿ ಪ್ರೀತಿಯನ್ನಿಡುವವಳು, ಭಕ್ತರಲ್ಲಿ ಯಾವಾಗಲೂ ವಾತ್ಸಲ್ಯವುಳ್ಳವಳು, ಪ್ರೇಮರೂಪಳು, ಸ್ನೇಹ ಅಥವಾ ಭಕ್ತಿಗೆ ಸೋತವಳು, ಪ್ರಿಯವನ್ನುಂಟುಮಾಡುವವಳು, ಭಾವಜ್ಞಳು ಅಂದರೆ ಇರುವಿಕೆ, ಸ್ವಭಾವ ಅಭಿಪ್ರಾಯ, ಆಕಾರ, ಹುಟ್ಟುವಿಕೆ, ಜ್ಞಾನಿ, ಗರ್ಭಕೋಶ, ಸಂಪತ್ತು, ಮಾರುತ, ವಿನೋದ, ರಾಜ್ಯಧರ್ಮ, ಧ್ಯಾನ, ಈಶ್ವರಭಕ್ತಿ ಎಂಬ ಅರ್ಥಗಳಿವೆ. ಆದ್ದರಿಂದ ಬ್ರಹ್ಮಾಂಡದ ಸೃಷ್ಟಿ, ಸ್ಥಿತಿ, ಲಯಗಳ ವಿಚಾರ ಅರಿತವಳು, ಬಂಧನ ಕಷ್ಟ, ರೋಗಗಳನ್ನು ಪರಿಹರಿಸುವವಳು.

ಪಂಚಯಜ್ಞಪ್ರಿಯಳು, ಶ್ರುತಿಯ ಪ್ರಕಾರ ಪಂಚಯಜ್ಞಗಳೆಂದರೆ ಅಗ್ನಿಹೋತ್ರ, ದರ್ನಪೂರ್ಣಮಾಸ, ಚಾತುರ್ಮಾಸ್ಯ, ಪಶು ಮತ್ತು ಸೋಮ ಸ್ಮೃತಿಗಳ ಪ್ರಕಾರ ದೇವಯಜ್ಞ, ಬ್ರಹ್ಮಯಜ್ಞ, ಭೂತಯಜ್ಞ, ಪಿತೃಯಜ್ಞ, ಮನುಷ್ಯ ಯಜ್ಞ, ಪಾಂಚರಾತ್ರಾಗಮಗಳ ಪ್ರಕಾರ ಅಭಿಗಮನ (ಗುರುವನ್ನು ಸೇರುವುದು) ಉಪಾದಾನ (ಉಪದೇಶ ಹೊಂದುವುದು) ಯಜ್ಞ, ಸ್ವಾಧ್ಯಾಯ ಮತ್ತು ಯೋಗ, ಕೌಲಾಗಮಗಳ ಪ್ರಕಾರ ಕೇವಲ, ಶ್ಯಾಮಲ, ಮಿಶ್ರ, ಚಕ್ರಯುತ್, ವೀರಸಂಗ್ರಹ, ಇಂತಹ ಪಂಚಯಜ್ಞಗಳ ಪ್ರಿಯಳು.

ಲಲಿತೆಯು ಸದ್ಯಾಃ ಪ್ರಸಾದಿನೀ, ವಿಶ್ವಸಾಕ್ಷಿಣಿಯಾಗಿರುವವಳು ಕಲಾನಿಧಿಃ, ಕಾವ್ಯಕಲಾ, ರಸಜ್ಞಾ ರಸಶೇವಧಿಯಾಗಿರುವವಳು. ಬ್ರಹ್ಮಾಂಡ ಪುರಾಣಾಂತರ್ಗತವಾದ ಲಲಿತೆಯ ಬಗ್ಗೆ ಧ್ಯಾನಿಸುತ್ತಾ ಹೋದಾಗ ವೇದಾಂತ ಭಾವನೆಗಳು ತುಂಬಿ ತುಳುಕುತ್ತವೆ. ದೇವಿಯ ಅಂತರ್ಯಾಮಿತ್ವವನ್ನೂ, ಅತೀತತ್ವವನ್ನೂ, ಸತ್ಯಜ್ಞಾನಾನಂದರೂಪವನ್ನೂ, ಸಚ್ಚಿದಾನಂದರೂಪವನ್ನೂ, ನಿತ್ಯಶುದ್ಧತೆಯನ್ನೂ ಸೂಚಿಸುತ್ತದೆ. ಅವಳು : ಮನುವಿದ್ಯಾ ಚಂದ್ರವಿದ್ಯಾ ಚಂದ್ರಮಂಡಲಮಧ್ಯಗಾ ಅರುಣಾರುಣ ಕೌಸುಂಭ ವಸ್ತ್ರ ಭಾಸ್ವತ್ಕಟೀಕಟೀ ಭಾನುಮಂಡಲಮಧ್ಯಸ್ಥಾ ಭೈರವೀ ಭಗಮಾಲಿನೀಯಾಗಿರತಕ್ಕಂತಹ ಶ್ರೀಮಾತೆಯವಳು.

ಶ್ರೀಮಾತೆಯಿಂದ ಮೊದಲುಗೊಂಡು ಲಲಿತಾಂಬಿಕೆಯವರೆಗೂ ಅವಳ ರಹಸ್ಯಗಳನ್ನು ಸುಲಿದ ಬಾಳೆಯ ಹಣ್ಣಿನಂತೆ ತೆರೆದಿಡುವುದೇ ಬ್ರಹ್ಮಾಂಡ ಪುರಾಣ. ಇಲ್ಲಿ ಶೃತಿ, ಸ್ಮೃತಿ, ಪುರಾಣ, ವೇದ, ಉಪನಿಷತ್ತು, ವೇದಾಂಗಗಳು, ಅದರಲ್ಲೂ ಜ್ಯೋತಿಷವರ್ಣಾಶ್ರಮ ಧರ್ಮ ಎಲ್ಲವನ್ನೂ ಕೂಲಂಕಷವಾಗಿ ತಿಳಿಸಿದೆ.

ಯಾರು ಲಲಿತೆಯನ್ನು ಧ್ಯಾನಿಸುತ್ತಾರೋ, ಪೂಜಿಸುತ್ತಾರೋ ಅಂತಹವರಿಗೆ ಸರ್ವ ರೋಗಗಳನ್ನೂ ನಿರ್ಮೂಲನೆ ಮಾಡುತ್ತಾಳೆ. ಅಪಮೃತ್ಯು ತಪ್ಪಿಸುತ್ತಾಳೆ. ಕಾಲಮೃತ್ಯು ನಿವಾರಿಸುತ್ತಾಳೆ. ಸರ್ವಜ್ವರ ವೇದನೆ ನಾಶ ಮಾಡುತ್ತಾಳೆ. ಮಕ್ಕಳಿಲ್ಲದವರಿಗೆ ಸಂತಾನ ಭಾಗ್ಯ ಕರುಣಿಸುತ್ತಾಳೆ. ಚತುರ್ವಿಧ ಫಲ ಪುರುಷಾರ್ಥಗಳು ಲಭಿಸುತ್ತದೆ. ಗಂಗಾದಿ ಸರ್ವ ತೀರ್ಥಗಳಲ್ಲಿ ಕೋಟಿ ಜನ್ಮಗಳಲ್ಲಿ ಸ್ನಾನ ಮಾಡಿದ ಫಲ. ಕೋಟಿ ಸಲ ಸುವರ್ಣ ದಾನ ಮಾಡಿದ ಫಲ. ಕೋಟಿಜನರಿಗೆ ಬ್ರಾಹ್ಮಣರಿಗೆ ಅನ್ನದಾನ ಮಾಡಿದ ಫಲ, ಪಾಪನಾಶ, ಪ್ರತ್ಯಕ್ಷ ವಿಷನಾಶ, ಸತ್ಪಾತ್ರಸಖ್ಯ ಲಲಿತಾಸಾಯುಜ್ಯ ಬ್ರಹ್ಮಜ್ಞಾನ, ಧನಾರ್ಥಿಗೆ ಧನಾಗಮ, ಯಶಸ್ಸು, ಮೋಕ್ಷ ಅಭೀಷ್ಟದಾಯಿನಿಯಾಗುತ್ತಾನೆ.

ಬ್ರಹ್ಮಾಂಡ ಪುರಾಣದಲ್ಲಿ ಇದಿಷ್ಟನ್ನೂ ಹಯಗ್ರೀವನು ಅಗಸ್ತ್ಯನಿಗೆ ಹೇಳಿರುವನು.

ಸರ್ವಮಂಗಳ ಮಾಂಗಲ್ಯೇ ಶಿವೇ ಸರ್ವಾರ್ಥಸಾಧಕೇ ।
ಶರಣ್ಯೇ ತ್ರಯಂಬಕೇ ಗೌರೀ ನಾರಾಯಣೀ ನಮೋಸ್ತುತೇ ॥

॥ ಓಂ ತತ್ ಸತ್ ॥

❑

“ಪುರಾಣಗಳಲ್ಲಿ ತೀರ್ಥಗಳ ಕಲ್ಪನೆ ಮತ್ತು ಮಹತ್ವ”

—ವಿದ್ವಾನ್ ಎಸ್. ರಾಮಪ್ರಸಾದ್

ಹಿಮಾಲಯದಿಂದ ಕನ್ಯಾಕುಮಾರೀ ಪರ್ಯಂತ ವ್ಯಾಪೃತವಾದ ನಮ್ಮ ಭಾರತ ಕರ್ಮ ಭೂಮಿ, ಧರ್ಮ ಭೂಮಿ, ಪುಣ್ಯ ಭೂಮಿ, ಎಂಬುದಾಗಿ ಪ್ರಸಿದ್ಧವಾಗಿದೆ. ಪರಮಕಾರುಣಿಕರಾದ ಮಹರ್ಷಿಗಳು ಸಾಕ್ಷಾತ್ಕರಿಸಿಕೊಂಡ ವೇದರಾಶಿಯೇ ಇದಕ್ಕೆ ಮೂಲ ಕಾರಣ. ವೇದವೆಂದರೆ “ಇಷ್ಟಪ್ರಾಪ್ತಿ ಅನಿಷ್ಟ ನಿವೃತ್ತಿಯ ಅಲೌಕಿಕ ಉಪಾಯವನ್ನು ತಿಳಿಸುವ ಗ್ರಂಥ”.

ಈ ವೇದರಾಶಿಯಲ್ಲಿ ಬ್ರಹ್ಮಾಂಡದ ಜ್ಞಾನವೇ ಅಡಗಿದೆ. ಕಾಲ ಕ್ರಮೇಣ ಕೆಲ ವೇದ ಶಾಖೆಗಳು ಅದೃಶ್ಯವಾಗಿವೆ. ವೇದದಲ್ಲಿ ಅಡಗಿರುವ ಸಾರಾಂಶವನ್ನು ವೇದವ್ಯಾಸರು ಪುರಾಣಗಳ ಮೂಲಕ ಸಾಮಾನ್ಯರಿಗೂ ಅರಿವಾಗುವಂತೆ ತಿಳಿಸಿಕೊಟ್ಟಿದ್ದಾರೆ. ಪುರಾಣಗಳಲ್ಲಿ ಬಂದಿರುವ ತೀರ್ಥಗಳ ಉಲ್ಲೇಖವನ್ನು ಇಲ್ಲಿ ಸಂಗ್ರಹವಾಗಿ ನೀಡಲಾಗಿದೆ.

ಹಿಮಾಲಯದಿಂದ ಕನ್ಯಾಕುಮಾರೀ ಪರ್ಯಂತ ವ್ಯಾಪೃತವಾದ ನಮ್ಮ ಭಾರತ ಕರ್ಮ ಭೂಮಿ, ಧರ್ಮ ಭೂಮಿ, ಪುಣ್ಯ ಭೂಮಿ, ಎಂಬುದಾಗಿ ಪ್ರಸಿದ್ಧವಾಗಿದೆ. ಪರಮಕಾರುಣಿಕರಾದ ಮಹರ್ಷಿಗಳು ಸಾಕ್ಷಾತ್ಕರಿಸಿಕೊಂಡ ವೇದರಾಶಿಯೇ ಇದಕ್ಕೆ ಮೂಲ ಕಾರಣ. ವೇದವೆಂದರೆ "ಇಷ್ಟಪ್ರಾಪ್ತಿ ಅನಿಷ್ಟ ನಿವೃತ್ತಿಯ ಅಲೌಕಿಕ ಉಪಾಯವನ್ನು ತಿಳಿಸುವ ಗ್ರಂಥ". ಈ ವೇದರಾಶಿಯಲ್ಲಿ ಬ್ರಹ್ಮಾಂಡದ ಜ್ಞಾನವೇ ಅಡಗಿದೆ. ಕಾಲ ಕ್ರಮೇಣ ಕೆಲ ವೇದ ಶಾಖೆಗಳು ಅದೃಶ್ಯವಾಗಿವೆ. ವೇದದಲ್ಲಿ ಅಡಗಿರುವ ಸಾರಾಂಶವನ್ನು ವೇದವ್ಯಾಸರು ಪುರಾಣಗಳ ಮೂಲಕ ಸಾಮಾನ್ಯರಿಗೂ ಅರಿವಾಗುವಂತೆ ತಿಳಿಸಿಕೊಟ್ಟಿದ್ದಾರೆ.

ಪುರಾಣವೆಂದರೆ 'ಪುರಾಭವಮ್' ಅಥವಾ 'ಪುರಾನೀಯತೆ' ಯಾವ ಗ್ರಂಥವು ನಮ್ಮನ್ನು ವೇದದಲ್ಲಿರುವ ಜ್ಞಾನದ ಕಡೆಗೆ ಒಯ್ಯುವ ಗ್ರಂಥ. ಸರ್ಗ, ಪ್ರತಿಸರ್ಗ, ವಂಶ, ಮನ್ವಂತರ, ವಂಶಾನುಚರಿತವೆಂಬ ಸಾಮಾನ್ಯವಾದ ಪಂಚಲಕ್ಷಣಾನ್ವಿತ ಶಾಸ್ತ್ರ. ಸರ್ಗ, ವಿಸರ್ಗ, ವೃತ್ತಿ, ರಕ್ಷಾ, ಅಂತರಮ್, ವಂಶ, ವಂಶಾನುಚರಿತ, ಸಂಸ್ಥಾ, ಹೇತು, ಅಪಾಶ್ರಯಗಳೆಂಬ ದಶಲಕ್ಷಣಗಳಿಂದ ಕೂಡಿದ ಗ್ರಂಥವೇ ಪುರಾಣ.

> **ವಿಸ್ತಾರಾಯಚ ವೇದಾನಾಂ ಸ್ವಯಂ ನಾರಾಯಣಃಪ್ರಭುಃ**
> **ವ್ಯಾಸ ರೂಪೇಣ ಕೃತವಾನ್ ಪುರಾಣಾನಿ ಮಹೀತಲೇ ॥**

"ಸಾಕ್ಷಾತ್ ಶ್ರೀಮನ್ನಾರಾಯಣನೇ ವ್ಯಾಸರೂಪನಾಗಿ ಅವತರಿಸಿ ವೇದಗಳ ವಿಸ್ತಾರಕ್ಕಾಗಿ ಪುರಾಣಗಳನ್ನು ರಚಿಸಿದನೆಂಬುದು ಪ್ರತೀತಿ. ಆದ್ದರಿಂದ ವೇದಗಳಲ್ಲಿರುವ ಅಗಾಧತೆಯನ್ನು ತಿಳಿಯಬೇಕಾದರೆ ಪುರಾಣಗಳು ಅನಿವಾರ್ಯ. "ಇತಿಹಾಸ ಪುರಾಣಾಭ್ಯಾಂ ವೇದಂ ಸಮುಪ ಬೃಂಹಯೇತ್" । ಬಿಭೇತ್ಯಲ್ಪ ಶೃತಾದ್ ವೇದೋ ಮಾಮಯಂ ಪ್ರಹರಿಷ್ಯತಿ ॥" ಪುರಾಣಗಳು ವೇದ ಮೂಲ ಎಂಬುದಾಗಿಯೂ ಹೇಳಬಹುದು.

"ಋಚಃ ಸಾಮಾನಿಛಂದಾಂಸಿ ಪುರಾಣಂ ಯಜುಷಾಸಹ ಉಚ್ಚಿಷ್ಟಾಜ್ಜಜ್ಞಿರೇ ಸರ್ವೇದಿ ವಿಶ್ರಿತಾ!" । ಅಥರ್ವಸಂಹಿತಾ ಇದೇ ರೀತಿಯಾಗಿ ವೇದಗಳಲ್ಲಿ ಪುರಾಣಶಬ್ದದ ಉಲ್ಲೇಖವನ್ನು ಕಾಣಬಹುದು.

ಯಾಜ್ಞವಲ್ಕ್ಯಸ್ಮೃತಿಯಲ್ಲಿ ವರ್ಣಿತವಾದ ಚತುರ್ದಶ ವಿದ್ಯೆಗಳಲ್ಲಿ ಪುರಾಣವೂ ಒಂದು.

> **"ಪುರಾಣ ನ್ಯಾಯಮೀಮಾಂಸಾ ಧರ್ಮಶಾಸ್ತ್ರಾಂಗ ಮಿಶ್ರಿತಾಃ ।**
> **ವೇದಾಃ ಸ್ಥಾನಾನಿ ವಿದ್ಯಾನಾಂ ಧರ್ಮಸ್ಯಚ ಚತುರ್ದಶ ॥**

18 ಪುರಾಣಗಳ ಹೆಸರುಗಳನ್ನು ಈ ಶ್ಲೋಕದಲ್ಲಿ ಸಂಕ್ಷಿಪ್ತವಾಗಿ ಹೇಳಲಾಗಿದೆ.

> **"ಮದ್ವಯಂ ಭದ್ವಯಂ ಚೈವ ಬ್ರತ್ರಯಂ ವಚತುಷ್ಟಯಮ್ ।**
> **ಅ-ನಾ-ಪ-ಲಿಂ-ಗ-ಕೂ-ಸ್ಕಾನಿ ಪುರಾಣಾನಿ ಪ್ರಚಕ್ಷಿರೆ ॥"**

ನಾರದೀಯ ಮುಂತಾದ ಪುರಾಣಗಳಿಂದ ಹದಿನೆಂಟು ಮಹಾಪುರಾಣಗಳೆಂದು ತಿಳಿದುಬರುತ್ತದೆ. ಅವು – ಮತ್ಸ್ಯ, ಮಾರ್ಕಂಡೇಯ, ಭವಿಷ್ಯ, ಭಾಗವತ, ಬ್ರಹ್ಮಾಂಡ, ಬ್ರಹ್ಮವೈವರ್ತ, ಬ್ರಹ್ಮ, ವರಾಹ, ವಾಮನ, ವಾಯು, ವಿಷ್ಣು, ಅಗ್ನಿ, ನಾರದ, ಪದ್ಮ, ಲಿಂಗ, ಕೂರ್ಮ, ಸ್ಕಾಂದ, ಗರುಡ.

ಮಾರ್ಕಂಡೇಯ ಪುರಾಣದಲ್ಲಿ ಹೇಳಿರುವಂತೆ–

> **"ಅಷ್ಟಾದಶ ಪುರಾಣಾನಾಂ ನಾಮದೇಯಾನಿಯಃಪಠೇತ್ ।**
> **ತ್ರಿಸಂಧ್ಯಂ ಜಪತೇ ನಿತ್ಯಂ ಸೋಽಶ್ವಮೇಧ ಫಲ ಮಶ್ನುತೇ ॥**

ಅಷ್ಟಾದಶ ಮಹಾಪುರಾಣಗಳ ನಾಮಸ್ಮರಣ ಮಾತ್ರದಿಂದಲೇ ಅಶ್ವಮೇಧಯಾಗ ಫಲ ಲಭಿಸುತ್ತದೆ.

ಪುರಾಣಗಳಲ್ಲಿ ತೀರ್ಥದ ಉಲ್ಲೇಖ ಅತಿ ವಿಶಿಷ್ಟವಾಗಿದೆ. ಮಹರ್ಷಿಗಳಿಂದ ಉಕ್ತವಾದ ಈ ತೀರ್ಥಗಳಿಂದ ಐಹಿಕ ಆಮುಷ್ಮಿಕ ಫಲ ಪ್ರಾಪ್ತಿಯುಂಟಾಗುವುದು. ತೀರ್ಥಗಳ ಕಲ್ಪನೆ ಅವುಗಳ ಮಹತ್ವವು ಎಲ್ಲಾ ಪುರಾಣಗಳಲ್ಲಿ ಉಕ್ತವಾಗಿದೆ. ವಿಶೇಷವಾಗಿ ಪದ್ಮಪುರಾಣದಲ್ಲಿ.

ತೀರ್ಥಮ್:- ತೀರ್ಥವೆಂದರೆ 'ತೃ' ತರಣ ಪ್ಲವನಯೋ ಎಂಬ ಧಾತುವಿಗೆ 'ಪಾತೃತುದಿವಚೀತಿ' ಎಂಬ ಸೂತ್ರದಿಂದ 'ಥಕ್' ಪ್ರತ್ಯಯದ

ಯೋಜನೆಯಿಂದ ತೀರ್ಥಶಬ್ದವಾಗಿ, ಪಾಪಗಳನ್ನು ಕಳೆಯುವುದು ಎಂಬರ್ಥ. 'ತರತಿಪಾಪಾದಿಕಂಯಸ್ಮಾ ದಿತಿ ತೀರ್ಥಮ್" ಈ ತೀರ್ಥವು ನಾಲ್ಕು ವಿಧ.

1) ಹಸ್ತ ಸ್ಥಿತಿ ತೀರ್ಥ 2) ಜಂಗಮ ತೀರ್ಥ 3) ಮಾನಸ ತೀರ್ಥ 4) ಸ್ಥಾವರ ತೀರ್ಥ

ತೀರ್ಥ ಶಬ್ದವನ್ನು ಅನೇಕಾರ್ಥದಲ್ಲಿ ಬಳಸಲಾಗುತ್ತದೆ...

ತೀರ್ಥಂಶಾಸ್ತ್ರಾಧ್ವರಕ್ಷೇತ್ರೋಪಾಯ ನಾರೀರಜಃಸುಚ ।
ಅವತಾರರ್ಷಿಜುಷ್ಟಾಂಬು ಪಾತ್ರೋಪಾಧ್ಯಾಯಮಂತ್ರಿಷು ।

ಅನೇಕ ಗ್ರಂಥಗಳಲ್ಲಿ ಬೇರೆ ಬೇರೆ ಅರ್ಥಗಳಲ್ಲಿ ಬಳಕೆಯಾಗಿದೆ. ಉದಾ: ಮಹಾಭಾರತದಲ್ಲಿ ವಾಸುದೇವೇನ **ತೀರ್ಥೇನ** ಇಲ್ಲಿ ತೀರ್ಥ ಶಬ್ದಕ್ಕೆ ಉಪಾಯವೆಂಬರ್ಥ.

ರಾಮಾಯಣದಲ್ಲಿ ವಾಲ್ಮೀಕಿಗಳು ತಮಸಾ ನದಿಯನ್ನು ಕುರಿತು ತನ್ನ ಶಿಷ್ಯನಿಗೆ ಹೇಳುವಾಗ ತೀರ್ಥ ಶಬ್ದವನ್ನು ಋಷಿಜುಷ್ಟ ಎಂಬ ಅರ್ಥದಲ್ಲಿ

ಅಕರ್ದಮಮಿದಂ ತೀರ್ಥಂ ಭರದ್ವಾಜ ನಿಶಾಮಯ ।
ರಮಣೀಯಂ ಪ್ರಸನ್ನಾಂಬು ಸನ್ಮನುಷ್ಯ ಮನೋಯಥಾ ॥

ಗುರು ಎಂಬ ಅರ್ಥದಲ್ಲಿಯೂ ಬಳಸಲಾಗಿದೆ.

"ಶಿಕ್ಷಿತೋಹ್ಯಸಿ ಸಾರಥ್ಯೇ **ತೀರ್ಥತಃ** ಪುರುಷರ್ಷಭ" ಇಲ್ಲಿ ತೀರ್ಥತಃ ಎಂದರೆ ಗುರುಗಳಿಂದ. ಈ ರೀತಿಯಾಗಿ ಮೇದಿನೀಕೋಶದಲ್ಲಿ ತೀರ್ಥ ಶಬ್ದಕ್ಕೆ ಹತ್ತು ಅರ್ಥಗಳನ್ನು ತಿಳಿಸಿದ್ದಾನೆ.

ತೀರ್ಥಗಳಲ್ಲಿ ಮೊದಲನೆಯದು **ಹಸ್ತಸ್ಥಿತ ತೀರ್ಥಗಳು.**

ಅಂಗುಳ್ಯಗ್ರೇ ದೈವಂ ತೀರ್ಥಂ ಸ್ವಾಂಗುಲ್ಯೋರ್ಮಧ್ಯೇಕಾಯಂ ।
ಮಧ್ಯೇಽಂಗುಲ್ಯೋಃ ಪೈತ್ರಂ ಮೂಲೇಂಗುಷ್ಠಸ್ಯ ಬ್ರಾಹ್ಮಮ್ ॥

ಬೆರಳುಗಳ ಕೂನೆಗಳಲ್ಲಿ **ದೇವಸಂಬಂಧವಾದ** ತೀರ್ಥವಿರುವುದು 'ಕಿರುಬೆರಳು ಪವಿತ್ರದ ಬೆರಳಿಗೂ ಮಧ್ಯೆ **ಋಷಿತೀರ್ಥ**ವಿರುವುದು. ಹೆಬ್ಬೆರಳಿಗೂ ಅದರ ತರ್ಜನೀ ಬೆರಳಿಗೂ ಮಧ್ಯದಲ್ಲಿ **ಪಿತೃತೀರ್ಥ**ವಿರುವುದು. ಹೆಬ್ಬೆರಳಿನ ಮೂಲದಲ್ಲಿ **ಬ್ರಹ್ಮತೀರ್ಥ**ವಿರುವುದು. ಮಾರ್ಕಂಡೇಯ ಪುರಾಣದಲ್ಲಿ ಇದರ ಉಲ್ಲೇಖವನ್ನು ನೋಡಬಹುದು.

ನಮ್ಮ ಕೈಯಲ್ಲೇ ದೇವತೀರ್ಥ, ಋಷಿತೀರ್ಥ, ಬ್ರಹ್ಮತೀರ್ಥ, ಪಿತೃತೀರ್ಥಗಳೆಂಬ ನಾಲ್ಕು ತೀರ್ಥಗಳಿವೆ. ಈ ರೀತಿಯಾದ ಋಷಿಗಳ ಕಲ್ಪನೆ ಅತಿ ವಿಶಿಷ್ಟ. ಆದ್ದರಿಂದ ಭಾರತೀಯ ಸಂಪ್ರದಾಯದಲ್ಲಿ ಬೆಳಗ್ಗೆ ಏಳುವಾಗ "ಪ್ರಭಾತೇ ಕರದರ್ಶನಮ್" ಎಂಬುದಾಗಿ ಹೇಳಿ ಕೈಗಳ ದರ್ಶನ ಮಾಡಿದರೆ ಈ ನಾಲ್ಕು ತೀರ್ಥಗಳ ದರ್ಶನವಾದಂತೆ.

2) ಜಂಗಮ ತೀರ್ಥಮ್ –

"ಬ್ರಾಹ್ಮಣಾ ಜಂಗಮಂ ತೀರ್ಥಂ ನಿರ್ಮಲಂ ಸಾರ್ವಕಾಯಿಕಂ
ಯೇಷಾಂ ವಾಕ್ಯೋಽದಕೇನ್ಯನ್ವವ ಶುದ್ಧ್ಯಂತಿ ಮಲಿನೋಜನಾಃ ॥

ಬ್ರಾಹ್ಮಣರೇ ಜಂಗಮ ತೀರ್ಥ. ಷಡಂಗ ಸಹಿತ ವೇದಾದ್ಯಯನ ಮಾಡಿದ ಬ್ರಾಹ್ಮಣನ ಮಾತೆಂಬ ನೀರಿನಿಂದ ಅಜ್ಞಾನವೆಂಬ ಕೂಳೆಯು ನಾಶವಾಗುತ್ತದೆ. ಆದ್ದರಿಂದ ಬ್ರಾಹ್ಮಣನು ಜಂಗಮತೀರ್ಥವೆಂಬುದಾಗಿ ಹೇಳಲ್ಪಟ್ಟಿದ್ದಾನೆ.

3) ಮಾನಸ ತೀರ್ಥಮ್ – ಮೂರನೆಯದು ಮಾನಸ ತೀರ್ಥ. ದೇವೀ ಭಾಗವತದಲ್ಲಿ ಮಾನಸ ತೀರ್ಥಗಳ ಬಗ್ಗೆ ಈ ರೀತಿಯಾಗಿ ಹೇಳುತ್ತಾನೆ.

'ಶೃಣು ತೀರ್ಥಾನಿಗದತೋ ಮಾನಸಾನಿ ಮಮಾನಘೇ ।
ಯೇಷು ಸಮ್ಯಕ್‌ನರಃ ಸ್ನಾತ್ವಾ, ಪ್ರಯಾತಿ ಪರಮಾಂ ಗತಿಮ್ ॥

"**ಸತ್ಯಂ** ತೀರ್ಥಂ **ಕ್ಷಮಾ**ತೀರ್ಥಂ ತೀರ್ಥ **ಮಿಂದ್ರಿಯನಿಗ್ರಹಃ**
ಸರ್ವಭೂತದಯಾತೀರ್ಥಂ **ಸರ್ವಪ್ರಾರ್ಜವ** ಮೇವಚ ॥
ದಾನಂ ತೀರ್ಥಂ **ದಮ**ಸ್ತೀರ್ಥಂ **ಸಂತೋಷ** ಸ್ತೀರ್ಥ ಮುಚ್ಯತೇ ।
ಬ್ರಹ್ಮಚರ್ಯಂ ಪರಂ ತೀರ್ಥಂ ತೀರ್ಥಂಚ **ಪ್ರಿಯವಾದಿತಾ** ॥
ಜ್ಞಾನಂತೀರ್ಥಂ **ಧೃತಿ** ಸ್ತೀರ್ಥಂ **ಪುಣ್ಯಂ** ತೀರ್ಥ ಮುದಾಹೃತಮ್ ॥
ತೀರ್ಥನಾಮಪಿ ತತ್ತೀರ್ಥಂ **ವಿಶುದ್ಧಿರ್ಮನಸಃಪರಾ** ॥
ಏತತ್ತೇ ಕಥಿತಂ ದೇವಿ ಮಾನಸಂ ತೀರ್ಥ ಲಕ್ಷಣಮ್ ।" ಈ

ಪುರಾಣದಲ್ಲಿ ಉಕ್ತವಾದ ಮಾನಸ ತೀರ್ಥಗಳ ಕಲ್ಪನೆಯೂ ವಿಶಿಷ್ಟವೇ. ಈ ಕಲ್ಪನೆಯು ಮನುಷ್ಯನ ಸರ್ವಾಂಗೀಣ ವಿಕಾಸವನ್ನುಂಟುಮಾಡುವುದರ ಮೂಲಕ ಐಹಿಕಾಮುಷ್ಮಿಕ ಪ್ರಯೋಜನಗಳನ್ನುಂಟು ಮಾಡುತ್ತದೆ.

ಮಾನವನು ಸಮಾಜದಲ್ಲಿ ಶುದ್ಧನಾಗಿರಬೇಕಾದರೆ ಮನಸ್ಸು ಶುದ್ಧವಾಗಿರಬೇಕು.

"ಮನ ಏವ ಮನುಷ್ಯಾಣಾಂ ಕಾರಣಂ ಬಂಧ ಮೋಕ್ಷಯೋ"ಃ

ಎಲ್ಲದಕ್ಕೂ ಮನಸ್ಸೇ ಕಾರಣ. ಶುದ್ದ ಮನಸ್ಸಿನ ಈ ತೀರ್ಥಕಲ್ಪನೆಯೇ ಮಾನಸತೀರ್ಥ.

4) ಸ್ಥಾವರ ತೀರ್ಥಗಳು – ಸ್ಥಾವರ ತೀರ್ಥಗಳ ಸಂಖ್ಯೆ ಅನಂತ, ವಾಯುಪುರಾಣದ

> **"ತಿಸ್ರಃಕೋಟ್ಯೋಽತಿರ್ಥಕೋಟೀಚ ತೀರ್ಥಾನಾಂ ವಾಯುರಬ್ರವೀತ್ ।**
> **ದಿವಿಭುವ್ಯಂತರಿಕ್ಷೇ ಚತಾನಿತೇ ಸಂತಿ ಜಾಹ್ನವಿ ॥"**

ಪದ್ಮಪುರಾಣದಲ್ಲಿ ಭೂಮಂಡಲದ ಪ್ರದಕ್ಷಿಣಾ ಕಾರವಾಗಿ ತೀರ್ಥಗಳ ವರ್ಣನೆ ಈ ರೀತಿಯಾಗಿದೆ. ಪದ್ಮಪುರಾಣದಲ್ಲಿ ಉಕ್ತವಾದ ಸ್ಥಾವರ ತೀರ್ಥಗಳು ಭೂಮಂಡಲದ ಪ್ರದಕ್ಷಿಣಾಕಾರವಾಗಿ ತೀರ್ಥಗಳ ಉಲ್ಲೇಖ.

1) ಪುಷ್ಕರ ತೀರ್ಥವು ಬ್ರಹ್ಮನ ಸ್ಥಾನ. ಅದು ತೀರ್ಥರಾಜವೆಂಬುದಾಗಿ ಕರೆಯಲ್ಪಡುತ್ತದೆ. ಇದರ ಮಹಿಮೆಯನ್ನು ವಸಿಷ್ಠರು ಈ ರೀತಿಯಾಗಿ ಹೇಳುತ್ತಾರೆ.

> **ಯಥಾಸುರಾಣಂ ಸರ್ವೇಷಾಮಾದಿಸ್ತು ಮಧುಸೂದನಃ ।**
> **ತಥೈವ ಪುಷ್ಕರೋ ರಾಜಂಸ್ತೀರ್ಥಾನಾಮಾದಿರುಚ್ಯತೇ ॥**

ಪುಷ್ಕರದ ದರ್ಶನ ದುಷ್ಕರವೂ ಎಂದು ಹೇಳಲಾಗಿದೆ.

> **ದುಷ್ಕರಂ ಪುಷ್ಕರೇ ಸ್ನಾನಂ ದುಷ್ಕರಂ ಪುಷ್ಕರೇ ತಪಃ ।**
> **ದುಷ್ಕರ ಪುಷ್ಕರೇ ದಾನಂ ವಸ್ತುಂ ಚೈವ ಸುದುಷ್ಕರಮ್ ॥**

ಅದರಲ್ಲಿ ಸ್ನಾನ ಮಾಡುವುದರಿಂದ ಅಶ್ವಮೇಧಯಾಗದ ಫಲ ಹಾಗೂ ಬ್ರಹ್ಮಲೋಕಪ್ರಾಪ್ತಿಯೂ ಸಿದ್ದಿಸುವುದು. 2) **ಜಂಬೂಮಾರ್ಗ** : ಅದರ ಫಲ ಅಶ್ವಮೇಧಯಾಗಕ್ಕೆ ಸಮಾನವಾದದ್ದು ಮತ್ತು ವಿಷ್ಣು ಲೋಕದ ಪ್ರಾಪ್ತಿ 3) **ತಂಡುಲಿಕಾಶ್ರಮ** : ಇದರಿಂದ ದುರ್ಗತಿ ವಿನಾಶ ಹಾಗೂ ಬ್ರಹ್ಮ ಲೋಕ ಪ್ರಾಪ್ತಿ. 4) **ಅಗಸ್ತ್ಯಸರ** : ಅಲ್ಲಿ ಮೂರು ರಾತ್ರಿಗಳು ಉಪವಾಸ ಮಾಡಿದರೆ ವಾಜಪೇಯಯಾಗದ ಫಲ ಹಾಗೂ ಶಾಕಾಹಾರದಿಂದ ಕೌಮಾರ ಲೋಕ ಪ್ರಾಪ್ತಿ. 5) **ಧರ್ಮಾರಣ್ಯಮ್** : ಅದು ಕಣ್ವರ ಆಶ್ರಮ. ಅದರ ಪ್ರವೇಶ ಮಾತ್ರದಿಂದಲೇ ಪಾಪಕ್ಷಯವಾಗುವುದು ಅಲ್ಲಿ ದೇವರನ್ನು, ಪಿತೃಗಳನ್ನು ಪೂಜಿಸುವುದರಿಂದ ಅಶ್ವಮೇಧಯಾಗದ ಫಲ ಹಾಗೂ ಸುರ ಲೋಕ ಪ್ರಾಪ್ತಿಯಾಗುವುದು. 6) **ಯಯಾತಿ ಪತನಮ್** : ಅಲ್ಲಿಗೆ ಹೋಗುವುದರಿಂದ ಅಶ್ವಮೇಧಯಾಗದ ಫಲ ಲಭಿಸುವುದು 7) **ಕೋಟಿತೀರ್ಥ** : ಈ ತೀರ್ಥದಲ್ಲಿ ಮಹಾಕಾಲನು ನೆಲೆಸಿರುವನು. ಇಲ್ಲಿ ಸ್ನಾನ ಮಾಡುವುದರಿಂದ ಅಶ್ವಮೇಧಯಾಗದ ಫಲ ಪ್ರಾಪ್ತಿಯಾಗುತ್ತದೆ. 8) **ಭದ್ರವಟ** : ಅಲ್ಲಿ ಉಮಾಪತಿಯು ವಾಸಿಸುವುದರಿಂದ ಅದರ ದರ್ಶನದಿಂದ ಸಾವಿರ ಹಸುಗಳ ದಾನದ ಫಲ ಲಭಿಸುವುದು. 9) **ನರ್ಮದಾನದೀ** : ಈ ನದಿಯಲ್ಲಿ ಪಿತೃತರ್ಪಣದಿಂದ ಅಗ್ನಿಷ್ಟೋಮದ ಫಲ ಲಭಿಸುವುದು. 10) **ದಕ್ಷಿಣಸಿಂಧು** : ಇಲ್ಲಿ ಬ್ರಹ್ಮಚರ್ಯದಿಂದ ಅಗ್ನಿಷ್ಟೋಮಕ್ಕೆ ಸಮಾನವಾದ ಫಲ ಹಾಗು ಸ್ವರ್ಗ ಲೋಕದ ಪ್ರಾಪ್ತಿ 11) **ಚರ್ಮಣ್ವತೀನದಿ** : ಇಲ್ಲಿ ಇಂದ್ರಿಯ ನಿಗ್ರಹದಿಂದ ಜ್ಯೋತಿಷ್ಟೋಮದ ಫಲ. 12) **ಹಿಮವತ್ಸುತಾರ್ಬುದ** : ಇದರಂದ ಗೋಸಹಸ್ರದಾನದ ಫಲ 13) **ಪಿಂಗತೀರ್ಥ** : ಇಲ್ಲಿ ಇಂದ್ರಿಯ ನಿಗ್ರಹದಿಂದ ನೂರು ಕರು ಸಹಿತ ಕಪಿಲ ಧೇನುಗಳ ಫಲ. 14) **ಪ್ರಭಾಸತೀರ್ಥ** : ಅಲ್ಲಿ ಹುತಾಶನನು ನೆಲೆಸಿರುತ್ತಾನೆ. ಸ್ನಾನ ಮಾಡುವುದರಿಂದ ಅಗ್ನಿಷ್ಟೋಮ ಮತ್ತು ಅತಿರಾತ್ರಯಾಗಗಳ ಫಲ ಲಭಿಸುತ್ತದೆ. 15) **ಸರಸ್ವತೀ ಸಾಗರಸಂಗಮ** : ಇಲ್ಲಿ ಸ್ನಾನ ಮಾಡುವುದರಿಂದ ಗೋಸಹಸ್ರದಾನದ ಫಲ ಹಾಗೂ ಮೂರು ರಾತ್ರಿಗಳ ಉಪವಾಸ ಮತ್ತು ಪಿತೃದೇವತರ್ಪಣಗಳಿಂದ ಅಶ್ವಮೇಧಯಾಗದ ಫಲ. 16) **ವರದಾನಮ್** : ಇದು ದೂರ್ವಾಸ ಮಹರ್ಷಿಗಳು ವಿಷ್ಣುವಿಗೆ ವರಪ್ರದಾನ ಮಾಡಿದ ಸ್ಥಳ. ಇಲ್ಲಿ ಸ್ನಾನ ಮಾಡುವುದರಿಂದ ಗೋಸಹಸ್ರ ಫಲ ಪ್ರಾಪ್ತಿ. 17) **ದ್ವಾರವತಿಯ ಪಿಂಡಾರಕ ತೀರ್ಥ** : ಇಲ್ಲಿ ಇಂದಿಗೂ ಪದ್ಮಗಳ ಗುರುತುಗಳುಳ್ಳ ಗುರುತುಗಳು ಶೂಲಗುರುತುಳ್ಳ ಪದ್ಮಗಳೂ ಕಾಣುತ್ತವೆ.ಇಲ್ಲಿ ಮಹಾದೇವನು ನೆಲೆಸಿರುವನು ಬಹುಸುವರ್ಣಯಜ್ಞದ

ಫಲ ಲಭಿಸುತ್ತದೆ. 18) **ಸಮುದ್ರಸಿಂಧು ಸಂಗಮ** : ಇಲ್ಲಿ ಸ್ನಾನ ಮಾಡುವುದರಿಂದ ಹಾಗೂ ಪಿತೃತರ್ಪಣ ದೇವತರ್ಪಣಗಳಿಂದ ವರುಣಲೋಕ ಪ್ರಾಪ್ತಿಯಾಗುವುದು. 19) **ತಿಮೀತೀರ್ಥಮ್** : ಇಲ್ಲಿ ಮಹಾದೇವನು ವಾಸಿಸುವನು ಈ ತೀರ್ಥದಲ್ಲಿ ಸ್ನಾನ ಮಾಡುವುದರಿಂದ ಅಶ್ವಮೇಧದ ಫಲ, ಮಹಾದೇವನ ದರ್ಶನ ಅರ್ಚನೆಗಳಿಂದ ಸಕಲ ಪಾಪನಾಶ. 20) **ವಸುಧಾರಾ** : ಇದರ ದರ್ಶನದಿಂದ ಅಶ್ವಮೇದ ಯಾಗದ ಫಲ, ಸ್ನಾನ ತರ್ಪಣಗಳಿಂದ ವಿಷ್ಣು ಲೋಕ ಪ್ರಾಪ್ತಿ, 21) **ಸಿಂಧೂತ್ತಮ** : ಇಲ್ಲಿ ಸ್ನಾನ ಮಾಡುವುದರಿಂದ ಬಹುಸುವರ್ಣಯಜ್ಞ ಫಲ: 22) **ಯದುತುಂಗ** : ಅಲ್ಲಿಗೆ ಹೋಗುವುದರಿಂದ ಬ್ರಹ್ಮಲೋಕ ಪ್ರಾಪ್ತಿ. 23) **ಕುಮಾರಿಕಾ ಶಕ್ರತೀರ್ಥಮ್** : ಇಲ್ಲಿ ಸ್ನಾನ ಮಾಡುವುದರಿಂದ ಪರಿಶುದ್ದನಾಗುತ್ತಾನೆ. 24) **ಪಂಚನದ** : ಇಲ್ಲಿ ಪಂಚ ಯಜ್ಞಫಲವನ್ನು ಹೊಂದುತ್ತಾನೆ. 25) **ಭೀಮಾಸ್ಥಾನಮ್** : ಅಲ್ಲಿ ಸ್ನಾನ ಮಾಡಿದರೆ ಮಾನವನು ದೇವೀಪುತ್ರನಾಗುತ್ತಾನೆ ಹಾಗೂ ಗೋಸಹಸ್ರದಾನಫಲವನ್ನು ಪಡೆಯುತ್ತಾನೆ. 26) **ಗಿರಿಕುಂಜಮ್** : ಅಲ್ಲಿ ಬ್ರಹ್ಮನು ನೆಲೆಸಿರುತ್ತಾನೆ. ಅವನ ನಮಸ್ಕಾರದಿಂದ ಗೋಸಹಸ್ರದಾನ ಫಲ. 27) **ವಿಮಲತೀರ್ಥಮ್** : ಅಲ್ಲಿ ಸ್ನಾನ ಮಾಡುವುದರಿಂದ ವಾಜಪೇಯ ಯಾಗದ ಫಲ. 28) **ವಿತಸ್ತಾನದಿ** : ಅಲ್ಲಿ ತರ್ಪಣ ಬಿಡುವುದರಿಂದ ವಾಜಪೇಯ ಯಾಗದ ಫಲ ಹಾಗೂ ಸ್ವರ್ಗ ಪ್ರಾಪ್ತಿ.

29) **ಕಾಶ್ಮೀರದಲ್ಲಿರುವ ವಿತಸ್ತಾ ಎಂಬ ತಕ್ಷಕನಾಗ ಸದನ** : ಅಲ್ಲಿ ಸ್ನಾನ ಮಾಡುವುದರಿಂದ ವಾಜಪೇಯ ಫಲ ಮತ್ತು ವಿಷ್ಣುಲೋಕ ಪ್ರಾಪ್ತಿ 30) **ಶಮಪರಾ** : ಅಲ್ಲಿ ಸ್ನಾನ ಮಾಡುವುದರಿಂದ ಹಾಗೂ ನೈವೇದ್ಯ ಮಾಡುವುದರಿಂದ ಸಾವಿರಕ್ಕೂ ಹೆಚ್ಚು 31) **ರುದ್ರಾಸ್ಪದಮ್** : ಅಲ್ಲಿರುವ ಮಹಾದೇವನ ದರ್ಶನದಿಂದ ಅಶ್ವಮೇಧಯಾಗ ಫಲ. 32) **ಮಣಿಮಾನ್ ಪರ್ವತ** : ಅಲ್ಲಿ ಮೂರು ರಾತ್ರಿಗಳ ಉಪವಾಸದಿಂದ ಜ್ಯೋತಿಷ್ಟೋಮಯಾಗದ ಫಲ. 33) **ದೇವಿಕಾನದಿ** : ಅಲ್ಲಿ ಮಹಾದೇವನ ಸ್ಥಾನವಿದೆ. ಅಲ್ಲಿನ ಸ್ನಾನ ಮಹಾದೇವದರ್ಶನಗಳಿಂದ ಹಾಗೂ ಮಹಾದೇವನಿಗೆ ಚರುವನ್ನು ನೈವೇದ್ಯ ಮಾಡುವುದರಿಂದ ಸರ್ವಕಾಮ ಪ್ರಾಪ್ತಿ ಹಾಗೂ ದೇವಲೋಕ ಪ್ರಾಪ್ತಿ. ಇಲ್ಲಿರುವ ರುದ್ರತೀರ್ಥದ ಸ್ನಾನದಿಂದ ಸಿದ್ದಿ ಪ್ರಾಪ್ತಿ. ಹೀಗೆಯೇ ಇಲ್ಲಿರುವ ಯಜನ ಯಾಜನ ಬ್ರಹ್ಮವಾಲುಕ ಪುಷ್ಪನ್ಯಾಸ ಮುಂತಾದ ತೀರ್ಥಗಳೂ ಇವೆ. ಅಲ್ಲಿ ಸ್ನಾನ ಮಾಡುವುದರಿಂದ ಮರಣಭಯವಿನಾಶ 34)**ದೀರ್ಘ ಸತ್ರಮ್** : ಅಲ್ಲಿಗೆ ಹೋಗುವುದೇ ದೀರ್ಘಸತ್ರ ಫಲಪ್ರಾಪ್ತಿಯುಂಟಾಗುವುದು. 35) **ವಿನಶನಮ್** : ಮೇರು ಪರ್ವತದ ಹಿಂಬದಿಯಲ್ಲಿ ಅಡಗಿರುವ ಸರಸ್ವತೀ ನದಿ. ಅಲ್ಲಿ ಸ್ನಾನ ಮಾಡುವುದರಿಂದ ವಾಜಪೇಯ ಫಲ. 36)**ಶಶಪಾನ ತೀರ್ಥಮ್** : ಅಲ್ಲಿ ಸ್ನಾನ ಮಾಡುವುದರಿಂದ ಶಿವನ ಕಾಂತಿ ಮತ್ತು ಗೋಸಹಸ್ರದಾನ ಫಲ ಪ್ರಾಪ್ತಿ. 37) **ಕುಮಾರಕೋಟಿ** : ಅಲ್ಲಿ ಸ್ನಾನ ಮಾಡುವುದರಿಂದ ಪಿತೃ, ದೇವತರ್ಪಣಗಳಿಂದ ಗವಾಮಯ ಯಾಗ ಫಲ ಪ್ರಾಪ್ತಿ. 38) **ರುದ್ರಕೋಟಿ** : ಅಲ್ಲಿ ಒಮ್ಮೆ ಒಂದು ಕೋಟಿ ಋಷಿಗಳು ಸೇರಿದ್ದರು. ಅವರೆಲ್ಲರೂ ನಾಮುಂದು ತಾಮುಂದೆಂದು ರುದ್ರನನ್ನು ನೋಡಬಯಸುವವರಿಗೆ ರುದ್ರದೇವನು ಅವರ ಸಂತೊಕ್ಕಾಗಿ ಒಂದು ಕೋಟಿ ಮೂರ್ತಿಗಳಾಗಿ ದರ್ಶನಕೊಟ್ಟ ಕ್ಷೇತ್ರ. ಅಲ್ಲಿ ಸ್ನಾನ ಮಾಡುವುದರಿಂದ ಅಶ್ವಮೇಧ ಫಲ ಪ್ರಾಪ್ತಿ ಹಾಗೂ ಕುಲೋದ್ಧಾರವಾಗುವುದು. 39) **ಸರಸ್ವತೀ ಸಂಗಮ** : ಅಲ್ಲಿ ಜನಾರ್ದನನು ನೆಲೆಸಿರುತ್ತಾನೆ ಅಲ್ಲಿ ಸ್ನಾನ ಮಾಡಿದರೆ ಬಹುಸುವರ್ಣಯಾಗ ಫಲಪ್ರಾಪ್ತಿ. 40) **ಸಯಾವಸಾನಮ್** : ಅಲ್ಲಿಗೆ ಹೋಗುವುದೇ ಗೋಸಹಸ್ರದಾನ ಫಲಪ್ರಾಪ್ತಿ. 41) **ಕುರುಕ್ಷೇತ್ರಮ್** : ಅಲ್ಲಿಗೆ ಹೋಗುವುದರಿಂದ ಸರ್ವಪಾಪಕ್ಷಯ. 42) **ವಿಷ್ಣುಸ್ಥಾನಮ್** : ಅಲ್ಲಿ ಸ್ನಾನ ಹಾಗೂ ವಿಷ್ಣುವಿನ ದರ್ಶನಗಳಿಂದ ಅಶ್ವಮೇಧ ಫಲಪ್ರಾಪ್ತಿ ಹಾಗೂ ವಿಷ್ಣು ಲೋಕಪ್ರಾಪ್ತಿ. 43) **ಪೃಥಿವೀತೀರ್ಥಮ್** : ಅಲ್ಲಿನ ಸ್ನಾನದಿಂದ ಗೋಸಹಸ್ರದಾನ ಫಲ. 44) **ಶಾಲೂಕಿನೀ ತೀರ್ಥಮ್** : ಅಲ್ಲಿ ಸ್ನಾನ ಮಾಡುವುದರಿಂದ ಗೋಸಹಸ್ರದಾನ ಫಲ 46) **ಅವರ್ಣಕದ್ವಾರಫಾಲ** : ಅಲ್ಲಿ ಒಂದು ರಾತ್ರಿ ವಾಸ ಮಾಡುವುದರಿಂದ ಗೋಸಹಸ್ರದಾನ ಫಲಪ್ರಾಪ್ತಿ. 47) **ಪಂಚಗಮ್** : ಅಲ್ಲಿನ ಕೋಟಿತೀರ್ಥದಲ್ಲಿ ಸ್ನಾನ ಮಾಡುವುದರಿಂದ ಅಶ್ವಮೇಧ ಫಲ 48) **ಅಶ್ವಿನೀ ತೀರ್ಥಮ್** : ಅಲ್ಲಿ ರೂಪ ಪ್ರಾಪ್ತಿಯಾಗುವುದು. 49) **ಅಶ್ವಿನೀ ತೀರ್ಥಮ್** : ಇಲ್ಲಿ ವಿಷ್ಣು ದೇವರು ವರಾಹ ರೂಪದಲ್ಲಿ ನೆಲೆಸಿರುವರು ಅಲ್ಲಿ ಸ್ನಾನ ಮಾಡಿದರೆ ಅಗ್ನಿಷ್ಟೋಮ ಫಲ ಪ್ರಾಪ್ತಿ. 50) **ಜಯಂತ್ಯಮ್** : ಅಲ್ಲಿರುವ ಸೋಮತೀರ್ಥದಲ್ಲಿ ಸ್ನಾನ ಮಾಡುವುದರಿಂದ ರಾಜಸೂಯ ಫಲಪ್ರಾಪ್ತಿ. 51) **ಏಕಹಂಸ ತೀರ್ಥಮ್** : ಅಲ್ಲಿ

ಗೋಸಹಸ್ರದಾನ ಫಲ ಪ್ರಾಪ್ತಿ. 52) **ಕೃತಶೌಚಮ್**: ಅಲ್ಲಿಗೆ ಹೋಗುವುದೇ ಪುಂಡರೀಕಯಜ್ಞ ಫಲಪ್ರಾಪ್ತಿ. 53) **ಮಂಜಾವಟಿ ತೀರ್ಥಮ್** : ಅದು ಮಹಾದೇವನ ಸ್ಥಾನ. ಅಲ್ಲಿ ಒಂದು ರಾತ್ರಿಯ ವಾಸದಿಂದ ಗಾಣಪತ್ಯ ಪ್ರಾಪ್ತಿ. ಅಲ್ಲಿಯೇ ವಿಶಾಲಾಕ್ಷಿಯ ದರ್ಶನದಿಂದ ಸರ್ವಕಾಮ ಪ್ರಾಪ್ತಿ. 54) **ಜಾಮದಗ್ನ್ಯಾಹೃತ ಪುಷ್ಕರತೀರ್ಥ** : ಅಲ್ಲಿ ಸ್ನಾನ, ಪೂಜೆಗಳನ್ನು ಮಾಡುವುದರಿಂದ ಅಶ್ವಮೇಧಯಾಗಫಲ ಪ್ರಾಪ್ತಿ. 55) **ರಾಮಹ್ರದ** : ಪರಶುರಾಮನು ಕ್ಷತ್ರಿಯರನ್ನು ಸಂಹರಿಸಿ ಅವರ ರಕ್ತದಿಂದ ಐದು ಸರೋವರಗಳನ್ನು ನಿರ್ಮಿಸಿದನು. ಅಲ್ಲಿ ಸ್ನಾನ ತರ್ಪಣಗಳನ್ನು ಮಾಡುವುದರಿಂದ ಪಿತೃಗಣದಿಂದ ವರ ಪ್ರಾಪ್ತಿ.

ಬಹುಸುವರ್ಣಯಜ್ಞಫಲಪ್ರಾಪ್ತಿ.

56) **ವಂಶಮೂಲಕಮ್** : ಅಲ್ಲಿ ಸ್ನಾನ ಮಾಡುವುದರಿಂದ ಸ್ವಕುಲದ ಉದ್ಧಾರ 57) **ಕಾಯಶೋಧನಮ್** : ಅಲ್ಲಿ ಸ್ನಾನ ಮಾಡಿದರೆ ದೇಹಶುದ್ಧಿಯಾಗುವುದು. 58) **ಲೋಕೋದ್ಧಾರ** : ಅಲ್ಲಿ ಸ್ನಾನವನ್ನು ಮಾಡುವುದರಿಂದ ಸ್ವಲೋಕೋದ್ಧಾರವಾಗುವುದು. 59) **ಶ್ರೀತೀರ್ಥಮ್** : ಅಲ್ಲಿಗೆ ಹೋಗುವುದರಿಂದಲೇ ಉತ್ತಮವಾದ ಸಂಪತ್ ಪ್ರಾಪ್ತಿ. 60) **ಕಪಿಲಾತೀರ್ಥಮ್** : ಅಲ್ಲಿಯ ಸ್ನಾನದಿಂದ ಮತ್ತು ದೇವ ಪಿತೃಗಳ ಪೂಜೆಯಿಂದ ಒಂದು ಸಾವಿರ ಕಪಿಲಾದೇನುಗಳ ದಾನದ ಫಲಪ್ರಾಪ್ತಿ. 61) **ಸೂರ್ಯತೀರ್ಥಮ್** : ಅಲ್ಲಿ ಸ್ನಾನ, ಉಪವಾಸ, ಪಿತೃತರ್ಪಣಗಳಿಂದ ಅಗ್ನಿಷ್ಟೋಮಫಲ ಹಾಗು ದೇವಲೋಕ ಪ್ರಾಪ್ತಿ. 62) **ಗವಾಂಭವನ** : ಅಲ್ಲಿ ಸ್ನಾನದಿಂದ ಗೋಸಹಸ್ರದಾನ ಫಲ.

63) **ಶಂಖಿನೀತೀರ್ಥಮ್**: ಅಲ್ಲಿ ಸ್ನಾನದಿಂದ ಅನಂತ ಫಲ 64) **ಬ್ರಹ್ಮಾವರ್ತ** : ಅಲ್ಲಿ ಸ್ನಾನಾಚರಣೆಯಿಂದ ಬ್ರಹ್ಮಲೋಕ ಪ್ರಾಪ್ತಿ. 65) **ಸುತೀರ್ಥಕಮ್** : ಅಲ್ಲಿ ಪಿತೃದೇವತೆಗಳ ಸಾನಿಧ್ಯವಿದೆ. ಸ್ನಾನ ಮಾಡುವುದರಿಂದ ಹಾಗೂ ಪಿತೃದೇವರನ್ನು ಪೂಜಿಸುವುದರಿಂದ ಪಿತೃಲೋಕ ಪ್ರಾಪ್ತಿ ಹಾಗೂ ಅಶ್ವಮೇಧ ಫಲಪ್ರಾಪ್ತಿ.

66) **ಅಂಬುಮತೀ** : ಅಲ್ಲಿರುವ ಕಾಶೀಶ್ವರ ತೀರ್ಥದಲ್ಲಿ ಸ್ನಾನ ಮಾಡುವುದರಿಂದ ಸರ್ವರೋಗ ನಾಶ, ಬ್ರಹ್ಮಲೋಕದ ಪ್ರಾಪ್ತಿ. ಅಲ್ಲೇ ಇರುವ ಮಾತೃತೀರ್ಥದಲ್ಲಿ ಸ್ನಾನ ಮಾಡುವುದರಿಂದ ಸಂತಾನ ವೃದ್ಧಿ ಹಾಗೂ ಶ್ರೀಪ್ರಾಪ್ತಿಯುಂಟಾಗುವುದು. 67) **ಶೀತವನಮ್** : ಅಲ್ಲಿ ಕೇಶಗಳನ್ನು ಬಿಡುವುದರಿಂದ ಪವಿತ್ರತೆ. 68) **ಶ್ವಾನಲೋಭಾಪಹ** : ಅಲ್ಲಿನ ಸ್ನಾನದಿಂದ ಪರಮಗತಿಪ್ರಾಪ್ತಿ. 69) **ದಶಾಶ್ವಮೇಧಿಕಮ್** : ಅಲ್ಲಿನ ಸ್ನಾನದಿಂದ ಶಾಶ್ವತಗತಿ ಪ್ರಾಪ್ತಿ. 70) **ಮಾನುಷತೀರ್ಥಮ್** : ಅಲ್ಲಿ ಬೇಡರಿಂದ ಪೀಡಿಸಲ್ಪಟ್ಟ ಕೃಷ್ಣಮೃಗಗಳು ಸ್ನಾನಮಾಡಿ ಮಾನುಷತ್ವವನ್ನು ಹೊಂದಿದವು ಅಂತಹ ಪುಣ್ಯತೀರ್ಥದಲ್ಲಿನ ಸ್ನಾನದಿಂದ ಸರ್ವಪಾಪಗಳಿಂದ ಮುಕ್ತಿ ಹಾಗೂ ಸ್ವರ್ಗವಾಸ. 71) **ಆಪಗಾನದೀ** : ಅಲ್ಲಿ ದೇವ ಪಿತೃಗಳನ್ನುದ್ದೇಶಿಸಿ ಒಬ್ಬ ಬ್ರಾಹ್ಮಣನ ಭೋಜನದಿಂದ ಕೋಟಿ ಬ್ರಾಹ್ಮಣರಿಗೆ ಅನ್ನದಾನ ಮಾಡಿದ ಪುಣ್ಯ ಸಿದ್ಧಿಸುವುದು. 72) **ಪ್ಲಕ್ಷೋಡುಂಬರ** : ಅಲ್ಲಿ ಬ್ರಹ್ಮ ನೆಲೆಸಿರುವನು ಅಲ್ಲಿರುವ ಸಪ್ತರ್ಷಿಕುಂಡದಲ್ಲಿ ಸ್ನಾನವನ್ನಾಚರಿಸಿದರೆ ಸರ್ವಪಾಪಗಳನಾಶ, ಬ್ರಹ್ಮಲೋಕ ಪ್ರಾಪ್ತಿಯೂ ಉಂಟಾಗುವುದು. 73) **ಕಪಿಲಕೇದಾರಮ್** : ಇಲ್ಲಿ ತಪಸ್ಸಿನಿಂದ ಸರ್ವಪಾಪಗಳಿಂದ ಮುಕ್ತನಾಗಿ ಅಂತರ್ಧಾನ ಪ್ರಾಪ್ತಿಯಾಗುವುದು. 74) **ಸರಕಮ್** : ಅಲ್ಲಿರುವ ವೃಕ್ಷಧ್ವಜನ ಪ್ರಣಾಮದಿಂದ ಸರ್ವಕಾಮಗಳು ಹಾಗೂ ಶಿವಲೋಕದ ಪ್ರಾಪ್ತಿ.

75) **ಇಲ್ಲಾಸ್ಪದಮ್** : ಅಲ್ಲಿ ಸ್ನಾನ ಮಾಡುವುದರಿಂದ ದೇವ ಹಾಗೂ ಪಿತೃಗಳ ಆರಾಧನೆಯಿಂದ ದುರ್ಗತಿ ವಿನಾಶ ಹಾಗೂ ವಾಜಪೇಯ ಯಾಗದ ಫಲ ಪ್ರಾಪ್ತಿಯಾಗುವುದು. 76) **ಕಿಂದಾನಮ್** : ಅಲ್ಲಿನ ಸ್ನಾನದಿಂದ ಅಪ್ರಮೇಯದಾನದ ಫಲ. 77) **ಕಿಂಜಪ್ಯಮ್** : ಅಲ್ಲಿನ ಸ್ನಾನದಿಂದ ಅಪ್ರಮೇಯ(ವಿಷ್ಣು) ನ ಜಪ ಫಲ. 78) **ಅನಾಜನ್ಮತೀರ್ಥ** : ಮತ್ತು ಅದು ನಾರದರ ಸ್ಥಾನ ಅಲ್ಲಿ ಪ್ರಾಣತ್ಯಾಗ ಮಾಡಿದರೆ ಅನುತ್ತಮ ಲೋಕಪ್ರಾಪ್ತಿ. 79) **ವೈತರಣೀ ನದೀ** : ಅಲ್ಲಿ ಸ್ನಾನ ಹಾಗೂ ಶಿವ ಪೂಜೆಗಳಿಂದ ಸರ್ವಪಾಪಗಳಿಂದ ಬಿಡುಗಡೆ ಹೊಂದುವನು. 80) **ಫಲಕೀ ತೀರ್ಥಮ್** : ಇಲ್ಲಿನ ಫಲಕೀ ವನದಲ್ಲಿ ದೇವತೆಗಳು ತಪಸ್ಸನ್ನು ಆಚರಿಸುತ್ತಾರೆ. 81) **ಮಿಶ್ರಕಮ್** : ಅಲ್ಲಿ ನಾರದರು ಎಲ್ಲಾ ತೀರ್ಥಗಳ ಮಿಶ್ರಣ ಮಾಡಿದ್ದಾರೆ. ಅಲ್ಲಿನ ಸ್ನಾನದಿಂದ ಸಕಲ ತೀರ್ಥಗಳ ಸ್ನಾನದ ಫಲ ಪ್ರಾಪ್ತಿಯಾಗುವುದು. 82) **ಮಧುವಟೀ** : ಅದು ದೇವೀಸ್ಥಾನ. ಅಲ್ಲಿ ಸ್ನಾನವನ್ನಾಚರಿಸುವುದರಿಂದ ಹಾಗೂ ದೇವಪಿತೃಕಾರ್ಯಗಳಿಂದ ಗೋಸಹಸ್ರದಾನ ಫಲಪ್ರಾಪ್ತಿ. 83) **ಕೌಶಿಕೀದೃಷದ್ವತೀ ಸಂಗಮ** : ಅಲ್ಲಿನ ಸ್ನಾನದಿಂದ ಪಾಪ ಮುಕ್ತಿ. 84) **ಕಿಂದತ್ತರೂಪ** : ಅಲ್ಲಿ ತಿಲದಾನದಿಂದ

ಋಣತ್ರಯದಿಂದ ಮುಕ್ತನಾಗಿ ಪರಮಸಿದ್ಧಿಯನ್ನು ಪಡೆಯುವನು. 85) **ವೇದೀತೀರ್ಥಮ್** : ಅಲ್ಲಿ ಸ್ನಾನ ಮಾಡಿದರೆ ಗೋಸಹಸ್ರದಾನ ಫಲಪ್ರಾಪ್ತಿ. 86) **ಅಹಃಸುದಿನಂ** : ಇವು ಎರಡು ತೀರ್ಥಗಳು. ಇಲ್ಲಿ ಸ್ನಾನವನ್ನಾಚರಿಸಿದರೆ ಸೂರ್ಯಲೋಕ ಪ್ರಾಪ್ತಿ. 87) **ದೃಶಧೂಮ** : ಅಲ್ಲಿ ವಿಷ್ಣು ಪದದಲ್ಲಿ ಸ್ನಾನ ಹಾಗೂ ವಾಮನ ಪೂಜೆಯಿಂದ ಸರ್ವಪಾಪಗಳಿಂದ ಮುಕ್ತನಾಗಿ ಸೂರ್ಯಲೋಕವನ್ನು ಹೊಂದುತ್ತಾನೆ. 88) **ಸವಸ್ವತೀ ತೀರ್ಥ–ಶ್ರೀಕುಂಜಮ್** : ಅಲ್ಲಿನ ಸ್ನಾನದಿಂದ ಸ್ವರ್ಗವಾಸ. 89) **ನೈಮಿಷಕುಂಜಮ್**: ಅಲ್ಲಿನ ಸ್ನಾನದಿಂದ ಅಶ್ವಮೇಧಯಾಗ ಫಲಪ್ರಾಪ್ತಿ. 90) **ಕನ್ಯಾತೀರ್ಥಮ್** : ಅಲ್ಲಿನ ಸ್ನಾನದಿಂದ ಜ್ಯೋತಿಷ್ಟೋಮ ಫಲ ಪ್ರಾಪ್ತಿ. 91) **ಬ್ರಹ್ಮಸ್ಥಾನಮ್** : ಅಲ್ಲಿ ಸ್ನಾನ ಮಾಡಿದರೆ ಶೂದ್ರನೂ ಕೂಡ ಬ್ರಾಹ್ಮಣತ್ವವನ್ನು ಹಾಗೂ ಬ್ರಾಹ್ಮಣನಿಗೆ ಪರಮಗತಿ ಲಭಿಸುವುದು. 92) **ಸೋಮತೀರ್ಥಮ್** : ಅಲ್ಲಿ ಸ್ನಾನ ಮಾಡಿದರೆ ಸೋಮಯಾಗ ಫಲಪ್ರಾಪ್ತಿಯಾಗುವುದು. 93) **ಸಪ್ತಸಾರಸ್ವತ ತೀರ್ಥಮ್** : ಇಲ್ಲಿ ಸ್ನಾನ ಜಪಗಳಿಂದ ಬ್ರಹ್ಮಲೋಕ ಪ್ರಾಪ್ತಿಯಾಗುವುದು. 94) **ಔಶನಸಕಮ್** : ಅಲ್ಲಿರುವ ಕಾರ್ತಿಕೇಯನ ಸಾನ್ನಿಧಾನದಲ್ಲಿ ಮೂರುದಿನಗಳ ವಾಸ. 95) **ಕಪಾಲಮೋಚನಮ್** : ಅಲ್ಲಿ ಸ್ನಾನ ಮಾಡಿದರೆ ಸರ್ವಪಾಪನಾಶ. 96) **ಅಗ್ನಿ ತೀರ್ಥಮ್** : ಅಲ್ಲಿ ಸ್ನಾನ ಮಾಡಿದರೆ ವಹ್ನಿಲೋಕ ಪ್ರಾಪ್ತಿ ಹಾಗೂ ಕುಲೋದ್ಧಾರ. 97) **ವಿಶ್ವಾಮಿತ್ರ ತೀರ್ಥಮ್** : ಇಲ್ಲಿ ಸ್ನಾನದಿಂದ ಬ್ರಹ್ಮಣ್ಯಪ್ರಾಪ್ತಿಯಾಗುವುದು. 98) **ಬ್ರಹ್ಮಯೋನಿ** : ಇಲ್ಲಿನ ಸ್ನಾನದಿಂದ ಬ್ರಹ್ಮಲೋಕದಲ್ಲಿ ವಾಸ. 99) **ಪೃಥೂದಕಮ್** : ಅದು ಕಾರ್ತಿಕೇಯನ ಸ್ಥಾನ. ಅಲ್ಲಿ ಸ್ನಾನವನ್ನಾಚರಿಸಿದರೆ ಅಶ್ವಮೇಧಫಲಪ್ರಾಪ್ತಿ ಹಾಗೂ ಪಾಪಿಗಳಿಗೂ ಸ್ವರ್ಗಪ್ರಾಪ್ತಿ. 100) **ಮಧುಸ್ರವಮ್** : ಅಲ್ಲಿ ಸ್ನಾನ ಮಾಡಿದರೆ ಗೋಸಹಸ್ರದಾನ ಫಲಪ್ರಾಪ್ತಿ.

101) **ಸರಸ್ವತ್ಯರುಣಾ ಸಂಗಮ** : ಅಲ್ಲಿ ಮೂರು ರಾತ್ರಿಗಳ ಉಪವಾಸ ಸ್ನಾನಗಳಿಂದ ಬ್ರಹ್ಮಹತ್ಯಾಪಾಪನಾಶ. 102) **ಅವಕೀರ್ಣಮ್** : ಅದು ದರ್ಭಿಮುನಿಗಳಿಂದ ನಿರ್ಮಿತವಾಗಿದೆ. ದರ್ಭಿ ಮುನಿಯು ನಾಲ್ಕು ಸಮುದ್ರಗಳನ್ನು ತಂದಿರುವುದರಿಂದ ಇದು ಪವಿತ್ರ ತೀರ್ಥ. ಇಲ್ಲಿ ಸ್ನಾನ ಮಾಡಿದರೆ ದುರ್ಗತಿ ವಿನಾಶ. 103 & 104) **ಶತ ಸಹಸ್ರಕಮ್, ಸಾಹಸ್ರಕಮ್** : ಈ ಎರಡೂ ತೀರ್ಥಗಳಲ್ಲಿ ಸಹಸ್ರದಾನ ಫಲಪ್ರಾಪ್ತಿ.

105) **ರೇಣುಕಾ ತೀರ್ಥಮ್** : ಇಲ್ಲಿನ ಸ್ನಾನ ಹಾಗೂ ಪಿತೃ,ದೇವ ಪೂಜೆಗಳಿಂದ ಸರ್ವಪಾಪನಾಶ ಹಾಗೂ ಅಗ್ನಿಷ್ಟೋಮ ಫಲಪ್ರಾಪ್ತಿ. 106) **ವಿಮೋಚನಮ್** : ಅಲ್ಲಿನ ಸ್ನಾನದಿಂದ ಸರ್ವಪ್ರತಿಗ್ರಹಕೃತ ಪಾಪನಾಶ. 107) **ಪಂಚವಟೀ ತೀರ್ಥಮ್** : ಅಲ್ಲಿಗೆ ಹೋಗುವ ಮಾತ್ರದಿಂದಲೇ ಮಹಾಪುಣ್ಯ ಪ್ರಾಪ್ತಿ ಹಾಗು ಸ್ವರ್ಗಗಮನ. 108) **ತೈಜಸಮ್** : ಈ ಕ್ಷೇತ್ರ ಬ್ರಹ್ಮ ಮುಂತಾದ ದೇವತೆಗಳಿಂದ ಕಾರ್ತಿಕೇಯನು ಸೇನಾಪತಿಯಾಗಿ ಅಭಿಷಿಕ್ತಗೊಂಡನು. 109) **ಕುರುತೀರ್ಥಮ್** : ಅಲ್ಲಿನ ಸ್ನಾನದಿಂದ ರುದ್ರಲೋಕ ಪ್ರಾಪ್ತಿ. 110) **ಸ್ವರ್ಗದ್ವಾರಮ್** : ಅಲ್ಲಿಗೆ ಹೋಗುವುದರಿಂದ ಅಗ್ನಿಷ್ಟೋಮ ಫಲವನ್ನು ಪಡೆದು ಸ್ವರ್ಗವನ್ನು ಹೊಂದುವನು. 111) **ಅನರಕಮ್** : ಅಲ್ಲಿನ ಸ್ನಾನದಿಂದ ದುರ್ಗತಿ ನಾಶ. 112) **ಅಸ್ಥಿಪುರಮ್** : ಅಲ್ಲಿ ಪಿತೃದೇವ ತರ್ಪಣಗಳಿಂದ ಅಗ್ನಿಷ್ಟೋಮ ಫಲ ಪ್ರಾಪ್ತಿ. 113) **ಗಂಗಾಹ್ರದಕೂಪ** : ಅಲ್ಲಿ ಸ್ನಾನ ಮಾಡಿದರೆ ಬ್ರಹ್ಮಲೋಕ ಪ್ರಾಪ್ತಿ. 114) **ಸ್ಥಾಣುವಟ ತೀರ್ಥಮ್** : ಸ್ನಾನ ಹಾಗೂ ಒಂದು ರಾತ್ರಿಯ ವಾಸದಿಂದ ರುದ್ರಲೋಕ ಪ್ರಾಪ್ತಿಯಾಗುವುದು. 115) **ಬದರೀ ಪಾಚನಮ್** : ಅದು ವಶಿಷ್ಟಾಶ್ರಮ. ಅಲ್ಲಿ ಮೂರು ರಾತ್ರಿಗಳ ಉಪವಾಸದಿಂದ ಅಶ್ವಮೇಧಯಾಗದ ಫಲವನ್ನು ಹೊಂದಿ ಹರಲೋಕ ಪ್ರಾಪ್ತಿಯಾಗುವುದು. 116) **ಇಂದ್ರ ಮಾರ್ಗಮ್** : ಅಲ್ಲಿ ಹಗಲು ರಾತ್ರಿಯ ಉಪವಾಸದಿಂದ ಇಂದ್ರಲೋಕ ಪ್ರಾಪ್ತಿಯಾಗುವುದು. 117) **ಆದಿತ್ಯಾಶ್ರಮ** : ಅಲ್ಲಿ ಸ್ನಾನ ಮಾಡಿದರೆ ಸೂರ್ಯಲೋಕ ಪ್ರಾಪ್ತಿ. 118) **ಸೋಮತೀರ್ಥಮ್** : ಅಲ್ಲಿನ ಸ್ನಾನದಿಂದ ಸೋಮಲೋಕ ಪ್ರಾಪ್ತಿಯಾಗುವುದು. 119) **ಕನ್ಯಾಶ್ರಮ** : ಅಲ್ಲಿ ಮೂರು ರಾತ್ರಿಗಳ ವಾಸ ಸುಖ ಪ್ರಾಪ್ತಿ ಹಾಗೂ ಬ್ರಹ್ಮಲೋಕ ಪ್ರಾಪ್ತಿ. 120) **ದಧೀಚತೀರ್ಥಮ್** : ಅಲ್ಲಿ ಸ್ನಾನ ಮಾಡುವುದರಿಂದ ವಾಜಪೇಯ ಫಲಪ್ರಾಪ್ತಿ. 121) **ಸನ್ನಿಹಿತಾತೀರ್ಥಮ್** : ಅಲ್ಲಿ ಅಮಾವಾಸ್ಯೆಯಲ್ಲಿ ಸಕಲತೀರ್ಥಗಳು ಬಂದು ಸೇರುತ್ತವೆ. ಸೂರ್ಯಗ್ರಹಣದಲ್ಲಿ ಸ್ನಾನ ಮಾಡಿದರೆ ಶತಾಶ್ವಮೇಧಯಾಗ ಫಲಪ್ರಾಪ್ತಿ ಸ್ನಾನ ದಾನಗಳಿಂದ ಸ್ವರ್ಗಲೋಕ ಪ್ರಾಪ್ತಿ. ಅಲ್ಲಿ ಅಮಾವಾಸ್ಯೆಯ ಸೂರ್ಯಗ್ರಹಣದಲ್ಲಿ ಸ್ನಾನಶ್ರಾದ್ಧಗಳಿಂದ ಸಾವಿರ ಅಶ್ವಮೇಧಯಾಗಗಳ ಫಲಪ್ರಾಪ್ತಿ. ಸ್ನಾನ ಮಾತ್ರದಿಂದಲೇ ಸರ್ವಪಾಪನಾಶ ಹಾಗೂ ಬ್ರಹ್ಮಲೋಕಪ್ರಾಪ್ತಿ. 122) **ಗಂಗಾಹ್ರದ** : ಅಲ್ಲಿ ಸ್ನಾನ ಮಾಡಿದರೆ

ರಾಜಸೂಯ, ಅಶ್ವಮೇಧಯಾಗಗಳ ಫಲಪ್ರಾಪ್ತಿ. 123) **ಕುರುಕ್ಷೇತ್ರಮ್** : ಅದು ತರತುಕಾರಂತುಕರ ಹಾಗೂ ರಾಮಹ್ರದ ಮಚಕ್ರುಕಗಳ ಮಧ್ಯದಲ್ಲಿರುವ ಸ್ಯಮಂತ ಪಂಚಕ. ಇದು ಬ್ರಹ್ಮನ ಉತ್ತರವೇದಿ.

124) **ಧರ್ಮತೀರ್ಥಮ್** : ಅಲ್ಲಿ ಸ್ನಾನದಿಂದ ಸಪ್ತಕುಲಗಳ ಉದ್ಧಾರ.

125) **ಕಾರಾಪಚನಮ್** : ಅಲ್ಲಿ ಸ್ನಾನದಿಂದ ಅಗ್ನಿಷ್ಟೋಮ ಫಲ ಹಾಗೂ ವಿಷ್ಣು ಲೋಕ ಪ್ರಾಪ್ತಿ. 126) **ಸೌಗಣಿಕವನಮ್** : ಇಲ್ಲಿ ಬ್ರಹ್ಮಾದಿದೇವತೆಗಳು ಪ್ರತಿನಿತ್ಯ ಬರುತ್ತಾರೆ ಇದರ ಪ್ರವೇಶ ಮಾತ್ರದಿಂದಲೇ ಸರ್ವಪಾಪನಾಶ. 127) **ಪ್ಲಕ್ಷಸರಸ್ವತೀ** : ಅಲ್ಲಿ ಸ್ನಾನ ಪಿತೃ,ದೇವ ಪೂಜೆಗಳಿಂದ ಅಶ್ವಮೇಧಫಲಪ್ರಾಪ್ತಿ.

128) **ಈಶಾನಾಧ್ಯಷಿತಮ್** : ಇಲ್ಲಿ ಶಾಕಾಂಬರೀ ದೇವಿಯ ಕ್ಷೇತ್ರ. ಮೂರು ರಾತ್ರಿಗಳ ಉಪವಾಸ ಶಾಕಾಹಾರಗಳಿಂದ ಹನ್ನೆರಡು ವರ್ಷಗಳಿಗೆ ಸಾಕಾಗುವ ಶಾಕಾಹಾರ ಫಲಪ್ರಾಪ್ತಿ. 129) **ಸವರ್ಣಾಖ್ಯಮ್** : ಅಲ್ಲಿ ಶಿವನು ನೆಲೆಸಿರುವನು ಅವನ ಪೂಜೆಯಿಂದ ಅಶ್ವಮೇಧದ ಫಲ ಹಾಗೂ ಗಾಣಪತ್ಯ ಪ್ರಾಪ್ತಿಯುಂಟಾಗುವುದು. 130) **ಧೂಮಾವತೀ** : ಅಲ್ಲಿ ಮೂರು ರಾತ್ರಿಗಳ ಉಪವಾಸದಿಂದ ಮನಸ್ಕಾಮ ಪ್ರಾಪ್ತಿ. 131) **ಧೂಮಾವತಿಯ ದಕ್ಷಿಣ ಭಾಗದಲ್ಲಿರುವ ರಥಾವರ್ತ** : ಅಲ್ಲಿ ಹತ್ತುವುದರಿಂದ ಮಹಾದೇವನ ಪ್ರಸಾದದಿಂದ ಪರಮಗತಿಪ್ರಾಪ್ತಿ. 132) **ಧಾರಾ** : ಅಲ್ಲಿ ಸ್ನಾನದಿಂದ ದು:ಖನಾಶ. 133) **ಗಂಗಾದ್ವಾರಮ್** : ಅಲ್ಲಿರುವ ಕೋಟಿ ತೀರ್ಥದಲ್ಲಿ ಸ್ನಾನ ಮಾಡುವುದರಿಂದ ಪುಂಡರೀಕಯಾಗ ಫಲ ಪ್ರಾಪ್ತಿ, ಕುಲೋದ್ಧಾರ ಹಾಗೂ ಒಂದು ರಾತ್ರಿಯ ವಾಸದಿಂದ ಗೋಸಹಸ್ರದಾನ ಫಲ ಪ್ರಾಪ್ತಿ. 134) **ಸಪ್ತಗಂಗಮ್** : 135) **ತ್ರಿಗಂಗಮ್** : 136) **ಸಪ್ತಾವರ್ತ** : ಇವುಗಳಲ್ಲಿ ಪಿತೃದೇವತರ್ಪಣಗಳಿಂದ ಪುಣ್ಯಲೋಕ ಪ್ರಾಪ್ತಿ. 137) **ಗಂಗಾಯಮುನಾ ಸಂಗಮ** : ಅಲ್ಲಿ ಸ್ನಾನದಿಂದ ದಶಾಶ್ವಮೇಧ ಯಾಗ ಫಲಪ್ರಾಪ್ತಿ ಹಾಗೂ ಕುಲೋದ್ಧಾರ. 138) **ಕನಖಿಲ** : ಅಲ್ಲಿ ಸ್ನಾನ, ಮೂರು ರಾತ್ರಿಗಳ ಉಪವಾಸದಿಂದ ಅಶ್ವಮೇಧಯಾಗ, ಬ್ರಹ್ಮಲೋಕಗಳ ಪ್ರಾಪ್ತಿಯಾಗುವುದು. 139) **ಕಪಿಲಾವಟ** : ಅಲ್ಲಿ ಒಂದು ರಾತ್ರಿಯ ಉಪವಾಸದಿಂದ ಗೋಸಹಸ್ರದಾನ ಫಲಪ್ರಾಪ್ತಿ. 140) **ಕಪಿಲನಾಗರಾಜ:** ಅಲ್ಲಿಯ ಸ್ನಾನದಿಂದ ಸಾವಿರ ಕಂದುಬಣ್ಣದ ಗೋಗಳದಾನದ ಫಲಪ್ರಾಪ್ತಿಯಾಗುವುದು. 141) **ಲಲಿತಿಕಾ:** ಅದು ಶಾಂತನುತೀರ್ಥ. ಅಲ್ಲಿ ಸ್ನಾನ ಮಾಡಿದರೆ ದುರ್ಗತಿನಾಶ. 142) **ಸುಗಂಧಾ** : ಅಲ್ಲಿಗೆ ಹೋಗುವುದರಿಂದ ಸಕಲ ಪಾಪಗಳಿಂದ ಮುಕ್ತನಾಗಿ ಬ್ರಹ್ಮಲೋಕ ಪ್ರಾಪ್ತಿಯುಂಟಾಗುವುದು. 143) **ರುದ್ರಾವರ್ತ** : ಅಲ್ಲಿ ಸ್ನಾನ ಮಾಡುವುದರಿಂದ ಬ್ರಹ್ಮಲೋಕ ಪ್ರಾಪ್ತಿ. 144) **ಗಂಗಾ ಸರಸ್ವತೀ ಸಂಗಮ** : ಅಲ್ಲಿ ಸ್ನಾನ ಮಾಡುವುದರಿಂದ ಅಶ್ವಮೇಧಯಾಗದ ಫಲಪ್ರಾಪ್ತಿ ಹಾಗೂ ಸ್ವರ್ಗ ಗಮನ. 145) **ಭದ್ರಕರ್ಣಹ್ರದ:** ಸ್ನಾನ, ಶಂಕರ ಪೂಜೆಗಳಿಂದ ದುರ್ಗತಿನಾಶ ಹಾಗೂ ವಿಷ್ಣುಲೋಕ ಪ್ರಾಪ್ತಿ. 146) **ಕುಜಾಮ್ರಕಮ್:** ಅಲ್ಲಿಗೆ ಹೋಗುವುದರಿಂದ ಸ್ವರ್ಗಪ್ರಾಪ್ತಿ. 147) **ಅರುಂಧತೀವಟ** : ಅಲ್ಲಿ ಒಂದು ರಾತ್ರಿಯ ವಾಸದಿಂದ ಗೋಸಹಸ್ರದಾನ ಫಲಪ್ರಾಪ್ತಿ ಹಾಗೂ ಕುಲೋದ್ಧಾರ. 148) **ಸಾಮುದ್ರಕಮ್:** ಅಲ್ಲಿ ಮೂರು ರಾತ್ರಿಗಳ ಉಪವಾಸದಿಂದ ಗೋಸಹಸ್ರದಾನದ ಫಲ ಹಾಗು ಕುಲೋದ್ಧಾರ. 149) **ಬ್ರಹ್ಮಾವರ್ತ:** ಅಲ್ಲಿಗೆ ಹೋಗುವುದರಿಂದ ಅಗ್ನಿಷ್ಟೋಮ ಫಲ ಹಾಗೂ ಬ್ರಹ್ಮಲೋಕಪ್ರಾಪ್ತಿ. 150) **ಯಮುನಾ ಪಭಾವ** : ಅಲ್ಲಿ ಸ್ನಾನಮಾಡುವುದರಿಂದ ಅಶ್ವಮೇಧಯಾಗಫಲ ಹಾಗೂ ಸ್ವರ್ಗಲೋಕ ಪ್ರಾಪ್ತಿ. 151) **ದರ್ವೀ ಸಂಕ್ರಮಣಮ್:** ಅಲ್ಲಿಗೆ ಹೋಗುವುದರಿಂದ ಅಶ್ವಮೇಧಯಾಗದ ಫಲಪ್ರಾಪ್ತಿ ಹಾಗೂ ಬ್ರಹ್ಮಲೋಕಗಮನ. 152) **ಸಿಂಧುಪ್ರಭವ:** ಅಲ್ಲಿ ಐದು ರಾತ್ರಿಗಳ ವಾಸದಿಂದ ಬಹು ಸುವರ್ಣಯಜ್ಞ ಫಲಪ್ರಾಪ್ತಿ. 153) **ಅರ್ಘವೇದಿ** : ಅಲ್ಲಿಗೆ ಹೋಗುವುದರಿಂದ ಅಶ್ವಮೇಧಯಾಗದ ಫಲ ಹಾಗೂ ಸ್ವರ್ಗಗಳ ಪ್ರಾಪ್ತಿ. 154) **ವಾಶಿಷ್ಠ ನದೀ ಅಲ್ಲಿಯೇ ಋಷಿಕುಲ್ಯಾ** : ಅಲ್ಲಿಗೆ ಹೋಗುವುದರಿಂದ ಸಕಲರಿಗೂ ದ್ವಿಜತ್ವ ಪ್ರಾಪ್ತಿ. ಋಷಿಕುಲ್ಯಾದಲ್ಲಿ ಸ್ನಾನ ಮತ್ತು ಒಂದು ತಿಂಗಳ ಕಾಲ ಶಾಕಾಹಾರಗಳಿಂದ ಋಷಿಲೋಕ ಪ್ರಾಪ್ತಿ. 155) **ಭೃಂಗತುಂಗಮ್** : ಅಲ್ಲಿಗೆ ಹೋಗುವುದರಿಂದ ಅಶ್ವಮೇಧಯಾಗ ಫಲಪ್ರಾಪ್ತಿ. 156) **ವೀರಪ್ರಮೋಕ್ಷ** : ಅಲ್ಲಿಗೆ ಹೋಗುವುದರಿಂದ ಸರ್ವಪಾಪಪ್ರಣಾಶ ಫಲಪ್ರಾಪ್ತಿ. 157) **ಸಂಧ್ಯಾ ಅದು ವಿದ್ಯಾ** : ಅಲ್ಲಿ ಸ್ನಾನ ಮಾಡಿದರೆ ವಿದ್ಯಾ ಪ್ರಾಪ್ತಿಯಾಗುವುದು. 158) **ಮಹಾಶ್ರಮ** : ಅಲ್ಲಿ ಸ್ವಲ್ಪಕಾಲ ನಿರಾಹಾರದಿಂದ ಶುಭಲೋಕ ಪ್ರಾಪ್ತಿ. 159) **ಮಹಾಲಯ** : ಅಲ್ಲಿ ಒಂದು ತಿಂಗಳ ಅವಧಿ ಉಪವಾಸದಿಂದ ತಾನೂ ಸೇರಿ ಇಪ್ಪತ್ತೊಂದು ಪುರುಷರ ಉದ್ಧಾರ. ಅಲ್ಲಿಯೇ ಇರುವ ಮಹೇಶ್ವರ ದರ್ಶನದಿಂದ ಸರ್ವಪಾಪ

ಮರಣ ಭಯಗಳ ವಿನಾಶ. 160) **ವೇತನೀಕಾ** : ಅಲ್ಲಿ ಹೋಗುವುದರಿಂದ ಅಶ್ವಮೇಧಯಾಗದ ಫಲ ಔಶನಸಗತಿ ಪ್ರಾಪ್ತಿ. 161) **ಸುಂದರಿಕಾ** : ಅಲ್ಲಿ ಹೋಗುವುದರಿಂದ ರೂಪ ಪ್ರಾಪ್ತಿ. 162) **ಬ್ರಾಹ್ಮಣಿಕಾ** : ಅಲ್ಲಿಗೆ ಹೋಗುವುದರಿಂದ ಬ್ರಹ್ಮಲೋಕ ಪ್ರಾಪ್ತಿ.

163) **ನೈಮಿಷಮ್** : ಅಲ್ಲಿ ಬ್ರಹ್ಮನು ವಾಸಿಸುವನು ಅದರ ಪ್ರವೇಶದಿಂದ ಸರ್ವ ಪಾಪಗಳ ನಾಶ. ಸ್ನಾನದಿಂದ ಸಪ್ತಕುಲಗಳ ಉದ್ಧಾರ. ಉಪವಾಸದಿಂದ ಸ್ವರ್ಗಪ್ರಾಪ್ತಿ. 164) **ಗಂಗೋದ್ಭೇದ** : ಅಲ್ಲಿ ಮೂರು ರಾತ್ರಿಗಳ ಉಪವಾಸದಿಂದ ಅಶ್ವಮೇಧಯಾಗದ ಫಲಪ್ರಾಪ್ತಿ ವಿಷ್ಣುಲೋಕದ ವಾಸ 165) **ಸರಸ್ವತೀ** : ಅಲ್ಲಿ ಪಿತೃದೇವತರ್ಪಣಗಳಿಂದ ಸಾರಸ್ವತದ ಲೋಕವಾಸ. 166) **ಬಾಹುದಾ ನದೀ** : ಅಲ್ಲಿ ಒಂದು ರಾತ್ರಿಯ ವಾಸದಿಂದ ಬ್ರಹ್ಮಲೋಕ ಪ್ರಾಪ್ತಿ. 167) **ಗೋಪ್ರಚಾರತೀರ್ಥಮ್** : ಅದು ಸರಯೂ ನದೀತೀರ. ಅಲ್ಲಿ ಸ್ನಾನ ಮಾಡುವುದರಿಂದ ಸರ್ವಪಾಪನಾಶ ಹಾಗೂ ದೇವಲೋಕ ಪ್ರಾಪ್ತಿ. 168) **ಗೋಮತಿಯಲ್ಲಿರುವ ರಾಮತೀರ್ಥಮ್** : ಅಲ್ಲಿ ಸ್ನಾನ ಮಾಡುವುದರಿಂದ ಅಶ್ವಮೇಧಯಾಗ ಫಲಪ್ರಾಪ್ತಿ. ನಿಜಕುಲದ ಪಾವನ.

169) **ಸಾಹಸ್ರವಮ್** : ಅಲ್ಲಿಗೆ ಹೋಗುವುದರಿಂದ ರಾಜಸೂಯ ಅಶ್ವಮೇಧ ಯಾಗಗಳ ಫಲಪ್ರಾಪ್ತಿ. 170) **ರಾಜಗೃಹಮ್** : ಅಲ್ಲಿ ಸ್ನಾನ ಮಾಡುವುದರಿಂದ ಕುಬೇರನಂತೆ ಸಂತೋಷದ ಪ್ರಾಪ್ತಿ. 171) **ಮಣಿನಾಗ** : ಅಲ್ಲಿಗೆ ಹೋಗುವುದರಿಂದ ಗೋಸಹಸ್ರದಾನ ಫಲಪ್ರಾಪ್ತಿ ಹಾಗೆಯೇ ಅದರ ಹತ್ತಿರ ನಿತ್ಯಕರ್ಮಗಳನ್ನಾಚರಿಸುವುದರಿಂದ ಸರ್ಪಗಳ ವಿಷದ ಭಯನಾಶ; ಒಂದು ರಾತ್ರಿಯ ವಾಸದಿಂದ ಸಕಲ ಪಾಪಗಳ ನಾಶ.

172) **ಗೋತಮವನಮ್** : ಅಲ್ಲಿ ಅಹಲ್ಯಾ ಸರೋವರದಲ್ಲಿ ಸ್ನಾನ ಮಾಡುವುದರಿಂದ ಪರಮಗತಿ ಪ್ರಾಪ್ತಿ. 173) **ಶ್ರೀದೇವಿ** : ಅಲ್ಲಿಗೆ ಹೋಗುವುದರಿಂದ ಶ್ರೀ ಪ್ರಾಪ್ತಿ. 174) **ಉದಪಾನಮ್** : ಅಲ್ಲಿ ಸ್ನಾನ ಮಾಡುವುದರಿಂದ ಅಶ್ವಮೇಧಯಾಗ ಫಲಪ್ರಾಪ್ತಿ. 175) **ಜನಕರಾಜಕೂಪ** : ಅಲ್ಲಿ ಸ್ನಾನದಿಂದ ವಿಷ್ಣುಲೋಕ ಪ್ರಾಪ್ತಿ. 176) **ವಿನಶನಮ್**: ಅಲ್ಲಿಗೆ ಹೋಗುವುದರಿಂದ ವಾಜಪೇಯಯಾಗದ ಫಲಪ್ರಾಪ್ತಿ. 177) **ವಿಶಲ್ಯಾ** : ಅದು ಸಕಲ ತೀರ್ಥ ಜಲದ ಉದ್ಭವ. ಅಲ್ಲಿಗೆ ಹೋಗುವುದರಿಂದ ವಾಜಪೇಯ ಫಲಪ್ರಾಪ್ತಿ. 178) **ತಪೋವನಮ್** : ಅಲ್ಲಿ ವಾಸಮಾಡುವುದರಿಂದ ಗುಹ್ಯಕಲೋಕದವಾಸ. 179) **ಕಂಪನಾನದಿ** : ಅದು ಸಿದ್ಧರವಾಸಸ್ಥಾನ. ಅಲ್ಲಿಗೆ ಹೋಗುವುದರಿಂದ ಪುಂಡರೀಕಯಾಗ ಫಲಪ್ರಾಪ್ತಿ. 180) **ಮಾಹೇಶ್ವರೀ** : ಅಲ್ಲಿಗೆ ಹೋಗುವುದರಿಂದ ಅಶ್ವಮೇಧಯಾಗ ಫಲಪ್ರಾಪ್ತಿ, ಸ್ವಕುಲದ ಉದ್ಧಾರ. 181) **ದಿವೌಕ ಪುಷ್ಕರಣೀ** : ಅಲ್ಲಿಗೆ ಹೋಗುವುದರಿಂದ ದುರ್ಗತಿ ವಿನಾಶ. ಅಶ್ವಮೇಧಯಾಗದ ಫಲಪ್ರಾಪ್ತಿ. 182) **ರಾಮಪದಮ್** : ಅಲ್ಲಿಗೆ ಹೋಗುವುದರಿಂದ ಅಶ್ವಮೇಧ ಫಲ. 183) **ಮಾಹೇಶ್ವರಪದಮ್** : ಅಲ್ಲಿ ಸ್ನಾನ ಮಾಡುವುದರಿಂದ ಅಶ್ವಮೇಧ ಫಲ. ಅಲ್ಲಿಯೇ ಇರುವ ತೀರ್ಥಕೋಟಿಯಲ್ಲಿ ಸ್ನಾನಮಾಡುವುದರಿಂದ ಪುಂಡರೀಕಯಾಗ ಫಲ ಪ್ರಾಪ್ತಿ. 184) **ನಾರಾಯಣಸ್ಥಾನಮ್** : ಅಲ್ಲಿ ಶಾಲಗ್ರಾಮವೆಂಬ ಹೆಸರಿನ ಹರಿಯು ನೆಲೆಸಿದ್ದಾನೆ. ಅಲ್ಲಿಗೆ ಹೋಗುವುದರಿಂದ ಅಶ್ವಮೇಧ ಫಲ ಹಾಗೂ ವಿಷ್ಣುಲೋಕದ ಗಮನ. 185) **ಜಾತಿಸ್ಮರ** : ಅಲ್ಲಿ ಸ್ನಾನದಿಂದ ಜಾತಿಸ್ಮರತ್ವ ಪ್ರಾಪ್ತಿ. 186) **ವಟೀಶ್ವರಪುರಮ್** : ಅಲ್ಲಿರುವ ಕೇಶವನ ದರ್ಶನ ಪೂಜೆಗಳಿಂದ ಹಾಗೂ ಉಪವಾಸದಿಂದ ಬಯಸಿದ ಫಲಪ್ರಾಪ್ತಿಯಾಗುವುದು. 187) **ವಾಮನತೀರ್ಥಮ್** : ಅಲ್ಲಿ ಹೋಗುವುದರಿಂದ ದುರ್ಗತಿ ವಿನಾಶ ಹಾಗು ವಿಷ್ಣುಲೋಕ ಪ್ರಾಪ್ತಿ. 188) **ಚಂಪಕಾರಣ್ಯಮ್** : ಅಲ್ಲಿ ಒಂದು ರಾತ್ರಿಯ ವಾಸದಿಂದ ಗೋಸಹಸ್ರದಾನ ಫಲಮ್. 189) **ಗೋಷ್ಠಾನಮ್** : ಅಲ್ಲಿ ಒಂದು ರಾತ್ರಿಯ ಉಪವಾಸದಿಂದ ಅಗ್ನಿಷ್ಟೋಮ ಫಲಪ್ರಾಪ್ತಿ. ಅಲ್ಲಿ ಪಾರ್ವತೀ ಸಹಿತ ವಿಶ್ವೇಶ್ವರನು ಇದ್ದಾನೆ. ಅವನ ದರ್ಶನದಿಂದ ಮಿತ್ರಾವರುಣ ಲೋಕವಾಸ. 190) **ಕನ್ಯಾಸಂವೇದ್ಯಮ್** : ಅಲ್ಲಿ ಆಹಾರ ಜಯದಿಂದ ಮನುಲೋಕ ಪ್ರಾಪ್ತಿ. ಅಲ್ಲಿ ಅನ್ನದಾನವು ಅಕ್ಷಯವಾಗುತ್ತದೆ. 191) **ನಿಶ್ಚೀರಾನದಿ** : ಅಲ್ಲಿಗೆ ಹೋಗುವುದರಿಂದ ಅಶ್ವಮೇಧಯಾಗದ ಫಲಪ್ರಾಪ್ತಿ. 192) **ದೇವಕೂಟಮ್** : ಅಲ್ಲಿಗೆ ಹೋಗುವುದರಿಂದ ಅಶ್ವಮೇಧಯಾಗದ ಫಲ ಹಾಗೂ ಕುಲೋದ್ಧಾರ. 193) **ಕೌಶಿಕಮುನಿಹ್ರದ** : ಅಲ್ಲಿ ಒಂದು ತಿಂಗಳಿನ ವಾಸದಿಂದ ಅಶ್ವಮೇಧಯಾಗ ಫಲಪ್ರಾಪ್ತಿ. 194) **ಸರ್ವತೀರ್ಥವರಹ್ರದ** : ಅಲ್ಲಿಯ ವಾಸದಿಂದ ದುರ್ಗತಿ ವಿನಾಶ. 195) **ವೀರಾಶ್ರಮ** : ಅಲ್ಲಿ ಕುಮಾರನು ನೆಲೆಸಿರುತ್ತಾನೆ. ಅಲ್ಲಿಗೆ ಹೋಗುವುದರಿಂದ ಅಶ್ವಮೇಧಯಾಗ ಫಲಪ್ರಾಪ್ತಿ. 196) **ಅಗ್ನಿಧಾರಾ** : ಅಲ್ಲಿಗೆ ಹೋಗುವುದರಿಂದ

ಅಶ್ವಮೇಧಯಾಗ ಫಲಪ್ರಾಪ್ತಿ ಹಾಗೂ ಕುಲೋದ್ಧಾರ. **197) ಪಿತಾಮಹಸರ** : ಅಲ್ಲಿ ಪರ್ವತರಾಜನಿಂದ ಪ್ರತಿಷ್ಠಾಪಿಸಲ್ಪಟ್ಟ ಶಿವ ವಿಷ್ಣು ದೇವತೆಗಳು ಇದ್ದಾರೆ. ಅಲ್ಲಿನ ಸ್ನಾನದಿಂದ ಅಗ್ನಿಷ್ಟೋಮ ಫಲಪ್ರಾಪ್ತಿ ಅಲ್ಲಿಯೇ ತೀರ್ಥವಿದೆ. ಅಲ್ಲಿ ಸ್ನಾನ ಮಾಡುವುದರಿಂದಲೇ ಕೃತಾರ್ಥನಾಗುವನು. ಅಲ್ಲಿ ಮೂರು ಹೊತ್ತು ಉಪವಾಸ ಮಾಡುವುದರಿಂದ ಬ್ರಹ್ಮಹತ್ಯಾನಾಶ. **198) ಗೌರೀಶಿಖರಂ** : ಅಲ್ಲಿ ಹತ್ತುವುದರಿಂದ ಪುನೀತನಾಗುವನು. ಅಲ್ಲಿರುವ ಕುಂಡದಲ್ಲಿ ಸ್ನಾನ ಪಿತೃದೇವತಾರ್ಚನೆಗಳಿಂದ ಅಶ್ವಮೇಧಯಾಗ ಫಲಪ್ರಾಪ್ತಿ ಹಾಗೂ ಸ್ವರ್ಗಗಮನ. **199) ತಾಂತ್ರಾರುಣ** : ಅಲ್ಲಿ ಹೋಗುವುದರಿಂದ ಅಶ್ವಮೇಧಯಾಗ ಫಲಪ್ರಾಪ್ತಿ ಹಾಗೂ ಶುಕ್ರಲೋಕ ಗಮನ. **200) ನಂದಿನೀ** : ಅಲ್ಲಿ ದೇವತೆಗಳು ಆಶ್ರಯಿಸಿದ ಬಾವಿ. ಅಲ್ಲಿಗೆ ಹೋಗುವುದರಿಂದ ನರಮೇಧ ಫಲಪ್ರಾಪ್ತಿ. **201) ಕೌಶಿಕ್ಯಾರುಣ ಸಂಗಮ** : ಅಲ್ಲಿ ಮೂರು ರಾತ್ರಿಗಳ ಉಪವಾಸದಿಂದ ಸರ್ವಪಾಪ ಮುಕ್ತಿ. **202) ಊರ್ವಶೀ ತೀರ್ಥಮ್** :

203) ಸೋಮಾಶ್ರಮ 204) ಕುಂಭಕರ್ಣಾಶ್ರಮ : ಇವುಗಳಲ್ಲಿ ಸ್ನಾನಮಾಡುವುದರಿಂದ ಆಶ್ವಮೇಧ ಯಾಗಫಲಪ್ರಾಪ್ತಿ ಹಾಗೂ ಸ್ವರ್ಗಗಮನ. **205) ಕೋಕಾಸುಖಮ್** : ಅಲ್ಲಿನ ಸ್ನಾನದಿಂದ ಜಾತಿಸ್ಮರತ್ವ. **206) ನಂದಾ** : ಅಲ್ಲಿಗೆ ಹೋಗುವುದರಿಂದ ಧನ್ಯನಾಗಿ ಸರ್ವ ಪಾಪಗಳಿಂದ ಮುಕ್ತನಾಗುತ್ತಾನೆ ಹಾಗೂ ಸ್ವರ್ಗಪ್ರಾಪ್ತಿಯೂ ಆಗುವುದು.

207) ಋಷಭದ್ವೀಪ : ಅಲ್ಲಿರುವ ಸರಸ್ವತಿ ನದಿಯಲ್ಲಿ ಸ್ನಾನ ಮಾಡಿದರೆ ವಿಮಾನದಲ್ಲಿ ವಿರಾಜಿಸುವನು. **208) ಔದ್ಧಾಲಕತೀರ್ಥಮ್** : ಅಲ್ಲಿ ಸ್ನಾನ ಮಾಡುವುದರಿಂದ ಸರ್ವ ಪಾಪಗಳ ನಾಶ. **209) ಬ್ರಹ್ಮತೀರ್ಥಮ್** : ಅಲ್ಲಿಗೆ ಹೋಗುವುದರಿಂದ ವಾಜಪೇಯ ಯಾಗ ಫಲಪ್ರಾಪ್ತಿಯಾಗುವುದು.

210) ಚಂಪಾ : ಅಲ್ಲಿ ಹೋಗುವುದರಿಂದ ಸಹಸ್ರ ಗೋದಾನ ಫಲಪ್ರಾಪ್ತಿ.

211) ನರೇತಿಕಾ : ಅಲ್ಲಿಗೆ ಹೋಗುವುದರಿಂದ ವಾಜಪೇಯ ಯಾಗ ಫಲಪ್ರಾಪ್ತಿ ಹಾಗೂ ವಿಮಾನಪ್ರಾಪ್ತಿ.

212) ಸಂವಿದ್ಯಾತೀರ್ಥಮ್ : ಅಲ್ಲಿ ಸ್ನಾನ ಮಾಡುವುದರಿಂದ ವಿದ್ಯಾಪ್ರಾಪ್ತಿ. **213) ತಾಹಿತ್ಯಮ್, ತತ್ರಗಮನಾತ್** – ಬಹು ಸುವರ್ಣಯಾಗದ ಫಲಪ್ರಾಪ್ತಿ. **214) ಕರತೋಯಾ** – ಅಲ್ಲಿ ಮೂರು ರಾತ್ರಿಗಳ ಉಪವಾಸದಿಂದ ಹನ್ನೊಂದು ಎತ್ತುಗಳ ದಾನದ ಫಲಪ್ರಾಪ್ತಿ.

215) ಕೋಸಲಾಯಾ ಕಾಲತೀರ್ಥಮ್ – ಅಲ್ಲಿಗೆ ಹೋಗುವುದರಿಂದ ಗೋಸಹಸ್ರದಾನ ಫಲಪ್ರಾಪ್ತಿ ಹಾಗೂ ಸ್ವರ್ಗಗಮನ.

216) ಗಂಗಾಸಾಗರಸಂಗಮಃ – ಅಲ್ಲಿಗೆ ಹೋಗುವುದರಿಂದ ಶತಾಶ್ವಮೇಧ ಯಾಗ ಫಲಪ್ರಾಪ್ತಿ. **217) ಗಂಗಾಯಾಃ ಪರದ್ವೀಪ** : ಅಲ್ಲಿ ಸ್ನಾನ ಹಾಗೂ ಮೂರು ರಾತ್ರಿಗಳ ಉಪವಾಸ ಮಾಡುವುದರಿಂದ ಸಕಲ ಕಾಮಗಳ ಪ್ರಾಪ್ತಿ. **218)** ವಿರಜಮ್ – ಅಲ್ಲಿಗೆ ಹೋಗುವುದರಿಂದ ಚಂದ್ರನ ಕಾಂತಿ.

219) ಪ್ರಭವ :ಅಲ್ಲಿಗೆ ಹೋಗುವುದರಿಂದ ಸರ್ವಪಾಪ ನಾಶ ಹಾಗೂ ಗೋಸಹಸ್ರ ದಾನ ಫಲಪ್ರಾಪ್ತಿ. **220) ಶೋಣವ್ಯೋತೀ ರಥೀ ಸಂಗಮ** : ಅಲ್ಲಿ ಪಿತೃ ದೇವ ತರ್ಪಣಗಳಿಂದ ಅಗ್ನಿಷ್ಟೋಮ ಫಲಪ್ರಾಪ್ತಿ.

221) ಶೋಣ ಪ್ರಭವ: 222) ನರ್ಮದಾ ಪ್ರಭವ: 223) ವಂಶಗುಲ್ಮ : ಇಲ್ಲಿ ಸ್ನಾನ ಮಾಡುವುದರಿಂದ ಅಶ್ವಮೇಧ ಫಲಪ್ರಾಪ್ತಿ. **224) ಋಷಭ** : ಅಲ್ಲಿಗೆ ಹೋಗುವುದರಿಂದ ಗೋಸಹಸ್ರ ದಾನ ಫಲಪ್ರಾಪ್ತಿ. **225) ಪುಷ್ಪವತೀ** : ಅಲ್ಲಿ ಸ್ನಾನ ಹಾಗೂ ಮೂರು ರಾತ್ರಿಗಳ ಉಪವಾಸದಿಂದ ಗೋ ಸಹಸ್ರ ಧನ ಫಲಪ್ರಾಪ್ತಿ **226) ಬದರಿಕಮ್** : ಅಲ್ಲಿಗೆ ಹೋಗುವುದರಿಂದ ದೀರ್ಘಾಯು. **227) ಮಹೇಂದ್ರ ಪರ್ವತ** : ಅಲ್ಲಿರುವ ರಾಮತೀರ್ಥದಲ್ಲಿ ಸ್ನಾನ ಮಾಡುವುದರಿಂದ ಅಶ್ವಮೇಧ ಯಾಗಫಲ. **228) ಮತಂಗಕೇದಾರಮ್** : ಅಲ್ಲಿ ಸ್ನಾನ ಮಾಡುವುದರಿಂದ ಸ್ವರ್ಗಲೋಕ ಪ್ರಾಪ್ತಿ. **229) ಪಂಡ್ಯ ದೇಶೇ ಋಷಭ ಪರ್ವತ** : ಅಲ್ಲಿಗೆ ಹೋಗುವುದರಿಂದ ವಾಜಪೇಯ ಫಲಪ್ರಾಪ್ತಿ ಹಾಗೂ ಸ್ವರ್ಗಗಮನ. **230) ಕಾವೇರೀ** : ಅಲ್ಲಿಗೆ ಹೋಗುವುದರಿಂದ ಗೋಸಹಸ್ರ ದಾನ ಫಲ. **231) ಸಮುದ್ರತೀರೇ ಕನ್ಯಾತೀರ್ಥಮ್** : ಅಲ್ಲಿನ ಸ್ನಾನದಿಂದ ಸರ್ವಪಾಪ ನಾಶ. **232) ಸಮುದ್ರಮಧ್ಯೇ ಗೋಕರ್ಣ ತೀರ್ಥಮ್** : ಅಲ್ಲಿ ಶಿವನು ನೆಲೆಸಿರುತ್ತಾನೆ. ಅವನ ಪೂಜೆಯಿಂದ ಹಾಗೂ ಮೂರು ರಾತ್ರಿಗಳ ಉಪವಾಸದಿಂದ ಹತ್ತು ಅಶ್ವಮೇಧ ಯಾಗಫಲ ಪ್ರಾಪ್ತಿ ಹಾಗೂ ಗಾಣಪತ್ಯಪ್ರಾಪ್ತಿ. **233) ಸಂವರ್ತವಾಪೀ** – ಅಲ್ಲಿಗೆ ಹೋಗುವುದರಿಂದ ರೂಪಸೌಭಾಗ್ಯಗಳ ಪ್ರಾಪ್ತಿ. **234) ವೇಣ್ವಾ** : ಅಲ್ಲಿ ಪಿತೃದೇವ ತರ್ಪಣಗಳಿಂದ ಮಯೂರ ಹಂಸಗಳಿಂದ ಕೂಡಿದ ವಿಮಾನಪ್ರಾಪ್ತಿ.

235) ಗೋದಾವರೀ – ಅಲ್ಲಿಗೆ ಹೋಗುವುದರಿಂದ ಗವಾಮಯ

ಯಜ್ಞಫಲ ಪ್ರಾಪ್ತಿ ಹಾಗೂ ವಾಯುಲೋಕ ಗಮನ. 236) **ವೇಣ್ವಾ ಸಂಗಮ** : ಅಲ್ಲಿ ಸ್ನಾನ ಮಾಡುವುದರಿಂದ ಸರ್ವಪಾಪ ನಾಶ. 237) **ವರದಾ ಸಂಗಮ** : ಅಲ್ಲಿನ ಸ್ನಾನದಿಂದ ಅಶ್ವಮೇಧ ಯಾಗ ಫಲಪ್ರಾಪ್ತಿ. 238) **ಬ್ರಹ್ಮಸ್ಥೂಣಾ** – ಅಲ್ಲಿ ಮೂರು ರಾತ್ರಿಗಳ ಉಪವಾಸದಿಂದ ಗೋಸಹಸ್ರ ದಾನ ಫಲಪ್ರಾಪ್ತಿ ಹಾಗೂ ಸ್ವರ್ಗ ಗಮನ.

239) **ಕುಶಪ್ಲವನಮ್** – ಅಲ್ಲಿನ ಸ್ನಾನ ಹಾಗೂ ಮೂರು ರಾತ್ರಿಗಳ ಉಪವಾಸದಿಂದ ಚಂದ್ರಲೋಕ ಪ್ರಾಪ್ತಿ. 240) **ದೇವಹ್ರದ:** 241) ಕೃಷ್ಣಾವೇಣ್ವಾ ಸಮುದ್ಭವವನಮ್ 242) **ಜ್ಯೋತಿರ್ಯಾತ್ರಹ್ರದ:** 243) **ಕನ್ಯಾಶ್ರಮ** : ಈ ಕ್ಷೇತ್ರಗಳಿಗೆ ಹೋಗುವುದರಿಂದ ಅಗ್ನಿಷ್ಟೋಮ ಫಲಪ್ರಾಪ್ತಿ. 244) **ಪಯೋಷ್ಣಿ ನದಿ** : ಅಲ್ಲಿ ಸ್ನಾನ–ತರ್ಪಣಗಳಿಂದ ಗೋಸಹಸ್ರ ದಾನ ಫಲಪ್ರಾಪ್ತಿ. 245) **ದಂಡಕಾರಣ್ಯಮ್** – ಅಲ್ಲಿರುವ ಜಲಸ್ಪರ್ಶದಿಂದ ಗೋಸಹಸ್ರ ದಾನ ಫಲಪ್ರಾಪ್ತಿ. 246) **ಶರಭಂಗಾಶ್ರಮ**

247) **ಕುಶಾಶ್ರಮ** : ಅಲ್ಲಿಗೆ ಹೋಗುವುದರಿಂದ ದುರ್ಗತಿನಾಶ ಹಾಗೂ ಕುಲಶುದ್ಧತೆ. 248) **ಸೂರ್ಯಾರಕಮ್** – ಅದು ರಾಮತೀರ್ಥ. ಅಲ್ಲಿ ಸ್ನಾನ ಮಾಡುವುದರಿಂದ ಬಹು ಸುವರ್ಣಯಜ್ಞ ಫಲಪ್ರಾಪ್ತಿ. 249) **ಸಪ್ತಗೋಕವರಮ್** – ಅಲ್ಲಿಯ ಸ್ನಾನದಿಂದ ಮಹಾಪುಣ್ಯ ಪ್ರಾಪ್ತಿ ಹಾಗೂ ದೇವಲೋಕ ಗಮನ. 250) **ದೇವಪಥಮ್** – ಅಲ್ಲಿ ಹೋಗುವುದರಿಂದ ದೇವಸತ್ರ ಫಲಪ್ರಾಪ್ತಿ. 251) **ತುಂಗಕಾರಣ್ಯಮ್** – ಅದರ ಪ್ರವೇಶದಿಂದ ಕೂಡಲೇ ಸರ್ವಪಾಪಗಳಿಂದ ಮುಕ್ತನಾಗುವನು. ಒಂದು ತಿಂಗಳಿನ ವಾಸದಿಂದ ಸ್ವಕುಲದ ಪಾವಿತ್ರ, ಬ್ರಹ್ಮಲೋಕ ಪ್ರಾಪ್ತಿ. 252) **ಮೇಧಾವಿಕಮ್** – ಅಲ್ಲಿ ಪಿತೃ ದೇವ ತರ್ಪಣಗಳಿಂದ ಅಗ್ನಿಷ್ಟೋಮ ಫಲ, ಸ್ಮೃತಿ, ಮೇಧಾಗಳ ಪ್ರಾಪ್ತಿ. 253) **ಕಾಲಂಜರ ಪರ್ವತ** – ಅಲ್ಲಿರುವ ದೇವಪ್ರದದಲ್ಲಿನ ಸ್ನಾನದಿಂದ ಸೂರ್ಯಲೋಕ ಪ್ರಾಪ್ತಿ. 254) **ಚಿತ್ರಕೂಟ ಪರ್ವತ** – ಅಲ್ಲಿರುವ ಮಂದಾಕಿನಿಯಲ್ಲಿ ಸ್ನಾನ, ಪಿತೃ, ದೇವ ತರ್ಪಣಗಳಿಂದ ಅಶ್ವಮೇಧ ಫಲಪ್ರಾಪ್ತಿ ಹಾಗೂ ಪರಮಗತಿ ಲಾಭ.

255) **ಭರ್ತೃ ಸ್ಥಾನಮ್** : ಅಲ್ಲಿರುವ ಕ್ಷೇತ್ರ ಕಾರ್ತಿಕೇಯನ ಸ್ಥಾನ. ಅಲ್ಲಿನ ಸ್ನಾನದಿಂದ ಸರ್ವಕಾಮ ಪ್ರಾಪ್ತಿ, ಕೋಟಿತೀರ್ಥದಲ್ಲಿ ಸ್ನಾನ ಮಾಡುವುದರಿಂದ ಗೋಸಹಸ್ರ ದಾನ ಫಲಪ್ರಾಪ್ತಿ. 256) **ಜ್ಯೇಷ್ಠ ಸ್ಥಾನಮ್**–ಅಲ್ಲಿ ಮಹಾದೇವನು ನೆಲೆಸಿರುತ್ತಾನೆ. ಅವನ ದರ್ಶನದಿಂದ ಚಂದ್ರನಂತೆ ಕಾಂತಿ. ಅಲ್ಲಿರುವ ಬಾವಿಯಲ್ಲಿ ನಾಲ್ಕು ಸಮುದ್ರಗಳಿವೆ. ಅದರ ಸ್ನಾನ ಪ್ರದಕ್ಷಿಣೆಗಳಿಂದ ಪರಮಗತಿ ಪ್ರಾಪ್ತಿ. 257) **ಶೃಂಗವೇರಪುರಮ್** – ರಾಮನು ಗಂಗೆಯನ್ನು ದಾಟಿದ ಸ್ಥಾನ. ಅಲ್ಲಿ ಸ್ನಾನ ಮಾಡುವುದರಿಂದ ಸರ್ವಪಾಪಗಳಿಂದ ಮುಕ್ತನಾಗಿ ವಿಷ್ಣುಲೋಕಪ್ರಾಪ್ತಿಯಾಗುವುದು. 258) **ಸುಂಜಾವಟ** : ಅದು ಮಹಾದೇವನ ಕ್ಷೇತ್ರ. ಅವನ ಪೂಜೆ–ಪ್ರದಕ್ಷಿಣೆಗಳಿಂದ ಗಾಣಪತ್ಯ ಪ್ರಾಪ್ತಿ. ಆ ಕ್ಷೇತ್ರದಲ್ಲಿರುವ ಜಾಹ್ನವಿಯಲ್ಲಿನ ಸ್ನಾನದಿಂದ ಸರ್ವಪಾಪ ನಾಶ.

259) **ಪ್ರಯಾಗ** – ಅಲ್ಲಿ ಮೂರು ಅಗ್ನಿಕುಂಡಗಳಿವೆ. ಯಮುನಾ ಜೊತೆಗೆ ಗಂಗೆಯ ಸಂಗಮ. ಇಲ್ಲಿ ಬ್ರಹ್ಮ ದೇವತೆಗಳು, ಸಿದ್ಧರು, ಪಿತೃಗಳು ಸನತ್ಕುಮಾರ ಪ್ರಮುಖರಾದ ಋಷಿಗಳು. ನಾಗ, ಸುವರ್ಣ ಸಿದ್ಧಕ್ರತು ಗಂಧರ್ವ ಮುಂತಾದವರು ನೆಲಸಿರುವರು ಹಾಗೂ ವೇದಗಳು, ಯಜ್ಞಗಳು, ಮೂರ್ತಿಗಳು, ಬ್ರಾಹ್ಮಣರು ಆಶ್ರಯಿಸಿರುವರು. ಅದು ಎಲ್ಲಾ ತೀರ್ಥಗಳಿಗೂ ಪ್ರಶಸ್ತವಾದದ್ದು. ಅದರ ನಾಮ ಸಂಕೀರ್ತನ ಶ್ರವಣ ಮಾತ್ರದಿಂದಲೇ ಮೂರು ಲೋಕಗಳಲ್ಲಿರುವ ವೇದವಿದ್ಯೆಗಳಲ್ಲಿ ಯಾವ ಪುಣ್ಯವಿದೆಯೋ ಅದರ ಪ್ರಾಪ್ತಿ ರಾಜಸೂಯ, ಅಶ್ವಮೇಧ ಯಾಗಗಳ ಫಲಪ್ರಾಪ್ತಿ. 260) **ಭೋಗವತೀ** ಎಂಬ ವಾಸುಕೀ ತೀರ್ಥವಿದೆ. ಅಲ್ಲಿ ಸ್ನಾನ ಮಾಡುವುದರಿಂದ ಅಶ್ವಮೇಧ ಯಾಗ ಫಲಪ್ರಾಪ್ತಿ. ಇದಲ್ಲದೇ, ಮೋಕ್ಷವನ್ನು ಪ್ರಸಾದಿಸುವ ಸಪ್ತ ಮೋಕ್ಷಪುರಿಗಳು.

ಅಯೋಧ್ಯಾ ಮಥುರಾ ಮಾಯಾ ಕಾಶೀ ಕಾಂಚೀ ಅವಂತಿಕಾ ।
ಪುರೀ ದ್ವಾರವತೀ ಚೈವ ಸಪ್ತೈತಾ ಮೋಕ್ಷದಾಯಕಾ: ॥

ಈ ರೀತಿಯಾಗಿ ಪುರಾಣಗಳಲ್ಲಿ ಪರಮಕಾರುಣಿಕರಾದ ಮಹರ್ಷಿಗಳು ಭಾರತ ದೇಶದಲ್ಲಿರುವ ಸಕಲ ಪವಿತ್ರ ತೀರ್ಥಕ್ಷೇತ್ರಗಳನ್ನು ಕ್ರೋಡೀಕರಿಸಿ ಅವುಗಳ ಪಾವಿತ್ರ್ಯ, ಮಹತ್ವ ಫಲಗಳನ್ನು ತಿಳಿಸುವ ಮೂಲಕ ಭಕ್ತಿಯನ್ನು ರಾಷ್ಟ್ರಪ್ರೇಮವನ್ನು ಜಾಗೃತಗೊಳಿಸಿದ್ದಾರೆ. ಇದರಿಂದ ಐಹಿಕಾಮುಷ್ಮಿಕಗಳ ಫಲಪ್ರಾಪ್ತಿಯುಂಟಾಗುತ್ತದೆ.

❑

ವಿಷ್ಣುಪುರಾಣದಲ್ಲಿ ಅದ್ವೈತ ಸಿದ್ಧಾಂತ

—ವಿದ್ವಾನ್ ಅನಂತ ಶರ್ಮಾ ಭುವನಗಿರಿ

ಹೆಸರೇ ಹೇಳುವಂತೆ ವಿಷ್ಣುಪುರಾಣದಲ್ಲಿ ವಿಷ್ಣುವಿನ ಅನೇಕ ಅವತಾರಗಳ ಕಥೆಯಿದೆ. ಇದು ತ್ರಿಮೂರ್ತಿಗಳಲ್ಲೊಬ್ಬನಾದ ವಿಷ್ಣುವಿನ ಚರಿತ್ರೆಯನ್ನೇ ವರ್ಣಿಸಿದ್ದರೂ ಅದು ಅದ್ವೈತದರ್ಶನವು ಬಣ್ಣಿಸಿದ ಪರಬ್ರಹ್ಮನನ್ನೇ ಗುರಿಯಾಗಿಟ್ಟುಕೊಂಡಿದೆ ಎಂದು ಈ ಲೇಖನದಲ್ಲಿ ಮನದಟ್ಟು ಮಾಡಲಾಗಿದೆ.

ಭಾರತೀಯ ತತ್ತ್ವಶಾಸ್ತ್ರಮಹಾವೃಕ್ಷದ ಬೇರುಗಳು ಉಪನಿಷತ್ತುಗಳಲ್ಲಿಯೇ ಇವೆ ಎಂಬುದು ನಿರ್ವಿವಾದದ ವಿಷಯ. ಆದರೆ ಈ ಉಪನಿಷತ್ತುಗಳಲ್ಲಿ ಏಕಾಭಿಪ್ರಾಯವನ್ನು ಕಂಡುಕೊಳ್ಳುವುದು ಅಷ್ಟು ಸುಲಭವಲ್ಲ. ನಾನಾ ಉಪನಿಷತ್ತುಗಳಲ್ಲಿ ನಾನಾ ವಿಷಯಗಳು ನಾನಾ ವಿಧವಾಗಿ ನಿರೂಪಿಸಲ್ಪಟ್ಟಿವೆ. ಇವುಗಳ ಐದಂಪರ್ಯವನ್ನು ನಿರ್ಧರಿಸಲು ಇವುಗಳಲ್ಲಿ ಸಮನ್ವಯವನ್ನು ಸಾಧಿಸಲು ಬಾದರಾಯಣ ಮುನಿಗಳು ಶಾರೀರಕಮೀಮಾಂಸಾಸೂತ್ರಗಳನ್ನು ರಚಿಸಿದರು. ವೇದಾಂತಶಾಸ್ತ್ರದ ಅಡಿಗಲ್ಲಾದ ಈ ಸೂತ್ರಗ್ರಂಥವೂ ಸಹ ಮುಂದೆ ಮತಭೇದಗಳಿಗೆ ಪಕ್ಕಾಯಿತು. ಕೆಲವರು ಇದರಲ್ಲಿ ಅದ್ವೈತಸಿದ್ಧಾಂತವನ್ನು ಕಂಡರೆ, ಮತ್ತೆ ಕೆಲವರು ದ್ವೈತವನ್ನು, ಇನ್ನು ಕೆಲವರು ವಿಶಿಷ್ಟಾದ್ವೈತವನ್ನು, ಇನ್ನೂ ಕೆಲವರು ಶಕ್ತಿವಿಶಿಷ್ಟಾದ್ವೈತ, ಶುದ್ಧಾದ್ವೈತ ಮುಂತಾಗಿ ಹಲವು ಸಿದ್ಧಾಂತಗಳನ್ನು ಇದರಲ್ಲಿ ಕಂಡುಕೊಂಡರು. ತಮ್ಮ ತಮ್ಮ ಅಭಿಪ್ರಾಯಗಳಿಗೆ ಶ್ರುತಿಯ ಆಧಾರವನ್ನು, ಯುಕ್ತಿಯನ್ನು ಸಾಕಷ್ಟು ನೀಡಿ ಸಮರ್ಥಿಸಿಕೊಂಡಿದ್ದಾರೆ. ಇತರರ ಅಭಿಪ್ರಾಯಗಳನ್ನು ದೂಷಿಸಿದ್ದಾರೆ. ಸತ್ಯಾನ್ವೇಷಿಗಳಾದ ಜಿಜ್ಞಾಸುಗಳಿಗೆ ಇಲ್ಲಿ ಗೊಂದಲ ಸಹಜ. ಇದರ ನಿರ್ಣಯಕ್ಕಾಗಿ ಅಣ್ಣಯ್ಯದೀಕ್ಷಿತರೆಂಬ ವಿದ್ವಾಂಸರು 'ವ್ಯಾಸತಾತ್ಪರ್ಯ ನಿರ್ಣಯ'ವೆಂಬ ಗ್ರಂಥವನ್ನು ರಚಿಸಿದರು. ಅದರಲ್ಲಿ ಇತರ ದರ್ಶನಕಾರರನ್ನೇ ಸಾಕ್ಷಿಗಳನ್ನಾಗಿರಿಸಿ ಬಾದರಾಯಣರಿಗೆ ಅದ್ವೈತಸಿದ್ಧಾಂತವೇ ಅಭಿಪ್ರೇತವೆಂದು ತೋರಿಸಿಕೊಟ್ಟರು. ಆದರೆ ಆ ಸೂತ್ರಗಳಿಗೂ ಮೂಲವಾದ ಉಪನಿಷತ್ತುಗಳಲ್ಲಿಯೇ ಭಿನ್ನಾಭಿಪ್ರಾಯಕ್ಕೆ ಆಸ್ಪದವುಳ್ಳ ವಾಕ್ಯಗಳಿರುವಾಗ ಸೂತ್ರಗ್ರಂಥದ ಅಭಿಪ್ರಾಯವನ್ನು ನಿಷ್ಕರ್ಷಿಸಲು ಹೇಗೆ ಸಾಧ್ಯ? ಬಾದರಾಯಣರು ಸರ್ವಮಾನ್ಯರು ಹೇಗೆ ಆದಾರು? ಆದುದರಿಂದ ಉಪನಿಷತ್ತುಗಳ ತಾತ್ಪರ್ಯವೇನೆಂಬುದು ಮೊದಲು ನಿರ್ಧಾರವಾಗಬೇಕು. ಇದಕ್ಕೆ ನಮ್ಮ ಪ್ರಾಚೀನರು ಅನುಸರಿಸಿದ ಒಂದು ಮಾರ್ಗವೆಂದರೆ ಪುರಾಣಗಳ ಪರ್ಯಾಲೋಚನೆ. 'ಇತಿಹಾಸ ಪುರಾಣಾಭ್ಯಾಂ ವೇದಂ ಸಮುಪಬೃಂಹಯೇ' ಎಂಬುದೊಂದು ಪ್ರಾಚೀನೋಕ್ತಿ. ವೇದವನ್ನು ವಿಭಜಿಸಿದ ವೇದವ್ಯಾಸರೇ ಪುರಾಣಗಳ ಕರ್ತೃಗಳಾದುದರಿಂದ ವೇದದ ಪರಮತಾತ್ಪರ್ಯವನ್ನೇ ಪುರಾಣಗಳಲ್ಲಿರಿಸಿದ್ದಾರೆಂದು ವಿಶ್ವಾಸ. ಶ್ರುತಿಯಲ್ಲಿ ಪ್ರವೇಶವಿಲ್ಲದವರಿಗೆ ಶುತ್ಯರ್ಥವು ಸುಲಭವಾಗಿ ತಿಳಿಯುವಂತೆ ಮಾಡಲು ವ್ಯಾಸರು ಪುರಾಣಗಳನ್ನು ರಚಿಸಿದ್ದಾರೆ. ಹೀಗಿರುವಾಗ ಪುರಾಣಗಳ ಮೂಲಕ ನಾವು ಸುಲಭವಾಗಿ ಶ್ರುತಿಯ ತಾತ್ಪರ್ಯವನ್ನು ಗ್ರಹಿಸಬಹುದು. ಶ್ರುತ್ಯಾರ್ಥದ ಸ್ಪಷ್ಟೀಕರಣ ಹಾಗೂ ಪುಷ್ಟೀಕರಣ ಎರಡೂ ಪುರಾಣಗಳ ಪರಿಶೀಲನೆಯಿಂದ ಸಾಧ್ಯ. ದೃಷ್ಟಾಂತವಾಗಿ ಪ್ರಕೃತ ವಿಷ್ಣುಪುರಾಣವನ್ನು ನೋಡಬಹುದು.

ವಿಷ್ಣುಪುರಾಣವು ಪ್ರಾಚೀನ ಮತ್ತು ಆಧುನಿಕ ವಿದ್ವಾಂಸರ ವಿಶೇಷ ಗೌರವಾದರಗಳಿಗೆ ಪಾತ್ರವಾದ ಪುರಾಣ. ಹೆಸರೇ ಹೇಳುವಂತೆ ಇದರಲ್ಲಿ ವಿಷ್ಣುವಿನ ಅನೇಕ ಅವತಾರಗಳ ಕಥೆಯಿದೆ. ಇದು ತ್ರಿಮೂರ್ತಿಗಳಲ್ಲೊಬ್ಬನಾದ ವಿಷ್ಣುವಿನ ಚರಿತ್ರೆಯನ್ನೇ ವರ್ಣಿಸಿದ್ದರೂ ಅದು ಅದ್ವೈತದರ್ಶನವು ಬಣ್ಣಿಸಿದ ಪರಬ್ರಹ್ಮನನ್ನೇ ಗುರಿಯಾಗಿಟ್ಟುಕೊಂಡಿದೆ ಎಂಬುದು ಪುರಾಣವನ್ನು ಆಮೂಲಾಗ್ರವಾಗಿ ಓದಿದವರಿಗೆ ಅರ್ಥವಾಗುತ್ತದೆ. ಅದ್ವೈತದರ್ಶನವು ವಿವರಿಸುವಂತೆ ಈ ವಿಶ್ವದಲ್ಲಿ ಇರುವುದೊಂದೇ ಸತ್ಯ. ಅದು ನಾಮ, ರೂಪ, ಗುಣ, ಅಂಶ ಮುಂತಾದ ಯಾವುದೇ ವಿಕಾರಗಳಿಲ್ಲದ್ದು. ಭಕ್ತರು ಮಾತ್ರ ಅದಕ್ಕೆ ತಮ್ಮ ತಮ್ಮ ಅಭಿರುಚಿಗೆ ತಕ್ಕಂತೆ ನಾಮರೂಪಗಳನ್ನು ಶಾಸ್ತ್ರಾನುಸಾರವಾಗಿ ಕಲ್ಪಿಸಿ ಆರಾಧಿಸುತ್ತಾರೆ. "ಉಪಾಸಕಾನಾಂ ಕಾರ್ಯಾರ್ಥಂ ಬ್ರಹ್ಮಣೋರೂಪಕಲ್ಪನಾ" – ಉಪಾಸನೆಗಾಗಿ ಬ್ರಹ್ಮಕ್ಕೆ ರೂಪವನ್ನು ಕಲ್ಪಿಸಲಾಗುತ್ತದೆ ಎಂದು ಉಪನಿಷತ್ತೇ ಹೇಳುತ್ತದೆ. ಅದ್ವೈತ ಎಂದರೆ ಎರಡಿಲ್ಲದ್ದು ಎಂದರ್ಥ. ಒಂದೇ ಒಂದು ಎಂದು ತಾತ್ಪರ್ಯ. ಭಗವಂತನನ್ನು ವಿಷ್ಣುವೆಂದು ಕರೆದದ್ದೇ ಅದ್ವೈತವನ್ನು ಪ್ರತಿಪಾದಿಸಿದಂತೆ. ವಿಷ್ಣು ಶಬ್ದಕ್ಕೆ ವ್ಯಾಪಕ, ಸರ್ವವ್ಯಾಪಿ ಎಂದರ್ಥ. ಎಲ್ಲೆಡೆಯೂ ಇರುವವನು ಎಂದು ವಿವರಣೆ. ಎಲ್ಲೆಡೆಯೂ ಭಗವಂತನೇ ಇರುವುದಾದರೆ ಉಳಿದ ಜೀವಜಡಗಳಿಗೆ ಸ್ಥಳವೆಲ್ಲಿ? ಭೌತಶಾಸ್ತ್ರದ ನಿಯಮದಂತೆ ಒಂದೇ ಕಾಲದಲ್ಲಿ ಒಂದೇ ಸ್ಥಳದಲ್ಲಿ ಎರಡು ವಸ್ತುಗಳಿರುವುದು ಸಾಧ್ಯವಿಲ್ಲ. ವಿಷ್ಣುವಿನ ಸರ್ವವ್ಯಾಪ್ತತ್ವವನ್ನು ಒಪ್ಪಿಕೊಂಡು ವಿಶ್ವದ ಪ್ರತ್ಯೇಕ ಅಸ್ತಿತ್ವವನ್ನೂ ಒಪ್ಪಿಕೊಳ್ಳುವುದಾದರೆ ಭಗವಂತನು ಭೌತಿಕ ನಿಯಮವನ್ನು ಅಂದರೆ ವ್ಯಾವಹಾರಿಕ ಸತ್ಯತ್ವವನ್ನು

ಮೀರಿದವನು ಎಂಬುದನ್ನೂ ಒಪ್ಪಿಕೊಳ್ಳಬೇಕಾಗುತ್ತದೆ. ಆಗ ವಿಶ್ವದ ಸತ್ಯತ್ವವು ಪರಮಾತ್ಮನ ಸತ್ಯತ್ವಕ್ಕಿಂತ ಭಿನ್ನವಾಗುತ್ತದೆ. ಇದನ್ನೇ ಅದ್ವೈತವೇದಾಂತದಲ್ಲಿ ಪಾರಮಾರ್ಥಿಕ ಸತ್ಯ, ವ್ಯಾವಹಾರಿಕ ಸತ್ಯ ಎಂಬ ಹೆಸರುಗಳಿಂದ ಕರೆಯುತ್ತಾರೆ. ಪರಮಾತ್ಮನು ಪಾರಮಾರ್ಥಿಕ ಸತ್ಯವಾದರೆ ವಿಶ್ವವು ವ್ಯಾವಹಾರಿಕ ಸತ್ಯ. ಆದ್ದರಿಂದಲೇ ಈ ವಿಶ್ವವನ್ನು ಪರಮಾತ್ಮನಿಗಿಂತ ಭಿನ್ನವೆಂದಾಗಲಿ, ಅಭಿನ್ನವೆಂದಾಗಲಿ ಹೇಳುವಂತಿಲ್ಲ. ಭಿನ್ನವೆಂದರೆ ಪರಮಾತ್ಮನ ವ್ಯಾಪಕತ್ವಕ್ಕೆ ಕುಂದು. ಅಭಿನ್ನವೆಂದರೆ ಪ್ರಪಂಚದ ದೋಷಗಳನ್ನು ಪರಮಾತ್ಮನಿಗೆ ಅಂಟಿಸಿದಂತೆ. ಆದ್ದರಿಂದ ವಿಶ್ವ ಅನಿರ್ವಚನೀಯ. ಅದ್ವೈತದರ್ಶನದ ಇಂಥ ಪ್ರಮೇಯಗಳನ್ನು ಈ ಪುರಾಣದಲ್ಲಿ ಕೆಲವೊಮ್ಮೆ ವಾಚ್ಯವಾಗಿ, ಕೆಲವೊಮ್ಮೆ ಸೂಚ್ಯವಾಗಿ ಹೇಳಲಾಗಿದೆ. ಇಲ್ಲಿರುವ ಶ್ಲೋಕಗಳು ಈ ವಿಷಯವನ್ನು ಅತ್ಯಂತ ಸ್ಪಷ್ಟವಾಗಿ ಸರಳವಾಗಿ ವಿವರಿಸಿವೆ.

ವಿಷ್ಣುಪುರಾಣದ ವಾಕ್ಯಗಳನ್ನು ಪರಿಶೀಲಿಸುವುದಕ್ಕೆ ಮುಂಚೆ ಅದ್ವೈತಸಿದ್ಧಾಂತದ ಸ್ಥೂಲ ಪರಿಚಯವನ್ನಿಷ್ಟು ಮಾಡಿಕೊಳ್ಳುವುದು ಅಪೇಕ್ಷಿತ. 'ಅದ್ವೈತ' ಎಂದರೆ ಎರಡಿಲ್ಲದ್ದು ಎಂಬುದು ಸರಳವಾದ ಅರ್ಥ. ಸಚ್ಚಿದಾನಂದರೂಪವಾದ ಬ್ರಹ್ಮವನ್ನು ಬಿಟ್ಟು ವಿಶ್ವದಲ್ಲಿ ಇನ್ನೇನೂ ಇಲ್ಲ. ಪಂಚೇಂದ್ರಿಯಗಳ ಮೂಲಕ ನಾವು ಅನುಭವಿಸುತ್ತಿರುವ ಪ್ರಪಂಚವೆಲ್ಲ ಸ್ವಪ್ನ. ಪ್ರಪಂಚವು ನಮ್ಮಿಂದ ನಮ್ಮಲ್ಲಿಯೇ ಸೃಷ್ಟಿಗೊಂಡು ನಮ್ಮಲ್ಲಿಯೇ ಲಯವಾಗುವಂತೆ, ಬ್ರಹ್ಮದಲ್ಲಿ ತೋರಿ ಬ್ರಹ್ಮದಲ್ಲಿಯೇ ಇದ್ದು, ಬ್ರಹ್ಮದಲ್ಲಿಯೇ ಲಯಗೊಳ್ಳುತ್ತದೆ.. ಈ ದೃಷ್ಟಿಯಿಂದ ಬ್ರಹ್ಮವನ್ನು ಪ್ರಪಂಚದ ಸೃಷ್ಟಿ–ಸ್ಥಿತಿ–ಲಯಗಳಿಗೆ ಕಾರಣವೆಂದು ಹೇಳಲಾಗುತ್ತಿದೆ. ಬ್ರಹ್ಮವು ಇರವು–ಅರಿವು–ಆನಂದ (ಸತ್–ಚಿತ–ಆನಂದ) ಸ್ವರೂಪದ್ದು. ಇದು ಸರ್ವವ್ಯಾಪಿ. ಹಿಂದೆ ತಿಳಿಸಿದಂತೆ ವಿಷ್ಣು ಶಬ್ದಕ್ಕೆ ಸರ್ವವ್ಯಾಪಕ ಎಂದೇ ಅರ್ಥ. ಇಲ್ಲಿ ವ್ಯಾಪಕ ಎಂಬುದಕ್ಕೆ ಒಳಗೂ ಹೊರಗೂ ವ್ಯಾಪಿಸಿದವನು ಎಂದಿಷ್ಟೇ ಅರ್ಥವಲ್ಲ, ಮಧ್ಯದಲ್ಲಿಯೂ ಇರುವವನು ಎಂದರ್ಥ. ಉದಾಹರಣೆಗೆ, ಕೆರೆಯಲ್ಲಿ ಮುಳುಗಿರುವ ತಂಬಿಗೆಯಲ್ಲಿ ಒಳಗೂ ಹೊರಗೂ ನೀರಿರುತ್ತದೆ. ಆದರೆ ತಂಬಿಗೆಯ ಮೈಯಾದ ತಾಮ್ರದ ಭಾಗದಲ್ಲಿ ನೀರಿರುವುದಿಲ್ಲ. ವಿಷ್ಣು ಈ ರೀತಿ ವ್ಯಾಪಕನಲ್ಲ. ಹಾಗಾದಲ್ಲಿ ಅವನಿಲ್ಲದ ಸ್ಥಳವೊಂದುಂಟು ಎಂದಾಗಿ ಅವನು ಸರ್ವವ್ಯಾಪಕನೆನೆಸಿಕೊಳ್ಳುವುದಿಲ್ಲ. ಅವನ ವ್ಯಾಪಕತೆಯೆಂದರೆ ಮಡಕೆಯನ್ನೆಲ್ಲಾ ವ್ಯಾಪಿಸಿದ ಮಣ್ಣಿನಂತೆ, ಆಭರಣವನ್ನೆಲ್ಲ ವ್ಯಾಪಿಸಿದ ಚಿನ್ನದಂತೆ. ಭ್ರಾಂತಿಯಿಂದ ತೋರಿದ ಹಾವಿನಲ್ಲಿರುವ ಹಗ್ಗದಂತೆ. ಹೀಗೆ ಸರ್ವವ್ಯಾಪಿಯಾದ ಅವನ ಹೊರತಾಗಿ ಮತ್ತೊಂದು ಜೀವವಿಲ್ಲ. ಅಂತಃಕರಣವೆಂಬ ಹುಸಿ ಆವರಣದಿಂದಾಗಿ ಅವನೇ ಜೀವನೆಂಬ ಹೆಸರಿನಿಂದ ಬೇರೆ ಬೇರೆಯಾಗಿ ತೋರುತ್ತಾನೆ ಅಷ್ಟೆ. ಆದ್ದರಿಂದ ಯಜ್ಞದಲ್ಲಿ ಅವನೇ ಯಜಮಾನ, ಅವನೇ ಅಗ್ನಿ, ಅವನೇ ಹವಿಸ್ಸು. ಅವನು ಜ್ಞಾನಸ್ವರೂಪನೇ ವಿನಾ ಜ್ಞಾನವುಳ್ಳವನಲ್ಲ. ಇಂಥ ಬ್ರಹ್ಮವೊಂದೇ ಇರುವುದಾದರೆ ವಿಶ್ವದಲ್ಲಿ ತೋರುವ ನಾನಾ ವಸ್ತುಭೇದಗಳಿಗೇನು ಕಾರಣ ಎಂದರೆ ಅಜ್ಞಾನ ಎಂಬುದೊಂದೇ ಉತ್ತರ. ಭೇದವನ್ನುಂಟುಮಾಡುವ ಅಜ್ಞಾನ ನಾಶವಾದ ಮೇಲೆ ಆತ್ಮನಿಗೂ ಪರಮಾತ್ಮನಿಗೂ ಯಾವುದೇ ಭೇದ ಉಳಿಯುವುದಿಲ್ಲ. ಬಯಲಿನಲ್ಲಿದ್ದ ಮನೆಯೊಂದು ಬಿದ್ದಾಗ, ಮನೆಯ ಆವರಣದ ಗೋಡೆಗಳು ಕುಸಿದಾಗ ಮನೆಗೂ ಬಯಲಿಗೂ ಭೇದವುಳಿಯುವುದಿಲ್ಲ. ಮನೆಯೇ ಬಯಲಾಗಿ ಹೋಗುತ್ತದೆ. ಅದೇ ರೀತಿ ಅಜ್ಞಾನಗ್ರಂಥಿ ಕಳಚಿದಾಗ, ಜೀವಾತ್ಮನು ಪರಮಾತ್ಮನಲ್ಲಿ ಲೀನವಾಗುತ್ತಾನೆ. 'ಬ್ರಹ್ಮವನ್ನು ತಿಳಿದವನು ಬ್ರಹ್ಮವೇ ಆಗುತ್ತಾನೆ' ಎಂದು ಶ್ರುತಿ ಹೇಳುತ್ತದೆ. ಅದ್ವೈತಸಿದ್ಧಾಂತದ ಈ ಪ್ರಮೇಯಗಳನ್ನೇ ನಾವು ಈ ವಿಷ್ಣುಪುರಾಣದಲ್ಲಿ ಕಾಣಬಹುದು.

ವಿಷ್ಣುಪುರಾಣವು ಪರಾಶರರಿಂದ ಮೈತ್ರೇಯರಿಗಾಗಿ ಹೇಳಲ್ಪಟ್ಟಿದೆ. ಪುರಾಣದ ಪ್ರಾರಂಭದಲ್ಲಿ ಮೈತ್ರೇಯರು ಪರಾಶರರನ್ನು ಕುರಿತು ವಿಶ್ವದ ಸೃಷ್ಟಿ ಮತ್ತು ಬೆಳವಣಿಗೆಯನ್ನು ಕುರಿತಾಗಿ ಕೇಳುತ್ತಾರೆ. ಅದಕ್ಕೆ ಉತ್ತರವಾಗಿ ಪರಾಶರರು ಈ ಮಾತನ್ನಾಡುತ್ತಾರೆ.

ವಿಷ್ಣೋಃ ಸಕಾರಾದುದ್ಭೂತಂ ಜಗತ್ ತತ್ರೈವ ಚ ಸ್ಥಿತಮ್ ।
ಸ್ಥಿತಿಸಂಯಮಕರ್ತಾಸಾ ಜಗತೋಽಸ್ಯ ಜಗಚ್ಚ ಸಃ॥ 1–3–31

ಈ ಜಗತ್ತು ವಿಷ್ಣುವಿನಿಂದಲೇ ಹುಟ್ಟಿ ವಿಷ್ಣುವಿನಲ್ಲಿಯೇ ನೆಲೆಸಿದೆ. ಇದರ ಸ್ಥಿತಿ ಹಾಗೂ ಲಯಗಳಿಗೆ ಅವನೇ ಕರ್ತನು. ಇಷ್ಟೇ ಅಲ್ಲ, ಅವನೇ ಜಗತ್ತೂ ಆಗಿದ್ದಾನೆ.

ಇಲ್ಲಿ ಜಗತ್ತಿನ ಸೃಷ್ಟಿ–ಸ್ಥಿತಿ–ಲಯಗಳಿಗೆ ವಿಷ್ಣುವೇ ಕಾರಣನೆಂದು ಹೇಳಲಾಗಿದೆ. ಇದೇನೂ ವಿಶೇಷವಲ್ಲ. ಈಶ್ವರನನ್ನು ಒಪ್ಪುವ ಎಲ್ಲ ದ್ವೈತಿಗಳೂ ಇದೇ ಮಾತನ್ನಾಡುತ್ತಾರೆ. ಆದರೆ ಇಲ್ಲಿರುವ ವಿಶೇಷವನ್ನು ಗಮನಿಸಬೇಕು. ಕುಂಬಾರನು ಮಡಕೆಯನ್ನು ಮಾಡಿದಂತೆ ಈಶ್ವರನು ಪ್ರಪಂಚವನ್ನು ಸೃಷ್ಟಿಸಿದನೆಂದು ಈಶ್ವರವಾದಿಗಳು ಹೇಳುತ್ತಾರೆ. ಆದರೆ ಇಲ್ಲಿ "ವಿಷ್ಣೋಃ ಉದ್ಭೂತಂ" – ವಿಷ್ಣುವಿನಿಂದ ಪ್ರಪಂಚ ಹೊರಬಿದ್ದಿತು ಎಂಬ ಅರ್ಥವಿದೆ. ಅದೇ ರೀತಿ ವಿಷ್ಣುವಿನಲ್ಲಿ ಜಗತ್ತು ಇದೆ ಎಂದು ಇಲ್ಲಿ ಹೇಳಿದೆ. ಅದ್ವೈತವನ್ನೊಪ್ಪದವರು ಈಶ್ವರನಿಂದ ಹುಟ್ಟಿದ ಪ್ರಪಂಚ ಈಶ್ವರನಲ್ಲಿಯೇ ನೆಲೆಸಿದೆ ಎಂಬುದನ್ನು ಒಪ್ಪುವುದಿಲ್ಲ. ಭಗವಂತನು ಚತುರ್ದಶ ಲೋಕಗಳನ್ನು ತನ್ನ ಉದರದಲ್ಲಿಟ್ಟುಕೊಂಡು ಪೊರೆಯುತ್ತಾನೆ ಎನ್ನುತ್ತಾರಾದರೂ, ಈ ಮಾತುಗಳು ಕೇಳುವುದಕ್ಕೆ ಪ್ರಿಯವೇ ವಿನಾ ವಿಚಾರಕ್ಕೆ ನಿಲ್ಲುವುದಿಲ್ಲ. ಅದೇ ರೀತಿ ಈ ಪ್ರಪಂಚವು ಪರಮಾತ್ಮನಲ್ಲಿಯೇ ಲಯ ಹೊಂದುತ್ತದೆ ಎಂಬ ಮಾತೂ ಇತರ ದರ್ಶನಗಳಲ್ಲಿ ಸರಿಹೊಂದುವುದಿಲ್ಲ. ಪ್ರತಿಯೊಂದು ವಸ್ತುವೂ ನಾಶವಾಗುವಾಗ, ಲಯ ಹೊಂದುವಾಗ ತನ್ನ ಉಪಾದಾನಕಾರಣದಲ್ಲಿಯೇ ಲಯ ಹೊಂದುತ್ತದೆ. ಮಡಕೆ ನಾಶವಾಯಿತೆಂದರೆ ಸಣ್ಣ ಸಣ್ಣ ಚೂರುಗಳಾಗುತ್ತದೆ ಅಥವಾ ಮಣ್ಣಿನ ಕಣಗಳಾಗುತ್ತದೆ. ಆಭರಣ ಲಯವಾಯಿತೆಂದರೆ ಚಿನ್ನವಾಗುತ್ತದೆ. ಬ್ರಹ್ಮವು ಪ್ರಪಂಚದ ಉಪಾದಾನಕಾರಣವಾದುದರಿಂದ ಪ್ರಪಂಚದ ಲಯವು ಬ್ರಹ್ಮರೂಪವೇ ಆಗುವುದು ನ್ಯಾಯ. ಹೇಗೆ ಮಡಕೆಯು ಮಣ್ಣಿನಿಂದಲೇ ಹುಟ್ಟಿ, ಮಣ್ಣಿನಲ್ಲಿಯೇ ಇದ್ದು, ಮಣ್ಣಿನಲ್ಲಿಯೇ ಲಯವಾಗುತ್ತದೋ ಹಾಗೆಯೇ ಈ ವಿಶ್ವವು ಬ್ರಹ್ಮದಿಂದಲೇ ಹುಟ್ಟಿ, ಬ್ರಹ್ಮದಲ್ಲಿಯೇ ಇದ್ದು, ಬ್ರಹ್ಮದಲ್ಲಿಯೇ ಲಯವಾಗುತ್ತದೆ. ಮಡಕೆ ಎನ್ನುವುದು ಮಣ್ಣಿನಿಂದ ಮಾಡಿದ ಒಂದು ಆಕಾರ ಮಾತ್ರ. ಆದ್ದರಿಂದಲೇ ಮಡಕೆ ಮಣ್ಣಿನಲ್ಲಿದೆ ಎಂದು ಹೇಳಿದ್ದು. ಅದೇ ರೀತಿ ಪ್ರಪಂಚ ಬ್ರಹ್ಮದಲ್ಲಿ ಮೂಡಿದ ಒಂದು ಆಕಾರ ಮಾತ್ರ. ಆದ್ದರಿಂದಲೇ ಮಡಕೆ ಮಣ್ಣಿನಲ್ಲಿದೆ ಎಂದು ಹೇಳಿದ್ದು. ಅದೇ ರೀತಿ ಪ್ರಪಂಚ ಬ್ರಹ್ಮದಲ್ಲಿ ಮೂಡಿದ ಒಂದು ಆಕಾರ ಮಾತ್ರ. ಇಷ್ಟು ಮಾತ್ರ ಹೇಳದೆ ಕೊನೆಯಲ್ಲಿ ಜಗತ್ತೂ ಅವನೇ" ಎಂದಿದೆ. ಮಡಕೆಯ ರೂಪದಲ್ಲಿದ್ದಾಗಲೂ ಅದು ವಾಸ್ತವಿಕವಾಗಿ ಮಣ್ಣೇ ಆಗಿರುವಂತೆ ಪ್ರಪಂಚವು ಈಗಲೂ ಬ್ರಹ್ಮವೇ ಎಂಬುದು ಈ ಶ್ಲೋಕದಿಂದ ತಿಳಿದುಬರುತ್ತದೆ.

ವಿಷ್ಣು ಅರ್ಥಾತ್ ಬ್ರಹ್ಮವು ಏಕರೂಪವಾದದ್ದು. ಪ್ರಪಂಚವು ಅನೇಕಾತ್ಮಕವಾದದ್ದು. ಹೀಗಿರುವಾಗ ವಿಷ್ಣುವು ಪ್ರಪಂಚವಾಗುವುದು ಹೇಗೆ ಸಾಧ್ಯ ಎಂಬ ಶಂಕೆಗೆ ಸಮಾಧಾನ ಈ ಶ್ಲೋಕದಲ್ಲಿದೆ.

ಏಕಾನೇಕಸ್ವರೂಪಾಯ ಸ್ಥೂಲಸೂಕ್ಷ್ಮಾತ್ಮನೇ ನಮಃ ।
ಅವ್ಯಕ್ತವ್ಯಕ್ತರೂಪಾಯ ವಿಷ್ಣವೇ ಮುಕ್ತಿಹೇತವೇ" ॥ 1–3–3

ಬೀಜದಲ್ಲಿ ಮೊದಲು ಅತ್ಯಂತ ಸೂಕ್ಷ್ಮಸ್ಥಿತಿಯಲ್ಲಿರುವ ವೃಕ್ಷವು ಆಮೇಲೆ ವ್ಯಕ್ತವಾಗಿ ರೆಂಬೆಕೊಂಬೆಗಳಿಂದ ಕೂಡಿ ಸ್ಥೂಲವಾಗಿ ತೋರುತ್ತದೆ. ಅದೇ ರೀತಿ ಸ್ಥೂಲವಾಗಿ ತೋರುವ ಈ ವಿಶ್ವವು ಮೊದಲು ಸೂಕ್ಷ್ಮವಾಗಿತ್ತು. ಅನೇಕವಾಗಿರುವ ಈ ಪ್ರಪಂಚ ಏಕವಾಗಿತ್ತು. ಇದು ಕೇವಲ ಪ್ರಪಂಚದ ಸ್ವಭಾವ ಎಂದು ಭಾವಿಸಕೂಡದು. ಮೊದಲು ಏಕನೂ, ಸೂಕ್ಷ್ಮನೂ ಅವ್ಯಕ್ತನೂ ಆಗಿದ್ದ ವಿಷ್ಣುವೇ ಅನಂತರ ಅನೇಕನೂ ಸ್ಥೂಲನೂ ವ್ಯಕ್ತನೂ ಆದನು. ಈ ವಿಶ್ವವು ವಿಷ್ಣುವಿಗಿಂತ ಭಿನ್ನವಲ್ಲ ಎಂಬುದು ಇಲ್ಲಿನ ಅಂತರಾರ್ಥ.

ಜ್ಞಾನಸ್ವರೂಪಮತ್ಯಂತನಿರ್ಮಲಂ ಪರಮಾರ್ಥತಃ ।
ತಮೇವಾರ್ಥಸ್ವರೂಪೇಣ ಭ್ರಾಂತಿದರ್ಶನತಃ ಸ್ಥಿತಮ್ ॥ 1–3–6

ವಿಷ್ಣುವು ವಾಸ್ತವವಾಗಿ ಜ್ಞಾನಸ್ವರೂಪನು ಹಾಗೂ ಅತ್ಯಂತ ಶುದ್ಧನು. ಆದರೆ ಅಜ್ಞಾನದಿಂದ ಅವನೇ ಪರಮಾರ್ಥಸ್ವರೂಪನಾಗಿ ತೋರುತ್ತಾನೆ.

ಅದ್ವೈತದರ್ಶನದಲ್ಲಿ ಬ್ರಹ್ಮವನ್ನು ಶುದ್ಧಚೇತನವೆಂದು ಹೇಳಲಾಗುತ್ತದೆ. ಅವನು ಜಡವಾದ ಪ್ರಪಂಚಾಕಾರವಾಗಿ ತೋರಿಕೊಳ್ಳುವುದು ಹೇಗೆ? 'ಮಣ್ಣು ಗಡಿಗೆಯಾದಂತೆ' ಎಂದು ಉತ್ತರಿಸುವಂತಿಲ್ಲ. ಆಗ ಅವನು ಮಣ್ಣಿನಂತೆ ವಿಕಾರಿ ಹಾಗೂ ಅನಿತ್ಯ ಎಂದಾಗುತ್ತದೆ. ಆದ್ದರಿಂದ ಇದು ನಮ್ಮ ಅಜ್ಞಾನದಿಂದ ಎಂಬುದೇ ಸರಿಯಾದ ಉತ್ತರ. ನಸುಗತ್ತಲೆಯಲ್ಲಿ

ದೂರದಲ್ಲಿ ಬಿದ್ದಿದ್ದ ಹಗ್ಗವೊಂದು ನಮಗೆ ಹಾವಾಗಿ ಕಂಡಿತು. ಆದರೆ ಅಲ್ಲಿ ಹಗ್ಗವೇನೂ ಹಾವಾಗಿ ಬದಲಾವಣೆಗೊಂಡಿರುವುದಿಲ್ಲ. ಹಾವಿನ ವಿಷವೂ ಹಗ್ಗಕ್ಕೆ ಬರುವುದಿಲ್ಲ. ಅದೇ ರೀತಿ ಚಿತ್ಸ್ವರೂಪನಾದ ವಿಷ್ಣುವು ನಮ್ಮ ಭ್ರಾಂತಿಯಿಂದಾಗಿ ಜಡಪ್ರಪಂಚವಾಗಿ ತೋರುತ್ತಾನೆ. ಅವನಲ್ಲಿ ಯಾವುದೇ ವಿಕಾರವುಂಟಾಗುವುದಿಲ್ಲ. ಈ ಹಿಂದೆ 'ಮಣ್ಣು ಮಡಕೆಯಾದಂತೆ' ಎಂಬ ಉದಾಹರಣೆ ಬ್ರಹ್ಮವು ಹೇಗೆ ಪ್ರಪಂಚಾಕಾರವಾಗಿ ತೋರಿಕೊಂಡಿತು ಎಂಬುದಕ್ಕೆ ಪ್ರಾಥಮಿಕ ಹಂತದ ವಿವರಣೆ ಅಷ್ಟೆ. ಹಗ್ಗದಲ್ಲಿ ಹಾವು ಕಂಡಂತೆ ಎಂಬುದೇ ಸರಿ. ಪ್ರಪಂಚಾಕಾರವಾಗಿ ತೋರಿದರೂ ಬ್ರಹ್ಮದಲ್ಲಿ ಯಾವುದೇ ವಿಕಾರ ತಲೆ ಹಾಕದು. ಹಾಗೆ ಬ್ರಹ್ಮವು ಅನೇಕಾಕಾರವಾಗಿ ತೋರಲು ನಮ್ಮ ಅಜ್ಞಾನವೇ ಕಾರಣ ಎಂದು ವಿಷ್ಣುಪುರಾಣ ಒತ್ತಿ ಹೇಳುತ್ತದೆ.

ಜೀವ, ಈಶ್ವರ, ಜಗತ್ತುಗಳಿಗೆ ಭೇದವನ್ನೊಪ್ಪಿ ಈ ಪ್ರಪಂಚದ ಕರ್ತೃವು ಈಶ್ವರನೆನ್ನುವವರು ಅಷ್ಟಕ್ಕೇ ನಿಲ್ಲದೆ ಈಶ್ವರರು ಮೂವರು ಎಂದು ಅವರಲ್ಲಿಯೂ ಭೇದವನ್ನೆಣಿಸುತ್ತಾರೆ. ಈ ಪ್ರಪಂಚದ ಸೃಷ್ಟಿ-ಸ್ಥಿತಿ-ಲಯವನ್ನುಂಟುಮಾಡುವವರು ಬ್ರಹ್ಮ-ವಿಷ್ಣು-ಶಿವರೆಂಬ ಮೂವರು ಈಶ್ವರರು ಎಂದು ಒಪ್ಪಿ ಅವರಲ್ಲಿಯೂ ತರತಮಭಾವವನ್ನು ಕಲ್ಪಿಸುತ್ತಾರೆ. ಈ ಬಗ್ಗೆ ವಿಷ್ಣುಪುರಾಣ ಹೀಗೆ ಹೇಳುತ್ತದೆ.

ಸೃಷ್ಟಿಸ್ಥಿತ್ಯಂತಕರಣೀಂ ಬ್ರಹ್ಮವಿಷ್ಣುಶಿವಾತ್ಮಿಕಾಮ್ ।
ಸ ಸಂಜ್ಞಾಂ ಯಾತಿ ಭಗವಾನ್ ಏಕ ಏವ ಜನಾರ್ದನಃ ॥ 1-2-66

ಆ ಒಬ್ಬನೇ ಆದ ಭಗವಾನ್ ಜನಾರ್ದನನು ಈ ವಿಶ್ವದ ಸೃಷ್ಟಿ-ಸ್ಥಿತಿ-ಲಯ ಗಳನ್ನುಂಟುಮಾಡುವಂತಹ ಬ್ರಹ್ಮ-ವಿಷ್ಣು-ಶಿವ ಎಂಬ ಹೆಸರುಗಳನ್ನು ಹೊಂದುತ್ತಾನೆ.

ಪುರಾಣಗಳಲ್ಲಿ ಪ್ರಸಿದ್ಧರಾದ ತ್ರಿಮೂರ್ತಿಗಳು ಒಂದೇ ಪರಬ್ರಹ್ಮದ ಮೂರು ಹೆಸರುಗಳು ಮಾತ್ರ. ಆದ್ದರಿಂದ ಅವರಲ್ಲಿ ಯಾವುದೇ ಭೇದವಿಲ್ಲ. ಹೀಗಿರುವಾಗ ಹರಿಹರರಲ್ಲಿ ಭೇದವೆಣಿಸುವವರು ಹಾಗೂ ಅವರೀರ್ವರಲ್ಲಿ ತರತಮಭಾವವನ್ನು ಕಲ್ಪಿಸುವವರು ಅವಿವೇಕಿಗಳೆಂಬುದು ಸ್ಪಷ್ಟ.

ನಿರ್ಗುಣಸ್ಯಾಪ್ರಮೇಯಸ್ಯ ಶುದ್ಧಸ್ಯಾಪ್ಯಮಲಾತ್ಮನಃ ।
ಕಥಂ ಸರ್ಗಾದಿಕರ್ತೃತ್ವಂ ಬ್ರಹ್ಮಣೋಽಭ್ಯುಪಗಮ್ಯತೇ ॥ 1-3-1

ಬ್ರಹ್ಮವು ನಿರ್ಗುಣ ಮತ್ತು ಪ್ರಮಾಣಗಳಿಂದ ತಿಳಿಯಲಾಗದ್ದು. ಶುದ್ಧ ಹಾಗೂ ನಿರ್ಮಲವಾದದ್ದು. ಇಂಥ ಬ್ರಹ್ಮವನ್ನು ಸೃಷ್ಟಿ-ಸ್ಥಿತಿ-ಲಯಾದಿಗಳ ಕರ್ತೃವೆಂದು ಹೇಗೆ ಒಪ್ಪಲಾದೀತು?

ಇದು ಪರಾಶರರನ್ನು ಕುರಿತು ಮೈತ್ರೇಯರು ಮಾಡಿದ ಪ್ರಶ್ನೆ. ಇಲ್ಲಿ ಬ್ರಹ್ಮವು ನಿರ್ಗುಣ ಹಾಗೂ ಅಪ್ರಮೇಯ ಎಂದು ಸಿದ್ದವಾಗಿಟ್ಟುಕೊಂಡೇ ಸೃಷ್ಟಿಕರ್ತೃತ್ವವನ್ನು ಪ್ರಶ್ನಿಸಲಾಗಿದೆ ಎಂಬುದನ್ನು ಗಮನಿಸಬೇಕು. ಅದ್ವೈತಸಿದ್ಧಾಂತದಲ್ಲಿ ಬ್ರಹ್ಮವನ್ನು ಹೀಗೆಯೇ ವರ್ಣಿಸಿದೆ. ಇದಕ್ಕೆ ಪರಾಶರರು ಪರಬ್ರಹ್ಮದ ಶಕ್ತಿಯು ಅಚಿಂತ್ಯವಾದುದೆಂತಲೂ ಅದರಿಂದ ಲೀಲಾಜಾಲವಾಗಿ ಸೃಷ್ಟಿ ಮುಂತಾದ ಕಾರ್ಯಗಳು ಆಗಬಹುದೆಂದೂ ವಿವರಿಸುತ್ತಾರೆ.

ವಿಷ್ಣುವು ನಿರ್ಗುಣನೂ ಅಪ್ರಮೇಯನೂ ಆಗಿರಲಿ. ಆದರೆ ಅವನೊಬ್ಬನೇ ಸತ್ಯ. ಅವನಿಂದ ಹೊರತಾದದ್ದೆಲ್ಲ ಮಿಥ್ಯ ಎಂದು ಅದ್ವೈತಿಗಳು “ಬ್ರಹ್ಮ ಸತ್ಯಂ ಜಗನ್ಮಿಥ್ಯಾ” ಎಂದು ಘೋಷಿಸುತ್ತಾರಲ್ಲ? ಈ ವಿಷಯದಲ್ಲಿ ವಿಷ್ಣುಪುರಾಣ ಏನು ಹೇಳುತ್ತದೆ ಎಂಬ ಶಂಕೆಗೆ ಈ ಮುಂದಿನ ಶ್ಲೋಕ ಉತ್ತರವನ್ನೊದಗಿಸೀತು.

ಪರಮಾರ್ಥಸ್ತ್ವಮೇವೈಕೋ ನಾನ್ಯೋಽಸ್ತಿ ಜಗತಃಪತೇ ।
ತವೈಷ ಮಹಿಮಾ ಯೇನ ವ್ಯಾಪ್ತಮೇತಚ್ಚರಾಚರಮ್ ॥ 1-4-38

ಹೇ ಲೋಕದೊಡೆಯ! ನೀನೊಬ್ಬನೇ ಸತ್ಯವಾದ ವಸ್ತುವು. ನಿನ್ನನ್ನು ಬಿಟ್ಟು ಇನ್ನೇನೂ ಇಲ್ಲ. ನಿನ್ನ ಮಹಿಮೆಯಿಂದಲೇ ಈ ಚರಾಚರ ಪ್ರಪಂಚ ವ್ಯಾಪ್ತವಾಗಿದೆ.

ಇಲ್ಲಿ ನೀನೊಬ್ಬನೇ ಪರಮಾರ್ಥ ಸತ್ಯ ಎಂದು ಹೇಳುವ ಮೂಲಕ ಉಳಿದುದೆಲ್ಲ ಅಸತ್ಯ, ಮಿಥ್ಯ ಎಂದು ಹೇಳಿದಂತಾಯಿತು. ಇಲ್ಲಿ ಪುನಃ ಈ ಪ್ರಪಂಚ ನಿನ್ನಿಂದ ವ್ಯಾಪ್ತವಾಗಿದೆಯೆಂಬ ಮಾತು ಬಂದಿದೆ. ಈ ವ್ಯಾಪ್ತಿ,

ವ್ಯಾಪಕ ಮುಂತಾದ ಪದಗಳ ಅರ್ಥವನ್ನು ಹಿಂದೆ ನೋಡಲಾಗಿದೆ. ಪರಮಾತ್ಮನ ಮಹತ್ವ ಲೋಕವನ್ನೆಲ್ಲ ವ್ಯಾಪಿಸಿದೆಯೆಂದರೆ ಲೋಕವಿರುವೆಡೆಯೆಲ್ಲ ಅವನಿದ್ದಾನೆ ಎಂದೇ ಅರ್ಥ. ಒಂದೇ ಕಾಲದಲ್ಲಿ ಒಂದೇ ಸ್ಥಳದಲ್ಲಿ ಎರಡು ವಸ್ತುಗಳಿವೆಯೆಂದರೆ ಅವಗಳಲ್ಲಿ ಒಂದನ್ನು ಮಿಥ್ಯಾ ಎಂದು ಒಪ್ಪಕೊಳ್ಳಲೇಬೇಕು. ಹಗ್ಗವಿರುವಲ್ಲಿ ಹಾವು ಕಾಣುತ್ತಿದೆಯೆಂದರೆ ಆಮೇಲೆ – ದೀಪ ತಂದಾಗ – ಬಾಧಿತವಾಗುವ ಹಾವನ್ನು ಮಿಥ್ಯಾ ಎನ್ನಲೇಬೇಕು. 'ನೇಹ ನಾನಾಸ್ತಿ ಕಿಂಚನ' ಎಂಬ ಶ್ರುತಿ ವಾಕ್ಯದಿಂದ ಪ್ರಪಂಚವು ಬಾಧಿತವಾಗಿ ಬ್ರಹ್ಮವೊಂದೇ ಸತ್ಯ ಎಂಬುದು ದೃಢವಾಗುತ್ತದೆಯೆಂದು ಅದ್ವೈತಿಗಳು ಹೇಳುತ್ತಾರೆ. ಇಲ್ಲೂ ಅದೇ ಅಭಿಪ್ರಾಯವನ್ನೇ ನಾವು ಕಾಣಬಹುದು. ಈ ಮೇಲಿನ ಶ್ಲೋಕ ಸನಕಾದಿಗಳು ಮಾಡಿದ ವಿಷ್ಣುಸ್ತೋತ್ರದಿಂದ ಆರಿಸಿದ್ದು. ಇದರ ಮುಂದಿನ ಮೂರು ಶ್ಲೋಕಗಳೂ ಅದ್ವೈತಸಿದ್ಧಾಂತವನ್ನೇ ಪುಷ್ಟೀಕರಿಸುತ್ತವೆ.

ಯದೇತದ್ ದೃಶ್ಯತೇ ಮೂರ್ತಮೇತಜ್ಞಾದ್‌ನಾತ್ಮನಸ್ತವ ।
ಭ್ರಾಂತಿಜ್ಞಾನೇನ ಪಶ್ಯಂತಿ ಜಗದ್ರೂಪಮಯೋಗಿನಃ ॥ 1–4–39

ಮೂರ್ತಸ್ವರೂಪದಿಂದ ತೋರುವ ಈ ಪ್ರಪಂಚವೆಲ್ಲ ಜ್ಞಾನಸ್ವರೂಪನಾದ ನಿನ್ನದೇ ರೂಪ. ಯೋಗಿಗಳಲ್ಲದವರು ಮಾತ್ರ ಅಜ್ಞಾನದಿಂದ ಇದನ್ನು ಜಗತ್ತಿನ ರೂಪದಿಂದ ಕಾಣುತ್ತಾರೆ.

ಈ ಶ್ಲೋಕದಲ್ಲಿ ನಾವು ಮೂರು ವಿಷಯಗಳನ್ನು ಸ್ಪಷ್ಟವಾಗಿ ನೋಡಬಹುದು. ಮೊದಲನೆಯದು, ಪರಮಾತ್ಮನು ಜ್ಞಾನಸ್ವರೂಪನು ಎನ್ನುವುದು. ಪರಮಾತ್ಮ ಎಂದರೆ ನಿರಾಕಾರ ಜ್ಞಾನವೇ ವಿನಾ ಬೇರೆಯಲ್ಲ. ಎರಡನೆಯದೆಂದರೆ, ತೋರುವ ಈ ದೃಶ್ಯ ಪ್ರಪಂಚವೆಲ್ಲವೂ ಪರಮಾತ್ಮನೇ. ಶ್ರುತಿಯೂ ಹೀಗೆ ಹೇಳುತ್ತದೆ. "ದ್ವೇ ವಾವ ಬ್ರಹ್ಮಣೋ ರೂಪೇ ಮೂರ್ತಂ ಚೈವಾಮೂರ್ತಂಚ" (ಬೃ.3–3–1). ಮೂರ್ತ–ಅಮೂರ್ತಗಳೆರಡೂ ಪರಬ್ರಹ್ಮದ ರೂಪಗಳು. ಆದರೆ ಒಂದೇ ವಸ್ತುವು ಮೂರ್ತ ಹಾಗೂ ಅಮೂರ್ತ ಈ ಎರಡೂ ಆಗುವುದು ಹೇಗೆ ಸಾಧ್ಯ? ಇವುಗಳಲ್ಲಿ ಒಂದು ಮಾತ್ರ ಸತ್ಯವಾಗಿರಬಹುದು. ಮತ್ತೊಂದು ಮಿಥ್ಯೆಯಾಗಿರಲೇಬೇಕು; ಅಥವಾ ಎರಡೂ ಮಿಥ್ಯೆಯಾಗಿರಬಹುದು. ಈ ಸಂಶಯಕ್ಕೆ ಶ್ಲೋಕದ ಉತ್ತರಾರ್ಧದಲ್ಲಿ ಪರಿಹಾರವಿದೆ. ಅವೆರಡರಲ್ಲಿ ಜಗದ್ರೂಪ ಅಥವಾ ಮೂರ್ತರೂಪ ಸತ್ಯವಲ್ಲ. ಭ್ರಾಂತಿಯಿಂದಾಗಿ ತೋರುವಂಥಾದ್ದು. ಅಯೋಗಿಗಳಾದವರು, ಆತ್ಮಜ್ಞಾನಶೂನ್ಯರು ಮಾತ್ರ ಮೂರ್ತರೂಪವನ್ನು ನೋಡುತ್ತಾರೆ. ಸಂಸಾರಕ್ಕೆ ಅಜ್ಞಾನವೇ ಕಾರಣವೆಂಬ ಅದ್ವೈತಸಿದ್ಧಾಂತ ಇಲ್ಲಿ ಸ್ಪಷ್ಟವಾಗಿದೆ.

ಇದೇ ಅರ್ಥವನ್ನೇ ಮರುನುಡಿಯುತ್ತದೆ ಈ ಮುಂದಿನ ಶ್ಲೋಕ.

ಜ್ಞಾನಸ್ವರೂಪಮಖಿಲಂ ಜಗದೇತದಬುದ್ಧಯಃ ।
ಅರ್ಥಸ್ವರೂಪಂ ಪಶ್ಯಂತೋ ಭ್ರಾಮ್ಯಂತೇ ಮೋಹಸಂಪ್ಲವೇ ॥1–4–40

ಸಂಪೂರ್ಣಜ್ಞಾನಸ್ವರೂಪವಾಗಿರುವ ಈ ಜಗತ್ತನ್ನು ಬುದ್ಧಿಹೀನ ಜನರು ಅರ್ಥಸ್ವರೂಪದಿಂದ ನೋಡುತ್ತಾರೆ. ಆದ್ದರಿಂದ ಅವರು ಮೋಹಮಯವಾದ ಈ ಸಂಸಾರಸಾಗರದಲ್ಲಿ ಸುತ್ತುತ್ತಿರುತ್ತಾರೆ.

ತೋರುವ ಪ್ರಪಂಚವೆಲ್ಲ ಶುದ್ಧಜ್ಞಾನದಲ್ಲಿ ಅಧ್ಯಸ್ತವಾದುದರಿಂದ ಜ್ಞಾನವಲ್ಲದೆ ಬೇರೇನೂ ಅಲ್ಲ. ಅಜ್ಞಾನಿಗಳಿಗೆ ಮಾತ್ರ ಅದು ಭಿನ್ನ ಭಿನ್ನ ಆಕಾರದ ವಸ್ತುಗಳಾಗಿ ತೋರುತ್ತದೆ. ಚಲನಚಿತ್ರಮಂದಿರದಲ್ಲಿರುವುದು ಬಿಳಿಯ ಪರದೆ ಮಾತ್ರ. ಆದರೆ ಕತ್ತಲೆಯಲ್ಲಿ ಅಲ್ಲಿ ನಾನಾ ವರ್ಣದ ಚಿತ್ರಗಳು ಹರಿದಾಡುತ್ತವೆ. ಅಲ್ಲಿ ಬೆಳಕು ಬಂದರೆ ಬೇರಾವ ಚಿತ್ರಗಳೂ ತೋರದೆ ಬಿಳೀ ಪರದೆಯೊಂದೇ ತೋರುತ್ತದೆ. ಆಭರಣಗಳ ಮಳಿಗೆಯಲ್ಲಿ ನಾನಾ ಆಭರಣಗಳಿರುತ್ತವೆ. ಕೊಂಡುಕೊಳ್ಳಲು ಹೋದವರಿಗೆ ಅಲ್ಲಿ ನಾನಾ ಆಕಾರದ, ನಾನಾ ತೂಕದ ಆಭರಣಗಳು ಮನ ಸೆಳೆಯುತ್ತವೆ. ಆಕಾರಕ್ಕೆ ತಕ್ಕಂತೆ ಮೌಲ್ಯ. ಅಕ್ಕಸಾಲಿಗನೊಬ್ಬ ಅಲ್ಲಿಗೆ ಕೊಂಡುಕೊಳ್ಳಹೋದರೆ ಅವನು ಅದಾವುದನ್ನೂ ನೋಡುವುದಿಲ್ಲ. ಆಕಾರಕ್ಕೆ, ಕುಸುರಿ ಕೆಲಸಕ್ಕೆ ಅವನ ದೃಷ್ಟಿಯಲ್ಲಿ ಬೆಲೆಯಿಲ್ಲ. ಅವನು ನೋಡುವುದು ಚಿನ್ನವನ್ನು ಮಾತ್ರ. ಮರದಿಂದ ಮಾಡಿದ ಆನೆಯಲ್ಲಿ ಅಜ್ಞಾನಿಯು ಆನೆಯನ್ನು ನೋಡುತ್ತಾನೆ. ಜ್ಞಾನಿಯು ಮರವನ್ನು ನೋಡುತ್ತಾನೆ. ಈ ಅರ್ಥವನ್ನೇ ಮುಂದಿನ ಶ್ಲೋಕದಲ್ಲಿ ಕಾಣಬಹುದು.

ಯೇ ತು ಜ್ಞಾನವಿದಃ ಶುದ್ಧಚೇತಸಸ್ತೇಖಿಲಂ ಜಗತ್ ।
ಜ್ಞಾನಾತ್ಮಕಂ ಪ್ರಪಶ್ಯಂತಿತ್ವದ್ರೂಪಂ ಪರಮೇಶ್ವರ ॥ 1–4–41

ಹೇ ಪರಮೇಶ್ವರ! ಪರಿಶುದ್ಧ ಅಂತಃಕರಣವುಳ್ಳವರೂ, ಜ್ಞಾನವನ್ನು ಪಡೆದವರೂ ಆದ ಯೋಗಿಗಳು ಸಂಪೂರ್ಣ ಜಗತ್ತನ್ನು ನಿನ್ನ ಜ್ಞಾನಾತ್ಮಕಸ್ವರೂಪವನ್ನಾಗಿಯೇ ನೋಡುತ್ತಾರೆ.

ಈ ಮೇಲಿನ ನಾಲ್ಕೂ ಶ್ಲೋಕಗಳ ತಾತ್ಪರ್ಯವಿಷ್ಟೆ. ಪರಮಾತ್ಮ ಎಂದರೆ ವಿಶುದ್ಧ ಜ್ಞಾನ. ಭಿನ್ನ ಭಿನ್ನವಾಗಿ ತೋರುವ ವಿಶ್ವವೆಲ್ಲ ಆತನಲ್ಲಿ ಅಧ್ಯಸ್ತವಾದದ್ದು, ಸತ್ಯವಲ್ಲ. ಅಜ್ಞಾನವನ್ನು ದೂರಮಾಡಿಕೊಂಡಾಗ ಜ್ಞಾನವೊಂದೇ ಉಳಿಯುತ್ತದೆ, ವಿಶ್ವವಲ್ಲ.

ಈ ಪುರಾಣದ ಪ್ರಥಮಾಂಶದ ಒಂಬತ್ತನೆಯ ಅಧ್ಯಾಯದಲ್ಲಿ ಬ್ರಹ್ಮನು ಮಾಡಿದ ವಿಷ್ಣುಸ್ತುತಿಯಿದೆ. ಅದರಲ್ಲಿ ವಿಷ್ಣುವನ್ನು ಅದ್ವೈತಿಗಳ ಪರಬ್ರಹ್ಮದಂತೆಯೇ ವರ್ಣಿಸಲಾಗಿದೆಯಲ್ಲದೆ ತ್ರಿಮೂರ್ತಿಗಳಲ್ಲೊಬ್ಬನಾದ ವಿಷ್ಣುವಾಗಿ ಅಲ್ಲ. ಸಾಮಾನ್ಯವಾಗಿ ಇತರ ಗ್ರಂಥಗಳಲ್ಲಿ ವಿಷ್ಣು–ಬ್ರಹ್ಮ–ಶಿವರನ್ನು ಸತ್ವ–ರಜಸ್ಸು–ತಮಸ್ಸು ಗುಣಗಳ ಪ್ರತೀಕವೆಂದು ವರ್ಣಿಸಲಾಗುತ್ತದೆ. ಆದರೆ ಇಲ್ಲಿ ಬ್ರಹ್ಮ ಹೇಳುತ್ತಾನೆ, "ಸತ್ತ್ವಾದಯೋ ನಸಂತಿತೇ ಯತ್ರ ಚ ಪ್ರಾಕೃತಾ ಗುಣಾಃ" 1–9–44.
ಸತ್ವರಜಸ್ತಮೋಗುಣಗಳು ಪ್ರಕೃತಿಯವು. ಪರಮಾತ್ಮನಲ್ಲಿ ಈ ಯಾವ ಗುಣಗಳೂ ಇಲ್ಲ. ಅವನು ನಿರ್ಗುಣನು. ಅವನು ಅತ್ಯಂತ ಪರಿಶುದ್ಧನಾದರೂ ಉಪಚಾರಕ್ಕಾಗಿ ಅವನನ್ನು ಪರಮೇಶ, ಲಕ್ಷ್ಮೀಪತಿ ಎಂದು ಹೇಳಲಾಗುತ್ತದೆ. ಕಲಾ–ಕಾಷ್ಠ–ಮುಂತಾದ ಯಾವುದೇ ಕಾಲದ ಉಪಾಧಿಗಳಿಂದ ಅವನನ್ನು ಅಳೆಯಲಾಗದು. ಏಕೆಂದರೆ ಪ್ರಪಂಚವನ್ನು ಸೃಷ್ಟಿಸಿದ ಆತನು ಪ್ರಪಂಚಾತೀತನು. ಕಾಲವೂ ಪ್ರಪಂಚಕ್ಕೆ ಸೇರಿದ್ದು. "ಅವನು ಕಾರಣವೂ ಹೌದು, ಕಾರ್ಯವೂ ಹೌದು. ಅವನು ಕಾರಣಕ್ಕೂ ಕಾರಣನು, ಕಾರ್ಯಕ್ಕೂ ಕಾರ್ಯನು". ಈ ಮಾತನ್ನು ಗಮನಿಸಬೇಕು. ಪರಮಾತ್ಮನು ಕಾರಣಕಾರ್ಯವಿಭಾಗಗಳಿಗೆ ಸೇರಿದವನಲ್ಲ. ಶಾಸ್ತ್ರಜ್ಞರು ಕಾರ್ಯಕ್ಕಿಂತ ನಿಯತವಾಗಿ ಮೊದಲು ಇರುವುದನ್ನು ಕಾರಣವೆನ್ನುತ್ತಾರೆ. ಈ ಮೊದಲು, ಆಮೇಲೆ ಎನ್ನುವುದೆಲ್ಲ ಸೃಷ್ಟಿಯ ಅನಂತರ. ಆದ್ದರಿಂದ ಈ ಕಾರ್ಯಕಾರಣಭಾವವೂ ಸೃಷ್ಟಿಗೇ ಸೇರಿದ್ದು, ಪರಮಾರ್ಥವಲ್ಲ. ಈ ದೃಷ್ಟಿಯಿಂದಲೇ ಪರಮಾತ್ಮನು ಕಾರ್ಯವೂ ಹೌದು, ಕಾರಣವೂ ಹೌದು ಎಂದದ್ದು. ಅಜ್ಞಾನಿಗಳ ದೃಷ್ಟಿಯಿಂದ ಅವನು ಕಾರಣನೂ ಕಾರ್ಯವೂ ಆಗಿ ತೋರುತ್ತಾನೆ. ಹತ್ತಿಯಾಗಿ ಕಾರಣನೆನಿಸಿಕೊಂಡು ನೂಲಾಗಿ ಕಾರ್ಯವಾಗುತ್ತಾನೆ. ಈ ಕಾರ್ಯಕಾರಣ ಭಾವವೆಲ್ಲ ಅವನಲ್ಲಿ ಆರೋಪಿತವಾದವು ಎನ್ನುವುದಿಲ್ಲಿ ಮುಖ್ಯ ತಾತ್ಪರ್ಯ.

'ಹಗ್ಗದಲ್ಲಿ ಅಜ್ಞಾನದಿಂದಾಗಿ ಹಾವು ಅಧ್ಯಸ್ತವಾಗಿ ತೋರುವಂತೆ ಪರಮಾತ್ಮನಲ್ಲಿ ವಿಶ್ವವು ಅಧ್ಯಸ್ತವಾಗಿದೆ ಎಂಬ ತಾತ್ಪರ್ಯವನ್ನು ಹಿಂದಿನ ಕೆಲವು ಶ್ಲೋಕಗಳಲ್ಲಿ ನೋಡಿದ್ದಾಯಿತು. ಕಲ್ಪಿತ ವಸ್ತುಗಳು ಎಲ್ಲಿ ತೋರುತ್ತವೋ ಅದನ್ನು ಅಧಿಷ್ಠಾನವೆನ್ನುತ್ತಾರೆ. ಪ್ರಕೃತ ಉದಾಹರಣೆಯಲ್ಲಿ ಹಗ್ಗ ಅಧಿಷ್ಠಾನ. ಹಾವು ಅಧ್ಯಸ್ತ. ಅಧಿಷ್ಠಾನವನ್ನು ಬಿಟ್ಟು ಅಧ್ಯಸ್ತವಾದದಕ್ಕೆ ಅಸ್ತಿತ್ವವಿಲ್ಲ. ಅದೇ ರೀತಿ ಅಜ್ಞಾನಾವಸ್ಥೆಯಲ್ಲಿ ಅಧ್ಯಸ್ತದ ಹೊರಗೂ ಅಧಿಷ್ಠಾನ ತೋರುವುದಿಲ್ಲ. ಏಕೆಂದರೆ ಅಧ್ಯಸ್ತವಾದುದು ತೋರುತ್ತಿರುವಾಗ ಅದಕ್ಕಿಂತ ಹೊರತಾಗಿ ಅಧಿಷ್ಠಾನವನ್ನು ಊಹಿಸಲು ಸಾಧ್ಯವಿಲ್ಲ. ಧ್ರುವನು ವಿಷ್ಣುವನ್ನು ಸ್ತುತಿಸುವಾಗ ಈ ಮಾತನ್ನಾಡುತ್ತಾನೆ.

ಯಥಾ ಹಿ ಕದಲೀ ನಾನ್ಯಾ ತ್ವಕ್ಪತ್ರಾದಪಿ ದೃಶ್ಯತೇ ।
ಏವಂ ವಿಶ್ವಸ್ಯ ನಾನ್ಯಸ್ತ್ವಂ ತ್ವತ್‌ಸ್ಥಾಯೀಶ್ವರ ದೃಶ್ಯತೇ ॥ 1–13–67

ಪ್ರಭು! ಬಾಳೆಯ ಮರವು ತೊಗಟೆ ಹಾಗೂ ಎಲೆಗಳಿಗಿಂತ ಭಿನ್ನವಾಗಿ ತೋರುವುದಿಲ್ಲ. ಅದೇ ರೀತಿ ನೀನು ವಿಶ್ವಕ್ಕಿಂತ ಬೇರೆಯಾಗಿ ತೋರುವುದಿಲ್ಲ. ಈ ವಿಶ್ವವೂ ನಿನ್ನಲ್ಲಿಯೇ ಕಂಡುಬರುತ್ತದೆ.

ಧ್ರುವನ ಈ ಮಾತು ವಿಚಾರಾರ್ಹವಾಗಿದೆ. ಪ್ರಪಂಚದಲ್ಲಿ ಅವಯವವಸ್ತುಗಳು ಅವಯವವನ್ನು ಬಿಟ್ಟು ಹೊರಗಿರುವುದಿಲ್ಲ. ಬಾಳೆಯ ಗಿಡ ಎಂದರೇನು? ತೊಗಟೆ ಮತ್ತು ಎಲೆಗಳು. ಅದನ್ನು ಬಿಟ್ಟು ಬೇರೆ ಬಾಳೆಯ ಮರವೆಂಬುದೊಂದುಂಟೆ? ಅದೇ ರೀತಿ ಪರಮಾತ್ಮನು

ವಿಶ್ವಕ್ಕಿಂತ ಬೇರೆಯಾಗಿ ತೋರಿಬರುವುದಿಲ್ಲ ಎನ್ನುತ್ತಾನೆ. ಆದರೆ ಈ ಮಾತು ಸರಿಯೆ? ಶ್ರುತಿ ಹೇಳುತ್ತದೆ, "ಪಾದೋಸ್ಯ ವಿಶ್ವಾ ಭೂತಾನಿ" ಎಂದು. ಸಮಸ್ತ ಪ್ರಪಂಚ ಅವನ ಕಾಲು ಭಾಗ ಮಾತ್ರ. ಮುಕ್ಕಾಲು ಭಾಗ ಹೊರಗಿದೆಯಂತೆ. ಹೀಗಿರುವಾಗ ಈ ಪ್ರಪಂಚವನ್ನು ಬಿಟ್ಟು ನೀನಿಲ್ಲ ಎಂದರೆ ಹೇಗೆ? ಇದನ್ನು ನಾವು ಹೀಗೆ ಅರ್ಥೈಸಿಕೊಳ್ಳಬೇಕು. ಪರಮಾತ್ಮನು ನಿರ್ಗುಣನೂ ನಿರಾಕಾರನೂ ಆದುದರಿಂದ ಪ್ರಪಂಚದಲ್ಲಿಯೇ ಅವನನ್ನು ನೋಡಬೇಕು. ಹಿಂದೆ ನಾವು ನೋಡಿದಂತೆ ಅವನಿಗೆ ಮೂರ್ತ ಅಮೂರ್ತವೆಂಬ ಎರಡು ರೂಪಗಳು. ಪ್ರಪಂಚ ಅವನ ಮೂರ್ತರೂಪ. ಈ ರೂಪವನ್ನೇ ನಾವು ಆರಾಧಿಸಬೇಕು. ಅಜ್ಞಾನಾವಸ್ಥೆಯಲ್ಲಿ ನಾವು ಇದರ ಆಚೆಗಿನ ಅವನನ್ನು ಗ್ರಹಿಸಲಾರೆವು. ಒಟ್ಟಿನಲ್ಲಿ ಪರಮಾತ್ಮನನ್ನು ಬಿಟ್ಟು ಈ ಪ್ರಪಂಚವಿಲ್ಲ ಎನ್ನುವುದಿಲ್ಲಿ ಮುಖ್ಯ

ಶುದ್ಧಃ ಸಂಲಕ್ಷ್ಯತೇ ಭ್ರಾಂತ್ಯಾ ಗುಣವಾನಿವ ಯೋಗುಣಃ|
ತಮಾತ್ಮರೂಪಿಣಂ ದೇವಂ ನತಾಃ ಸ್ಮ ಪುರುಷೋತ್ತಮಮ್||
1–14–37

ಇದು ಪ್ರಚೇತಸನು ಮಾಡಿದ ವಿಷ್ಣುಸ್ತುತಿ. "ಪರಮಾತ್ಮನು ಶುದ್ಧನೂ ನಿರ್ಗುಣನೂ ಆಗಿದ್ದರೂ ಅಜ್ಞಾನದಿಂದಾಗಿ ಸಂಸಾರಿಗಳಿಗೆ ಸಗುಣನಾಗಿ ತೋರುತ್ತಾನೆ. ಅಂಥ ಆತ್ಮಸ್ವರೂಪನಾದ ಪುರುಷೋತ್ತಮನನ್ನು ನಮಿಸುತ್ತೇನೆ". ಇಲ್ಲಿ ವಿಷ್ಣುವು ಸ್ವತಃ ನಿರ್ಗುಣನು, ಭ್ರಾಂತಿಯಿಂದಾಗಿ ಜನರಿಗೆ ಸಗುಣನಾಗಿ ತೋರುತ್ತಾನೆ ಎಂದು ಹೇಳಿದೆ. ಸತ್ತ್ವರಜಸ್ತಮೋಗುಣಗಳಲ್ಲಿ ಯಾವುದೂ ಅವನಲ್ಲಿಲ್ಲ.. ಆದುದರಿಂದ ಅವನು ಸೃಷ್ಟಿ–ಸ್ಥಿತಿ–ಲಯಗಳಿಗೂ ಕಾರಣನಲ್ಲ. ಜನರ ಅಜ್ಞಾನದಿಂದಾಗಿ ಸಗುಣನಾಗಿ ಸೃಷ್ಟಿಸ್ಥಿತಿಲಯಗಳ ಕರ್ತೃವಾಗಿ ತೋರುತ್ತಾನೆ ಅಷ್ಟೆ. ಇಂಥ ವಿಷ್ಣುವನ್ನು ಇಲ್ಲಿ ಆತ್ಮನೆಂದಿರುವುದನ್ನು ಗಮನಿಸಬೇಕು. ಅವನೇ ನಮ್ಮೆಲ್ಲರ ಆತ್ಮನು. ಆದ್ದರಿಂದ ನಾವೆಲ್ಲ ಅವನಿಗಿಂತ ಭಿನ್ನರಲ್ಲ. ಛಾಂದೋಗ್ಯೋಪನಿಷತ್ತಿನ "ತತ್ ತ್ವಮಸಿ" ಎಂಬ ಮಾತಿನ ಅರ್ಥವನ್ನೇ ಬೇರೆ ರೀತಿಯಲ್ಲಿ ತಿಳಿಸಿದೆ.

ಇದನ್ನು ಇನ್ನೂ ಸ್ಪಷ್ಟವಾಗಿ ಪ್ರಹ್ಲಾದನ ಮಾತಿನಲ್ಲಿ ಕೇಳಬಹುದು. ಪ್ರಹ್ಲಾದನು ಪುರೋಹಿತರನ್ನು ಕುರಿತು ಹೇಳುವ ಮಾತಿದು –

ವಿಸ್ತಾರಃ ಸರ್ವಭೂತಸ್ಯ ವಿಷ್ಣೋಃ ಸರ್ವಮಿದಂ ಜಗತ್ ।
ದ್ರಷ್ಟವ್ಯಮಾತ್ಮವತ್ತಸ್ಮಾದಭೇದೇನ ವಿಚಕ್ಷಣೈಃ ॥ 1–17–84

ಈ ಸಂಪೂರ್ಣ ಜಗತ್ತು ಸರ್ವಭೂತಸ್ವರೂಪನಾದ ಭಗವಾನ್ ವಿಷ್ಣುವಿನ ವಿಸ್ತೃತ ರೂಪವೇ ಆಗಿದೆ. ಆದ್ದರಿಂದ ವಿವೇಕಿಗಳಾದವರು ಈ ಜಗತ್ತನ್ನು ತಮ್ಮ ಆತ್ಮದಂತೆ ಅಭೇದ ದೃಷ್ಟಿಯಿಂದಲೇ ನೋಡಬೇಕು.

ವಿಷ್ಣುಪುರಾಣದಲ್ಲಿ ಅದ್ವೈತಸಿದ್ಧಾಂತವನ್ನು ಸೂಚಿಸಲಾಗಿದೆ. ಅಷ್ಟೇ ಅಲ್ಲ ಪ್ರತಿಪಾದಿಸಲಾಗಿದೆ ಎನ್ನುವುದಕ್ಕೆ ಈ ಹಿಂದಿನ ಉದಾಹರಣೆಗಳೇ ಸಾಕಾದರೂ ಹೆಚ್ಚಿಗೆ ಬೇಕಾದಲ್ಲಿ ಪ್ರಹ್ಲಾದನು ಮಾಡಿದ ವಿಷ್ಣುಸ್ತೋತ್ರವನ್ನು ನೋಡಬಹುದು.

1–19–66ರಿಂದ 1–19–86ರವರೆಗೆ ಆತನು ಮಾಡಿದ ಸ್ತುತಿಯು ಅದ್ವೈತಿಗಳ ಬ್ರಹ್ಮದ ವರ್ಣನೆಯೇ ಆಗಿದೆ. ಕೊನೆಯಲ್ಲಿ 1–30–1, 1–30–2 ಈ ಎರಡು ಶ್ಲೋಕಗಳಲ್ಲಿ "ಹೀಗೆ ಪ್ರಹ್ಲಾದನು ವಿಷ್ಣುವು ತನ್ನಿಂದ ಅಭಿನ್ನನೆಂದು ಭಾವಿಸುತ್ತ ತನ್ಮಯನಾಗಿ ತಾನೇ ವಿಷ್ಣುವೆಂದು ತಿಳಿದನು. ಅವನು ತನ್ನನ್ನು ತಾನು ಮರೆತುಬಿಟ್ಟನು. ಅವನಿಗೆ ವಿಷ್ಣುವಿನ ಹೊರತಾಗಿ ಮತ್ತೇನೂ ತೋರುತ್ತಿರಲಿಲ್ಲ. ನಾನೇ ಅವ್ಯಯನೂ ಅನಂತನೂ ಆದ ಪರಮಾತ್ಮನೆಂದು ಅವನು ಭಾವಿಸಿದನು". ಆತ್ಮತತ್ತ್ವದ ಬಗ್ಗೆ ಯಾರಿಗಾದರೂ ಸಂದೇಹವಿದ್ದರೆ ಈ ಎರಡು ಪದ್ಯಗಳು ಅದನ್ನು ಸಂಪೂರ್ಣವಾಗಿ ನಿವಾರಿಸುತ್ತವೆ. ಪ್ರಹ್ಲಾದನು ಶ್ರೇಷ್ಠ ಭಕ್ತನೆಂದು ಪ್ರಸಿದ್ಧನಾಗಿದ್ದಾನೆ. ಆತ್ಮತತ್ತ್ವಾನುಸಂಧಾನವೇ ಭಕ್ತಿ ಎಂಬ ಶಂಕರಾಚಾರ್ಯರ ಮಾತಿಗೆ ಪ್ರಹ್ಲಾದನ ಈ ಧ್ಯಾನವೇ ಉದಾಹರಣೆ. ಅನಂತರ ಅವನ ಮುಂದೆ ಆವಿರ್ಭವಿಸಿದ ವಿಷ್ಣುವು ಆತನ ಈ ಭಾವನೆಯನ್ನು ಅಲ್ಲಗಳೆಯಲಿಲ್ಲ. ಆದ್ದರಿಂದ ಪ್ರಹ್ಲಾದನ "ಅಹಂ ವಿಷ್ಣುಃ" ಎಂಬ ನಿಶ್ಚಯ "ಸತ್ಯಸ್ಯ ಸತ್ಯ" ಎಂದಾಯಿತು.

ಈ ಪುರಾಣದ ಕೊನೆಯಲ್ಲಿ ಕೇಶಿಧ್ವಜನು ಖಾಂಡಿಕ್ಯನಿಗೆ ನೀಡಿದ ಉಪದೇಶವಿದೆ. ಅದನ್ನೋದಿದರೆ ಈ ಪುರಾಣದ ಒಲವೆತ್ತ ಎಂಬುದು ಸ್ಪಷ್ಟವಾಗುತ್ತದೆ.

ಅಕ್ಷೀಣೇಷು ಸಮಸ್ತೇಷು ವಿಶೇಷಜ್ಞಾನಕರ್ಮಸು ।
ವಿಶ್ವಮೇತತ್ಪರಂಚಾನ್ಯತ್ ಭೇದ ಭಿನ್ನದೃಶಾಂ ನೃಣಾಮ್ ॥ 6–7–53

ಎಲ್ಲಿಯವರೆಗೆ ವಿಶೇಷ (ನಾನಾ ವಿಷಯದ) ಜ್ಞಾನಕ್ಕೆ ಕಾರಣವಾದ ಕರ್ಮವು ಕ್ಷೀಣಿಸುವುದಿಲ್ಲವೋ ಅಲ್ಲಿಯವರೆಗೆ ಭಿನ್ನದೃಷ್ಟಿಯುಳ್ಳ ಪುರುಷರಿಗೆ ಬ್ರಹ್ಮ ಮತ್ತು ಪ್ರಪಂಚಗಳು ಭಿನ್ನಭಿನ್ನವಾಗಿ ತೋರುತ್ತವೆ.

ಪ್ರತ್ಯಸ್ತಮಿತಭೇಧಂ ಯತ್ಸತ್ತಾಮಾತ್ರಮಗೋಚರಮ್ ।
ವಚಸಾಮಾತ್ಮಸಂವೇದ್ಯಂ ತದ್‌ಜ್ಞಾನಂ ಬ್ರಹ್ಮಸಂಜ್ಞಿತಮ್ ॥6–7–53

ಯಾವುದರಲ್ಲಿ ಭೇದಗಳೆಲ್ಲ ಅಡಗಿವೆಯೋ, ಯಾವುದು ಕೇವಲ 'ಇದೆ' ಎಂದು ಮಾತ್ರ ಹೇಳಲ್ಪಡುತ್ತದೋ, ಯಾವುದು ಮಾತುಗಳಿಗೆ ನಿಲುಕದ್ದೋ, ಅನುಭವ ಮಾತ್ರ ಗೋಚರವೋ, ಆ ಜ್ಞಾನಕ್ಕೆ ಬ್ರಹ್ಮವೆಂದು ಹೆಸರು.

ವಿಭೇದಜನಕೇಽಜ್ಞಾನೇ ನಾಶಮಾತ್ಯಂತಿಕಂ ಗತೇ ।
ಆತ್ಮನೋ ಬ್ರಹ್ಮಣೋ ಭೇದಮಾಸಂತಂ ಕಃ ಕರಿಷ್ಯತಿ ॥ 6–7–96

ಭೇದವನ್ನುಂಟುಮಾಡುವ ಅಜ್ಞಾನವು ಸಂಪೂರ್ಣವಾಗಿ ನಾಶಹೊಂದಿದ ಮೇಲೆ ಬ್ರಹ್ಮ ಮತ್ತು ಆತ್ಮದಲ್ಲಿ ಎಂದೂ ಇಲ್ಲದಿರುವ ಭೇದವನ್ನು ಯಾವನು ಉಂಟುಮಾಡಬಲ್ಲ?

ಕೊನೆಯ ಮೂರು ಶ್ಲೋಕಗಳು ಬ್ರಹ್ಮದ ಅದ್ವಿತೀಯತೆಯನ್ನೂ ದ್ವೈತದೃಷ್ಟಿಗೆ ಕಾರಣವನ್ನೂ ಸ್ಪಷ್ಟವಾಗಿ ಘೋಷಿಸುತ್ತವೆ. ಯಾರಿಗೆ ಇನ್ನೂ ಕರ್ಮ ಸವೆದಿಲ್ಲವೋ ಅವರೇ ಪ್ರಪಂಚದಲ್ಲಿ ದ್ವೈತವನ್ನು ಕಾಣುತ್ತಾರೆ. ಅಜ್ಞಾನವೊಂದೇ ಜೀವಬ್ರಹ್ಮರ ಭೇದಕ್ಕೆ ಕಾರಣ. ಅಜ್ಞಾನ ನಾಶವಾದ ಮೇಲೆ ಅಂಥ ಭೇದ ಹೇಗೆ ಉಳಿದೀತು? ಏಕೆಂದರೆ ಮೊದಲೂ ಆ ಭೇದವಿರಲಿಲ್ಲ. ಅಜ್ಞಾನದಿಂದಾಗಿ ಇರುವಂತೆ ತೋರುತ್ತಿತ್ತು ಅಷ್ಟೆ. ಕೊನೆಯ ಶ್ಲೋಕ ಜೀವಬ್ರಹ್ಮಭೇದವನ್ನು ಕುರಿತಾಗಿ ವಿಷ್ಣುಪುರಾಣದ ಶಿಲಾಶಾಸನವೇ ಆಗಿದೆ. ಕರ್ಮ ಹಾಗೂ ಭಕ್ತಿ ಮಾರ್ಗಗಳಲ್ಲಿ ದ್ವೈತದೃಷ್ಟಿ ಇದ್ದೇ ಇರುತ್ತದೆ. ಅಲ್ಲಿ ಅದು ಅಪೇಕ್ಷಿತವೂ ಆಗಿದೆ. ಅದನ್ನು ಯಾರೂ ಅಲ್ಲಗಳೆಯುವಂತಿಲ್ಲ. ಅಂತಃಕರಣಶುದ್ಧಿಗೆ ಆ ಮಾರ್ಗಗಳೂ ಅವಶ್ಯಕ. ಪರಮಾರ್ಥ ದೃಷ್ಟಿಯಿಂದ ನೋಡಿದಾಗ ಉಪನಿಷದೇಕವೇದ್ಯವಾದ ಬ್ರಹ್ಮವೊಂದೇ ಸತ್ಯ. ವಿಷ್ಣುಪುರಾಣದ ಇಲ್ಲಿ ಉದಾಹರಿಸಿದ ಹಾಗೂ ಉದಾಹರಿಸದಿರುವ ನೂರಾರು ಶ್ಲೋಕಗಳು ಇದನ್ನೇ ಒತ್ತಿ ಹೇಳುತ್ತವೆ. ಶ್ರುತಿಸ್ಮೃತಿಪುರಾಣಗಳ ಬಹುಭಾಗವೆಲ್ಲ ಸಗುಣಬ್ರಹ್ಮದ ವರ್ಣನೆಗೇ ಮೀಸಲಾಗಿವೆಯೆಂಬುದೇನೋ ನಿಜ. ಆದರೆ ಅವೆಲ್ಲ ಶಾಖಾಚಂದ್ರನ್ಯಾಯದಂತೆ ನಿರ್ಗುಣಬ್ರಹ್ಮವನ್ನೇ ಸೂಚಿಸಿ ಸುಮ್ಮನಾಗಿಬಿಡುತ್ತವೆ. ಪುರಾಣದ ಕೊನೆಯಲ್ಲಿ ಕೇಶಿಧ್ವಜನ ಉಪದೇಶವನ್ನು ಕೇಳಿದ ಖಾಂಡಿಕ್ಯನ ಉಕ್ತಿಯನ್ನು ಉದಾಹರಿಸಿ ವಿಷಯವನ್ನು ಮುಗಿಸೋಣ.

ಅಹಂ ಮಮೇತ್ಯವಿದ್ಯೇಯಂ ವ್ಯವಹಾರಸ್ತಥಾ ತಯೋಃ ।
ಪರಮಾರ್ಥಸ್ತ್ವಸಂಲಾಪೋ ಗೋಚರೇ ವಚಸಾಂ ನ ಯಃ ॥ 6–7–100

ನಾನು ನನ್ನದು ಎಂಬ ಬುದ್ಧಿ ಹಾಗೂ ಆ ಬುದ್ಧಿಯಿಂದ ಮಾಡುವ ವ್ಯವಹಾರ ಎಲ್ಲವೂ ಅವಿದ್ಯೆಯೇ ಆಗಿದೆ. ಪರಮಾರ್ಥ ವಸ್ತುವನ್ನು ಕುರಿತು ಮಾತನಾಡಲಾಗದು. ಏಕೆಂದರೆ ಅದು ಮಾತಿಗೆ ನಿಲುಕದ್ದು. ಬ್ರಹ್ಮವನ್ನು ತಿಳಿಸುವಂತೆ ಬಾಷ್ಕಲನು ಕೇಳಿದಾಗ ಬಾಧ್ವನು ಮೌನದಿಂದಲೇ ಉತ್ತರಿಸದನೆಂದು ಕೇಳುತ್ತೇವೆ. ಪರಮಾರ್ಥ ವಸ್ತುವಿನ ವಿಷಯದಲ್ಲಿ ಮೌನವೇ ಮಾತನಾಡುತ್ತದೆ.

❑

ಮತ್ಸ್ಯ ಪುರಾಣದಲ್ಲಿ ಸಾಮಾಜಿಕ ಅಂಶಗಳು

—ಡಾ. ವಿ.ಆರ್. ಕುಮುದವಲ್ಲಿ

ಮತ್ಸ್ಯಪುರಾಣದಲ್ಲಿ ರಾಜಧರ್ಮವನ್ನು ಅತಿ ವಿಸ್ತಾರವಾಗಿ ಹೇಳಿದ್ದಾರೆ. ರಾಜನಾದವನು ಧರ್ಮರಕ್ಷಣೆ, ವಿಪತ್ತುಗಳ ಪರಿಹಾರ, ಇಹಪರ ಸುಖಗಳಿಗೆ ಸಹಾಯಕನಾದವನಾಗಿ ಇರಬೇಕು. ನಮ್ಮ ಸಮಾಜದಲ್ಲಿ ರಾಜನನ್ನು ಮನುಷ್ಯರೂಪದಿಂದ ಬಂದ ಧರ್ಮದೇವತೆಯೆಂದೇ ಭಾವಿಸಲಾಗಿದೆ. ಇವುಗಳ ಸಮರ್ಥನೆಯನ್ನು ಮತ್ಸ್ಯಪುರಾಣದಲ್ಲಿ ನಾವು ಕಾಣಬಹುದು.

ಭಾರತೀಯ ಸಾಹಿತ್ಯದಲ್ಲಿ ಪುರಾಣಗಳಿಗೆ ವಿಶೇಷವಾದ ಮಹತ್ವವಿದೆ. ಭಾರತೀಯ ಸಂಸ್ಕೃತಿ ಮತ್ತು ನಾಗರೀಕತೆಯನ್ನು ಸಾಧಾರಣ ಜನತೆಯಲ್ಲಿ ಪ್ರಚಾರ ಮಾಡಿದ ಶ್ರೇಯಸ್ಸು ಪುರಾಣಗಳಿಗೆ ಸೇರಿದ್ದು. ಈಗಲೂ ಸಹ ಹಿಂದೂಧರ್ಮಕ್ಕೆ ಈ ಪುರಾಣಗಳು ಮೂಲಾಧಾರವಾಗಿವೆ. 'ಪುರಾಣ' ಎಂಬ ಪದದ ಅರ್ಥ ["ಪುರಾಣಂ ಆಖ್ಯಾನಂ"] ಪುರಾತನವಾದದ್ದು ಎಂದು. ಈ ಹೆಸರಿನಿಂದ ಕೂಡಿದ ಗ್ರಂಥಗಳು ನಮ್ಮ ಪ್ರಾಚೀನ ಜ್ಞಾನವನ್ನು ಹೊಂದಿವೆ. ಭಾರತೀಯ ಸಾಹಿತ್ಯದಲ್ಲಿ ಪುರಾಣಗಳ ಜೊತೆಯಲ್ಲಿ ಇತಿಹಾಸದ ಹೆಸರೂ ಬರುತ್ತದೆ. ಭೂತಕಾಲದಲ್ಲಿ ನಡೆದ ಘಟನೆಗಳ ವರ್ಣನೆಯನ್ನು ಹೊಂದಿರುವುದೇ ಇತಿಹಾಸ. ಆದರೆ ಪುರಾಣಗಳ ವಿಷಯ ಇತಿಹಾಸಕ್ಕಿಂತ ಅಧಿಕ ವ್ಯಾಪಕವಾಗಿಯೂ ಮತ್ತು ವಿಸ್ತೃತವಾಗಿಯೂ ಇದೆ. ಇತಿಹಾಸ ಮತ್ತು ಪುರಾಣಗಳೆರಡೂ ಒಂದೇ ರೀತಿಯ ವಸ್ತುವನ್ನು ಒಳಗೊಂಡಿವೆ. ಇತಿಹಾಸ ಗ್ರಂಥಗಳಲ್ಲಿ ಮುಖ್ಯವಾಗಿ ನಾಯಕನ ಕಥೆಯಿದ್ದು ಧರ್ಮ, ತತ್ತ್ವ, ಶಾಸ್ತ್ರ ಮೊದಲಾದ ವಿಚಾರಗಳು ನಾಯಕ ಪ್ರಧಾನವಾದ ಕಥೆಗೆ ಪೂರಕವಾಗಿ, ಸಂದರ್ಭೋಚಿತವಾಗಿ ಪರಿಚಯಿಸಲಾಗಿರುತ್ತದೆ. ಆದರೆ ಪುರಾಣಗಳಲ್ಲಿ ಮುಖ್ಯ ಕಥಾವಸ್ತು ಧರ್ಮ, ತತ್ತ್ವ, ಶಾಸ್ತ್ರ ಮೊದಲಾದ ವಿಷಯಗಳ ವಿಚಾರವನ್ನು ಒಳಗೊಂಡಿದ್ದು ಅನೇಕ ನಾಯಕರ ಕಥೆಗಳು ಅವುಗಳಿಗೆ ಪೂರಕವಾಗಿ ವಿವಿಧ ಸಂದರ್ಭಗಳಲ್ಲಿ ಪರಿಚಯಿಸಲಾಗಿರುತ್ತದೆ. ಅಂದರೆ ಇತಿಹಾಸ ಗ್ರಂಥಗಳಲ್ಲಿ ಯಾವುದು ಪ್ರಮುಖವಾದ ಅಂಶವೋ ಅದೇ ಪುರಾಣ ಗ್ರಂಥಗಳಲ್ಲಿ ಸಹಾಯಕವಾಗಿ ಮತ್ತು ಯಾವುದು ಇತಿಹಾಸ ಗ್ರಂಥಗಳಲ್ಲಿ ಸಹಾಯಕವೋ ಅವೇ ಪುರಾಣಗಳಲ್ಲಿ ಪ್ರಮುಖ ಅಂಶಗಳಾಗಿ ಕಂಡುಬರುತ್ತದೆ.

ಇತಿಹಾಸ-ಪುರಾಣಗ್ರಂಥಗಳಲ್ಲಿ ಕಂಡುಬರುವ ವಿಷಯಗಳಲ್ಲಿ ಸಮಾನ ಅಂಶಗಳು ಇದ್ದರೂ ಅವುಗಳಲ್ಲಿ ಪ್ರತಿಯೊಂದು ಕೃತಿಗೂ ತನ್ನದೇ ಆದ ವಿಶೇಷತೆ(ವೈಶಿಷ್ಟ್ಯವಿದೆ)ಇದೆ. ಪ್ರತಿಯೊಂದು ಕೃತಿಯೂ ತನ್ನದೇ ಆದ ವಿಶಿಷ್ಟ ರೀತಿಯಲ್ಲಿ ವಿಚಾರಗಳನ್ನು ಮಂಡಿಸುತ್ತದೆ. ಇತಿಹಾಸ ಗ್ರಂಥಗಳಲ್ಲಿ ನಾಯಕರ ಚರಿತೆಯು ಪ್ರಮುಖವಾಗಿದ್ದು, ಪುರಾಣಗಳಲ್ಲಿ ಪ್ರಾಚೀನಕಾಲದ ಸಂಸ್ಕೃತಿಯು ಪ್ರಮುಖವಾಗಿರುತ್ತದೆ. ಇತಿಹಾಸ ಗ್ರಂಥಗಳಲ್ಲಿ ಮುಖ್ಯ ಕಥೆಯೊಡನೆ ಸಂಸ್ಕೃತಿಯು ಬೆರೆತಿದ್ದರೆ, ಪುರಾಣಗ್ರಂಥಗಳಲ್ಲಿ ಮುಖ್ಯ ವಸ್ತುವಾದ ಸಂಸ್ಕೃತಿಯ ಮಂಡನೆಯು ಕಥೆಯನ್ನು ಒಳಗೊಂಡಿರುತ್ತದೆ.

ಪುರಾಣದ ಲಕ್ಷಣ : सर्गश्च प्रनिसर्गश्च वंशोमन्वन्तराणि च ।
वंशानुचरितं चैव पुराणं पञ्चलक्षणम ॥

1) ಸರ್ಗ ಅಥವಾ ಸೃಷ್ಟಿ 2) ಪ್ರತಿಸರ್ಗ ಅಥವಾ ಸೃಷ್ಟಿಯ ವಿಸ್ತಾರ, ಲಯ ಮತ್ತು ಪುನ: ಸೃಷ್ಟಿ 3) ಸೃಷ್ಟಿಯ ಆದಿಯ ವಂಶಾವಳಿ 4) ಮನ್ವಂತರ- ಅಂದರೆ ಯಾವ ಯಾವ ಮನುವಿನ ವಿಷಯದಲ್ಲಿ ಯಾರು ಯಾರು ಇದ್ದರು ಮತ್ತು ಆ ಕಾಲದಲ್ಲಿ ನಡೆದ ಮುಖ್ಯ ಘಟನೆಗಳು 5) ವಂಶಾನು ಚರಿತ: ಸೂರ್ಯ ಮತ್ತು ಚಂದ್ರವಂಶದ ರಾಜರುಗಳ ವರ್ಣನೆ- ಇವೇ ಪುರಾಣದ ಐದು ವಿಷಯಗಳು.

ಸಾಧಾರಣವಾಗಿ ಎಲ್ಲಾ ಪುರಾಣಗಳ ಲಕ್ಷಣವೂ ಇದೆ. ಆದರೆ ಗಮನವಿಟ್ಟು ಅಧ್ಯಯನ ಮಾಡಿದರೆ, ಪುರಾಣಗಳಲ್ಲಿ ಈ ವಿಷಯಗಳಲ್ಲದೇ, ಇದಕ್ಕಿಂತ ಅಧಿಕವಾದ ವಿಷಯಗಳಿರುವುದು ಗೋಚರವಾಗುತ್ತದೆ. ಪುರಾಣಗಳನ್ನು ಭಾರತೀಯ ಸಂಸ್ಕೃತಿಯ ವಿಶ್ವಕೋಶವೆನ್ನಬಹುದು.ಅವುಗಳಲ್ಲಿ ಪ್ರತಿಪಾದ್ಯವಾಗದ ವಿಷಯವಿಲ್ಲ. ಜ್ಞಾನಯೋಗ, ಕರ್ಮಯೋಗ, ಭಕ್ತಿಯೋಗ, ವ್ರತ, ದಾನ, ದಂಡನೀತಿ, ವಾಸ್ತುಶಿಲ್ಪ, ಧರ್ಮಶಾಸ್ತ್ರ, ವೈದ್ಯ, ಜ್ಯೋತಿಷ್ಯ, ಸಾಂಸ್ಕೃತಿಕ, ಸಾಮಾಜಿಕ, ಭೌಗೋಳಿಕ, ರಾಜಕೀಯ ಅಂಶಗಳು, ತತ್ವಶಾಸ್ತ್ರ, ಇತಿಹಾಸ ಮೊದಲಾದ ಇಹಪರ ಜೀವನಕ್ಕೆ ಸಾಧಕವಾದ ಎಷ್ಟೋ ಸಂಗತಿಗಳು ಅವುಗಳಲ್ಲಿ ಅಡಕವಾಗಿವೆ.

ಪುರಾಣಗಳೇ ಪ್ರಾಮಾಣಿಕವಾದ ಮತ್ತು ಆದರ್ಶವಾದ ಇತಿಹಾಸವೆಂಬುದನ್ನು ನಾವು ಗಮನದಲ್ಲಿಡಬೇಕು. ಯಾವುದೇ ಸಮಾಜದ ಇತಿಹಾಸವು ಪೂರ್ಣರೂಪದಲ್ಲಿರಬೇಕಾದರೆ ಆ ಸಮಾಜದ ಸೃಷ್ಟಿಯಿಂದ ವರ್ತಮಾನಕಾಲದವರೆಗೆ ಅದು ಕ್ರಮಬದ್ಧರೂಪದಲ್ಲಿದ್ದರೆ, ಆಗಲೇ ಸಂಪೂರ್ಣ ಇತಿಹಾಸವೆಂದು ಸ್ವೀಕರಿಸಬೇಕು. ಯಾವ ದೇಶದ ಇತಿಹಾಸವೇ ಆಗಲಿ ಸೃಷ್ಟಿಯ ಆರಂಭದಿಂದ ಬರೆಯದೇ ಇರುವ

ಸಂದರ್ಭದಲ್ಲಿ ಅದನ್ನು ಅಪೂರ್ಣವೆಂದು ತಿಳಿಯಬೇಕು. ಇತಿಹಾಸದ ಈ ಸಂಪೂರ್ಣ ಕಲ್ಪನೆಯನ್ನು ನಾವು ಪುರಾಣಗಳಲ್ಲಿ ನೋಡಬಹುದು. ನಮ್ಮ ಪ್ರಾಚೀನ ಇತಿಹಾಸವು ಪುರಾಣಗಳಲ್ಲಿ ವಿಸ್ತೃತ ರೂಪದಲ್ಲಿದೆ.

ಅನೇಕ ದೃಷ್ಟಿಗಳಿಂದ ಪುರಾಣಗಳ ಮಹತ್ವವು ವಿಶೇಷವಾಗಿದೆ. ವೇದಗಳಲ್ಲಿ ವಿಹಿತವಾದ ಧರ್ಮದ ಸರಳ ಹಾಗೂ ಸುಭೋಧವಾದ ವರ್ಣನೆ ಇದೆ. ಹಾಗೆಯೇ ಪುರಾಣಗಳು ಸಾಮಾಜಿಕ ಮಹತ್ತ್ವದ ವಿಷಯದಲ್ಲೂ ಹಿಂದಿಲ್ಲ. ಪುರಾಣಗಳಲ್ಲಿ ನಮಗೆ ಆ ಸಮಯದ ಭಾರತೀಯ ಸಮಾಜದ ಸ್ವರೂಪದ ಪರಿಚಯವಾಗುತ್ತದೆ.

ಪ್ರಸಿದ್ಧವಾದ 18 ಮಹಾಪುರಾಣಗಳಲ್ಲಿ ಒಂದು ಮತ್ಸ್ಯಪುರಾಣ. ಮತ್ಸ್ಯರೂಪವನ್ನೆತ್ತಿದ ಮಹಾವಿಷ್ಣುವು ವೈವಸ್ವತ ಮನುವಿಗೆ ಉಪದೇಶಿಸಿದ ಪುರಾಣಕ್ಕೆ ಮತ್ಸ್ಯಪುರಾಣವೆಂಬ ಹೆಸರು ಬಂದಿದೆ. ಇದರಲ್ಲಿ 291 ಅಧ್ಯಾಯಗಳೂ 14 ಸಾವಿರ ಶ್ಲೋಕಗಳೂ ಇವೆ.

ಮೇಲೆ ತಿಳಿಸಿದಂತೆ ಪುರಾಣಲಕ್ಷಣಕ್ಕೆ ಅನುಗತವಾಗಿ ಇರುವ ಮತ್ಸ್ಯಪುರಾಣವು ಲಕ್ಷಣಾನುಸಾರವಾದ 5 ವಿಷಯಗಳನ್ನೂ ಒಳಗೊಂಡಿದೆ. ಪ್ರಸ್ತುತವಾಗಿರುವ ಈ ವಿಷಯಗಳಲ್ಲಿ ನಾವು ಆಗಿನ ಕಾಲದ ಸಮಾಜಕ್ಕೆ ಸಂಬಂಧಿಸಿದಂತೆ ಅನೇಕ ವಿಷಯಗಳನ್ನು ಅರಿಯಬಹುದು. ಉದಾಹರಣೆಗೆ – ಮನುಷ್ಯ ಜೀವನದ ವಿವಿಧ ಹಂತಗಳಲ್ಲಿ ಪಾಲಿಸಬೇಕಾದ / ಅನುಸರಿಸಬೇಕಾದ ಕರ್ತವ್ಯಗಳು, ನಿಯಮ ಆಚಾರಗಳು, ವಿಶೇಷವಾಗಿ ವ್ರತದಾನಾದಿಗಳು, ರಾಜಧರ್ಮ, ಅಪರಾಧ ಮತ್ತು ಶಿಕ್ಷೆ ಇವೇ ಮೊದಲಾದ ವಿಚಾರಗಳ ಉಲ್ಲೇಖವಿದೆ. ಇವುಗಳಲ್ಲಿ ನಾವು ನಮ್ಮ ಪ್ರಾಚೀನ ಸಮಾಜದ ಪ್ರತಿಬಿಂಬವನ್ನು ಕಾಣಬಹುದು.

ಇಲ್ಲಿ ನಾನು ಅಧ್ಯಾಯಗಳಿಗನುಗುಣವಾಗಿ ಕಂಡುಬರುವ ಸಾಮಾಜಿಕ ಅಂಶಗಳನ್ನು ತಮ್ಮ ಮುಂದೆ ಪ್ರಸ್ತುತಪಡಿಸುತ್ತಿದ್ದೇನೆ. ಪ್ರಾರಂಭದ 22 ಅಧ್ಯಾಯಗಳಲ್ಲಿ ಪ್ರಳಯ, ಸೃಷ್ಟಿ, ಮನ್ವಂತರ, ಸೂರ್ಯವಂಶ, ಪಿತೃವಂಶ, ಶ್ರಾದ್ಧವಿಧಿ, ಶ್ರಾದ್ಧಮಹಾತ್ಮ್ಯ, ಈ ವಿಷಯಗಳ ಮಂಡನೆ ಇದೆ. 23,24 ನೇ ಅಧ್ಯಾಯಗಳಲ್ಲಿ ಚಂದ್ರವಂಶದ ವರ್ಣನೆ ಪ್ರಾರಂಭವಾಗುತ್ತದೆ. 25ನೆಯ ಅಧ್ಯಾಯದಿಂದ 42ನೆಯ ಅಧ್ಯಾಯದವರೆಗೆ ಚಂದ್ರವಂಶಕ್ಕೆ ಸೇರಿದ ಯಯಾತಿ ಮಹಾರಾಜನ ಚರಿತವು ಕಂಡುಬರುತ್ತದೆ. ಈ ಯಯಾತಿ ಚರಿತದಲ್ಲಿ ನಾವು ಆಗಿನ ಸಮಾಜಕ್ಕೆ ಸಂಬಂಧಿಸಿದ ಕೆಲವು ವಿಷಯಗಳನ್ನು /ಅಂಶಗಳನ್ನು ಕಾಣಬಹುದು.

22ನೆಯ ಅಧ್ಯಾಯದಲ್ಲಿ ಶ್ರಾದ್ಧಮಾಹಾತ್ಮ್ಯವನ್ನು ತಿಳಿಸುವಾಗ ಕಂಡುಬರುವ ಒಂದು ಶ್ಲೋಕವು ನಮ್ಮ ಪ್ರಾಚೀನ ಸಮಾಜದ ಹಾಗೂ ನಮ್ಮ ಸಂಸ್ಕೃತಿಯ ಅಡಿಪಾಯವೆಂದು ಹೇಳಬಹುದು. ಶ್ರಾದ್ಧವನ್ನು ಮಾಡುವುದಕ್ಕೆ ಬಹುಶ್ರೇಷ್ಠವೆನಿಸಿದ ನೂರಾರು ತೀರ್ಥಕ್ಷೇತ್ರಗಳನ್ನು, ನದಿ-ನದಗಳನ್ನು ಕುರಿತು ಹೇಳುತ್ತಾ ಅಲ್ಲಿ ನಡೆಸುವ ಪಿತೃಕಾರ್ಯ, ಶ್ರಾದ್ಧ, ದಾನಾದಿಗಳು ಬಹಳ ಶ್ರೇಷ್ಠವೆಂದು ಹೇಳುವಾಗ ಈ ಶ್ಲೋಕವು ಕಂಡುಬರುತ್ತದೆ.

> सत्यं तीर्थं दया तीर्थं तीर्थमिन्द्रियानिग्रहः ।
> वर्णाश्रमाणां गेहोऽपि तीर्थं नु समुदाहृतम् ॥ (XXII-80)

ಸತ್ಯವೊಂದು ತೀರ್ಥ, ದಯೆಯೊಂದು ತೀರ್ಥ, ಜಿತೇಂದ್ರಿಯತ್ವವೂ ಒಂದು ತೀರ್ಥ, ವರ್ಣಾಶ್ರಮಧರ್ಮವನ್ನು ತಪ್ಪದೆ ನಡೆಸುವವರ ಮನೆಯೂ ಸಹ ಒಂದು ಪುಣ್ಯತೀರ್ಥವೇ ಸರಿ.

ಇಲ್ಲಿ ಪುಣ್ಯಕ್ಷೇತ್ರಗಳಷ್ಟೇ ಪವಿತ್ರವಾದುದು ಸತ್ಯ ಮೊದಲಾದ ಸದ್ಗುಣಗಳ ಆಚರಣೆ. ಪ್ರತಿಯೊಬ್ಬರೂ ತಮ್ಮ ತಮ್ಮ ವರ್ಣಾಶ್ರಮ ಧರ್ಮವನ್ನು ಪಾಲಿಸುವುದೇ ಅವರ ಕರ್ತವ್ಯ. ಇಂತಹ ಪವಿತ್ರವಾದ ಆದರ್ಶ ಸಮಾಜವನ್ನು ಹೊಂದುವುದೇ ಪರಮಗುರಿಯಾಗಿರಬೇಕು ಎಂಬುದನ್ನು ನಾವು ಇದರಿಂದ ತಿಳಿಯಬಹುದು.

34ನೇ ಅಧ್ಯಾಯದಲ್ಲಿ ಯಯಾತಿ ಮಹಾರಾಜನು ತನ್ನ ಮುಪ್ಪನ್ನು ಪುತ್ರನಾದ ಪುರುವಿನ ಯೌವನದೊಡನೆ ಬದಲಾಯಿಸಿಕೊಳ್ಳುವ ಪ್ರಸಂಗವನ್ನು ತಿಳಿಸಲಾಗಿದೆ.ಆಗ ಮಹಾರಾಜ ಯಯಾತಿಯು ರಾಜ್ಯಭಾರ ಮಾಡಿದ ರೀತಿಯನ್ನು ತಿಳಿಸುವ ಸಂದರ್ಭದಲ್ಲಿ ಈ ಕೆಳಗಿನ ಶ್ಲೋಕಗಳು ಕಂಡುಬರುತ್ತವೆ.

यथाकामं यथोत्साहं यथाकालं यथासुखम् ।
घर्माविरुद्धान् राजेन्द्रो यथार्हति स एव हि ॥
देवानतर्पयधज्ञैः श्राद्धैरपि पितामहान् ।
दिनानुग्रहौरिष्टैः कामैश्च द्विजसत्तमान् ॥

अतिथीनन्नणनैश्च विशश्च प्रतिपालनोः ।
आनृशंस्थेन शूद्रांश्च दस्थून्निग्रहणेन च ॥
धर्मेण च प्रजाः सर्वाः यथावदनुरञ्चयन् ।
ययातिः पालयामास साक्षदिन्द्र इवापरः ॥ [XXXIV-3,4,5,6]

"ಆ ರಾಜೇಂದ್ರನು (ಯಯಾತಿ ಮಹಾರಾಜ) ತನ್ನ ಅಭಿಲಾಷೆಗೆ ತಕ್ಕಂತೆ, ಉತ್ಸಾಹದಿಂದ ಆಯಾಕಾಲವನ್ನನುಸರಿಸಿ, ಸುಖಕ್ಕೆ ಲೋಪವು ಬಾರದಂತೆ ಧರ್ಮಕ್ಕೆ ಅವಿರುದ್ಧವಾದ ವಿಷಯಗಳನ್ನು ಭೋಗಿಸಿದನು. ದೇವತೆಗಳನ್ನು ಯಜ್ಞಗಳಿಂದಲೂ, ಪಿತೃಗಳನ್ನು ಶ್ರಾದ್ಧಗಳಿಂದಲೂ, ದೀನರನ್ನು ಪ್ರಸಾದದಿಂದಲೂ, ಬ್ರಾಹ್ಮಣರನ್ನು ಅವರ ಇಷ್ಟವಾದ ಕೋರಿಕೆಗಳಿಂದಲೂ ತೃಪ್ತಿಪಡಿಸಿದನು. ಅಭ್ಯಾಗತರಿಗೆ ಅನ್ನಪಾನಾದಿಗಳನ್ನು ನೀಡುತ್ತಿದ್ದನು. ವರ್ತಕರಿಂದ ತೆಗೆದುಕೊಳ್ಳುವ ಸುಂಕ, ಕಂದಾಯ ಮುಂತಾದವುಗಳಿಗೆ ಪ್ರತಿಯಾಗಿ ಅವರಿಗೆ ರಕ್ಷಣೆ ಕೊಡುತ್ತಿದ್ದನು. ಶೂದ್ರರಲ್ಲಿ ದಯೆ ತೋರುತ್ತಿದ್ದನು. ಕಳ್ಳರನ್ನು ದಂಡಿಸುತ್ತಿದ್ದನು. ಪ್ರಜೆಗಳೆಲ್ಲರನ್ನೂ ಧರ್ಮದಿಂದ ಸಂತೋಷಪಡಿಸುತ್ತಾ ಮತ್ತೊಬ್ಬ ಇಂದ್ರನೇ ಬಂದಿರುವನೇನೋ ಎಂಬಂತೆ ಯಯಾತಿ ಮಹಾರಾಜನು ರಾಜ್ಯವನ್ನು ಪಾಲಿಸುತ್ತಿದ್ದನು."

ಇಲ್ಲಿ ನಾವು ಸಮಾಜದಲ್ಲಿರುವ ಆಯಾಯ ವೃತ್ತಿಪರರಿಗೆ ರಾಜನು ಅವರಿಗೆ ಅನುಕೂಲವಾಗಿರುವ ಕೋರಿಕೆಗಳನ್ನು ಒದಗಿಸುವುದರ ಮೂಲಕ ಉತ್ತಮ ರಾಜ್ಯಭಾರ ಮಾಡುತ್ತಿದ್ದನು ಎಂಬುದನ್ನು ಕಾಣಬಹುದು. ತೆರಿಗೆ ಮೊದಲಾದವುಗಳನ್ನು ಸ್ವೀಕರಿಸಿ ಅದಕ್ಕೆ ಸರಿಯಾಗಿ ಪ್ರಜೆಗಳಿಗೆ ರಕ್ಷಣೆ ನೀಡುತ್ತಿದ್ದನು. ಹಾಗೆಯೇ ಚೋರರು ಮೊದಲಾದ ಅಪರಾಧಿಗಳನ್ನು ದಂಡಿಸುತ್ತಿದ್ದನು. ಹೀಗೆ ಪ್ರಜೆಗಳ ಪಾಲನೆ, ಶಿಕ್ಷೆ ಎರಡೂ ಕ್ರಮಗಳನ್ನು ಔಚಿತ್ಯಪೂರ್ಣವಾಗಿ ಪಾಲಿಸುವ ರಾಜನನ್ನು ದೇವರೆಂದೇ ಪರಿಗಣಿಸಲಾಗಿದೆ, ಭಾರತೀಯ ಸಮಾಜದಲ್ಲಿ **"राजा प्रत्यक्ष देवता"** ಎಂದು ರಾಜನಿಗೆ ದೇವಸಮಾನವಾದ ಗೌರವಭಕ್ತಿಗಳನ್ನು ತೋರಿಸಲಾಗುತ್ತದೆ. ಹಾಗೆಯೇ ಇಲ್ಲಿಯೂ ಯಯಾತಿ ಮಹಾರಾಜನನ್ನು ಸಾಕ್ಷಾತ್ ದೇವೇಂದ್ರನಿಗೇ ಹೋಲಿಸಿ ಗೌರವಿಸಲಾಗಿದೆ. ಇಂತಹ ಯಯಾತಿಯು ಇಂದ್ರಿಯ ಸುಖಗಳನ್ನು ಅನುಭವಿಸಿದರೂ ಧರ್ಮಕ್ಕೆ ಅಡ್ಡಿಬಾರದಂತೆ ಶ್ಲಾಘ್ಯವಾದುದನ್ನೇ ಅನುಭವಿಸುತ್ತಿದ್ದನು ಎಂಬುದೂ ಇಲ್ಲಿ ಗಮನಿಸಬೇಕಾದ ಅಂಶ.

स राजा सिंहविक्रान्तो युवा विषयगोचरः ।
अविरोधेन धर्मस्य चचार सुखमुत्तमम् ॥ [XXXIV-7]

ಅಂದರೆ ಧರ್ಮಮಾರ್ಗದಲ್ಲಿ ಸುಖವನ್ನು ಅನುಭವಿಸುವುದು ಸಮಾಜದ ಹಿತಕ್ಕೂ ಒಳಿತು.

ಮುಂದೆ ಯಯಾತಿಗೆ ಪುತ್ರನಿಂದ ಯೌವನವನ್ನು ಪಡೆದು ಅನೇಕ ವರ್ಷಗಳ ಕಾಲ ಸುಖಿಸಿದ ನಂತರ ಅವನಿಗೆ ಜ್ಞಾನೋದಯವಾಗುತ್ತದೆ. ತುಪ್ಪ ಸುರಿದಷ್ಟೂ ಬೆಂಕಿ ಪ್ರಜ್ವಲಿಸುವಂತೆ, ಸುಖ ಅನುಭವಿಸಿದಷ್ಟೂ ಅದರ ಆಸೆ ಮತ್ತಷ್ಟು ಹೆಚ್ಚುತ್ತಲೇ ಇರುವುದು. ಜಗತ್ತಿನಲ್ಲಿರುವ ಆಹಾರ ಚಿನ್ನ ಮೊದಲಾದ ವಸ್ತುಗಳು ಒಬ್ಬನಿಗೆ ಸಾಕಾಗುವುದಿಲ್ಲ. ಎಲ್ಲವೂ ದೊರೆತರೂ ಆತನ ಆಸೆ ತೀರುವುದಿಲ್ಲ. ಆದ್ದರಿಂದ ಇದನ್ನು ಅರಿತು ಮನಸ್ಸಿಗೆ ಶಾಂತಿಯನ್ನು ತಂದುಕೊಳ್ಳಬೇಕು ಎಂದು ಹೀಗೆ ಸಮಾಜದಲ್ಲಿ ಶಾಂತಿ

ನೆಲೆಸಬೇಕಾದರೆ ಪ್ರತಿಯೊಬ್ಬರ ಸುಖಾದಿಗಳ ಆಸೆಗೆ ಮಿತಿ ಇರಬೇಕು ಎಂಬುದನ್ನು ತಿಳಿಸುತ್ತದೆ. ಇದಕ್ಕೆ ರಾಜಾದಿಗಳೂ ಹೊರತಲ್ಲ.

न जातु कामः कामानामुपभोगेन शाम्यति ।
हविषा कृष्णवर्त्मेव भूय एवाभिवर्धते ॥
यत्पृथिव्यां व्रीहियवं हिरण्यं पशवः स्त्रियः ।
नालमेकस्य तत्सर्वमिति मत्वा शमं व्रजेत् ॥
[XXXIV-10-11]

ಆನಂತರ ಯಯಾತಿ ಮಹಾರಾಜನು ಪುರುವಿನಿಂದ ಪಡೆದ ಯೌವನವನ್ನು ಹಿಂದಿರುಗಿಸಿ ತನ್ನ ಮುಪ್ಪನ್ನು ಹಿಂಪಡೆಯುತ್ತಾನೆ. ಜೇಷ್ಠ ಪುತ್ರನಾದ ದೇವಯಾನಿಯ ಪುತ್ರ ಯದುವನ್ನು ಬಿಟ್ಟು ಕನಿಷ್ಠಪುತ್ರನಾದ ಶರ್ಮಿಷ್ಠೆಯ ಪುತ್ರ ಪುರುವಿಗೆ ರಾಜ್ಯಾಭಿಷೇಕವನ್ನು ಮಾಡಲು ನಿರ್ಧರಿಸುತ್ತಾನೆ. ಆಗ ಪ್ರಜಾ ಪ್ರಮುಖರು ಅದನ್ನು ಪ್ರಶ್ನಿಸಿ ಅದು ಪರಂಪರಾಗತವಾದ ಧರ್ಮವಲ್ಲ ಎಂದರು. ಅಲ್ಲಿ ಯಯಾತಿಯು ನಿಜವಾದ ಪುತ್ರನೆಂದರೆ ಯಾರು ಎಂಬುದನ್ನು ಹೇಳುತ್ತಾನೆ.

कथं ज्येष्ठमतिक्रम्य कनीयान् राज्यमर्हति ।
एतत् सम्बोधयामस्त्वां स्वधर्ममनुपालय ॥
ब्राह्मणप्रमुरव वर्णा : सर्वे श्रृणवन्तु मे वचः ।
ज्येष्ठं प्रति यतो राज्यं न देयं मे कथञ्चन ॥
मम ज्येष्ठेन यदुना नियोगो नानुपालितः ।
प्रतिकूलः पितुर्यश्च न स पुत्रः सतां मत : ॥
मातापित्रोर्वचनकृद्धितः पथ्यश्च यः सुतः ।
स पुत्रः पुत्रवधश्च वर्तते पितृमातृषु ॥ [XXXIV-18-21]

ಇಲ್ಲಿ ಪುತ್ರನಾದವನಿಗೆ ತನ್ನ ಜನ್ಮದಾತರನ್ನು ಕುರಿತು ಇರಬೇಕಾದ ಜವಾಬ್ದಾರಿಯನ್ನು ತಿಳಿಸಲಾಗಿದೆ. ಇಂತಹ ನಡತೆ ಶಾಂತಿಯುತ ಸಮಾಜಕ್ಕೆ ಕಾರಣ. ಇದು ಎಂದೆಂದಿಗೂ ನಮಗೆ ಆದರ್ಶಪ್ರಾಯವಾದುದು.

ನಂತರ ಯಯಾತಿಯು ಪುರಪ್ರಮುಖರ ಅಪ್ಪಣೆ ಪಡೆದೇ ಪುರುವಿನ ಪಟ್ಟಾಭಿಷೇಕವನ್ನು ನಡೆಸುತ್ತಾನೆ.

पुत्रो यत्स्वानुवर्तेत स राजा पृथिवीपतिः ।
भवन्तः प्रतिजानन्तु पूरु राज्येऽभिषिच्यताम् ॥
यः पुत्रो गुणसम्पन्नो मात्रापित्रोर्हितः सदा ।
सर्वं सोऽर्हति कल्याणं कनीयानपि स प्रभुः ॥ [XXXIV-25-26]

ಇಲ್ಲಿ ರಾಜನಾದವನೂ ಕೂಡ ಒಂದು ವೇಳೆ ತನ್ನ ಕಾರ್ಯಗಳಲ್ಲಿ ಪ್ರಜೆಗಳಿಗೆ ಅನುಮಾನ ಬಂದರೆ ಅವುಗಳನ್ನು ಪರಿಹರಿಸಿ ಅವರ ಒಪ್ಪಿಗೆ ಪಡೆದೇ ಮುಂದಿನ ಕ್ರಮ ತೆಗೆದುಕೊಳ್ಳುತ್ತಿದ್ದುದನ್ನು ಕಾಣಬಹುದು. ಹೀಗೆ ರಾಜನ ಆಡಳಿತದಲ್ಲಿ ಪಾರದರ್ಶಕತೆ ಇದ್ದು ಸರ್ವಾಧಿಕಾರವಿರಲಿಲ್ಲ. ವಂಶಪಾರಂಪರ್ಯವಾಗಿ ಬರುವ ಅಧಿಕಾರವನ್ನು ಧರ್ಮಪ್ರಕಾರವಾಗಿದ್ದರೂ ಅರ್ಹರಾಗಿಲ್ಲದಿದ್ದರೆ ಅವರಿಗೆ ನೀಡದೆ ಅರ್ಹತೆಯುಳ್ಳವರಿಗೇ ನೀಡುವುದು ಸರಿ ಎಂದು ಭಾವಿಸಲಾಗಿತ್ತು.

"ಬ್ರಾಹ್ಮಣಾದಿ ಸಕಲ ವರ್ಣದವರೇ, ಜ್ಯೇಷ್ಠನಾದ ಯದುವಿಗೆ ನಾನೇಕೆ ರಾಜ್ಯವನ್ನು ಕೊಡುವುದಿಲ್ಲ ಎಂಬುದನ್ನು ಹೇಳುವೆನು, ಕೇಳಿರಿ. ಹಿರಿಯನಾದ ಯದುವು ನನ್ನ ಅಪ್ಪಣೆಯನ್ನು ಮನ್ನಿಸಲಿಲ್ಲ, ತಂದೆಗೆ ಪ್ರತಿಕೂಲನಾದವನು ಮಗನಲ್ಲವೆಂಬುದು ಧರ್ಮಶಾಸ್ತ್ರಜ್ಞರ ಅಭಿಪ್ರಾಯ. ತಾಯಿ-ತಂದೆಯರ ಮಾತನ್ನು ನಡೆಸಿ, ಹಿತವನ್ನು ಕೋರಿ ಅವರ ಮನಸ್ಸೊಪ್ಪುವಂತೆ ನಡೆಯುವ ಮಗನೇ ಮಗನು. ಈ ಗುಣಗಳಿಂದ ಕೂಡಿ ನಡೆಯತಕ್ಕವನು ಯಾರಾದರೂ ಸರಿ, ದೇಹಸಂಬಂಧದಿಂದ ಮಗನಲ್ಲದಿದ್ದರೂ ನಿಜವಾಗಿ ಮಗನೇ ಎನಿಸುತ್ತಾನೆ.

ಪುತ್ರನಿಗೆ ರಾಜ್ಯ ಪಟ್ಟಾಭಿಷೇಕ ಮಾಡಿದ ನಂತರ ಯಯಾತಿಯು ವನದಲ್ಲಿ ವಾಸಿಸಲು ಹೊರಡುತ್ತಾನೆ. 35ನೆಯ ಅಧ್ಯಾಯದಲ್ಲಿ ಯಯಾತಿಯ ವಾನಪ್ರಸ್ಥಾಶ್ರಮದ ವರ್ಣನೆ ಇದೆ.

सजितात्मा जितक्रोधस्तर्पयन् पितृदेवताः ।
अग्नींश्च विधिवज्चुह्वन्वानप्रस्थविधानतः ॥
अतिथीन्पूजयन्नित्यं वन्येन हविषा विभुः ।
शिलोञछवृत्तिमास्थाय शेषान्नकृतभोजनः ॥ [XXXV-13;14]

"ಅವನು ಮನಸ್ಸನ್ನು ಗೆದ್ದು, ಕೋಪವನ್ನು ತ್ಯಜಿಸಿ, ಪಿತೃಗಳನ್ನೂ, ದೇವತೆಗಳನ್ನೂ, ತೃಪ್ತಿಪಡಿಸುತ್ತಿದ್ದನು. ವಾನಪ್ರಸ್ಥಾಶ್ರಮಕ್ಕೆ ಉಕ್ತವಾದ ವಿಧಿಯಿಂದ ದಕ್ಷಿಣಾಗ್ನಿ, ಗಾರ್ಹಪತ್ಯ, ಮತ್ತು ಆಹವನೀಯ ಎಂಬ ಅಗ್ನಿಗಳಲ್ಲಿ ಕಾಡಿನಲ್ಲಿ ದೊರಕಬಹುದಾದ ಹವಿಸ್ಸಿನಿಂದ ಹೋಮ ಮಾಡುತ್ತಿದ್ದನು. ಧಾನ್ಯಗಳ ತೆನೆಗಳನ್ನು ಆರಿಸಿ ತಂದು ಅವುಗಳಿಂದ ಅತಿಥಿಗಳನ್ನು ಸತ್ಕರಿಸುತ್ತಿದ್ದನು. ಅವರ ಭೋಜನಾನಂತರ ಶೇಷಾನ್ನವನ್ನು ತಾನು ಉಪಯೋಗಿಸುತ್ತಿದ್ದನು."

ಇಲ್ಲಿ ವಾನಪ್ರಸ್ಥಾಶ್ರಮದಲ್ಲಿ ಆಚರಿಸಬೇಕಾದ ಜೀವನವನ್ನು ತಿಳಿಸಲಾಗಿದೆ. ಲೋಕಕಲ್ಯಾಣದ ಉದ್ದೇಶವನ್ನಿಟ್ಟುಕೊಂಡು ಹೋಮಾದಿಗಳ ಆಚರಣೆ, ಅತಿಥಿ ಸತ್ಕಾರ ಮೊದಲಾದುವನ್ನು ತಿಳಿಸಲಾಗಿದೆ. ಅಂದರೆ ವಾನಪ್ರಸ್ಥಾಶ್ರಮ ಧರ್ಮದಲ್ಲಿಯೂ ಸಮಾಜಸೇವೆಯ ಉದ್ದೇಶವನ್ನು ನಾವು ಇಲ್ಲಿ ಕಾಣಬಹುದು. ಸುಮ್ಮನೆ ತನ್ನ ರಕ್ಷಣೆ ಪೋಷಣೆಗಳಷ್ಟೇ ಅಲ್ಲದೆ ತನ್ನ ಸುತ್ತಲ ಪರಿಸರ ಜೀವಿಗಳ ಒಳಿತನ್ನು ಬಯಸುವುದು, ಅದಕ್ಕೆ ಸ್ಪಂದಿಸುವುದು ಪ್ರತಿಯೊಬ್ಬ ಮನುಷ್ಯನಿಗಿರಬೇಕಾದ ಸಾಮಾಜಿಕ ಜವಾಬ್ದಾರಿ. ಅದರಲ್ಲೂ ವಿಶೇಷ ಶಕ್ತಿ ಜ್ಞಾನವುಳ್ಳವರಲ್ಲಿ ಇರಲೇಬೇಕಾದ ಸಾಮಾಜಿಕ ಜವಾಬ್ದಾರಿಯನ್ನು ತೋರಿಸುತ್ತದೆ.

36ನೆಯ ಅಧ್ಯಾಯದಲ್ಲಿ ಕಂಡುಬರುವ ಯಯಾತಿ ಇಂದ್ರರ ಸಂವಾದದಲ್ಲಿ ನಾವು ಒಬ್ಬ ಪ್ರಜೆ/ರಾಜ/ಮನುಷ್ಯನಿಗಿರಬೇಕಾದ ಗುಣ ನಡತೆಗಳೇನು ಎಂಬುದನ್ನು ಕಾಣಬಹುದು.

अक्रोधनः क्रोधनेभ्यो विशिष्ट–
स्तथा तितिक्षुरातितिक्षोर्विशिष्ट्ः ।
अमानुषेभ्यो मानुषश्च प्रधानो
विद्वांस्तथोवाविदुषः प्रधानः ॥

अक्रोश्यामानो नाक्रोशेन्मन्युमेव तितिक्षति ।
अक्रोष्टारं निर्दहति सुकृतं चास्य विन्दति ॥

नारुन्तुदः स्यान्न नृशंसवादी
न हीनतः परमभ्थददीत ।
ययास्य वाचा पर उद्विजेत
न तां वदेद्रुशतिं पापलौल्यां ॥

अरुन्तुदं पुरुषं तीव्रवाचं
वाक्कण्टकैर्वितुदन्तं मनुष्यान् ।
विन्द्यादलक्ष्मीकतमं जनानां
मुरवे निबद्धं निक्रृतिं वहन्तम् ॥

सद्धिः पुरस्तादाभिपूजितः स्यात्
सद्धिस्तथा पृष्टतो रक्षितः स्यात् ।
सदा सतामतिवादांस्तितिक्षेत्
सतां वृत्तं पालयान्साधुवृत्तः ॥

वाक्सायका वदनान्निष्पतान्ति
यैराहतः शोचति वा त्र्यहानि ।
परस्य नो मर्मसु ने पतन्ति
तान्पाण्डितो नावसृजेत्परेषु ॥

नास्तीदृशं संवननं त्रिषु लोकेषु किञ्चन ।
यथा मैत्री च लोकेषु दानं च मधुरा च वाक् ॥
तस्मात्सां न्वं सदा वाच्यं न वाच्यं परुषं क्वचित् ।
पूज्यान् सम्पूजयेद्दद्यान्नाभिशापं कदाचन ॥ [XXXVI-6;13]

"ತಾಳ್ಮೆಗೆ ಸರಿಯೆನಿಸಿದ ಭೂಷಣವಿಲ್ಲ; ಕೋಪವನ್ನು ತಡೆಯಬೇಕು, ಅದು ಪುಣ್ಯವನ್ನು ಹಾಳುಮಾಡುವುದು, ಸತ್ಪುರುಷರು ಒಂದು ವೇಳೆ ಮೀರಿ ಮಾತನಾಡಿದರೂ ಸಹಿಸಿಕೊಳ್ಳಬೇಕು, ಸತ್ಯಸ್ವಭಾವದವನಾಗಿರಬೇಕು. ಇತರರ ಮನಸ್ಸು ನೋಯುವಂತಹ ಮಾತನ್ನು ಎಂದಿಗೂ ಆಡಬಾರದು, ಯಾವಾಗಲೂ ಪ್ರಿಯ ವಚನಗಳನ್ನೇ ಹೇಳಬೇಕು, ಸ್ನೇಹ, ದಾನ, ಮಧುರವಾದ ಮಾತು ಇವುಗಳಿಂದ ಜನರನ್ನು ಒಲಿಸಿಕೊಳ್ಳಬಹುದು."

ಯಯಾತಿಯ ಈ ಮಾತುಗಳಲ್ಲಿ ಸಮಾಜದ ಬಗ್ಗೆ ನಮ್ಮ ಪ್ರಾಚೀನರಿಗಿರುವ ಗೌರವ, ಕಾಳಜಿಗಳು ಕಂಡುಬರುತ್ತವೆ. ತನ್ನ ಸ್ವಾರ್ಥ

ನೋವುಗಳಿಗಿಂತ ಇತರರ ಒಳಿತನ್ನು ಬಯಸುವ ಸಂಸ್ಕೃತಿಯನ್ನು ನಾವು ಇಲ್ಲಿ ಕಾಣಬಹುದು. ಸಮಾಜದಲ್ಲಿರುವ ಸಜ್ಜನರಿಗೆ ಯಾವ ರೀತಿಯಿಂದಲೂ ನೋವು ಕಷ್ಟಗಳನ್ನು ನೀಡಬಾರದು. ಒಂದು ವೇಳೆ ದು:ಖ, ಕೋಪ, ದ್ವೇಷಾದಿಗಳಿಂದ ಇತರರ ಮನನೋಯಿಸಿದರೆ ಅದರಿಂದ ನಾವು ಗಳಿಸಿದ ಪುಣ್ಯವೂ ಹಾಳಾಗುತ್ತದೆ ಎಂಬ ಎಚ್ಚರಿಕೆಯೂ ಇಲ್ಲಿ ಕಂಡುಬರುತ್ತದೆ. ಇವು ಅಂದು ಸಮಾಜದಲ್ಲಿ ಅನುಸರಿಸಬೇಕಾದ ನಿಯಮಗಳೇ ಎನ್ನಬಹುದು. ಒಂದು ವೇಳೆ ಪಾಲಿಸದಿದ್ದರೆ ಪುಣ್ಯಪಾಪಗಳ ಕಾರಣದಿಂದಲಾದರೂ ಅನುಸರಿಸಲಿ ಎಂಬ ಭಾವವನ್ನೂ ಕಾಣಬಹುದು.

ಮುಂದಿನ ಅಧ್ಯಾಯದ ಇಂದ್ರ ಯಯಾತಿಯರ ಸಂಭಾಷಣೆಯಲ್ಲಿಯೂ ಪ್ರತಿಯೊಬ್ಬ ವ್ಯಕ್ತಿಯೂ ಇತರರಿಗಿಂತ ಹೆಚ್ಚಿನ ಗುಣ, ಮಹಿಮೆ ಮೊದಲಾದವುಗಳಿಂದ ಕೂಡಿದ್ದರೂ ಎಲ್ಲರನ್ನೂ ಗೌರವದಿಂದ ಕಾಣಬೇಕೆಂಬ ಸಂದೇಶವಿದೆ. ಪ್ರತಿಯೊಬ್ಬನೂ ಆತನು ಯಾವುದೇ ಉತ್ತಮ ಸ್ಥಾನದಲ್ಲಿರಲಿ ಇತರರಲ್ಲಿ ಗೌರವದಿಂದ ಕೂಡಿದವನಾಗಿರಬೇಕು.

यदावमंस्था: सदृश: श्रेयसश्च
पापीयसश्चाविदितप्रभाव: ।
न ते अवमान्या: सदृश: श्रेयसे च । [XXXVII-5]

ಯಯಾತಿಯಂತಹ ಶ್ರೇಷ್ಠ ಪುರುಷನೂ ಕೂಡ ಇತರರನ್ನು ಅಲ್ಪರನ್ನಾಗಿ ಕಂಡಾಗ ಸ್ವರ್ಗವಾಸ ಕೊನೆಗೊಂಡು ಭೂಲೋಕಕ್ಕೆ ಬಿದ್ದ ನಿದರ್ಶನವನ್ನು ನಾವು ಇಲ್ಲಿ ಕಾಣಬಹುದು. ವ್ಯಕ್ತಿ ಯಾರೇ ಆಗಿರಲಿ ಶ್ರೇಷ್ಠನೋ ಕನಿಷ್ಠನೋ ಅಗೌರವದಿಂದ ನಡೆದುಕೊಂಡರೆ ಅವನಿಗೆ ಕೂಡಲೇ ಶಿಕ್ಷೆ ಎನ್ನುವುದು ಕಟ್ಟಿಟ್ಟ ಬುತ್ತಿ ಮತ್ತು ಇಂತಹ ಶಿಕ್ಷೆಯನ್ನು ಎಲ್ಲರೂ ಗೌರವದಿಂದ ಒಪ್ಪಿ ಸ್ವೀಕರಿಸುತ್ತಿದ್ದುದು ಅಂದಿನ ಸಮಾಜದ ಆದರ್ಶವನ್ನು ನಮಗೆ ಸ್ಪಷ್ಟೀಕರಿಸುತ್ತದೆ.

ಮುಂದಿನ ಅಧ್ಯಾಯದಲ್ಲಿ ಯಯಾತಿಯು ಇಂದ್ರನ ಆದೇಶದಂತೆ ಸ್ವರ್ಗಲೋಕದಿಂದ ಭೂಲೋಕಕ್ಕೆ ಬರುವ ಮಾರ್ಗ ಮಧ್ಯದಲ್ಲಿ ತನ್ನ ಮೊಮ್ಮಗನಾದ ಅಷ್ಟಕನನ್ನು ನೋಡುತ್ತಾನೆ. ಅಷ್ಟಕನೊಡನೆ ಮಾತನಾಡುತ್ತಾ ತಾನು ಸ್ವರ್ಗಲೋಕದಿಂದ ಭೂಲೋಕಕ್ಕೆ ಬೀಳುತ್ತಿರುವ ಕಾರಣವನ್ನು ತಿಳಿಸುತ್ತಾನೆ. ಹಾಗೆಯೇ ವಿಹಿತಕರ್ಮಗಳಿಗೆ ವಿರೋಧವಾಗಿ ನಡೆಯುವುದೇ ಪಾಪ; ಕಾಲಾನುಗುಣವಾಗಿ ಒದಗುವ ಆಯಾ ಕಷ್ಟಸುಖಗಳಿಂದ ಧೀರನಾದವನು ಮನಸ್ಸಿನಲ್ಲಿ ವಿಕಾರ ಹೊಂದಬಾರದು. ದೃಢಬುದ್ಧಿಯಿಂದ ಇರಬೇಕು. ಸುಖದು:ಖಗಳು ಸ್ಥಿರವಲ್ಲ, ಆದ್ದರಿಂದ ಕಷ್ಟಗಳು ಉಂಟಾದಾಗಲೂ ತಾನು ಕೊರಗದೆ ಎಚ್ಚರಿಕೆಯಿಂದ ದು:ಖವನ್ನು ತೊರೆದಿದ್ದೇನೆ ಎನ್ನುತ್ತಾನೆ.

अहं ययातिर्नहुषस्य पुत्र:
पूरो: पिता सर्वभूतावमानात् ।
प्रभ्रंशिशोऽहं सुरसिद्धलोकां
त्परिच्युत: प्रपताम्यल्पपुण्य: ॥

प्रतिकूलं कर्मणां पापमाहु ।
स्तद्वर्तिनां प्रवणं पापलोकम् ।
सन्तोऽसतो नानुवर्तन्त ते वै
यदात्मनैषां प्रतिकूलवादी ॥

अभूद्धनं मे विपुलं महद्वै
विचेष्टमानोऽधिगंता तदास्मि ।
एवं प्रधार्यात्मतिते निविष्टो:
यो वर्तते स विजानाति धीर: ॥

नानाभावा बहवो जीवलोके
दैवाधीना नष्टचेष्टधिकारा: ।
तत्तत्प्राप्य न विहन्येत धीरो
दिष्टं बलीय इति मन्वात्मबुद्धया ॥

सुखं हि जन्तुर्यदिवापि दुःखं
दैवाधीनं विन्दति नात्मशक्त्या ।
तस्माद्दिष्टं बलवन्मन्यमानो
न संज्वरेन्नापि हृष्येत्कदाचित् ॥

दुःखे न तप्येत सुखे न हृष्ये
त्समेन वर्तेत सदैव धीरः ।
दिष्टं बलीय इति मन्यमानो
न संज्वरैन्नापि हृष्येत्कदाचित् ॥
भये न मुह्यम्यष्टकाहं कदाचि
त्सन्तापो मे मानसो नास्ति काश्चित् ।
धाता यथा मां विदधाति लोके
ध्रुबं तथाहं भवितेति मत्वा ॥

संस्वेदजा ह्यण्डजा ह्युद्भिदश्च
सरीसृपाः कृमयोऽप्यप्सु मत्स्याः ।
तथाश्मानस्तृणकाष्टं च सर्वम्
दिष्टक्षये स्वां प्रकृतिं भजन्ते ॥

अनित्यतां सुखदुःखस्य बुद्ध्वा
कस्मात्सन्तापमष्टकाहं भजेयम् ।
किं कुर्यां वै किञ्च कृत्वा न तप्ये
तस्मात्सन्तापं वर्जयाभ्यप्रमत्तः ॥ [XXXVIII-1, 4 to 11]

"ದೇಹವು ನಶ್ವರವಾದುದು; ಸುಖಭೋಗಗಳು ಶಾಶ್ವತವಲ್ಲ ಕಷ್ಟಸುಖಗಳು ಆಯಾಕಾಲಕ್ಕೆ ತಕ್ಕಂತೆ ತಾವಾಗಿಯೇ ಬರುತ್ತವೆ, ಅದಕ್ಕಾಗಿ ಸಂತೋಷದಿಂದ ಹಿಗ್ಗುವುದೂ, ದು:ಖದಿಂದ ಕುಗ್ಗುವುದೂ ತಪ್ಪು." ಇಲ್ಲಿ ದುಃಖಾದಿಗಳ ಕಡೆಗೆ ನಮ್ಮ ಭಾರತೀಯ ಸಮಾಜದ ದೃಷ್ಟಿಕೋನ ಹೇಗಿತ್ತು? ಯಾವ ರೀತಿಯಾಗಿ ಅವುಗಳನ್ನು ಎದುರಿಸಬೇಕು ಎಂಬುದರ ಅರಿವಾಗುತ್ತದೆ.

39ನೆಯ ಅಧ್ಯಾಯದಲ್ಲಿ – ಮನುಷ್ಯನು ಏನು ಮಾಡಿದರೆ ಒಳ್ಳೆಯ ಬುದ್ಧಿಯನ್ನು ಪಡೆಯುವನು? ವಿದ್ಯೆಯಿಂದಲೋ? ತಪಸ್ಸಿನಿಂದಲೋ? ಯಾವುದರಿಂದ ಒಳ್ಳೆಯ ಲೋಕಗಳನ್ನು ಸೇರುವನು? ಎಂಬುದನ್ನು ವಿವರಿಸಲಾಗಿದೆ.

तपश्च दानं च शमो दमश्च
ह्रीरार्जवं सर्वभूतानुकम्पा ।
स्वर्गस्य लोकस्य वदन्ति सन्तो
द्वाराणि सप्तैव महान्ति पुंसाम् ॥

सर्वाणि चैतानि यथोदितानि
तपः प्रधानान्यभिमर्षकेण ।
नश्यान्ति मानेन तमोऽभिभूताः
पुंसः सदैवेति वदन्ति सन्तः ॥

अधीयानः पण्डितंमन्यमानो
यो विद्यया हन्ति यशः परस्य ।
तस्यान्तवन्तः पुरुषस्य लोका
न चास्य तद्ब्रह्मफलं ददाति ॥

चत्वारि कर्माणि भयङ्कराणि
भयं प्रयच्छन्त्ययथाकृतानि ।
पानाग्निहोत्रमुत मानमौनं
मानेनाधीतमुत मानयज्ञः ॥

न मन्यमानो मुदमाददीत
न सन्तापं प्राप्नुयाच्चावमानात् ।
सन्तः सतः पूजयन्तीह लोके
नासाधवः साधुबुद्धिं लभन्ते ॥

इति दद्यादिति यजेदित्यधीयीत मे श्रृतं ।
इत्येतान्यभयान्याहुस्तान्यवर्ज्याज्योनि निन्यशः ॥

येनाऽऽश्रयं वेदयन्ते पुराणं
मनीषिणो मानसे मानयुक्तम् ।
तान्निश्रेयस्तेन संयोगमेत्य
परां शान्तिं प्राप्नयः प्रेत्य चेह ॥

"ಸುಕೃತವು ಮುಗಿದ ಮೇಲೆ ಪುಣ್ಯಲೋಕಗಳಿಂದ ಜೀವನು ಭೂಲೋಕಕ್ಕಿಳಿಯುವನು ತನ್ನ ಪುಣ್ಯಪಾಪಾನುಸಾರವಾಗಿ ಉತ್ತಮವಾದ ಇಲ್ಲವೇ ನೀಚವಾದ ಜನ್ಮವನ್ನು ತಾಳುವನು. ತಪಸ್ಸು, ದಾನ, ಅಂತರಿಂದ್ರಿಯ ನಿಗ್ರಹ, ಬಹಿರಿಂದ್ರಿಯನಿಗ್ರಹ, ಅಕಾರ್ಯದಲ್ಲಿ ಲಜ್ಜೆ, ನಿಷ್ಕಪಟತೆ ಮತ್ತು ಸರ್ವಜಂತುಗಳಲ್ಲಿ ದಯೆ ಇವು ಸ್ವರ್ಗಕ್ಕೆ ಸಾಧನಗಳು. ದಾನ, ಯಾಗ, ಮತ್ತು ಅಧ್ಯಯನಗಳಿಗೆ ಶಾಸ್ತ್ರೋಕ್ತವಾದ ಕ್ರಮವಿದೆ. ಅದರಂತೆ ನಡೆದರೆ ಇಹಪರಗಳಲ್ಲಿ ಸುಖವುಂಟು."

ಇಲ್ಲಿ ಆಗಿನ ಸಮಾಜದಲ್ಲಿನ ನಿಯಮ ಪಾಲನೆಯ ಮಹತ್ವವನ್ನರಿಯಬಹುದು.

40ನೆಯ ಅಧ್ಯಾಯದಲ್ಲಿ ಬ್ರಹ್ಮಚರ್ಯ, ಗಾರ್ಹಸ್ಥ್ಯ, ವಾನಪ್ರಸ್ಥ ಮತ್ತು ಸಂನ್ಯಾಸಗಳೆಂಬ ನಾಲ್ಕು ಆಶ್ರಮಗಳ ಲಕ್ಷಣಗಳನ್ನು ತಿಳಿಸಲಾಗಿದೆ. ಮುನಿಯಾದವನು ಅರಣ್ಯದಲ್ಲಿರಲಿ ಅಥವಾ ಗ್ರಾಮದಲ್ಲಿರಲಿ ಸುಖಗಳಿಗೆ ಆಸೆ ಪಡದೆ ಜಿತೇಂದ್ರಿಯನಾಗಿರಬೇಕು. ಶೀತೋಷ್ಣಾದಿ ದ್ವಂದ್ವಗಳನ್ನು ಸಮಭಾವದಿಂದ ಕಾಣುವ ಆ ಮಹಾತ್ಮನಿಗೆ ಎಲ್ಲ ಲೋಕಗಳೂ ವಶವಾಗುವವು. ಅವನನ್ನು ಎಲ್ಲರೂ ಗೌರವಿಸುತ್ತಾರೆ. ಮೋಕ್ಷ ಸುಖವು ಆತನಿಗೆ ಸಿದ್ಧವಾಗಿರುವುದು.

आहूताध्यायी गुरुकर्मसु चोद्यतः
पूर्वोत्थायी चरमं चाथ शायी ।
मृदुर्दान्तो धृतिमानप्रमत्तः
स्वाध्यायशीलः सिद्यति ब्रह्मचारी ॥

धर्मगतं प्राप्य धनं यजेत
दद्यात्सदैवातिथीन् भोजयेच्च ।
अनाददानश्च परैरदत्तं
सैषा गृहस्थोपनिषत्पुराणी ॥

स्ववीर्यजीवी वृजिनान्निवृत्तो
दाता परेभ्यो न परोपतापी ।
तादृङ्मुनिः सिद्धिमुपैति मुख्यां
वसन्नरण्ये नियताहारचेष्टः ॥

अशिल्पजीवी विगृहश्च नित्यं
जितेन्द्रियः सर्वतो विप्रमुक्तः ।
अनोकशायी लघु लिप्समान
श्चरन्देशानेकाम्बरः स भिक्षुः ॥ [40 - 2 to 5]

ಸಮಾಜದಲ್ಲಿನ ಪ್ರತಿಯೊಬ್ಬ ಆಶ್ರಮವಾಸಿಯೂ ಅನುಸರಿಸಬೇಕಾದ ನಿಯಮಗಳನ್ನು ನಾವು ಇಲ್ಲಿ ಕಾಣಬಹುದು. 1)ಬ್ರಹ್ಮಚಾರಿಗಳಿಗಿರಬೇಕಾದ ಮೃದುಸ್ವಭಾವ, ಜಿತೇಂದ್ರಿಯತೆ, ಜಾಗರೂಕತೆ, ಅಧ್ಯಯನದಲ್ಲಿ ಮನಸ್ಸು, ಗುರುಗಳಲ್ಲಿ ಭಯಭಕ್ತಿ ಇವು ಅವನ ಪ್ರಯತ್ನಕ್ಕೆ ಸಾಫಲ್ಯವನ್ನು ನೀಡುತ್ತವೆ. 2) ಧರ್ಮಮಾರ್ಗದಿಂದ ಧನ ಸಂಪಾದನೆ ಮಾಡಿ ಅದನ್ನು ತನ್ನ ಜೀವನ ನಿರ್ವಹಣೆಗಷ್ಟೇ ಅಲ್ಲದೇ, ಸತ್ಪಾತ್ರರಲ್ಲಿ ದಾನಕ್ಕೂ ವಿನಿಯೋಗಿಸಬೇಕು. ಇತರರ ವಸ್ತುವನ್ನು ಅವರು ಕೊಡದಿರುವಾಗ ತೆಗೆದುಕೊಳ್ಳಬಾರದು. ಇದು ಗೃಹಸ್ಥ ಧರ್ಮ. 3)ತನ್ನ ಬಲದಿಂದ ಜೀವಿಸುವ ಪಾಪದೂರನಾದ ದಾನಮಾಡುವ; ಮತ್ತೊಬ್ಬರನ್ನು ನೋಯಿಸದ; ಆಹಾರದಲ್ಲೂ, ನಿತ್ಯಕರ್ಮಗಳಲ್ಲಿಯೂ ನಿಯಮದಿಂದ

ಅರಣ್ಯದಲ್ಲಿ ವಾಸಿಸುವುದು ವಾನಪ್ರಸ್ಥನ ಧರ್ಮ. 4) ಸಂನ್ಯಾಸಿಯಾದವನು ಯಾವ ಕುಶಲ ವಿದ್ಯೆಯನ್ನೂ ತನ್ನ ಜೀವಿತಕ್ಕಾಗಿ ಉಪಯೋಗಿಸಿಕೊಳ್ಳಬಾರದು. ಅವನಿಗೆ ಸ್ವಂತ ಮನೆಯಿಲ್ಲ, ಯಾವಾಗಲೂ ಆತನು ಜಿತೇಂದ್ರಿಯನಾಗಿರಬೇಕು. ಯಾವ ಬಗೆಯ ಮೋಹಪಾಶಕ್ಕೂ ಸಿಕ್ಕಬಾರದು. ಮುನಿಯಾದವನು ಶರೀರಸುಖಕ್ಕಾಗಿ ಯಾವ ಪ್ರಯತ್ನವನ್ನೂ ಮಾಡಬಾರದು. ಹೀಗೆ ಸಮಾಜದಲ್ಲಿನ ಪ್ರತಿಯೊಬ್ಬ ಆಶ್ರಮವಾಸಿಗಿರಬೇಕಾದ ಲಕ್ಷಣಗಳು ಅಂದಿನ ಸಮಾಜದ ಅರಿವಿಗೆ ಕೈಗನ್ನಡಿಯಾಗಿವೆ.

ಮುಂದಿನ ಅಧ್ಯಾಯದಲ್ಲಿ ಅಷ್ಟಕನು ಯಯಾತಿಗೆ, ನಿನ್ನಂತಹ ರಾಜಶ್ರೇಷ್ಠನು ಭೂಲೋಕದ ನರಕವನ್ನು ಪ್ರವೇಶಿಸುವುದು ಬೇಡ. ನನ್ನ ಸುಕೃತದಿಂದ ಒದಗುವ ಪುಣ್ಯ ಲೋಕಗಳನ್ನು ಸ್ವೀಕರಿಸು ಎಂದು ಹೇಳುತ್ತಾನೆ. ಆದರೆ ಯಯಾತಿಯು ಅದಕ್ಕೆ ಒಪ್ಪದೆ ಹೀಗೆ ಹೇಳುತ್ತಾನೆ.

नास्मद्विधो ब्राह्मणो ब्रह्मविच्च
प्रतिग्रहे वर्तते राजमुख्यः ।
यथा प्रदेयं सततं द्विजेभ्य
स्तदा ददे पूर्वमहं नरेन्द्र ॥

नाब्राह्लणः कृपणो जानु जीवेत्
यद्यपि स्यात् ब्राह्लणी वीरपत्नी ।
सोऽहं यदेवाकृतपूर्वं चरेयं
विवित्समानः किमु तत्र साधुः ॥ [XLI-11-12]

ವೇದಾಧ್ಯಯನ ಸಂಪನ್ನನೂ ಬ್ರಹ್ಮಜ್ಞಾನಿಯೂ ಆದ ನನ್ನಂತಹವನು ದಾನವನ್ನು ತೆಗೆದುಕೊಳ್ಳಬಾರದು. ಕ್ಷತ್ರಿಯನಾದವನು ಮತ್ತೊಬ್ಬರಿಂದ ದಾನ ತೆಗೆದುಕೊಂಡು ದೀನನಾಗಿ ಬಾಳಬಾರದು ಎಂದು ಅಷ್ಟಕನ ಮಾತನ್ನು ನಯವಾಗಿಯೇ ತಿರಸ್ಕರಿಸುತ್ತಾನೆ. ಇಲ್ಲಿ ಕ್ಷತ್ರಿಯ ಧರ್ಮವೇನೆಂಬುದನ್ನು ಸೂಚ್ಯವಾಗಿ ತಿಳಿಸಲಾಗಿದೆ.

ನಂತರ ಪ್ರತರ್ದನನೆಂಬ ರಾಜನು ತನಗೆ ದೂರಕಬಹುದಾದ ಶುಭಲೋಕಗಳನ್ನು ಯಯಾತಿಗೆ ಕೊಡುವೆನೆಂದಾಗಲೂ ಯಯಾತಿಯು ಸ್ವೀಕರಿಸುವುದಿಲ್ಲ. ಇಲ್ಲಿ ಯಯಾತಿಯು ರಾಜಧರ್ಮವನ್ನು ಕುರಿತು ಹೀಗೆನ್ನುತ್ತಾನೆ.

न तुल्यतेजाः सुकृतं हि कामये
योगक्षेमं पार्थिवात्पार्थिवः सन् ।
दैवदेशादापदं प्राप्य विद्वां
श्चरेन्नृशंसं हि न जातु राजा ।
धर्मं मार्गं चिन्तयानो यशस्यं
कुर्यात्तपो धर्ममवेक्षमाणः
न मद्विधो धर्मबुद्धिर्हि राजा
ह्येवं कुर्यात्कृपणं मां यथात्थ ॥

ರಾಜನಾಗಿದ್ದುಕೊಂಡು ಸಮಾನ ತೇಜಸ್ವಿಯಾದ ಮತ್ತೊಬ್ಬ ರಾಜನಿಂದ ಪುಣ್ಯವನ್ನು ಬಯಸಲಾರೆ. ಹಾಗೆ ನನ್ನ ಯೋಗಕ್ಷೇಮವನ್ನು ಅವನು ನೋಡುವುದು ಸರಿಯಲ್ಲ. ಜ್ಞಾನಿಯಾದ ರಾಜನು ಕಷ್ಟವೊದಗಿದಾಗ ಹೀನ ಕಾರ್ಯವನ್ನು ಮಾಡಬಾರದು. ಧರ್ಮವನ್ನು ಅರಿತು ಯಶಸ್ಸನ್ನು ತರುವ ಕಾರ್ಯವನ್ನು ಮಾಡಬೇಕು. ರಾಜನಾದವನು ದೀನ ಕೃತ್ಯಕ್ಕೆ ಕೈಹಾಕಬಾರದು.

ಹೀಗೆ ಅಷ್ಟಕ, ಪ್ರತರ್ದನರು ತಮ್ಮ ಸುಕೃತಗಳನ್ನು ಧಾರೆಯೆರೆದುಕೊಡುವೆವೆಂದಾಗ ಯಯಾತಿಯು ತೇಜೋವಂತನಾದ ರಾಜನು ಇತರರ ಪುಣ್ಯಗಳನ್ನು ದಾನವಾಗಿ ಸ್ವೀಕರಿಸುವುದು ಯುಕ್ತವಲ್ಲ ಎಂದು ಉತ್ತರಿಸುತ್ತಾನೆ. ಇಲ್ಲಿ ಅಂದಿನ ಸಮಾಜದಲ್ಲಿ ರಾಜನಾದವನು ಎಷ್ಟು ಬದ್ಧತೆಯಿಂದ ನಡೆದುಕೊಳ್ಳುತ್ತಿದ್ದನು ಎಂಬುದು ತಿಳಿಯುತ್ತದೆ.

ಮುಂದೆ 42ನೇ ಅಧ್ಯಾಯದಲ್ಲಿ ವಸುಮಂತ, ಶಿಬಿ ಮಹಾರಾಜರುಗಳೂ ತಮಗೆ ಪ್ರಾಪ್ತವಾಗುವ ಶುಭಲೋಕಗಳನ್ನು ಸ್ವೀಕರಿಸಬೇಕೆಂದೂ;

ದಾನವಾಗಿ ಸ್ವೀಕರಿಸುವುದು ದೋಷಕರವಾದರೆ ಹುಲ್ಲುಕಡ್ಡಿಯನ್ನಾದರು ನೀಡಿ ಬೆಲೆಗೆ ಕೊಳ್ಳಬೇಕೆಂದು ಪ್ರಾರ್ಥಿಸುತ್ತಾರೆ. ಆಗ ಯಯಾತಿಯು ತಾನು ಬಾಲ್ಯದಲ್ಲಿ ಹುಡುಗಾಟಕ್ಕಾದರೂ ಅಸತ್ಯವಾದ ವ್ಯಾಪಾರವನ್ನು ಮಾಡಿಲ್ಲವೆಂದೂ, ಹಾಗೆ ಸ್ವೀಕರಿಸುವುದು ಯೋಗ್ಯವಲ್ಲವೆಂದೂ ನಯವಾಗಿಯೇ ತಿರಸ್ಕರಿಸುತ್ತಾನೆ. ಆಗ ಅವರಿಬ್ಬರು ಯಯಾತಿಯು ಸ್ವೀಕರಿಸದಿದ್ದರೆ ತಾವೂ ಆ ಲೋಕಗಳಿಗೆ ಹೋಗುವುದಿಲ್ಲ ಎನ್ನುತ್ತಾರೆ. ಅವನಿಗಾಗಿ ಉದ್ದೇಶಿಸಿದ ಅವುಗಳನ್ನು ಅವರು ಹಿಂದಕ್ಕೆ ಪಡೆಯದೆ ಯಯಾತಿಯು ಹೋಗುವ ಲೋಕಕ್ಕೆ ಬರುತ್ತೇವೆ ಎನ್ನುತ್ತಾರೆ. ಅದಕ್ಕೆ ಯಯಾತಿಯು ಇತರರು ಕೊಟ್ಟ ಶುಭಸ್ಥಾನದಲ್ಲಿ.

"न मिथ्याहं विक्रयं वै स्मरामि
मया कृतं शिशुभावेऽपि राजन् ।" [XLII-4]

"तथाद्य लोके न रमेऽन्यदत्ते
तस्माच्छिबे नाभिनन्दामि वाचम् ॥" [XLII-9]

ಇಲ್ಲಿ ನಾವು ಆಗಿನ ಕಾಲದ ಹಾಗೂ ಎಂದೆಂದಿಗೂ ಆದರ್ಶಪ್ರಾಯವಾದ ರಾಜಧರ್ಮವನ್ನು ಕಾಣಬಹುದು. ರಾಜಧರ್ಮವೆಂಬುದು ಕೇವಲ ಶಾಸ್ತ್ರಗ್ರಂಥಗಳಲ್ಲಿ ಮಾತ್ರವಿರದೆ ಸ್ವತಃ ರಾಜರುಗಳು ಅದನ್ನು ಅನುಸರಿಸುತ್ತಾ ಸಮಾಜದಲ್ಲಿ ಆದರ್ಶವ್ಯಕ್ತಿಗಳಾಗಿದ್ದರು ಎಂದೂ ಅರಿಯಬಹುದು. ಆ ಸಂದರ್ಭದಲ್ಲಿ ಶಿಬಿ ಚಕ್ರವರ್ತಿಯ ಶ್ರೇಷ್ಠತೆಯನ್ನು ಕುರಿತು ಹೀಗೆ ಹೇಳಲಾಗಿದೆ.

दानं शौचं सत्यमथोह्यहिंसा
ह्री: श्रीस्तितिक्षा समताऽऽनृशंस्यम् ।
राजन्त्येतान्यथ सर्वाणि राज्ञि
शिबौ स्थितान्यप्रतिमेषु बुद्ध्या ॥ [XLII-20]

ದಾನ, ಪರಿಶುದ್ಧತೆ, ಸತ್ಯ, ಅಹಿಂಸೆ, ಲಜ್ಜೆ, ಸಂಪತ್ತು, ತಾಳ್ಮೆ, ಸಮಾನಬುದ್ಧಿ, ಭೂತದಯೆ, ಮೊದಲಾದ ಸದ್ಗುಣಗಳು ಶಿಬಿರಾಜನಲ್ಲಿ ನೆಲೆಸಿವೆ. ಇಂತಹ ಗುಣಗಳೇ ಶಿಬಿಚಕ್ರವರ್ತಿಯನ್ನು ಸಮಾಜದಲ್ಲಿ ಎಲ್ಲರಿಗಿಂತ ಮುಂದಿರುವಂತೆ ಮಾಡಿರುವುದು ಎಂಬ ಮಾತು ಸಮಾಜದಲ್ಲಿ ಯಾವ ರೀತಿಯ ನಡತೆಗೆ, ಗುಣಗಳಿಗೆ ಆದ್ಯತೆ ಇತ್ತು ಎಂಬುದನ್ನು ಸೂಚಿಸುತ್ತದೆ.

ಆನಂತರ ಅಷ್ಟಕನ ಪ್ರಶ್ನೆಗಳಿಗೆ ಉತ್ತರಿಸುತ್ತಾ ತಾನು ಮಾಡಿದ ದಾನಾದಿ ಕಾರ್ಯಗಳನ್ನು ಕುರಿತು ಯಯಾತಿ ಮಹಾರಾಜನು ಹೇಳುತ್ತಾನೆ. ಆ ರಹಸ್ಯವನ್ನು ನಮ್ಮವರಾದುದರಿಂದ ನಿಮಗೆ ಹೇಳುತ್ತೇನೆ ಎನ್ನುತ್ತಾನೆ. ಕೊಟ್ಟಿದ್ದನ್ನು ಯಾರ ಮಂದೆಯೂ ಹೇಳಬಾರದು ಎಂಬುದು ಸಂಪ್ರದಾಯ. ಆದ್ದರಿಂದ ಅದನ್ನು ರಹಸ್ಯವಿಷಯವೆಂದೂ, ಹೇಳತಕ್ಕುದಲ್ಲವೆಂಬುದೂ ಯಯಾತಿಯ ಅಭಿಪ್ರಾಯ.

गुह्यं मन्त्रं मामकेभ्यो ब्रवीमि
मातामहो भवतां सुप्रकाशः ॥

ಹೀಗೆ ಹೇಳುವಾಗ ಅವರಿಗೆ ಒಂದು ಸತ್ಯವನ್ನು ಹೀಗೆಂದು ತಿಳಿಸುತ್ತಾನೆ.

साध्वष्टक प्रब्रवीमीह सत्यं
प्रतर्दनं वसुमन्तं शिबिं च ।
सर्वे देवा मुनयश्च लोकाः
सत्येन पूज्या इति मे मनोगतम् ॥ [XLII-26]

"ಸತ್ಯವನ್ನು ಸಾಧಿಸಿದರೆ ಎಲ್ಲ ದೇವತೆಗಳನ್ನೂ ಮುನಿಗಳನ್ನೂ, ಜನರನ್ನೂ ಪೂಜಿಸಿದಂತಾಗುವುದು" ಎಂದು. ಇಲ್ಲಿ ನಾವು ಸತ್ಯಕ್ಕೆ ಸಮಾಜವು ಕೊಡುತ್ತಿದ್ದ ಗೌರವವನ್ನು ಗಮನಿಸಬಹುದು. ಇಲ್ಲಿ ಮತ್ತೊಂದು ವಿಚಾರ...........ಭೂಲೋಕದ ನರಕಕ್ಕೆ ಇಳಿಯುತ್ತಿದ್ದ

ಯಯಾತಿಯನ್ನು ಆತನ ಮೊಮ್ಮಕ್ಕಳಾದ ಅಷ್ಟಕಾದಿಗಳು ತಮ್ಮ ಸುಕೃತಗಳಿಂದ ಸ್ವರ್ಗಲೋಕಕ್ಕೆ ಮತ್ತೆ ತೆರಳುವಂತೆ ಮಾಡುತ್ತಾರೆ. ಇಲ್ಲಿ ಮೊಮ್ಮಕ್ಕಳಿಗೂ ತಮ್ಮ ಹಿರಿಯರನ್ನು ಕುರಿತು ಇದ್ದ ಕೃತಜ್ಞತೆಯು ಸೂಚಿತವಾಗಿದೆ. ಇದು ಸ್ವಸ್ಥ ಸಮಾಜಕ್ಕೆ ಸಹಾಯಕ.

ಇಂತಹ ಉತ್ತಮವಾದ ಸಮಾಜಕ್ಕೆ ಮನಃಪರಿಪಾಕ, ಇಂದ್ರಿಯ ಜಯ ಮೊದಲಾದವುಗಳ ಅವಶ್ಯಕತೆ ಬಹಳವಾಗಿದೆ. ಇದನ್ನು ಸಾಧಿಸುವುದು ಅಷ್ಟು ಸುಲಭವಲ್ಲ. ಇದಕ್ಕೆ ನಿರಂತರವಾದ ಸಾಧನಾಮಾರ್ಗ ಬಹಳ ಮುಖ್ಯ. ಅದರ ಅಭ್ಯಾಸವು ಅನುದಿನವೂ ನಡೆಯಬೇಕಾದ್ದು. ಇಂತಹ ನಿರಂತರ ಅಭ್ಯಾಸಕ್ಕೆ ಅನುಕೂಲಕರವಾದುದು ಕರ್ಮಯೋಗ. ಇದರ ಪ್ರತಿಪಾದನೆಯನ್ನು ನಾವು ಮತ್ಸ್ಯ ಪುರಾಣದಲ್ಲಿ ಕಾಣಬಹುದು. ಮತ್ಸ್ಯಪುರಾಣದ 51ನೇ ಅಧ್ಯಾಯದಿಂದ 102ನೇ ಅಧ್ಯಾಯದವರೆಗಿನ ವಿಷಯಗಳು ಈ ಕರ್ಮಯೋಗಕ್ಕೆ ಸಂಬಂಧಿಸಿದ್ದೆ ಆಗಿವೆ. ಚತುರ್ವರ್ಗಗಳಲ್ಲಿ ಅಂತಿಮವೂ ಶ್ರೇಷ್ಠವೂ ಆದ ಮೋಕ್ಷ ಸಾಧನೆಯೇ ಭಾರತೀಯ ಧರ್ಮದ / ಸಂಸ್ಕೃತಿಯ ಪರಮ ಗುರಿ. ಇದರ ಸಾಫಲ್ಯಕ್ಕೋಸ್ಕರವೇ ಮೊದಲ ಮೂರು ವರ್ಗಗಳಾದ ಧರ್ಮಾರ್ಥಕಾಮಗಳ ಆಚರಣೆಯನ್ನು ಮಾಡಬೇಕೆನ್ನುವುದು ನಮ್ಮ ಪ್ರಾಚೀನ ಋಷಿಮುನಿಗಳ ಅಭಿಮತ. ಇಂತಹ ಮೋಕ್ಷಸಾಧನೆಗೆ ಕರ್ಮಯೋಗವು ಸಾಧನೆಯ ರಂಗ. ಅದರ ವಿಸ್ತೃತವಾದ ರೀತಿಗಳನ್ನು ಮತ್ಸ್ಯ ಪುರಾಣದಲ್ಲಿ ಚರ್ಚಿಸಲಾಗಿದೆ / ನೀಡಲಾಗಿದೆ. ಇಂತಹ ಶ್ರೇಷ್ಠವಾದ ಗುರಿ ಹಾಗೂ ಆ ಗುರಿ ಸಾಧನೆಯ ಮಾರ್ಗವೂ ಉನ್ನತವಾಗಿರುವುದು ಸಮಾಜದ ಒಳಿತಿಗೆ ಕಾರಣ. ಹೀಗೆ ಸಮಾಜದ ಒಳಿತಿಗೆ ಸಾಧನವಾದ ಕರ್ಮಯೋಗದ ಅಂಶಗಳನ್ನು ನಾವು ಮತ್ಸ್ಯಪುರಾಣದಲ್ಲಿ ಕಾಣಬಹುದು.

ಮತ್ಸ್ಯ ಪುರಾಣದಲ್ಲಿ ಕರ್ಮಾನುಷ್ಠಾನಕ್ಕೆ ಅತ್ಯವಶ್ಯವಾದ ಅಗ್ನಿಯ ಸ್ವರೂಪ, ಪ್ರಭೇದ, ವಂಶ ಇತ್ಯಾದಿಗಳನ್ನು ಮೊದಲು ವಿವರಿಸಲಾಗಿದೆ. ಲೋಕದಲ್ಲಿ ವಿಧವಿಧವಾದ ಕಾರ್ಯಗಳಿಗೆ ಉಪಯೋಗವಾಗುವ ಅಗ್ನಿಗಳನ್ನು ಕುರಿತು ಇಲ್ಲಿ ತಿಳಿಸಲಾಗಿದೆ. ಉದಾ: ದಕ್ಷಿಣಾಗ್ನಿ, ಗಾರ್ಹಪತ್ಯ, ಆಹವನೀಯ, ಜಠರಾಗ್ನಿ, ಬಡಬಾಗ್ನಿ, ಮೊದಲಾದವು. ನಂತರ ಸಾಕ್ಷಾತ್ ವಿಷ್ಣುವೇ ಹೇಳಿದನೆನ್ನಲಾದ ಕರ್ಮಯೋಗವನ್ನು ವಿವರಿಸಲಾಗಿದೆ. ಸಾವಿರ ಜ್ಞಾನಯೋಗಗಳಿಗಿಂತಲೂ ಒಂದು ಕರ್ಮಯೋಗವು ಪ್ರಶಸ್ತವಾದುದು ಎನ್ನುತ್ತದೆ ಮತ್ಸ್ಯಪುರಾಣ.

कर्मयोगं च वक्ष्यामि यथा विष्णु विभाषितं ।
ज्ञानयोगसहस्राद्धि कर्मयोगः प्रशस्यते ॥ [LI - 5]

ಕರ್ಮಯೋಗದಿಂದಲೇ ಜ್ಞಾನಯೋಗವು ಜನಿಸುವುದು. ಆದುದರಿಂದ ಅದು ಸದ್ಗತಿಪ್ರದವಾದುದು. ಕರ್ಮಯೋಗದ ಜ್ಞಾನದಿಂದ ಬ್ರಹ್ಮಜ್ಞಾನವು ಮೂಡುವುದು. ಕರ್ಮವಿಲ್ಲದೆ ಜ್ಞಾನವಿಲ್ಲ.

कर्मयोगोद्भावं ज्ञानं तस्मात्तत्परमं पदम् ।
कर्मज्ञानोद्भवं ब्रह्म न च ज्ञानमकर्मणः ॥ [LI - 6]

ನಂತರದ ಶ್ಲೋಕಗಳಲ್ಲಿ ಕರ್ಮಯೋಗವೆಂದರೇನು? ಎಂಬುದನ್ನು ತಿಳಿಸಲಾಗಿದೆ. [9, 10, 11ನೆಯ ಶ್ಲೋಕಗಳು] ದಯೆ, ಕ್ಷಾಂತಿ (ಕ್ಷಮೆ), ಅನಸೂಯೆ, ಮಂಗಲಾಚಾರ ಮೊದಲಾದ ಎಂಟು ಬಗೆಯ ಆತ್ಮಗುಣಗಳಿಗೆ ಅನುಗುಣವಾಗಿ ನಡೆಯುವುದೇ ಕರ್ಮಯೋಗ. ಇದನ್ನು ಸಮಾಜದ ಪ್ರತಿಯೊಬ್ಬನೂ ಬೆಳೆಸಿಕೊಳ್ಳಬೇಕು. ಇವಿಲ್ಲದಿದ್ದರೆ ಯಾವ ಕರ್ಮವನ್ನು ಮಾಡಿದರೂ ವ್ಯರ್ಥ. ಕರ್ಮಯೋಗವಿಲ್ಲದೆ ಜ್ಞಾನಯೋಗವು ಯಾರಿಗೂ ಫಲಿಸದು "कर्मयोगं विना ज्ञानं कस्यचिन्नेह दृश्यते" । (12ನೆಯ ಶ್ಲೋಕ) ಈ ಯೋಗದಲ್ಲಿ ಮನಸ್ಸನ್ನು ನೆಲೆಗೊಳಿಸಿದವನು ಬ್ರಹ್ಮಸಾಕ್ಷಾತ್ಕಾರವನ್ನು ಪಡೆಯುತ್ತಾನೆ.

ಈ ಕರ್ಮಯೋಗವು ನಿತ್ಯನೈಮಿತ್ತಿಕ ಕರ್ಮಗಳ ಆಚರಣೆ, ವ್ರತ, ಪರೋಪಕಾರ, ಉಪವಾಸ, ದಾನ, ತಪಶ್ಚರ್ಯೆ, ತೀರ್ಥಯಾತ್ರೆ ಮೊದಲಾಗಿ ನಾನಾರೂಪವೆಂದು ಮತ್ಸ್ಯಪುರಾಣದಲ್ಲಿ ಹೇಳಲಾಗಿದೆ.

ಗೃಹಸ್ಥಧರ್ಮದಲ್ಲಿ ಗೃಹಸ್ಥನು ಪ್ರತಿದಿನವೂ ಒದಗುವ ಜೀವಹತ್ಯಾದೋಷದ ಪ್ರಾಯಶ್ಚಿತ್ತಕ್ಕಾಗಿ ಪಂಚಯಜ್ಞಗಳನ್ನು ಆಚರಿಸಬೇಕು ಎನ್ನುತ್ತದೆ ಮತ್ಸ್ಯಪುರಾಣ.

पञ्चैते विहिता यज्ञाः पञ्चसूनापनुत्तये ।
काण्डिनी पेषणी चुल्ली जलकुम्भी प्रमार्जनी ॥
पञ्चसूना गृहस्थस्य तेन स्वर्गं न गच्छति ।
तत्पापनाशनायामी पच्च यज्ञाः प्रकीर्तिताः ॥ [LII-15;16]

ಅನಿವಾರ್ಯವಾಗಿ ನಡೆಯುವ ಜೀವಹತ್ಯಾದೋಷಕ್ಕೂ ಇಲ್ಲಿ ಕಾಳಜಿ ತೋರಿಸುವುದನ್ನು ಗಮನಿಸಿದರೆ, ಆಗಿನ ಸಮಯದಲ್ಲಿನ ಸಮಾಜವು ಎಷ್ಟು ಉನ್ನತವಾದ ವಿಚಾರಗಳಿಂದ, ಚಿಂತನೆಗಳಿಂದ ಕೂಡಿತ್ತು ಎಂಬುದನ್ನು ಊಹಿಸಬಹುದು.

ವ್ರತದಾನಾದಿಗಳನ್ನು ಕುರಿತು ಹೇಳುವಾಗ ಸಮಾಜಕ್ಕೆ ಉಪಕಾರಕವಾದ ಕೆಲವು ವಿಧಿಗಳನ್ನೂ ನೋಡಬಹುದು. ಉದಾ: ತಟಾಕ ವಿಧಿ, ವೃಕ್ಷೋತ್ಸವ ವಿಧಿ, ಮೊದಲಾದವುಗಳನ್ನು ನೆರವೇರಿಸುವ ವಿಧಾನ. ಆ ಸಂದರ್ಭದಲ್ಲಿ ಜಲಾಶಯಗಳನ್ನೂ, ವನಗಳನ್ನೂ ಸ್ಥಾಪಿಸುವುದು ಸಕಲ ಯಜ್ಞಗಳ ಫಲವನ್ನು ನೀಡುವುದು ಎಂದು ಹೇಳಿದ್ದಾರೆ. ಕನಿಷ್ಠಪಕ್ಷ ಒಂದು ಮರವನ್ನಾದರೂ ಮನುಷ್ಯನು ತನ್ನ ಜೀವಮಾನದಲ್ಲಿ ಸ್ಥಾಪಿಸಬೇಕು ಎಂದಿದ್ದಾರೆ. ಇದರಿಂದ ಅವನ ಇಷ್ಟಾರ್ಥಗಳೆಲ್ಲವೂ ಈಡೇರುವವಲ್ಲದೆ ಅವನಿಗೆ ಶಾಶ್ವತವಾದ ಸದ್ಗತಿಯು ಲಭಿಸುವುದು ಎಂದೂ ಇದೆ.

अनेन विधिना यस्तु कुर्यात् वृक्षोत्सवं बुधः ।
सर्वान् कामानवाप्तोति फलं चानन्त्यमश्नुते ॥
यश्चैकमपि राजेन्द्र वृक्षं संस्थापाचेन्नरः ।
सोऽपि स्वर्गे वसेद्राजन् यावदिन्द्रायुतत्रयम् ॥

ಯಾರಿಗೆ ಹೋಮಹವನಾದಿಗಳನ್ನು ಆಚರಿಸಲು ಸಾಧ್ಯವಿಲ್ಲವೋ ಅಂತಹವರು ಲೋಕೋಪಕಾರಕವಾದ ಇಂತಹ ಕರ್ಮಗಳಿಂದಲೂ ಯಜ್ಞಾದಿಗಳಿಗೆ ಸಮನಾದ ಪುಣ್ಯವನ್ನೇ, ಫಲವನ್ನೇ ಪಡೆಯಬಹುದು ಎನ್ನಲಾಗಿದೆ. ಇಲ್ಲಿ ಯಾವ ಕರ್ಮವು ಉತ್ಕೃಷ್ಟ ಕನಿಷ್ಠ ಎಂಬ ಭಾವನೆಗಳಿಲ್ಲದೆ ಇರುವುದನ್ನು ಕಾಣಬಹುದು. ಸಮಾಜದಲ್ಲಿನ ಪ್ರತಿಯೊಬ್ಬರ ವೃತ್ತಿಗಳೂ, ಕೆಲಸಗಳೂ, ನ್ಯಾಯಧರ್ಮಯುತವಾಗಿದ್ದರೆ ಗೌರವಿಸಲ್ಪಡುತ್ತಿದ್ದವು; ಸಮಾಜದಲ್ಲಿ ಮೇಲು-ಕೀಳೆಂಬ ಭಾವನೆಗೆ ಅವಕಾಶವಿರಲಿಲ್ಲ. ಎಲ್ಲಾ ಕರ್ಮಗಳನ್ನು ಶ್ರದ್ಧಾಭಕ್ತಿಗಳಿಂದ ನಿಯಮಕ್ಕನುಸಾರವಾಗಿ ನಡೆಸುವುದೇ ಪ್ರಮುಖವಾಗಿತ್ತು. ಇವುಗಳಿಂದ ನಮ್ಮ ಪ್ರಾಚೀನರಿಗೆ ಇದ್ದ ಪರಿಸರ ಕಾಳಜಿ, ಸಮಾಜಸೇವೆಯನ್ನು ಕುರಿತ ಶ್ರದ್ಧಾಭಕ್ತಿಗಳನ್ನು ಊಹಿಸಬಹುದು.

ಮತ್ಸ್ಯಪುರಾಣದಲ್ಲಿ 50 ವಿವಿಧ ರೀತಿಯ ವ್ರತಾದಿಗಳ ಆಚರಣೆಯನ್ನು ಕುರಿತು ಹೇಳಲಾಗಿದೆ. ಇವುಗಳಲ್ಲಿ ಉಪಯೋಗಿಸಲ್ಪಡುವ ವಸ್ತುಗಳು ನಿಸರ್ಗದತ್ತವಾದುವೇ. ಎಲ್ಲಿಯೂ ಪರಿಸರ ಮಾಲಿನ್ಯಕ್ಕೆ ಅವಕಾಶವೇ ಇಲ್ಲ. ಇಷ್ಟೊಂದು ಸಂಖ್ಯೆಯ ವ್ರತಾದಿಗಳನ್ನು ನೋಡಿದಾಗ ಕಷ್ಟ ದುಃಖಾದಿಗಳಿಂದ ಪೀಡಿತನಾದ ಮನುಷ್ಯನನ್ನು ಯಾವುದೋ ಒಂದು ಶಾಂತಿಯುತವಾದ ಕೆಲಸದಲ್ಲಿ ತೊಡಗಿಸಿಕೊಳ್ಳುವಂತೆ ಪ್ರೇರೇಪಿಸಲು ಇವು ಅನುಕೂಲಕರವಾದವು ಎನ್ನಬಹುದು. ಇಂತಹ ಕರ್ಮಗಳು ವ್ಯಕ್ತಿಗತ ಶಾಂತಿಯನ್ನಷ್ಟೇ ಅಲ್ಲದೆ ಸಮಾಜದಲ್ಲಿಯೂ ಶಾಂತಿಯನ್ನು ಕಾಪಾಡಲು ಸಹಾಯಕವಾಗಿದ್ದವು.

ಅನಂಗದಾನವೆಂಬ ವ್ರತದಲ್ಲಿ ವೇಶ್ಯಾಸ್ತ್ರೀಯರು ಅನುಸರಿಸಬೇಕಾದ ಸದ್ಧರ್ಮವನ್ನು ವಿವರಿಸಲಾಗಿದೆ. ಇಂತಹ ವ್ರತವನ್ನು ಆಚರಿಸಿದ ವೇಶ್ಯಾಧರ್ಮದಲ್ಲಿರುವ ಸ್ತ್ರೀಯರಿಗೆ ಸದ್ಗತಿ ದೊರೆಯುವುದೆಂದೂ ಹೇಳಿದೆ. ಹೀಗೆ ಸಮಾಜದಲ್ಲಿನ ಎಲ್ಲ ವರ್ಗದವರಿಗೂ ಅವರವರ ವೃತ್ತಿ ಧರ್ಮಗಳಿಗನುಗುಣವಾಗಿ ವ್ರತಾದಿಗಳನ್ನು ಹೇಳಿದೆ. ಇದರಿಂದ ಪ್ರತಿಯೊಬ್ಬರಿಗೂ ಅವರು ಅನುಸರಿಸುವ ವೃತ್ತಿಯು ಗೌರವಯುತವಾದುದು ಎಂಬ ಭಾವನೆಯ ಜೊತೆಗೇ, ಉಚ್ಚನೀಚಗಳ ಭಾವನೆ ತೊಲಗಿ ಸಮಭಾವದಿಂದ ನೋಡುವ; ಪ್ರತಿಯೊಬ್ಬರಿಗೂ ಈ ಸಮಾಜದಲ್ಲಿ ಅವರವರ ಪಾತ್ರ-ಕರ್ತವ್ಯಗಳಿವೆ; ಪ್ರತಿಯೊಬ್ಬರ ಅವಶ್ಯಕತೆಯೂ ಈ ಸಮಾಜಕ್ಕೆ ಇದೆ ಎಂಬುದನ್ನು ಮತ್ಸ್ಯಪುರಾಣವು

ವ್ಯಕ್ತಪಡಿಸಿದೆ ಎನ್ನಬಹುದು. ಹೀಗೆ ಕರ್ಮಯೋಗದಲ್ಲಿ ಸಾಧನೆಯನ್ನು ಮಾಡಲು ಸಮಾಜದ ಎಲ್ಲ ವರ್ಗದ ಜನರಿಗೂ ಅವಕಾಶವಿರುವುದು ಕಂಡುಬರುತ್ತದೆ. ಇಂತಹ ವೈವಿಧ್ಯತೆಗಳಿಂದ ಕೂಡಿದ ಕರ್ಮಯೋಗವು ಸಮಾಜದಲ್ಲಿನ ಪ್ರತಿಯೊಬ್ಬರೂ, ಒಂದಲ್ಲ ಮತ್ತೊಂದು ರೀತಿಯ ವಿಧಿ, ದಾನಾದಿಗಳಲ್ಲಿ ತನ್ನನ್ನು ತಾನು ತೊಡಗಿಸಿಕೊಳ್ಳಬಹುದೆಂಬುದನ್ನು ಇದು ತಿಳಿಸಿಕೊಡುತ್ತದೆ. ಪ್ರತಿಯೊಬ್ಬ ವ್ಯಕ್ತಿಗೂ ಸಮಾಜದಲ್ಲಿ ಅವರದೇ ಆದ ಪಾತ್ರವಿದೆ ಹಾಗೂ ಮಾನ್ಯತೆ ಇದೆ ಎಂಬುದನ್ನು ಮತ್ಸ್ಯಪುರಾಣವು ಪ್ರಸ್ತುತಪಡಿಸುತ್ತದೆ / ವ್ಯಕ್ತಪಡಿಸುತ್ತದೆ.

141 ರಿಂದ 145ರ ವರೆಗಿನ ಐದು ಅಧ್ಯಾಯಗಳು ಮನ್ವಂತರವನ್ನು ವರ್ಣಿಸುತ್ತವೆ. ನಾಲ್ಕು ಯುಗಗಳ ಪರಿಮಾಣ ಮತ್ತು ಲಕ್ಷಣ, ಧರ್ಮದ ಉನ್ನತಿ ಮತ್ತು ಅವನತಿ, ಅದಕ್ಕೆ ತಕ್ಕಂತೆ ಜನರ ಜೀವನದಲ್ಲಿ ಸುಖದುಃಖಗಳು ಇವೆಲ್ಲವೂ ವಿವರಿಸಲ್ಪಟ್ಟಿವೆ.

> **आरभ्भयज्ञः क्षत्रस्य हविर्यज्ञा विशः स्मृताः ।**
> **परिचारयज्ञा शूद्राश्च जपयज्ञाश्च ब्राह्मणाः ॥**
> [142-51]

ಉತ್ಸಾಹದಿಂದ ಕೂಡಿದ ಕಾರ್ಯಪ್ರವೃತ್ತಿಯೇ ಕ್ಷತ್ರಿಯರಿಗೆ ಯಜ್ಞ, ಹವಿಸ್ಸುಗಳನ್ನು ಎಂದರೆ ಧರ್ಮಕ್ಕೆ ವಿರೋಧವಿಲ್ಲದಂತಹ ಸುಖಸಾಧನ ವಸ್ತುಗಳನ್ನು ಒದಗಿಸುವುದು ವೈಶ್ಯರಿಗೆ ಯಜ್ಞ, ಸಮಾಜಸೇವೆಯೇ ಶೂದ್ರರ ಯಜ್ಞ, ಬ್ರಾಹ್ಮಣನಿಗಾದರೋ ಜಪವೇ ಯಜ್ಞ.

ಇಲ್ಲಿ ಸಮಾಜದ ಪ್ರತಿ ವರ್ಗದವರ ಕರ್ತವ್ಯವನ್ನು ತಿಳಿಸಲಾಗಿದೆ. ಹಾಗೆಯೇ ಎಲ್ಲರಿಗೂ ಮೊತ್ತಮೊದಲನೆಯ ಧರ್ಮವೆಂದರೆ ಸತ್ಯ, ಜಪ, ತಪಸ್ಸು ಮತ್ತು ದಾನ.

> **सत्यं जपस्तपो दानं**
> **पूर्वधर्मोऽयमुच्यते: ॥ (142 - 59)**

145ನೇ ಅಧ್ಯಾಯದಲ್ಲಿ ಧರ್ಮವು ಶ್ರೌತ, ಸ್ಮಾರ್ತ, ಎಂದು ಎರಡು ವಿಧವಾಗಿದೆ. ವೇದೋಕ್ತವಾದುದು ಶ್ರೌತ. ಸ್ಮೃತಿ ಉಕ್ತವಾದುದು ಸ್ಮಾರ್ತ. ಇವುಗಳನ್ನು ಕ್ರಮವಾಗಿ ಸಪ್ತರ್ಷಿಗಳೂ ಮನುಗಳೂ ಲೋಕಕ್ಕೆ ಉಪದೇಶಿಸಿದರು. ಇವರಿಗೆ ಶಿಷ್ಟರೆಂಬ ಪ್ರಸಿದ್ಧಿಯಿದೆ. ಇವರಿಂದ ಪ್ರಚಾರಕ್ಕೆ ಬಂದ ಧರ್ಮವನ್ನೂ ಸಹ ಶಿಷ್ಟಾಚಾರ ಎನ್ನುತ್ತಾರೆ. ಇದಕ್ಕೆ ದಾನ, ಸತ್ಯ, ತಪಸ್ಸು, ಲೋಕಾನುಸರಣ, ವಿದ್ಯೆ, ಯೋಗ, ಉಪಾಸನ, ಇಂದ್ರಿಯನಿಗ್ರಹ ಎಂಬ ಎಂಟು ಲಕ್ಷಣಗಳಿವೆ. ಈ ಎಂಟರ ಲಕ್ಷಣವನ್ನೂ ನಾವು ಈ ಅಧ್ಯಾಯದಲ್ಲಿ ನೋಡಬಹುದು. ಇಂತಹ ಶಿಷ್ಟಾಚಾರದಿಂದ ಕೂಡಿದ ಬೆಳೆದು ಬಂದ ವರ್ಣಾಶ್ರಮ ಧರ್ಮವು ಸರ್ವ ಸಮ್ಮತವಾದುದು ಎಂದೂ ಹೇಳಲಾಗಿದೆ. ಮತ್ಸ್ಯಪುರಾಣದಲ್ಲಿ ಸಾಮಾಜಿಕ ಅಂಶಗಳಿಗೆ ಸಂಬಂಧಿಸಿದಂತೆ ರಾಜಧರ್ಮದ ವಿಚಾರವನ್ನು ಕಾಣಬಹುದು. 215ನೆ ಅಧ್ಯಾಯದಿಂದ 243ನೆ ಅಧ್ಯಾಯದವರೆಗಿನ ಪ್ರಧಾನ ವಿಷಯ ರಾಜಧರ್ಮ, ಇಲ್ಲಿ ರಾಜಧರ್ಮವನ್ನು ಅತಿ ವಿಸ್ತಾರವಾಗಿ ಹೇಳಿದ್ದಾರೆ. ಪ್ರಜೆಗಳ ಕರ್ತವ್ಯ, ಅಧಿಕಾರಿಗಳ ಲಕ್ಷಣ, ನಗರ ನಿರ್ಮಾಣ ಮುಂತಾದ ಹಲವು ವಿಷಯಗಳನ್ನು ಅದು ಒಳಗೊಂಡಿದೆ. ಪ್ರಾಚೀನ ಕಾಲದಿಂದ ಭಾರತೀಯರ ಸಾಮಾಜಿಕ ಜೀವನದಲ್ಲಿ ರಾಜನಿಗೆ ಅತಿ ಮುಖ್ಯವಾದ ಸ್ಥಾನವಿದೆ. ರಾಜನಾದವನು ಧರ್ಮರಕ್ಷಣೆ, ವಿಪತ್ತುಗಳ ಪರಿಹಾರ, ಇಹಪರ ಸುಖಗಳಿಗೆ ಸಹಾಯಕನಾದವನಾಗಿ ಇರಬೇಕು. ನಮ್ಮ ಸಮಾಜದಲ್ಲಿ ರಾಜನನ್ನು ಮನುಷ್ಯರೂಪದಿಂದ ಬಂದ ಧರ್ಮದೇವತೆಯೆಂದೇ ಭಾವಿಸಲಾಗಿದೆ. ಇವುಗಳ ಸಮರ್ಥನೆಯನ್ನು ಮತ್ಸ್ಯಪುರಾಣದಲ್ಲಿ ನಾವು ಕಾಣಬಹುದು.

❑

ಶ್ರೀ ಗಣೇಶ ಪುರಾಣದಲ್ಲಿ "ಸ್ವಾನಂದ ಭವನ"

—ವಿದ್ವಾನ್ ಬಂದಗದ್ದೆ ನಾಗರಾಜ

ಮನುಷ್ಯನು ಸಾಕು ಸಾಕೆಂದು ದುಃಖ ದುಮ್ಮಾನಗಳಿಗೆ ಹೇಳುತ್ತಾನೆಯೇ ಹೊರತು ಸುಖ ಸಾಧಕಗಳಿಗೆ ಹೇಳುವುದೇ ಇಲ್ಲ. ಒಟ್ಟಿನಲ್ಲಿ ಖಿನ್ನತೆಯೆನ್ನುವುದು ಒಂದಲ್ಲ ಒಂದು ರೀತಿಯಲ್ಲಿ ಸದಾ ಅವನನ್ನು ಕಾಡುತ್ತಿರುತ್ತದೆ.

ಈ ಖಿನ್ನತೆಯನ್ನು ಕಳೆದುಕೊಂಡು ಸುಖದುಃಖಗಳನ್ನು ಮೀರಿ ಹೇಗೆ ಆನಂದವನ್ನು ಅನುಭವಿಸಬಹುದೆಂಬುದಕ್ಕೆ ಭಗವಾನ್ ವೇದವ್ಯಾಸರು ಮಾರ್ಗವೊಂದನ್ನು ಶ್ರೀ ಗಣೇಶ ಪುರಾಣದಲ್ಲಿ ವಿಸ್ತಾರವಾಗಿ ಹೇಳಿದ್ದಾರೆ.

॥ ಶ್ರೀ ಗುರುಗಣಪತಿ ಸರಸ್ವತೀಭ್ಯೋಂ ನಮಃ ॥
ಶುಭಮಸ್ತು

ಈ ಲೋಕದಲ್ಲಿ ಹುಟ್ಟಿದ ಜೀವಿಗಳಿಗೆಲ್ಲಕ್ಕೂ ಆನಂದವೇ ಪರಮ ಲಕ್ಷ್ಯವಾಗಿದೆ. ಹಾಗೆಯೇ ಮನುಷ್ಯನಿಗೂ ಕೂಡ. ಜೀವಿಗಳೆಲ್ಲವೂ ತಮ್ಮ ತಮ್ಮ ಮಟ್ಟದಲ್ಲಿ ಆನಂದವನ್ನು ಅನುಭವಿಸುತ್ತವೆ. ಅದಕ್ಕೆ ಮನುಷ್ಯನೂ ಹೊರತಲ್ಲ. ಆದರೆ ಮನುಷ್ಯನು ಪರಿಪೂರ್ಣನಾದ ಜೀವಿಯಾಗಿರುವುದರಿಂದ ಅವನಿಗೂ ಹಾಗೂ ಇತರ ಜೀವಿಗಳಿಗೂ ಆನಂದದ ಅನುಭವಿಸುವಿಕೆಯಲ್ಲಿ ವ್ಯತ್ಯಾಸವಿದೆ. ಆಹಾರ ನಿದ್ರಾಭಯ ಮೈಥುನದಲ್ಲಿಯೇ ಮನುಷ್ಯೇತರ ಜೀವಿಗಳು ಆನಂದವನ್ನು ಕಂಡುಕೊಂಡರೆ ಮನುಷ್ಯನು ಅಷ್ಟರಲ್ಲಿಯೇ ತೃಪ್ತಿಪಡುವುದಿಲ್ಲವೆಂಬುದು ಅನುಭವ ವೇದ್ಯವಾದ ಸಂಗತಿ. ಕೊರತೆಗಳು ಅವನನ್ನು ಸದಾ ಕೊರೆಯುತ್ತಿರುತ್ತವೆ. ಬೇಕು ಬೇಕೆಂದು ಸದಾ ಹಂಬಲಿಸುತ್ತಿರುತ್ತಾನೆ. ಅದಕ್ಕೆ ಕೊನೆಯೆಂಬುದೇ ಇರುವುದಿಲ್ಲ. ಸಾಕು ಸಾಕೆಂದು ದುಃಖ ದುಮ್ಮಾನಗಳಿಗೆ ಹೇಳುತ್ತಾನೆಯೇ ಹೊರತು ಸುಖ ಸಾಧಕಗಳಿಗೆ ಹೇಳುವುದೇ ಇಲ್ಲ. ಅಲ್ಲದೇ ಅವುಗಳನ್ನು ಒದಗಿಸಿಕೊಳ್ಳಲು ಸದಾ ಯತ್ನಿಸುತ್ತಾನೆ. ಸಿಕ್ಕರೆ ಸಂತೋಷಪಡುತ್ತಾನೆ. ಸಿಕ್ಕದಿದ್ದರೆ ದುಃಖಿಸುತ್ತಾನೆ. ಒಟ್ಟಿನಲ್ಲಿ ಆಯದಲ್ಲಿಯೂ ದುಃಖ ವ್ಯಯದಲ್ಲಿಯೂ ದುಃಖ ಜೀವನವೇ ದುಃಖಮಯವೆಂದುಕೊಳ್ಳುತ್ತಾನೆ. ಸರ್ವಂ ದುಃಖಂ, ದುಃಖಂ, ದುಃಖಂ ಎಂದು ಕೂಡ ಘೋಷಿಸುತ್ತಾನೆ. ಒಟ್ಟಿನಲ್ಲಿ ಖಿನ್ನತೆಯೆನ್ನುವುದು ಒಂದಲ್ಲ ಒಂದು ರೀತಿಯಲ್ಲಿ ಸದಾ ಅವನನ್ನು ಕಾಡುತ್ತಿರುತ್ತದೆ.

ಈ ಖಿನ್ನತೆಯನ್ನು ಕಳೆದುಕೊಂಡು ಸುಖದುಃಖಗಳನ್ನು ಮೀರಿ ಹೇಗೆ ಆನಂದವನ್ನು ಅನುಭವಿಸಬಹುದೆಂಬುದಕ್ಕೆ ಭಗವಾನ್ ವೇದವ್ಯಾಸರು ಮಾರ್ಗವೊಂದನ್ನು ಸೂಚಿಸಿದ್ದಾರೆ. ಹಲವಾರು ಮಾರ್ಗವನ್ನು ಬೇರೆ ಬೇರೆ ಗ್ರಂಥಗಳಲ್ಲಿ ಅವರೇ ಸೂಚಿಸಿದ್ದರೂ ಇದೂ ಒಂದು ಮಾರ್ಗವೆಂಬುದಾಗಿ ಶ್ರೀ ಗಣೇಶ ಪುರಾಣದಲ್ಲಿ ವಿಸ್ತಾರವಾಗಿ ಹೇಳಿದ್ದಾರೆ. ಅದೇ "ಸ್ವಾನಂದಭವನ"ವೆನ್ನುವ ಪರಿಕಲ್ಪನೆ.

ಗಣೇಶ ಎನ್ನುವುದೇ ಒಂದು ರೋಚಕ ಶಬ್ದ. ಗಣಗಳಿಗೆ ಈಶನೆಂದು ಅರ್ಥ. ಸೃಷ್ಟಿಗೆ ಕಾರಣವಾಗುವ ಸ್ಥಿತಿಗೆ ಹಾಗೂ ಸ್ಥಿತಿಯಲ್ಲಿ ಬರುವ ಹೋಗುವ ಮತ್ತು ಲಯಕ್ಕೆ ಕಾರಣವಾಗುವ ಹಾಗೂ ಲಯದ ಪ್ರಕ್ರಿಯೆಯಲ್ಲಿ ಬರುವ ಹೋಗುವ ಭಾವಗಣಗಳಿಗೆ ಈಶನೆಂಬುದಾಗಿ ಸಂಮಥಿತಾರ್ಥ. ಹಾಗಾಗಿ ಇವನು ವಿಘ್ನೇಶನೂ ಹೌದು, ನಿರ್ವಿಘ್ನಪತಿಯೂ ಹೌದು. ಆದ್ದರಿಂದಲೇ ಇವನನ್ನು ವೇದದಲ್ಲಿ ಬ್ರಹ್ಮಣಸ್ಪತಿ ಎಂಬುದಾಗಿ ಹೇಳಲಾಗಿದೆ. ಈ ಗಣೇಶನನ್ನು ತಿಳಿಯುವ, ತಿಳಿದು ಜೀರ್ಣಿಸಿಕೊಳ್ಳುವ ಪ್ರಕ್ರಿಯೆಯನ್ನು ಹೇಳುವ ಮಾರ್ಗವೇ ಆ ಆನಂದದ ಮಾರ್ಗ.

ಗಣೇಶನು ನಿರ್ಗುಣ ನಿರಾಕಾರ ನಿಷ್ಕಲ ಎಂಬಿತ್ಯಾದಿ ಶಬ್ದವಾಚ್ಯನೂ ಹೌದು. ಹಾಗೆಯೇ ಸಗುಣ ಸಾಕಾರ ಸಕಲ ಎಂಬಿತ್ಯಾದಿಯಾಗಿ ವರ್ಣಿತನೂ ಹೌದು. ಒಟ್ಟಿನಲ್ಲಿ ಗಣೇಶನು ಪ್ರತ್ಯಕ್ಷ ತತ್ವಕರ್ತಾರ, ಭರ್ತಾರ, ಹರ್ತಾರ, ಒಂದೇ ಶಬ್ದದಲ್ಲಿ ಹೇಳುವುದಾದರೆ ಪ್ರತ್ಯಕ್ಷ ಪರಬ್ರಹ್ಮ. ಇವನನ್ನು ತಿಳಿದು ಅವನಲ್ಲಿ ಒಂದಾಗುವ ತಂತ್ರವೇ ಶ್ರಿ ಗಣೇಶ ಪುರಾಣದಲ್ಲಿ ಹೇಳಲಾಗಿದೆ. ಅದಕ್ಕೋಸುಗ ನಾನಾ ಆಖ್ಯಾನಗಳ ಕಥೆಗಳ ಮುಖಾಂತರ ಆ ತಂತ್ರಗಳ ಗುಟ್ಟನ್ನು ತಿಳಿಸಲಾಗಿದೆ.

ಯಾವ ಯಾವ ಜೀವಿ ಲೋಕದಲ್ಲಿ ಬದುಕಿರುವವೋ ಅವುಗಳೆಲ್ಲವೂ ಭಕ್ತಿ ಉಳ್ಳವುಗಳೇ ಸರಿ. ಆ ಭಕ್ತಿಯಲ್ಲಿ ಭಿನ್ನತೆ ಇಲ್ಲ ಆದರೆ ಭಕ್ತಿಯ ಶಕ್ತಿಯಲ್ಲಿ ಭಿನ್ನತೆಯು ತೋರುತ್ತಿರುತ್ತದೆ. ಆದ್ದರಿಂದಲೇ ಸೃಷ್ಟಿಯಲ್ಲಿ ವೈವಿಧ್ಯತೆ ಇದೆ. ಆಸ್ತಿಕನೂ ಭಕ್ತನೇ, ನಾಸ್ತಿಕನೂ ಭಕ್ತನೇ, ಇದು ಗಣೇಶ ಪುರಾಣದ ಬಹು ಮುಖ್ಯವಾದ ಅಂಶ, ಅಂತೆಯೇ ಪ್ರತಿಯೊಬ್ಬ ಜೀವಿಯ ದೇಹವೇ ಸ್ವಾನಂದ ಭವನ. ಅದನ್ನು ಕಂಡುಕೊಳ್ಳುವುದೇ ಜೀವನದ ಮುಖ್ಯ ಗುರಿ. ಆ ಗುರಿಯನ್ನು ತಲುಪಿದರೆ ಸ್ವಾನಂದ ಲೋಕದ ದರ್ಶನ. ತಲುಪದಿದ್ದವರಿಗೆ ಕಾಮಕ್ರೋಧಗಳಿಗೆ ವಶವಾದ ಪ್ರಪಂಚದ ದರ್ಶನ ಮಾತ್ರ. ಹಾಗೆ ತಲುಪಲು ಸಾಧನೆ ಅವಶ್ಯಕ. ಆ ಸಾಧನಾ ಮಾರ್ಗವನ್ನು ಶ್ರೀ ಗಣೇಶ ಪುರಾಣದಲ್ಲಿ ಹೇಳಲಾಗಿದೆ. ಮಂತ್ರ ಸಾಧನೆ, ತಂತ್ರ ಸಾಧನೆ,

ಯೋಗ ಸಾಧನೆ, ಇತ್ಯಾದಿ ಸಾಧನೆಗಳನ್ನು ಕಥೆಗಳ ಮುಖಾಂತರ ವಿವರಿಸುವ ಈ ಗಣೇಶ ಪುರಾಣವು ಒಟ್ಟಿನಲ್ಲಿ ಸೃಷ್ಟಿ, ಸ್ಥಿತಿ, ಲಯಗಳ ಕಾರಣ ಮತ್ತು ಉದ್ದೇಶಗಳನ್ನು, ಪೂರ್ಣ ಪ್ರಮಾಣದಲ್ಲಿ ತಿಳಿಸುತ್ತಾ ಎಲ್ಲವೂ ಗಣೇಶನ ಲೀಲೆಯೆಂಬುದನ್ನು ಸ್ಪಷ್ಟಪಡಿಸುತ್ತದೆ. ವಿಘ್ನದಿಂದಲೇ ಸೃಷ್ಟಿ, ಸ್ಥಿತಿ, ಲಯಗಳು ನಡೆಯುತ್ತವೆ ಎಂಬುದನ್ನು ಆಖ್ಯಾನಗಳಿಂದ ಸ್ಪಷ್ಟ ಪಡಿಸುತ್ತಾ ಸ್ವಾನಂದ ಲೋಕದಲ್ಲಿ ವಿಘ್ನ ನಿರ್ವಿಘ್ನಗಳೆನ್ನುವ ದ್ವಂದ್ವದ ರಾಹಿತ್ಯವನ್ನು ಅಂಗೈ ನೆಲ್ಲಿಕಾಯಿಯಂತೆ ತೋರಿಸಿಕೊಡುತ್ತದೆ. ಯಾವ ದ್ವಂದ್ವಗಳಿಲ್ಲದ ಸಂಸ್ಥಿತಿಯಲ್ಲಿ ಉಂಟಾಗಿರುವ ವಿಘ್ನವೇ ಸೃಷ್ಟಿಗೆ ಹೇತು ಎಂಬುದನ್ನು ಸಾರುತ್ತಾ ಅಲ್ಲುಂಟಾದ ಕಂಪನ, ಅದರಿಂದ ಶಬ್ದ, ಅದರಿಂದ ಸ್ಪರ್ಶ, ಅದರಿಂದ ರೂಪ, ಅದರಿಂದ ರಸ, ಅದರಿಂದ ಗಂಧಗಳು ಸೃಷ್ಟಿಯಾಯಿತಲ್ಲದೇ ಅದೇ ಪ್ರಕೃತಿಯ ಮೂಲತತ್ವಗಳೆಂದೂ, ಹೇಳಿ ಬಳಿಕ ಅದೇ ಕಂಪನದಿಂದುಟಾದ ಶಬ್ದದಿಂದ ಅಹಂಕಾರ, ಜ್ಞಾನೇಂದ್ರಿಯ, ಕರ್ಮೇಂದ್ರಿಯ, ಬುದ್ಧಿಮನಸ್ಸು, ಇತ್ಯಾದಿಗಳು ಉಂಟಾದವೆಂದು ಸ್ಪಷ್ಟಪಡಿಸುತ್ತದೆ.

ಹಾಗಾದರೆ ಮೊದಲುಂಟಾದ ಕಂಪನದಿಂದ ಹುಟ್ಟಿದ ಶಬ್ದ ಸ್ವರೂಪವೇನು ಎಂಬ ಪ್ರಶ್ನೆಗೆ ಓಂಕಾರವೆಂದು ಉತ್ತರವನ್ನು ನೀಡುತ್ತದೆ. ಹಾಗಾಗಿ ಗಣೇಶನು ಸಗುಣದಿಂದ ಓಂಕಾರ ಸ್ವರೂಪಿಯೆಂದು ಹೇಳಲ್ಪಡುತ್ತದೆ. ಈ ಸೃಷ್ಟಿ, ಸ್ಥಿತಿ, ಲಯಗಳೆಲ್ಲವೂ ಓಂಕಾರದಿಂದಲೇ ನಡೆಯುತ್ತವೆ ಎಂಬುದೇ ಸಿದ್ಧಾಂತ.

ಈಗಿನ ವಿಜ್ಞಾನದ ದೃಷ್ಟಿಯಿಂದಲೂ ಈ ವಿವರಣೆಯನ್ನು ನಾವು ಅಂಗೀಕರಿಸಬಹುದಾಗಿದೆ. ಉದಾಹರಣೆಗೆ ನಮಗೆ ತಿಳಿದಿರುವ ವಿದ್ಯುತ್‌ನ ಉಪಯೋಗವನ್ನು ತಿಳಿದುಕೊಂಡರೆ ಆ ಸೃಷ್ಟಿ, ಸ್ಥಿತಿ, ಲಯಗಳ ಪ್ರಕ್ರಿಯೆಯ ಅರಿವು ನಮಗಾಗುತ್ತದೆ. ವಿದ್ಯುತ್ತಿನ ಪ್ರವಾಹವನ್ನು ಒಂದು ವಿಧವಾದ ತಾಂತ್ರಿಕತೆಯನ್ನು ಬಳಸಿ ತಡೆ ತಡೆದು ಹರಿಯಬಿಟ್ಟಾಗಲೇ ಬಲ್ಬು, ಫ್ಯಾನು, ಫ್ರಿಜ್. ಒಟ್ಟಿನಲ್ಲಿ ಹೇಳುವುದಾದರೆ ಇಂದು ನಾವು ಉಪಯೋಗಿಸುತ್ತಿರುವ ವಿದ್ಯುತ್ತಿನ ಉಪಕರಣದ ಸೃಷ್ಟಿಯಾಗುತ್ತದೆ. ಸ್ಥಿತಿಯಾಗುತ್ತದೆ. ಹಾಗೂ ಲಯವಾಗುತ್ತದೆ. ಇಂತಹ ಒಂದು ಅದ್ಭುತವಾದ ಕರಂಟೇ ವಿಶ್ವವೆಲ್ಲಕ್ಕೂ ಮೂಲ. ಅದೇ ಗಣೇಶ ತತ್ವ. ಅದು ಪ್ರತಿಯೊಂದು ಜೀವಿಯಲ್ಲೂ ಹಾಗೂ ಪ್ರತಿಯೊಂದು ವಸ್ತುವಿನಲ್ಲೂ ಇದೆ ಅದನ್ನು ಅರಿತುಕೊಂಡರೆ ಹಾಗೂ ಆ ತತ್ವವನ್ನು ಸಾಧನೆಯ ಮುಖಾಂತರ ನಮ್ಮೊಳಗೆ ನಾವು ಅಳವಡಿಸಿಕೊಂಡು ಜೀರ್ಣಿಸಿಕೊಂಡರೆ ಸ್ವಾನಂದ ಭವನದ ದರ್ಶನವಾಗುತ್ತದೆ.

ಈ ಸಾಧನೆಯ ದಾರಿಯಲ್ಲಿ ಮೊತ್ತ ಮೊದಲು ತೋರುವ ಜಗತ್ತು, ಅಂದರೆ ಸುಖ ದುಃಖ, ಒಳಿತು ಕೆಡಕು, ಹಗಲು ಇರುಳು ಒಟ್ಟಿನಲ್ಲಿ ದ್ವಂದ್ವಗಳು. ಈ ದ್ವಂದ್ವಗಳೇ ನಮ್ಮನ್ನು ಸದಾ ಕಾಡುತ್ತಿರುತ್ತದೆ. ಹಾಗೆ ಕಾಡುವುದೇ ದ್ವಂದ್ವಗಳ ಧರ್ಮ. ಆದರೆ ಈ ದ್ವಂದ್ವಗಳಿಗೆ ಸ್ಪಂದಿಸಿ ನಾವು ಅವುಗಳಿಗೆ ಸಿಲುಕಿಕೊಳ್ಳಬಾರದು. ಸಿಲುಕದೇ ದ್ವಂದ್ವಗಳನ್ನು ನಡೆಸುತ್ತ ಜೀವನ ಯಾತ್ರೆಯನ್ನು ಮಾಡಬೇಕು. ಅದಕ್ಕೋಸುಗ ದಿನನಿತ್ಯ ನಮ್ಮತನವನ್ನುಳಿಸಿಕೊಳ್ಳಲೋಸುಗ ಕೆಲವೊಂದು ಅನುಷ್ಠಾನಗಳನ್ನು ಹೇಳಲಾಗಿದೆ. ಅದರಲ್ಲಿ ಮಂತ್ರಾನುಷ್ಠಾನ ಬಹು ಮುಖ್ಯವಾದುದು ಅದರಲ್ಲೂ ಏಕಾಕ್ಷರೀ ಅನುಷ್ಠಾನ. ಇದನ್ನು ಯೋಗ್ಯ ಗುರುವಿನಿಂದ ಉಪದೇಶವಾಗಿ ಪಡೆದುಕೊಂಡು ಕ್ರಮ ಪ್ರಕಾರವಾಗಿ ಎಂದೂ ತಪ್ಪದೇ ಆಚರಿಸಿದರೆ ಎಂದೆಂದೂ ಸಮತೋಲನ ತಪ್ಪದೇ ದ್ವಂದ್ವಗಳನ್ನು ನಡೆಸಿಕೊಂಡು ಹೋಗಬಹುದು. ಯೋಗವಿದ್ದರೆ ಸ್ವಾನಂದ ಭವನದ ದರ್ಶನವನ್ನು ಮಾಡಬಹುದು. ಆದರೆ ಇದು ಒಂದು ಜನ್ಮದ ಸಾಧನೆಯಿಂದ ಆಗುವ ಸಿದ್ಧಿಯಲ್ಲ. ಸಹಸ್ರಾರು ಜನ್ಮಗಳ ಸಾಧನೆಯ ಫಲ. ಅಂತಹ ಸಾಧಕನ ಸ್ಥಿತಿಯೂ ಕೂಡ ಗಣೇಶ ಪುರಾಣದಲ್ಲಿ ಹೇಳಲ್ಪಟ್ಟಿದೆ. ಉದಾಹರಣೆಗೆ ಅಲ್ಲಿ ಬರುವ ಕಾಶೀರಾಜನ ವೃತ್ತಾಂತ. ಸದ್ಧರ್ಮ ಪರಿಪಾಲಕನಾದ ಕಾಶೀರಾಜನು ಚಾಚೂ ತಪ್ಪದೇ ತಾನೂ ಸದ್ಧರ್ಮ ನಿಷ್ಠನಾಗಿ ಕಾಶೀದೇಶವನ್ನು ಆಳಿಕೊಂಡು ಬರುತ್ತಿರಲು ಶ್ರೀ ಗಣೇಶ ಭಕ್ತಾಗ್ರೇಸರನಾದ ಮುದ್ಗಲ ಮಹರ್ಷಿಯ ಆಗಮನ ಅವನ ಅರಮನೆಗೆ ಆಗುತ್ತದೆ. ಆಗ ಅವನನ್ನು ಭಕ್ತಿಪೂರ್ವಕವಾಗಿ ವಿಧಿಯಂತೆ ಸತ್ಕರಿಸಿ ಕೊನೆಗೆ

"ಮುನಿಪ ಪೇಳ್‌ಲೋಕಗಳಲಾ ವಿನಾಯಕ ಲೋಕ
ವೆನುವುದೆಂತಿಹುದು ಮತ್ತೆಲ್ಲಿಹುದು ಹೇಗದನು
ತನು ಸಹಿತ ಸೇರುವುದು ವಿಹಿತ ಮಾರ್ಗವದಾವುದೆಂದೆನುತ ವಿಸ್ತರದಲಿ"

ಎಂದು ಪ್ರಶ್ನಿಸುತ್ತಾನೆ. ಅದಕ್ಕೆ ಮುದ್ಗಲ ಮಹರ್ಷಿಯು ಉತ್ತರಿಸುತ್ತಾ ಆಗ ಹೇಳಿದ ಲೋಕಕ್ಕೆ ಸ್ವಾನಂದ ಭವನ ನಿಜ ಲೋಕವೆಂದೂ, ಎರಡು ಹೆಸರು ಇರುವುದೆಂದೂ ಮುಂದೆ ದೇವಾಂತಕ ನರಾಂತಕರೆಂಬ ದೈತ್ಯರು ಲೋಕಕಂಟಕರಾಗಿ ಜನಿಸಿದಾಗ ಅವರ ವಧೆಗಾಗಿ ಧರೆಯೊಳಗೆ ಅವು ಅವತರಿಸಿ ಬರುವನೆಂದೂ, ಎಲ್ಲಡೆಯಲ್ಲೂ ಅವನ ಹೆಸರು ಹರಡುವುದೆಂದೂ ತಿಳಿಸಿ ಆಗ ನೀನೂ ಕೂಡ ನಿನ್ನ ವೀರಸುತನಿಗೆ ಮದುವೆ ಮಾಡಲೆಂದು ನಿನ್ನ ಗುರುಪುತ್ರನಾಗಿರುವ ಆ ಗಣಪನನ್ನು ನಿನ್ನ ಮನೆಗೆ ಕರೆದುಕೊಂಡು ಬರುವೆಯೆಂದು ಹೇಳಿ ಮತ್ತೆ ಆ ಗಣೇಶನ ಆಗಮನವಾದಾಗ ನಿನ್ನ ರಾಜ್ಯದಲ್ಲಿ ಬಹು ವಿಧದ ಲೀಲೆಗಳು ನಡೆಯುವವೆಂದೂ, ಶುಕ್ಲನೆನ್ನುವ ಬ್ರಾಹ್ಮಣನ ದಾರಿದ್ರ್ಯವನ್ನು ಅವನ ಮನೆಗೆ ಹೋಗಿ ಕಳೆವನೆಂದೂ ಬಳಿಕ ನಿನ್ನ ಮನೆಯಲ್ಲಿ ಭಕ್ತಿಯಿಂದ ನೀನೆ ನಾನಾ ವಿಧವಾಗಿ ಅವನನ್ನು ಪೂಜಿಸುವೆ ಎಂದು ಹೇಳಿ ಆ ಮಹರ್ಷಿಯು ಹೊರಟು ಹೋಗುತ್ತಾನೆ.

ಬಳಿಕ ಮುನಿಪನ ಮಾತಿನಂತೆ ನಡೆದು ಹೋಗುತ್ತದೆ. ಹಾಗೇ ಗಣೇಶನು ತನ್ನ ನಿಜಲೋಕಕ್ಕೆ ಹೋದ ಮೇಲೆ ಇತ್ತ ಕಾಶೀರಾಜನು ಗಣೇಶನನ್ನು ತನ್ನೊಳಗೆ ನೆನೆಸುತ್ತಾ ಬೇನೆಯರಿಯದ ಬೇನೆಯೊಳಗೆ ತನಗೆ ಅರಿವಿಲ್ಲದೇ ಮುಳುಗಿಹೋಗುತ್ತಾನೆ.

ರಾಜನ ಸ್ಥಿತಿಯನ್ನು ಕಂಡು ಮಂತ್ರಿಗಳಿಗೆ ಚಿಂತೆಯಾಗುತ್ತದೆ. ಆಗ ಹಿಂದೆ ಗಣಪನ ಉಪದೇಶವಿತ್ತ ಮುದ್ಗಲ ಮುನಿಯು ಈಗ ಪೂರ್ಣೋಪದೇಶಕ್ಕೆ ಕಾಲವು ಬಂತೆಂದು ತನ್ನ ಧ್ಯಾನವನ್ನು ತ್ಯಜಿಸಿ ಕಾಶೀರಾಜನ ಅರಮನೆಗೆ ಬರುತ್ತಾನೆ. ಕಾಶೀರಾಜನು ಮುನಿಯ ಬರುವಿಕೆಯಿಂದ ಅತ್ಯಂತ ಸಂತುಷ್ಟಿಯನ್ನು ತಾಳಿ ಸಾಷ್ಟಾಂಗವಾಗಿ ನಮಿಸಿದಾಗ ನಿನ್ನ ಬಯಕೆಯೇನೆಂದು ಮುದ್ಗಲನು ಕೇಳುತ್ತಾನೆ. ಆಗ ರೋಮಾಂಚಿತನಾದ ರಾಜನು. "ನಾನು ಈ ಜಡದೇಹದಿಂದಲೇ ಸ್ವಾನಂದ ಭವನವನ್ನು ಸೇರಲು ಇಚ್ಛಿಸಿರುವೆನು. ನನಗದನು ತೋರು" ಎಂದು ಹೇಳುತ್ತಾನೆ.

"ಎಲೈ ರಾಜನೇ ಹಲವು ವರ್ಷಗಳ ಕಾಲ ನಿನ್ನ ಕರ್ಮದ ಫಲವಾಗಿ ಭೋಗ ಭಾಗ್ಯಗಳನ್ನು ಅನುಭವಿಸಿದ ಮೇಲೆ, ಬ್ರಹ್ಮಕಲ್ಪಗಳ ತೆರೆಯು ಹರಿದು ಹೋದ ಮೇಲೆ, ನೀನು ಸ್ವಾನಂದ ಭವನವನ್ನು ಸೇರುವೆ" ಎಂದು ಹೇಳುತ್ತಾನೆ. ಆಗ ರಾಜನು "ಗಣಪ ಲೋಕದ ಪರಿಚಯವನ್ನು ನನಗೆ ಮಾಡಿಕೊಡು" ಎಂದು ಮುನಿಪನಲ್ಲಿ ತನ್ನ ಬೇಡಿಕೆಯನ್ನು ಇಟ್ಟಾಗ ಅವನು ಕಪಿಲ ಮಹರ್ಷಿಯಿಂದ ತನಗೆ ಉಪದಿಷ್ಟವಾದ ಗಣಪ ಲೋಕದ ಪರಿಚಯವನ್ನು ಮಾಡುತ್ತಾನೆ.

ಇಲ್ಲಿ ಸುಗುಣರೂಪಿ ಗಣಪನ ಲೋಕದ ವಿವರಣೆಯಿದೆ. ಕೇವಲ ಭಾವದೊಳಗೆ ಅನುಭವಿಸಬಹುದಾದಂತಹ ಲೋಕವದು. ಹಾಗೆಯೇ ಷಟ್‌ಚಕ್ರಾದಿತಂತ್ರಗಳನ್ನು ಉಪಯೋಗಿಸಿಕೊಂಡು ಸ್ವಾನಂದಭವನವನ್ನು ಕಾಣುವುದು ಹೇಗೆಂದು ಕೂಡ ವಿವರಿಸಿರುತ್ತಾನೆ. ಬ್ರಹ್ಮ, ವಿಷ್ಣು, ಮಹೇಶ್ವರ, ದೇವಾಸುರ ವರ್ಗ, ಸೂರ್ಯ ಚಂದ್ರ, ಅಗ್ನಿ, ಸ್ವರ್ಗ, ನರಕ, ಸಮುದ್ರ, ಪರ್ವತ, ಕಾನನ, ನದಿಗಳು, ಮೋಡಗಳು, ಮಿಂಚುಗಳು ಹೀಗೆ ವೈಕಾರಿಕ ಸೃಷ್ಟಿಗಳನ್ನು, ಎಲ್ಲೆಲ್ಲಿ ವಿಚಾರಿಸಿ ಅವೆಲ್ಲವನ್ನು ಮೀರಿ, ನೈಜತೆಯನ್ನೇರಿ ಬಳಿಕ ಸ್ವಾನಂದದ ದರ್ಶನವನ್ನು ಹಾಗೂ ಅದರಲ್ಲಿ ಒಂದಾಗಿ ಹೋಗುವ ತಂತ್ರವನ್ನು ವಿವರಿಸುತ್ತಾನೆ,

"ಅಲ್ಲೆ ವಿಶ್ವವ್ಯಾಪಿ ವಿಶ್ವವಿದ್ ವಿಶ್ವಜಿ
ದ್ದೆಲ್ಲವಂ ನೋಡುತ್ತಲಿಹನು ಕೇಳ್ ಹೇನೃಪನೆ
ಇಲ್ಲೆಲ್ಲವಂ ತಿಳಿಯೆ ಮತ್ತೆ ನೋಡಲು ಕೂಡ ಗಣಪನಾ ಕೃಪೆ
ಬೇಕಲಾ"
ಅಲ್ಲಿ ಹೋದವರೆಲ್ಲರಾನಂದಹೃದಯದೊಳಗೆ

ಚೆಲ್ಲಕೊಂಬರುತಮ್ಮ ತನವನ್ನು ಸುಕೃತದಿಂ
ದಲ್ಲಲ್ಲವೆಂಬುದೇ ಸ್ವಾನಂದವೆಂಬುದಂ ದೃಢಪಡಿಸಿ ತೋರುತಿಹುದು"

ಎಂದು ಮುದ್ಗಲಮುನಿ ಹೇಳಿ ತನ್ನ ತಾಣಕ್ಕೆ ತೆರಳುತ್ತಾನೆ. ಬಳಿಕ ಬಹಳ ಕಾಲದವರೆಗೆ ರಾಜ್ಯವನ್ನು ಆಳಿ ಸಕಲ ಭೋಗ ಭಾಗ್ಯಗಳನ್ನು ಅನುಭವಿಸಿ ಆಮೇಲೆ ಸ್ವಾನಂದ ಭವನದ ಕಡೆ ಹೊರಡಲು ಸಿದ್ಧನಾಗುತ್ತಾನೆ ಆಗ ತಾನೇ ಬಂದ ವಿಮಾನವನ್ನೇರಿ ಸ್ವಾನಂದ ಭವನವನ್ನು ಸೇರುತ್ತಾನೆ. ಆದರೆ ಆ ವಿಮಾನವು ತೆರಳುವ ಮಾರ್ಗ ಅತ್ಯಂತ ರೋಚಕವಾದುದು. ಅದು ಭೂಲೋಕದಿಂದ ಆರಂಭವಾಗಿ ಭೂತ, ಪ್ರೇತ, ಪೈಶಾಚ, ಲೋಕಗಳನ್ನು ದಾಟಿ ರಾಕ್ಷಸರ ಲೋಕವನ್ನು ನೋಡಿ ಒಟ್ಟಿನಲ್ಲಿ ಆತನು ಮಾಡಿದ ಪಾಪ ಪುಣ್ಯಗಳ ಭಾವಗಳ ಲೋಕಗಳನ್ನು ಹಾಗೂ ಮನುಜ ಸಂಸ್ಕಾರಕ್ಕೆ ಸಹಜವಾದ ಭಾವಗಳ ಲೋಕಗಳನ್ನು ದರ್ಶನಮಾಡಿ ಅವನಲ್ಲಿರುವ ಆಸೆ, ಆಕಾಂಕ್ಷೆಗಳಿಗೆ ರೂಪುಗೊಟ್ಟ ಭಾವಗಳ ಲೋಕಗಳನ್ನು ನೋಡಿಕೊಂಡು ಮತ್ತು ನೋಡಿದ ಎಲ್ಲಾ ಲೋಕಗಳ ಲೋಪಗಳನ್ನು ತೊಡೆದು ಹಾಕಿ ಕೊನೆಯಲ್ಲಿ ಗಣೇಶನ ಲೋಕವಾದ ಸ್ವಾನಂದ ಲೋಕವನ್ನು ಸೇರುತ್ತಾನೆ. ಗಣೇಶಪುರಾಣವು ಅಲ್ಲಿ ಅವನ ಅನುಭವವನ್ನು ವಿಸ್ತಾರವಾಗಿ ಹೇಳುತ್ತದೆ. ಕೊನೆಯಲ್ಲಿ ಶ್ರೀ ಗಣೇಶನಿಗೆ ನಮಿಸುತ್ತಾ ರಾಜನು,

"ಕೇಳು ಸತ್ಸಂಗದಿಂದೊಳಿತನುಗ್ರಹವೆಂಬ
ಹೇಳಿಕೆಯು ಸತ್ಕರ್ಮ ನಿಷ್ಠೆತದನುಸ್ಮೃತಿಯ
ಬಾಳಿಕೆಯು ತಾ ಚಿತ್ತಶುದ್ಧಿಯೇ ಸತ್ಕೃಪೆಯ, ತಿಳಿವಳಿಕೆಯೇ ಮುಕ್ತಿಯು"
ಕೇಳು ನೀ ಸಾಕಾರವಾಂತರೆಲ್ಲವು ಹೀಗೆ.
ಸಾಲಿಡುವುದಲೆ ಲೋಕದಲ್ಲೆಲ್ಲರಿಗೆ ಮುಕ್ತಿ
ಮೇಲೆನಿಸಿಬಹುದು ದುರ್ಲಭವಾಗದುದು ವೆನುತ ನೃಪನು
ಸಂಸ್ತುತಿಗೈದನು"

ಭಾವಗಳನ್ನು ಎಲ್ಲವನ್ನು ಗಣೇಶವೆಂಬ ತತ್ವದಲ್ಲಿ ಸಾಧಕನು ಸಮನ್ವಯಗೊಳಿಸಿಕೊಂಡು ಅವುಗಳನ್ನು ತನ್ನಲ್ಲಿಯೇ ಕರಗಿಸಿಕೊಂಡಾಗ ದೇಹವೇ ವಿಮಾನವಾಗುತ್ತದೆ. ಅದರಿಂದ ಅವನು ಸ್ವಾನಂದ ಲೋಕವನ್ನು ಪಡೆಯುತ್ತಾನೆ.

ಇದು ಸವಿಕಲ್ಪ ಸಮಾಧಿಯು ನಿರ್ವಿಕಲ್ಪ ಸಮಾಧಿಯನ್ನು ತಲುಪುವ ಎಲ್ಲಾ ಹಂತಗಳ ವಿವರಣೆಯಾಗಿದೆ. ಇಲ್ಲಿ ಲೋಕವೆನ್ನುವ ಶಬ್ದವನ್ನು ದರ್ಶಿಸುವುದು ಹಾಗೂ ಅದನ್ನು ಗುರುತಿಸುವುದು ಎನ್ನುವ ಅರ್ಥದಲ್ಲಿ ಬಳಸಲಾಗಿದೆ. ಹಾಗೆಯೇ ಬದುಕಿನ ಹಂತಗಳಲ್ಲಿ ಬರುವ ಭಾವಪುಂಜಗಳನ್ನು ನೋಡಿ ತನ್ನೊಳಗೆ ವಿಮರ್ಶಿಸಿಕೊಂಡು ಅವುಗಳನ್ನು ಸಂಪೂರ್ಣವಾಗಿ ಕರಗಿಸಿಕೊಂಡು (ಅಂದರೆ ತ್ಯಾಗ ಮಾಡಿ) ಏಕರಸನಾದರೆ ಅದುವೇ ಸ್ವಾನಂದಲೋಕ, ಅಂದರೆ ತಾನು ತನ್ನೊಳಗೆ ಆನಂದಪಡುವ ಲೋಕ, ಅಂತವನ ದೇಹವೇ ಸ್ವಾನಂದಭವನ. ಎಲ್ಲಾ ಜೀವಿಗಳ ದೇಹವು ಸ್ವಾನಂದ ಭವನವೇ ಆಗಿದ್ದರೂ. ಅವು ಅದನ್ನು ಕಂಡುಕೊಂಡು ಗುರುತಿಸಿಕೊಳ್ಳದ ಕಾರಣದಿಂದ ದೇಹವನ್ನು ಹುಟ್ಟು ಮತ್ತು ಸಾವಿನ ದೇಹವೆಂಬುದಾಗಿ ತಿಳಿಯುತ್ತವೆ ಹಾಗಾಗಿ ದ್ವಂದ್ವಗಳಿಗೆ ಸಿಕ್ಕು ಒದ್ದಾಡುತ್ತವೆ. ಇದಕ್ಕೆ ಮನುಷ್ಯ ಜೀವಿಯೂ ಹೊರತಲ್ಲ.

ಶ್ರೀ ಗಣೇಶ ಪುರಾಣದ ಮೂಲ ಉದ್ದೇಶವೇ ದ್ವಂದ್ವದ ನಿರಸನ. ಆನಂದ ದರ್ಶನ ಹಾಗಾಗಿ ರಾಜನೊಬ್ಬನ ಕುಷ್ಠ ರೋಗದ ಬಳಲುವಿಕೆಯಿಂದ ಪ್ರಾರಂಭವಾಗುವ ಶ್ರೀ ಗಣೇಶ ಪುರಾಣವು ಅವನ ಕುಷ್ಠರೋಗದ ನಿವಾರಣೆ ಮತ್ತು ಸ್ವಾನಂದ ಲೋಕವನ್ನು ಅವನು ಸೇರುವ ಕಥೆ ವಿವರಣೆಯಲ್ಲಿ ಮುಕ್ತಾಯವಾಗುತ್ತದೆ. ಇಲ್ಲಿ ಬರುವ ಕಥೆಗಳ ಸಾರಾರ್ಥವನ್ನು, ಹೇಗೆ ನಾವು ಗುರುತಿಸಿಕೊಂಡು ಅದನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕೆಂಬುದಕ್ಕೆ ಶ್ರೀ ಗಣೇಶ ಪುರಾಣದ ಕೊನೆಯಲ್ಲಿ ವರೇಣ್ಯನೆಂಬ ರಾಜನಿಗೆ ಶ್ರೀ ಗಣೇಶನೇ ಸಾಕ್ಷಾತ್ ಉಪದೇಶಿಸಿದ ಒಟ್ಟು ಹನ್ನೊಂದು ಅಧ್ಯಾಯಗಳ ಗಣೇಶಗೀತೆಯೊಂದು ಸಂದರ್ಭಾನುಸಾರವಾಗಿ ಬಂದಿದೆ. ಅದರಲ್ಲಿ ಕ್ರಮವಾಗಿ 1) ಸಾಂಖ್ಯ ಯೋಗಸಾರಾರ್ಥಯೋಗ 2) ಕರ್ಮಯೋಗ 3) ಬ್ರಹ್ಮಾರ್ಪಣ ಯೋಗ

4) ಕರ್ಮಸಂನ್ಯಾಸಯೋಗ 5) ಯೋಗಾವೃತ್ತಿ ಪ್ರಶಂಸಾ 6) ಯೋಗಾವೃತ್ತಿ ಬುದ್ಧಿಯೋಗ 7) ಉಪಾಸನಾಯೋಗ 8) ವಿಶ್ವರೂಪವೀಕ್ಷಣಾಯೋಗ 9) ಕ್ಷೇತ್ರ ಕ್ಷೇತ್ರಜ್ಞ ವಿವೇಕ ಯೋಗ 10) ಉಪದೇಶಯೋಗ 11) ಗುಣತ್ರಯ ಕೃತಿಯೋಗ. ಇವುಗಳನ್ನು ಹೇಳಿ ಶ್ರೀ ಗಣೇಶಪುರಾಣದ ಕಥಾವಳಿಗಳನ್ನು ಹೇಗೆ ಅರ್ಥೈಸಬೇಕು ಮತ್ತು ತತ್ವಗಳನ್ನು ನಮ್ಮ ನಿತ್ಯ ಜೀವನದಲ್ಲಿ ಹೇಗೆ ಅಳವಡಿಸಿಕೊಳ್ಳಬೇಕು ಎಂಬುದನ್ನು ವಿವರಿಸಲಾಗಿದೆ.

ಮಿತ್ರ ಸಂಹಿತೆಯಾದ ಪುರಾಣಗಳು ಮಿತ್ರನಂತೆ ಒಂದೊಂದು ಕಥೆಗಳನ್ನು ಬಿತ್ತರಿಸುತ್ತಾ ಆ ಕಥೆಯಲ್ಲಿ ಬರುವ ನಾಯಕನ ಅಥವಾ ನಾಯಕಿಯರ ಸ್ಥಿತಿಗತಿಗಳನ್ನು ಚಿತ್ರಿಸುತ್ತಾ ಕೊನೆಯಲ್ಲಿ ಆ ನಾಯಕರು ಮತ್ತು ನಾಯಕಿಯರು ಹೊಂದಿದ ಪರಮೋಚ್ಚ ಪದಗಳನ್ನು ಹೇಳುತ್ತದೆ. ಹಾಗೆ ಪರಮೋಚ್ಚಪದಗಳನ್ನು ಹೊಂದಬೇಕಾದರೆ ಅವರು ಅನುಸರಿಸುವ ಆಚಾರ ವಿಚಾರ ಶ್ರದ್ದೆ, ನಿಷ್ಠೆ, ಭಕ್ತಿಗಳನ್ನು ವಿವರಿಸುತ್ತಾ, ಕಥೆಯ ಓದುಗರನ್ನು ಸನ್ಮಾರ್ಗದ ಕಡೆಗೆ ಪ್ರಚೋದಿಸುತ್ತದೆ ತನ್ಮೂಲಕ ಉತ್ತಮ ಸಂಸ್ಕಾರಗಳ ರಕ್ಷಣೆಯನ್ನು ಮಾಡುತ್ತವೆ.

ಹೀಗೆ ಶ್ರೀ ಗಣೇಶ ಪುರಾಣವು ಕೇವಲ ಸಾಧಕರಿಗೆ ಮಾತ್ರವಲ್ಲದೆ ಸಾಮಾನ್ಯರಿಗೂ ನಿತ್ಯಜೀವನದಲ್ಲಿ " ಯಾವುದನ್ನು ಅನುಸರಿಸಬೇಕು ಮತ್ತು ಯಾವುದನ್ನು ತ್ಯಜಿಸಬೇಕು" ಎಂಬುದನ್ನು ಹೇಳುತ್ತಾ ಹುಟ್ಟು, ಸಾವು, ಮತ್ತು ಬದುಕು ಇವುಗಳ ಮೂಲವನ್ನು ವಿವರಿಸಿ ಅವುಗಳನ್ನು ಮೀರಿ ನಿಲ್ಲುವುದು ಹೇಗೆ? ಎಂಬುದನ್ನು ತಿಳಿಸಿ ಸಾಧಕನೊಬ್ಬನು ಹೇಳಿದಂತೆ" ನಿದ್ದಿಯೊಳಗೆ ಸದಾ ಎಚ್ಚರವಿರಬೇಕು. ತಂಬಾಕಿಲ್ಲದ ಬತ್ತಿಯೊಳಸೇರಿರಬೇಕು". ಎಂದು ಪ್ರತಿಯೊಬ್ಬರೂ ಸುಖದುಃಖಗಳಿದ್ದರೂ ಸಹ ಅವುಗಳನ್ನು ಗಣಿಸಿದೆ ನಿತ್ಯಾನಂದವನ್ನು ಅನುಭವಿಸಬೇಕೆಂಬುದೇ ಶ್ರೀ ಗಣೇಶ ಪುರಾಣದ ಆಶಯ. ತಾನು ತನ್ನೊಳಗೆ ನಿತ್ಯಾನಂದವನ್ನು ಕಂಡುಕೊಂಡು ಮತ್ತು ಅದನ್ನು ಗುರುತಿಸಿಕೊಂಡು ತನ್ನೊಳಗೆ ಸುಖಿಸಬೇಕು. ನಮಗಿಂತ ಭಿನ್ನ ವಸ್ತುವಿನಿಂದ ಅಥವಾ ವ್ಯಕ್ತಿಗಳಿಂದ ಆನಂದವೆಂದೆಂದಿಗೂ ಸಿಗದು. ಆನಂದವೆಂಬುದು ನಮ್ಮಲ್ಲೇ ಇದೆ. ಅದನ್ನು ಪಡೆಯುವುದೇ ನಮ್ಮ ಗುರಿ. ನಮ್ಮ ದೇಹವೇ ಸ್ವಾನಂದ ಭವನ. ಜೀವನದಲ್ಲಿ ಬರುವ ಅಡೆತಡೆಗಳು ಕಾಡುವವಲ್ಲ ಅವು ಪರಮೋಚ್ಚ ಪದವಿಯನ್ನು ನೀಡಲೋಸುಗ ಬರುತ್ತವೆ. ಆಗುವುದೆಲ್ಲಾ ಒಳ್ಳೆಯದಕ್ಕೆ ಆಗುತ್ತಿರುವುದೆಲ್ಲ ಒಳ್ಳೆಯದಕ್ಕೆ ಮತ್ತು ಆದದ್ದೆಲ್ಲಾ ಒಳ್ಳೆಯದಕ್ಕೆ ಎಂಬ ಭಾವನೆಯನ್ನು ಶ್ರೀ ಗಣೇಶ ಪುರಾಣವು ಗಟ್ಟಿಗೊಳಿಸುತ್ತದೆ.

ಇತಿ ಶಮ್
ಶ್ರೀ ಶ್ರೀಧರಾರ್ಪಣಮಸ್ತು

ಗರುಡ ಪುರಾಣದಲ್ಲಿರುವ ನೈತಿಕ ಮೌಲ್ಯಗಳು

—ಡಾ। ಜಿ.ಎನ್. ಭಟ್ಟ

ಪುರಾಣಗಳಲ್ಲೇ ಗರುಡ ಪುರಾಣಕ್ಕೆ ವಿಶಿಷ್ಟ ಸ್ಥಾನವಿದೆ. ಇದು ಪುರಾಣಗಳ ಕಾಲಗತಿಯಲ್ಲಿ ಅರ್ವಾಚೀನ (8ನೇ ಶತಮಾನ–12ನೇ ಶತಮಾನ ಪ್ರೇತಕಾಂಡ)ವಾಗಿದ್ದರೂ (ಭವಿಷ್ಯ, ಭಾಗವತಗಳಂತೆ), ಪ್ರಸಿದ್ಧ ಪ್ರಾಚೀನ ಪುರಾಣಗಳಾದ, ಅಗ್ನಿ–ವಿಷ್ಣು–ಬ್ರಹ್ಮ,ಸ್ಕಂದ ನಾರದ ಪುರಾಣಗಳಂತೇ ಜನರ ಮನಸ್ಸಿನಲ್ಲಿ ಉಳಿದುಕೊಂಡಿದೆ. ಇದಕ್ಕೆ ಕಾರಣ ಇದರಲ್ಲಿರುವ ಉತ್ತರಖಂಡವಾದ ಪ್ರೇತಕಲ್ಪ. ಮಾರ್ಕಾಂಡೇಯ ಪುರಾಣವು ಸಪ್ತಶತಿಯ ದೇವಿ ಪಾರಾಯಣೆಯಿಂದ ಪ್ರಚುರವಿರುವಂತೇ ಗರುಡ ಪುರಾಣವು 'ಪ್ರೇತ ಕಲ್ಪ'ದಿಂದ ಪ್ರಭಾವಿಯಾಗಿ ಜನಮಾನಸದಲ್ಲಿ ಅಪರಕರ್ಮಕ್ಕೆ ಆಧಾರಭೂತವಾಗಿದೆ. ಇಂತಹ ಗರುಡ ಪುರಾಣದಲ್ಲಿ ಪ್ರತಿಪಾದಿತವಾದ ಕೆಲವು ನೈತಿಕ ಮೌಲ್ಯಗಳನ್ನು ವಿವರಿಸುವ ಪ್ರಯತ್ನ ಇಲ್ಲಿ ನಡೆದಿದೆ.

ಪ್ರಾರ್ಥನಾ

ಅಜಮಜರ ಮನಂತಂ ಜ್ಞಾನರೂಪಂ ಮಹಾಂತಂ
ಶಿವಮಮಲಮಾನಾದಿಂಭೂತದೇಹಾದಿಹೀನಮ್ ।
ಸಕಲಕರಣ ಹೀನಂ ಸರ್ವಭೂತಸ್ಥಿತಂ ತಂ
ಹರಿಮಮಲಮಮಾಯಂ ಸರ್ವಗಂ ವಂದ ಏಕಮ್ ॥

(ಹರಿಯ ಸ್ತುತಿಯೇ ಆದರೂ ಅಜ=ಬ್ರಹ್ಮ ಹಾಗೂ ಶಿವ=ರುದ್ರ ಸ್ವರೂಪನೂ ಆದ ಹರಿಯ ವರ್ಣನೆ ಇಂಗಿತವಾಗಿದೆ)

ನಮಸ್ಯಾಮಿ ಹರಿಂ ರುದ್ರಂ ಬ್ರಹ್ಮಣಾಂಚ ಗಣಾಧಿಪಮ್ ।
ದೇವೀಂ ಸರಸ್ವತೀಂ ಚೈವ ಮನೋ ವಾಕ್ಕರ್ಮಭಿಃ ಸದಾ ।

ಪುರಾಣಗಳಲ್ಲೇ ಗರುಡ ಪುರಾಣಕ್ಕೆ ವಿಶಿಷ್ಟ ಸ್ಥಾನವಿದೆ. ಇದು ಪುರಾಣಗಳ ಕಾಲಗತಿಯಲ್ಲಿ ಅರ್ವಾಚೀನ (8ನೇ ಶತಮಾನ–12ನೇ ಶತಮಾನ ಪ್ರೇತಕಾಂಡ)ವಾಗಿದ್ದರೂ (ಭವಿಷ್ಯ, ಭಾಗವತಗಳಂತೆ), ಪ್ರಸಿದ್ಧ ಪ್ರಾಚೀನ ಪುರಾಣಗಳಾದ, ಅಗ್ನಿ–ವಿಷ್ಣು–ಬ್ರಹ್ಮ,ಸ್ಕಂದ ನಾರದ ಪುರಾಣಗಳಂತೇ ಜನರ ಮನಸ್ಸಿನಲ್ಲಿ ಉಳಿದುಕೊಂಡಿದೆ. ಇದಕ್ಕೆ ಕಾರಣ ಇದರಲ್ಲಿರುವ ಉತ್ತರಖಂಡವಾದ ಪ್ರೇತಕಲ್ಪ. ಮಾರ್ಕಾಂಡೇಯ ಪುರಾಣವು ಸಪ್ತಶತಿಯ ದೇವಿ ಪಾರಾಯಣೆಯಿಂದ ಪ್ರಚುರವಿರುವಂತೇ ಗರುಡ ಪುರಾಣವು 'ಪ್ರೇತ ಕಲ್ಪ'ದಿಂದ ಪ್ರಭಾವಿಯಾಗಿ ಜನಮಾನಸದಲ್ಲಿ ಅಪರಕರ್ಮಕ್ಕೆ ಆಧಾರಭೂತವಾಗಿದೆ.

ವಿದ್ವಾಂಸರು ಹೇಳುವಂತೆ 'ಪ್ರೇತಕಲ್ಪ'ವು ಗರುಡ ಪುರಾಣ ರಚಿತವಾಗಿ ಇನ್ನೂರು–ಮುನ್ನೂರು ವರ್ಷಗಳ ನಂತರ ಸೇರಿಸಲ್ಪಟ್ಟಿದ್ದು, ಅದಕ್ಕೆ ಗರುಡ ಪುರಾಣವೆಂದರೆ ಅಪರ ಪ್ರೇತಕಲ್ಪ. ಸಾವು, ಪ್ರೇತ, ನರಕಗಳ ಬಗೆಗೆ ವಿವರವಿರುವುದು ಎಂಬ ಭಯಭೀತ ಕಲ್ಪನೆಯೂ ಇದರ ವೈಶಿಷ್ಟ್ಯತೆಗೆ ಕಾರಣವಾಗಿದ್ದು ಅಶುಭವೆಂಬ ಹಣೆಪಟ್ಟಿಯನ್ನು ಕಟ್ಟಿಕೊಂಡಿದೆ. ಪ್ರಧಾನಭಾಗವಾದ ಪೂರ್ವಖಂಡವು ಗೌಣವಾಗಿ ಹೋಗಿದೆ.

ಇದು ವಿಷ್ಣುವು ಗರುಡನಿಗೆ ಬೋಧಿಸಿದ್ದರಿಂದ ಗಾರುಡೀ, ತಾರ್ಕ್ಷ, ವೈನತೇಯ ಪುರಾಣವೆನಿಸಿದರೂ, ಈ ಪುರಾಣದ ಪ್ರಾರಂಭದಲ್ಲೇ ಹೇಳುವಂತೆ ಈಶ್ವರನ ಪ್ರಶ್ನೆಗೆ ಉತ್ತರವಾಗಿ ವಿಷ್ಣು ಬೋಧಿಸಿದ್ದಾಗಿದೆ.

ಧ್ಯೇಯ, ಪೂಜ್ಯ ಯಾರೆಂದು ರುದ್ರನು ಕೇಳಿದ್ದಕ್ಕೆ ವಿಷ್ಣು ಬ್ರಹ್ಮಾದಿ ದೇವರುಗಳೊಂದಿಗೆ ರುದ್ರನಿಗೆ ವಿಷ್ಣುವು ಉಪದೇಶಿಸುತ್ತಾನೆ. ಗರುಡನು ಮುಂದೆ ತಾಯಿ ವಿನತೆಯನ್ನು ನಾಗ ದಾಸ್ಯದಿಂದ ವಿಮೋಚಿಸಲು ಅಮೃತ ತರುವ ಮಹತ್ಕಾರ್ಯ ಮಾಡುವವನು, ಹಾಗೂ ಇದೀಗ ವಿಷ್ಣುವನ್ನು ಕುರಿತು ತಪಸ್ಸು ಮಾಡುತ್ತಿದ್ದು 'ಪುರಾಣ ಸಂಹಿತಾ ಕರ್ತನಾಗಬೇಕೆಂದು' ಬೇಡಿದ್ದರಿಂದ ಅವನ ವಾಹನವಾದ್ದರಿಂದ ವಿಷ್ಣುವು 'ಗರುಡ ಪುರಾಣ'ವೆಂದು ಹೆಸರು ಬರಲಿ ಎಂದು ಗರುಡನ ಪ್ರಾರ್ಥನೆಗೆ ಓಗೊಟ್ಟು ವರ ನೀಡುತ್ತಾನೆ.

(ಗಾರುಡಂ ತವನಾಮ್ನಾ ತಲ್ಲೋಕೇ ಕ್ಯಾತಿಂಗಮಿಷ್ಯತಿ । ತಥಾ ಖ್ಯಾತಿಂ ಪುರಾಣೇಷು ಗಾರುಡಂ ಗರುಡೇಷ್ಯತಿ । ಗರುಡಸ್ತುಖ್ಯಾ ಸ್ವಯಂವಕ್ತಾಯತ್ ತದ್ ಗಾರುಡ ಸಂಜ್ಞಕಮ್ ಇತ್ಯಾದಿ).

ಪ್ರಸ್ತುತ ಗರುಡ ಪುರಾಣದಲ್ಲಿ 8800 ಶ್ಲೋಕಗಳಿವೆ. (ಆದರೆ ನಾರದ ಪುರಾಣದಲ್ಲಿ ಈ ಸಂಖ್ಯೆಯನ್ನು 19,000ವೆಂದು ಹೇಳಿದ್ದಾರೆ). ಪ್ರಥಮ ಖಂಡದಲ್ಲಿ 229 ಅಧ್ಯಾಯಗಳಿದ್ದು ಪ್ರೇತಕಲ್ಪವೆಂದು ಪ್ರಸಿದ್ಧವಾದ ಉತ್ತರಖಂಡದಲ್ಲಿ 35 ಅಧ್ಯಾಯಗಳಿವೆ.

ವಿದ್ವಾಂಸರ ಅಭಿಪ್ರಾಯದಂತೆ ಈ ಪುರಾಣದ ಪ್ರಾಚೀನ ಶ್ಲೋಕಗಳ ಆಧಾರದಲ್ಲಿ 3–4ನೇ ಶತಮಾನದಲ್ಲಿ ರಚಿತವಾಗಿದ್ದು 11ನೇ ಶತಮಾನದವರೆಗೂ ಇದರಲ್ಲಿ ಆಯಾ ಕಾಲ–ಪ್ರದೇಶಗಳ ಪ್ರಭಾವದಿಂದ ಶ್ಲೋಕಗಳು ಜಯ–ಭಾರತ–ಮಹಾಭಾರತ ವಾದಂತೇ ಸೇರುತ್ತಾ ಹೋಗಿವೆ. ಆದರೆ ಇದರಿಂದ ಮೌಲ್ಯ ವರ್ಧನೆಯಾಗಿದೆಯೇ ಹೊರತು ಕ್ಷೀಣಿಸಿಲ್ಲ. ವರ್ತಮಾನ ಕಾಲದಲ್ಲಿ ಕಾಶಿ ಪಂಡಿತರಿಂದ ರಚಿತವಾದ ಗರುಡಪುರಾಣ

'ಸಾರೋದ್ಧಾರ'ವೆಂಬ ಗ್ರಂಥವೇ ಮೃತ, ಅಶೌಚದಲ್ಲಿ, ಪುರಾಣ ಪ್ರವಚನದಲ್ಲಿ ಪ್ರಚಾರದಲ್ಲಿದೆ.

ಹೀಗೆ ಮಹಾವಿಷ್ಣುವು ಗರುಡನಿಗೆ ಬೋಧಿಸಿದ ಪುರಾಣವಾದ ಇದು ವೈಷ್ಣವೀಯವಾದ ವ್ರತ, ಪ್ರಾಯಶ್ಚಿತ್ತ, ಮಹಾತ್ಮೆಗಳನ್ನು ಹೇಳುತ್ತದೆ. ಮುಂದೆ, ಶಂಕರಾಚಾರ್ಯರು ಬೋಧಿಸಿದ ಸೂರ್ಯ, ಗಣಪತಿ, ಅಂಬಿಕಾ, ಶಿವ, ವಿಷ್ಣು ಪಂಚಾಯತನ ದೇವತೆಗಳ ಪೂಜಾ ವಿಧಾನವನ್ನು ಹೇಳುತ್ತದೆ. ಶಿವಾರ್ಚನೆಯ ವಿಧಾನವೂ ಇಲ್ಲಿದೆ. ದೇವತಾ ಸಾಮರಸ್ಯಕ್ಕೆ ಹಾಗೂ ಏಕತೆಯನ್ನು ಹೇಳಿದ್ದರಿಂದ ನೈತಿಕ ಮೌಲ್ಯವನ್ನು ಇವು ವರ್ಧಿಸಿದೆ. ಅಗ್ನಿ ಪುರಾಣದಂತೆ ರಾಮಾಯಣ, ಮಹಾಭಾರತ ಮೀಮಾಂಸೆ, ಜ್ಯೋತಿಷ, ಶಕುನ ಶಾಸ್ತ್ರ, ಸಾಮುದ್ರಿಕ ಹೇಳುತ್ತದೆ ಹಾಗೂ ವೈದ್ಯ, ಛಂದಃ ಶಾಸ್ತ್ರ, ವ್ಯಾಕರಣಶಾಸ್ತ್ರ, ರತ್ನಪರೀಕ್ಷೆ, ಶಾಲಗ್ರಾಮ ಪರೀಕ್ಷೆ ಮುಂತಾದವುಗಳನ್ನು ನಿರೂಪಿಸುತ್ತದೆ. ವೈಶ್ವದೇವ, ಸಂಧ್ಯಾ ಕರ್ಮ, ಪರ್ವಣಾದಿ ಶ್ರಾದ್ಧ ಕರ್ಮಗಳ ಆಚರಣೆ, ವಿಧಿ ಪ್ರಾಯಶ್ಚಿತ್ತಗಳು ಪೂರ್ವಖಂಡದಲ್ಲಿ ಬಂದಿವೆ. ತಾಂತ್ರಿಕ ರೀತಿಯ ಪೂಜಾವಿಧಾನವೂ ಇದೆ. ಮಹಾಭಾರತದಲ್ಲಿರುವಂತೆಯೇ ವಿಷ್ಣು ಸಹಸ್ರನಾಮವಿದ್ದು ವಿಭಿನ್ನವಾಗಿದೆ. (15ನೇ ಅಧ್ಯಾಯ) ಆಯುರ್ವೇದ ವಿಧಾನ (146–167) ದ್ರವ್ಯಗುಣ (173–193) ಔಷಧಿ ನಾಮಗಳು (202) ಸ್ನಾನವಿಧಿ (206) ಇವು ಈ ಪುರಾಣದ ಮೌಲ್ಯವನ್ನು ಹೆಚ್ಚಿಸಿವೆ. ಇವೆಲ್ಲ ಸುಶ್ರುತ ಸಂಹಿತದ ಪುನರಾವೃತ್ತಿಯೆನ್ನಿಸಬಹುದಾದರೂ, ಆಯುರ್ವೇದ ತಜ್ಞರ ಅಧ್ಯಯನದಿಂದ ಕಂಡು ಬಂದಂತೇ ಇದರಲ್ಲಿ ವಿಶಿಷ್ಟ ಮಹತ್ವಗಳು ಅಡಕವಾಗಿ ಸಂಶೋಧನೆಗೆ ಅರ್ಹವಾಗಿವೆ. ಚಿಕಿತ್ಸಾ ಪದ್ಧತಿಯೂ (168–172) ವಿವೃತವಾಗಿದೆ.

ಉತ್ತರ ಖಂಡವಾದ ಪ್ರೇತಕಲ್ಪದಲ್ಲಿ ಯಮಗೀತಾ, ಯಮಮಾರ್ಗ, ಗಮನ, ಪ್ರೇತಸ್ವರೂಪ, ಮೃತ್ಯು ಅದರ ಕಾರಣ, ಅಶೌಚ, ಸಪಿಂಡೀಕರಣ, ಪ್ರೇತತ್ವ ಪ್ರಾಪ್ತಿ, ವಿಮೋಚನ ಮುಕ್ತಿ, ಪ್ರೇತೋಪ್ವಾದನ ಫಲ, ತೀರ್ಥಮಹಾತ್ಮ್ಯ, ಕರ್ಮ ವಿಚಾರ, ಜನ್ಮಾಂತರ ಕರ್ಮಫಲ, ವೈತರಣೀ ನದಿ ಇತ್ಯಾದಿಗಳ ವಿವರಣೆಗಳು ಚಿಂತನಯೋಗ್ಯವಾಗಿದೆ.

ಗರುಡ ಪುರಾಣದ ನೈತಿಕ ಮೌಲ್ಯಗಳನ್ನು ತಿಳಿದುಕೊಳ್ಳಲು ಇದರ ಜೊತೆಗೆ ನೀತಿಸಾರ (108–115) ಪ್ರಾಧಾನ್ಯತೆಯನ್ನು ಪಡೆಯುತ್ತದೆ. ಸುಮಾರು 8 ಅಧ್ಯಾಯಗಳಲ್ಲಿ 350ಕ್ಕೂ ಹೆಚ್ಚು ಶ್ಲೋಕಗಳು ನೈತಿಕ ಮೌಲ್ಯಗಳನ್ನು ಹೇಳುವ ಶ್ಲೋಕಗಳಿವೆ. ಪ್ರೇತ ಕಲ್ಪದಲ್ಲೂ ನೂರಾರು ಶ್ಲೋಕಗಳು ಮಾನವ ಧರ್ಮ–ಕರ್ಮಗಳ ಕುರಿತು ಆಚಾರ–ವಿಚಾರ, ಜನ ಜೀವನಕ್ಕೆ ದಾರಿದೀಪವಾಗುವ ನೈತಿಕತೆಯನ್ನು ಬೋಧಿಸುತ್ತವೆ.

ಇವುಗಳನ್ನು ಭೌತಿಕ–ಜೈವಿಕ, ಆಧ್ಯಾತ್ಮಿಕ ಸ್ಮರಣವೆಂದು ವಿಂಗಡಿಸಬಹುದು. ಅದರಂತೇ ಧಾರ್ಮಿಕ, ಮಾನವೀಯ, ಸಾಮಾಜಿಕ ನೈತಿಕ ಮೌಲ್ಯಗಳನ್ನು ಹೇಳುವ ಶ್ಲೋಕಗಳಾಗಿಯೂ ವಿಂಗಡಿಸಬಹುದು.

ಉದಾಹರಣಾರ್ಥವಾಗಿ ಇಲ್ಲಿ ಕೆಲವು ಶ್ಲೋಕಗಳನ್ನು ಸಾರಾಂಶದೊಡನೆ ಉಲ್ಲೇಖಿಸ ಬಯಸುವೆ. ಅವುಗಳನ್ನು ಶಾಶ್ವತವಾಗಿ ನೆನಪಿಡಬೇಕಾದ ಸುಭಾಷಿತಗಳಂತೆ ಸ್ಮರಿಸಲು ಸಂಗ್ರಹಿಸಬಹುದು.

ಕೆಲವೇ ಕೆಲವು ಶ್ಲೋಕಗಳನ್ನು ಆಯ್ದು ಹೇಳುತ್ತೇನೆ :

ಗರುಡ ಪುರಾಣಾಂತರ್ಗತ ಸುಭಾಷಿತಗಳು :

ಸ್ವಂತ ಸಾಧನೆಗೆ ಬಿಡುಗಡೆಗೆ ಎಲ್ಲವನ್ನೂ ಬಿಡಬೇಕು. ಇದು ಸ್ವಾರ್ಥ ದೃಷ್ಟಿಯಿಂದಲ್ಲ; ಅಧ್ಯಾತ್ಮಿಕ ದೃಷ್ಟಿಯಿಂದ ಭೂಮಿಯನ್ನು ತ್ಯಜಿಸಬೇಕು ಎನ್ನಲಾಗಿದೆ.

ತ್ಯಜೇದೇಕಂ ಕುಲಸ್ಯಾರ್ಥೇ ಗ್ರಾಮಸ್ಯಾರ್ಥೇ ಕುಲಂ ತ್ಯಜೇತ್ ।
ಗ್ರಾಮಂ ಜನಪದಸ್ಯಾರ್ಥೇ ಆತ್ಮಾರ್ಥೇ ಪೃಥಿವೀಂತ್ಯಜೇತ್ ॥ (109.2)

(ಮಹಾಭಾರತದಲ್ಲಿ ಈ ಶ್ಲೋಕವಿದೆ).

ಅದೇ ರೀತಿ ಇವುಗಳಲ್ಲಿ ಯಾವುದು ಮುಖ್ಯ, ಅಮುಖ್ಯವೆಂಬುದೂ ಇದೆ. ಆಪತ್ತಿಗಾಗಿ ಧನ ಕಾಪಿಡಬೇಕು. ಹಣ ರಕ್ಷಣೆಗಿಂತ ಪತ್ನಿ ರಕ್ಷಣೆ ಮುಖ್ಯ, ಆದರೆ ಸ್ವರಕ್ಷಣೆ ಅನಿವಾರ್ಯವಾದಾಗ ಹಣ, ಹೆಂಡತಿಯಿಂದಲೂ ತನ್ನನ್ನು ತಾನು ರಕ್ಷಿಸಿಕೊಳ್ಳಬೇಕು. (ಇಲ್ಲಿ ನೀರಿನಲ್ಲಿ ಮುಳುಗುತ್ತಿರುವಾಗ ತನ್ನನ್ನು

ರಕ್ಷಿಸಿಕೊಳ್ಳಲು ಮರಿಮಂಗವನ್ನು ಬಿಡುವ ತಾಯಿ ಮಂಗದ ಕಥೆ ನೆನಪಿಗೆ ಬರುತ್ತದೆ). ಕಾಲದ ಮಹತ್ವ ಹೇಳುವ 6 ಶ್ಲೋಕಗಳು ಇವೆ. (ಕಾಲಃ ಪಚತಿ ಭೂತಾನಿ । ಕಾಲಃ ಸೂಕ್ಷ್ಮಗತಿರ್ನಿತ್ಯಂ ಇತ್ಯಾದಿ) ಹಾಗೂ ಪ್ರಮುಖವಾಗಿ ಶ್ಲೋಕವೊಂದು ಹೀಗಿದೆ:

ಬ್ರಹ್ಮಾಯೇನ ಕುಲಾಲವನ್ನಿಯಮಿತೋ ಬ್ರಹ್ಮಾಂಡಭಾಂಡೊದರೇ
ವಿಷ್ಣುರ್ಯೇನ ದಶಾವತಾರಗಹನೇ ಕ್ಷಿಪ್ತೋ ಮಹಾಸಂಕಟೇ ।
ರುದ್ರೋಯೇನ ಕಪಾಲಪಾಣಿರಮರೋ ಭಿಕ್ಷಾಟನಂಕಾರಿತಃ
ಸೂರ್ಯೋ ಭ್ರಾಮ್ಯತಿ ನಿತ್ಯಮೇವ ಗಗನೇ ತಸ್ಮೈ ನಮಃ ಕರ್ಮಣೇ ॥
(113.15)

(ಇಂತಹ ಶ್ಲೋಕಗಳು ರಮಣೀಯವಾಗಿ ಗೇಯವಾಗಿ ಕರ್ಮದ ಮೌಲ್ಯ ಹೇಳುತ್ತದೆ. ಮಿಹಿರ ಇಂತಹ ಶ್ಲೋಕಗಳನ್ನು ವಿಷ್ಣುವೇ ಹೇಳಿದನೆಂಬ ಶ್ರದ್ಧೆಯಿದ್ದರೂ ಸೂತ, ಶೌನಕಾದಿ ಮುನಿಗಳಿಂದ ಉಕ್ತವಾದುದೆಂದರೂ ನೈತಿಕತೆಗೆ ಕೊರತೆಯುಂಟಾಗದೇ ವರ್ಧಿತವಾಗುತ್ತದೆ.

ಅದರಂತೆ ಹುಟ್ಟಿದರೆ ಅದು ಬೀಜ–ಬದುಕಿದ್ದರೆ ಅವನು ಮಗ, ಆದರೆ ಇವರಲ್ಲಿ ಗುಣಧರ್ಮವಿಹೀನರಾಗಿದ್ದರೆ ಇವರೆಲ್ಲರಿದ್ದರೂ ಜೀವನ ವ್ಯರ್ಥ ಎಂಬ ಶ್ಲೋಕವಿದೆ ಹಾಗೂ

(ಸ ಜೀವತಿ ಗುಣಾಯಸ್ಯ ಧರ್ಮೋ ಯಸ್ಯ ಸಜೀವತಿ ।
ಗುಣಧರ್ಮ ವಿಹೀನೋ ಯೋ ನಿಷ್ಫಲಂತಸ್ಯ ಜೀವನಮ್ ॥)

ಇಲ್ಲಿ ಹತ್ತಾರು ಶ್ಲೋಕಗಳು ಆದರ್ಶ, ಗುಣವಂತ, ಹೆಂಡತಿಯ ಲಕ್ಷಣ ಹೇಳಲು ಮೀಸಲಾಗಿದೆ.

ಉದಾಹರಣೆಗೆ ಕಲಹ ಪ್ರಿಯೆ, ಕಶ್ಮಲೆ ವಿರೂಪಾಕ್ಷಿ ತಿರು–ತಿರುಗಿ ಮಾರ್ ನಡಿಯುವವಳನ್ನು ಜರೆಯೆಂದು ಜರಿದಿದ್ದಾರೆ, ಜರಾ ಅಂದರೆ ವೃದ್ಧೆ ಹಾಗೂ ಜ್ವರ.

ದುಷ್ಟ ಭಾರ್ಯ ಶಠಮಿತ್ರ, ತಿರುಗಿ ಉತ್ತರ ಕೊಡುವ ಭೃತ್ಯ ಮತ್ತು ಸರ್ಪವಿರುವ ಮನೆಯಲ್ಲಿ ವಾಸ ಇವು ನಿಸ್ಸಂಶಯವಾಗಿ ಮೃತ್ಯುವೇ ಎಂದಿದ್ದಾರೆ.

ವಸ್ತುವಿನ ಮೌಲ್ಯವು ಅದಕ್ಕೆ ವಿರುದ್ಧವಾದ ವಿಗುಣದಿಂದ ಕೂಡಿದ್ದರೆ ಹೇಗೆ ಅಪಮೌಲ್ಯವಾಗುತ್ತದೆಂಬುವುದನ್ನು ಈ ಶ್ಲೋಕದಿಂದ ತಿಳಿಸಿದ್ದಾರೆ.

ಅರ್ಥೇನ ಕಿಂ ಕೃಪಣ ಹಸ್ತಗತೇನ ಪುಂಸಾ ।
ಜ್ಞಾನೇನ ಕಿಂ ಬಹು ಶಠಾಕುಲ ಸಂಕುಲೇನ ।
ರೂಪೇಣ ಕಿಂ ಗುಣ ಪರಾಕ್ರಮ ವರ್ಜಿತೇನ ।
ಮಿತ್ರೇಣ ಕಿಂ ವ್ಯಸನಕಾಲ ಪರಾಂಮುಖೇನ ॥ (109.06)

ಧನವು ಜಿಪುಣನ ಕೈ ಸೇರಿದರೇನು ಪ್ರಯೋಜನ?

ಶಠ ಮನುಷ್ಯರ ಗುಂಪಿನಲ್ಲಿ ಜ್ಞಾನವಿದ್ದರೇನು ಉಪಯೋಗ?

ಗುಣ ಪರಾಕ್ರಮಗಳಿಲ್ಲದ ರೂಪದಿಂದೇನು? ಸಂಕಟ ಕಾಲದಲ್ಲಿ ಮುಖತಿರುಗಿಸುವ ಮಿತ್ರನಿಂದೇನು?

ಧನ, ಜ್ಞಾನ, ಗುಣ, ಮಿತ್ರರೆಲ್ಲ ಸಂದರ್ಭ ಸದಾಶ್ರಯಗಳ ಆಧಾರದ ಮೇಲೆ ಉಪಯೋಗಕ್ಕೆ ಬರುತ್ತವೆ. ಜಿಪುಣರ ಧನ ದೇವ, ವಿಪ್ರ, ಬಂಧುಗಳಿಗೆ ಸೇರದೇ–ಅಗ್ನಿ, ತಸ್ಕರ, ರಾಜರಿಗೆ ಲಭಿಸುತ್ತದೆಯೆಂದೂ ಹೇಳಲಾಗಿದೆ (109.28).

ಹಾಗೇ ಮಿತ್ರ ಭಾರ್ಯ ಶೂರ, ರಹಸ್ಯದಲ್ಲಿ ಶುದ್ಧಿ ಮುಂತಾದವನ್ನು ಸಂದರ್ಭದಲ್ಲಿ ಪರೀಕ್ಷಿಸಬೇಕೆನ್ನುವ ಶ್ಲೋಕವೂ ಇದೆ.

ಪ್ರಸಿದ್ಧ ಸುಭಾಷಿತವೂ ಇಲ್ಲಿದೆ :

ವಿದ್ಯಾಘಾತೋ ಹ್ಯನಭ್ಯಾಸಃ ಸ್ತ್ರೀಣಾಂಘಾತಃ ಕುಚೇಲತಾ ।
ವ್ಯಾಧೀನಾಂ
ಭೋಜನಾಜ್ಜೀರ್ಣಂ ಶತ್ರೋರ್ಘಾತಃ ಪ್ರಪಂಚತಾ ॥
(ಘಾತ ಅಂದರೆ ಪೆಟ್ಟು ಹೊಡೆತ) (109.29).

ಈ ಉಕ್ತಿ ಇಂದಿಗೂ ಎಷ್ಟು ಮೌಲಿಕವೆಂದು ಗ್ರಹಿಸಬಹುದು:

ನಸ್ವಪ್ನೇನ ಜಯೇತ್ ನಿದ್ರಾಂ, ನ ಕಾಮೇನ ಸ್ತ್ರೀಯಂ ಜಯೇತ್ ।
ನ ಚೇಂಧನೈರ್ಜಯೇತ್ ವಹ್ನಿಂ, ನಮದ್ಯೇನ ತೃಷಾಂ ಜಯೇತ್ ॥

ಸ್ವಪ್ನ ನಿದ್ರೆಗೆ, ಸ್ತ್ರೀ ಕಾಮಕ್ಕೆ, ಇಂಧನ ಬೆಂಕಿಗೆ ಹಾಗೂ ಬಾಯಾರಿಕೆಗೆ ಮದ್ಯ ಪೂರಕ ಹೊರತು, ಬಾಧಕಗಳಲ್ಲ – ಹಾಗಾಗಿ ಇವು ಜಯಿಸುವ ಬದಲು ಅಪಜಯಕ್ಕೆ ಹೇತುವಾಗಿದೆ.

ಸ್ತ್ರೀ ಮತ್ತು ನದಿ ಹೋಲಿಕೆಯಿಂದ ಎರಡೂ ಪೂಜಾರ್ಹವಾದರೂ ನಿಯಮಗಳಿಲ್ಲದಿದ್ದರೆ ಅಪಾಯ ಹಾಗೂ ಅವನತಿ ತರುತ್ತದೆಯೆಂಬುದಕ್ಕೆ ಅನೇಕ ಶ್ಲೋಕಗಳಿವೆ. ಉದಾ : ಇಲ್ಲಿ ನೀತಿಯುಕ್ತ ವಕ್ರೋಕ್ತಿಯಿದೆ:

ನದ್ಯಶ್ಚ ನಾರ್ಯಶ್ಚ ಸಮಃ ಪ್ರಭಾವಾಃ ಸ್ವತಂತ್ರಭಾವೇ ಗಮನಾದಿಕಂಚ ।
ತೋಯೈಶ್ಚ ದೋಷ್ವೇಶ್ಚ ನಿಪಾತಯಂತಿ ನದ್ಯೋಹಿಕೂಲಾನಿ ನಾರ್ಯಃ ॥

ಮೋಕ್ಷಕ್ಕೆ ಗೃಹಸ್ಥನಾಗಿರುವುದು ಬಾಧಕವಲ್ಲವೆಂಬುದಕ್ಕೆ ಇದೊಂದು ಉದಾಹರಣೆ:

ಸ್ವ ಕರ್ಮ ಧರ್ಮಾರ್ಜಿತ ಜೀವಿತಾನಾಂ, ಶಾಸ್ತ್ರೇಷು ದಾರೇಷು
ಸದಾರತಾನಾಮ್ ।
ಜಿತೇಂದ್ರಿಯಾಣಾಂ ಅತಿಥಿಪ್ರಿಯಾಣಾಂ ಗೃಹೇಽಪಿ ಮೋಕ್ಷಃ
ಪುರುಷೋತ್ತಮಾನಾಮ್ ॥

ಸ್ವಕರ್ಮಾನುಷ್ಠಾನ, ಜಿತೇಂದ್ರಿಯತ್ವ, ಶಾಸ್ತ್ರ ಹಾಗೂ ಗೃಹಿಣಿಯಲ್ಲಿ ಸದಾ ಸಂತುಷ್ಟಿ ಹಾಗೂ ಅತಿಥಿ ಪ್ರಿಯತೆಯನ್ನು ಸಾಧಿಸಿದಲ್ಲಿ ಮನೆಯೇ ಪುರುಷ ಶ್ರೇಷ್ಠನಿಗೆ ಬಿಡುಗಡೆಗೆ ರಹದಾರಿ.

ರಾಜನಿಗೆ, ಸಂಪತ್ ಸಂಗ್ರಹದಿಂದ ತೃಪ್ತಿಯಿಲ್ಲ, ಸಾಗರಕ್ಕೆ ನೀರು ಎಷ್ಟು ಸೇರಿದರೂ ತೃಪ್ತಿಯಿಲ್ಲ, ಪಂಡಿತನಿಗೆ ಮಾತನಾಡಿದಷ್ಟೂ ತೃಪ್ತಿಯಿಲ್ಲ. (109.42.43) (ಭಾಷಣಕಾರರಿಗೆ ಕಾಲಮಿತಿಯ ಬಗ್ಗೆ ಆಗಾಗ ಸಭೆಯಲ್ಲಿ ಎಚ್ಚರಿಸಬೇಕಾಗುತ್ತದೆ. ಹಾಗೆ ನೋಡಿದಷ್ಟೂ ದೃಷ್ಟಿಗೆ ತೃಪ್ತಿಯಿಲ್ಲ,ಅಲ್ಲವೇ? ವಯೋಮಾನಕ್ಕೆ ತಕ್ಕಂತೆ ಗಳಿಕೆ ಉಳಿಕೆ ಬೇಕು. ಅದೇ ಮಹತ್ವ ಕುರಿತು ಹೀಗೆ ಹೇಳಿದೆ :

ಯೇ ಬಾಲಭಾವೆ ನಷ್ಟಂತಿ ವಿದ್ಯಾಂ, ಕಾಮಾತುರಾಯೌವ್ವನ ನಷ್ಟ ಚಿತ್ತಾಃ ।)
ತೇ ವೃದ್ಧ ಕಾಲೇ ಪರಿಭೂಯಮಾನಾಃ ಸಂದಹ್ಯಮಾನಾಃ ಶಿಶಿರೇ
ಯಥಾರ್ಚಿಮ್ ॥ (109.50)

ಎಳೆಯ ವಯಸ್ಸಿನಲ್ಲಿ ವಿದ್ಯೆ ಕಲಿಯದೇ, ಕಾಮಾತುರರಾಗಿ ಯೌವನ ಹಾಗೂ ವಿತ್ತವನ್ನು ಕಳೆದುಕೊಂಡವನು ಮುಪ್ಪಡರಿದಾಗ ಸೋತು ಸುಣ್ಣವಾಗಿ ಚಳಿಗಾಲದಲ್ಲಿ ಜಲವು ಸೊರಗಿದಂತೇ ತಾಪದಿಂದ ತಪಿಸುತ್ತಾನೆ.

ಮಹಾಭಾರತದ ಶ್ಲೋಕವೇ ಇಲ್ಲಿ ಪುನರುಕ್ತಿಯಾಗಿ ಪ್ರಸಿದ್ಧವಾಗಿದೆ. ದಾರಿ ಯಾವುದು ಸಜ್ಜನನಿಗೆ? ಗೊಂದಲದಿಂದ ಬಿಡುಗಡೆ ಹೇಗೆ? ಉತ್ತರವನ್ನು ನೋಡಿ:

ತರ್ಕೋಽ ಪ್ರತಿಷ್ಠಶ್ರುತಯೋ ವಿಭಿನ್ನಾಃ ನಾಸಾವೃಷಿರ್ಯಸ್ಯ ಮತಮ್
ವಿಭಿನ್ನಮ್
ಧರ್ಮಸ್ಯ ತತ್ವಂ ನಿಹಿತಂ ಗುಹಾಯಾಂ ಮಹಾಜನೋ ಯಸ್ಯಗತಃ ಸ
ಪಂಥಾ॥ (109.51)

(ಋಷಿ, ಮುನಿ ಹಾಗೂ ಭಿನ್ನಂಗೆ ಪ್ರಮಾಣಂ ಎಂದು ಮಹಾಭಾರತದಲ್ಲಿ ಪರ್ಯಾಯ ಶಬ್ದವಿದೆ).

ಅದೇ ರೀತಿ ಪಂಚತಂತ್ರದಲ್ಲಿಯ ಶ್ಲೋಕವೂ ಇಲ್ಲಿ ಸ್ಥಾನಾಂತರ, ಪಕ್ಷಾಂತರಿಗಳಿಗೆ ಎಚ್ಚರಿಕೆಯ ಶ್ಲೋಕವಾಗಿದೆ.

ಯೋಧ್ರುವಾಣಿ ಪರಿತ್ಯಜ್ಯ ಹ್ಯಧ್ರುವಾಣಿ ನಿಷೇವತೇ ।
ಧ್ರುವಾಣಿ ತಸ್ಯ ನಶ್ಯಂತಿ ಅಧ್ರುವಂ ನಷ್ಟಮೇವಚ ॥ (110.1)

ಹೊಸತೊಂದಕ್ಕೆ ಹಾತೊರೆದು ಇದ್ದದ್ದನ್ನೂ ಬಿಟ್ಟರೆ ಎರಡೂ ಇಲ್ಲದೇ ಅತಂತ್ರನಾಗುತ್ತಾನೆ. ಹಾಗಾಗಿ ಹೊಸ ಸೀರೆ ಬರುವ ಮೊದಲೇ ಹಳೇ ಸೀರೆಯೆಂದು ಬಿಡಬಾರದು.

ಇಂತಹ ಶ್ಲೋಕಗಳ ಮೌಲ್ಯವನ್ನು ಸಾಂದರ್ಭಿಕವಾಗಿ ಮಾತ್ರ ಗ್ರಹಿಸಬೇಕು.

ಹವಿರ್ದುಷ್ಟಕುಲಾದ್ ಗ್ರಾಹ್ಯಂ ಬಾಲಾದಪಿಸುಭಾಷಿತಮ್ ।
ಅಮೆಧ್ಯಾತ್ ಕಾಂಚನಂ ಗ್ರಾಹ್ಯಂ ಸ್ತ್ರೀರತ್ನಂದುಷ್ಕಲಾದಪಿ ॥ 110.7

ಆಹಾರವನ್ನು ದೂಷಿತಕುಲದಿಂದಲೂ ಮಗುವಿನಿಂದ ಸುಭಾಷಿತ ಮಲದಿಂದಲಾದರೂ ಕಾಂಚನವನ್ನೂ, ಕುಲಹೀನೆಯಾದರೂ ನಾರಿಯನ್ನು ಪರಿಗ್ರಹಿಸಬಹುದು. ಅದೇ ರೀತಿ 'ವಿಷಾದಪಿ ಅಮೃತಂ, ನೀಚಾದಪಿ ಉತ್ತಮಾಂವಿದ್ಯಾಂ'.

(ಪ್ರಜಾಪ್ರಭುತ್ವದಲ್ಲಿ ಆಯ್ಕೆಗಾಗಿ ನಿಂತವರಲ್ಲೇ ಉತ್ತಮನಿಗೆ ಮತ ಹಾಕಿದಂತೆ).

ಸಂಯೋಜನೆ ಹೀಗಿರಲಿ –

ಕುಲೇ ನಿಯೋಜಯೇತ್ ಭಕ್ತಂ ಪುತ್ರಂ ವಿದ್ಯಾಸು ಯೋಜಯೇತ್ ।
ವ್ಯಸನೇ ಯೋಜಯೇತ್ ಶತ್ರುಂ ಇಷ್ಟಂ ಧರ್ಮೇ ನಿಯೋಜಯೇತ್ ॥
(110.10)

ಸದಾ ಕ್ರಿಯಾಶೀಲನಾಗಿರಬೇಕೆಂಬುದಕ್ಕೆ ಶ್ಲೋಕಗಳು:

ಉದ್ಯೋಗಃ ಸಾಹಸಂ ಧೈರ್ಯಂ ಬುದ್ಧಿಃ ಶಕ್ತಿಃ ಪರಾಕ್ರಮಃ ।
ಷಡ್ ವಿಧೇ ಯಸ್ಯ ಉತ್ಸಾಹಸ್ತಸ್ಯದೇವೋ ಪಿಶಂಕತೇ ॥

(ಎರಡನೆಯ ಸಾಲು ಸುಭಾಷಿತ ಸಂಗ್ರಹದಲ್ಲಿ ಹೀಗಿದೆ: ಷಡೇತೇ ಯತ್ರ ವರ್ತಂತೇ ದೈವಂ ತತ್ರ ಸಹಾಯಕೃತ್) (111.33)

ಉದ್ಯೋಗ (ಕ್ರೀಯಾಶೀಲತೆ) ಸಾಹಸ (ಅಪಾಯ ಎದುರಿಸೋದು) ಧೈರ್ಯ, ಬುದ್ಧಿ, ಹೈಟೆಕ್ ಬಲ ಹಾಗೂ ಪೌರುಷ. ಈ ಆರು ಇರುವವರ ಬಗ್ಗೆ ದೈವವೂ ಹೆದರುತ್ತದೆ. ಅಥವಾ ಸಹಾಯ ನೀಡಲೇಬೇಕಾಗುತ್ತದೆ. ಅದರಂತೆ 'ಮಾತೃವತ್ ಪರದಾರೇಷು' ಎಂಬ ಪ್ರಸಿದ್ಧ ಶ್ಲೋಕವೂ ಇಲ್ಲಿದೆ (111.12).

ಭೃತ್ಯ, ಬೃತಕ, ಕೋಷಾಧ್ಯಕ್ಷ, ಸೇನಾಧ್ಯಕ್ಷ, ಪ್ರತೀಹಾರೀ, ಲೇಖಕ, ದೂತ, ಧರ್ಮಾಧ್ಯಕ್ಷ, ಸೂಪಕಾರ, ವೈದ್ಯ, ರಾಜ, ಪುರೋಹಿತ ಇವರಲ್ಲರ ನೇಮಕದ ಕುರಿತೂ ಲಕ್ಷಣ ಅಂದರೆ ಅರ್ಹತೆ ಹೇಳುವ ಶ್ಲೋಕಗಳಿವೆ (112) ಹಾಗೂ ಲೇಖಕ, ಪಾಠಕ, ಗಣಕ ಮತ್ತು ಪ್ರತಿ ಬೋಧಕರು ಆಲಸಿಗಳಾಗಿದ್ದಲ್ಲಿ ಅವರನ್ನು ಕೆಲಸದಿಂದ ವಜಾಗೊಳಿಸಬೇಕೆಂದು ನಿರ್ದೇಶಿಸಿದೆ. ವಿದ್ಯಾವಂತ ದುರ್ಜನನಾದರೆ ಮರಣಶೋಭಿತ ಸರ್ಪದಂತೇ ದೂರವಿಡಬೇಕೆಂಬ "ದುರ್ಜನಃ ಪರಿಹರ್ತವ್ಯಃ" ಶ್ಲೋಕವೂ ಗಾರಾಡೀ ನೀತಿಸಾರದಲ್ಲಿ ಅಡಕವಾಗಿದೆ. ಹೀಗೆ 350ಕ್ಕೂ ಹೆಚ್ಚು ಶ್ಲೋಕಗಳು 108ರಿಂದ 115ನೇ ಅಧ್ಯಾಯದವರೆಗೆ 8 ಅಧ್ಯಾಯಗಳಲ್ಲಿ ನೈತಿಕ ಮೌಲ್ಯಗಳನ್ನು ಹೇಳುವ ಶ್ಲೋಕಗಳಿವೆ. ಧರ್ಮಾಚಾರ, ಬ್ರಹ್ಮಚರ್ಯ ವ್ರತ, ಪೂಜೆಗಳನ್ನು ಹೇಳುವಲ್ಲಿಯೂ ಅನೇಕ ನೈತಿಕ ಮೌಲ್ಯಗಳನ್ನು ತಿಳಿಸುವ ಶ್ಲೋಕಗಳೂ ಇವೆ. ಒಟ್ಟಿಗೆ ನೀತಿ ಮೌಲ್ಯ ಶ್ಲೋಕಗಳ ಸಂಖ್ಯೆ ಸಾವಿರ ದಾಟುತ್ತದೆ.

ಪ್ರೇತಕಲ್ಪದಲ್ಲಿ ವೈರಾಗ್ಯ ಕುರಿತು ನೈತಿಕ ಮೌಲ್ಯಗಳುಳ್ಳ ಅನೇಕ ಶ್ಲೋಕಗಳು ಇದ್ದು ಭಯಕ್ಕಿಂತ ಅಧ್ಯಾತ್ಮ ಚಿಂತನೆ ಹಾಗೂ ಅಪರ ಕರ್ಮಗಳಲ್ಲಿ ಜನರು ಗೊಂದಲಕ್ಕೊಳಗಾಗದಂತೇ ಆಧುನಿಕ ಕಾಲಕ್ಕೆ ಅನುಕೂಲವಾಗುವ ಶ್ಲೋಕಗಳಿವೆ. ಕೆಲವನ್ನು ಸಂಗ್ರಹಿಸಿ ಉದಾಹರಣಾರ್ಥವಾಗಿ ಇಲ್ಲಿ ನೀಡಲಾಗಿದೆ.

ಪ್ರೇತಕಲ್ಪ ಪ್ರಾರಂಭವೇ ಮಹಾಭಾರತ ಮಂಗಲ ಶ್ಲೋಕದ 'ನಾರಾಯಣಂ ನಮಸ್ಕೃತ್ಯ'ದಿಂದ ಪ್ರಾರಂಭ, ಹಾಗೂ ದೇಶಪ್ರೀತಿಯ ಪ್ರಸಿದ್ಧ ಶ್ಲೋಕ ಹೀಗಿದೆ:

ಗಾಯಂತಿ ದೇವಾಃ ಕಿಲಗೀತಕಾನಿ ಧನ್ಯಾಸ್ತು ಯೇ ಭರತ ಭೂಮಿ ಭಾಗೇ ।
ಸ್ವರ್ಗಾಪವರ್ಗಸ್ಯ ಫಲಾರ್ಜನಾಯ ಭವಂತಿಭೂಯಃ ಪುರುಷಾಃ
ಸುರತ್ವಾತ್ ॥ (2.1.6)

ಅನಂತರ ಪಾಪ, ಹೀನಕೃತ್ಯ ಮಾಡಿದವರು ಮರುಜನ್ಮದಲ್ಲಿ ಏನಾಗುತ್ತಾರೆಂಬುದರ ವಿವರಣೆಯಿದೆ. ಉದಾ: ಪರಸ್ತ್ರೀ, ಬ್ರಹ್ಮಸ್ವ, ಅಪಹರಿಸಿದವರು ನಿರ್ಜನ ಅರಣ್ಯದಲ್ಲಿ ಬ್ರಹ್ಮರಾಕ್ಷಸರಾಗುತ್ತಾರೆ, ಇತ್ಯಾದಿ ಹೇಳಿಕೆಗಳಿವೆ.

ವೈರಾಗ್ಯ ಭಾವಕ್ಕೆ ನೇರವಾಗಿ ಗೀತೆಯ 'ನೈನಂಛಿಂದಂತಿ ಶಸ್ತ್ರಾಣಿ' ಶ್ಲೋಕವೇ ಉಧೃತವಾಗಿದೆ.

ಇಲ್ಲೆಲ್ಲ ತಾರ್ಕ್ಷ್ಯನ ಪ್ರಶ್ನೆಗೆ 'ಶ್ರೀ ಕೃಷ್ಣ ಉವಾಚ' ಎಂದೇ ಇದೆ. ಔರ್ಧ್ವ ದೈಹಿಕ ಅಂದರೆ ಅಪರಕರ್ಮಕ್ಕೆ ಕರ್ತೃ ಯಾರು? ಎಂದು ಗರುಡ ಕೇಳಿದಾಗ, 'ಅಪುತ್ರಸ್ಯ ಗತಿರ್ನಾಸ್ತಿ' ಎಂಬ ಉಕ್ತಿ ಇದೆ (3.10). ಶ್ರೀ ಕೃಷ್ಣ ಅದಕ್ಕೆ ಹೀಗೆಂದು ಹೇಳಿ ಅಪುತ್ರಕನಿಗೆ ಸ್ವರ್ಗವೂ ಲಭಿಸುವುದಿಲ್ಲವೆನ್ನುತ್ತಾನೆ.

(ಅಪುತ್ರಸ್ಯ ಗತಿರ್ನಾಸ್ತಿ ಸ್ವರ್ಗಂ ನೈವಚ ।
ಯೇನ ಕೇನಾಪ್ಯುಪಾಯೇನ ಪುತ್ರಸ್ಯ ಜನನಂಚರೇತ್ ॥)

ಆದರೆ ಮರಣಕ್ಕೆ ಮೊದಲೇ ದಾನ (ಶ್ರಾದ್ಧ) ಸಂಸ್ಕಾರ ಮಾಡಿಕೊಳ್ಳಲು ಸಾಧ್ಯವೆಂಬ ಶ್ಲೋಕೋಕ್ತಿ ಪ್ರೇತಕಲ್ಪದಲ್ಲಿದೆ.

ಸಪುತ್ರೋ ವಾ ಹ್ಯಪುತ್ರೋವಾ ನರೋ ನಾರೀ ಪತಿಸ್ತಥಾ ।
ಜೀವನ್ನೇವ ಸ್ವಯಂ ಕುರ್ಯಾತ್ ಮ್ರುತ್ಯೋಹ್ಯಕ್ಷಯಮಾಪ್ನುಯಾತ್ ॥
(2.3.11)

ಅಂದರೆ ಮರಣವಾದ ಕೂಡಲೇ ನೀಡುವ ತಿಲ, ಭಕ್ಷ್ಯ, ಭೋಜ್ಯ, ಗೋ, ಭೂ, ಹರಿಣ್ಯಾದಿ ದಾನಗಳನ್ನು ಅಕ್ಷಯ್ಯಲೋಕಪ್ರಾಪ್ತಿಗಾಗಿ ಸ್ವತಃ ವ್ಯಕ್ತಿಯೇ ನೀಡಬಹುದು. ಆಗ ಪುತ್ರನಿರಬೇಕೆಂಬುದು, ಅದಿಲ್ಲವಾದರೆ ನರಕಕ್ಕೆ ಹೋಗುತ್ತಾರೆಂಬುದಕ್ಕೆ ಅರ್ಥವೇ ಇಲ್ಲವಲ್ಲವೇ? ಹಾಗೂ ಇಂದಿನ ಪುತ್ರರು ಅಪರಕರ್ಮಗಳನ್ನು ಶ್ರದ್ಧಾಪೂರ್ವಕವಾಗಿ ಮಾಡುತ್ತಾರೆಂಬ ವಿಶ್ವಾಸ ಪಾಲಕರಲ್ಲಿ ಕ್ಷೀಣಿಸಿದೆ. (ವ್ಯಂಜನಾನಿ ವಿಚಿತ್ರಾಣಿ ಭಕ್ಷ್ಯ ಭೋಜ್ಯಾನಿ ಯಾನಿಚ । ಸ್ವಯಂ ಹಸ್ತೇನ ದತ್ತಾನಿ ದೇಹಾಂತೇ ಚಾಕ್ಷಯಂ ಫಲಮ್॥ (3.13)

ಅಂದರೆ ಬದುಕಿದ್ದಾಗ ಮಾಡಿದ ಸತ್ಕರ್ಮವಿದ್ದರೆ ನರಕವಿಲ್ಲ, ಅದಿಲ್ಲದೆ ಮರಣಾನಂತರವೂ ಔರ್ಧ್ವದೈಹಿಕ ಕರ್ಮ ಮಾಡದ ಪುತ್ರನಿದ್ದರೇನು? ಅಪರ ಸಂಸ್ಕಾರ ಮೃತ ವ್ಯಕ್ತಿಯ ವಾಯುಃ ಭೂತಃಕ್ಷುಧಾವಿಷ್ಟಃಭ್ರಮತೇಚ ದಿವಾನಿಶಮ್ ಅಂದರೆ ಗಾಳಿರೂಪದಲ್ಲಿ ಹಸಿವು ನೀರಡಿಕೆಯಿಂದ ಹಗಲು ರಾತ್ರಿ ಪ್ರೇತರೂಪದಲ್ಲಿ ಅಲೆಯುತ್ತಿರುತ್ತಾನೆ. ಹಾಗೂ ಬೆಂಕಿಬಿದ್ದಾಗ ಬಾವಿ ತೋಡುವ ಬದಲು ಸ್ವಸ್ಥ ಶರೀರವಿದ್ದಾಗಲೇ ದಾನಮಾಡಿ ಎನ್ನುತ್ತದೆ ಈ ಶ್ಲೋಕ.

ಯಾವತ್ ಸ್ವಸ್ಥಮಿದಂ ಶರೀರಮರುಜಂ ಯಾವಜ್ಜರಾದೂರತೋ ।
ಯಾವಚ್ಚೇಂದ್ರೀಯ ಶಕ್ತಿರಪ್ರತಿಹತಾ ಯಾವತ್ ಕ್ಷಯೋನಾಯುಷಃ ।
ಆತ್ಮಶ್ರೇಯಸಿ ತಾವದೇವವಿದುಷಾ ಕಾರ್ಯಂ ಪ್ರಯತ್ನೋ ಮಹಾನ್
ಸಂದೀಪ್ತೇ ಭವನೇ ಹಿ ಕೂಪ ಖನನಂ ಪ್ರತ್ಯುದ್ಯಮಹಿಕೀದೃಶಃ ॥ (3.18)

ಅದರಲ್ಲೂ ದಾನವನ್ನು ಸತ್ಪಾತ್ರರಿಗೆ ಪುಣ್ಯಕ್ಷೇತ್ರದಲ್ಲಿ ಪುಣ್ಯ ಕಾಲದಲ್ಲಿ ನೀಡಲು ಸೂಚಿಸುತ್ತಾನೆ. ಹಾಗೂ ಮರಣದ ನಂತರ ನೀಡುವ ದಾನಕ್ಕಿಂತಲೂ ಮರಣಕ್ಕೆ ಮೊದಲೇ ಸ್ವಹಸ್ತದಿಂದಲೇ ನೀಡುವುದು ಶ್ರೇಷ್ಠವೆಂದು ಎಚ್ಚರಿಸಲಾಗಿದೆ (2.4.305).

ಆತ್ಮ ಶ್ರಾದ್ಧ ಮಾಡಿಕೊಳ್ಳಬಹುದೆಂದೂ ಹೇಳಲಾಗಿದೆ (4.27)

ಪುತ್ರ ಶಬ್ದದ ನಿಷ್ಪತ್ತಿಯನ್ನು ಹೀಗೆ ಕೊಡಲಾಗಿದೆ:

ಪುನ್ನಾಮ್ನೋ ನರಕಾತ್ ಯಸ್ಮಾತ್ ಪಿತರಂ ತ್ರಾಯತೇ ತು ಯಃ ।
ತಸ್ಮಾತ್ ಪುತ್ರ ಇತಿ ಪ್ರೋಕ್ತಃ ಸ್ವಯಮೇಕಸ್ತ್ವಹಂಬ್ರುವೇ ॥ (2 11 38)

ಪುತ್ರನಾದವನು ಪಿತೃ ಶವ ದಾಹ ಕರ್ಮ ಮಾಡುವುದು ಕರ್ತವ್ಯ. ಪಾತ್ರಿಕನೂ ದಾಹ ಮಾಡಬಹುದು. ದಹನಕ್ಕಿಂತ ಸಪಿಂಡೀಕರಣ

ಬಹುಮುಖ್ಯ, 12ನೇ ದಿವಸ, 3 ಪಕ್ಷದಲ್ಲಿ, 6 ತಿಂಗಳ ಅಥವಾ ವರ್ಷಾಂತ್ಯದಲ್ಲಿ ಸಪಿಂಡೀಕರಣವನ್ನು (ಪಿತೃಪಂಕ್ತಿಗೆ ಸೇರಿಸುವುದು) ಮಾಡಬೇಕು.

ಪುತ್ರನಿಲ್ಲದಿದ್ದರೆ ಪತ್ನಿ, ಪತ್ನಿಯಿಲ್ಲದಿದ್ದರೆ ಸಹೋದರ, ಭ್ರಾತಾ ಅಥವಾ ಅವನ ಪುತ್ರ ಅಥವಾ ಮೃತ ವ್ಯಕ್ತಿಯ ಶಿಷ್ಯನೂ, ಪುರೋಹಿತನೂ ಸಪಿಂಡೀಕರಣ ಮಾಡಲು ಅರ್ಹರು (2.16 21–2). ಹಾಗೂ ಸಹೋದರರಲ್ಲಿ ಒಬ್ಬನಿಗೆ ಪುತ್ರನಿದ್ದರೂ ಎಲ್ಲರಿಗೂ ಅವನು ಪುತ್ರನೇ. ಹಾಗಾಗಿ ಅವರು ಅಪುತ್ರಕರಾಗುವುದಿಲ್ಲವೆಂಬ ಮನುವಿನ ಮಾತನ್ನು ಉಲ್ಲೇಖಿಸಲಾಗಿದೆ (ಸ್ತ್ರೀಯೂ ಪುರೋಹಿತ ಅಥವಾ ಕುಟುಂಬ ಪ್ರತಿನಿಧಿಯ ಮೂಲಕ ಮಾಡಿಸಬಹುದು).

ಭ್ರಾತೃಣಾಮೇಕಜಾತಾನಾಂ ಏಕಶ್ಚೇತ್ ಪುತ್ರವಾನ್ ಭವೇತ್ ।
ಸರ್ವೇ ವೈ ತೇನ ಪುತ್ರೇಣ ಪುತ್ರಿಣೋ ಮನುರಬ್ರವೀತ್ ॥
(2.16.28)

ಪ್ರೇತಕಲ್ಪದಲ್ಲಿ ಬಹು ಮುಖ್ಯವಾಗಿ ಜೀವನವನ್ನು ನೈತಿಕ ತಳಹದಿಯಲ್ಲಿ ನಡೆಸದೇ ದುರ್ಮಾರ್ಗದಲ್ಲಿ ನಡೆದು ಭೋಗಿಸಿದರೆ ಅವನು ಕರ್ಮಕ್ಕನುಸಾರವಾಗಿ ಪ್ರೇತತ್ವ ನಿವಾರಣೆಯಾಗದೇ (ಯವ, ಔರ್ಧ್ವ ದೈಹಿಕ ಕ್ರಿಯೆ ಮಾಡಿದರೂ ಉಪರಕಾದಂತೆ ಯಾತನೆ ಪಡಬೇಕಾಗುತ್ತದೆ ಎಂದಿದೆ) ಯಮಲೋಕದಲ್ಲಿ ನಾನಾ ರೀತಿಯ ನರಕಹಿಂಸೆಯನ್ನು ಅನುಭವಿಸಬೇಕಾಗುತ್ತದೆಯೆಂದು ಸ್ಪಷ್ಟಪಡಿಸಲಾಗಿದೆ.

ಪ್ರೇತ, ಬ್ರಹ್ಮರಾಕ್ಷಸ, ಯಮ, ಯಮದೂತರು, ಯಮ ಲೋಕ, ನರಕಗಳ ವರ್ಣನೆ ಭಯ ಹುಟ್ಟಿಸುವಂತಿದ್ದು, ನೈತಿಕ ಅಧಃ ಪತನವಾಗದಂತೆ ಸಾಮಾನ್ಯರನ್ನು ನಿಯಂತ್ರಿಸುತ್ತದೆ. ಚಿಂತಕರನ್ನು ಚಿಂತನೆಗೀಡುಮಾಡುತ್ತದೆ. ಶ್ರದ್ಧೆಯುಳ್ಳವರನ್ನು ಕ್ರಿಯಾಶೀಲಗೊಳಿಸುತ್ತದೆ. ಮೃತ ವ್ಯಕ್ತಿಗೆ 11, 12 ದಿನಗಳಲ್ಲಿ ಯಾವ ವಸ್ತುಗಳನ್ನು ದಾನ ಮಾಡಬೇಕು? ಅವುಗಳನ್ನು ಯಾತಕ್ಕಾಗಿ ಕೊಡಬೇಕೆಂಬ ವಿವರಣೆಯೂ ಇದೆ. ಈ ಎಚ್ಚರಿಕೆ ವಿಶೇಷತಃ ಧಾರ್ಮಿಕರಿಗೆ ಬೋಧನೆಯಾಗಿದೆ.

ಅಕರ್ತವ್ಯಂ ನ ಕರ್ತವ್ಯಂ ಪ್ರಾಣೈಃ ಕಂಠಗತೈರಪಿ ।
ಕರ್ತವ್ಯಮೇವ ಕರ್ತವ್ಯಮಿತಿ ವೇದವಿದೋವಿದುಃ ॥ (2.31.7)

ಹೀಗೆ ಕರ್ತವ್ಯದ ನಿಷ್ಠುರತೆ ದುಷ್ಕರ್ಮ ನಿಂದೆಯಿದೆ ಮತ್ತು ವೈರಾಗ್ಯ ಚಿಂತನೆಗೆ ಈ ಉಕ್ತಿ ಪ್ರಸಿದ್ಧ :

ಅಸ್ಥಿರಾಣಿ ಶರೀರಾಣಿ ವಿಭವೋ ನೈವ ಶಾಶ್ವತಃ ।
ನಿತ್ಯಂ ಸನ್ನಿಹಿತೋ ಮೃತ್ಯುಃ ಕರ್ತವ್ಯೋ ಧರ್ಮ ಸಂಚಯಃ ॥
(2.35.24)

ಧರ್ಮೋ ಜಯತಿ ನಾಧರ್ಮಃ ಸತ್ಯಂ ಜಯತಿ ನಾನೃತಮ್ ।
ಕ್ಷಮಾ ಜಯತಿ ನಕ್ರೋಧೋ ವಿಷ್ಣುರ್ಜಯತಿ ನಾಸುರಃ ॥ (2.34.3)

ಈ ಸುಭಾಷಿತವು ಮಹಾಭಾರತದ ‘ಧರ್ಮೋ ರಕ್ಷತಿ ರಕ್ಷಿತಃ’ ಹಾಗೂ ಉಪನಿಷತ್ತಿನ ‘ಸತ್ಯಮೇವ ಜಯತೇ ನಾನೃತಮ್’ ಎಂಬ ನಮ್ಮ ರಾಷ್ಟ್ರಲಾಂಛನವನ್ನು ನೆನಪಿಸುತ್ತದೆ (ಮುಂಡಕೋಪನಿಷತ್).

ಹೀಗೆ ಉಳಿದೆಲ್ಲ ಪುರಾಣಗಳಿಗಿಂತ ಗಾರುಡಿಯು ಭಿನ್ನವಾಗಿ ಕಾಣುತ್ತಿದ್ದು, ಪ್ರೇತಕಲ್ಪವು ಇಂದಿಗೂ ಶ್ರದ್ಧೆಗೆ ಪಾತ್ರವಾಗಿದ್ದು, ದೇಶಾದ್ಯಂತ ಅಪರ ಕರ್ಮಕ್ಕೆ ಆಧಾರವಾಗಿ ಪರಿಗೃಹೀತವಾಗಿದೆ. ಇದು ನೈತಿಕ ಮೌಲ್ಯವನ್ನು ವರ್ಧಿಸಲು, ರಕ್ಷಿಸಲು ಸಹಕಾರಿಯಾಗಿದೆ.

॥ ಶುಭಮ್ ॥

ವರಾಹ ಪುರಾಣ ಕಾವ್ಯ ವಾಚನ

—ವಿದ್ವಾನ್ ಎಂ.ಎ. ಜಯರಾಮ್ ರಾವ್

ಶ್ರೀ ವೇದವ್ಯಾಸರು ರಚಿಸಿದರೆನ್ನಲಾದ ಹದಿನೆಂಟು ಮಹಾಪುರಾಣಗಳಲ್ಲೊಂದಾದ ವರಾಹ ಪುರಾಣವು ಅನೇಕ ದೃಷ್ಟಿಯಿಂದ ವೈವಿಧ್ಯಪೂರ್ಣವಾಗಿದ್ದು ಶ್ರೀಮನ್ನಾರಾಯಣನ ಮಹಾಮಹಿಮೆಯನ್ನು ಸಾರುವುದೇ ಈ ಪುರಾಣದ ವೈಶಿಷ್ಟ್ಯತೆ. ಈ ಮಹಾಪುರಾಣವು ಇಪ್ಪತ್ತುನಾಲ್ಕು ಸಾವಿರ ಶ್ಲೋಕಗಳಿಂದ ಕೂಡಿದೆಯೆಂದು ಮತ್ಸ್ಯ ಮತ್ತು ನಾರದ ಪುರಾಣಗಳಲ್ಲಿ ಹೇಳಲಾಗಿದೆ. ಇವಿಷ್ಟೇ ಅಲ್ಲದೆ ಮನುಷ್ಯರ ಆಚಾರ-ವಿಚಾರ-ಕರ್ಮಾನುಷ್ಠಾನಗಳ ಬಗ್ಗೆಯೂ ಹೆಚ್ಚಿನ ವಿವರಣೆ ನೀಡಲಾಗಿದೆ.

ಶ್ರೀ ವೇದವ್ಯಾಸರು ರಚಿಸಿದರೆನ್ನಲಾದ ಹದಿನೆಂಟು ಮಹಾಪುರಾಣಗಳಲ್ಲೊಂದಾದ ವರಾಹ ಪುರಾಣವು ಅನೇಕ ದೃಷ್ಟಿಯಿಂದ ವೈವಿಧ್ಯಪೂರ್ಣವಾಗಿದ್ದು ಶ್ರೀಮನ್ನಾರಾಯಣನ ಮಹಾಮಹಿಮೆಯನ್ನು ಸಾರುವುದೇ ಈ ಪುರಾಣದ ವೈಶಿಷ್ಟ್ಯತೆ. ಈ ಮಹಾಪುರಾಣವು ಇಪ್ಪತ್ತುನಾಲ್ಕು ಸಾವಿರ ಶ್ಲೋಕಗಳಿಂದ ಕೂಡಿದೆಯೆಂದು ಮತ್ಸ್ಯ ಮತ್ತು ನಾರದ ಪುರಾಣಗಳಲ್ಲಿ ಹೇಳಲಾಗಿದೆ. ಇವಿಷ್ಟೇ ಅಲ್ಲದೆ ಮನುಷ್ಯರ ಆಚಾರ-ವಿಚಾರ-ಕರ್ಮಾನುಷ್ಠಾನಗಳ ಬಗ್ಗೆಯೂ ಹೆಚ್ಚಿನ ವಿವರಣೆ ನೀಡಲಾಗಿದೆ.

ಕಶ್ಯಪ-ದಿತಿಯರ ಪುತ್ರರಲ್ಲಿ ಒಬ್ಬನಾದ ಹಿರಣ್ಯಾಕ್ಷನ ಕಬಂಧ ಬಾಹುವಿನಿಂದ ಸಿಕ್ಕಿ ತೊಳಲಿ ಬಳಲಿದ ಭೂದೇವಿಯನ್ನು ರಕ್ಷಿಸಿ ಉದ್ಧರಿಸುವುದಕ್ಕಾಗಿ ಭಗವಂತ ವರಾಹರೂಪಿಯಾಗಿ ಅವತರಿಸಿ ಹಿರಣ್ಯಾಕ್ಷನನ್ನು ಸಂಹರಿಸಿ ಪಾತಾಳದಲ್ಲಿದ್ದ ಭೂದೇವಿಯನ್ನು ಮೇಲೆತ್ತಿ ಪ್ರತಿಷ್ಠಿಸುತ್ತಾನೆ ಅನಂತರ ಭೂದೇವಿಗೂ, ವರಾಹದೇವರಿಗೂ ನಡೆವ ಸಂವಾದವೇ ಈ ವರಾಹಪುರಾಣದ ತಿರುಳು.

ಮಹಾಭಾರತದ ಖಿಲ ಪರ್ವವೆನಿಸಿರುವ ಹರಿವಂಶದ ಕೊನೆಯಲ್ಲಿ :

ಅಷ್ಟಾದಶ ಪುರಾಣಾನಾಂ ಶ್ರವಣಾತ್ ಯತ್ಫಲಂ ಭವೇತ್ ।
ತತ್ಫಲಂ ಸಮವಾಪ್ನೋತಿ ವೈಷ್ಣವೋ ನಾತ್ರ ಸಂಶಯ : ॥

ಎಂಬ ಉಲ್ಲೇಖವಿದ್ದು ಪುರಾಣಗಳು ಎಂಬ ಬಹುವಚನ ಪ್ರಯೋಗವಿದ್ದು ಇವು ಹದಿನೆಂಟಿವೆ ಎಂದು ಸ್ಪಷ್ಟಪಡಿಸುತ್ತದೆ.

ಇಂತಹ ಹದಿನೆಂಟು ಮಹಾಪುರಾಣಗಳನ್ನು ಸಂಸ್ಕೃತ ಬಾರದವರೂ ಓದಿ ಮನನ ಮಾಡಿಕೊಳ್ಳಲಿ ಎಂಬ ಸದುದ್ದೇಶದಿಂದ ಮಹಾಮಹೋಪಾಧ್ಯಾಯರೆನಿಸಿದ ಪಂ॥ ಪಂಢರೀನಾಥಾಚಾರ್ಯ ಗಲಿಗಲಿಯವರು ಸರಳವಾದ ಕನ್ನಡ ಭಾಷಾ ಶೈಲಿಯಲ್ಲಿ ಅನುವಾದ ಮಾಡಿರುವುದೇ ಅಲ್ಲದೆ ಸಂಕ್ಷಿಪ್ತ ರೂಪದಲ್ಲಿ, ಕನ್ನಡ ಜನತೆಗೆ ನೀಡಿ ಮಹದುಪಕಾರ ಮಾಡಿರುತ್ತಾರೆ.

ಈ ವರಾಹ ಪುರಾಣದಲ್ಲಿ ಬರುವ ಶ್ರೀಹರಿಯ ಹತ್ತು ಅವತಾರಗಳ ವರ್ಣನೆಯನ್ನು ಕೇಳಿದ ಗೌರಮುಖ ಎಂಬ ಮುನಿ ಮುಕ್ತಿಯನ್ನ ಹೊಂದಿದ ಭಾಗವನ್ನು ಇಲ್ಲಿ ಉಲ್ಲೇಖಿಸಲಾಗಿದೆ.

ಗೌರಮುಖ ಎಂಬ ಋಷಿ ಆರಣ್ಯಕ ಎಂಬ ಕಾಡಿನಲ್ಲಿ ತಪಶ್ಚರಣ-ಜಪ-ತಪ ಯೋಗಾದಿಗಳ ಮೂಲಕ ಕರ್ಮನಿರತನಾಗಿರುವ ಸಂದರ್ಭದಲ್ಲಿ ದುರ್ಜಯ ಎಂಬ ರಾಜ ತನ್ನ ಐದು ಅಕ್ಷೋಹಿಣಿ ಸೈನ್ಯದೊಂದಿಗೆ ಅಲ್ಲಿಗೆ ಬಂದಾಗ ಋಷಿಯ ಭಗವದನುಗ್ರಹದಿಂದ ಅವರೆಲ್ಲರಿಗೂ ಭವ್ಯವಾದ ರೀತಿಯಲ್ಲಿ ಅತಿಥಿ ಸತ್ಕಾರ ಮಾಡಿ ತೃಪ್ತಿಪಡಿಸುತ್ತಾನೆ ಭಗವಂತ ನೀಡಿದ ಮಣಿರತ್ನವೊಂದರಿಂದ ಇದೆಲ್ಲ ನಡೆಯಿತೆಂದು ತಿಳಿದ ದುರ್ಜಯ ಆ ಮಣಿಯನ್ನು ತನ್ನದಾಗಿಸಿಕೊಳ್ಳಲು ಆಸೆಪಡುತ್ತಾನೆ. ಮುನಿಯು ಕೊಡಲೊಪ್ಪದಿದ್ದಾಗ ಸೈನ್ಯವನ್ನೇ ಕಳಿಸುತ್ತಾನೆ. ಆ ಮಣಿಯಿಂದ ಉದ್ಭವಿಸಿದ ಸೈನ್ಯ ಸಮೂಹದಿಂದ ರಾಜನ ಇಡೀ ಸೈನ್ಯವೇ ನಾಶವಾಗುತ್ತದೆ. ಶ್ರೀ ಹರಿಯ ಸುದರ್ಶನ ಚಕ್ರದಿಂದ ದುರ್ಜಯನೂ ಮರಣ ಹೊಂದುತ್ತಾನೆ. ಈ ಸಂದರ್ಭದಲ್ಲಿ ಗೌರಮುಖ ಮುನಿಯು ಆಶ್ರಮದಲ್ಲಿರುವುದಿಲ್ಲ. ಆತ ಹಿಂದಿರುಗಿ ಬಂದಾಗ ಇಲ್ಲಿನ ಮಾರಣಹೋಮವನ್ನು ಕಂಡು ದಿಗ್ಭ್ರಮೆ ಹೊಂದುತ್ತಾನೆ. ಆಗ ಶ್ರೀಹರಿ ಗೌರಮುಖನ ಮುಂದೆ ಪ್ರತ್ಯಕ್ಷನಾಗಿ ಅವನನ್ನು ಸಂತೈಸಿ ಕೇವಲ ನಿಮಿಷ ಮಾತ್ರದಲ್ಲಿ ನನ್ನ ಸುದರ್ಶನ ಚಕ್ರ ಇವರನ್ನ ಸಂಹರಿಸಿದ್ದರಿಂದ ಇನ್ನು ಮುಂದೆ ಈ ಅರಣ್ಯ ನೈಮಿಷಾರಣ್ಯ ಎಂದು ಹೆಸರು ಪಡೆದು ಮುಂದೆ ಜ್ಞಾನಿಗಳಿಗೆ ಮುಮುಕ್ಷುಗಳಿಗೆ ಬ್ರಹ್ಮಜ್ಞಾನಿಗಳಿಗೆ ಆಶ್ರಯ ನೀಡುವುದು ಯಜ್ಞ ಪುರುಷನಾಗಿ ನಾನು ಸದಾಕಾಲ ಇಲ್ಲಿ ಭಕ್ತರಿಂದ ಪೂಜೆಗೊಳ್ಳುತ್ತೇನೆ ಎಂದು ಅನುಗ್ರಹಿಸುತ್ತಾನೆ ಎಂದು ವರಾಹದೇವರು ಧರಣೀದೇವಿಗೆ ತಿಳಿಸುತ್ತಾರೆ.

ಮುಂದೆ ಗೌರಮುಖನಿಗೆ ಮಹಾಋಷಿ ಮಾರ್ಕಂಡೇಯರ ದರ್ಶನವಾಗುತ್ತದೆ. ಅವರ ಮೂಲಕ ಗೌರಮುಖ ನಾನಾ ರೀತಿಯ ಕರ್ಮಾಚರಣೆಗಳ ಬಗ್ಗೆ ತಿಳಿಯುತ್ತಾನೆ. ಅದರಲ್ಲಿ ಶ್ರಾದ್ಧ ಕರ್ಮ ವಿಚಾರ ಕೂಡ ಒಂದು. ಅದನ್ನು ಅತ್ಯಂತ ವಿವರವಾಗಿ ತಿಳಿದ ಗೌರಮುಖ

ಕರ್ತವ್ಯನಿರತನಾಗಿ ಎಲ್ಲವನ್ನೂ ಅನುಷ್ಠಾನಗೊಳಿಸಿದನು. ಶ್ರಾದ್ಧ ವಿಧಿಯನ್ನು ಭಕ್ತಿಯಿಂದ ಕೇಳಿದ್ದರ ಫಲದಿಂದ ಗೌರಮುಖನಿಗೆ ತನ್ನ ಹಿಂದಿನ ನೂರು ಜನ್ಮಗಳ ನೆನಪು ಮರುಕಳಿಸುತ್ತದೆ.

ಹಿಂದಿನ ಜನ್ಮದಲ್ಲಿ ಈ ಗೌರಮುಖ ಮುನಿ ಸಾಕ್ಷಾತ್ ಭೃಗು ಮಹರ್ಷಿಯೇ ಆಗಿದ್ದವನು. ಮಾರ್ಕಂಡೇಯ ಋಷಿ ಕೂಡ ಅದೇ ಭೃಗು ವಂಶೊದ್ಭವ ಮಾರ್ಕಂಡೇಯನಿಂದಲೆ ತನ್ನ ಪೂರ್ವಸ್ಮೃತಿಯನ್ನು ಪಡೆದ ಗೌರಮುಖ ಮುಂದೆ ಪ್ರಭಾಸ ಕ್ಷೇತ್ರಕ್ಕೆ ಹೋಗಿ ಹನ್ನೆರೆಡು ವರ್ಷಗಳ ಕಾಲ ವಿಧ್ಯುಕ್ತವಾಗಿ ಪಿತೃ ಶ್ರಾದ್ಧ ಕರ್ಮಾದಿಗಳನ್ನು ಭಕ್ತಿ ಪೂರ್ವಕವಾಗಿ ಮಾಡಿ ಶ್ರೀಹರಿಯ ಸ್ತೋತ್ರವನ್ನು ಮಾಡಲು ಆರಂಭಿಸಿದನು. ಆತ ಅತ್ಯಂತ ಭಕ್ತಿಯಿಂದ ಮಾಡಿದ ಭಗವಂತನ ದಶಾವತಾರಗಳ ಸ್ತೋತ್ರಗಳೆ ಇಂದಿನ ವಾಚನದ ಕಥಾಭಾಗ :

ಇದಲ್ಲದೆ ಸೂತ ಮಹಾಮುನಿಗಳು ನೈಮಿಷಾರಣ್ಯದಲ್ಲಿರುವ ಭೃಗುವಂಶೋತ್ಪನ್ನರೆನಿಸಿದ ಶೌನಕನೇ ಮೊದಲಾದ ಋಷಿಗಳಿಗೆ ಈ ವರಾಹ ಪುರಾಣದ ವೈಶಿಷ್ಟ್ಯತೆಯನ್ನು ಹೇಳಿ ಅದರ ಶ್ರವಣ ಫಲಶೃತಿಯನ್ನು ಹೀಗೆ ಹೇಳುತ್ತಾರೆ.

ಶೌನಕಾದಿ ಸಜ್ಜನರೇ ಶ್ರೀ ವರಾಹದೇವರು ಮತ್ತು ಭೂದೇವಿಯ ಸಂವಾದ ರೂಪವಾದ ಈ ವರಾಹಪುರಾಣವನ್ನು ಸಾರ ಸಂಗ್ರಹರೂಪವಾಗಿ ನಿಮಗೆ ಯಥಾಮತಿಯಾಗಿ ನಿರೂಪಿಸಿದ್ದೇನೆ. ಇದನ್ನು ನಿತ್ಯವೂ ಭಕ್ತಿಯಿಂದ ಕೇಳುವವರೂ ಹೇಳುವವರೂ ಸರ್ವಪಾಪಗಳಿಂದ ಮುಕ್ತರಾಗಿ ದಿವ್ಯಗತಿಯನ್ನು ಹೊಂದುವರು. ಪ್ರಭಾಸ, ನೈಮಿಷಾರಣ್ಯ, ಗಂಗಾದ್ವಾರ, ಪುಷ್ಕರ, ಪ್ರಯಾಗ, ಬ್ರಹ್ಮತೀರ್ಥ ಮುಂತಾದ ಪುಣ್ಯಕ್ಷೇತ್ರಗಳ ತೀರ್ಥಯಾತ್ರೆಯಿಂದ ಗಳಿಸಬಹುದಾದ ಪುಣ್ಯಫಲದ ಕೋಟಿಪಟ್ಟು ಹೆಚ್ಚಿನ ಪುಣ್ಯವನ್ನು ಈ ವರಾಹಪುರಾಣದ ಶ್ರವಣ ಮಾತ್ರದಿಂದ ಅಥವಾ ಪಠಣ ಮಾತ್ರದಿಂದ ಪಡೆಯಬಹುದು. ದಿವ್ಯವಾದ ಗೋದಾನ, ಅಗ್ನಿಷ್ಟೋಮಾದಿ ಯಜ್ಞಯಾಗಾದಿಗಳಿಂದ ಬರುವ ಫಲವೂ ಈ ವರಾಹಪುರಾಣದ ಒಂದು ಅಧ್ಯಾಯದ ಶ್ರವಣದಿಂದಲೇ ಬರುವುದರಲ್ಲಿ ಎಳ್ಳಷ್ಟೂ ಸಂಶಯವಿಲ್ಲ. ಸ್ವತಃ ವರಾಹದೇವರೇ ಈ ಮಾತನ್ನು ಧರಣೀದೇವಿಗೆ ತಿಳಿಸುತ್ತಾರೆ ಅದೇನೆಂದರೆ :

ವರಾಹ : ನನ್ನ ಮಹಾಮಹಿಮೆಯ ವರ್ಣನಾನುರೂಪವಾದ ಈ ವರಾಹ ಪುರಾಣವನ್ನು ಹೇಳುವವನು ಅಥವಾ ಹೇಳಿಸುವವನು ಸಕಲ ಸೌಭಾಗ್ಯಗಳನ್ನು ಹೊಂದುತ್ತಾನೆ. ಈ ಪುರಾಣವನ್ನು ಹೇಳುವ ಬ್ರಾಹ್ಮಣರನ್ನು ಕೂಡ ವಸ್ತ್ರದಾನ, ಭೂದಾನ, ಗೋದಾನಾದಿಗಳಿಂದ ಯಥಾಶಕ್ತಿ ಪೂಜಿಸಬೇಕು. ಆದರಿಂದ ಈ ಪುರಾಣ ಪ್ರತಿಪಾದ್ಯನಾದ ಶ್ರೀ ವಿಷ್ಣು ಸಂತುಷ್ಟನಾಗಿ ತನ್ನ ಪಾದ ಸಾನ್ನಿಧ್ಯವನ್ನು ಕರುಣಿಸುವವನು. ಮನಸ್ಸು ಸರಿಯಾಗಿದ್ದಾಗ, ಶರೀರವು ಸ್ವಾಸ್ಥ್ಯವಿದ್ದಾಗಲೇ, ದೇಹ ಘಟಕವಾದ ಧಾತುಗಳು ಸಮನಾಗಿ ಇರುವಾಗಲೇ ವಿಶ್ವರೂಪಿಯಾದ ನನ್ನನ್ನು ಯಾವ ಮನುಷ್ಯನು ಸ್ಮರಣೆ ಮಾಡುತ್ತಾನೋ ಅಂಥ ಮನುಷ್ಯನು ಮರಣ ಕಾಲದಲ್ಲಿ ನನ್ನನ್ನು ಸ್ಮರಿಸದಿದ್ದರೂ ನಾನು ಮಾತ್ರ ಅವನನ್ನು ನೆನೆಯುತ್ತೇನೆ. ಅವನಿಗೆ ದಿವ್ಯಗತಿಯನ್ನು ಕರುಣಿಸುತ್ತೇನೆ"

ಸ್ಥಿತೇ ಮನಸಿ ಸುಸ್ವಸ್ಥೆ ಶರೀರೇ ಸತಿಯೋನರ :
ಧಾತುಸಾಮ್ಯೇ ಸ್ಥಿತೇ ಸ್ಮರ್ತಾ ವಿಶ್ವರೂಪಂ ಚ ಮಾಮಜಂ
ತತಸ್ಥಂ ಮ್ರಿಯ ಮಾಣಂ ತು ಕಾಷ್ಠ ಪಾಷಾಣ ಸನ್ನಿಭಂ
ಅಹಂ ಸ್ಮರಾಮಿ ಮದ್ಭಕ್ತಂ ನಯಾಮಿ ಪರಮಾಂಗತಿಂ ॥

॥ ಹರಿ ಓಂ ತತ್ಸತ್ ॥

ಅಗ್ನಿಪುರಾಣದಲ್ಲಿ ‘ಓಂ’ಕಾರ

—ಡಾ. ಎಂ. ಶಿವಶಂಕರ

ನಿಖಿಲಬ್ರಹ್ಮಾಂಡವನ್ನು ಒಳಗಿನಿಂದಲೂ, ಹೊರಗಿನಿಂದಲೂ ವ್ಯಾಪಿಸಿ ಎಲ್ಲೆಲ್ಲೂ ತಾನೇತಾನಾಗಿ ಬೆಳಗಿ ಮೊಳಗುತ್ತಿರುವುದು ಪ್ರಣವನಾದ ಜ್ಯೋತಿ. ಇದೇ ಸಕಲ ವೇದಗಳಿಗೂ, ಸಕಲ ರಹಸ್ಯಗಳಿಗೂ ಮೂಲವಾದದ್ದು. ಇದರ ಅರ್ಥವನ್ನು ವಿವರಿಸಲು ಹೊರಟ ಗ್ರಂಥಗಳೇ ಶಾಸ್ತ್ರ; ಸ್ಮೃತಿ, ಉಪನಿಷತ್, ಇತಿಹಾಸ ಮತ್ತು ಪುರಾಣಗಳು. ಇದರ ಅಭಿವ್ಯಕ್ತಿಯೇ ಕಲೆಯೆನಿಸುವುದು. ಪ್ರಣವದ ನೆಲೆಯಿಂದ ಹೊರಟು ಬೆಲೆಯನ್ನು ಹೊಂದಿರುವ ಭಾರತೀಯ ಸಂಸ್ಕೃತಿಗೆ ಏಕೈಕ ಲಕ್ಷ್ಯವೆಂದರೆ ಈ ಪ್ರಣವವೇ. ಪ್ರಣವ ಅಥವಾ ಓಂಕಾರ ಹೇಗೆ ಅಗ್ನಿ ಪುರಾಣದಲ್ಲಿ ಮಹತ್ವ ಗಳಿಸಿದೆ ಎಂದು ಈ ಲೇಖನ ಪ್ರತಿಪಾದಿಸುತ್ತದೆ.

ನಿಖಿಲಬ್ರಹ್ಮಾಂಡವನ್ನು ಒಳಗಿನಿಂದಲೂ, ಹೊರಗಿನಿಂದಲೂ ವ್ಯಾಪಿಸಿ ಎಲ್ಲೆಲ್ಲೂ ತಾನೇತಾನಾಗಿ ಬೆಳಗಿ ಮೊಳಗುತ್ತಿರುವುದು ಪ್ರಣವನಾದ ಜ್ಯೋತಿ. ಇದೇ ಸಕಲ ವೇದಗಳಿಗೂ, ಸಕಲ ರಹಸ್ಯಗಳಿಗೂ ಮೂಲವಾದದ್ದು. ಇದರ ಅರ್ಥವನ್ನು ವಿವರಿಸಲು ಹೊರಟ ಗ್ರಂಥಗಳೇ ಶಾಸ್ತ್ರ; ಸ್ಮೃತಿ, ಉಪನಿಷತ್, ಇತಿಹಾಸ ಮತ್ತು ಪುರಾಣಗಳು. ಇದರ ಅಭಿವ್ಯಕ್ತಿಯೇ ಕಲೆಯೆನಿಸುವುದು. ಪ್ರಣವದ ನೆಲೆಯಿಂದ ಹೊರಟು ಬೆಲೆಯನ್ನು ಹೊಂದಿರುವ ಭಾರತೀಯ ಸಂಸ್ಕೃತಿಗೆ ಏಕೈಕ ಲಕ್ಷ್ಯವೆಂದರೆ ಈ ಪ್ರಣವವೇ.

ಪ್ರಕೃತಿಯಲ್ಲಿ ಎಲ್ಲವೂ ಪ್ರಣವಮಯವೇ ಆಗಿದ್ದರೂ, ಪ್ರಣವವು ಮಾತ್ರ ಬರಿಕಣ್ಣಿಗೆ ಗೋಚರವಾಗುವ ವಿಷಯವಲ್ಲ, ಅದು ಭಾರತೀಯ ಮಹರ್ಷಿಗಳಿಗೆ ಧ್ಯಾನದಿಂದ ತಿಳಿದು ಬಂದ ವಿಷಯ. ಅದರ ನಾದ ಮತ್ತು ಜ್ಯೋತಿ ರೂಪಗಳನ್ನು ಅವರು ಸಾಕ್ಷಾತ್ಕರಿಸಿಕೊಂಡು ತಮ್ಮ ಜೀವನವನ್ನು ಉತ್ಕೃಷ್ಟವಾಗಿಸಿಕೊಂಡರು. ಅದರಿಂದ ಅವರು ಆತ್ಮಪ್ರಬೋಧವನ್ನು ಸಾಧಿಸಿದರು. ಆನಂದವನ್ನೂ, ಅಮೃತತ್ವವನ್ನೂ ಅನುಭವಿಸಿದರು. ಪ್ರಣವವನ್ನು ಉಪಾಸನೆ ಮಾಡುವುದರಿಂದ ಇತರರೂ ಉತ್ತಮವಾಗಲೆಂದು ಬಯಸಿ, ತಾವು ಧ್ಯಾನದಲ್ಲಿ ಕಂಡು ಕೇಳಿದ ಪ್ರಣವ ವಿದ್ಯೆಯನ್ನು ಲೋಕಕ್ಕೇ ಉಪದೇಶ ಮಾಡಿದರು. ಅದನ್ನು ಅರಿಯಲು ಅವಶ್ಯಕವಾದ ಒಳ ಮಾರ್ಗದಲ್ಲಿ ನಡೆದ ಜ್ಞಾನಿಗಳು ಈ ದೇಶದಲ್ಲಿ ಜನ್ಮತಾಳಿದ್ದರಿಂದಲೇ ಇಲ್ಲಿ ಈ ವಿದ್ಯೆಯು ಪ್ರಚಲಿತವಾಯಿತು. ಇತರ ದೇಶಗಳಲ್ಲಿ ಅದರ ಗಂಧವೂ ಸಹ ಇರದಿರಲು ಅಲ್ಲಿನವರಿಗೆ ಆ ಮಾರ್ಗವು ಸಿಗದಿದ್ದುದೇ ಕಾರಣ.

ಪ್ರತಿಯೊಂದು ದೇಶಕ್ಕೆ ಒಂದು ರಾಷ್ಟ್ರಧ್ವಜವಿರುವುದು. ಅದನ್ನು ಆಧರಿಸಿ, ಗೌರವಿಸುವುದು ಅಲ್ಲಿಯ ಪ್ರಜೆಗಳ ಆದ್ಯ ಕರ್ತವ್ಯ. ಆ ಧ್ವಜವು ಆ ರಾಷ್ಟ್ರದ ಸಮಗ್ರ ಇತಿಹಾಸದ, ಸಕಲ ಶಕ್ತಿಯ ಪ್ರತೀಕ. ಅಂತೆಯೇ ವೇದಾನುಯಾಯಿಗೆ ಅಧ್ಯಾತ್ಮ ಪ್ರಪಂಚದಲ್ಲಿ ಪ್ರಣವವೆಂಬುದು ಹಾಗೆ. ಆ ಶಬ್ದವು ಕಿವಿಗೆ ಶ್ರುತವಾದ ಕೂಡಲೇ ಅವನಿಗೆ ತನ್ನ ಸಮಗ್ರ ಸಂಸ್ಕೃತಿಯು ಮೂರ್ತಿವತ್ತಾಗಿ ಎದುರಿಗೆ ನಿಂತಂತಾಗುವುದು, ಭಕ್ತಿಭಾವವು ಹೊರಹೊಮ್ಮುವುದು.

ಪ್ರಣವ :- 'प्रणव' ಎಂದರೆ, 'प्रकर्षेणनूयतेत्सरान् परमात्मनि', 'प्रणमयते इत्येतस्मात् प्रणवः' (ಶ್ಲೋಕ) (ಸ.ತಾ. ಸಂಧ್ಯಾವಂದನೆ ಎಂದರೇನು? ಪು.31)

ಸಕಲ ಪ್ರಾಣಗಳನ್ನು ಪರಮಾತ್ಮನಲ್ಲಿ ಅರ್ಪಿಸುವುದರಿಂದ ಪ್ರಣವ.

ओं ओं ओं इति त्रिरुक्त्वा चतुर्थः शान्त आत्मा । प्लुतप्रणवभोगेन समस्तमोमिति प्रयुक्तः आत्मर्जोतिः सकृधुच्चरितमात्रेण ऊर्ध्वमुन्नामयति ओंकारः ॥ (ಆರ್ಯ ಸಂಸ್ಕೃತಿ – Feb. 1981)

ಓಂ ಓಂ ಓಂ ಎಂದು ಮೂರು ಬಾರಿ ಹೇಳಿ ನಾಲ್ಕನೆಯ ಪ್ರಣವವನ್ನು ಉಚ್ಚರಿಸುವುದರಿಂದ ಶಾಂತನಾದ ಆತ್ಮನನ್ನು ಮುಟ್ಟುತ್ತಾನೆಉಪಾಸಕನು. ಪ್ಲುತಪ್ರಣವವನ್ನು ಪ್ರಯೋಗಿಸುವುದರಿಂದ ಎಲ್ಲವೂ 'ಓಂ'ಕಾರ, ಆತ್ಮಜ್ಯೋತಿ ಎಂದು ಅನುಭವಾತ್ಮಕವಾಗಿ ತಿಳಿಯುತ್ತಾನೆ. ಒಂದು ಬಾರಿ ಹೇಳಿದ ಮಾತ್ರಕ್ಕೆ ಪ್ರಾಣ ಮತ್ತು ಮನಸ್ಸುಗಳನ್ನು ಮೇಲಕ್ಕೆ ಎತ್ತುವುದರಿಂದ ಅದು 'ಓಂ'ಕಾರವೆನಿಸಿಕೊಳ್ಳುವುದು.

'प्राणानृ सर्वान् परमात्मनिसलीयत इति प्रलयः ।
प्राणान् सर्वान् परमात्मनिप्रणामचतीत्येतस्मात् प्रणवः ।

ಪ್ರಾಣಗಳೆಲ್ಲವೂ ಪರಮಾತ್ಮನಲ್ಲಿ ಲಯ ಹೊಂದುವಂತೆ ಮಾಡುವುದರಿಂದ ಅದು 'ಪ್ರಲಯ'ವೆನಿಸುತ್ತದೆ. ಪ್ರಾಣಗಳೆಲ್ಲಕ್ಕೂ ಪರಮಾತ್ಮನಲ್ಲಿ ಪ್ರಣಾಮ ಮಾಡಿಸುವುದರಿಂದ ಪ್ರಣವವೆನಿಸಿಕೊಳ್ಳುತ್ತದೆ.

ಈ ಪ್ರಣವದ ವಿಶೇಷವೇನೆಂದರೆ, ಅದು ಜೀವನದ ಅತ್ಯಂತ ಉನ್ನತವಾದ ಲಕ್ಷ್ಯವನ್ನೂ ಹೇಳುತ್ತದೆ; ಜೊತೆಗೆ ಆ ಲಕ್ಷ್ಯವನ್ನು ಮುಟ್ಟಲು ಬೇಕಾದ ಮಾರ್ಗೋಪಾಯವನ್ನೂ ಅದು ಸಮಗ್ರವಾಗಿ ಪ್ರತೀಕಿಸುತ್ತದೆ. ಪ್ರಣವಕ್ಕೆ ಶಾಸ್ತ್ರಗಳಲ್ಲಿ ಅನೇಕ ಹೆಸರುಗಳಿವೆ. ಅವುಗಳನ್ನು ವಿಶ್ಲೇಷಣೆ ಮಾಡಿ ನೋಡಿದಾಗ ಈ ಅಂಶವು ಸ್ಪಷ್ಟವಾಗುತ್ತದೆ.

ओंकारः प्रणवस्तारो हंसो नारायणो ध्रुवः ।
वेदात्मा सर्ववेदादिः आदित्यः सर्वपावनः ॥
मोक्षगो मुक्तिमार्गश्च सर्वसन्धारणक्षमः ।
एवमादीनि नामानि शास्त्रे उक्तानि पण्डितैः ॥

'ಓಂ'ಕಾರ, ಪ್ರಣವ, ತಾರ = ಬಹಳ ಎತ್ತರದಲ್ಲಿರುವುದು, ಹಂಸ, ನಾರಾಯಣ, ವೇದಾತ್ಮಾ, ಸರ್ವ ವೇದಾದಿ, ಆದಿತ್ಯ, ಸರ್ವ ಪಾವನ, ಮೋಕ್ಷಗ = ಮೋಕ್ಷಕ್ಕೆ ಕರೆದೊಯ್ಯುವುದು, ಮುಕ್ತಿಮಾರ್ಗ, ಸರ್ವಸಂಧಾರಣಕ್ಷಮ = ಎಲ್ಲವನ್ನೂ ಧರಿಸಲು ಸಮರ್ಥವಾಗಿರುವುದು – ಹೀಗೆ ಶಾಸ್ತ್ರವಿಚಕ್ಷಣರು ಶಾಸ್ತ್ರಗಳಲ್ಲಿ ಅದನ್ನು ಬೇರೆ ಬೇರೆ ಹೆಸರುಗಳಿಂದ ಕರೆದಿರುತ್ತಾರೆ. (ಆರ್ಯ ಸಂಸ್ಕೃತಿ, ಸೆಪ್ಟೆಂಬರ್ 1980).

'ಓಂ' ಎಂಬೀ ಅಕ್ಷರವು ಪರಮಾತ್ಮನಿಗೆ ಅತ್ಯಂತ ನಿಕಟವಾಗಿರುವ ಹೆಸರು. ಏಕೆಂದರೆ, ಅದನ್ನು ಪ್ರಯೋಗಿಸಿದರೆ, ತನ್ನ ಪ್ರಿಯತಮವಾದ ನಾಮವನ್ನು ತೆಗೆದುಕೊಂಡು ಉಚ್ಚರಿಸಿದರೆ ಜನ್ಮವು ಹೇಗೆ ಪ್ರಸನ್ನವಾಗುವುದೋ ಹಾಗೆಯೇ ಅರ್ಚನೆಯೇ ಮುಂತಾದುವುಗಳಿಂದ ಅರ್ಚನೆಗೆ ಉಪಯೋಗಿಸುವ ಪ್ರತಿಮೆಯೆಂದರೆ ವಿಷ್ಣು ಮುಂತಾದ ವಿಗ್ರಹಗಳಿಗೆ ಎಂಬಂತೆ, ಪರಮಾತ್ಮನಿಗೆ ಪ್ರತೀಕವೆಂದಾಗುತ್ತದೆ. ಬ್ರಹ್ಮನ ಪ್ರತೀಕವಾದ 'ಓಂ'ಕಾರವನ್ನೇ ಬ್ರಹ್ಮವೆಂದಿದೆ.

'ओंकारेण ब्रह्मणा परमात्मनः प्रतीकभूतेन सर्वा वाक् शब्दजातं सन्तृण्ण'। (शंकार भाष्य) (ಸಂಧ್ಯಾ ಎಂದರೇನು? ಫೆಬ್ರವರಿ 1979).

ಪರಮಾತ್ಮನಿಗೆ ಪ್ರತೀಕವಾಗಿರುವ 'ಓಂ'ಕಾರವೆಂಬ ಬ್ರಹ್ಮದಿಂದ ವಾಕ್ಕೆಲ್ಲವೂ, ಶಬ್ದಜಾತವೆಲ್ಲವೂ ಕೊರೆಯಲ್ಪಟ್ಟಿರುವುದು.

ಜಗತ್ತಿನ ಸೃಷ್ಟಿಯಾಗಬೇಕಾದರೆ ಆಕಾಶದ ತನ್ಮಾತ್ರೆಗಳಲ್ಲಿ ಚಲನ ಆರಂಭವಾಗಬೇಕು. ಶಬ್ದವೇ ಆ ಚಲನವನ್ನು ಉಂಟುಮಾಡುತ್ತದೆ. ಸೃಷ್ಟಿಯ ಆದಿಶಬ್ದವೇ 'ಓಂ'ಕಾರ.

'ಓಂ'ಕಾರದ ಉತ್ಪತ್ತಿಯಾದದ್ದು ಹೇಗೆ? ಅದರ ವೈಶಿಷ್ಟ್ಯವೇನು? ಎಂಬುದನ್ನು ತಿಳಿಯೋಣ.

ಒಮ್ಮೆ ಪ್ರಜಾಪತಿಯೂ ಆದ ಬ್ರಹ್ಮನು ತಾನೇ ಸೃಷ್ಟಿಸಿದ ಎಲ್ಲ ಲೋಕಗಳನ್ನೂ ಅದರ ಸಾರವನ್ನೂ ಕಂಡುಹಿಡಿಯಲು ತಪಸ್ಸು ಮಾಡಿದನು. ಲೋಕಗಳು ಎಂದರೆ ಸೃಷ್ಟಿಯಲ್ಲಿರುವ ಎಲ್ಲ ವಸ್ತುಗಳೂ ಆಗಿರುತ್ತವೆ. ಅವುಗಳಲ್ಲಿ ವಾಗ್ರೂಪವಾದ ಸೃಷ್ಟಿಯನ್ನು ಕುರಿತು ಧ್ಯಾನ ಮಾಡಿದನು. ಏಕೆಂದರೆ ವಸ್ತುಗಳೆಲ್ಲ ನಾಮಗಳಿಗೆ ಅಧೀನವಾಗಿವೆ. ಆಗ ಎಲ್ಲ ವಾಕ್ಕುಗಳ ಸಾರವಾಗಿ ವೇದಗಳು ಅವನಿಗೆ ದೊರಕಿದವು. ವೇದಗಳೆಂಬವು ನಿಜವಾಗಿ ಪ್ರಜಾಪತಿಯು ಮಾಡಿದ ಸೃಷ್ಟಿಗಳಲ್ಲ. ಸೃಷ್ಟಿಗೆ ಮುಂಚೆಯೇ ಅವು ಪರಮಾತ್ಮಸ್ವರೂಪವಾಗಿ ಅವನಲ್ಲೇ ಇದ್ದುಕೊಂಡಿದ್ದವು. ಭಗವಂತನೇ ಪ್ರಜಾಪತಿಗೂ ವೇದಗಳನ್ನು ಅನುಗ್ರಹಿಸಿರುತ್ತಾನೆ. ಆದ್ದರಿಂದ, ವೇದಗಳನ್ನು ಪ್ರಜಾಪತಿಯು ತಾನು ಪಡೆದುಕೊಂಡಿದ್ದಂತೆ ಹೇಗೆ ಇದ್ದವೋ ಹಾಗೆಯೇ ಅವುಗಳನ್ನು ವಾಕ್ಕಿನ ಸಾರವೆಂದು ಗ್ರಹಿಸಿದನು ಎಂದಭಿಪ್ರಾಯ. ಹೀಗೆ ವೇದಗಳು ಲೋಕಗಳ ಸಾರವೆಂದು ತಿಳಿದಾಗ ಪುನಃ ವೇದಗಳ ಸಾರವೇನಿರಬಹುದು? ಎಂದು ಧ್ಯಾನ ಮಾಡಿದನು. ಆಗ ಅವನಿಗೆ भूः, भूवः सुवः ಎಂಬ ವ್ಯಾಹೃತಿಗಳು ಸಾರಭೂತವಾಗಿ ದೊರಕಿದವು.

प्रजापतिलौकानभ्यतपत् तेभ्यो अभितप्तेभ्यः
त्रयी विद्या सम्प्रस्रवत् ताम् अभ्यतपत् तस्या :
अभितप्राथाः एतान्यक्षराणि सम्प्रास्रवन्त भूर्भुवः" वरिति

ऊँभूः ऊँभुवः ऊँसुवः ऊँमहः ऊँजनः ऊँतपः ऊँसत्यं – ಇವು ಸಪ್ತವ್ಯಾಹೃತಿಗಳು. ॥ भूः भुवः सुवः ॥ – ಈ ಮೂರನ್ನೂ ಮಹಾವ್ಯಾಹೃತಿಗಳೆನ್ನುತ್ತಾರೆ.

'तिस्रो महाव्याहृतयोऽव्यया :'
(ಅಗ್ನಿಪುರಾಣ, ಅ–215, ಶ್ಲೋಕ–3)

> “भूर्भुवः सुवरिति एतातिस्रो व्याहृतयः ॥
> (ತೈತ್ತಿರೀಯ ಉಪನಿಷತ್, ವಲ್ಲಿ–1 ಅ.ವಾ.–5)

ಮೇಲಿನ ಭೂರಾದಿ ಏಳು ವ್ಯಾಹೃತಿಗಳೂ ಏಳು ಲೋಕಗಳನ್ನು ಸೂಚಿಸುತ್ತವೆ ಎಂದು ಪುರಾಣಗಳಲ್ಲಿ ಹೇಳಿದೆ. ಏಳು ವ್ಯಾಹೃತಿಗಳಿಗೆ ಅನುಕ್ರಮವಾಗಿ ವಿಶ್ವಾಮಿತ್ರ, ಜಮದಗ್ನಿ, ಭಾರಧ್ವಾಜ, ಗೌತಮ, ಅತ್ರಿ, ವಸಿಷ್ಠ, ಕಶ್ಯಪ ಋಷಿಗಳು ಪ್ರತೀಕ ಎಂದು ಕರೆಯಲಾಗಿದೆ.

> विश्वामित्रो जमदग्निर्भारद्वाजोऽथ गौतमः ।
> ऋषिरत्रिर्वसिष्ठह्च काश्यपश्च यथाक्रामम् ॥
> (ಅಗ್ನಿಪುರಾಣ, ಅ–215, ಶ್ಲೋಕ–37)

‘ವ್ಯಾಹೃತಿ’, ವಿ + ಆಙ್ ಉಪಸರ್ಗಪೂರ್ವಕವಾದ ಹೃ-ಹರಧಾತುವಿನಿಂದ ನಿಷ್ಪನ್ನವಾದ ಶಬ್ದ. ಹಾಗೆಂದರೆ, ಹೇಳು, ನುಡಿ, ಮಾತನಾಡು ಎಂದರ್ಥ. ಎಂದರೆ, ಸೃಷ್ಟಿಯನ್ನು ಸಾರ ರೂಪವಾಗಿ ಹಿಂಡಿ ತೆಗೆದ ರಸ ಎಂದು ಹೇಳುತ್ತಾರೆ. “ಓಂ ಭೂರ್ಭುವಃಸುವಃ” ಎಂಬ ವ್ಯಾಹೃತಿಗಳನ್ನು ಅನುಸರಿಸಿಯೇ ಋಷಿಗಳು ಗಾಯತ್ರೀ ಮಂತ್ರವನ್ನು ಜಪಿಸಿದರು. ಅದರ ಅರ್ಥವನ್ನು ಭಾವಿಸುತ್ತಾ ತ್ರಿಲೋಕಗಳಷ್ಟು ಬೆಳೆದ ಮನಸ್ಸುಳ್ಳವರಾಗಿ, ಅವರು ತಮ್ಮ ಹವನ ಕ್ರಿಯೆಯನ್ನು ನಡೆಸಿದರು. ಅದು ಅವರ ಆತ್ಮವಿಕಾಸದ ಕುರುಹಾಗಿದ್ದಿತು. ಋಗ್ವೇದದ ಸಾರವಾಗಿ ಭೂ: ಎಂಬುದೂ, ಯಜುರ್ವೇದದ ಸಾರವಾಗಿ भुवः ಎಂಬುದೂ, ಸಾಮಾಥರ್ವಣ ವೇದಗಳ ಸಾರವಾಗಿ ಸುವಃ– ಎಂಬುದೂ ದೊರೆತಿವೆ. ಹೀಗೆ ಇಡಿಯ ವೇದಗಳೆಲ್ಲವೂ ಈ ಮೂರು ವ್ಯಾಹೃತಿಗಳಲ್ಲಿ ಅಡಕವಾಗಿವೆ – ಎಂದು ಪ್ರಜಾಪತಿಗೆ ಗೊತ್ತಾಯಿತು. ಆದ್ದರಿಂದಲೇ, ವೈದಿಕ ಕರ್ಮಗಳಲ್ಲಿ ಮಂತ್ರೋಚ್ಚಾರಣೆ, ಎಂದರೆ ಯಾವುದೇ ಮಂತ್ರದ ಪ್ರಾರಂಭ, ದೇವತೆಯ ಆವಾಹನೆ, ಸ್ಥಾಪನೆ, ಆಹುತಿಪ್ರದಾನ ಎಂದರೆ ವಿಶೇಷವಾಗಿ ಗಣಪತಿ ಪುರಸ್ಸರ ಆದಿತ್ಯಾದಿ ನವಗ್ರಹಾದಿ ಇತರೇ ದೇವತೆಗಳಿಗೆ ಆಹುತಿಪ್ರದಾನ, ದೇವತಾಜ್ಞಾನ – ಮುಂತಾದ ವಿಷಯಗಳಲ್ಲಿ ಏನಾದರೂ ನ್ಯೂನಾತಿರೇಕಗಳಿದ್ದರೆ ಅವುಗಳನ್ನು ಸರಿಪಡಿಸಲೋಸುಗ ‘भूस्वाहा, भुवःस्वाहा, सुवःस्वाहा, भूर्भुवस्सुवस्स्वाहा’ ಎಂಬ ವ್ಯಾಹೃತಿಯ ಹೋಮಗಳನ್ನು ಬಳಸುತ್ತಾರೆ. ಹೇಗೆ ಒಂದು ಪಾತ್ರೆಯು ತೂತು ಬಿದ್ದಿದ್ದರೆ ಅದನ್ನು ಸೀಸದಿಂದ ಬೆಸೆಯುವರೋ ಹಾಗೆಯೇ ಕರ್ಮಾನುಷ್ಠಾನಗಳಲ್ಲಿ ಒದಗಬಹುದಾದ ರಂಧ್ರ (ತಪ್ಪು)ಗಳಿಗೆ ಬೆಸುಗೆಯಾಗಿ ಈ ವ್ಯಾಹೃತಿ ಜಪ ಹೋಮಗಳನ್ನು ಅನುಷ್ಠಿಸುತ್ತಾರೆ. ಇದರಿಂದ, ಕರ್ಮವು ಸಾಂಗವಾಗಿ ಪರಿಪೂರ್ಣವಾಗುವುದೆಂದೇ ಶಾಸ್ತ್ರದ ಹೇಳಿಕೆಯಿದೆ (ಅಧ್ಯಾತ್ಮ ಪ್ರಕಾಶ, ನವೆಂಬರ್ 1982). ಅನಂತರ ಪ್ರಜಾಪತಿಯು ಮತ್ತೆ ಭೂ:, भुवः सुवः – ಎಂಬ ಈ ವ್ಯಾಹೃತಿಗಳ ಸಾರವನ್ನು ಕಂಡುಕೊಳ್ಳುವುದಕ್ಕಾಗಿ ತಪಸ್ಸು ಮಾಡಿದನು. ಆಗ ‘ಓಂ’ ಎಂಬ ಅಕ್ಷರವು ಇವುಗಳ ಅಂದರೆ ಭೂ:, भुवः सुवः – ಎಂಬ ವ್ಯಾಹೃತಿಗಳು ಸಾರವಾಗಿ ಲಭ್ಯವಾಯಿತು. ಹೀಗೆ ಇಡಿಯ ವಾಕ್ ಪ್ರಪಂಚದ ಸಾರವೇ ‘ಓಂ’ಕಾರವು ಎಂದು ಅವನಿಗೆ ಗೊತ್ತಾಯಿತು. ‘ಓಂ’ ಎಂಬುದೇ ಎಲ್ಲಾ ವಾಕ್ಕುಗಳ ಸಾರವೆಂಬುದು ಹೇಗೆ? ಎಂಬುದನ್ನು ಉಪನಿಷತ್ತಿನಲ್ಲಿ ಒಂದು ಉದಾಹರಣೆಯಿಂದ ತಿಳಿಸಿದೆ. ಒಂದು ಅರಳಿ ಎಲೆಯನ್ನು ತೆಗೆದುಕೊಳ್ಳಿರಿ. ಅದರ ‘ಮಧ್ಯ’ದಲ್ಲಿ ಒಂದು ದಪ್ಪನಾದ ನಾರು ಬುಡದಿಂದ ತುದಿಯವರೆಗೂ ಹಾದುಹೋಗಿರುತ್ತದೆ. ಬುಡದಲ್ಲಿ ದಪ್ಪನಾಗಿದ್ದು ಮುಂದೆ ಅವಯವಗಳು ಎಲ್ಲಾ ಕಡೆಗೂ ಚೆದುರಿದಂತೆಲ್ಲ ಸೂಕ್ಷ್ಮವಾಗುತ್ತಾ ಹೋಗುತ್ತದೆ. ಇಷ್ಟೇ ಅಲ್ಲ. ಆ ನಾರಿನ ಅವಯವಗಳೇ ಇಡಿಯ ಎಲೆಯನ್ನು ವ್ಯಾಪಿಸಿಕೊಂಡಿರುತ್ತವೆ. ನಾರನ್ನು ತೆಗೆದರೆ ಎಲೆಗೆ ಹೇಗೆ ಅಸ್ತಿತ್ವವೇ ಇರದೋ ಹಾಗೆಯೇ ಈ ‘ಓಂ’ಕಾರವು ಜಗತ್ತಿನ ಎಲ್ಲಾ ವಾಕ್ ಪ್ರಪಂಚವನ್ನೂ ವ್ಯಾಪಿಸಿಕೊಂಡಿರುವುದು.

> तान्यभ्यतपत् तेभ्योऽभितप्तेभ्यः ओंकारः
> संप्रास्रबत् तद्यथा शंकुना सर्वाणि पर्णानि
> संतृण्णनि एवमोङ्कारेण सर्वावाक् सन्तृण्णा
> ओंकार एवेदगं सर्वं ओंकार एवेदं सर्वम् ॥
> (ಛಾಂದೋಗ್ಯ ಉಪನಿಷತ್, 2ನೇ ಅಧ್ಯಾಯ, 23ನೇ ಮಂತ್ರ)

स्वरो नाम अच् सचात्रप्रणवरूपः सामान्य शब्दस्य विशेषे पर्यवसानात्; यो वेदादौ स्वरः प्रोक्तो वेदान्ते च प्रतिष्ठितः ।’ ಸ್ವರ ಎಂದರೆ ಅಕಾರಾದಿ ಸ್ವರಗಳು. ಶ್ರುತಿಯಲ್ಲಿ ಸ್ವರ ಎಂಬುದು ಪ್ರಣವವನ್ನೇ ಬೋಧಿಸುವುದರಿಂದ ‘ಸ್ವರ’ ಎಂದರೆ ಓಂಕಾರವು. ಸಾಮಾನ್ಯ ಶಬ್ದವು ವಿಶೇಷಾರ್ಥದಲ್ಲಿ ಪರ್ಯವಸಾನ ಹೊಂದುವುದು ಎಂಬ ನಿಯಮವಿರುವುದು. ಓಂಕಾರವು ಅಕಾರ, ಉಕಾರ, ಮಕಾರಗಳಿಂದ ಒಂದುಗೂಡಿರುವ ಕಾರಣ ಸ್ವರವ್ಯಂಜನ ಸಮುದಾಯವಾಗಿರುವುದು; ಕೇವಲ ಸ್ವರವಲ್ಲ ಎಂದು ಹೇಳಬಹುದು. ಒಂದೊಂದು ಸ್ವರಕ್ಕೆ ಒಂದೊಂದು ಮಾತ್ರೆಯಂತೆ ‘ಅ’ಕಾರ ‘ಉ’ಕಾರಗಳಿಗೆ ಎರಡು ಮಾತ್ರೆಗಳು, ವ್ಯಂಜನವಾದ ‘ಮ’ಕಾರಕ್ಕೆ ಅರ್ಧ ಮಾತ್ರೆ ಹೀಗೆ ಸೇರಿ ಸ್ವರಾಂಶವೇ ಹೆಚ್ಚಾಗಿರುವುದರಿಂದ ‘ಓಂ’ಕಾರವು ಸ್ವರವೆಂದೇ ಹೇಳಲ್ಪಡುವುದು. ಪರಬ್ರಹ್ಮನು ಸ್ವರದ (ಪ್ರಣವ)ದ ಅವಯವ ಸ್ವರೂಪನಾದ್ದರಿಂದ, ಸ್ವರಮಯವೆನ್ನಲ್ಪಡುವನು.

यद्यापि प्रणवो मकारेण सहैव स्वख्यञ्जनमुदायश्च
न स्वरः तथापि स्वरस्य द्वेमात्रे व्यञ्जनस्य
अर्धमात्रेति स्वरांशस्य भूयस्त्वात्स्वरत्वेनव्यपदेशः ।
स्वरस्यावयवः स्वरमयः ॥
(ನೀಲಕಂಠದೀಕ್ಷಿತ ರಚಿತ ಶಿವತತ್ತ್ವ ರಹಸ್ಯ, ಪ್ರಥಮಾವೃತ್ತಿ – 1959).

ಪ್ರಣವದಲ್ಲಿ ಅಕಾರ, ಉಕಾರ, ಮಕರಾರ್ಧ ಮಾತ್ರೆ, ಮಕಾರೋತ್ತರಾರ್ಧ ಮಾತ್ರೆ ಎಂದು ನಾಲ್ಕು ಅವಯವಗಳಿವೆ. ಮಕಾರದ ಅನಂತರದಲ್ಲಿರುವ ಅರ್ಧ ಮಾತ್ರೆಗೆ ‘ನಾದ’ ಎಂದು ಹೆಸರು. ಈ ನಾದವೇ ಸ, ರಿ, ಗ, ಮ, ಪ, ದ, ನಿ ಎಂಬ ಸಪ್ತಸ್ವರಗಳನ್ನೂ ವಿಸ್ತಾರಪಡಿಸುತ್ತದೆ. ಅಂದರೆ, ಅಘೋರ, ತತ್ಪುರುಷ, ಈಶಾನ, ನಿರಂಗಗಳೆಂಬ ಸಪ್ತಮುಖಗಳಿಂದ ಕ್ರಮವಾಗಿ ಷಡ್ಜ, ರಿಷಭ, ಗಾಂಧಾರ, ಮಧ್ಯಮ, ಪಂಚಮ, ದೈವತ, ನಿಷಾದಗಳೆಂಬ ಸಪ್ತಸ್ವರಗಳು ಹುಟ್ಟಿ, ಆ ಗಾನಪ್ರಣವದ ಅರ್ಥವನ್ನು ಹೇಳುತ್ತದೆ; ಅಂದರೆ, ಆ ಗಾನವನ್ನು ಅನುಸರಿಸಿ ಹೋದರೆ ಪ್ರಣವ ಮೂಲವಾದ ಪರಂಜ್ಯೋತಿಯಲ್ಲಿ ನಿಲ್ಲಿಸುತ್ತದೆ.

ಓಂಕಾರವೂ, ನಾದವೂ, ಸಗುಣ ನಿರ್ಗುಣ ಸ್ವರೂಪಗಳು, ಬ್ರಹ್ಮನಿಗೂ ಸಹ ‘ಓಂ’ಕಾರದ ಯಥಾರ್ಥ ಜ್ಞಾನವೂ ಅದರ ಶುಭಫಲಜ್ಞಾನವೂ ಆಗದೇ ಇದ್ದದ್ದರಿಂದ ‘ओं’ ಮತ್ತು ‘अथ’ ಎಂಬ ಎರಡು ಶಬ್ದಗಳು ಬ್ರಹ್ಮನ ಕಂಠವನ್ನು ಭೇದಿಸಿಕೊಂಡು ಹೊರಹೊರಟವು.

“ओंकाश्चाथ शब्दश्च द्वाविमौब्रह्मणः पुरा ।
कण्ठंभित्वा विनिर्यातौ तस्मान्माङ्गलिकावुभौ ॥

ಆದ್ದರಿಂದ ಆ ಎರಡು ಶಬ್ದಗಳು ಮಂಗಳಕರಗಳಾಗಿರುವುವು ಎಂದು ಹೇಳಲ್ಪಟ್ಟಿದೆ.

‘ವ್ಯಾಹೃತಿ’ಗಳ ವಿವರಣೆಯೇ ಗಾಯತ್ರಿಯು ಮತ್ತು ಆಕೆಯ ಮತ್ತೊಂದು ಶಕ್ತಿಯಿಂದ ಲಲಿತಾಂಬೆಯ ಕೈಗಳ ಮತ್ತು ಬೆರಳುಗಳ ಉಗುರುಗಳಿಂದ ವಿಷ್ಣುವೇ ಮುಂತಾದ ದಶಾವತಾರಗಳ ಸೃಷ್ಟಿಯಾಯ್ತೆಂದು ಹೇಳುತ್ತದೆ. (ಲಲಿತಾಸಹಸ್ರನಾಮ – 80ನೇ ನಾಮ). ಗಾಯತ್ರಿಮಾತೆಯನ್ನು ಸಂಸ್ಮರಿಸುವುದರಿಂದ ದಶಾವತಾರಗಳನ್ನು ತಿಳಿದುಕೊಂಡಂತೆಯೇ ಸರಿ.

ಋಗ್ವೇದದ ಮೂರನೆಯ ಮಂಡಲದಲ್ಲಿ, ಯಜುರ್ವೇದದ 36ನೇ ಅಧ್ಯಾಯದಲ್ಲೂ ಗಾಯತ್ರಿಯ ಉಲ್ಲೇಖನಗಳಿವೆ.

ಛಾಂದೋಗ್ಯೋಪನಿಷತ್ತಿನಲ್ಲಿ ಹೀಗೆ ಹೇಳಿದೆ:

गायत्री वा इदं सर्वं भूतं थदिदं किञ्चवावै गायत्री ।
वाग्वा इदं सर्वं भूतं गायत्री त्रायते च ॥

ಇದೆಲ್ಲವೂ ಸಮಸ್ತ ಭೂತವನ್ನು ಸೇರಿಸಿಕೊಂಡು ಗಾಯತ್ರಿಯೇ ಆಗಿದೆ ಮತ್ತು ಆ ಭೂತವನ್ನು ಆಕೆಯೇ ರಕ್ಷಿಸುತ್ತಾಳೆ.

ಗಾಯತ್ರೀಸಹಿತವಾದ ಸಂಧ್ಯಾವಂದನೆಯನ್ನು ಎಲ್ಲ ಶಾಸ್ತ್ರಗಳೂ ವಿಧಿಸುತ್ತವೆ. 'सन्ध्याविहीतः 'सर्वकर्मस्वनर्हः' ಎಂದರೆ ಸಂಧ್ಯಾವಂದನೆಯನ್ನು ಮಾಡದವನು ಯಾವ ಕರ್ಮಕ್ಕೂ ಯೋಗ್ಯನಲ್ಲ. ಆದ್ದರಿಂದಲೇ ವೇದವು "आहरहः सन्ध्यामुपासीत" ಎಂದು ಘೋಷಿಸಿದೆ. ಪ್ರತಿನಿತ್ಯವೂ ಸಂಧ್ಯೆಯನ್ನು ಉಪಾಸಿಸಬೇಕು.

ಒಂದು ಸಲ ರಾಕ್ಷಸರು ಉಗ್ರ ತಪಸ್ಸನ್ನಾಚರಿಸಿ, ಪ್ರಜಾಪತಿಯಿಂದ ಸೂರ್ಯನೊಂದಿಗೆ ಯುದ್ಧ ಮಾಡುವ ಶಕ್ತಿ, ಅವಕಾಶವೆಂಬ ವರವನ್ನು ಪಡೆದರು. ನಂತರ ಆ ಅಸುರರು ಸೂರ್ಯನನ್ನು ಅಟ್ಟಿಸಿಕೊಂಡು ಹೋಗಲು, ಸೂರ್ಯನು ಹೆದರಿ ಬ್ರಹ್ಮನ ಬಳಿ ಪರಿಹಾರಕ್ಕೆ ಮೊರೆಹೋದನು. ಅವನು ಎಂದರೆ ಪ್ರಜಾಪತಿಯು ಬ್ರಹ್ಮನ ಭೀತಿಗೆ ಕಂಡ ಪರಿಹಾರ, ಋತವೂ, ಬ್ರಹ್ಮವೂ, ಓಂಕಾರವೂ ಗಾಯತ್ರಿಯೂ – ಇವೇ ಅವನಿಗೆ ಗೋಚರವಾದ ಪ್ರತೀಕಗಳು. ಆದ್ದರಿಂದ ದ್ವಿಜರು ಅಹೋರಾತ್ರಿಯ ಸಂಧಿಯಲ್ಲಿ ಸಂಧ್ಯೋಪಾಸನೆಯನ್ನು ಮಾಡುತ್ತಾರೆ (ಛಾಂದೋಗ್ಯಶ್ರುತಿ).

ಸೂರ್ಯನು ಭೂಮಿಯ ಮೇಲಿರುವ ನೀರನ್ನು ವರ್ಷದಲ್ಲಿ ಎಂಟು ತಿಂಗಳ ಕಾಲ ಮೇಲಕ್ಕೆ ಎಳೆದುಕೊಂಡು ತನ್ನಲ್ಲಿಟ್ಟುಕೊಂಡು ಅದನ್ನು ಉಳಿದ ನಾಲ್ಕು ತಿಂಗಳ ಕಾಲ ಭೂಮಿಗೆ ಮಳೆಯ ರೂಪದಲ್ಲಿ ಒದಗಿಸುತ್ತಾನೆ. ಇದನ್ನು 'ರೌದ್ರ' ಎಂದು ಕರೆಯುತ್ತಾರೆ. ಹೀಗೆ ಅವನು ಮಾಡದೆ ಇದ್ದರೆ ಜಗತ್ತಿನಲ್ಲಿ ಮಳೆಯೇ ಇಲ್ಲದೆ ಪ್ರಾಣಿವರ್ಗವೆಲ್ಲ ಸಂಪೂರ್ಣ ನಾಶವಾಗುತ್ತಿತ್ತು. ಏಕೆಂದರೆ ನೀರಿಗೆ ತಾನಾಗಿಯೇ ಮೇಲಕ್ಕೆ ಏರುವ ಶಕ್ತಿ ಇಲ್ಲ. ಅದಕ್ಕೆ ಸೂರ್ಯನ ಶಕ್ತಿಯೇ ಸಹಾಯ.

ತೊಟ್ಟಿಲಲ್ಲಿ ಮಲಗಿದ ಮಗು ತಾಯಿಯ ಕಂಕುಳನ್ನು ತಾಯಿಯು ಕೈ ನೀಡಿ ಕೃಪೆ ಮಾಡಿದರೆ, ಎದ್ದು ಸೇರಲು ಸಾಧ್ಯ, ತಾನಾಗಿಯೇ ಇಲ್ಲ. ಹಾಗೆಯೇ ಜೀವನಿಗೂ ತಾನಾಗಿಯೇ ಪರಮಾತ್ಮನನ್ನು ಒಡಗೂಡಿಸುವ ಆ ಶಕ್ತಿಯನ್ನೇ ಮಂತ್ರ, ಮಂತ್ರಶಕ್ತಿ ಎನ್ನುತ್ತಾರೆ. ಅಂತಹ ಋಷಿಯ ಅಂತಃಸ್ಫುರಣೆಗೆ ಗೋಚರನಾದ ಮಂತ್ರಗಳಲ್ಲಿ ಆರಂಭದಲ್ಲೇ ತಿಳಿಸಿದಂತೆ ಗಾಯತ್ರಿಮಂತ್ರವು ಹೀಗಿದೆ:

ऊँ भूर्भुवस्सुवः तत्सवितुर्वरेण्यं भर्गोदेवस्य धीमहि धियो यो नः प्रचोदयात् । ಅಂದರೆ, ಜಗತ್ತಿನ ಸೃಷ್ಟಿ, ಸ್ಥಿತಿ, ಲಯಗಳಿಗೆ ಕಾರಣನಾದ ಸರ್ವವ್ಯಾಪಕನೂ, ಸರ್ವಪ್ರಕಾಶನೂ ಆದ ಪರಮಾತ್ಮನ ಶ್ರೇಷ್ಠವಾದ ಆ ತೇಜಸ್ಸನ್ನು ಧ್ಯಾನ ಮಾಡುತ್ತೇವೆ. ಆ ತೇಜಸ್ಸು ನಮ್ಮ ಬುದ್ಧಿಗಳನ್ನು ಪ್ರೇರೇಪಿಸಲಿ, ಎಂದು. ಅಗ್ನಿಪುರಾಣವೂ ಶ್ರುತಿಸ್ಮೃತಿ ಪ್ರತಿಪಾದಿತವಾದ 'ಓಂ'ಕಾರಪೂರ್ವಕವಾದ ಸಂಧ್ಯೆ ಮತ್ತು ಗಾಯತ್ರಿಯ ಉಪಾಸನೆಯನ್ನೇ ವಿಧಿಸಿದೆ.

"कुर्यात् मैत्रो ब्राह्मण उच्चते, ಸಂಧ್ಯೆಗೆ ಮುಖ್ಯಾಭಿಮಾನಿ ದೇವತೆ ಸೂರ್ಯ. ಬ್ರಾಹ್ಮಣನಿಗೆ ಮಿತ್ರೋಪಾಸನೆ ಅತಿ ಮುಖ್ಯ.

ಅಗ್ನಿಪುರಾಣವು, ओंकारं यो विजानाति सयोगी सहरिः पुमान् ।
ओंकारमश्य स्येन्तस्मान्मन्त्रसारं तु सर्वदम् ॥ [सन्ध्याविधिः]
(ಅ–215, ಶ್ಲೋಕ–1)

'ಓಂ'ಕಾರವನ್ನು ತಿಳಿದವನೆ ಹರಿಯು ಅಥವಾ ಯೋಗಿಯು. ಆದ್ದರಿಂದ ಮಂತ್ರಸಾರವಾದ 'ಓಂ'ಕಾರವನ್ನು ಅಭ್ಯಸಿಸಬೇಕು.

ओंकार पूर्विकातिस्रो महाब्याहृतयोऽव्यमाः ।
त्रिपदा चैव गायत्री विज्ञेयंब्रह्मणो मुरवम् ॥
[सन्ध्याविधि :, (ಅ–215, ಶ್ಲೋಕ–3)

भूः ಇವೇ ಮುಂತಾದ ವ್ಯಾಹೃತಿಗಳು ಓಂಕಾರಪೂರ್ವಕವಾಗಿ ಮತ್ತು ಗಾಯತ್ರಿಯ ಮಂತ್ರವು ಬ್ರಹ್ಮನ ಮುಖವೆಂದೇ ತಿಳಿಯಬೇಕು, ಏಕೆಂದರೆ ಪರಮಾತ್ಮನನ್ನು ಸುಲಭವಾಗಿ ಪಡೆಯುವ ದ್ವಾರವದು. त्रिपदा ಎಂದರೆ ಋಗ್ವೇದ, ಯಜುರ್ವೇದ, ಸಾಮವೇದ.

विश्वामित्रो ऋषिश्च्छन्दो गायत्रं सविता तथा देवतोपनये जप्ये
विनियुगे हुते तथा ॥ (ಅ.ಪು.ಸಂ.ವಿ, ಶ್ಲೋಕ–15)

ಗಾಯತ್ರಿ ಮಂತ್ರವನ್ನು ಕಂಡುಹಿಡಿದವರು ಅಥವಾ ಮೊದಲು ಹಾಡಿದವರು ವಿಶ್ವಾಮಿತ್ರ ಋಷಿಗಳು. ಇದಕ್ಕೆ ಗಾಯತ್ರಿಯೇ ಛಂದಸ್ಸು. ದೇವತೆಗಳನ್ನು ತೃಪ್ತಿಪಡಿಸಲು ಜಪಿಸುವುದಕ್ಕಾಗಿ ಅಥವಾ ಯಜ್ಞದಲ್ಲಿ ಅಭಿಘಾರ (ತುಪ್ಪ)ವನ್ನು ಅರ್ಪಿಸುವಾಗ ವಿನಿಯೋಗವಾಗಿ ಉಪಯೋಗಿಸಬೇಕು.

अग्निर्वायूरवि........ आस्यमनुक्रमात्
(ಅ.ಪು. सं.वि. ಅ–215, ಶ್ಲೋಕ 38–39)

ಅಗ್ನಿ, ವಾಯು ಮುಂತಾದ ದೇವತೆಗಳು ಗಾಯತ್ರಿ ಮಂತ್ರವನ್ನು ಪುನರುಚ್ಚಿಸುವವನ ಪಾಪಗಳನ್ನು ದೂರ ಮಾಡುತ್ತಾರೆ.

पतिः श्यामश्वकपिलो..... पापहराहुतैषा सर्वकामदा
(ಅ.ಪು. सं.वि. ಅ–215, ಶ್ಲೋಕ 22–24)

ಹಳದಿ, ನೀಲಿ, ಧೂಮ್ರ (ಕಪಿಲ), ಮರಕತವರ್ಣ, ಅಗ್ನಿಸದೃಶ, ಬಂಗಾರ ಇವೇ ಮುಂತಾದ ಬಣ್ಣಗಳಿಂದ ಕೂಡಿರುವಂತೆ ಆ ಗಾಯತ್ರಿಯನ್ನು ಜಪಿಸಬೇಕು.

योऽधीतेऽहन्यहन्येवातांस्त्रीणिवर्णान्यतन्द्रितः ।
सब्रह्मपरमश्चेति वायुभूतः स्वमूर्तिमान् ॥
(ಅ.ಪು. ಅ–215, ಶ್ಲೋಕ 4)

ಇಂದ್ರಿಯಗಳನ್ನು ನಿಗ್ರಹಿಸಿ ಪ್ರಣವವನ್ನು ಒಂದು ವರ್ಷ ಕಾಲ ಪ್ರತಿನಿತ್ಯವೂ ಉಚ್ಚರಿಸುವವನು, ತನ್ನ ನಶ್ವರ ದೇಹವನ್ನು ಕೊಡವಿಹಾಕಿ ವಾಯುವಿರುವ ಆಕಾಶಮೂರ್ತಿಯೇ ಆಗಿಬಿಡುವನು. ಅದು ಪರಬ್ರಹ್ಮನ ಆವಿರ್ಭಾವವೇ.

एकाक्षरं परब्रह्म प्राणायामः परं तपः ।
सवित्र्यास्तु परं नास्ति मौनात्सत्यं विशिष्यते ॥

ಏಕಾಕ್ಷರವಾದ 'ಓಂ'ಕಾರವೇ ಪರಬ್ರಹ್ಮವು. ಪ್ರಾಣಾಯಾಮವು ಶ್ರೇಷ್ಠತಮವಾದ ತಪಸ್ಸು. ಗಾಯತ್ರಿಗಿಂತ ಶ್ರೇಷ್ಠತರವಾದ ಮಂತ್ರ ಮತ್ತೊಂದಿಲ್ಲ. **प्रणवस्य.....आपओं** ಇದು ಪ್ರಾಣಾಯಾಮ ಮಂತ್ರ. ಪ್ರಾಣಾಯಾಮವೆಂದರೆ, **प्रश्वासयोर्गतिविच्छेदः** ಎಂದರೆ, ಶ್ವಾಸವನ್ನು ಎಳೆದುಕೊಳ್ಳುವ ಕ್ರಿಯೆಗೆ ಪೂರಕವೆಂದೂ, ತಡೆದು ನಿಲ್ಲಿಸುವುದಕ್ಕಾಗಿ 'ಕುಂಭಕ'ವೆಂದೂ, ಹೊರಗೆ ಬಿಡುವುದಕ್ಕೆ ರೇಚಕವೆಂದೂ ಹೆಸರು. ಬ್ರಹ್ಮಚಾರಿಯು ಕನಿಷ್ಠ, ಅನಾಮಿಕ, ಅಂಗುಷ್ಠ ಬೆರಳುಗಳಿಂದ, ಗೃಹಸ್ಥರು ಐದೂ ಬೆರಳುಗಳಿಂದ ನಾಸಾಗ್ರವನ್ನು ಹಿಡಿಯಬೇಕು. ಪ್ರಾಣಾಯಾಮವು ಆಧ್ಯಾತ್ಮಿಕ ಮಾತ್ರವಲ್ಲದೆ ವೈಜ್ಞಾನಿಕವೂ ಹೌದು. ಮನಸ್ಸು, ಪ್ರಾಣ, ವೀರ್ಯ ಎಂಬುದೆಲ್ಲ ಒಂದೇ ವಸ್ತು. ಪ್ರಾಣವನ್ನು ವಶಮಾಡಿಕೊಂಡರೆ ಮನಸ್ಸು ತಾನೇ ವಶಕ್ಕೆ ಬರುವುದು. ವೀರ್ಯವೂ ಸ್ಥಿರವಾಗುವುದು.
ಪ್ರಾಣಾಯಾಮದಲ್ಲಿ ನಾಲ್ಕು ಅಂಶಗಳಿವೆ. ಪ್ರಣವ, ವ್ಯಾಹೃತಿ, ಗಾಯತ್ರೀ, ಗಾಯತ್ರೀ ಶಿರಸ್ಸು ಎಂದು. (1) ಓಂ ಎಂಬ ಪ್ರಣವ (2) ಸಪ್ತ ವ್ಯಾಹೃತಿಗಳೆಂಬ ರ್ಷ್ಟ ರ್ಜ್ಞೈ, ಥ್ಜ್ಞೈ ಡೆಫ್ಯ, ಜೆಟ್ಟೈ, ೨ೆಟ್ಟೈ ಥುಡ್ತೊ ಎಂಬಿವು. (3) ತತ್ಸವಿತುರ್ವರೇಣ್ಯಂ ಭರ್ಗೋದೇವಸ್ಯಧೀಮಹಿ ಧಿಯೋಯೋನಃ ಪ್ರಚೋದಯಾತ್ – ಎಂಬ ಗಾಯತ್ರೀ ಮತ್ತು (4) ಗಾಯತ್ರಿ ಶಿರಸ್ಸೆಂದು ಕರೆಯಲ್ಪಡುವ ಓಮಾಪೋಜ್ಯೋತಿರಸೋಽಮೃತಂ ಬ್ರಹ್ಮ, ಭೂರ್ಭುವಸ್ಸುವರೋಮ್ ಎಂಬುದು. ಪ್ರಾಣಾಯಾಮದಿಂದ ದೇಹ ಶುದ್ಧವಾಗಿ, ಮನೋವಾಕ್ಕಾಯಗಳಿಂದ ರಾತ್ರಿ ಮಾಡಿದ ಪಾಪವು ಬೆಳಗಿನ ಪ್ರಾಣಾಯಾಮದಿಂದಲೂ, ಹಗಲು ಮಾಡಿದ ಪಾಪವು ಮಧ್ಯಾಹ್ನ ಮತ್ತು ಸಾಯಂಕಾಲದ ಪ್ರಾಣಾಯಾಮಗಳಿಂದಲೂ ಪರಿಹಾರವಾಗುವುದೆಂಬುದೇ ಮುಖ್ಯವಾದ್ದು.

न गायत्र्याः परं जाप्यं न व्याहतिसमं हुतम्
(ಅ.ಪು. ಅ–215, ಶ್ಲೋಕ 8)

गायत्र्याः पादमप्यार्धमृगर्धमृचमेव वा ॥
ब्रह्म हत्या सुरापानं सुवर्णस्तेयमेव च ।
गुरुदारागमचैव जाप्येनैव पुनाति सा ॥
(ಅ.ಪು. ಅ–215, ಶ್ಲೋಕ 8–9)

ಗಾಯತ್ರಿ ಮಂತ್ರಕ್ಕಿಂತ ಶ್ರೇಷ್ಠವಾದ್ದು ಮತ್ತೊಂದಿಲ್ಲ, ಏಕೆಂದರೆ ಕೇವಲ ಜಪದಿಂದಲೇ ಬ್ರಹ್ಮಹತ್ಯೆ, ಸುರಾಪಾನ, ಸುವರ್ಣದ ಕಳವು, ಗುರುಪತ್ನಿಯನ್ನು ಹೊಂದುವಿಕೆಯೆಂಬ ಪಾಪಗಳನ್ನು ಹೋಗಲಾಡಿಸಿ ಶುದ್ಧಮಾಡುತ್ತಾಳೆ, ಆ ಗಾಯತ್ರಿಯು.

> ओंकारं पूर्वमुच्चार्य भूर्भुवस्स्वस्तयैव च ।
> गायत्री प्रणवश्चान्ते जपे चैवमुदाहृतम् ॥
> (ಅ.ಪು. ಅ–215, ಶ್ಲೋಕ 14)

'ಓಂ'ಕಾರವನ್ನು ಮೊದಲು ಉಚ್ಚರಿಸಿ ಭೂಃ ಮುಂತಾದ ವ್ಯಾಹೃತಿಗಳನ್ನು, ನಂತರ ಗಾಯತ್ರಿಯ ಜಪದ ನಂತರ ಕೊನೆಯಲ್ಲಿ ಪ್ರಣವವನ್ನು ಉಚ್ಚರಿಸಬೇಕು; ಏಕೆಂದರೆ,

> सर्वमन्त्रप्रयोगेषु प्रणवः प्रथमः स्मृतः ।
> तेनसम्परिपूर्णं यत्तत्पूर्णं कर्म नेतरत् ॥
> (ಅ.ಪು. ಅ–215, ಶ್ಲೋಕ 2)

ಎಲ್ಲ ಮಂತ್ರಗಳು ಪ್ರಣವದಿಂದಲೇ ಪ್ರಾರಂಭವಾಗಿ, ಅದರಲ್ಲೇ ಕೊನೆಯಾಗುವುದು, ಎಲ್ಲ ಕರ್ಮಗಳೂ ಸಕಾರಾತ್ಮಕವಾಗಿ ಪೂರ್ಣವಾಗುವುದು, ಉಳಿದ ಕರ್ಮಗಳೆಲ್ಲವು ಅಲ್ಲ, ಅಂದರೆ ಭರಧ್ವಾಜಾಸ್ಮೃತಿರತ್ನಾಕರದಲ್ಲಿ ಗಾಯತ್ರೀ ಮಂತ್ರವನ್ನು ಬಿಟ್ಟು ಅನ್ಯ ಮಂತ್ರಗಳನ್ನು ಜಪಿಸಿದರೆ ಉಪಾಸಕರು ಪಾಪವನ್ನು ಹೊಂದುವರು. ಆ ಮಂತ್ರಗಳು ಗಾರ್ದಭ ಸ್ವರಗಳೇ ಆಗುವುವು ಎಂದು ಹೇಳಿದೆ.

> वेदाम्बिकां परित्यज्यगायत्रीं येद्विजाधमाः ।
> पठन्ति वेदान्स्ते पापा भबेयुः गर्दभा स्वरा : ॥
> ಆದ್ದರಿಂದ, ಗಾಯತ್ರಿಯನ್ನು,
> अभीष्टदा कोटिजप्ता देवत्वं राजतामियत्
> (ಅ.ಪು, ಅ–215, ಶ್ಲೋಕ–14)

ಕೋಟಿ ಸಲ ಜಪಿಸುವವನು ಈ ಜಗತ್ತಿನಲ್ಲಿ ರಾಜತ್ವವನ್ನು, ಮುಂದಿನ ಲೋಕದಲ್ಲಿ ದೇವತ್ವವನ್ನು ಪಡೆಯುವನು.

ಉಲ್ಲೇಖಿನ ಗ್ರಂಥಗಳು

1) ಆರ್ಯ ಸಂಸ್ಕೃತಿ – ಸೆಪ್ಟೆಂಬರ್ 1980, ಡಿಸೆಂಬರ್ 1980, ಫೆಬ್ರವರಿ 1981

2) ಸಂಧ್ಯಾವಂದನೆ ಎಂದರೇನು? (ಉಪನಯನ ಸಂಘ, ಲಕ್ಕಸಂದ್ರ, ಬೆಂಗಳೂರು, ಫೆಬ್ರವರಿ–1979)

3) ಯೋಗಕ್ಷೇಮ – ಆಧ್ಯಾತ್ಮಿಕ ತ್ರೈಮಾಸಿಕ ಪತ್ರಿಕೆ, ಡಿಸೆಂಬರ್–1996

4) ಯಜುರ್ವೇದ ಸಂಧ್ಯಾಮಂತ್ರ (ವೇದಧರ್ಮ ಪರಿಪಾಲನಾ ಸಭಾ, ಪ್ರಥಮ ಮುದ್ರಣ–ವಿಶ್ವಾವಸು)

5) ಈಶೋಪನಿಷತ್ತು (ರಾಮಕೃಷ್ಣ ಮಠ, ಬೆಂಗಳೂರು)

6) ಕಠೋಪನಿಷತ್ತು, (ರಾಮಕೃಷ್ಣ ಮಠ, ಬೆಂಗಳೂರು)

7) ಛಾಂದೋಗ್ಯೋಪನಿಷತ್ತು, (ರಾಮಕೃಷ್ಣ ಮಠ, ಬೆಂಗಳೂರು)

8) ತೈತ್ತಿರೀಯ ಉಪನಿಷತ್ತು, (ರಾಮಕೃಷ್ಣ ಮಠ, ಬೆಂಗಳೂರು)

9) ಶಿವತತ್ತ್ವ ರಹಸ್ಯ (ನೀಲಕಂಠ ದೀಕ್ಷಿತ್ ರಚಿತ, ಪ್ರಥಮ ಆವೃತ್ತಿ–1959)

10) ಅಧ್ಯಾತ್ಮ ಪ್ರಕಾಶ (ಅಕ್ಟೋಬರ್ 1982, ನವೆಂಬರ್ 1982)

11) ಗೀತಾ ಭಾವಧಾರೆ (ರಾಮಕೃಷ್ಣ ಮಠ – ಪ್ರಥಮ ಮುದ್ರಣ–1968)

12) ಪ್ರಶ್ನೋಪನಿಷತ್ತು (ರಾಮಕೃಷ್ಣ ಮಠ)

13) ಶ್ವೇತಾಶ್ವತರೋಪನಿಷತ್ತು (ರಾಮಕೃಷ್ಣ ಮಠ)

14) ಸರ್ವಮೂಲ ಗ್ರಂಥಗಳು (ಶ್ರೀಮತ್ತೈತರೋಪನಿಷಧ್ಭಾಷ್ಯ – ಆನಂದತೀರ್ಥ ವಿರಚಿತ, ರಾಮಕೃಷ್ಣ ಮಠ)

15) ಅಗ್ನಿ ಪುರಾಣಮ್(ರಾಮಕೃಷ್ಣ ಮಠ)

16) ಶ್ರೀಮಹಾನ್ಯಾಸಾದಿಮಂತ್ರಾಃ (ರಾಮಕೃಷ್ಣ ಮಠ–1980, 1985)

❑

ಪುರಾಣಗಳಲ್ಲಿ ಗೀತೆಗಳು

—ವಿದ್ವಾನ್ ಎಂ. ಶಂಕರಭಟ್ಟ

ಗೀತಾ ಎಂಬ ಪದವು ಶ್ರೀಮದ್ಭಗವದ್ಗೀತೆಗೆ ಪ್ರಸಿದ್ಧವಾಗಿದೆ. ವ್ಯಾಸರಿಂದ ರಚಿತವಾದ ಬೇರೆ ಬೇರೆ ಪುರಾಣಗಳಲ್ಲಿ ಬರುವ ಗೀತೆಗಳು ಅತ್ಯಂತ ಅಮೂಲ್ಯ ಆಧ್ಯಾತ್ಮಿಕ ಜ್ಞಾನವನ್ನು ಒದಗಿಸುತ್ತವೆ.

ಭಾಗವತ ಮಹಾಪುರಾಣವು ಕ್ಲಿಷ್ಟಕರ ಸಮಸ್ಯೆಗಳಿಗೆ, ಗಂಭೀರ ವಿಷಯಗಳಿಗೆ, ಅರ್ಥಗರ್ಭಿತ ಶ್ಲೋಕಗಳೊಂದಿಗೆ ಪರಿಹಾರ ಒದಗಿಸುತ್ತದೆ. ಪುರಾಣಗಳಲ್ಲಿ ಬರುವ ಕೆಲವು ಗೀತೆಗಳ ಸಾರ ಈ ಲೇಖನದಲ್ಲಿ ನೀಡಲಾಗಿದೆ.

ಭಾರತದ ಸಂಸ್ಕೃತಿ, ಸಾಹಿತ್ಯಪರಂಪರೆ ಎಂಬುದು ಅದ್ಭುತ, ತ್ರಿಪಥಗಾಮಿನಿಯ ಪಯಣ. ಹರಿವಿನುದ್ದಕ್ಕೂ ಒಂದಲ್ಲ ಒಂದು ರೀತಿಯಲ್ಲಿ ನಮ್ಮ ಜ್ಞಾನತೃಷೆಯನ್ನು ಹಿಂಗಿಸುತ್ತಲೇ ಗಮನ, ವೇದಗಳಿಂದ ಆರಂಭಿಸಿ ಕಾವ್ಯ ಸಾಹಿತ್ಯಕೃತಿಗಳವರೆಗೂ ಕಣ್ಣಾಡಿಸುವಾಗಲೂ ನಡುವೆ ಏನೋ ಬಿಟ್ಟೆನೆ? ಎಂಬ ಭಾವನೆಯಲ್ಲಿ ಮತ್ತೊಮ್ಮೆ ಇನ್ನೊಮ್ಮೆ ಕಣ್ಣೋಟ ಹೊರಳಿಸಿದಾಗ ಹೊಸ ಹೊಸ ಹೊಳಹುಗಳು. ಅಂತೆಯೇ ಈ ಲೇಖನದ ವಿಷಯವೂ ಜೀವನದುದ್ದಕ್ಕೂ ನಮ್ಮ ಪುರಾಣಗಳನ್ನು ಅವಲೋಕಿಸಿದರೂ ನಮಗೆ ಒಂದಿಲ್ಲೊಂದು ಬೆಳಕಿನ ಕಿರಣ ಮುನ್ನಡೆಗೆ ಸಹಕರಿಸುತ್ತದೆ. 'ಗೀತೆ' ಎಂಬ ಹೆಸರನ್ನೇ ಗಮನಿಸೋಣ. ಸ್ತೋತ್ರಮಾಡಲ್ಪಟ್ಟ 'ಗೈ ಕರ್ಮಣಿ ಕ್ತ' (ಹಾಡಲ್ಪಟ್ಟ) ಎಂಬರ್ಥದಲ್ಲಿ ಹೇಳಲ್ಪಟ್ಟಿದೆ. ಸ್ತ್ರೀಲಿಂಗದಲ್ಲಿ 'ಗೀತಾ' ಎಂಬುದಾಗಿ ಆತ್ಮವಿದ್ಯೆಯನ್ನು ಬೋಧಿಸುವ ಶ್ಲೋಕರೂಪವಾದ ಗ್ರಂಥ. ಕೆಲವು ಕೃತಿಗಳು ಗೀತಾ ಎಂಬ ಪದದಿಂದ ಕೊನೆಗೊಂಡರೆ ಕೆಲವು 'ಗೀತಂ' ಎಂಬುದಾಗಿ ಹೇಳಲ್ಪಡುತ್ತವೆ. ಉದಾಹರಣೆಗೆ ಭೂಮಿಗೀತಮ್, ಐಲಗೀತಮ್, ಭ್ರಮರಗೀತಮ್ ಇತ್ಯಾದಿ.

ಗೀತಾ ಎಂಬ ಪದವು ಶ್ರೀಮದ್ಭಗವದ್ಗೀತೆಗೆ ಪ್ರಸಿದ್ಧವಾಗಿದೆ. ವ್ಯಾಸರಿಂದ ರಚಿತವಾದ ಬೇರೆ ಬೇರೆ ಪುರಾಣಗಳಲ್ಲಿ ಬರುವ ಗೀತೆಗಳು ಅತ್ಯಂತ ಅಮೂಲ್ಯ ಆಧ್ಯಾತ್ಮಿಕ ಜ್ಞಾನವನ್ನು ಒದಗಿಸುತ್ತವೆ. ಆದರೆ ಅವು ಪ್ರಸಿದ್ಧವಾಗಿಲ್ಲದಿದ್ದರೂ ವೈವಿಧ್ಯಮಯವಾಗಿ ಆತ್ಮವಿದ್ಯೆಯನ್ನು ಬೋಧಿಸುತ್ತವೆ. ಕೆಲವು ಶೃತಿಪ್ರಧಾನವಾಗಿ, ಮತ್ತೆ ಕೆಲವು ಯುಕ್ತಿ ಪ್ರಧಾನವಾಗಿ ಇನ್ನು ಕೆಲವು ಅನುಭವಪ್ರಧಾನವಾಗಿ ವೇದಾಂತದ ಶಿಖರಕ್ಕೆ ನಮ್ಮನ್ನು ಎಳೆಯುತ್ತವೆ.

'ವಿದ್ಯಾವತಾಮ್ ಭಾಗವತೇ ಪರೀಕ್ಷಾ' ಎಂಬಂತೆ, ಭಾಗವತ ಮಹಾಪುರಾಣವು ಕ್ಲಿಷ್ಟಕರ ಸಮಸ್ಯೆಗಳಿಗೆ, ಗಂಭೀರ ವಿಷಯಗಳಿಗೆ, ಅರ್ಥಗರ್ಭಿತ ಶ್ಲೋಕಗಳೊಂದಿಗೆ ಪರಿಹಾರ ಒದಗಿಸುತ್ತದೆ. ಬ್ರಹ್ಮಸೂತ್ರಗಳ ಮೊದಲ ಸೂತ್ರ 'ಜನ್ಮಾದ್ಯಸ್ಯಯತಃ'.... ಎಂದು ಶ್ಲೋಕದಿಂದ ಪ್ರಾರಂಭವಾಗಿ ಅನೇಕ ಗೀತೆಗಳನ್ನು ಒಳಗೊಂಡಿದೆ. ಅವುಗಳಲ್ಲಿ ಪ್ರಧಾನವಾದುದೇ ಉದ್ಧವ ಗೀತೆ.

1. **ಉದ್ಧವಗೀತೆ :** ಭಾಗವತ ಮಹಾಪುರಾಣದಲ್ಲಿ 11ನೇ ಸ್ಕಂಧದ 7ನೆಯ ಅಧ್ಯಾಯದಿಂದ 9ನೆಯ ಅಧ್ಯಾಯದವರೆಗಿನ ಅಧ್ಯಾಯಗಳಲ್ಲಿ ಅಡಗಿದೆ. ಶ್ರೀಕೃಷ್ಣ ಮತ್ತು ಉದ್ಧವರ ಸಂವಾದದೊಂದಿಗೆ ಪ್ರಾರಂಭವಾಗುತ್ತದೆ. ಇದು ಶ್ರೀಕೃಷ್ಣನು ಪ್ರಾಣಮಿತ್ರನೂ, ತನ್ನಿಂದ ದೂರವಿರಲೂ ಸಾಧ್ಯವಾಗದ ಉದ್ಧವನಿಗೆ ನೀಡಿದ ಉಪದೇಶವಾಗಿ ಉದ್ಧವಗೀತೆಯೆಂದೂ ಹೇಳಲಾಗಿದೆ.

2. **ಅವಧೂತಗೀತಾ :** ಭಾಗವತ ಮಹಾಪುರಾಣದಲ್ಲಿ ಅತ್ರಿ ಮತ್ತು ಅನುಸೂಯೆಯರಿಗೆ ಜನಿಸಿದ ಮಗ ದತ್ತಾತ್ರೇಯ. ಅವಧೂತನು ಒಬ್ಬ ಪರಿವ್ರಾಜಕ ಯತಿ. ಮನಸ್ಸು ಅವ್ಯಕ್ತ ಸತ್ಯದಲ್ಲಿ ಕೇಂದ್ರೀಕೃತವಾಗಿ ಎಲ್ಲ ದ್ವಂದ್ವಗಳನ್ನೂ ಮೀರಿ ನಿಂತವನು. ದತ್ತಾತ್ರೇಯನೇ ಅವಧೂತನಾಗಿ ಯದುರಾಜನಿಗೆ ಮಾಡಿದ ಉಪದೇಶವನ್ನೇ 11ನೇ ಸ್ಕಂಧದ 7ರಿಂದ 9ನೇ ಅಧ್ಯಾಯಗಳಲ್ಲಿ ಶ್ರೀಕೃಷ್ಣನು ಉಪದೇಶ ಮಾಡುತ್ತಾನೆ. ಅವಧೂತ ಉಪಾಖ್ಯಾನವು ಅನುಭವಪ್ರಧಾನವಾಗಿ ಲೌಕಿಕಬದುಕಿನಲ್ಲಿ ಬುದ್ಧ್ಯುಪಾಶ್ರಿತರಾದ ಗುರುಗಳು ಭೂಮ್ಯಾದಿ ಪಂಚಭೂತಗಳು, ಪಾರಿವಾಳ, ಹೆಬ್ಬಾವು, ಸಮುದ್ರ, ಪತಂಗ, ದುಂಬಿ, ಆನೆ, ಜೇನುಸಂಗ್ರಹಿಸುವವ, ಜಿಂಕೆ, ಮೀನು, ಪಿಂಗಳಾ ಎಂಬ ವೇಶ್ಯೆ, ಕುರರ ಎಂಬ ಹಕ್ಕಿ, ಮಗು, ಕುಮಾರೀ, ಬಾಣವನ್ನು ತಯಾರಿಸುವವ, ಸರ್ಪ, ಜೇಡರಹುಳು – ಈ ಇಪ್ಪತ್ತನಾಲ್ಕು ಮಂದಿ ನನ್ನ ಗುರುಗಳು ಎಂದು ಸಕಾರಣವಾಗಿ ತಿಳಿಸುವುದೇ ಅವಧೂತಗೀತೆಯ ಪ್ರಧಾನ ವಿಷಯ.

8 ಅಧ್ಯಾಯಗಳಲ್ಲಿ 289 ಶ್ಲೋಕಗಳನ್ನೊಳಗೊಂಡ ಪ್ರತ್ಯೇಕ ಕೃತಿಯಾಗಿದೆ.

3. **ವೇಣುಗೀತೆ** – 21ನೇ ಅಧ್ಯಾಯದ 20 ಶ್ಲೋಕಗಳು. ವೃಂದಾವನದಲ್ಲಿ ಗೋಪಿಕೆಯರು ಶ್ರೀಕೃಷ್ಣನ ವೇಣುಗಾನಕ್ಕೆ ಮನಸೋತು ತಮ್ಮನ್ನು ಸಂಪೂರ್ಣವಾಗಿ ಶ್ರೀಕೃಷ್ಣನಿಗೆ ಅರ್ಪಿಸಿಕೊಂಡುದೇ ಇಲ್ಲಿನ ವಸ್ತು.

4. **ಗೋಪಿಕಾಗೀತಮ್** – ಗೋಪಿಕಾಸ್ತ್ರೀಯರು ಅನನ್ಯಶರಣರಾಗಿ ಅನನ್ಯಭಕ್ತಿಯಿಂದ ಭಗವಂತನ ವಿರಹಗೀತೆಯನ್ನು ಹಾಡುವುದೇ ಇಲ್ಲಿನ ಕಥಾವಸ್ತು. 31ನೇ ಅಧ್ಯಾಯದ 19 ಶ್ಲೋಕಗಳು.

5. **ಯುಗ್ಮಗೀತಮ್** – ಗೋಪಿಕಾಸ್ತ್ರೀಯರು ಎಲ್ಲೆಲ್ಲೂ ಕೃಷ್ಣನನ್ನೇ ಕಂಡುಕೊಳ್ಳುವುದು ಇಲ್ಲಿನ ವಸ್ತು. 35ನೇ ಅಧ್ಯಾಯದ 26 ಶ್ಲೋಕಗಳು.

6. **ಭ್ರಮರಗೀತೆ** – ಇದು 47ನೇ ಅಧ್ಯಾಯದ 39 ಶ್ಲೋಕಗಳು. ಇವೆಲ್ಲವೂ ಭಾಗವತದ ದಶಮಸ್ಕಂದದಲ್ಲಿ ಬರುವ ಗೀತೆಗಳು.

7. ಭಾಗವತದ 11ನೇ ಸ್ಕಂಧದ 23ನೇ ಅಧ್ಯಾಯದ 62 ಶ್ಲೋಕಗಳು **ಭಿಕ್ಷುಗೀತೆಯೆಂದೂ,**

8. 26ನೇ ಅಧ್ಯಾಯದ 35 ಶ್ಲೋಕಗಳು **ಐಲಗೀತೆಯೆಂದೂ** ಹೆಸರಾಗಿವೆ.

9. **ಶ್ರೀದೇವಿಗೀತಾ** – ಇದು ದೇವೀಭಾಗವತದ ಏಳನೇ ಸ್ಕಂಧದಲ್ಲಿ 32ನೇ ಅಧ್ಯಾಯದಿಂದ 40ನೇ ಅಧ್ಯಾಯದವರೆಗಿನ ಒಂಬತ್ತು ಅಧ್ಯಾಯಗಳನ್ನೊಳಗೊಂಡಿದೆ; 433 ಶ್ಲೋಕಗಳಿವೆ. ಪರಬ್ರಹ್ಮರೂಪಿಣಿ ಪಾರ್ವತಿಯು ತನ್ನ ತಂದೆಯಾದ ಹಿಮವಂತನಿಗೆ ಮಾಡುವ ಜ್ಞಾನಬೋಧೆಯೇ ಈ ದೇವೀಗೀತೆ. ಮೊದಲ ಅಧ್ಯಾಯದಲ್ಲಿ ಶ್ರೀ ದೇವಿಯ ವ್ಯಷ್ಟಿ ಸಮಷ್ಟಿ ರೂಪಗಳ ವರ್ಣನೆ, ದೇವಿಯ ವಿರಾಟ್‌ರೂಪದ ದರ್ಶನಗಳೊಂದಿಗೆ ದೇವಕೃತ ತತ್ವವರ್ಣನೆ, ಜ್ಞಾನದ ಮೋಕ್ಷಹೇತುತ್ವವರ್ಣನೆ, ಮಂತ್ರಸಿದ್ಧಿಸಾಧನವರ್ಣನೆ, ಬ್ರಹ್ಮವಿದ್ಯೋಪದೇಶ, ಭಕ್ತಿ ಮಹಿಮೆ, ಶ್ರೀದೇವಿಯ ಮಹೋತ್ಸವಸ್ಥಾನವರ್ಣನೆ, ಪೂಜಾವರ್ಣನೆ, ಇವುಗಳಲ್ಲದೆ ಬಾಹ್ಯಪೂಜಾ ವಿಧಿಗಳನ್ನು ವಿವರಿಸಿದೆ. ಭಗವತಿಯ ಸ್ವತಃ ಸಿದ್ಧಶಕ್ತಿಯೆ 'ಮಾಯೆ'; ವೇದಾಂತದಲ್ಲಿ ಹೇಳುವ ಘಟಕಾಶಾದಿಗಳಂತೆ, ಸೂರ್ಯನು ವಸ್ತುಗಳ ಉಚ್ಚನೀಚ ಭಾವವನ್ನು ತೋರ್ಪಡಿಸುವಂತೆ ನಾನು ಉಪಾಧಿಭೇದದಿಂದಾಗಿ ಬೇರೆಯೇ ಆಗಿರುವೆನು. 'ತತ್ ತ್ವಮಸಿ', 'ತ್ವಮೇವಾಹಂ' – 'ಅವಿದ್ಯಾ ಜೀವಭೇದಸ್ಯ ಹೇತು:' "ಗುಣಾನಂ ವಾಸನಾಭೇದ:" ಜೀವೇಶ್ವರ ವಿಭಾಗತ್ವ ಕಲ್ಪಿತಾ ಮಾಯಯೈವ ತು' ಇತ್ಯಾದಿ ವಾಕ್ಯಗಳೊಂದಿಗೆ ಅದ್ವೈತತತ್ವವನ್ನು ವಿವರಿಸಿ ಅದ್ವೈತಾನುಭವಕ್ಕಾಗಿ' ತತ್ವಮಸಿ ಮೊದಲಾದ ಉಪನಿಷದ್ವಾಕ್ಯಗಳನ್ನು ಧ್ಯಾನಮಾಡಬೇಕೆಂದು ಬೋಧಿಸುತ್ತಾಳೆ. ಸತ್ವಯುಕ್ತ ಶುದ್ಧಮನಸ್ಸಿಗೆ ಮಾತ್ರ ಧ್ಯಾನಸಾಕ್ಷಾತ್ಕಾರಗಳು ಸಾಧ್ಯ, ವರ್ಣಾಶ್ರಮಧರ್ಮಗಳಿಗೆ ಅನುಸಾರವಾಗಿ ಸತ್ಕರ್ಮಾಚರಣೆಯಿಂದ ಮನಸ್ಸು ಶುದ್ಧವಾಗುವುದು, ಸ್ವಾರ್ಥ ಲೋಭ, ಪ್ರತ್ಯಾಶೆಗಳಿಲ್ಲದೆ ಸಮರ್ಪಣಭಾವವಿರಬೇಕು' ಎಂಬ ಉಪದೇಶಗಳೊಂದಿಗೆ ಅಷ್ಟಾಂಗಯೋಗಜ್ಞಾನ, ಕರ್ಮ–ಭಕ್ತಿಯೋಗಗಳು ಪ್ರತಿಪಾದಿಸಲ್ಪಟ್ಟಿವೆ.

10. **ಶ್ರೀ ಗುರುಗೀತಾ** – ಸ್ಕಂದ ಪುರಾಣದ ಉತ್ತರಖಂಡದಲ್ಲಿ 374 ಶ್ಲೋಕಗಳನ್ನು ಒಳಗೊಂಡಿದೆ. ಉಮಾಮಹೇಶ್ವರಸಂವಾದ ರೂಪದಲ್ಲಿದೆ. ಶಿವನು ಪಾರ್ವತಿಗೆ ಗುರುಮಹಿಮೆಯನ್ನು ತಿಳಿಸಿಕೊಡುವ ಅಧ್ಯಾತ್ಮ ವಿಷಯವನ್ನು ಒಳಗೊಂಡಿದೆ. ಸದ್ಗುರುವಿನ ಪ್ರಸನ್ನತೆಯ ಆತ್ಮಲಾಭಕ್ಕೆ ಮುಖ್ಯಸಾಧನ ಎಂಬುದಾಗಿ ಪ್ರತಿಪಾದಿಸುವ

"ನ ಸುಖಂ ವೇದಶಾಸ್ತ್ರೇಷು ನ ಸುಖಂ ಮಂತ್ರಯಂತ್ರಕೇ:" ।
ಗುರೋ: ಪ್ರಸಾದಾದನ್ಯತ್ರ ಸುಖಂ ನಾಸ್ತಿ ಮಹೀತಲೇ" ॥
ಯಸ್ಯದೇವೇ ಪರಾಭಕ್ತಿ: ಯಥಾ ದೇವೇ ತಥಾಗುರೌ ।
ತಸ್ಯೈತೇ ಕಥಿತಾಹ್ಯರ್ಥಾ: ಪ್ರಕಾಶಂತೇ ಮಹಾತ್ಮನ: ॥

ಇತ್ಯಾದಿ ಶ್ಲೋಕಗಳಲ್ಲಿ ಗುರುವಿನ ಮಹಿಮೆಯನ್ನು ಹೇಳಲಾಗಿದೆ. ಸಂಸಾರಸಾಗರದಿಂದ ಪಾರುಮಾಡುವ ಉದ್ಧರಣಮಂತ್ರವಾಗಿಯೂ ಮಹಾಭಯವನ್ನು ನಾಶಮಾಡುವ ಗುರುಮಂತ್ರವು ಶಿವಾನಂದಪ್ರಾಪ್ತಿಯ ಸಾಧನ; ಸದಾ ದುಂಬಿಯಂತೆಯೇ ಅನುಕರಣ ಮಾಡುತ್ತಿರುವ ಚಿಟ್ಟೆಯು

ಕಾಲಕ್ರಮದಲ್ಲಿ ದುಂಬಿಯೇ ಆಗಿಬಿಡುವಂತೆ ಜೀವನು ಪರಮಾತ್ಮ ಧ್ಯಾನದಿಂದ ಜ್ಞಾನಸೋಪಾನವನ್ನೇರಿ ಕೊನೆಗೆ ಪರಮಾತ್ಮಭಾವವನ್ನು ಹೊಂದುವನು. ಜ್ಞಾನಿಯಾದವನಿಗೆ ಆತ್ಮನ ನಿತ್ಯತ್ವವು ಗೋಚರವಾಗುವುದು. ಆಶಾಪಾಶ ವಿಮುಕ್ತನಾಗಿ ಜಿತೇಂದ್ರಿಯನಾಗಿ ಸದಾ ಗುರುಸೇವೆ ಧ್ಯಾನಗಳಿಂದ ಗುರುವಿನ ಅನುಗ್ರಹ ಪಡೆದ ಮಾನವನು "ಪ್ರಪಂಚವು ಮಿಥ್ಯೆ, ಸತ್ಯಸ್ವರೂಪವೆನಿಸುವ ಬ್ರಹ್ಮನೇ ನಾನು" ಎಂದು ತಿಳಿಯುತ್ತಾನೆ.

11. **ಯಮಗೀತೆ** – ವಿಷ್ಣುಪುರಾಣದ ತೃತೀಯಾಂಕದ 7ನೇ ಅಧ್ಯಾಯದಲ್ಲಿ ಬರುತ್ತದೆ. ಮೈತ್ರೇಯರ "ಗುರುಗಳೆ, ಸಕಲಜೀವಿಗಳು ಮರ್ತ್ಯದಲ್ಲಿ ಆಯಸ್ಸು ಕಳೆದ ಮೇಲೆ ಯಮನ ವಶಕ್ಕೆ ಒಳಗಾಗಿ ಕರ್ಮಫಲಕ್ಕೆ ತಕ್ಕಂತೆ ಯಮನು ಕೊಡುವ ಯಾತನೆಗಳನ್ನು ಅನುಭವಿಸಲೇಬೇಕಲ್ಲವೆ? ಯಮಬಾಧೆಗೆ ಒಳಗಾಗದಂತಿರಲು ಯಾವ ಕರ್ಮಗಳನ್ನಾಚರಿಸಬೇಕು? ಅದನ್ನು ತಿಳಿಸಿ" ಎಂಬುದಕ್ಕೆ ಉತ್ತರವಾಗಿ ಪರಾಶರರು ಇದೇ ಪ್ರಶ್ನೆಯನ್ನು ನಕುಲನು ಭೀಷ್ಮಪಿತಾಮಹರನ್ನು ಕುರಿತು ಕೇಳಿದ್ದನು. ಅವರು ಕಳಿಂಗ ದೇಶದ ಬ್ರಾಹ್ಮಣನು ಜನ್ಮಾಂತರ ಸ್ಮರಣೆಯುಳ್ಳ ಮುನಿಯು ಹೇಳಿದಂತೆಯೇ ಎಲ್ಲವೂ ನಡೆಯುವುದನ್ನು ಹೇಳಿದ್ದನು. ಭೀಷ್ಮರು ಆ ಬ್ರಾಹ್ಮಣನಿಗೆ ಮತ್ತೆ ಪ್ರಶ್ನಿಸಲಾಗಿ ಅವನು ಯಮನಿಗೂ ಅವನ ದೂತನಿಗೂ ನಡೆದ ಸಂವಾದದ ಕುರಿತು ತಿಳಿಸುತ್ತಾ "ಯಮನೂ ಶ್ರೀಹರಿಗೆ ಅಧೀನನು. ಅವನೂ ಅವನ ದೂತರೂ ಶ್ರೀಹರಿಯ ಭಕ್ತರನ್ನು ಮುಟ್ಟುವಂತಿಲ್ಲ. ಅವರು ಪ್ರಜ್ವಲಿಸುವ ಅಗ್ನಿಯಂತೆ ತೇಜಸ್ವಿಗಳು" ಎಂದು ಹೇಳಿದನು. ಅದಕ್ಕೆ ದೂತನು "ಶ್ರೀಹರಿಯ ಭಕ್ತರ ಸ್ವರೂಪವೇನು ಅದನ್ನು ತಿಳಿಸಿಕೊಡು" ಎಂದು ಕೇಳಿದನು. ಅದಕ್ಕೆ ಯಮನು 15 ಶ್ಲೋಕಗಳಲ್ಲಿ ಹರಿಭಕ್ತರ ಹಿರಿಮೆಯನ್ನು ತಿಳಿಸಿದ. 7ನೇ ಅಧ್ಯಾಯದ 20ರಿಂದ 34ನೇ ಶ್ಲೋಕವು ಯಮಗೀತವೆಂದು ತಿಳಿಸಲಾಗಿದೆ.

12. **ಶಿವಗೀತಾ** – ಪದ್ಮಪುರಾಣದಲ್ಲಿ 16 ಅಧ್ಯಾಯಗಳಲ್ಲಿ 784 ಶ್ಲೋಕಗಳನ್ನೊಳಗೊಂಡಿದೆ. ಇದರಲ್ಲಿ ಗುರುಪರಂಪರೆ, ಶ್ರೀರಾಮನಿಗೆ ಶಿವದೀಕ್ಷೆ, ಜಗತ್ತಿನ ಸೃಷ್ಟಿ ಸ್ಥಿತಿ, ಲಯಗಳ ಅನುಭವ, ಶಿವನ ವಿಶ್ವರೂಪದರ್ಶನ, ಶಿವನನ್ನು ಪರತತ್ವವೆಂಬ ನಿರೂಪಣೆ, ಪರತತ್ವ ಸಾಕ್ಷಾತ್ಕಾರವೇ ಮೋಕ್ಷ, ಅದು ಜ್ಞಾನದಿಂದಲೇ ಸಾಧ್ಯವೆಂದು ವರ್ಣಿಸಲ್ಪಟ್ಟಿದೆ. ಪಂಚಕೋಶಗಳು ಅವುಗಳ ಪರಸ್ಪರಾವಲಂಬನೆ, ಭಕ್ತಿಯ ಲಕ್ಷಣ, ಭಕ್ತಿಗೆ ಅಧಿಕಾರಿಯ ಲಕ್ಷಣ – ಇತ್ಯಾದಿಗಳ ವರ್ಣನೆ ಇದೆ. ಇವುಗಳಲ್ಲದೆ

13. ಗಣೇಶ ಪುರಾಣದಲ್ಲಿ **ಗಣೇಶಗೀತೆ**ಯೆಂಬ ಗೀತೆಯೂ ಇವೆ. ಮೇಲೆ ಹೇಳಿದ ಗೀತೆಗಳಲ್ಲದೇ ಮೂಲ ತಿಳಿಯದ **ರುದ್ರಗೀತಾ, ಜೀವನಮುಕ್ತಿಗೀತಾ, ಸೂತಗೀತ, ಕಪಿಲಗೀತಾ, ಋಭುಗೀತಾ, ಶ್ರುತಿಗೀತಾ, ಪಿಂಗಲಗೀತಾ, ಸೂರ್ಯಗೀತಾ, ದೇವಗೀತಮ್** ಇತ್ಯಾದಿ ಹೆಸರುಗಳು ಬೇರೆ ಬೇರೆ ಸಂದರ್ಭಗಳಲ್ಲಿ ಅಲ್ಲಲ್ಲಿ ಗೋಚರಿಸಿವೆ. ಪುರಾಣಗಣಿಗಳನ್ನು ಅಗೆದಷ್ಟೂ ಇನ್ನೂ ಇಂತಹ ಅನೇಕ ಅಮೂಲ್ಯ ವಿಷಯಗಳ ಲಾಭವಾಗುವುದು ನಿಶ್ಚಯ. ಅವುಗಳನ್ನರಿತ ವಿದ್ವಜ್ಜನರು ತಿಳಿಸಿದಲ್ಲಿ ನಾವು, ಆಕಾಂಕ್ಷಿಗಳು ಕೃತಜ್ಞರು.

❑

ಮಹಾಪುರಾಣ ಕನ್ನಡದಲ್ಲಿ ಪುರಾಣ ಸಾಹಿತ್ಯ

—ಪ್ರೊ॥ ಜಿ. ಅಶ್ವತ್ಥನಾರಾಯಣ

ಭಾರತೀಯ ಭಾಷೆಗಳಲ್ಲಿ ವೇದಪುರಾಣಶಾಸ್ತ್ರ (ಸ್ಮೃತಿ) ಇತಿಹಾಸಗಳು ಸಂಸ್ಕೃತ ಭಾಷೆಯಿಂದ ಅನುವಾದವಾಗಿರುವ ಗ್ರಂಥಗಳು ಅಸಂಖ್ಯಾತವಾಗಿವೆ. ಬಹುಶಃ ತೆಲುಗು, ಹಿಂದಿ, ಇಂಗ್ಲಿಷ್‌ಗಳಲ್ಲಿ ಬಂದಷ್ಟು ಪುರಾಣ ಸಾಹಿತ್ಯ ಇತರ ಭಾಷೆಗಳಲ್ಲಿ ಇರಲಾರದು ಎಂದು ನನ್ನೆಣಿಕೆ.

ಕನ್ನಡದಲ್ಲಿ 3 ಬಗೆ ಪುರಾಣಸಾಹಿತ್ಯವಿದೆ. 1) ಜೈನ ಪುರಾಣಸಾಹಿತ್ಯ 2) ವೈದಿಕ ಪುರಾಣಸಾಹಿತ್ಯ 3) ವೀರಶೈವ ಪುರಾಣಸಾಹಿತ್ಯ. ಈ ಪೈಕಿ ಸ್ವತಂತ್ರವಾಗಿ ಪುರಾಣ ರಚನೆಗಳಾಗಿರುವುದನ್ನು ಜೈನ, ವೀರಶೈವ ಕೃತಿಗಳಲ್ಲಿ ಕಾಣುತ್ತೇವೆ. ವೈದಿಕ ಸಾಹಿತ್ಯದಲ್ಲಿ ಸಂಸ್ಕೃತದ ಅನುವಾದಗಳನ್ನು ಕಾಣುತ್ತೇವೆ. ಅವುಗಳ ಸಂಗ್ರಹ ಇಲ್ಲಿ ನೀಡಲಾಗಿದೆ.

(24 ಜೂನ್ 2015ರಂದು ಭಾರತೀಯ ವಿದ್ಯಾ ಭವನ ಮತ್ತು ಇಸ್ಕಾನ್ ಏರ್ಪಡಿಸಿದ "ಮಹಾಪುರಾಣಗಳ ಸಂದೇಶ" ಸೆಮಿನಾರಿನಲ್ಲಿ ಓದಿದ ಭಾಷಣ)

ಭಾರತೀಯ ಭಾಷೆಗಳಲ್ಲಿ ವೇದಪುರಾಣಶಾಸ್ತ್ರ (ಸ್ಮೃತಿ) ಇತಿಹಾಸಗಳು ಸಂಸ್ಕೃತ ಭಾಷೆಯಿಂದ ಅನುವಾದವಾಗಿರುವ ಗ್ರಂಥಗಳು ಅಸಂಖ್ಯಾತವಾಗಿವೆ. ಬಹುಶಃ ತೆಲುಗು, ಹಿಂದಿ, ಇಂಗ್ಲಿಷ್‌ಗಳಲ್ಲಿ ಬಂದಷ್ಟು ಪುರಾಣ ಸಾಹಿತ್ಯ ಇತರ ಭಾಷೆಗಳಲ್ಲಿ ಇರಲಾರದು ಎಂದು ನನ್ನೆಣಿಕೆ.

ಕನ್ನಡದಲ್ಲಿ 3 ಬಗೆ ಪುರಾಣಸಾಹಿತ್ಯವಿದೆ. 1) ಜೈನ ಪುರಾಣಸಾಹಿತ್ಯ 2) ವೈದಿಕ ಪುರಾಣಸಾಹಿತ್ಯ 3) ವೀರಶೈವ ಪುರಾಣಸಾಹಿತ್ಯ. ಈ ಪೈಕಿ ಸ್ವತಂತ್ರವಾಗಿ ಪುರಾಣ ರಚನೆಗಳಾಗಿರುವುದನ್ನು ಜೈನ, ವೀರಶೈವ ಕೃತಿಗಳಲ್ಲಿ ಕಾಣುತ್ತೇವೆ. ವೈದಿಕ ಸಾಹಿತ್ಯದಲ್ಲಿ ಸಂಸ್ಕೃತದ ಅನುವಾದಗಳನ್ನು ಕಾಣುತ್ತೇವೆ.

ಆಧುನಿಕ ಕಾಲದ ಅಗತ್ಯಕ್ಕೆ ತಕ್ಕಂತೆ ಮೂಲಕೃತಿ ಅನುವಾದ, ಸಂಗ್ರಹ ಅನುವಾದ ಅಥವಾ ಸಂಕ್ಷಿಪ್ತ ಅನುವಾದ – ವಿದ್ಯಾನುವಾದ ವಿಮರ್ಶಾ ಗ್ರಂಥಗಳು, ಭಾಗಶಃ ಅನುವಾದಗಳನ್ನು ಕಾಣುತ್ತೇವೆ. ಕನ್ನಡದಲ್ಲಿ ಅನುವಾದಗಳಲ್ಲಿ ಸಮಗ್ರ ಮೂಲಾನುವಾದಗಳು, ಸಂಗ್ರಹಾನುವಾದಗಳು ಎಂದು ವರ್ಗ ಮಾಡಬಹುದು. ಪ್ರಕೃತ ಲೇಖನದಲ್ಲಿ ಜೈನ, ವೀರಶೈವ ಪುರಾಣಗಳನ್ನು ಅವು ಪ್ರತ್ಯೇಕ ಲೇಖನದ ವಿಷಯವೆಂದು ತಿಳಿದು ಪ್ರಸ್ತಾಪಿಸಿಲ್ಲ; ಕೇವಲ ವೈದಿಕ ಪುರಾಣಗಳನ್ನಷ್ಟೇ ಪರಿಶೀಲಿಸಿದೆ.

ಪುರಾಣ ಮತ್ತು ಸಾಹಿತ್ಯ–1

ಅನೇಕ ಕನ್ನಡ ಕೃತಿಗಳು ಸಾಹಿತ್ಯ ಕೃತಿಗಳಾಗಿರುತ್ತವೆ. ಆದರೆ ಪುರಾಣಾಧಾರಿತ ಕೃತಿಗಳಾಗಿರುತ್ತವೆ. ಉದಾಹರಣೆಗೆ ಪಂಪನ ಆದಿಪುರಾಣ ವಸ್ತುಮೂಲದ ದೃಷ್ಟಿಯಿಂದ ಕಾವ್ಯಸಾಹಿತ್ಯ ಕೃತಿಯಾದರೂ, ಅದರ ಮೂಲ ಜಿನಸೇನಾಚಾರ್ಯ–ಗುಣಭದ್ರಾಚಾರ್ಯರ ಮಹಾಪುರಾಣವೇ ಆಗಿದೆ. ಜೈನ ಚಂಪೂ ಕಾವ್ಯಗಳಿಗೆ (ಪೊನ್ನ, ರನ್ನ, ಜನ್ನ ಮೊದಲಾದ ನಾನಾ ಕವಿಗಳ ಕಾವ್ಯಗಳಿಗೆ) ಆಕರ ಮಹಾಪುರಾಣ. ಈ ರೀತಿಯ ಮೂಲಪುರಾಣಕೃತಿಯನ್ನು ಸ್ಥೂಲಪಠ್ಯವೆಂದೂ, ಪುರಾಣಾಧಾರಿತ ಕಾವ್ಯ, ವಿಮರ್ಶೆ ಇತ್ಯಾದಿಯನ್ನು ಸೂಕ್ಷ್ಮ ಪಠ್ಯವನ್ನು ಸೂಕ್ಷ್ಮಪಠ್ಯವೆಂದು ಮಲ್ಲೇಪುರಂ ವೆಂಕಟೇಶ್ ಕರೆದಿದ್ದಾರೆ. (ಪುಟ 1, ಸಾಹಿತ್ಯ ಮತ್ತು ಪುರಾಣ).

ಸಾಹಿತ್ಯಕೃತಿಗಳು ಪುರಾಣದಿಂದ ಪ್ರತ್ಯೇಕವಾಗಿ ಕಂಡರೂ "ಮೇಲುನೋಟಕ್ಕೆ ಪುರಾಣದ ನೆಲೆಗಳ ಆಶಯ ಇಲ್ಲವೆಂಬಂತೆ ಕಂಡರೂ ಅದರ ಪ್ರಭಾವದಿಂದ ಕೃತಿಕಾರ ದೂರ ಹೋಗಲಾರ. ಸಾಂಸ್ಕೃತಿಕವಾಗಿ ಪುರಾಣದಿಂದ ಜಿಗಿತ ಪಡೆಯುವುದೂ ಅದರೊಳಗೆ ಬೇರೆ ಬೇರೆ ಆಶಯಗಳನ್ನು ಹೊಂದುತ್ತ ಹೋಗುವುದೂ ಅನಿವಾರ್ಯ ಮಾತ್ರವಲ್ಲ ಅದು ಕಾಲವಶವೂ ಹೌದು; ಕೃತಿವಶವೂ ಹೌದು; ಪುರಾಣ ಮತ್ತು ಸಾಹಿತ್ಯಗಳ ಅಂತರ್‌ಸಂಬಂಧದ ಈ ಬಗೆಯ ಪ್ರಕ್ರಿಯೆ, ವ್ಯಾಖ್ಯಾನ, ವಿವರಣೆ, ವಿಶ್ಲೇಷಣೆಗಳು ವಿವಿಧ ಹಂತಗಳಲ್ಲಿ ಕೃತಿಯಿಂದ ಕೃತಿಗೆ, ಕಾಲದಿಂದ ಕಾಲಕ್ಕೆ ಬದಲಾಗುತ್ತ ಹೋಗುತ್ತವೆ". ಇದರ ಫಲವಾಗಿ ಒಬ್ಬ ತಾಯಿಗೆ ಭಿನ್ನ ಭಿನ್ನ ವ್ಯಕ್ತಿತ್ವದ ಹತ್ತಾರು ಮಕ್ಕಳಿರುವಂತೆ, "ಒಂದು ರಾಮಾಯಣದಿಂದ ಸಾವಿರಾರು ರಾಮಾಯಣಗಳು, ಒಂದು ಭಾರತದಿಂದ ಸಾವಿರಾರು ಕೃತಿಗಳು, ಒಂದು ಭಾಗವತ ಪುರಾಣದಿಂದ ನೂರಾರು ಕೃತಿಗಳು" ಹೊರಬಂದಿವೆ.

ಈ ಹಿನ್ನೆಲೆಯಲ್ಲಿ ಶುದ್ಧವಾಗಿ ಕೇವಲ ಮೂಲ ಪುರಾಣ ಕೃತಿಗಳನ್ನು – ಸ್ಥೂಲ ಪಠ್ಯವನ್ನಷ್ಟೇ ಅಲ್ಲದೆ ಅವುಗಳ ಆಧಾರಿತ ಸಾಹಿತ್ಯ ಕೃತಿಗಳನ್ನು ಸೂಕ್ಷ್ಮ ಪಠ್ಯಗಳ ಅವಲೋಕನವನ್ನು ಮಾಡಬೇಕಾಗುತ್ತದೆ.

ಪುರಾಣ ಮತ್ತು ಸಾಹಿತ್ಯ–2

ಇಲ್ಲಿ ಇನ್ನೊಂದು ಅಂಶವನ್ನು ಗಮನಿಸಬೇಕಾಗುತ್ತದೆ. ಮೂಲಪುರಾಣಸ್ಥೂಲಪಠ್ಯದಿಂದ ನಿರ್ಮಿತವಾದ ಸಾಹಿತ್ಯಕೃತಿ ಅಥವಾ ಅನುವಾದವನ್ನು ಆಧರಿಸಿ ನೂರಾರು ಪರಿಚಯ ಗ್ರಂಥ, ವಿಮರ್ಶಾ

ಗ್ರಂಥ, ಕಾವ್ಯರೂಪದ ಗ್ರಂಥ, ನಾಟಕರೂಪ ಇತ್ಯಾದಿ ಗ್ರಂಥಗಳು ನವೀನರೂಪದ ಪುರಾಣಸಾಹಿತ್ಯದಲ್ಲಿ ಕಂಡುಬರುತ್ತದೆ. ಆಧುನಿಕ ಕಾಲದಲ್ಲಿ ಈ ಬಗೆಯ ಗ್ರಂಥಗಳೇ ಹೆಚ್ಚಾಗಿವೆ. ಉದಾಹರಣೆಗೆ, ವಾಲ್ಮೀಕಿ ರಾಮಾಯಣದ ಕನ್ನಡಾನುವಾದ ಆಧರಿಸಿ ಹೊರಬಂದ ನಾನಾ ಕೃತಿಗಳು, ಮಹಾಭಾರತದ ಕನ್ನಡಾನುವಾದ ಗದುಗಿನ ಭಾರತವನ್ನು ಆಧರಿಸಿದ ನೂರಾರು ಕೃತಿಗಳನ್ನು ಕಾಣುತ್ತೇವೆ. ಉದಾಹರಣೆಗೆ ಸ್ಕಂದಪುರಾಣ ಮೊದಲಾದ ಪುರಾಣಗಳ ಕನ್ನಡಾನುವಾದ ಆಧರಿಸಿ, ತೀರ್ಥಕ್ಷೇತ್ರ ಮಹಿಮೆ ಗ್ರಂಥಗಳು, ಸ್ತೋತ್ರ ಗ್ರಂಥಗಳು, ಕಥಾ–ಕಾದಂಬರಿ ಗ್ರಂಥಗಳು ಬೇಕಾದಷ್ಟು ಬಂದಿವೆ. ಉದಾಹರಣೆಗೆ ಭಾಗವತವನ್ನು ಆಧರಿಸಿದ ನೂರಾರು ಕಾದಂಬರಿಗಳು, ನಾಟಕಗಳು, ಸಂಗ್ರಹಾನುವಾದಗಳು ಕನ್ನಡದಲ್ಲಿವೆ. ಈ ಬಗೆಯಲ್ಲಿ ಸೂಕ್ಷ್ಮಪಠ್ಯಗಳನ್ನು ಆಧರಿಸಿದ ಕೃತಿಗಳನ್ನು ನವೀನಸೂಕ್ಷ್ಮ ಪಠ್ಯಗಳು ಎಂದು ಕರೆಯಬಹುದು. ಕನ್ನಡದಲ್ಲಿ ಈ ಬಗೆಯ ನವೀನ ಸೂಕ್ಷ್ಮ ಪಠ್ಯಗಳು ಸಾಕಷ್ಟಿವೆ. ಉದಾಹರಣೆಗೆ ಯೋಗವಾಶಿಷ್ಠ ರಾಮಾಯಣ ಮೂಲ ಸ್ಥೂಲಪಠ್ಯ ಕನ್ನಡಕ್ಕೆ ಅನುವಾದವಾಗಿದೆ. ದೇವುಡು ಅವರಿಂದ ಅದರ ಸಂಗ್ರಹರೂಪ, ಅದರಲ್ಲಿ ಬರುವ ಚೂಡಾಲೋಪಾಖ್ಯಾನ ಕುರಿತ ನಾಟಕ (ಹೊಸಕೆರೆ ಚಿದಂಬರಯ್ಯ) ಕಾದಂಬರಿರೂಪ (ಜನಾರ್ದನಗುರ್ಕಾರ್) ಇತ್ಯಾದಿ ಹತ್ತಾರು ಯೋಗವಾಶಿಷ್ಠ ಆಧರಿಸಿದ ಕೃತಿಗಳು ಕನ್ನಡಕ್ಕೆ ಬಂದಿವೆ. ಈ ರೀತಿ ಬಂದ ಕೃತಿಗಳಲ್ಲಿ ಭಾಗವತ ಪುರಾಣ ಮತ್ತು ದೇವೀಪುರಾಣ, ಶಿವಪುರಾಣ ಕೃತಿಗಳು ನವೀನಸೂಕ್ಷ್ಮ ಪಠ್ಯ (ಮೂಲ ಕೃತಿಯನ್ನು ಅನುವಾದವಾದ ಕನ್ನಡ ಕೃತಿಯನ್ನು ಆಧರಿಸಿದ ಸಾಹಿತ್ಯ ಕೃತಿಗಳು) ಕನ್ನಡದಲ್ಲಿ ಅಧಿಕವಾಗಿವೆ. ಆದರೆ ಮೂಲ ರಾಮಾಯಣವನ್ನು ಆಧರಿಸಿ ಕನ್ನಡದಲ್ಲಿ 1500 ಕೃತಿಗಳು ಬಂದಿವೆ ಇನ್ನಾವ ಕೃತಿಯನ್ನು ಆಧರಿಸಿ ಈ ಪ್ರಮಾಣದಲ್ಲಿ ಕನ್ನಡದಲ್ಲಿ ಸಾಹಿತ್ಯಕೃತಿಗಳು ಬಂದಿಲ್ಲ.

ವಿಮರ್ಶಾ ಗ್ರಂಥಗಳು

ಶ್ರೀವೇದವ್ಯಾಸ ಮಹರ್ಷಿ ದಿವ್ಯ ಚರಿತ್ರೆ

ಕನ್ನಡದಲ್ಲಿ ಪುರಾಣಗಳನ್ನು ಕುರಿತು ಬಂದಿರುವ ಡಾ.ವೇದವ್ಯಾಸ ಅನುವಾದಿತ ವಿಮರ್ಶಾ ಗ್ರಂಥಗಳಲ್ಲಿ ವ್ಯಾಸರಾಯರ ಶ್ರೀಕೃಷ್ಣ ಚರಿತ್ರೆ ಬಿಟ್ಟರೆ ಈ ಗ್ರಂಥವೇ ಮುಖ್ಯವಾದುದು. ಈ ಸಂಶೋಧನಾ ಗ್ರಂಥದಲ್ಲಿ ವ್ಯಾಸರ ಜೀವನವನ್ನು ಅವರು ರಚಿಸಿದ ಕೃತಿಗಳ ಬಗ್ಗೆ ವಿಮರ್ಶಾತ್ಮಕ ಅಧ್ಯಾಯವಿದೆ. ಅಧ್ಯಾಯ 22ರಿಂದ 26ರವರೆಗೆ ವಿಸ್ತಾರವಾಗಿ 18 ಪುರಾಣಗಳ ಬಗ್ಗೆ ಚರ್ಚೆಯಿದೆ. ಪುರಾಣಗಳೆಷ್ಟು? ಎಂಬುದರ ಬಗ್ಗೆ 18 ಮಹಾಪುರಾಣಗಳನ್ನು 18 ಉಪಪುರಾಣಗಳನ್ನು ಸಾಮಾನ್ಯವಾಗಿ ಹೇಳಲಾಗಿದೆ. ಆದರೆ ಇವರು ಇವುಗಳ ಜೊತೆಗೆ ಲಘುಪುರಾಣಗಳು, ಅತಿಪುರಾಣಗಳು, ಖಿಲಪುರಾಣಗಳು, ಇತರ ಪುರಾಣಗಳು ಸೇರಿ 108 ಪುರಾಣಗಳಿವೆ ಎನ್ನುತ್ತಾರೆ. 18 ಪುರಾಣಗಳ ವಸ್ತುವನ್ನು ಕುರಿತು ವಿವರಿಸಿದ್ದಾರೆ. ಅವುಗಳ ಮುಖ್ಯಾಂಶಗಳು ಹೀಗಿವೆ.

1. **ಪದ್ಮಪುರಾಣ :** 55,000 ಶ್ಲೋಕಗಳಲ್ಲಿ ಸೃಷ್ಟಿಯ ಚರಿತ್ರೆ, ವಿಷ್ಣುವಿನ ಮಹಿಮೆ, ಬ್ರಹ್ಮನ ಸೃಷ್ಟಿ, ವಿಷ್ಣುಸಹಸ್ರನಾಮದ ಮಹಿಮೆ, ರಾಮಾಯಣದ ಚರಿತ್ರೆ ಮುಂತಾದ ವಿಷಯಗಳನ್ನು 6 ಖಂಡಗಳಲ್ಲಿ ವರ್ಣಿಸಿದೆ.

2. **ಬ್ರಹ್ಮಪುರಾಣ :** 10,000 ಶ್ಲೋಕಗಳಲ್ಲಿ ಕೃಷ್ಣಚರಿತ್ರೆ, ಸಾಂಖ್ಯಯೋಗ ವಿವರಣೆಗಳು, ಯುಗಾಂತದ ವಿಶೇಷಗಳು, ಅನೇಕ ಪುಣ್ಯಕ್ಷೇತ್ರಗಳ ವರ್ಣನೆಗಳು ಇಲ್ಲಿಯ ವಿಶೇಷಗಳು.

3. **ವಿಷ್ಣು ಪುರಾಣ :** ಪರಾಶರಕೃತ ವಿಷ್ಣುಪುರಾಣದಿಂದ ಬೇರೆಯಾದ ವ್ಯಾಸಕೃತ ವಿಷ್ಣುಪುರಾಣವಿದು. ನೀಲವರಾಹಕಲ್ಪದ ವರಾಹಾವತಾರ ಕಥೆ – ಭಾಗವತದಲ್ಲಿ ಬರುವ ಶ್ವೇತವರಾಹ ಕಲ್ಪದ ವರಾಹಾವತಾರದ ಕಥೆಗಿಂತ ಭಿನ್ನವಾದದ್ದು. 18 ಕಲ್ಪಗಳ ಕಥೆ. ಸೂರ್ಯವಂಶರಾಜರ ಕಥೆ, ಕಲ್ಕಿ ಅವತಾರದ ವಿಷಯ ಈ ಪುರಾಣದಲ್ಲಿದೆ.

4. **ವಾಯು ಪುರಾಣ :** ಪ್ರಾಚೀನವಾದ ಚಾರಿತ್ರಿಕ ಸಂಗತಿಗಳಿರುವ ಪುರಾಣವಿದು. 24000 ಶ್ಲೋಕಗಳ ಈ ಗ್ರಂಥದಲ್ಲಿ ಹೇಳಿದ ವಿಷಯಗಳು ಮಹಾಭಾರತದಲ್ಲಿ ಬಂದಿದೆ. ಇದೇ ಹೆಸರಿನ ಉಪಪುರಾಣವೂ ಇದೆ. ವಾಯುಪುರಾಣದಲ್ಲಿ ಪ್ರಾಚೀನರಾಜರ

ಚರಿತ್ರೆಯ ವಿವರಗಳು ಅಧಿಕವಾಗಿದೆ. ಜ್ಯೋತಿಷ್ಯ, ಸಂಗೀತ ಅಲಂಕಾರಶಾಸ್ತ್ರ, ಶ್ರಾದ್ಧ ವಿಷಯಗಳೂ ವರ್ಣಿತವಾಗಿವೆ.

5. **ಶ್ರೀಮದ್ಭಾಗವತ** : ಮೋಕ್ಷ ವಿಷಯ, ಭಕ್ತಿ ಉಪಾಸನೆಯ ಭಾಗವತ ಧರ್ಮ, ಕೃಷ್ಣ ಕಥೆ ಪ್ರಧಾನವಾಗಿ ಬಂದಿದೆ.

6. **ನಾರದ ಪುರಾಣ** : 25000 ಶ್ಲೋಕಗಳಲ್ಲಿ ಸೃಷ್ಟಿ ಚರಿತ್ರೆ, ಯೋಗಶಾಸ್ತ್ರ ಸಂಗೀತ ವಿಚಾರ, ಸಾಮವೇದ ಸಾರ, ಮಾನವ ಜನನ ರೀತಿ ಮುಂತಾದ ವಿಷಯಗಳು ನಿರೂಪಿತವಾಗಿವೆ.

7. **ಮಾರ್ಕಂಡೇಯ ಪುರಾಣ** : 8000 ಶ್ಲೋಕಗಳ ಈ ಪುರಾಣದಲ್ಲಿ ಸೃಷ್ಟಿ ಚರಿತ್ರೆ, ಜ್ಯೋತಿಷ್ಯ, ವೇದ, ನಿರುಕ್ತ, ವ್ಯಾಕರಣ ವಿಷಯಗಳನ್ನು ಏಕಾದಶಿ ಮಹಾತ್ಮೆ, ರಾಧಾಕೃಷ್ಣರ ತತ್ವ, ದತ್ತಾತ್ರೇಯ ಮಹಿಮೆ, ದೇವಿಸಪ್ತಶತಿ ಇತ್ಯಾದಿ ಅನೇಕ ಮಂತ್ರಶಾಸ್ತ್ರ ವಿಷಯಗಳು ಈ ಪುರಾಣದಲ್ಲಿದೆ.

8. **ಅಗ್ನಿ ಪುರಾಣ** : 15,400 ಶ್ಲೋಕಗಳ ಈ ಪುರಾಣದಲ್ಲಿ ವಿಶೇಷವಾಗಿ ಮಂತ್ರಗಳು, ಉಪಾಸನಾ ವಿಧಾನಗಳು, ಪ್ರಾಚೀನಶಾಸ್ತ್ರಗಳ ವಿಚಾರ, ಅಶ್ವಶಾಸ್ತ್ರ, ಆಯುರ್ವೇದ, ಛಂದಸ್ಸು, ವಾಸ್ತು ವಿಷಯಗಳು ಮುಂತಾದ ಅನೇಕ ವಿಷಯಗಳಿಂದ ವಿಶ್ವಕೋಶ ಮಾದರಿಯ ಪುರಾಣವಾಗಿದೆ.

9. **ಭವಿಷ್ಯ ಪುರಾಣ** : 14,500 ಶ್ಲೋಕಗಳಲ್ಲಿ ಸೂರ್ಯನ ಮಹಿಮೆ ಮುಖ್ಯವಾಗಿ ನಮ್ಮ ದೇಶದ ಭವಿಷ್ಯತ್ ಚರಿತ್ರೆಯನ್ನು ಹೇಳಿದೆ.

10. **ಬ್ರಹ್ಮವೈವರ್ತ ಪುರಾಣ** : 18000 ಶ್ಲೋಕಗಳಲ್ಲಿ ಗೋಲೋಕವಾಸಿಯಾದ ಶ್ರೀಕೃಷ್ಣನ ಮಹಿಮೆ, ಗೋಪಿಕೆಯರ ಚರಿತ್ರೆ, ಬ್ರಹ್ಮಸೃಷ್ಟಿ, ನಾರದರ ಜನ್ಮ, ನರಕಜೀವಿಗಳ ರೋಗಗಳು, ಗಣೇಶ ಮಹಿಮೆ ಮೊದಲಾದ ಸಂಗತಿಗಳು ಈ ಪುರಾಣದಲ್ಲಿದೆ.

11. **ಲಿಂಗಪುರಾಣ** : ದ್ವಾದಶ ಜ್ಯೋತಿರ್ಲಿಂಗಗಳ ವಿಶೇಷ ವರ್ಣನೆ, ಶಿಲಾದ, ನಂದೀಶ್ವರ, ಧ್ರುವನ ಚರಿತ್ರೆಗಳು ಅಂದವಾಗಿ ಚಿತ್ರಿತವಾಗಿದೆ. ಈ ಕಥೆಗಳಲ್ಲಿ ಕಥನರೀತಿ ಬೇರೆ ಪುರಾಣಗಳಿಗಿಂತ ವಿಭಿನ್ನವಾಗಿ ಬಂದಿದೆ.

12. **ವರಾಹ ಪುರಾಣ** : 25000 ಶ್ಲೋಕಗಳಲ್ಲಿ ನಾನಾ ಬಗೆಯ ಕಥೆಗಳಿವೆ. ದುರ್ಗಾದೇವಿಯ ಜನನ, ಧರ್ಮದ ದಿಕ್ಕುಗಳು, ಗಣಪತಿ–ಗೌರಿ ಕಥೆಗಳು, ತಿಥಿಗಳ ಮಹಿಮೆ, ಗೋ–ಮಹಿಮೆ, ಪರಾನ್ನ ಭೋಜನದ ದೋಷಗಳು ಮುಂತಾದ ಉಪಾಖ್ಯಾನಗಳು ಈ ಪುರಾಣದಲ್ಲಿ ವರ್ಣಿತವಾಗಿದೆ. ಮುಖ್ಯವಾಗಿ ಮಹಾವಿಷ್ಣು ವರಾಹ ಅವತಾರವನ್ನು ಎರಡು ಬಾರಿ ಎತ್ತಿದ್ದು ಎರಡನೇ ಬಾರಿ ಶ್ವೇತವರಾಹಕಲ್ಪದ ವರಾಹನ ಕಥೆ ಈ ಪುರಾಣದಲ್ಲಿದೆ.

13. **ಸ್ಕಂದ ಪುರಾಣ** : ಗಾತ್ರದಲ್ಲಿ 36000 ಶ್ಲೋಕಗಳಿಂದ ಕೂಡಿದ ಬೃಹತ್ ಪುರಾಣವಾಗಿದೆ. ಪ್ರಾಚೀನ ಕ್ಷೇತ್ರಗಳ ಮಹಾತ್ಮೆ ಈ ಪುರಾಣದ ವೈಶಿಷ್ಟ್ಯವಾಗಿದೆ. ವೆಂಕಟಾಚಲ ಮಹಾತ್ಮೆ, ಬದರಿಕಾಶ್ರಮ ವರ್ಣನೆ, ಜಗನ್ನಾಥ ಕ್ಷೇತ್ರದ ಮಹಾತ್ಮೆ; ತಿರುಪತಿ, ಪುರಿ, ಅರುಣಾಚಲ ಮೊದಲಾದ ಕ್ಷೇತ್ರಗಳ ವಿವರಣೆಗಳಿವೆ. ಕುಮಾರಸ್ವಾಮಿಯ ಕಥನ 6 ಬಗೆಗಳಲ್ಲಿ ವಿವರಿಸಲಾಗಿದೆ. ಪ್ರಾಚೀನಶಾಸ್ತ್ರಗಳ ವಿಷಯಗಳಿಂದ ಸ್ಥಳಪುರಾಣಗಳ ವಿಷಯಗಳನ್ನು ಒಳಗೊಂಡ ಈ ಪುರಾಣದಲ್ಲಿ ಶಿವ–ವಿಷ್ಣು ಸಮನ್ವಯ ಕಥಾವಸ್ತು ಇರುವುದು ವೈಶಿಷ್ಟ್ಯವಾಗಿದೆ.

14. **ವಾಮನ ಪುರಾಣ** : 10,000 ಶ್ಲೋಕಗಳಲ್ಲಿ ರಾಶಿ, ನಕ್ಷತ್ರಗಳ ವಿಚಾರ ಮುಂತಾದ ಜ್ಯೋತಿಷ್ಯದ ವಿಚಾರಗಳು, ಪ್ರಹ್ಲಾದ, ಕುಮಾರಸ್ವಾಮಿ, ಗಣಪತಿ ಕಥಾ ವಿಷಯಗಳು ವರ್ಣಿತವಾಗಿವೆ. ವಿಷ್ಣು ವಾಮನಾವತಾರಿಯಾಗಿ ಬಲಿಯನ್ನು ಪಾತಾಳಕ್ಕೆ ತುಳಿದ ಕಥೆ ವಿವರವಾಗಿದೆ.

15. **ಕೂರ್ಮ ಪುರಾಣ** : 15000 ಶ್ಲೋಕಗಳಲ್ಲಿ 4 ಸಂಹಿತೆಗಳಲ್ಲಿ ಅವತಾರಗಳ ಚರಿತ್ರೆ, ಸೂರ್ಯಹೃದಯ ಸ್ತೋತ್ರ, ದುರ್ಗಾ ಮಹಾತ್ಮೆ, ವರ್ಣಾಶ್ರಮ ಧರ್ಮ, ನರಕದ ವರ್ಣನೆಗಳು ಮೊದಲಾದ ಸಂಗತಿಗಳು ಈ ಪುರಾಣದಲ್ಲಿದೆ.

16. **ಮತ್ಸ್ಯ ಪುರಾಣ** : 14000 ಶ್ಲೋಕಗಳ ಈ ಪುರಾಣದಲ್ಲಿ ಜಲಪ್ರಳಯಕಾಲದ ವೈವಸ್ವತ ಮನುವಿನ ಮಹಾತ್ಮೆ ಮುಖ್ಯಕಥೆಯಾಗಿದೆ. ಜ್ಯೋತಿಷ್ಯ, ಗಣಿತ, ನಕ್ಷತ್ರ, ಗ್ರಹಣಗಳು ಸಪ್ತ ಋಷಿಗಳ ಪರಶುರಾಮನ ವಂಶಗಳ ವರ್ಣನೆ ಮುಖ್ಯವಾಗಿ ಬಂದಿದೆ. ಈಶ್ವರಗೀತೆ, ವ್ಯಾಸಗೀತೆ, ಸಂಧ್ಯಾವಂದನ ವಿಧಿ ಮೊದಲಾದವು ಇಲ್ಲಿ ಬಂದಿರುವುದು ಸಾಧಕರಿಗೆ ಉಪಯುಕ್ತವಾಗಿದೆ. ವಿಶ್ವಕೋಶದ ಮಾದರಿ ಪುರಾಣಗಳಲ್ಲಿ ಇದೊಂದು.

17. **ಗರುಡ ಪುರಾಣ** : 19000 ಶ್ಲೋಕಗಳ ಈ ಪುರಾಣವನ್ನು ಯಾರಾದರೂ ಮರಣಿಸಿದಾಗ ಪಠಿಸುವ ಪುರಾಣವಾಗಿದೆ. ಸ್ವರ್ಗ-ನರಕಗಳ ವರ್ಣನೆ, ಮೋಕ್ಷಧರ್ಮವರ್ಣನೆ, ಅನೇಕ ಶಾಂತಿ ಕರ್ಮಗಳು ಮೊದಲಾದ ವಿವರಗಳಿಂದ ಮರಣೋತ್ತರ ಸಾಹಿತ್ಯದ ಪುರಾಣವಾಗಿದೆ. ಇದರಲ್ಲಿ ಇತರ ಅನೇಕ ಉಪಯುಕ್ತ ಸಂಗತಿಗಳು ಇವೆ.

18. **ಬ್ರಹ್ಮಾಂಡ ಪುರಾಣ** : ಕಾಲಮಾನದ ವಿವರಗಳು, ಸೃಷ್ಟಿ-ಪ್ರಳಯಗಳು, ಬ್ರಹ್ಮನ ಹಗಲು-ರಾತ್ರಿಗಳು, 4 ಯುಗಗಳ ವಿವರ, ಗಣಿತ, ಸಂಧ್ಯಾವಂದನೆ, ಪ್ರಾಣಾಯಾಮದ ವಿವರಗಳು ಹೀಗೆ ಸೃಷ್ಟಿಯ ಕಥೆ ಕಾಲದ ಕಥೆ ವಿಶೇಷವಾಗಿ ಈ ಪುರಾಣದಲ್ಲಿ ವರ್ಣಿತವಾಗಿದೆ.

ಈ ಪುರಾಣಗಳ ಪೈಕಿ 'ಭವಿಷ್ಯ ಪುರಾಣ' ತುಂಬ ಕುತೂಹಲಕಾರಿಯಾದುದು. ಭವಿಷ್ಯಕಾಲದ ಘಟನೆಗಳನ್ನು ಹೇಳುವ ಗ್ರಂಥಗಳಲ್ಲಿ ವಿಶಿಷ್ಟವಾದುದು. ಈ ಬಗ್ಗೆ ವೇದವ್ಯಾಸ ಎಂಬ ಐಎಎಸ್ ಅಧಿಕಾರಿ ವಿಶೇಷ ಅಧ್ಯಯನ ಮಾಡಿದ್ದಾರೆ (ಪುಟ 232). ಕಾಲಜ್ಞಾನದ ಗ್ರಂಥಗಳು ಸಂಸ್ಕೃತ, ತೆಲುಗು, ತಮಿಳು, ಕನ್ನಡ ಮೊದಲಾದ ಭಾಷೆಗಳಲ್ಲಿ ಹಲವಾರಿವೆ. ಇಂಗ್ಲಿಷಿನಲ್ಲಿ ನೋಸ್ಟ್ರಾಡಾಮ್ಸ್‌ನ ಭವಿಷ್ಯತ್ ರಚನೆಗಳು, ವೀರಬ್ರಹ್ಮೇಂದ್ರಯೋಗಿಯ ಕಾಲಜ್ಞಾನ, ಶ್ರೀವಿದ್ಯಾರಣ್ಯ ಕಾಲಜ್ಞಾನ (ಅಮುದ್ರಿತ), ಸರ್ವಜ್ಞನ ಕಾಲಜ್ಞಾನ (ಕನ್ನಡ) ಮೊದಲಾದ ಅನೇಕ ಗ್ರಂಥಗಳಿವೆ. ಕುತೂಹಲಕಾರಿ ವಿಷಯಗಳು ಭವಿಷ್ಯಪುರಾಣದಲ್ಲಿರುವುದಕ್ಕೆ ಒಂದು ಚಿಕ್ಕ ಉದಾಹರಣೆ ಇಂಗ್ಲಿಷ್ ಭಾಷೆ ಬಗ್ಗೆ ಹೇಳುವ ಮಾತಿದು:

ಪೀಠಿಕೆ :

ಕನ್ನಡದಲ್ಲಿ ಪುರಾಣ ಸಾಹಿತ್ಯ ಸಾಕಷ್ಟಿದೆ. ಜಯಚಾಮರಾಜೇಂದ್ರ ಗ್ರಂಥಮಾಲೆಯಲ್ಲಿ ಅಷ್ಟಾದಶಪುರಾಣಗಳು ಉಪಪುರಾಣಗಳು 20ಕ್ಕೂ ಹೆಚ್ಚಿನವು ಮೂಲ ಮತ್ತು ಅನುವಾದದೊಡನೆ ಹತ್ತಾರು ಸಂಪುಟಗಳಲ್ಲಿ ಪ್ರಕಟವಾಗಿವೆ. ಇವುಗಳಲ್ಲಿ ಹತ್ತಕ್ಕೂ ಹೆಚ್ಚು ಪುರಾಣಗಳನ್ನು ಶ್ರೀವಿದ್ಯಾ ಗಣಪತಿ ಪ್ರಕಾಶನ ಮರುಮುದ್ರಿಸಿದೆ. ಪಂಡರೀನಾಥಾಚಾರ್ಯ ಗಲಗಲಿ ಅವರು ಪ್ರಸಿದ್ಧ ವಿದ್ವಾಂಸರು. ಇವರು ಕನ್ನಡ-ಸಂಸ್ಕೃತ ಎರಡರಲ್ಲೂ ಉಜ್ವಲಶೈಲಿಯ ಬರಹಗಾರರು. ಇವರು 18 ಪುರಾಣಗಳ ಸಂಕ್ಷಿಪ್ತ ಗದ್ಯಾನುವಾದಗಳನ್ನು ಪ್ರಕಟಿಸಿದ್ದಾರೆ. ಸೋದರಭಾವಾಶೈಲಿ ಇವರ ಕೃತಿಗಳಲ್ಲಿ ಎದ್ದು ಕಾಣುತ್ತದೆ. ಸಂಕ್ಷಿಪ್ತವಾಗಿ 18 ಪುರಾಣಗಳ ಪರಿಚಯ ಮಾಡಿಸುವ ಏಕಾಂಗ ಸಾಹಸ ಇವರದಾಗಿದೆ.

ಪುರಾಣಗಳ ಸಮಗ್ರಾನುವಾದ ಸಂಗ್ರಹಾನುವಾದ ಒಂದು ಕಡೆ ಆದರೆ, ವಿಮರ್ಶಾಕೃತಿಗಳು ಇನ್ನೊಂದೆಡೆ ಬಂದಿವೆ. ಶ್ರೀಕೃಷ್ಣ ಚರಿತೆ, ಪುರಾಣದಲ್ಲೇನಿದೆ? ಇತಿಹಾಸ ಮತ್ತು ಪುರಾಣ. ಕನ್ನಡ ಸಾಹಿತ್ಯದಲ್ಲಿ ಪುರಾಣಪ್ರಜ್ಞೆ ಮೊದಲಾದ ಗ್ರಂಥಗಳು ವೈಚಾರಿಕವಾಗಿ ಪುರಾಣಗಳನ್ನು ಪರಿಶೀಲಿಸಿವೆ. ಇನ್ನು ಕಥೆ-ಕಾದಂಬರಿ-ನಾಟಕ-ಕವಿತೆಗಳು ಅಪಾರವಾಗಿವೆ. ಈ ಬರಹದಲ್ಲಿ ಕನ್ನಡದಲ್ಲಿರುವ ಎಲ್ಲ ಪುರಾಣ ಸಾಹಿತ್ಯಗಳನ್ನು ಗಮನಿಸದೆ ಮಾದರಿಗಾಗಿ, - ಪುರಾಣಗಳು ಹೇಗೆ ಕಾವ್ಯದಲ್ಲಿ ವೈವಿಧ್ಯಮಯವಾಗಿ ಮೂಡಿವೆ ಎಂಬುದಕ್ಕೆ ನಿದರ್ಶನಾರ್ಥವಾಗಿ ಭಾಗವತ ಮಹಾಪುರಾಣವನ್ನು ಉದಾಹರಣೆಯಾಗಿ ತೆಗೆದುಕೊಂಡು ಭಾಗವತ ಆಧಾರಿತ ಕೆಲವು ಮುಖ್ಯ ಕೃತಿಗಳನ್ನು ಈ ಪ್ರಬಂಧದಲ್ಲಿ ಪರಿಚಯಿಸಿದೆ.

ಆದಿಪುರಾಣ : (ಕೃಷ್ಣನ ಬಾಲಲೀಲೆಗಳು. ಅನುವಾದ : ಎಡತೊರೆ ಚಂದ್ರಶೇಖರಶಾಸ್ತ್ರಿ)

ಸಂಸ್ಕೃತದಲ್ಲಿ ಅಷ್ಟಾದಶಪುರಾಣಗಳ ಪಟ್ಟಿ ಏಕರೂಪವಾಗಿಲ್ಲ. ಒಂದು ಪಟ್ಟಿಗೂ ಇನ್ನೊಂದು ಪಟ್ಟಿಗೂ ವ್ಯತ್ಯಾಸಗಳಿರುತ್ತವೆ. ಉಪಪುರಾಣಗಳ ವಿಷಯವೂ ಅಷ್ಟೆ. ಅವುಗಳ ಪಟ್ಟಿಯಲ್ಲೂ ವ್ಯತ್ಯಾಸಗಳಿವೆ. ಪುರಾಣಗಳ

ಪಟ್ಟಿಯ ಕ್ರಮದಲ್ಲಿ ಸಹ ವ್ಯತ್ಯಾಸ ಕಾಣುತ್ತದೆ. ಆದಿಪುರಾಣವು ಪುರಾಣಗಳಲ್ಲಿ ಕೊಡುವ ಪಟ್ಟಿಗಳಲ್ಲಿ ಕಂಡುಬರುವುದಿಲ್ಲ. ಆದರೆ ಆಲ್ಬರೂನಿ (11ಶ) ಹೇಳಿದ ಪಟ್ಟಿಯಲ್ಲಿ ವೇದವ್ಯಾಸರ ವಿಮರ್ಶಾತ್ಮಕ ಪ್ರಬಂಧದಲ್ಲಿ ಕೊಡುವ ಪಟ್ಟಿಯಲ್ಲಿ ಕಂಡುಬರುತ್ತದೆ.

ಜಯಚಾಮರಾಜೇಂದ್ರ ಗ್ರಂಥಮಾಲೆಯಲ್ಲಿ ಅಷ್ಟಾದಶ ಪುರಾಣಗಳೂ ಪ್ರಕಟವಾಗಿದ್ದು ಆ ಪೈಕಿ ಆದಿಪುರಾಣವೂ ಒಂದಾಗಿದೆ. ಈ ಪುರಾಣದಲ್ಲಿ "ಶ್ರೀಕೃಷ್ಣನು ತನ್ನ ಬಾಲ್ಯದಲ್ಲಿ ನೆರವೇರಿಸಿದ ಲೀಲೆಗಳನ್ನು ಮೊದಲಿನಿಂದ ಯಮಳಾರ್ಜುನರ ಅನುಗ್ರಹದವರೆಗೆ ವಿಷ್ಣುಪುರಾಣ, ಭಾಗವತಾದಿ ಪುರಾಣಗಳಲ್ಲಿರುವಂತೆ ಬಹಳ ಹೃದಯಂಗಮವಾಗಿ ತಿಳಿಸುತ್ತದೆ".

ಎಡತೊರೆ ಚಂದ್ರಶೇಖರಶಾಸ್ತ್ರಿಗಳು ಈ ಗ್ರಂಥಮಾಲಿಕೆಯಲ್ಲಿ ದೇವೀ ಮಹಾತ್ಮ್ಯ, ದೇವೀ ಭಾಗವತ, ತ್ರಿಪುರಾರಹಸ್ಯಗಳೆಂಬ ದೇವೀಶಕ್ತಿ ಪುರಾಣಗಳನ್ನು, ಕಲ್ಕಿ ಪುರಾಣ, ಆದಿಪುರಾಣವೆಂಬ ವೈಷ್ಣವಪುರಾಣಗಳನ್ನು, ಸೂತಸಂಹಿತಾ, ಲಿಂಗಮಹಾಪುರಾಣವೆಂಬ ಶೈವಪುರಾಣಗಳನ್ನೂ ಕನ್ನಡಕ್ಕೆ ವಿವರಣೆ, ಟಿಪ್ಪಣಿ, ಮುನ್ನುಡಿಗಳೊಡನೆ ಪರಿವರ್ತಿಸಿದ್ದಾರೆ. ಆ ಪೈಕಿ ಆದಿಪುರಾಣವೂ ಒಂದು. ಭಾಗವತದಲ್ಲಿ ಬರುವ ಶ್ರೀಕೃಷ್ಣನ ಬಾಲಲೀಲೆಗಳು ಇಲ್ಲಿ ಹೃದಯಂಗಮವಾಗಿ ತಿಳಿಸುತ್ತದೆ. 29 ಅಧ್ಯಾಯಗಳಲ್ಲಿ ಕೃಷ್ಣನ ಬಾಲಲೀಲೆಗಳ ವರ್ಣನೆ ಭಾಗಶಃ ಭಾಗವತದ ಕಥೆ ಇಲ್ಲಿ ಬಂದಿದೆ.

ಶ್ರೀಕೃಷ್ಣ ಕಥೆಯ ಉಗಮ ಮತ್ತು ವಿಕಾಸ – ಪ್ರದಾನ್ ಗುರುದತ್
ಶೀಕೃಷ್ಣ ಕಥೆ ವೈದಿಕ ಮತ್ತು ಜೈನಕೃತಿಗಳಲ್ಲಿ ಹೇಗೆ ಮೂಡಿದೆ ಎಂಬ ವಿಮರ್ಶಾತ್ಮಕ ಅಧ್ಯಯನ ಈ ಕೃತಿಯಲ್ಲಿದೆ. ಸಂಸ್ಕೃತದ ಪುರಾಣಗಳಲ್ಲಿ ಕೃಷ್ಣನ ಬಾಲಲೀಲೆಗಳು ವರ್ಣಿತವಾಗಿರುವುದನ್ನು ಸಂಸ್ಕೃತದ ನಾಟಕ ಅಲಂಕಾರಗ್ರಂಥ ಕಾವ್ಯಗಳಲ್ಲಿ ಕೃಷ್ಣಚಿತ್ರ ಮೂಡಿರುವ ಬಗೆ ಚಿತ್ರಿತವಾಗಿದೆ. ರಾಧೆಯ ಪ್ರಸಕ್ತಿಯನ್ನು ವಿವರಿಸಲಾಗಿದೆ. ಕೃಷ್ಣನ ಕಲ್ಪನೆಯನ್ನು ಜೈನ-ವೈದಿಕ ಆಕರಗಳಲ್ಲಿ ದೊರೆಯುವುದು ವಿಮರ್ಶಾತ್ಮಕವಾಗಿ ಹಾಗೂ ತೌಲನಿಕವಾಗಿ ಚರ್ಚಿಸಿರುವ ಮೊದಲ ಕನ್ನಡದಲ್ಲಿನ ಗ್ರಂಥ.

ಕನ್ನಡದಲ್ಲಿ ಪುರಾಣಮಾಲೆ – ಅನು: ಪಂಡರೀನಾಥಾಚಾರ್ಯ
ಕನ್ನಡದಲ್ಲಿ ಬಿಡಿಬಿಡಿಯಾಗಿ ಪುರಾಣಗಳನ್ನು ಪ್ರಕಟಿಸಿದವರು ಅನೇಕರಿದ್ದಾರೆ. ಆದರೆ ಅಷ್ಟಾದಶಪುರಾಣಗಳನ್ನು ಕನ್ನಡದಲ್ಲಿ ಪ್ರಕಟಿಸಲು ಯತ್ನಿಸಿದವರಲ್ಲಿ ಜಯಚಾಮರಾಜೇಂದ್ರ ಗ್ರಂಥಮಾಲೆ ಮೂಲಕ ಇಪ್ಪತ್ತಕ್ಕೂ ಹೆಚ್ಚು ಪುರಾಣಗಳನ್ನು ಮೂಲ ಅನುವಾದ ಸಹಿತ ವಿಸ್ತೃತ ರೂಪದಲ್ಲಿ ಅನೇಕ ಸಂಪುಟಗಳಲ್ಲಿ ಕೊಟ್ಟವರು ನಾಲ್ವಡಿಕೃಷ್ಣರಾಜರು. ಏಕೈಕ ಅದ್ಭುತ ಸಾಹಸವಿದು.

ಅಷ್ಟಾದಶ ಪುರಾಣಗಳನ್ನು ಸಾಮಾನ್ಯ ಓದುಗರು ಕೇವಲ ಗದ್ಯದಲ್ಲಿ ಸ್ವಾರಸ್ಯಕರವಾಗಿ ಸಂಗ್ರಹವಾಗಿ ಸಂಕ್ಷಿಪ್ತರೂಪದಲ್ಲಿ ನೀಡಲು ಯತ್ನಿಸಿದವರು ಪಂಡರೀನಾಥಾಚಾರ್ಯರು. ಇವರು ಕೇವಲ ಯಾವುದೋ ಆವೃತ್ತಿ ಇಟ್ಟುಕೊಂಡು ಅನುವಾದ ಮಾಡಿಲ್ಲ. ಹತ್ತಾರು ಆವೃತ್ತಿ ನೋಡಿ ಪಠ್ಯ ಸಂಶೋಧನೆ ಮಾಡಿ ಸಂಗ್ರಹಾನುವಾದ ಮಾಡಿದ್ದಾರೆ. 18 ಪುರಾಣಗಳು ಪ್ರಕಟವಾಗಲಿಲ್ಲ ಎಂಬುದು ವಿಷಾದದ ಸಂಗತಿ. ಇವೆರಡೂ ಕನ್ನಡದಲ್ಲಿ ಅದ್ಭುತ ಸಾಹಸಗಳಾಗಿವೆ.

ನಾಟಕ ಸಾಹಿತ್ಯ

ಯಕ್ಷಗಾನ ಅಥವಾ ಬಯಲಾಟಗಳಲ್ಲಿ ಪುರಾಣ ಸಾಹಿತ್ಯ

ಯಕ್ಷಗಾನಗಳು ನಮ್ಮ ಕನ್ನಡ ನಾಡಿನ ವಿಶಿಷ್ಟ ಕಲೆ, ವಿಶ್ವಕ್ಕೆ ಕೊಟ್ಟ ಕೊಡುಗೆ. ಯಕ್ಷಗಾನ ಸಾಹಿತ್ಯ ಅಚ್ಚ ಕನ್ನಡ ಸಾಹಿತ್ಯ. ಗದ್ಯ ಪದ್ಯ ನಾಟಕ ಮೂರರ ತ್ರಿವೇಣಿ ಸಂಗಮದ ಸಾಹಿತ್ಯ ಪುರಾಣಗಳು ಬಹುತೇಕ ಯಕ್ಷಗಾನಗಳ ಜೀವಾಳ. ಪುರಾಣದ ಕಥೆಗಳು ಭಾರತ-ಭಾಗವತ-ರಾಮಾಯಣ ಕಥೆಗಳು ಆಧಾರಿತ ಯಕ್ಷಗಾನಗಳು ಸಾಕಷ್ಟಿವೆ.

ದಕ್ಷಬ್ರಹ್ಮ, ಗಯಾ ಚರಿತ್ರೆ, ವಿರೋಚನ ಕಥೆ, ಶ್ರೀಕೃಷ್ಣಪಾರಿಜಾತ ಜನಪ್ರಿಯ ನಾಟಕಗಳಲ್ಲಿ ಒಂದು. ಆಧುನಿಕ ನಾಟಕಗಳು ಗೀತರೂಪಕಗಳು ಭಾಗವತ ಪುರಾಣಾಧಾರಿತವಾಗಿ ಬಂದಿವೆ. ಪುತಿನ ಅವರ "ಗೋಕುಲ ನಿರ್ಗಮನ" ಕನ್ನಡದಲ್ಲಿ ಶ್ರೇಷ್ಠ ಗೀತರೂಪಕವಾಗಿದೆ. ಎಸ್ಕೆ ಕರೀಂಖಾನರ ಶ್ರೀಕೃಷ್ಣಲೀಲಾ ಜನಪ್ರಿಯ ಕೃತಿ. ಬೆಳ್ಳಾವೆ

ನರಹರಿಶಾಸ್ತ್ರಿಗಳ ದಶಾವತಾರ ಮೊದಲಾದ ನಾಟಕಗಳು ರಂಗವೇದಿಕೆಮೇಲೆ ಇತಿಹಾಸ ಸೃಷ್ಟಿಸಿವೆ.

ಭಾಗವತ ಕಥೆಯಾಧಾರಿತ ಪೌರಾಣಿಕ ನಾಟಕಗಳು ಹೆಚ್ಚು ಜನಪ್ರಿಯವಾದವು. ರಾಮಾಯಣ, ಭಾರತ ನಾಟಕಗಳೂ ಜನಪ್ರಿಯವಾಗಿದ್ದರೂ ಭಾಗವತಾಧಾರಿತ ನಾಟಕಗಳು ಒಂದು ಕೈ ಮೇಲು ಎನ್ನಬಹುದು. ಕಂಪೆನಿ ನಾಟಕಗಳು ಭಾಗವತದ ನಾಟಕಗಳ ಜನಪ್ರಿಯತೆಗೆ ಮುಖ್ಯ ಕಾರಣವಾಗಿವೆ. ವಿವಿಧ ಕಂಪನಿಗಳು ಆಡಿದ ಕಂಸವಧ, ದಶಾವತಾರ, ಉಷಾಪರಿಣಯ, ಪ್ರಹ್ಲಾದ ಚರಿತೆ, ಸತಿವೃಂದ, ಸುಭದ್ರಾ ಕಲ್ಯಾಣ, ವಿಷ್ಣುಲೀಲಾ, ಧ್ರುವವಿಜಯ ಮೊದಲಾದ ನಾಟಕಗಳು ರಂಗವೈಭವಸಂಗೀತ, ಸಂಭಾಷಣಾ ಸಾಹಿತ್ಯ, ನಟರ ಅದ್ಭುತ ಅಭಿನಯದಿಂದ ಭಾಗವತದ ಕಥೆ ಜನರಲ್ಲಿ ಆಳವಾಗಿ ತಳವೂರಿಸುವುದರಲ್ಲಿ ಯಶಸ್ವಿಯಾಗಿವೆ.

ಕನ್ನಡದಲ್ಲಿ ಪುರಾಣಗಳು

ಕನ್ನಡದಲ್ಲಿ ಸಮಗ್ರ ಪುರಾಣ ಸಾಹಿತ್ಯ ಅನುವಾದವಿರಲಿ, ಸಂಗ್ರಹವಿರಲಿ, ವಿಮರ್ಶೆಯೆ ಇರಲಿ ಅವುಗಳ ಸೂಚಿಯಾಗಲಿ ಸಂಗ್ರಹವಾಗಲಿ ಆಗಿಲ್ಲ. ಪ್ರಕಟಿತ ಪುರಾಣ ಸಾಹಿತ್ಯವೂ ಪೂರ್ಣವಾಗಿ ಲಭ್ಯವಿಲ್ಲ. ಅಪ್ರಕಟಿತ ಸಾಹಿತ್ಯ ಹಸ್ತಪ್ರತಿ ರೂಪದಲ್ಲಿ ಸಾರ್ವಜನಿಕ ಹಸ್ತಪ್ರತಿ ಭಂಡಾರಗಳಲ್ಲಿ ವ್ಯಕ್ತಿ ಭಂಡಾರಗಳಲ್ಲಿ ಸಾಕಷ್ಟು ಇದೆ. ಈ ಕಾರಣದಿಂದ ಸಮಗ್ರ ಸಮೀಕ್ಷೆ ಸಾಧ್ಯವಿಲ್ಲವಾಗಿದೆ. ಆದಕಾರಣ ಕೆಲವು ಪ್ರಸಿದ್ಧ-ಪ್ರಮುಖ ಅನುವಾದಗಳನ್ನಷ್ಟೆ ಈ ಲೇಖನದಲ್ಲಿ ಪ್ರಸ್ತಾಪಿಸಲಾಗಿದೆ.

ಪೂರ್ಣಾನುವಾದಗಳು

ಮೂಲಗ್ರಂಥವನ್ನು ಪದಶಃ ಪೂರ್ಣವಾಗಿ ಅನುವಾದಿಸಿರುವ ಗ್ರಂಥಗಳನ್ನು ಪೂರ್ಣಾನುವಾದಗಳೆಂದು ಕರೆಯಬಹುದು. ಇವುಗಳಲ್ಲಿ ಎರಡು ಬಗೆ: ಪರಿಚಿತ ಆವೃತ್ತಿ; ಜನಪ್ರಿಯ ಆವೃತ್ತಿ. ಮೂಲ-ಅನ್ವಯಾರ್ಥ-ತಾತ್ಪರ್ಯ-ವಿವರಣೆ, ಟಿಪ್ಪಣಿ ಇತ್ಯಾದಿ ಇರುವುದನ್ನು ಪರಿಚಿತ ಆವೃತ್ತಿ ಎನ್ನಬಹುದು. ಜನಪ್ರಿಯ ಆವೃತ್ತಿಯಲ್ಲಿ ಮೂಲಸಹಿತ ಅಥವಾ ಮೂಲರಹಿತ ಗದ್ಯಾನುವಾದ, ತಾತ್ಪರ್ಯ ಕೊಟ್ಟಿರುವ ಗ್ರಂಥಗಳು ಈ ವರ್ಗಕ್ಕೆ ಸೇರುತ್ತವೆ.

ಕನ್ನಡದಲ್ಲಿ ಪ್ರಕಟವಾದ ಕೆಲವು ಬಗೆಯ ಗ್ರಂಥಗಳು ಹೀಗಿವೆ:

ಅಳಸಿಂಗರಾಚಾರ್ಯರ ಭಾಗವತ ಗದ್ಯಾನುವಾದ :

ಮೂಲವಿಲ್ಲದಿದ್ದರೂ ಮೂಲವನ್ನು, ಚೆನ್ನಾಗಿ ಅಧ್ಯಯನ ಮಾಡಿ ಯಾವ ಶ್ಲೋಕದ ಅರ್ಥವನ್ನೂ ಬಿಡದೆ ಓದುತ್ತಿದ್ದರೆ ಕನ್ನಡದಲ್ಲೇ ಸ್ವತಂತ್ರವಾಗಿ ಬರೆದ ಗದ್ಯ/ಗ್ರಂಥ ಎಂಬಂತೆ ಭಾಗವತವನ್ನು ಕನ್ನಡಕ್ಕೆ ಅನುವಾದಿಸಿದವರು ಅಳಸಿಂಗಾರಾಚಾರ್ಯರು. ಸ್ವಾತಂತ್ರ್ಯ ಪೂರ್ವದಲ್ಲಿ ಹಾಗೂ 20ನೇ ಶತಮಾನದ ಪೂರ್ವಭಾಗದಲ್ಲಿ ಅತಿ ಜನಪ್ರಿಯವಾಗಿ ಜನಸಾಮಾನ್ಯರೆಲ್ಲ ಓದಿ ಆನಂದಿಸುತ್ತಿದ್ದ ಗ್ರಂಥತ್ರಯಗಳಾದ ರಾಮಾಯಣ-ಭಾರತ-ಭಾಗವತಗಳನ್ನು ನೀಡಿದವರು ಇವರು.

ಭಾಗವತದಲ್ಲಿ ರಾಧಾ ಪ್ರಸಂಗ

ಬ್ರಹ್ಮವೈವರ್ತಪುರಾಣ :

ಬ್ರಹ್ಮವೈವರ್ತಪುರಾಣ ಈಗ ಲಭ್ಯವಿರುವುದು ನೂತನವಾದುದು. ಪುರಾತನವಾದ ಬ್ರಹ್ಮವೈವರ್ತಪುರಾಣ ಲುಪ್ತವಾಗಿಬಿಟ್ಟಿದೆ ಎಂದು ಬಂ.ಕಿಂ. ಚಂದ್ರರು ಹೇಳುತ್ತಾರೆ. ಪುರಾಣಗಳಲ್ಲಿ ಕನಿಷ್ಟವಾದುದು ಈ ಪುರಾಣ ಎಂದು ವಿಲ್ಸನ್ ಅವರು ಹೇಳುತ್ತಾರೆ. ಅದೇನೇ ಇರಲಿ. ರಾಧೆಯ ವಿಚಾರವನ್ನು ಪುರಾಣಗಳಲ್ಲಿ ಪ್ರಸ್ತಾಪಿಸಿರುವುದು ಇದೊಂದೇ ಪುರಾಣದಲ್ಲಿ ಎಂಬುದು ಈ ಪುರಾಣದ ವೈಶಿಷ್ಟ್ಯ. ಭಾಗವತ, ವಿಷ್ಣುಪುರಾಣ, ಹರಿವಂಶ, ಅಥವಾ ಮಹಾಭಾರತ ಇವಾವುದರಲ್ಲೂ ರಾಧೆಯ ಪ್ರಸ್ತಾಪವಿಲ್ಲ. ಅನಂತರದ ಕೃತಿ "ಗೀತಗೋವಿಂದ"ದಲ್ಲಿ ರಾಧೆಯ ಪ್ರಸ್ತಾಪವಿದೆ. ಬಂಗಾಳದಲ್ಲಿ ವೈಷ್ಣವ ಪಂಥದಲ್ಲಿ ಮಾತ್ರ ರಾಧೆಗೆ ವಿಶೇಷ ಪ್ರಾಶಸ್ತ್ಯ ದೊರೆತಿದೆ.

ಕರ್ನಾಟಕದಲ್ಲಿ ಆಧುನಿಕ ಕವಿಗಳ ಕೃತಿಗಳಲ್ಲಿ ರಾಧೆ ಕಾಣಿಸಿಕೊಂಡಿದ್ದಾಳೆ. ಆ ಪೈಕಿ ಎರಡು ಕೃತಿಗಳು ಗಮನಾರ್ಹವಾಗಿವೆ. ಒಂದು, ಪುತಿನ ಅವರ "ಗೋಕುಲ ನಿರ್ಗಮನ"; ಇನ್ನೊಂದು, ಕೆ.ಸಿ. ಶಿವಪ್ಪನವರ "ರಾಧಾಮಾಧವ ಪ್ರೇಮಗೀತೆ"ಗಳ ಗುಚ್ಛ. ಮೆಲುಕು ಹಾಕುವ ಗೀತೆಗಳಿಂದ ಕೂಡಿದ ಕವನ ಸಂಕಲನಗಳಿವು. ಸಂಗೀತ ನೃತ್ಯಕ್ಕೆ ಅಳವಡುವ ಈ ಗೀತೆಗಳು ಜನಾದರಣೀಯವಾಗಿವೆ.

ಕೆ.ಸಿ. ಶಿವಪ್ಪನವರು ತಮ್ಮ ಜೀವಸಖಿ–ಪ್ರಾಣಸಖಿಯನ್ನು ಕಳೆದುಕೊಂಡಾಗ 3 ವರ್ಷಗಳಲ್ಲಿ ರಚಿಸಿದ 68 ಪ್ರೇಮ ಕವಿತೆಗಳ ಸಂಗ್ರಹ ರಾಧಾಮಾಧವ ಕೃತಿ. ಈ ಕೃತಿಯಲ್ಲಿ ಪರಿಪರಿಯಾಗಿ ಒಲವಿನುಸಿರು, ತಾನೇ ಜೀವನ ಎಂಬ ಸೂತ್ರದಲ್ಲಿ ರಾಧೆಯನ್ನು ಕೃಷ್ಣನನ್ನು ಕುರಿತು ಜೀವಕಣ ಹೊನ್ನಾದ ಒಲವಿನಲೆ ಕಡಲಾದ ರೂಪಕರಿವೆಗಳು ಇಲ್ಲಿವೆ. ವಿದ್ಯಾಪತಿ, ಕೇಶವದಾಸ ಸೂರದಾಸ ಮೊದಲಾದವರ ಪದಾವಳಿಗಳು, ಗೀತಗೋವಿಂದ, ಮುರಳಿಯ ನಾದ, ರಾಧಾ ರೂಪಸಿ ವರ್ಣನೆ ರಸತರಂಗಗಳಾಗಿ ಹೊಮ್ಮಿವೆ. ಎಸ್ಕೆ ರಾಮಚಂದ್ರರಾಯರು ಹೇಳಿದಂತೆ "ರಾಧೆಯ ಚಿತ್ರಣ ಈ ಕವಿತೆಗಳಲ್ಲಿ ನಾದರಂಜನಿಯಂತೆ, ರೂಪಸಿಯಂತೆ ಜೀವಕಿನ್ನರಿಯಂತೆ, ತಂಪಿನೌಷಧಿಯಂತೆ, ನೆಲದ ಕಣ್ಮಣಿಯಂತೆ ಮೂಡಿದೆ. ಅಂದಗಾರಿಕೆಯಲ್ಲಿ ರಾಧೆ ಚೆಲುವೆ, ಚತುರೆ, ಮುಗ್ಧೆ, ಮೋಹಿನಿ, ಮಾಧವನಿಗೆ ಸಂಗಾತಿ, ಶಾಂತಿ ದೀವಿಗೆ. ಈ ಕವಿತೆಗಳಲ್ಲಿ ರಾಧೆ ಸಕಲ ಚೆಲುವಿನ ಉಪಮೆ ಒಲುಮೆ ಲೋಕಸುಂದರಿ; ಆದರೆ ಮಾಧವ ಅಂಬರ, ಅವನೆ ತನು ದಿಗಂಬರ ವಿಶ್ವರೂಪಧರ ಆಗಿದ್ದಾನೆ.

'ಶೈವಸುಧಾರ್ಣವ' ಗ್ರಂಥವನ್ನು ಗಳಗನಾಥರು 1923ರಲ್ಲಿ ರಚಿಸಿದರು. ಈ ಕೃತಿ ನೇರವಾಗಿ ಒಂದು ಪುರಾಣದ ಅನುವಾದವಲ್ಲ. ಲಿಂಗಪುರಾಣ, ಶಿವಪುರಾಣ, ಸ್ಕಂದಪುರಾಣ ಮತ್ತು ಇತರ ವೀರಶೈವ ಗ್ರಂಥಗಳ ಆಧಾರದಿಂದ ರಚಿತವಾಗಿದೆ. ಶಿವಚರಿತ್ರ ಕಥನ, ಜ್ಞಾನದೀಪ ವಿಚಾರ, ಶಿವಸ್ತುತಿಗಳನ್ನು ಈ ಗ್ರಂಥದಲ್ಲಿ ಕಾಣುತ್ತೇವೆ. ಪತಿವ್ರತಾ ಸ್ತ್ರೀಗೆ ತನ್ನ ಪತಿಯೇ ಅಧಿದೈವತವಾಗಿ ತೋರುವಂತೆ, ಶೈವರಿಗೆ ಶಿವನೂ, ವೈಷ್ಣವರಿಗೆ ವಿಷ್ಣುವೂ ಅಧಿದೇವತೆಗಳಾಗಿ ತೋರುವುದು ಸ್ವಾಭಾವಿಕ; ಆದರೆ ಅದಕ್ಕಾಗಿ ಜಗಳವೇಕೆ ಎಂದಿದ್ದಾರೆ. ವಿಷ್ಣುಪರ ಭಾಗವತಾಮೃತವನ್ನು ಶಿವಪರ "ಶೈವಸುಧಾರ್ಣವ"ವನ್ನು ಗಳಗನಾಥರು ರಚಿಸಿದ್ದನ್ನು ಕುರಿತು ಶ್ರೀನಿವಾಸ ಹಾವನೂರ್ ಹೇಳಿದ ಮಾತಿದು. "ಗಿರಿಜಾ ಕಲ್ಯಾಣಸಾರ" ಅವರ ಇನ್ನೊಂದು ಪುರಾಣಾಧಾರಿತ ಕೃತಿಯಾಗಿದೆ.

20ನೇ ಶತಮಾನದ ಕೃತಿಗಳು

ಹೊಸಗನ್ನಡಕಾಲದ ಹಳಗನ್ನಡ ವಿದ್ವಾಂಸರಲ್ಲಿ ಸಿದ್ಧಾಂತಿ ಶಿವಶಂಕರಶಾಸ್ತ್ರಿಗಳು (1864–1942) ಒಬ್ಬರು. ಇವರು ಹತ್ತಾರು ವಿವಿಧ ಕೃತಿಗಳನ್ನು ರಚಿಸಿದ್ದಾರೆ. ಹಳಗನ್ನಡ ಶೈಲಿಯ ಹೊಸಗನ್ನಡ ಮಿಶ್ರಿತ ಕೃತಿಗಳನ್ನು ರಚಿಸಿದ್ದಾರೆ. ಪುರಾಣಾಧಾರಿತ ಕೃತಿಗಳನ್ನು ರಚಿಸಿದ್ದಾರೆ. ಅವುಗಳಲ್ಲಿ ಕೆಲವು ಹೀಗಿವೆ:

ಶ್ರೀ ಗರಳಪುರೀ ಮಹಾತ್ಮ್ಯಂ (1894) ಸ್ಕಂದಪುರಾಣ ಅಂತರ್ಗತವಾಗಿರುವ ನಂಜನಗೂಡು ಕ್ಷೇತ್ರದ ಮಹಿಮೆಯ ನಿರೂಪಣಾ ಗ್ರಂಥ.
ಕಾವೇರಿ ಮಹಾತ್ಮೆ (1895) ಸ್ಕಂದಪುರಾಣದಲ್ಲಿ ಉಮಾಮಹೇಶ್ವರ ಸಂವಾದದಲ್ಲಿ ಬರುವ ಕಥಾವಸ್ತು ಆಧಾರಿತ ಕೃತಿ.

ಪದ್ಯಾನುವಾದ – ಗಿರಿಜಾ ಕಲ್ಯಾಣ

'ಹರಿಗುರುಸ್ಮರಣೆ' ಸು.ರಂ. ಎಕ್ಕುಂಡಿ ಅವರ ಕಿರುಕಾವ್ಯಗಳ ಸಂಕಲನ. ದಾಸಸಾಹಿತ್ಯಕ್ಕೆ ಸಂಬಂಧಿಸಿದಂತೆ ವಿಷ್ಣುಭಕ್ತಿಯ ಹಿನ್ನೆಲೆಯಲ್ಲಿ ಇವರು ರಚಿಸಿರುವ ಕಿರುಕಾವ್ಯಗಳಲ್ಲಿ ಭಾಗವತವನ್ನು ಆಧರಿಸಿ ಬರೆದಿರುವ ಗಜೇಂದ್ರಮೋಕ್ಷ, ಕುಬ್ಜಾಂಗನಾ, ಕುಚೇಲೋಪಾಖ್ಯಾನ, ಕಾಲಿಯ ಮರ್ಧನ. ಶ್ರೀನಿವಾಸ ಕಲ್ಯಾಣ, ಲಕ್ಷ್ಮೀಸ್ವಯಂವರ ಕಿರುಕೃತಿಗಳು ಸೊಗಸಾಗಿ ಲಯಬದ್ಧವಾಗಿ ಕನ್ನಡದಲ್ಲಿ ಪದ್ಯರೂಪದಲ್ಲಿ ಮೂಡಿವೆ. ಎಕ್ಕುಂಡಿ ಅವರ ಅನುವಾದ ಪದೇ ಪದೇ ಓದಿಸಿಕೊಂಡು ಹೋಗುವ ಶೈಲಿಯ ಕೃತಿಗಳಾಗಿವೆ. ಗಿರಿಜಾ ಕಲ್ಯಾಣ ದೀರ್ಘ ಕಾವ್ಯ ಶಿವಪುರಾಣದ ಕಥೆಯನ್ನು ಒಳಗೊಂಡಿದೆ. ಸುಂದರ ವರ್ಣನೆಗಳ ಈ ಕಾವ್ಯದಲ್ಲಿ ಶಿವನು ಗಿರಿಜೆಯ ಬಳಿ ಭಿಕ್ಷೆ ಬೇಡಲು ಬಂದ ವರ್ಣನೆ ಹೀಗಿದೆ. "ಬಿಳಿಗೆಂಪು ಮೈಬಣ್ಣ ಮುದ್ದು ಸುರಿಯುವ ಮೋರೆ ಬಂಗಾರ ಬಟ್ಟಲದ ಮುಗುಳುನಗೆ, ಮೇಲೆಸೆವ ಚಂಡಿಕೆಯ ಹೊಳಪುಳ್ಳ ಕಣ್ಣುಗಳು ಕೆಂಪು ತುಟಿ ಹೊದೆದ ಮೇಲುಜಟಿ ಕೆಳಗಿಳಿಬಿದ್ದ ಜನಿವಾರ ಹಿಡಿದು ದಂಡಕಮಂಡಲವನು. ಕಂಕುಳಲ್ಲಿ ಹೊತ್ತಿಗೆಯನೊಂದಿರಿಸಿ, ಉಟ್ಟ ಪಂಚೆಯ ಸೆರಗು ಕಟಿಗೆ ಕಟ್ಟಿದ ಮಂಜದುಡುದಾರದಲಿ ಸಿಗಿಸಿ ಹೆಗಲ

ಜೋಳಿಗೆ ತೂಗಿರಲು ನುಡಿದನು "ದೇವಿ ಭವತಿ ಭಿಕ್ಷಾಂದೇಹಿ" (ಪುಟ 85, ಹರಿಗುರುಸ್ಮರಣೆ). ಪುರಾಣಿ, ಪ್ರಸಂಗಗಳನ್ನು ಸ್ವತಂತ್ರ ಪದ್ಯಾನುವಾದದಲ್ಲಿ ಸುಶ್ರಾವ್ಯವಾಗಿ ಬರೆದ ಗದ್ಯ ಕವಿಗಳಲ್ಲಿ ಸು.ರಂ. ಎಕ್ಕುಂಡಿ ಒಬ್ಬರಾಗಿದ್ದಾರೆ. ಪುತಿನ ನಂತರ ಈ ರೀತಿ ಬರೆದವರು ಇನ್ನೊಬ್ಬರಿಲ್ಲ.

ವ್ಯಾಸಮಹರ್ಷಿ ಪ್ರಣೀತ ಭವಿಷ್ಯ ಪುರಾಣದ ಮಾತಿದು (ಪುಟ 25, ಡಾ. ವೇದವ್ಯಾಸರ ವೇದವ್ಯಾಸಮಹರ್ಷಿದಿವ್ಯ ಚರಿತ್ರೆ ಗ್ರಂಥ).
ರವಿವಾರೇ 'ಸಂಡೇ' ಷಷ್ಠ ಸಿಕ್ಸ್ಟಿವದಂತಿಚ (ರವಿವಾರವನ್ನು ಸಂಡೇ ಎಂದೂ, 60ನ್ನು ಸಿಕ್ಸ್ಟಿ ಎಂದು ಕರೆಯುತ್ತಾರೆ). ಉರ್ದು ಭಾಷೆಯಲ್ಲಿ (ಯವನರ ಭಾಷೆಯಲ್ಲಿ) ಪಾನೀಯವನ್ನು ಪಾನಿ ಎಂದು ಭುಭುಕ್ಷಾ (ಹಸಿವು)ವನ್ನು ಭೂಕಾ ಎಂದು ಕರೆಯುತ್ತಾರೆ ಎಂದು ಹೇಳಲಾಗಿದೆ. ಹೀಗೆ ಮ್ಲೇಚ್ಛಾಚಾರಸ್ಯ ಮೂಸಾಖ್ಯೈಃ ತನ್ಮತೈಃ ಪೂರಿತಂ ಜಗತ್ (ಮ್ಲೇಚ್ಛಾಚಾರ್ಯನಾದ ಮೂಸಾಚಾರ್ಯ (ಮೋಸೆಸ್)ನಿಂದ ವಲ್ಲೀಚ್ಛಧರ್ಮ (ವೆಸ್ಟರ್ನ್ ಕಲ್ಚರ್) ಮ್ಲೇಚ್ಛಮತ (ಸೆಮೆಟಿಕ್ ರಿಲಿಜನ್) ವೃದ್ಧಿಯಾಗಿ ವೇದಮತ ಕ್ಷೀಣಿಸಿತು ಎಂದು ಹೇಳಿದೆ.

ಇನ್ನೊಂದು ಉದಾಹರಣೆಯನ್ನು ವೇದವ್ಯಾಸರು ಉಲ್ಲೇಖಿಸಿದ್ದಾರೆ.

ವಿಕಟೇ ಪಶ್ಚಿಮೇ ದ್ವೀಪೇ ತತ್ಪತ್ನಿ ವಿಕಟಾವತಿ
ಅಷ್ಟ ಕೌಶಲ ಮಾರ್ಗೇಣ ರಾಜಿಮಂತ್ರ ಚಕಾರ ಹೊ

(ಎಂಟು ಮಂದಿ ಮಂತ್ರಿಗಳ ಸಲಹಾ ಸಮಿತಿಯ (ಅಡ್ವೈಸರಿ ಕಮಿಟಿ) ಸಲಹೆಯೊಂದಿಗೆ ಭಾರತ ದೇಶವನ್ನು ವಿಕ್ಟೋರಿಯಾ ರಾಣಿ ಪಾಲಿಸುವಳೆಂದು ಆಕೆಯ ಗಂಡ ವಿಕಟ (ಅಲ್ಬರ್ಟ್ ವಿಕ್ಟರ್) ಎಂದು, ಕಲ್ಕತ್ತಾ ದೇಶವನ್ನು ರಾಜಧಾನಿ ಮಾಡಿಕೊಂಡು ಆಳುತ್ತಾಳೆ) ಎಂದು "ಭವಿಷ್ಯ ಪುರಾಣ" ವರ್ಣಿಸಿದೆ.

ಭಾಗವತದ ಕಾವ್ಯಕೃತಿಗಳು

ವೈಷ್ಣವ ಕವಿಗಳಿಗೆ ಭಾಗವತ ಪುರಾಣ ಅಕ್ಷಯ ಪಾತ್ರೆ ಇದ್ದಂತೆ. ಗದ್ಯ, ಕಥೆ, ಕಾದಂಬರಿ, ಪದ್ಯ, ನಾಟಕ, ಕವಿತೆ ಮೊದಲಾದ ಎಲ್ಲಾ ಸಾಹಿತ್ಯ ಪ್ರಕಾರಗಳಲ್ಲೂ ಕನ್ನಡ ಸಂಸ್ಕೃತ ಭಾಗವತ ಪುರಾಣ ಕನ್ನಡದಲ್ಲಿ ಮೈದುಂಬಿ ಬಂದಿದೆ. ಇದರಲ್ಲಿ ಕಾವ್ಯಕೃತಿಗಳು ಪ್ರಧಾನವಾಗಿವೆ.

ಕವಿ ಕನಕದಾಸರು (ಸು. 15050) ಮೋಹನ ತರಂಗಿಣೀ ಎಂಬ ಸಾಂಗತ್ಯ ಕಾವ್ಯದಲ್ಲಿ ಕೃಷ್ಣನ ಮತ್ತು ಆತನ ಪುತ್ರ-ಪೌತ್ರರ ಕಥೆಗಳನ್ನು ಸರಸವಾಗಿ ರಚಿಸಿದ್ದಾರೆ. ಇಲ್ಲಿ ಮನ್ಮಥ ದರ್ಶನ, ಶಂಬರಾಸುರ ವಧೆ, ಅನಿರುದ್ಧನ ಲೀಲೆ, ಬಾಣಾಸುರ ವಿಜಯ ಮೊದಲಾದ ಪ್ರಸಂಗಗಳನ್ನು ರಸವತ್ತಾಗಿ ವರ್ಣಿಸಿದ್ದಾರೆ.

ರಾಮಚಂದ್ರ ಗುರುಶಿಷ್ಯನೆಂಬಾತ (ಸು. 1550) ಆದಿತ್ಯ ಪುರಾಣವನ್ನು ಭಾಮಿನೀ ಷಟ್ಪದಿಯಲ್ಲಿ ರಚಿಸಿದ್ದಾನೆ.

ರಂಗಾಚಾರ್ಯನೆಂಬ ಕವಿ (1580) ಸರ್ವಜನರ್ಗೆ ಸುಲಭವಾಗಿ ತಿಳಿವಂತೆ ಕರ್ಣಾಟಕ ಭಾಷಾ ರಚನೆಯಲ್ಲಿ "ಶ್ರೀರಂಗ ಮಹಾತ್ಮ್ಯ"ವೆಂಬ ಗದ್ಯಕೃತಿ ಬರೆದಿದ್ದಾನೆ. ಇದು ಬ್ರಹ್ಮಾಂಡ ಪುರಾಣಾಂತರ್ಗತ ದಶಾಧ್ಯಾಯವನ್ನು ಆಧರಿಸಿದೆ.

ಭಾಗವತ ಕಥಾಭಾಗ ಅನುಸರಿಸಿ ಸೋಮನಾಥ ಕವಿ (1600) ಅಕ್ರೂರ ಚರಿತೆಯನ್ನು ರಚಿಸಿದ್ದಾನೆ (ಭಾಮಿನಿ ಷಟ್ಪದಿ\ನರಹರಿ ಕವಿ (ಸು. 1650) ಪ್ರಹ್ಲಾದ ಚರಿತೆ (ವಾರ್ಧಿಕ ಷಟ್ಪದಿ) ರಚಿಸಿದ್ದಾನೆ.

ನಾರದೀಯ ಪುರಾಣದ ರುಕ್ಮಾಂಗದ ರಾಜನ ಕಥೆ ಕನ್ನಡ ಕವಿಗಳಿಗೆ ಮೆಚ್ಚುಗೆಯಾದ ಪ್ರಸಂಗವಾಗಿದ್ದು ಹತ್ತಾರು ಕವಿಗಳು ಈ ಬಗ್ಗೆ ಬರೆದಿದ್ದಾರೆ. ಈ ಕೃತಿಯಲ್ಲಿ ಮಾಂಧಾತ ರಾಜನಿಗೆ ವಶಿಷ್ಠರು ಬೋಧಿಸಿದ ಹರಿವಾಸರ ಮಹಾತ್ಮ್ಯ ನಿರೂಪಿತವಾಗಿದೆ.

17ನೇ ಶತಮಾನದ ಕೃತಿಗಳು

ಸೋಮನಾಥ ಕವಿ (ಸು.1650) ರುಕ್ಮಾಂಗದ ಚರಿತೆ (ಸಾಂಗತ್ಯ), ಶೇಷ ಕವಿ (ಸು.1650) ರುಕ್ಮಾಂಗದ ಚರಿತೆ (ಸಾಂಗತ್ಯ), ಚಿಕ್ಕೋಪಾಧ್ಯಾಯ (1681) ರುಕ್ಮಾಂಗದ ಚರಿತೆ (ಚಂಪೂ) ಗಮನಾರ್ಹ ಕೃತಿಗಳಾಗಿವೆ.

ವೆಂಕಯಾರ್ಯ (1650) ಕೃಷ್ಣಲೀಲಾಭ್ಯುದಯವೆಂಬ ಭಾಮಿನೀ ಷಟ್ಪದಿ ಕೃತಿಯಲ್ಲಿ ದಶಮಸ್ಕಂದದ ಕಥೆ ಹೇಳಿದ್ದಾನೆ. ಮೈಸೂರು ಚಿಕ್ಕುಪಾಧ್ಯಾಯ (1672) ಸಾಕಷ್ಟು ಪುರಾಣಾಧಾರಿತ ಕೃತಿಗಳನ್ನು ರಚಿಸಿದ್ದಾನೆ. ಭವಿಷ್ಯೋತ್ತರ ಪುರಾಣದ ತೀರ್ಥಕಾಂಡದಲ್ಲಿ ಬರುವ ಹಿಮವದ್ಗೋಪಾಲಸ್ವಾಮಿಬೆಟ್ಟದ ಮಹಾತ್ಮ್ಯ ಹೇಳುವ "ಕಮಲಾಚಲ ಮಹಾತ್ಮ್ಯ"ವೆಂಬ ಚಂಪೂ ಕೃತಿಯನ್ನು ರಚಿಸಿದ್ದಾನೆ. ಬ್ರಹ್ಮಾಂಡಪುರಾಣದ ತೀರ್ಥಕಾಂಡದಲ್ಲಿರುವ ಕಂಚಿಯ ಮಹಾತ್ಮೆ ಕುರಿತ "ಹಸ್ತಗಿರಿ ಮಹಾತ್ಮ್ಯ" (ಚಂಪೂ) ಈತನದೇ. ನಾರದೀಯ ಪುರಾಣೋಕ್ತವಾದ **ರುಕ್ಮಾಂಗದ ಚರಿತೆ**ಯನ್ನು ಚಂಪುವಿನಲ್ಲಿ ರಚಿಸಿರುವುದರ ಜೊತೆಗೆ ಗದ್ಯರೂಪದಲ್ಲಿ ಮೇಲುಕೋಟೆ ಮಹಿಮೆಯನ್ನು ಸಾರುವ 'ಯದುಗಿರಿ ಮಹಾತ್ಮೆ'ಯನ್ನು ರಚಿಸಿದ್ದಾನೆ.

ಬ್ರಹ್ಮಾಂಡ ಪುರಾಣಾಂತರ್ಗತವಾದ ಶ್ರೀರಂಗ ಮಹಾತ್ಮ್ಯ ಗ್ರಂಥವನ್ನು ಗದ್ಯರೂಪದಲ್ಲಿ 10 ಅಧ್ಯಾಯಗಳಲ್ಲಿ ಕನ್ನಡಿಸಿದ್ದಾನೆ. ಪಶ್ಚಿಮ ರಂಗಮಹಾತ್ಮ್ಯ ಸಾಂಗತ್ಯದ ಕೃತಿ ಬ್ರಹ್ಮಾಂಡ ಪುರಾಣದ ಆಧಾರದಲ್ಲೇ ರಚಿತವಾಗಿದೆ. ಶಂಕರನಾರದ ಸಂವಾದರೂಪವಾಗಿ ಶ್ರೀರಂಗಪಟ್ಟಣದ ಮಹಿಮೆ ಈ ಕೃತಿಯಲ್ಲಿ ರೂಪಿತವಾಗಿದೆ.

ಚಿಕ್ಕದೇವರಾಜರ ಆಶ್ರಿತ ಕವಿಗಳಲ್ಲಿ ಒಬ್ಬನಾದ ತಿಮ್ಮಕವಿ (1677) ಸಹ ಪುರಾಣಗಳಾಧಾರಿತ ಹಲವಾರು ಕೃತಿಗಳನ್ನು ಚಂಪೂರೂಪವಾಗಿ ರಚಿಸಿದ್ದಾನೆ. ವೆಂಕಟಗಿರಿ ಮಹಾತ್ಮ್ಯ, ಪಶ್ಚಿಮರಾಗ ಮಹಾತ್ಮ್ಯ, ಯಾದವಗಿರಿ ಮಹಾತ್ಮ್ಯ ಹೆಸರಿನ ಕೃತಿಗಳು ಪ್ರಸಿದ್ಧವಾಗಿವೆ.

18ನೇ ಶತಮಾನದ ಕೃತಿಗಳು

ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ (1794–1868) ಅವರ ಹೆಸರಿನಲ್ಲಿ ಅನೇಕ ಪುರಾಣಾಧಾರಿತ ಕೃತಿಗಳು ರಚಿತವಾದವು. ಭಾಗವತ, ವಿಷ್ಣುಪುರಾಣಗಳಲ್ಲಿ ಬರುವ ಉಷಾಪರಿಣಯವನ್ನು ಕುರಿತ ಕೃತಿ, ಭಾಗವತ ಪುರಾಣಕ್ಕೆ ಶ್ರೀಧರೀಯ ವ್ಯಾಖ್ಯಾನುಸಾರ ಕನ್ನಡದಲ್ಲಿ ಬರೆದ ಟೀಕೆಯಾದ ಕೃಷ್ಣರಾಜ ವಾಣೀವಿಲಾಸ ಗ್ರಂಥ ದೇವೀಭಾಗವತ ತಾತ್ಪರ್ಯ ಟೀಕೆ. ಅಗ್ನಿ ಪುರಾಣಕ್ಕೆ ನಾರದ ಪುರಾಣದೊಳಗಿನ ಕಥೆಯಾಧಾರಿತ ತಲಾಕಾವೇರಿ ಮಹಾತ್ಮ್ಯ, ಯಾದವಗಿರಿ ಮಹಾತ್ಮ್ಯ ಗ್ರಂಥ ಇತ್ಯಾದಿ ಗ್ರಂಥಗಳು ರಚಿತವಾಗಿವೆ. ಗುರುಕೃಷ್ಣ (ಸು.1830) ಸಾಂಗತ್ಯದಲ್ಲಿ ಕೃಷ್ಣಸ್ವಾಮಿ ದಾನಕೊಟ್ಟ ಪದಕೃತಿಯನ್ನು ಕೃಷ್ಣಬಾಲಲೀಲೆ ಎಂಬ ಚೌಪದಿ ಕೃತಿಯನ್ನು ಭಾಗವತ ಪುರಾಣದ ಅರ್ಥವಿವರಣೆಯಾಗಿ ರಚಿಸಿದ್ದಾನೆ.

ಬ್ರಹ್ಮಾಂಡಪುರಾಣದ ಲಲಿತೋಪಾಖ್ಯಾನದ "ಸಹಸ್ರಾಯು ಕಥೆ" ಕೃತಿ ರಚಿಸಿದವನು ಸೀತಾರಾಮಸೂರಿ (ಸು.1840) ಎಂಬ ಕವಿ. ಭಾಗವತದಲ್ಲಿ ಬರುವ ಸ್ಮರಜನಿಸಿ ರತಿ ಕೈಹಿಡಿದ ಸಂಗತಿಯ ಶಂಬರಾಸುರನ ಕಾಳಗವೆಂಬ ಯಕ್ಷಗಾನ ಕೃತಿಯನ್ನು ಸುಬ್ರಹ್ಮಣ್ಯ ಕವಿ (1840) ರಚಿಸಿದ್ದಾನೆ. ನರಸಿಂಹಪುರಾಣದ ಕಥೆಯನ್ನು ಒಳಗೊಂಡ ಪ್ರಹ್ಲಾದ ಚರಿತೆಯ ಕನ್ನಡ ಟೀಕೆ ವಿದ್ವತ್ ಪ್ರತೋಷಿಣಿಯನ್ನು ರಂಗಶಾಸ್ತ್ರಿ (1849ರಲ್ಲಿ) ರಚಿಸಿದ್ದಾನೆ. ಅಪರಾಳ ತಮ್ಮಣ್ಣ (ಸು.1850) ರಚಿಸಿದ ಕೃಷ್ಣಪಾರಿಜಾತ ಯಕ್ಷಗಾನ ಪ್ರಸಿದ್ಧ ಕೃತಿಯಾಗಿದೆ.

ಇನ್ನು ಮುಮ್ಮಡಿ ಕೃಷ್ಣರಾಜರ ಹಾಗೆ ಅನೇಕ ಕೃತಿಗಳನ್ನು ರಚಿಸಿದವರಲ್ಲಿ ಅಳಿಯ ಲಿಂಗರಾಜರು (1823–74) ಮುಖ್ಯರು. ಇವರ ಕೃಷ್ಣಬಾಲಲೀಲೆ, ರುಕ್ಮಾಂಗದ ಚರಿತೆ, ಸ್ಯಮಂತೋಪಾಖ್ಯಾನ ಯಕ್ಷಗಾನಗಳು ವಿಷ್ಣುಪುರಾಣ ಆಧಾರಿತ ಕೃತಿಗಳಾಗಿವೆ. ಈತನ 'ಪ್ರಭಾವತೀ ಪರಿಣಯ' ಹರಿವಂಶದ ಕಥೆಯನ್ನು ವಾರ್ಧಿಕ ಷಟ್ಪದಿಯಲ್ಲಿ ರಚಿಸಿದ ದೊಡ್ಡ ಗ್ರಂಥವಾಗಿದೆ.

ಹೀಗೆ 17–18ನೇ ಶತಮಾನದ ಕೃತಿಗಳನ್ನು ಟಿವಿವೆಂಕಟಾಚಲ ಶಾಸ್ತ್ರಿಗಳು ಸಮೀಕ್ಷಿಸಿದ್ದಾರೆ (ಸಾಹಿತ್ಯ ಸನ್ನಿಧಿ, 70–94 ಪುಟಗಳು).

18ನೇ ಶತಮಾನದ ಕಾವ್ಯಗಳು–2

ಶ್ರೀನಿವಾಸನೆಂಬ ಕವಿ ಆಗ್ನೇಯ ಪುರಾಣೋಕ್ತವಾದ "ತುಲಾಕಾವೇರಿ ಮಹಾತ್ಮ್ಯ"ವೆಂಬ ಗದ್ಯಾನುವಾದಕ್ಕೆ ಕನ್ನಡ ವ್ಯಾಖ್ಯಾನ ಬರೆದಿದ್ದಾನೆ. ರಂಗಯ್ಯನೆಂಬ ಕವಿ (1730) ಸಹ ಸ್ಕಂದಪುರಾಣದ ಆಧಾರದ ಮೇಲೆ "ಕಾವೇರಿ ಮಹಾತ್ಮ್ಯ" ಎಂಬ ಭಾಮಿನೀ ಷಟ್ಪದಿ ಕೃತಿಯನ್ನು ರಚಿಸಿದ್ದಾನೆ. ಇನ್ನು ಕಳಲೆ ನಂಜರಾಜನು (1740) 'ಹರಿವಂಶ' ಕಾವ್ಯವನ್ನು ರಚಿಸಿದ್ದಾನೆ. 1740ರಲ್ಲಿದ್ದ ಗೋಪಾಲರಾಜನೆಂಬ ಮೈಸೂರು

ಅರಸರ ಕುಲಸ್ಥ ಹಿಮವದ್‌ಗೋಪಾಲಸ್ವಾಮಿ ಬೆಟ್ಟದ ಮಹಿಮೆಯನ್ನು ಭವಿಷ್ಯೋತ್ತರ ಪುರಾಣೋಕ್ತ ವಿಷಯವನ್ನು ಆಧರಿಸಿ ಬರೆದಿದ್ದಾನೆ. ತಿಪ್ಪಾರಾರ್ಯ (ಸು.1750) ಭಾಗವತ ಮೂಲದ 'ಕಾಳಿಯನಾರ್ದನ ಕುಚೇಲೋಪಾಖ್ಯಾನ'ಗಳೆಂಬ ಯಕ್ಷಗಾನಗಳನ್ನು ರಚಿಸಿದ್ದಾನೆ.

ಬ್ರಹ್ಮಾಂಡಪುರಾಣದಲ್ಲಿರುವ 'ಶ್ರೀರಂಗಮಹಾತ್ಮ್ಯ'ವನ್ನು ಕುರಿತು ಗದ್ಯದಲ್ಲಿ ಸಿಂಗರಾಚಾರ್ಯ (1770–76)ರಲ್ಲಿ (ಬೆಟ್ಟದ ಚಾಮರಾಜನಿಗೆ ಉಪಾಧ್ಯಾಯನಾಗಿದ್ದವನು) ರಚಿಸಿದ್ದಾನೆ. ಭಾಗವತ ಪುರಾಣಾಂತರ್ಗತವಾದ 'ಸುಧಾಮ ಕಥೆ'ಯನ್ನು ಜಲಕ್ರೀಡೆ ರಾಸಕ್ರೀಡೆ ಕೃತಿಗಳನ್ನು ಸು.1780ರಲ್ಲಿದ್ದ ಮಾನಮಧುರೆದಾಸನು ಬರೆದಿದ್ದಾನೆ. 1800ರಲ್ಲಿದ್ದ ರಂಗಾಚಾರ್ಯ ಬರೆದ ಪ್ರಹ್ಲಾದ ಚರಿತೆ ಕನ್ನಡದಲ್ಲಿ ಪ್ರಹ್ಲಾದನ ಮೇಲೆ ರಚಿತವಾದ ಎರಡನೇ ಯಕ್ಷಗಾನ ಕೃತಿ. ಭವಿಷ್ಯೋತ್ತರ ಪುರಾಣದಲ್ಲಿ ಹೇಳಿದ್ದನ್ನು ಗಮನಿಸಿ ಏರಿಶೇಷಾಚಾರ್ಯ (ಸು.1800) ರಚಿಸಿದ ಶ್ರೀನಿವಾಸ ಕಲ್ಯಾಣ ಇನ್ನೊಂದು ಯಕ್ಷಗಾನ ಕೃತಿ ಆಗಿದೆ.

17ನೇ ಶತಮಾನದ ಕೃತಿಗಳು :

ಚೆನ್ನಿಗನೆಂಬ ಕವಿ (ಸು.1700) 'ನರಸಿಂಹ ಚಾರಿತ್ರ'ವೆಂಬ ಸಾಂಗತ್ಯ ಕೃತಿಯನ್ನು ಭಾಗವತ ಪುರಾಣ ಆಧರಿಸಿ ಬರೆದಿದ್ದಾನೆ. ಕೃಷ್ಣಕವಿ (1700) ಕೃಷ್ಣಕರ್ಣಾಮೃತವೆಂಬ ಭಾಮಿನೀ ಷಟ್ಪದಿ ಕಾವ್ಯವನ್ನು ಭಾಗವತಪುರಾಣದ ದಶಮಸ್ಕಂದದ ಕಥೆ ಆಧರಿಸಿ ಬರೆದಿದ್ದಾನೆ. ವೆಂಕಟಾರ್ಯನೆಂಬ ಗುರುವಿನ ಶಿಷ್ಯ (1700) ಯಾದವಗಿರಿ ಮಹಾತ್ಮ್ಯ ಮತ್ತು ಕೃಷ್ಣಗೋಪೀವಿಲಾಸ ಎಂಬ ಸಾಂಗತ್ಯ ಕೃತಿಗಳನ್ನು ರಚಿಸಿದ್ದಾನೆ. ಭಗವಚ್ಚರಿತ್ರೆಯೆಂಬ ವಾರ್ಧಕಷಟ್ಪದಿ ಗ್ರಂಥವನ್ನು ವಿಜಯವೆಂಕಟರಮಣನೆಂಬ ಕವಿ (ಸು. 1700) ಭಾಗವತವನ್ನು ಆಧರಿಸಿ ಬರೆದಿದ್ದಾನೆ. ಶ್ರೀಶೈಲಾರ್ಯನ (1700) ಸಾಂಗತ್ಯ ಕೃತಿ ಕೃಷ್ಣಚಾರಿತ್ರ ಶತಕಗ್ರಂಥವಾಗಿದೆ.

ಮೇಲ್ಕಂಡ 17ನೇ ಶತಮಾನದ ಕೃತಿಗಳನ್ನೆಲ್ಲಾ ವೆಂಕಟಾಚಲಶಾಸ್ತ್ರಿಗಳು 'ಕನ್ನಡ ಪುರಾಣಗಳು' ಲೇಖನದಲ್ಲಿ ಪ್ರಸ್ತಾಪಿಸಿದ್ದಾರೆ.

18ನೇ ಶತಮಾನದ ಕೃತಿಗಳು

ಪುರಾಣಗಳನ್ನು ಅವಲಂಬಿಸಿ ಬರೆದ ಕೃತಿಗಳು 18ನೇ ಶತಮಾನದಲ್ಲಿ ಸಾಕಷ್ಟು ಬಂದಿವೆ. ಸ್ಕಂದಪುರಾಣದಲ್ಲಿ ಕಂಡುಬರುವ ಕಥೆಗೆ ಸದೃಶವಾಗಿ ಇರುವ ವರಾಹಪುರಾಣದಲ್ಲಿ ಬರುವ ಕಥೆಯನ್ನು ಅವಲಂಬಿಸಿ ಕಳಲೆ ವೀರರಾಜನ ಆಶ್ರಿತಕವಿ ಚೆನ್ನಯ್ಯ (1720) 'ಪದ್ಮಿನೀ ಪರಿಣಯ'ವೆಂಬ ಸಾಂಗತ್ಯ ಗ್ರಂಥ ರಚಿಸಿದ್ದಾನೆ. ಲಕ್ಷ್ಮಣ ಕವಿ (1723) ವಾರ್ಧಿಕಷಟ್ಪದಿಯಲ್ಲಿ ರುಕ್ಮಾಂಗದ ಚರಿತೆಯನ್ನು ರಚಿಸಿದ್ದಾನೆ. ಅಳಿಯ ಲಿಂಗರಾಜ (1853) ಯಕ್ಷಗಾನ ರುಕ್ಮಾಂಗದ ಚರಿತೆ ರಚಿಸಿದ್ದಾನೆ. ಹೀಗಾಗಿ ಸೋಮನಾಥ ಶೇಷಕವಿ ಚಿಕ್ಕೂಪಾಧ್ಯಯ 5 ಜನರು ಕನ್ನಡದಲ್ಲಿ ರುಕ್ಮಾಂಗದ ಚರಿತೆ ರಚಿಸಿದ್ದಾರೆ.

ಟಿ.ವಿ. ವೆಂಕಟಾಚಲಶಾಸ್ತ್ರಿ ಅವರು ಪರಿಷ್ಕರಿಸಿರುವ, ವೈ.ಜಿ. ಸುಬ್ಬರಾಯರು ರಚಿಸಿದ ಚಂಪೂಕಾವ್ಯ ಮುಖ್ಯವಾಗಿ ಸ್ಕಂದಪುರಾಣವನ್ನು ಅವಲಂಬಿಸಿ ಬರೆದ 19–20ನೇ ಶತಮಾನದಲ್ಲಿ ರಚಿತವಾದ ಕೃತಿ. ಸ್ಯಮಂತೋಪಾಖ್ಯಾನದ ಕಥೆಯನ್ನು ಇಲ್ಲಿ ವಿಘ್ನರಾಜೀಯ ಎಂಬ ಹೆಸರಲ್ಲಿ ಕಾವ್ಯವಾಗಿ ಬರೆದಿದ್ದಾರೆ. ಸ್ಯಮಂತೋಪಾಖ್ಯಾನವು ಭಾರತ, ಭಾಗವತ, ಸ್ಕಂದಪುರಾಣಗಳಲ್ಲಿ ಹಲವು ವ್ಯತ್ಯಾಸಗಳೊಡನೆ ಕಾಣಿಸಿಕೊಳ್ಳುತ್ತದೆ. ವ್ರತಾನುಸಂಬಂಧಿಯಾದ ಎಂದರೆ ವಿನಾಯಕವ್ರತಕ್ಕೆ ಸಂಬಂಧಿಸಿದಂತೆ ಬರುವ ಈ ಕಥೆ ಜನಪ್ರಿಯ ಪುರಾಣಕಥೆಗಳಲ್ಲಿ ಒಂದಾಗಿದ್ದು ಹಲವರು ಈ ವಸ್ತುವನ್ನು ಕುರಿತು ಕೃತಿ ರಚಿಸಿದ್ದಾರೆ. ಆ ಪೈಕಿ ವಿಘ್ನರಾಜೀಯವೂ ಒಂದಾಗಿದೆ.

20ನೇ ಶತಮಾನದಲ್ಲಿ ಸಾಕಷ್ಟು ಕೃತಿಗಳು ರಚಿತವಾಗಿವೆ. ಗಮಕಿ ಬಿ.ಎಸ್.ಎಸ್. ಕೌಶಿಕ್ ಅವರು ಷಟ್ಪದಿಯಲ್ಲಿ ರಚಿಸಿರುವ ಶ್ರೀದೇವೀ ಮಹಾತ್ಮ್ಯ ದರ್ಶನ ಗಮಕ ಕಾವ್ಯವಾಚನಕ್ಕಾಗಿ ಬರೆದ ಗ್ರಂಥವಾಗಿದೆ. ದೇವೀಭಾಗವತ ಪುರಾಣದ ವಸ್ತುವನ್ನು ಒಳಗೊಂಡಿದೆ.

ಕೃಷ್ಣಸ್ತುತಿ ಪ್ರಾಧಾನ್ಯದ ಕೃತಿಗಳು

ಕೃಷ್ಣಸ್ತುತಿ ವೈಷ್ಣವ ಪುರಾಣಗಳಲ್ಲಿ ಬರುವುದು ಸಹಜ. ಆದರೆ ಅವು ಪ್ರಧಾನವಾಗಿ ವರ್ಣನೆಗಳಾಗಿ ಸ್ತೋತ್ರಗಳಾಗಿ ಬರುವ ಕೃತಿಗಳಾಗಿವೆ.

ಜಗನ್ನಾಥ ವಿಜಯ, ವಿಷ್ಣುಪುರಾಣ ಕನ್ನಡ ಚಂಪೂ ಕೃತಿಗಳಲ್ಲಿ ನೋಡಬಹುದು. ಇನ್ನು ಕೆಲವು ಗೀತಕೃತಿಗಳು ನೇರವಾಗಿ ಕೃಷ್ಣನನ್ನು ಕುರಿತ ಕೃತಿಗಳಾಗಿವೆ. ಅವುಗಳಲ್ಲಿ ಜಯದೇವನ ಗೀತಗೋವಿಂದವನ್ನು ಆಧರಿಸಿ ಬರೆದ ಗೀತಗೋಪಾಲ ಪ್ರಸಿದ್ಧ ಕೃತಿಯಾಗಿದೆ. ಚಿಕ್ಕದೇವರಾಜರು (1672–1704) ರಚಿಸಿದ ಈ ಕೃತಿ ಕೀರ್ತನ ರೂಪದಲ್ಲಿದೆ. ಕಂದ ವೃತ್ತಗಳು ಹಳಗನ್ನಡದಲ್ಲಿದ್ದು, ಕೀರ್ತನೆಗಳು ಹೊಸಗನ್ನಡದಲ್ಲಿರುವುದು ಈ ಕೃತಿಯ ವೈಶಿಷ್ಟ್ಯ.

ಮಹಿಳೆಯರು ರಚಿಸಿದ ಕೃತಿಗಳು

ಚಿಕ್ಕದೇವರಾಜ ಒಡೆಯರ ಆಶ್ರಿತಳಾದ ಶೃಂಗಾರಮ್ಮ (ಸು. 1685) ಸ್ಕಂದಪುರಾಣದ ವೆಂಕಟಾಚಲ ಮಹಾತ್ಮ್ಯವೆಂಬ ಭಾಗದ ಪದ್ಮಾವತಿ–ವೆಂಕಟೇಶ ಕಲ್ಯಾಣದ ಕಥೆಯನ್ನು ಪದ್ಮಿನೀ ಕಲ್ಯಾಣವೆಂಬ ಹೆಸರಿನಲ್ಲಿ ಸಾಂಗತ್ಯದಲ್ಲಿ ಬರೆದಿದ್ದಾಳೆ.

ಮೈಸೂರು ದೊರೆ ದೊಡ್ಡಕೃಷ್ಣರಾಜ (1713–31) ರಾಣಿ ಚೆಲುವಾಂಬೆ (ಸು. 1725) ರಚಿಸಿರುವ ವರನಂದೀ ಕಲ್ಯಾಣ ಪುರಾಣದ ಕಥೆಯ ಹಿನ್ನೆಲೆಯಲ್ಲಿ ಬರೆದ ಆಧುನಿಕ ಕೃತಿಯಾಗಿದೆ.

ಗೀತಗೋವಿಂದ

ಕನ್ನಡದಲ್ಲಿ ಕಾವ್ಯರೂಪದಲ್ಲಿ ದಿವಂಗತ ಸಕ್ಕರಿ ಬಾಳಾಚಾರ್ಯ (ಶಾಂತ ಕವಿಗಳು) 'ವಿರಹ ತರಂಗ' ಎಂಬ ಹೆಸರಿನಿಂದ ಗೀತಗೋವಿಂದವನ್ನು ಪದ್ಯರೂಪದಲ್ಲಿ ರಚಿಸಿದ್ದಾರೆ.

1956ರಲ್ಲಿ ಕುಲವರ್ಮ ಬಾಲಕೃಷ್ಣ ಅವರು ಸಂಸ್ಕೃತ ಮೂಲದೊಡನೆ ಕನ್ನಡ ಗದ್ಯಾನುವಾದದ ಗೀತಗೋವಿಂದವನ್ನು ಕನ್ನಡಿಸಿದ್ದಾರೆ. ಬೇಂದ್ರೆಯವರು ಈ ಗದ್ಯಾನುವಾದವನ್ನು "ಗದ್ಯಕಾವ್ಯದಂತೆಯೇ ಹದವಾದ ರುಚಿಯುಳ್ಳದ್ದಾಗಿದೆ" ಎಂದಿದ್ದಾರೆ.

ಸಂಗ್ರಹಾನುವಾದಗಳು (ಸಮಗ್ರ)

ಶ್ರೀ ಸಾಗರ ರಾಮಾಚಾರ್ಯಕೃತ ಸುನೀತಿ ಭಾಗವತ (ಮೂಲ ಮತ್ತು ಕನ್ನಡಾನುವಾದ) ಕನ್ನಡದಲ್ಲಿ ಒಂದು ವಿಶಿಷ್ಟ ಪುಟ್ಟ ಕೃತಿ. ಸಂಸ್ಕೃತದಲ್ಲಿ (17ನೇ ಶತಮಾನದಲ್ಲಿದ್ದ) ಸಾಗರ ರಾಮಾಚಾರ್ಯರು ಇದನ್ನು ದ್ವಾದಶಸ್ಕಂಧಗಳಲ್ಲಿ 470 ಶ್ಲೋಕಗಳಲ್ಲಿ ರಚಿಸಿದ್ದಾರೆ. ಭಾಗವತದ ಕಥೆಗಳನ್ನೇ ಕೆಲವೇ ವಾಕ್ಯಗಳಲ್ಲಿ ಸಾರರೂಪವಾಗಿ ಉಲ್ಲೇಖಿಸುತ್ತಾರೆ. ಪ್ರತಿ ಕಥೆಗೂ ಒಂದೊಂದು ನೀತಿಯನ್ನು ಹೇಳುತ್ತಾರೆ. ಒಂದು ಪ್ರಸಂಗ ಒಂದು ನೀತಿ ಸೇರಿ ಒಂದು ಶ್ಲೋಕ – ಈ ರೀತಿ ಗ್ರಂಥ ರಚಿಸಿದ್ದಾರೆ. ವಿದ್ಯಾರ್ಥಿಗಳಿಗೆ ಉಪಯುಕ್ತ ಗ್ರಂಥ. ದಿನನಿತ್ಯದ ಜೀವನಕ್ಕೆ ಉಪಯುಕ್ತವಾದ ನೀತಿಗಳನ್ನು ಹೇಳಿರುವುದಲ್ಲದೆ, ಒಂದೊಂದು ನೀತಿಗೆ ಒಬ್ಬೊಬ್ಬ ಭಕ್ತರ ಕಥೆಗಳನ್ನು ದೃಷ್ಟಾಂತವಾಗಿ ಹೊಂದಿಸಿದ್ದಾರೆ. ಇದು ವಿಶೇಷ ಸಂಗತಿ. ಉದಾಹರಣೆಗೆ ಒಂದನ್ನು ಗಮನಿಸಬಹುದು.

> **ಸ್ವಯಂ ವ್ರಜೇನ್ನ ಯುದ್ಧಾರ್ಥಂ ನ ಮುಂಚೇತ್ ಸಮುಪಾಗತಾನ್**
> **ಚಾಪರಕ್ಷಾನ್ ಬಲಂ ಚೇತೋಗಜಂ ಮಲ್ಲಾನನಾಶಯತ್**
> (ಸ್ಕಂದ–10, ಶ್ಲೋಕ 57)

(ಯಾವನೇ ಆಗಲಿ ತಾನೇ ಮೇಲೆ ಬಿದ್ದು ಯುದ್ಧಕ್ಕೆ ಹೋಗಬಾರದು; ಆದರೆ ಯುದ್ಧಕ್ಕಾಗಿ ಬಂದವರನ್ನು ಕೊಲ್ಲದೇ ಸುಮ್ಮನೆ ಬಿಡಬಾರದು. ಶ್ರೀಕೃಷ್ಣನು ತಾನು ಸ್ವತಃ ಎಲ್ಲಿಯೂ ಯುದ್ಧಕ್ಕೆ ಹೋಗದಿದ್ದರೂ ತನ್ನ ಮೇಲೆ ಆಕ್ರಮಣ ಮಾಡಲು ಬಂದ ಧನುರ್ಧಾರಿಗಳನ್ನು ಪ್ರಬಲವಾದ ಸೈನ್ಯವನ್ನು, ಕುವಲಯಾಪೀಡ ಎಂಬ ಆನೆಯನ್ನು, ಚಾಣೂರಮುಷ್ಟಿಕರೆಂಬ ಹೆಸರಿನ ಮಲ್ಲರನ್ನು ಕೊಂದು ಹಾಕಿದನು).

ಹೀಗೆ ಸಮಗ್ರ ಭಾಗವತದ ಪ್ರಸಂಗಗಳನ್ನು ಒಂದೊಂದೇ ವಾಕ್ಯದಲ್ಲಿ ದೃಷ್ಟಾಂತಗಳಾಗಿ ಉದಾಹರಿಸಿ ಅದರಲ್ಲಿ ಕಂಡು ಬರುವ ನೀತಿಯನ್ನು ಒಂದೊಂದೇ ಶ್ಲೋಕದಲ್ಲಿ ವಿವರಿಸಿರುವುದನ್ನು ವಿಸ್ತರಿಸಿ ಬರೆದರೆ ಮಕ್ಕಳಿಗೆ ಸೊಗಸಾದ ನೀತಿಚಿಂತಾಮಣಿಯಂಥ ಕನ್ನಡ ಗ್ರಂಥವನ್ನು ರಚಿಸಬಹುದು.

ಶ್ರೀಕೃಷ್ಣ ಬಾಲಲೀಲೆ (ಕೀರ್ತನೆಗಳ ಮೂಲಕ ಭಾಗವತ)

ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ (1796–1868) ಇದ್ದ ತಿಮ್ಮಪ್ಪದಾಸರು (1770–1860) ಕನ್ನಡದ ಅದ್ವೈತ ಹರಿದಾಸರಲ್ಲಿ

ಪ್ರಸಿದ್ಧರಾದವರು. ಭಾಗವತ ಧರ್ಮದವರು ಸಾಕಷ್ಟು ಅದ್ವೈತಪರ ಕೀರ್ತನೆಗಳನ್ನು ರಚಿಸಿದ್ದಾರೆ. ಆ ಪೈಕಿ ಭಾಗವತ ಧರ್ಮ ಪ್ರತಿಪಾದಿಸುವ ಕೀರ್ತನೆಗಳ ಶ್ರೀಕೃಷ್ಣಬಾಲಲೀಲೆ (ಭಾಗ 1 ಮತ್ತು 2) ಗ್ರಂಥವನ್ನು ಎಂ.ವಿ. ಸೀತಾರಾಮಯ್ಯನವರು ಸಂಪಾದಿಸಿದ್ದಾರೆ. ಉಪಯುಕ್ತವಾದ ವಿಮರ್ಶಾತ್ಮಕವಾದ ಟಿಪ್ಪಣಿಗಳಿಂದ 180 + 80 = 268 ಕೀರ್ತನೆಗಳಲ್ಲಿ ಶ್ರೀಕೃಷ್ಣನ ಬಾಲಲೀಲೆಗಳು ವರ್ಣಿತವಾಗಿವೆ. ಇಲ್ಲಿಯ ಕೀರ್ತನೆಗಳು ಹರಿದಾಸರ ಕೀರ್ತನೆಗಳ ಹಾಗೆ 3ರಿಂದ 11 ಅಥವಾ 15ರವರೆಗೆ ಚರಣಗಳನ್ನು ಒಳಗೊಂಡಿಲ್ಲ; 50ಕ್ಕೂ ಮೀರಿದ ಚರಣಗಳುಳ್ಳ ಹಾಡುಗಳಿವೆ. ಹಾಗಾಗಿ 286 ಕೀರ್ತನೆಗಳೇ ಆದರೂ 600ಕ್ಕೂ ಮಿಕ್ಕ ಪುಟಗಳಷ್ಟು ಗಾತ್ರದಲ್ಲಿದೆ. ಕೀರ್ತನಕಾವ್ಯವೆಂದು ಎಂ.ವಿ.ಸೀ. ಅವರು ಕರೆದಿದ್ದರೂ, ಕಥನಕಾವ್ಯವೆಂದು ಕರೆಯಬಹುದಾಗಿದೆ. ಕನ್ನಡ ಕೀರ್ತನ ಸಾಹಿತ್ಯದಲ್ಲಿ ಭಾಗವತವನ್ನು ಕುರಿತ ದೀರ್ಘ ಕೃತಿಗಳಲ್ಲಿ ಇದು ದೊಡ್ಡ ಗ್ರಂಥವಾಗಿದೆ.

ಈ ಸಂದರ್ಭದಲ್ಲಿ ಇದೇ ರೀತಿ ಭಾಗವತದ ಕಥೆ ಹೇಳುವ ಇನ್ನೊಂದು ಕೃತಿ ಎಂದರೆ ಪ್ರಸನ್ನವೆಂಕಟದಾಸರ 'ಭಾಗವತ ಕೀರ್ತನೆಗಳು' ಗಮನಾರ್ಹ ಕೃತಿ ಆಗಿದೆ.

ತಿಮ್ಮಪ್ಪದಾಸರ ಇನ್ನೊಂದು ಸಾಂಗತ್ಯ ಛಂದಸ್ಸಿನ ಕಾವ್ಯ 'ಧ್ರುವ ಚರಿತ್ರೆ' ಭಾಗವತದ ಕಥೆಯನ್ನು ಒಳಗೊಂಡ ಕೃತಿ. ಕನ್ನಡದಲ್ಲಿ ಹಲವಾರು ಧ್ರುವ ಚರಿತ್ರೆಗಳಿವೆ. ಸಂಪ್ರದಾಯದ ಹಾಡಿನ ಧಾಟಿಯಲ್ಲಿ ರಚಿತವಾದ ಧ್ರುವಚರಿತ್ರೆಗಳಿವೆ.

ಪ್ರಹ್ಲಾದ ಚರಿತ್ರೆ (ಷಟ್ಪದೀ ಕಾವ್ಯ)

1650ರಲ್ಲಿದ್ದ ನರಹರಿ ಕವಿ 17 ಸಂಧಿಗಳಲ್ಲಿ 1120 ಷಟ್ಪದಿಗಳಲ್ಲಿ ಪ್ರಹ್ಲಾದ ಚರಿತ್ರೆಯನ್ನು ವಿಸ್ತಾರವಾಗಿ ಬರೆದಿದ್ದಾನೆ. ಸರಳವಾದ ಷಟ್ಪದಿಗಳಲ್ಲಿರುವ ಈ ಕಾವ್ಯವನ್ನು ಆರ್.ಎಸ್. ರಾಮರಾವ್ ಅವರು ಸಂಪಾದಿಸಿದ್ದಾರೆ. ಗಮಕವಾಚನಕ್ಕೆ ಹೇಳಿ ಮಾಡಿಸಿದಂತೆ ಇರುವ ಈ ಕಾವ್ಯಕ್ಕೆ ಸ.ವೆಂಕಟಾಚಲಪತಿ ಅವರು ಪ್ರಸ್ತಾವನೆ ಬರೆದಿದ್ದಾರೆ. ಈ ಕಾವ್ಯದಲ್ಲಿ ಸೊಗಸಾದ ಗಾದೆಗಳನ್ನು ವಿಪುಲವಾಗಿ ಕವಿ ಬಳಸಿದ್ದಾನೆ.

ನಿತ್ಯಾತ್ಮಶುಕಯೋಗಿ (ಚಾಟುವಿಠ್ಠಲನಾಥ) ಕನ್ನಡ ಭಾಗವತ (ಷಟ್ಪದಿ ಕಾವ್ಯ)

ಕನ್ನಡದಲ್ಲಿ ಗಮಕಿಗಳ ಮೂಲಕ ನಾಡಿನಾದ್ಯಂತ ಪ್ರಚಾರವಾಗಿರುವ ಕಾವ್ಯಗಳು ಕೆಲವೇ ಕೆಲವು. ಅವುಗಳ ಪೈಕಿ ಕುಮಾರವ್ಯಾಸಭಾರತ, ತೊರವೆ ರಾಮಾಯಣ, ಜೈಮಿನಿ ಭಾರತ, ಹರಿಶ್ಚಂದ್ರ ಕಾವ್ಯ, ಚಾಟುವಿಠ್ಠಲನಾಥ ಭಾಗವತ ಪಂಚಮಹಾಕಾವ್ಯಗಳು ಕನ್ನಡದಲ್ಲಿ ಪ್ರಸಿದ್ಧವಾಗಿವೆ. ಹಾಗೆಯೇ ಪ್ರಭುಲಿಂಗಲೀಲೆ ಮುಂತಾದ ವೀರಶೈವ ಕಾವ್ಯಗಳೂ, ಪಂಪ ರಾಮಾಯಣ, ಪಂಪ ಭಾರತ ಮುಂತಾದ ಜೈನ ಕಾವ್ಯಗಳು ಗಮಕಿಗಳ ಮೂಲಕ ಜನತಾಜನಾರ್ದನನನ್ನು ತಲುಪಿವೆ. ಉಳಿದ ಚಂಪೂ ಷಟ್ಪದಿ ಕಾವ್ಯಗಳು ಜನರಿಂದ ದೂರ ಉಳಿದಿವೆ. ಈ ಎಲ್ಲ ಕೃತಿಗಳಲ್ಲಿ ಮಹಾಪುರಾಣಗಳ ಪ್ರಭಾವ, ಭಾವಾನುವಾದಗಳನ್ನು ಕಾಣಬಹುದು. ಈ ಪೈಕಿ ಕನ್ನಡ ಭಾಗವತವು ನೇರವಾಗಿ ಕನ್ನಡದಲ್ಲಿ ಷಟ್ಪದಿ ರೂಪವಾಗಿ ಬಂದಿರುವ ಏಕೈಕ ಸಮಗ್ರ ಮೊದಲ ಕಾವ್ಯವಾಗಿದೆ. 1911ರಲ್ಲಿ ಶ್ರೀಮದ್ವಿಷ್ಣು ಭಾಗವತ ಎಂಬ ಹೆಸರಿನಲ್ಲಿ 1926ರಲ್ಲಿ ಪುನರ್ಮುದ್ರಣವಾಗಿ ಎಂ.ವಿ. ಶಾಸ್ತ್ರಿಗಳಿಂದ ಪರಿಶೀಲನೆಗೆ ಒಳಗಾಯಿತು. 1928ರಲ್ಲಿ ಕೃಷ್ಣಯ್ಯಶೆಟ್ಟಿ ಅವರಿಂದ ಪ್ರಕಟವಾದ ಸಮಗ್ರಕೃತಿ ಅನಂತರ ಪ್ರಕಟವಾಗದೆ ಪ್ರತಿಗಳು ಸಿಗದೆ ಭಾಗವತ ವಚನಕಾರರು ಕಡಿಮೆ ಆದರು. ಆದರೆ ಆಮೇಲೆ ಎರಡು ಪ್ರಯತ್ನಗಳು ನಡೆದವು. ಅವುಗಳಲ್ಲಿ ಒಂದು ಕೆ. ವೆಂಕಟರಾಮಪ್ಪ ನವರು ಕೈಕೊಂಡ ಏಕಾಂಗ ಸಾಹಸ ಕನ್ನಡ ಭಾಗವತ ಪರಿಷ್ಕೃತ ಮುದ್ರಣವಾಗಿದೆ ಸುಮಾರು 1500ರಲ್ಲಿದ್ದ ಚಾಟುವಿಠ್ಠಲನಾಥ ಅಥವಾ ನಿತ್ಯಾತ್ಮ ಯೋಗಿ ಅಥವಾ ಸದಾನಂದ ಯೋಗಿ ಹೆಸರಿನ ಕವಿ ರಚಿಸಿದ ಕನ್ನಡ ಭಾಗವತ ಸುಮಾರು 11680 ಷಟ್ಪದಿಗಳಲ್ಲಿ ರಚಿಸಿದ್ದಾನೆ. ಮತ್ಯಾರೂ ಭಾಗವತ ಮಹಾಪುರಾಣವನ್ನು ಈ ಪ್ರಮಾಣದಲ್ಲಿ ಕನ್ನಡದಲ್ಲಿ ಪದ್ಯ ರೂಪದಲ್ಲಿ ಅನುವಾದಿಸಿಲ್ಲ. ಇದು ಕನ್ನಡ ಭಾಗವತದ ಹಿರಿಮೆ. 1955ರಲ್ಲಿ ಕೆ. ವೆಂಕಟರಾಮಪ್ಪನವರು ಮೂಲ ಷಟ್ಪದಿ ಭಾಗವತದ ಆಧಾರದ ಮೇಲೆ ಶ್ರೀಕೃಷ್ಣಚರಿತೆ ಎಂಬ ಸಂಗ್ರಹ ಕಾವ್ಯವನ್ನು ಪ್ರಕಟಿಸಿದರು. ಯಾವುದೋ ಒಂದು ಹಸ್ತಪ್ರತಿ ಆಧಾರದ ಮೇಲೆ ಸಿದ್ಧಪಡಿಸಿದ ಅಂಗಡಿಮುದ್ರಣ ಸಾಕಷ್ಟು ಅಶುದ್ಧವಾಗಿದ್ದರೂ ಜನಪ್ರಿಯವಾಗಿತ್ತು. ಪಠ್ಯಗ್ರಂಥಗಳಲ್ಲೂ ಅದರ ಭಾಗಗಳನ್ನು

ವಿದ್ಯಾರ್ಥಿಗಳಿಗೆ ಇಡಲಾಗಿತ್ತು. 12 ಸ್ಕಂಧಗಳ ಈ ಕೃತಿಯಲ್ಲಿ ದಶಮಸ್ಕಂಧ ಕೃಷ್ಣನ ಕಥೆಯನ್ನು ಪೂರ್ಣವಾಗಿ ಒಳಗೊಂಡಿದ್ದು ಅತಿಜನಪ್ರಿಯ ಭಾಗವಾಗಿದೆ.

ಕೆ. ವೆಂಕಟರಾಮಪ್ಪನವರು ಸಮಗ್ರ ಕನ್ನಡ ಭಾಗವತ ಷಟ್ಪದಿ ಕಾವ್ಯವನ್ನು ಪರಿಷ್ಕರಿಸಿ ಸಿದ್ದಪಡಿಸುವ ಯೋಜನೆ ಕೈಕೊಂಡು 6 ಸಂಪುಟಗಳಲ್ಲಿ ಓಲೆಗ್ರಂಥಗಳ ಸಹಾಯದಿಂದ ಪೀಠಿಕೆ, ಶಬ್ದಕೋಶ, ಪಾಠ ನಿರ್ಣಯಗಳಿಂದ ಸಿದ್ಧಪಡಿಸಲು ಸಂಕಲ್ಪಿಸಿದರು. ಪ್ರಥಮ ಮತ್ತು ದ್ವಿತೀಯ ಸ್ಕಂಧಗಳನ್ನು ಒಳಗೊಂಡ ಪ್ರಥಮ ಸಂಪುಟವನ್ನು ಪ್ರಕಟಿಸಿದರು. ಅನಂತರ ಜನರ ಬೇಡಿಕೆಗಾಗಿ 1975ರಲ್ಲಿ 1,2,3, 4ನ್ನು 5ನೇ ಸಂಪುಟ 1964ರಲ್ಲಿ ದಶಮಸ್ಕಂಧವನ್ನು ಸಿದ್ದಪಡಿಸಿದರು. ಕಾರಣಾಂತರಗಳಿಂದ ಉಳಿದ ಸಂಪುಟಗಳು ಸಿದ್ಧವಾಗಲಿಲ್ಲ.

1964ರಲ್ಲಿ ಪ್ರಕಟವಾದ (ಕೆ. ವೆಂಕಟರಾಮಪ್ಪನವರಿಂದ ಸಂಪಾದಿತವಾದ) ನಿತ್ಯಾತ್ಮಶುಕಯೋಗಿಯ ಕನ್ನಡ ಭಾಗವತ 500 ಪುಟಗಳ ಗ್ರಂಥ ಇಂದಿಗೂ ಭಾಗವತ ಅನುವಾದ ಗ್ರಂಥದಲ್ಲಿ ಮಹತ್ವದ ಕೃತಿಯಾಗಿದೆ.

ಕರ್ನಾಟಕ ಭಾಗವತ (2008)

ಚಾಟುವಿಠ್ಠಲನಾಥನ ಬಾಗವತವು 3ನೇ ಬಾರಿಗೆ ಪ್ರಕಟಿಸುವ ಯತ್ನವು ಹೊಳಲ್ಕೆರೆ ರಂಗರಾವ್ ಚಂದ್ರಶೇಖರ್ ಅವರಿಂದ ನಡೆಯಿತು. ತಮ್ಮ ಮನೆಯಲ್ಲಿದ್ದ ತಾಳೆಗರಿ ಪ್ರತಿಯನ್ನು ಬೆಳಕಿಗೆ ತರಲು ಯತ್ನಿಸಿದರು. ಡಾ. ಟಿ.ವಿ. ವೆಂಕಟಾಚಲಶಾಸ್ತ್ರಿ ಮತ್ತು ಇತರ ವಿದ್ವಾಂಸರ ಮಂಡಳಿಯ ನೇತೃತ್ವದಲ್ಲಿ ಪರಿಷ್ಕೃತಗೊಂಡು ಶಿಕಾರಿಪುರ ಹರಿಹರೇಶ್ವರರ ಸಂಚಾಲಿಕತ್ವದಲ್ಲಿ ಕೃತಿ ಸಿದ್ಧವಾಗಿ 2 ಸಂಪುಟಗಳಲ್ಲಿ 2008ರಲ್ಲಿ ಪ್ರಕಟವಾಯಿತು. ಉತ್ತಮ ಮುದ್ರಣದಿಂದ ಅಧಿಕ ವೆಚ್ಚದಿಂದ ಪ್ರಕಟವಾಗಿರುವ ಈ ಗ್ರಂಥ. ಇಂಗ್ಲಿಷ್‌ನಲ್ಲಿ ಕಥಾಗದ್ಯಾನುವಾದ, ಅನುಬಂಧ ಪೀಠಿಕೆ ಚಿತ್ರಗಳಿಂದ ಈ ಗ್ರಂಥ 2 ಸಂಪುಟಗಳ ತೂಕದ ಗ್ರಂಥವಾಗಿ ಬೆಲೆ ಕಡಿಮೆಯಿಲ್ಲದೆ ಸಾಮಾನ್ಯರ ಪಾಲಿಗೆ ಎಟುಕದ ಗ್ರಂಥವಾಗಿದೆ. ಆದರೆ ಕನ್ನಡಕ್ಕೆ ಕನ್ನಡ ಭಾಗವತದ ಶುದ್ಧಪ್ರತಿ ಮೊದಲ ಬಾರಿಗೆ ಸಮಗ್ರವಾಗಿ ದೊರಕಿದೆ.

ನಾರಾಯಣೀಯಂ (ಮೂಲ – ಕನ್ನಡಾನುವಾದ)

ಕೇರಳದ ಪ್ರಸಿದ್ಧ ಮಹಾಕವಿ ಮೆಪ್ಪತ್ತೂರು ನಾರಾಯಣ ಭಟತಿರಿ (1560–1587) ಸಂಸ್ಕೃತದಲ್ಲಿ ರಚಿಸಿರುವ 1034 ಶ್ಲೋಕಗಳಿರುವ ಸಂಕ್ಷಿಪ್ತ ಭಾಗವತವೇ ನಾರಾಯಣೀಯಂ. ಕೇರಳದಲ್ಲಿ ಅತ್ಯಂತ ಜನಪ್ರಿಯ ಗ್ರಂಥಗಳಲ್ಲಿ ಇದೊಂದು. ಬಿಂಡಿಗನವಿಲೆ ನಾರಾಯಣಸ್ವಾಮಿ ಅವರು ಕನ್ನಡದಲ್ಲಿ ಸಂಸ್ಕೃತ–ಇಂಗ್ಲಿಷ್ ಭಾಷೆಗಳಿಂದ ಕನ್ನಡಕ್ಕೆ ಬೃಹತ್ ಗ್ರಂಥಗಳನ್ನು ಅನುವಾದಿಸಿರುವ ಅನುವಾದಕರಲ್ಲೊಬ್ಬರು. ನಾರಾಯಣೀಯಂ ಇವರಿಂದ ಕನ್ನಡದಲ್ಲಿ ಮೊದಲಬಾರಿಗೆ ಮೂಲ–ಅನ್ವಯ–ತಾತ್ಪರ್ಯ–ಟಿಪ್ಪಣಿಗಳೊಂದಿಗೆ ಪ್ರಕಟವಾಗಿದೆ (2004). ಸುಮಾರು 700 ಪುಟಗಳ ಈ ಗ್ರಂಥ ಭಾಗವತದ 12 ಸ್ಕಂದಗಳನ್ನು ಒಳಗೊಂಡಿದೆ. ಸಂಸ್ಕೃತ ಪದಗಳನ್ನು ಬಿಡಿಸಿಕೊಟ್ಟಿರುವ ಗೋಪಿಗೀತ–ಮುಕುಂದಮಾಲಾ ಮೊದಲಾದವನ್ನು ಅನುವಾದಿಸಿ ಕೊಟ್ಟಿರುವ ಈ ಗ್ರಂಥ ಕನ್ನಡಕ್ಕೆ ವಿಶಿಷ್ಟ ಕೊಡುಗೆಯಾಗಿದೆ.

ಸಂಪೂರ್ಣ ಕನ್ನಡ ಭಾಗವತ (2 ಭಾಗಗಳು)

ನಮ್ಮೊಡನೆ ಇರುವ ಭಕ್ತಕವಿ ಕೆ.ವಿ. ವರದರಾಜಯ್ಯಂಗಾರ್ ಅವರು 13,743 ಪದ್ಯಗಳಲ್ಲಿ ರಗಳೆ, ತ್ರಿಪದಿ, ಷಟ್ಪದಿ, ಚೌಪದಿ ವೃತ್ತಗಳೆಂಬ 5 ಬಗೆ ಛಂದಸ್ಸುಗಳಲ್ಲಿ 20 ತಿಂಗಳ ಅವಧಿಯಲ್ಲಿ ರಚಿಸಿದ ಕಾವ್ಯವಿದು. ಚಾಟುವಿಠ್ಠಲನಾಥನ ಭಾಗವತ ಕಾವ್ಯಕ್ಕಿಂತ ದೊಡ್ಡದು. ಕನ್ನಡದ ಸ್ವತಂತ್ರ ಭಾಗವತ ಕಾವ್ಯಗಳಲ್ಲಿ ಅತಿದೊಡ್ಡ ಕಾವ್ಯವಿದು. 1500ಕ್ಕೂ ಮಿಕ್ಕ ಪುಟಗಳುಳ್ಳ ಈ ಕಾವ್ಯ ಹೊಸಗನ್ನಡದಲ್ಲಿ ರಚಿತವಾಗಿರುವುದರಿಂದ ಜನರಿಗೆ ಸುಲಭಾಸ್ವದಕಾರಿಯಾಗಿದೆ. ಅವರೇ ಹೇಳಿಕೊಂಡಿರುವಂತೆ:

> ಮೂಲದಾಶಯದಲ್ಲೂ ತತ್ವದನುಭವದಲ್ಲೂ
> ಪಾಲಿಸುತ ಭನವತರಸದ ಸರಿನೆಲೆಯ
> ಎಲ್ಲ ಚರಿತೆಗಳನ್ನು ದೇಶಕಾಲದ ವಿವರ
> ಲಲಿತ ತಿಳಿಗನ್ನಡದ ಭಾಷೆಯಲಿ ವಿವರಿಸಿದೆ. (ಮಂಗಳಾ ಪ22)

ಮೂಲಸಹಿತ ಸಮಗ್ರಾನುವಾದ (ಭಾಗವತ)

ಹದಿನೆಂಟು ಪುರಾಣಗಳಲ್ಲಿ ಭಾಗವತವು ಅತ್ಯಂತ ಜನಪ್ರಿಯ ಮಹಾಪುರಾಣವಾಗಿದೆ. ಶ್ರೀಧರಸ್ವಾಮಿಗಳ ಭಾವಾರ್ಥದೀಪಿಕೆ,

ವೀರರಾಘವಸೂರಿಗಳ 'ಭಾಗವತಚಂದ್ರ ಚಂದ್ರಿಕಾ' ವಿಜಯಧ್ವಜತೀರ್ಥರ ಪದರತ್ನಾವಳಿ. ಜೀವಗೋಸ್ವಾಮಿಗಳ ಕ್ರಮಸಂದರ್ಭ, ವಲ್ಲಭಾಚಾರ್ಯರ 'ಸುಬೋಧಿನೀ' ಮುಂತಾದ ವ್ಯಾಖ್ಯಾನಗಳು. ಸುಬೋಧಿನೀ ವ್ಯಾಖ್ಯಾನದ ಬಗ್ಗೆ ಸುಬೋಧಿನೀ ಪ್ರಕಾಶ ವ್ಯಾಖ್ಯಾನ, ಭಾವಾರ್ಥ ದೀಪಿಕೆ ವ್ಯಾಖ್ಯಾನದ ಬಗ್ಗೆ ಭಾವಾರ್ಥ ದೀಪಿಕಾ ಪ್ರಕಾಶ, ಮುಂತಾದ ಮರುವ್ಯಾಖ್ಯಾನಗಳು ಹೀಗೆ ಸುಮಾರು 20ಕ್ಕೂ ಹೆಚ್ಚು ಸಂಸ್ಕೃತ ವ್ಯಾಖ್ಯಾನಗಳು ಅಷ್ಟಾದಶಪುರಾಣಗಳಲ್ಲಿ ಭಾಗವತ ಅತಿಜನಪ್ರಿಯ ಪುರಾಣವೆನ್ನಲು ಸಾಕ್ಷಿಯಾಗಿದೆ. ಇಷ್ಟೊಂದು ವ್ಯಾಖ್ಯಾನಗಳು ಬೇರಾವ ಪುರಾಣಕ್ಕೆ ಇಲ್ಲವೆನ್ನಬಹುದು.

ಕನ್ನಡದಲ್ಲಿ ಭಾಗವತ ಮಹಾಪುರಾಣ ಮೂಲಸಹಿತ ಅನುವಾದ ಮೂಲರಹಿತ ಅನುವಾದ, ಕಾವ್ಯರೂಪ ಸಂಗ್ರಹಾನುವಾದ, ಕಾವ್ಯರೂಪ ಮೂಲಾನುವಾದ, ಭಾಗವತದ ಪ್ರಸಂಗಗಳ ಕಥಾನುವಾದ ಮಕ್ಕಳಿಗಾಗಿ, ನಾಟಕ-ಕಾದಂಬರಿ-ವಿಮರ್ಶಾರೂಪ ಗ್ರಂಥಗಳು ಹೀಗೆ ಹತ್ತಾರು ರೂಪದಲ್ಲಿ ಸುಮಾರು 200ಕ್ಕೂ ಹೆಚ್ಚು ಗ್ರಂಥಗಳು ಭಾಗವತದ ನೇರಾನುವಾದ ಸಂಗ್ರಹಾನುವಾದ ಭಾವಾನುವಾದ ವಿವರಣಾನುವಾದ ವಿದ್ಯಾನುವಾದ ಕಥಾನುವಾದ ಸೃಜನಶೀಲ ಕೃತಿಗಳು ವ್ಯಾಖ್ಯಾನ ಗ್ರಂಥಗಳು ಪ್ರಕಟವಾಗಿವೆ. ಈ ಸಂದರ್ಭದಲ್ಲಿ ಕೆಲವು ಮುಖ್ಯ ಕನ್ನಡಾನುವಾದ ಕೃತಿಗಳನ್ನು ಪರಿಚಯಿಸಲಾಗಿದೆ.

ಕನ್ನಡದಲ್ಲಿ ವೈದಿಕ ಪುರಾಣ ಸಾಹಿತ್ಯವು ವೈವಿಧ್ಯಮಯವಾಗಿ ಹೇಗೆ ಮೂಡಿದೆ ಎಂಬುದಕ್ಕೆ ನಿದರ್ಶನವಾಗಿ ಇಲ್ಲಿ ಭಾಗವತಪುರಾಣದ ಉದಾಹರಣೆ ಕೊಟ್ಟಿದೆ. ಕನ್ನಡದಲ್ಲಿ 18 ಪುರಾಣಗಳ ಉಪಪುರಾಣಗಳ ಅನುವಾದ-ವಿಮರ್ಶೆ ಆಧಾರಿತ ಕೃತಿಗಳ ಸಮೀಕ್ಷೆ ಸಂಶೋಧನಾ ಗ್ರಂಥ ರಚನೆಯ ವಸ್ತುವಾಗಿದೆ. ಕೃಷ್ಣಕಥೆಯನ್ನು ಬ್ರಹ್ಮ, ಪದ್ಮ, ವಿಷ್ಣು, ವಾಯು, ಭಾಗವತ, ಬ್ರಹ್ಮವೈವರ್ತ, ಸ್ಕಂಧ, ವಾಮನ ಕೂರ್ಮಗಳೆಂಬ 9 ಪುರಾಣಗಳಲ್ಲಿ ಕಾಣುತ್ತೇವೆ. ಇದರಲ್ಲಿ ಭಾಗವತ ಮಹಾಪುರಾಣ ಪ್ರಸಿದ್ಧವಾದುದು, ಪ್ರಧಾನವಾದುದು. 18 ವೈದಿಕ ಪುರಾಣಗಳನ್ನು, 18 ಉಪಪುರಾಣಗಳನ್ನು ಕುರಿತು ಒಂದು ಪ್ರಬಂಧ ವ್ಯಾಪ್ತಿಯಲ್ಲಿ ಅದರಲ್ಲೂ ಅರ್ಧ ಗಂಟೆಯ ಕಾಲಾವಧಿಯಲ್ಲಿ ವಿಚಾರಮಂಡನೆ ಮಾಡುವುದು ಅಸಾಧ್ಯದ ಕಾರ್ಯ. ಆದಕಾರಣ, ಕೃಷ್ಣಕಥೆ ಪುರಾಣಗಳಲ್ಲಿ ಬಂದಿದ್ದ ಆಧಾರದ ಮೇಲೆ ಕನ್ನಡದಲ್ಲಿ ಬಂದ ಭಾಗವತ ಆಧಾರಿತ ಕನ್ನಡ ಕೃತಿಗಳಲ್ಲಿ ಕೆಲವನ್ನು ಮಾತ್ರ ಈ ಪ್ರಬಂಧದಲ್ಲಿ ಮಂಡಿಸಿದೆ. 18 ವೈದಿಕ ಪುರಾಣಗಳ ಮತ್ತು ಉಪಪುರಾಣಗಳ ಕುರಿತು ಕನ್ನಡದಲ್ಲಿ ಅನುವಾದವಾಗಿರುವ ಕೃತಿಗಳು ನೂರಾರಿವೆ. ಅವುಗಳನ್ನು ಕುರಿತು ಪ್ರತ್ಯೇಕ ಗ್ರಂಥ ರಚನೆ ಮಾಡಬೇಕಾಗಿದೆ.

ಭಾಗವತಪುರಾಣದ ಕಥೆ ಪುರಾಣಗಳಲ್ಲಿ ಬಂದಿರುವ ರೀತಿನೀತಿಗಳ ತೌಲನಿಕ ಅಧ್ಯಯನ ಮಾಡುವುದು ಅಗತ್ಯವಾಗಿದೆ. ಪ್ರಕೃತ ಭಾಗವತದ ಅನುವಾದಗಳನ್ನು, ಭಾಗವತ ಆಧಾರಿತ ಕನ್ನಡದ ಸ್ವತಂತ್ರ ಕೃತಿಗಳನ್ನಷ್ಟೆ ಪರಾಮರ್ಶೆ ಮಾಡಲಾಗಿದೆ.

ಮೂಲಭಾಗವತ-ಸಮಗ್ರಾನುವಾದ (ಮೂಲಸಹಿತ) ಅನ್ವಯಾರ್ಥ ಮತ್ತು ತಾತ್ಪರ್ಯ

ಕನ್ನಡದಲ್ಲಿ ಮೊದಲ ಬಾರಿಗೆ ಮೂಲಭಾಗವತವನ್ನು ಸಂಸ್ಕೃತ-ಕನ್ನಡ ಅನುವಾದವನ್ನು ಮೂಲ ಅನ್ವಯಾರ್ಥ ತಾತ್ಪರ್ಯ ಟಿಪ್ಪಣಿಗಳೊಂದಿಗೆ ಹಲವು ಸಂಪುಟಗಳಲ್ಲಿ ಹೊರತಂದವರು ಪ್ರಖ್ಯಾತ ವಿದ್ವಾಂಸರಾದ ಮೋಟಗಾನಹಳ್ಳಿ ರಾಮಶೇಷಶಾಸ್ತ್ರಿಗಳು. ವಿದ್ವತ್ಪೂರ್ಣವಾದ ಈ ಗ್ರಂಥದಲ್ಲಿ ಭಾಗವತದ ಸಂಸ್ಕೃತ ಟೀಕೆಗಳಿಂದ ಟಿಪ್ಪಣಿಗಳನ್ನು ಕೊಡಲಾಗಿದೆ. ಕನ್ನಡದಲ್ಲಿ ಅನುವಾದಿತ ಭಾಗವತದಲ್ಲಿ ವಿಶಿಷ್ಟವಾದ ಸಮಗ್ರ ಕೃತಿಯಿದು.

ಶ್ರೀವಿಷ್ಣುಪುರಾಣಂ (ಮೂಲ ಮತ್ತು ಗದ್ಯಾನುವಾದ – 1988)
ಲೇ : ಎನ್. ರಂಗನಾಥ ಶರ್ಮ
ಕನ್ನಡದಲ್ಲಿ ಹಲವರು ವಿಷ್ಣುಪುರಾಣವನ್ನು ಅನುವಾದಿಸಿದ್ದಾರೆ. ಆಪ್ಯೈಕಿ ಹೊಸಗನ್ನಡದಲ್ಲಿ ಸಮಗ್ರವಾಗಿ ಮೂಲದೊಡನೆ ಅನುವಾದಿಸಿರುವವರು ರಂಗನಾಥಶರ್ಮರು.

ಬ್ರಹ್ಮಾಂಡ ಪುರಾಣದ ಉತ್ತರಭಾಗದ ಶ್ರೀಕೃಷ್ಣ ಚರಿತ್ರೆ ವಿಷ್ಣುಪುರಾಣದ 5ನೇ ಅಂಶದಲ್ಲೂ ಕಂಡುಬರುತ್ತದೆ. ಎರಡಕ್ಕೂ ವ್ಯತ್ಯಾಸವಿಲ್ಲ. ಪುರಾಣಗಳಲ್ಲಿ ಪುನರುಕ್ತಿ ಸಾಮಾನ್ಯ.

ವಿಷ್ಣುಪುರಾಣವು ಹಲವು ಕಾರಣಗಳಿಂದ ವೈಶಿಷ್ಟ್ಯಗಳಿಂದ ಕೂಡಿದೆ. ಭಾಷಾಶೈಲಿ ಲಲಿತವಾಗಿದೆ. ಧ್ರುವಚರಿತ್ರೆ, ಪ್ರಹ್ಲಾದ ಚರಿತ್ರೆಗಳು ಕಾವ್ಯಮಯವಾಗಿವೆ, ಜನಪ್ರಿಯವಾಗಿವೆ. ಸುಮಾರು 23,000 ಶ್ಲೋಕಗಳಿವೆ. ಆರು ಅಂಶಗಳ ಈ ಪುರಾಣದಲ್ಲಿ ಮೊದಲಂಶದಲ್ಲಿ ಬರುವ ಧ್ರುವಚರಿತ್ರೆ ಪ್ರಹ್ಲಾದ ಚರಿತ್ರೆ. ದ್ವಿತೀಯಾಂಶದಲ್ಲಿ ಭೂಗೋಳ ವರ್ಣನೆ ಜಡಭರತ ಋಭೂನಿದಾಪುರ ಆಖ್ಯಾನ. ತೃತೀಯಾಂಶದಲ್ಲಿ ಚಾತುರ್ವರ್ಣ್ಯ ಧರ್ಮ ವಿವರಗಳು, ಚತುರ್ಥಾಂಶದಲ್ಲಿ ನಾನಾ ರಾಜವಂಶಗಳ ಕಥೆ. ಪಂಚಮಾಂಶದಲ್ಲಿ ಶ್ರೀಕೃಷ್ಣಚರಿತ್ರೆ, ಷಷ್ಠಾಂಶದಲ್ಲಿ ಪ್ರಳಯ ವಿಚಾರ, ಕಲಿಧರ್ಮ ನಿರೂಪರ್ಣ್ಯ ಇವುಗಳು ಮನಸೆಳೆಯುತ್ತವೆ. ಕಾಳಿದಾಸನ ಕಾವ್ಯಗಳಲ್ಲಿ ವಿಷ್ಣುಪುರಾಣದ ಪ್ರಭಾವ ಕಾಣಬಹುದು. ಈ ಪುರಾಣದಲ್ಲಿ ಬರುವ ಹತ್ತಾರು ನೀತಿಶ್ಲೋಕಗಳನ್ನು ಸುಭಾಷಿತಕಾರರು ಸಂಗ್ರಹಿಸಿದ್ದಾರೆ. ಅದ್ವೈತ ಸಿದ್ಧಾಂತ ಈ ಪುರಾಣದಲ್ಲಿ ಪ್ರತಿಪಾದಿತವಾಗಿದೆ. ಭಾಗವತವು ವಿಷ್ಣುಪುರಾಣದ ಭಾಷ್ಯದಂತಿದೆ. ವಿಷ್ಣುಪುರಾಣದ ವಿಸ್ತೃತರೂಪ ಭಾಗವತವಾಗಿದೆ ಎಂದರೆ ತಪ್ಪಲ್ಲ. ಹೀಗೆ ನಮ್ಮ ಗಮನ ಸೆಳೆವ ಹತ್ತಾರು ವಿಷಯಗಳು ವಿಷ್ಣುಪುರಾಣದ ವಸ್ತುವಾಗಿದೆ. ವಿವರಣೆ, ವ್ಯಾಖ್ಯಾನಗಳಿಲ್ಲದೆ ನೇರಾನುವಾದದಿಂದ ಓದುಗರಿಗೆ ವಾಚನೀಯ ಪುರಾಣವಾಗಿದೆ. ಕನ್ನಡದ ಪುರಾಣಾನುವಾದಗಳಲ್ಲಿ ಇಷ್ಟು ಬಿಗಿಯಾದ ಭಾಷಾಶೈಲಿಯ ಗ್ರಂಥ ವಿರಳ.

ಭಾರತ ದರ್ಶನದ ಭಾಗವತಾನುವಾದ (9 ಸಂಪುಟಗಳು)

ಭಾರತದರ್ಶನ ಪ್ರಕಾಶನದ ಶ್ರೀಮದ್ಭಾಗವತ (ಮೂಲ ಅನುವಾದ ನಡು-ನಡುವೆ ವಿವರಣೆಗಳ ಸಹಿತ) ಶ್ರೀರಂಗಪ್ರಿಯ ಮಹಾದೇಶಿಕರ ನೇತೃತ್ವದಲ್ಲಿ ವಿದ್ವಾನ್ ರಾಮೇಶ್ವರ ಅವಧಾನಿಗಳು ಅನುವಾದಿಸಿದ ಸಂಪಾದಕ ಮಂಡಳಿಯ ಸಹಕಾರದಿಂದ ಪ್ರಕಟವಾದ ಭಾಗವತ ಗ್ರಂಥ ಕನ್ನಡದಲ್ಲಿ ಅಳಸಿಂಗರಾಚಾರ್ಯರ ಅನುವಾದ ಬಿಟ್ಟರೆ ಅತಿಜನಪ್ರಿಯ ಅನುವಾದ ಗ್ರಂಥವಾಗಿದೆ.

1991ರಿಂದ 1997ರವರೆಗೆ 6 ವರ್ಷಗಳಲ್ಲಿ 1724 ಪುಟಗಳಲ್ಲಿ ಮೂಲ 3600 ಪುಟಗಳಲ್ಲಿ ಭಾವಾನುವಾದವನ್ನು ಕನ್ನಡದಲ್ಲಿ ಕೊಟ್ಟಿರುವ 9 ಸಂಪುಟಗಳ ಏಕೈಕ ಜನಪ್ರಿಯ ಬೃಹತ್ ಗ್ರಂಥವಾಗಿದೆ. ಪ್ರತಿ ಸಂಪುಟಕ್ಕೆ ವಿದ್ವಾಂಸರಿಂದ ಪ್ರಸ್ತಾವನೆಗಳನ್ನು ಬರೆಸಲಾಗಿದೆ. ವಿವರವಾದ ವಿಷಯಸೂಚಿ ಇದೆ. ಸಮಗ್ರ ಭಾಗವತದ ಮೂಲವನ್ನು ಕನ್ನಡ ಲಿಪಿಯಲ್ಲಿ ಕೊಟ್ಟು ವಿವರಣೆ ನೀಡುವಾಗ ಮುಖ್ಯ ಶ್ಲೋಕಗಳನ್ನು ಉದಾಹರಿಸಿದೆ. ಅನುವಾದ ಭಾಗದಲ್ಲಿ ಉಲ್ಲೇಖಿಸುವ ಶ್ಲೋಕಗಳನ್ನು ಸಂಗ್ರಹಿಸಿದರೆ ಸೊಗಸಾದ ಸಂಗ್ರಹಾನುವಾದ ಭಾಗವತ ಆಗುತ್ತದೆ. ಗ್ರಂಥದುದ್ದಕ್ಕೂ ಇತರ ವ್ಯಾಖ್ಯಾನಗಳಿಂದ ಟಿಪ್ಪಣಿಗಳನ್ನು ಕೊಡಲಾಗಿದೆ. ಅನೇಕ ಪಾರಿಭಾಷಿಕ ಪದಗಳನ್ನು ಸೋದಾಹರಣವಾಗಿ ವಿವರಿಸಿದ್ದಾರೆ. ಪುಟ 3262 (11ನೇ ಸ್ಕಂದ, ಶ್ಲೋಕ 29)ರಲ್ಲಿ ಅವಧೂತನನ್ನು ಕುರಿತು ಭಾಗವತದಲ್ಲಿ ಹೀಗೆ ತಿಳಿಸಲಾಗಿದೆ: "ನನ್ನ ಅವಧೂತಭಕ್ತನು ಬುದ್ಧಿವಂತನಾಗಿದ್ದರೂ ಬಾಲಕನಂತೆ ಆಟವಾಡಬಹುದು, ನಿಪುಣನಾಗಿದ್ದರೂ ಜಡಭರತನಂತಿರಬಹುದು, ವಿದ್ವಾಂಸನಾಗಿದ್ದರೂ ಹುಚ್ಚನಂತೆ ಮಾತನಾಡಬಹುದು, ವೇದವಿಧಿಗಳನ್ನು ತಿಳಿದವನಾದರೂ ಪಶುವೃತ್ತಿಯನ್ನು ಅನುಸರಿಸಿರುವಂತೆ (ಅನಿಯಮಿತವಾದ ಆಚಾರ-ವಿಚಾರವುಳ್ಳವನಾಗಿ) ಇರಬಹುದು.

ಇಲ್ಲಿ ಅವಧೂತಭಕ್ತನು ಎಂಬುದಕ್ಕೆ ಕೊಟ್ಟ ಟಿಪ್ಪಣಿ ಹೀಗಿದೆ: ಅವಧೂತನು ವಿಧಿನಿಷೇಧಗಳನ್ನು ಮೀರಿದವನು ಜಡಭರತ, ದತ್ತಾತ್ರೇಯ ಮುಂತಾದವರು ಅವಧೂತರಿಗೆ ಉದಾಹರಣೆಗಳು. ಇವರಿಗೆ ಏಕದಂಡ, ತ್ರಿದಂಡ, ಕಮಂಡಲು ಮುಂತಾದವು ಬೇಕಿಲ್ಲ; ಭಿಕ್ಷೆ-ಉಪವಾಸ-ಚಾತುರ್ಮಾಸ್ಯಾದಿ ನಿಯಮಗಳೂ ಇರುವುದಿಲ್ಲ. ಇವರು ಲಿಂಗಸಹಿತವಾದ ಆಶ್ರಮಗಳೆಲ್ಲವನ್ನೂ ಮೀರಿರುವರು. ಗೋರಖಪುರದ ಕೃತಿಗಳನ್ನು ಆಧಾರವಾಗಿಟ್ಟುಕೊಂಡು ರಾಮಾಯಣ-ಭಾರತ-ಭಾಗವತ ಮತ್ತು 18 ಪುರಾಣಗಳನ್ನು ಪ್ರಕಟಿಸುವ ಯೋಜನೆ ಹಾಕಿಕೊಂಡಿದ್ದಾರೆ. ಅದರಂಗವಾಗಿ ಭಾಗವತ ಪ್ರಕಟವಾಗಿದೆ.

ಪೋತನ ಭಾಗವತ (8 ಸಂಪುಟಗಳು, ತೆಲುಗು-ಕನ್ನಡ ಅನುವಾದಿತ ಕೃತಿ)

ಭಾಗವತ ಮಹಾಪುರಾಣ ಭಾರತೀಯ ಭಾಷೆಗಳಲ್ಲೆಲ್ಲಾ ಜನಪ್ರಿಯವಾದ ವೈಷ್ಣವ ಪುರಾಣವಾಗಿದೆ. ಭಾರತದ ಭಾಷೆಗಳಲ್ಲಿ ಭಾಗವತದ ಪೂರ್ಣ ಮತ್ತು ಭಾಗಶಃ ಅನುವಾದಗಳು, ಭಾಗವತ ಆಧಾರಿತ ಕಥೆ-ನಾಟಕ-ಪದ್ಯ-ವಿಮರ್ಶೆ ಮೊದಲಾದ ಸ್ವತಂತ್ರ ಕೃತಿಗಳು 2000ಕ್ಕೂ ಮಿಕ್ಕು

ಪ್ರಕಟವಾಗಿರಬಹುದು ಎಂದು ಅಂದಾಜಿಸಲಾಗಿದೆ. ತೆಲುಗಿನಲ್ಲಿ ಪ್ರಸಿದ್ಧ ಕಾವ್ಯ 6 ಶತಮಾನಗಳ ಹಿಂದೆ ಭಕ್ತಶ್ರೇಷ್ಠ ಬಮ್ಮೆರ ಪೋತನಾಮಾತ್ಯನ ಭಕ್ತಿರಸಾಮೃತ ಭಾಗವತ ಮಹಾಕಾವ್ಯವನ್ನು ಕನ್ನಡಕ್ಕೆ 8 ಸಂಪುಟಗಳಲ್ಲಿ ತೆಲುಗು ಮೂಲದೊಡನೆ ಗದ್ಯಾನುವಾದ ಸಹಿತ ತರಲಾಗಿದೆ. ಡಾ. ಆರ್ವಿಯಸ್ ಸುಂದರಂ ಅವರ ನೇತೃತ್ವದ ಸಂಪಾದಕ ಮಂಡಳಿ ಕನ್ನಡಾನುವಾದ ಮಾಡಿದೆ. ಬಲಪುಟದಲ್ಲಿ ಗದ್ಯಾನುವಾದ ಎಡಗಡೆ ತೆಲುಗು ಮೂಲಶ್ಲೋಕ ಈ ಕ್ರಮದಲ್ಲಿ ಕೊಡಲಾಗಿದೆ. ಭಾಗವತದ ಪ್ರಸಂಗಗಳಾದ ಪ್ರಹ್ಲಾದ ಚರಿತ್ರೆ, ಧ್ರುವೋಪಾಖ್ಯಾನ, ಗಜೇಂದ್ರಮೋಕ್ಷ, ಕುಚೇಲನಾಥ, ಅಜಾಮಿಳೋಪಾಖ್ಯಾನ, ವಾಮನಾವತಾರ ಮುಂತಾದವುಗಳಲ್ಲಿ ಪೋತನರ ಭಕ್ತಿನಿರೂಪಣೆ ಅಮೋಘವಾಗಿದೆ. 4400 ಪುಟಗಳಲ್ಲಿ 9000 ಪದ್ಯಗಳನ್ನು 8 ಸಂಪುಟಗಳಲ್ಲಿ ಅನುವಾದಿಸಿರುವುದು ಸಾಹಸವೇ ಆಗಿದೆ. ಪೋತನ ಭಾಗವತವನ್ನು ಇದೇ ಅವಧಿಯಲ್ಲಿ ಸಮಾನಾಂತರವಾಗಿ ಸುನಂದಾ ಕೆ.ಆರ್.ರಂಗನಾಥಸ್ವಾಮಿ ಅವರೂ ಸಹ ಸ್ವತಂತ್ರವಾಗಿ 3 ಸಂಪುಟಗಳಲ್ಲಿ ಅನುವಾದಿಸಿದ್ದಾರೆ. ದಶಮಸ್ಕಂದದಲ್ಲಿ ಮೂಲವನ್ನು ಪೂರ್ಣವಾಗಿ ಕೊಟ್ಟಿದ್ದಾರೆ. ಬೇರೆ ಕಡೆ ಅಲ್ಲಲ್ಲಿ ಪದ್ಯಗಳನ್ನು ಉಲ್ಲೇಖಿಸಿದ್ದಾರೆ. ಮೊದಲನೆಯದು ಸಾಂಘಿಕ ಪ್ರಯತ್ನವಾದರೆ ಇದು ವೈಯಕ್ತಿಕ ಪ್ರಯತ್ನವಾಗಿದೆ.

ಸಂತೆಕಲ್ಲಹಳ್ಳಿ ಲಕ್ಷ್ಮೀನರಸಿಂಹಶಾಸ್ತ್ರಿಗಳು ಈ ಮುಂಚೆ ಗದ್ಯಾನುವಾದ ಒಂದೇ ಸಂಪುಟದಲ್ಲಿ ಕೊಟ್ಟಿರುವುದನ್ನು ಇಲ್ಲಿ ಸ್ಮರಿಸಬೇಕು. ಪೋತನ ಎಂಬ ಪುಟ್ಟ ಪರಿಚಯ ಗ್ರಂಥವನ್ನು ಎಸ್.ಎಸ್.ದಕ್ಷಿಣಾಮೂರ್ತಿಯವರು ಬರೆದಿದ್ದಾರೆ. ಸಂಕ್ಷಿಪ್ತವಾಗಿ ಪೋತನ ಮತ್ತು ಅವನ ಭಾಗವತ ಕೃತಿಯನ್ನು ಕುರಿತು ಬರೆದಿದ್ದಾರೆ.

ಭಾಗವತಾಮೃತ ಮತ್ತು ಶೈಲಸುಧಾರ್ಣವ ಎಂಬ ಎರಡು ಪುರಾಣಾಧಾರಿತ ಕೃತಿಗಳನ್ನು ರಚಿಸಿದ ಗಳಗನಾಥರು ಕನ್ನಡ ಸಾಹಿತ್ಯದ ಕಾದಂಬರೀ ಸಾರ್ವಭೌಮರಲ್ಲಿ ಒಬ್ಬರು. ಕನ್ನಡ ಓದುಗರನ್ನು ಸಾವಿರ ಸಂಖ್ಯೆಯಲ್ಲಿ ಸಿದ್ಧಪಡಿಸಿದವರು ಅವರು. ಧಾರ್ಮಿಕರಾಗಿ ಧಾರ್ಮಿಕ ಕೃತಿಗಳನ್ನು ರಚಿಸುವುದರಲ್ಲಿ ನಿಷ್ಣಾತರು. ಕಾದಂಬರಿ ರಚನೆಯಲ್ಲಿ ಅಪ್ರತಿಮರು. ಕನ್ನಡಕ್ಕೆ ಅವರ ಕೊಡುಗೆ ಅಪಾರ.

ಮರಾಠಿಯಲ್ಲಿ ಚಿಪಳೂಣಕರ ಮಂಡಳಿಯವರು ಸಂಸ್ಕೃತದಿಂದ ಭಾಷಾಂತರಿಸಿದ ಭಾಗವತವನ್ನು 'ಮುಂದಿಟ್ಟುಕೊಂಡು' ಗಳಗನಾಥರು ಭಾಗವತಾಮೃತವನ್ನು ಸಂಗ್ರಹಿಸಿರುವರು. 1922ರಲ್ಲಿ ರಚಿಸಿದ 512 ಪುಟಗಳ ಗ್ರಂಥವನ್ನು ನಾಲ್ಕೇ ತಿಂಗಳಲ್ಲಿ ಬರೆದು ತಾವೇ ತಮ್ಮ ವೆಂಕಟೇಶ ಮುದ್ರಣಾಲಯದಲ್ಲಿ ಅಚ್ಚಿಸಿದರು. ಭಾಗವತಾಮೃತ ಗಳಗನಾಥರ ಮೊದಲ ಧಾರ್ಮಿಕ ಗ್ರಂಥ. ಇಲ್ಲಿನ ಗದ್ಯಶೈಲಿ ಅವರೇ ಹೇಳಿರುವಂತೆ ಸಂದಿಗೊಂದಿಗಳಲ್ಲಿದ್ದ ಉತ್ತಮಮೋತ್ತಮ ವಿಚಾರಗಳನ್ನು ಭಾಗವತದಲ್ಲಿ ಹುಡುಕಿ ಅತ್ಯಂತ ಕಾರ್ಪಣ್ಯದಿಂದ ಸಂಗ್ರಹಿಸಿರುವುದರಿಂದ ಈ ಕೃತಿಯು ಸಕ್ಕರೆಯೊಳಗಿನ ಸೀಯಂತೆ (ಸವಿಯಂತೆ) ಇದೆ.

ಶ್ರೀಕೃಷ್ಣಾವತಾರ (ಪೂರ್ವಾರ್ಧ-ಉತ್ತರಾರ್ಧ, ನಾರಾಯಣಾಚಾರ್ಯ)
ನಾರಾಯಣಾಚಾರ್ಯರು ಕನ್ನಡದಲ್ಲಿ ರಾಮಾಯಣ, ಭಾರತ, ಭಾಗವತ, ವೇದ ಪುರಾಣಗಳನ್ನು ಕುರಿತು ವಿಚಾರಾತ್ಮಕವಾಗಿ ಬರೆಯುತ್ತಿರುವ ವಿಶೇಷ ಲೇಖಕರಾಗಿದ್ದಾರೆ. ಇವರ ಕೃತಿಗಳು ಜನಪ್ರಿಯವಾಗಿ ಪುನರ್ಮುದ್ರಣಗಳಾಗಿವೆ. ಕೃಷ್ಣಾವತಾರ ಭಾಗವತದ ದಶಮಸ್ಕಂಧದ ಕಥೆಯು ಕಾದಂಬರಿ ರೂಪದಲ್ಲಿ ನಿರೂಪಿತವಾಗಿದೆ. ಲೇಖಕರೇ ಹೇಳುವಂತೆ, "ಇದು ಶ್ರೀಭಾಗವತದ ಭಾಷಾಂತರವಲ್ಲ, ಇಲ್ಲಿ ನಡೆದಿರುವುದು ಶ್ರೀಭಾಗವತದ ಪುನರ್ ನಿರೂಪಣೆ. ಕನ್ನಡ ಕಾದಂಬರೀರೂಪದ ಕಥನ ಮಾತ್ರ (ಪುಟ 14). ಮೂಲದ ಚೌಕಟ್ಟು, ಕಥೆಯ ತಿರುವುಗಳು, ಅದೇ ತತ್ತ್ವ ಅದೇ ದರ್ಶನ, ಸಾಧ್ಯವಾದಲ್ಲಿ ಅದೇ ಸಂಭಾಷಣೆಗಳು, ಚಿತ್ರಗಳನ್ನು ಹಾಗೇ ಇಟ್ಟುಕೊಂಡು, ಕೊಂಡಿ ಸಿಗದೆ ಇರುವಲ್ಲಿ ಇವಕ್ಕೆಲ್ಲ ಪೂರಕವಾಗಿ ಅವನ್ನು ಸೃಷ್ಟಿಸಿ, ಜೋಡಿಸಿ, ಮೂಲಕಥೆಯನ್ನು ಹೆಚ್ಚು ಸ್ಪಷ್ಟಪಡಿಸಿ, ವ್ಯಾಸ-ಶುಕ ಹೃದಯಗಳಿಗೆ ಒಪ್ಪುವಂತೆ ಕಥೆ ಹೇಳಲು ಚಿತ್ರ ಬಿಡಿಸಲು ಯತ್ನಿಸಿದೆ" (ಪುಟ 15). ಒಟ್ಟು 4 ಸಂಪುಟಗಳ ಯೋಜನೆಯಲ್ಲಿ ಶ್ರೀಮದ್ಭಾಗವತಾಧಾರಾ ತೀರ್ಥವಾಹಿನೀ ಎಂಬ ಹೆಸರಿನಲ್ಲಿ 1-9 ಮತ್ತು 11, 12 ಸಂಧಿಗಳ

ಕಥೆಯನ್ನು ಇದೇ ರೀತಿ ಬರೆಯಲು ಯೋಜಿಸಿದ್ದು ಅವು ಇನ್ನೂ ಪ್ರಕಟವಾಗಿಲ್ಲ.

ಕೃಷ್ಣಾವತಾರ (10 ಭಾಗಗಳು) ಲೇ: ಕೆ.ಎಂ. ಮುನ್ಷಿ, ಅನುವಾದ: ಸಿದ್ಧವನಹಳ್ಳಿ ಕೃಷ್ಣಶರ್ಮ, 1967 ಪ್ರ: ಲೋಕಶಿಕ್ಷಣ ಟ್ರಸ್ಟ್, ಬೆಂಗಳೂರು

ಕೆ.ಎಂ. ಮುನ್ಷಿ ಅವರ ಕಾದಂಬರಿರೂಪದ ಶ್ರೀಕೃಷ್ಣಾವತಾರ ಜನಪ್ರಿಯ ಕೃತಿ ಆಗಿದೆ. ವೈಚಾರಿಕವಾಗಿ ನಿರೂಪಿತವಾಗಿದೆ.

ಭಾಗವತದ ಕಥೆಗಳು (ಕಥಾ ಸಂಗ್ರಹ) – ಬಿ.ಎಸ್. ಸ್ವಾಮಿ

ಭಾಗವತ ಸೊಗಸಾದ ಕಥೆಗಳ ಗಣಿ. ತತ್ವದ ಗುಡಾಣ, ಭಕ್ತಿಯ ಕಾರಂಜಿ. ಅನೇಕರು ವಿದ್ಯಾರ್ಥಿಗಳನ್ನು ಗಮನದಲ್ಲಿಟ್ಟುಕೊಂಡು ಸಣ್ಣ ಸಣ್ಣ ಕಥೆಗಳನ್ನಾಗಿ ಭಾಗವತದ ಪ್ರಸಂಗಗಳನ್ನು ಕನ್ನಡದಲ್ಲಿ ಬರೆದಿದ್ದಾರೆ. ಬಿ.ಎಸ್. ಸ್ವಾಮಿಯವರದು ಈ ಬಗೆಯ ಪ್ರಯತ್ನಗಳಲ್ಲಿ ಒಂದು. ಭಾಗವತದಲ್ಲಿ ಬರುವ 43 ಕಥೆಗಳನ್ನು ಪುಟ್ಟ ಕಥೆಗಳನ್ನಾಗಿ ಬರೆದಿದ್ದಾರೆ. ಮಕ್ಕಳಿಗೆ ಹಿಡಿಸುವ ಗ್ರಂಥವಾಗಿದೆ.

ಸಂಪಿಗೆ ಭಾಗವತ (ಕಥಾ ಸಂಗ್ರಹ) – ಲಕ್ಷ್ಮೀಶ ತೋಳ್ಪಾಡಿ

ಕೆಂಡಸಂಪಿಗೆ ಎಂಬ ಅಂತರ್ಜಾಲ ಪತ್ರಿಕೆಯಲ್ಲಿ 2008ರಲ್ಲಿ ಪ್ರಾರಂಭಿಸಿ 3 ವರ್ಷಗಳ ಕಾಲ ಬರೆದ ಕಥೆಗಳಿವು. ಅದನ್ನೀಗ ಪುಸ್ತಕ ರೂಪದಲ್ಲಿ ಪ್ರಕಟಿಸಲಾಗಿದೆ. ಅಂತರ್ಜಾಲದ ಮೂಲಕ ವಿದೇಶದಲ್ಲಿರುವ ಮಕ್ಕಳಿಗೆ, ವಯಸ್ಕರಿಗೆ ಭಾಗವತದ ಕಥೆಗಳನ್ನು ಸರಸವಾಗಿ ಲಕ್ಷ್ಮೀಶ ತೋಳ್ಪಾಡಿ ನೀಡಿದ್ದಾರೆ. ವಿದೇಶಗಳಲ್ಲಿ ಕನ್ನಡದಲ್ಲಿ ಭಾಗವತ ಪ್ರಚಾರದ ದೃಷ್ಟಿಯಲ್ಲಿ ಈ ಕೃತಿಗೆ ಮಹತ್ವವಿದೆ.

ಭಾಗವತ ವಾಹಿನಿ (ಸಂಗ್ರಹಾನುವಾದ) – ಸತ್ಯಸಾಯಿಬಾಬಾ

ಸತ್ಯಸಾಯಿಬಾಬಾ ಅವರು ಜನಪ್ರಿಯ ಪ್ರವಚನಕಾರರು. ಅವರ ಪ್ರವಚನಗಳೆಲ್ಲಾ ಸಾಕಷ್ಟು ಬರಹರೂಪದಲ್ಲಿ ತೆಲುಗಿನಲ್ಲಿ ಬಂದಿದ್ದು, ಆ ಮೂಲಕ ಕನ್ನಡಕ್ಕೆ ಬಂದಿದೆ. ಆಪೈಕಿ ಭಾಗವತ ವಾಹಿನಿ ಸಹ ಒಂದು. ಕನ್ನಡಕ್ಕೆ ತೆಲುಗಿನಿಂದ ಎಚ್.ಎಂ.ಶಿವರಾಂ ಅನುವಾದಿಸಿದ್ದಾರೆ. ಸರಳಶೈಲಿಯಲ್ಲಿ ಕಥೆ ಹೇಳುತ್ತಾ ಹೋಗುವುದು ಇಲ್ಲಿಯ ವೈಶಿಷ್ಟ್ಯವಾಗಿದೆ.

ಶ್ರೀಭಾಗವತಾಮೃತ – ಕೆ.ರಾ.ವೆ. ಸುಬ್ರಹ್ಮಣ್ಯಶಾಸ್ತ್ರಿ

ಸುಬ್ರಹ್ಮಣ್ಯಶಾಸ್ತ್ರಿಗಳು 5 ಸಂಪುಟಗಳಲ್ಲಿ 3000 ಪುಟಗಳಲ್ಲಿ ಶ್ರೀಭಾಗವತ ದರ್ಶನ ಸಾರವನ್ನು ನೀಡಿ ಸಾಮಾನ್ಯ ಜನರಿಗಾಗಿ 500 ಪುಟಗಳಲ್ಲಿ ಸಂಗ್ರಹಿಸಿ ಒಂದೇ ಸಂಪುಟವನ್ನಾಗಿ ನೀಡಿರುವುದೇ ಶ್ರೀಭಾಗವತಾಮೃತ ಗ್ರಂಥ. ಹೀಗೆ ಹಲವು ಸಂಪುಟಗಳಲ್ಲಿ ಅನಂತರ ಒಂದೇ ಸಂಪುಟದಲ್ಲಿ ಭಾಗವತವನ್ನು ಕನ್ನಡದಲ್ಲಿ ಸಂಗ್ರಹಿಸಿರುವುದು ಇವರ ವೈಶಿಷ್ಟ್ಯವಾಗಿದೆ. ಕಥೆಯನ್ನು ಹೇಳುವುದರ ಜೊತೆಗೆ ಭಾಗವತ ತತ್ತ್ವಸಾರವನ್ನು ನಿರೂಪಿಸಿದ್ದಾರೆ.

ಸಂಗ್ರಹ ಭಾಗವತ – ಸಿ.ಪಿ.ಕೆ

ಎ.ಎಂ. ಶ್ರೀನಿವಾಸಾಚಾರಿಯರ್ ಆಯ್ದ ಮೂಲ ಶ್ಲೋಕಗಳು ಮತ್ತು ತಾತ್ಪರ್ಯದೊಡನೆ ಸಂಗ್ರಹಿಸಿದ ಇಂಗ್ಲಿಷಿನಲ್ಲಿದ್ದ ಭಾಗವತವನ್ನು ಸಿಪಿಕೆ ಅವರು ಅಚ್ಚುಕಟ್ಟಾಗಿ ಕನ್ನಡಕ್ಕೆ ಅನುವಾದಿಸಿದ್ದಾರೆ. ಒಂದೇ ಸಂಪುಟದಲ್ಲಿ ಭಾಗವತವನ್ನು ಕನ್ನಡಿಗರಿಗೆ ಕೊಡುವ ದೃಷ್ಟಿಯಲ್ಲಿ ಈ ಗ್ರಂಥ ವಿಶಿಷ್ಟವಾಗಿದೆ.

ಶ್ರೀಕೃಷ್ಣ – ಪಂಡಿತ ಯಂ. ಸುಬ್ಬಯ್ಯ

ಶಾಲಾ ವಿದ್ಯಾರ್ಥಿಗಳಿಗೆ ಪಠ್ಯ ಮಾಡುವ ದೃಷ್ಟಿಯಲ್ಲಿ ಶ್ರೀಕೃಷ್ಣನ ಕಥೆಯನ್ನು ಭಾಗವತದಲ್ಲಿ ಹೇಳಿರುವುದರಲ್ಲಿ ಕೆಲವು ಪ್ರಸಂಗಗಳನ್ನು ಆಯ್ದು ಈ ಗ್ರಂಥವನ್ನು ರಚಿಸಲಾಗಿದೆ.

ಸಂಗ್ರಹ ಭಾಗವತ – ಬನ್ನಂಜೆ ರಾಮಾಚಾರ್ಯ

ಗದ್ಯದ ರಸವತ್ತಾದ ಶೈಲಿಯಲ್ಲಿ ಭಾಗವತವನ್ನು ಸಂಕ್ಷಿಪ್ತವಾಗಿ ಚಿತ್ರಿಸಿದ್ದಾರೆ.

ಸಂಗ್ರಹಾನವಾದ (ಗದ್ಯ)

ಶ್ರೀಮದ್ಭಾಗವತ ಕಥಾಸಾರ (ಲೇ: ಸುಬೋಧ ರಾಮರಾಯರು, ಪ್ರ: ಸುಬೋಧ ಪ್ರಕಟನಾಲಯ, ಗಿರಿನಗರ, ಬೆಂಗಳೂರು, ಇ.2014)
ಪುಟಗಳು: 860

ಸುಬೋಧ ರಾಮರಾಯರು ಕನ್ನಡಕ್ಕೆ ವಿಶಿಷ್ಟ ಕೊಡುಗೆ ಕೊಟ್ಟ ದಾಸ ಸಾಹಿತಿಗಳಲ್ಲಿ ಒಬ್ಬರು. ಸುಬೋಧ ಕುಸುಮಾಂಜಲಿ ಗ್ರಂಥಮಾಲೆಯ

ಮೂಲಕ ಶಾಲಾ ವಿದ್ಯಾರ್ಥಿಗಳಿಗೆ ಮತ್ತು ಜನಸಾಮಾನ್ಯರಿಗೆ ಉಪಯುಕ್ತವಾದ ಜೀವನಚರಿತ್ರೆಗಳನ್ನು 200ಕ್ಕೂ ಮಿಗಿಲಾಗಿ ಕರ್ನಾಟಕ, ಭಾರತ ಜಗತ್ತಿನ ಮಹನೀಯರ ಬಗ್ಗೆ ಅಗ್ಗದ ಬೆಲೆಗೆ ಪ್ರಕಟಿಸಿ ಕನ್ನಡದಲ್ಲಿ ದಾಖಲೆ ಸ್ಥಾಪಿಸಿದರು. ಸುಬೋಧ ಮಾಸಪತ್ರಿಕೆಯ ಮೂಲಕ ಅವರು ಪ್ರಕಟಿಸಿ ಅನಂತರ ಗ್ರಂಥರೂಪದಲ್ಲಿ ತಂದ 3 ಕೃತಿಗಳು – ಶ್ರೀ ಭಾರತ ಕಥಾಸಾರ, ಶ್ರೀ ರಾಮಾಯಣ ಕಥಾಸಾರ ಮತ್ತು ಶ್ರೀಮದ್ಭಾಗವತಸಾರ ಅಮೂಲ್ಯ ಪ್ರಕಟಣೆಗಳಾಗಿವೆ.

ಶ್ರೀಮದ್ಭಾಗವತಸಾರವು ಸಂಸ್ಕೃತ ಭಾಗವತವನ್ನು ಅನುಸರಿಸಿ ಸಂಗ್ರಹವಾಗಿ ಗದ್ಯಾನುವಾದ ಮಾಡಿದ್ದಾರೆ. ಕನ್ನಡದ ನಿತ್ಯಾತ್ಮಶುಕಯೋಗಿಯ ಕನ್ನಡ ಷಟ್ಪದಿ ಕಾವ್ಯ ಭಾಗವತ, ಪೋತನ ಭಾಗವತ, ಕರ್ನಾಟಕ ವಚನಭಾಗವತ ಗ್ರಂಥಗಳನ್ನು ಪರಾಮರ್ಶಿಸಿ ಶ್ರೀಮದ್ಭಾಗವತ ಕಥಾಸಾರ ಕೃತಿಯನ್ನು 860 ಪುಟಗಳಲ್ಲಿ ರಚಿಸಿದ್ದಾರೆ. 1959ರಿಂದ 2014ರವರೆಗೆ 6 ಮುದ್ರಣಗಳಾಗಿರುವುದು ಇದರ ಜನಪ್ರಿಯತೆಗೆ ಸಾಕ್ಷಿ ಆಗಿದೆ.

ಪ್ರತಿಯೊಂದು ಅಧ್ಯಾಯದ ಪ್ರಾರಂಭದಲ್ಲಿ ಮುಖ್ಯವಿಷಯಗಳ ಶೀರ್ಷಿಕೆ ಕೊಟ್ಟು, ವಿಷಯಸಾರ ಕೊಟ್ಟು ಅನಂತರ ಮೂಲಭಾಗವತ ಕಥೆಯನ್ನು ಸರಳ ಕನ್ನಡ ಗದ್ಯದಲ್ಲಿ ಹೇಳಿದ್ದಾರೆ.
ಉದಾ : ಅಧ್ಯಾಯ 5 (ಪ್ರಥಮ ಸ್ಕಂದ)
ಶೀರ್ಷಿಕೆಗಳು : ಪರೀಕ್ಷಿದ್ರಾಜನ ರಾಯಭಾರ – ಲೋಕಕ್ಕೆ ಕಲಿ ಪ್ರವೇಶ–ಕಲಿ ಬಂಧನ–ಪರೀಕ್ಷಿದ್ರಾಜನಿಗೆ ವಿಪ್ರಶಾಪ.
ವಿಷಯಸಾರ : ಪರೀಕ್ಷಿದ್ರಾಜನ ರಾಜ್ಯಭಾರ □ ರಾಜನು ತನ್ನ ಸಂಚಾರ ಕಾಲದಲ್ಲೊಮ್ಮೆ ಭೂದೇವಿ ಮತ್ತು ಧರ್ಮಪುರುಷನನ್ನು ಸಂಧಿಸಿ ಅವರ ವ್ಯಾಕುಲವನ್ನು ಕೇಳಿದುದು.

ತ್ರಿಮಹಾಕಾವ್ಯ ಕನ್ನಡಕ್ಕೆ ತಂದವರು

ಅನಂತರ ಸಂಸ್ಕೃತ ಮೂಲ ಮತ್ತು ಪದಶಃ ಅರ್ಥವಿರುವ ಹಾಗೆ ತಾತ್ಪರ್ಯದೊಡನೆ ಕನ್ನಡಕ್ಕೆ ತಂದವರು ಕೀರ್ತನಾಚಾರ್ಯ ಶ್ರೀಲಕ್ಷ್ಮಣದಾಸ ವೇಲಣಿಕರ್ ಅವರು ಪ್ರಸಿದ್ಧ ಹರಿಕಥಾ ವಿದ್ವಾಂಸರು ಮತ್ತು ಲೇಖಕರು. ಇವರು ಭದ್ರಗಿರಿ ಅಚ್ಯುತದಾಸರ ಶಿಷ್ಯರು. ಗೋರಖಪುರದ ಗೀತಾಪ್ರೆಸ್ ಹಿಂದಿ ಮತ್ತು ಇಂಗ್ಲಿಷ್ ಅನುವಾದದೊಡನೆ ಪ್ರಕಟಿಸಿರುವ ಮೂಲಗ್ರಂಥವನ್ನು ಕನ್ನಡಕ್ಕೆ ಎರಡು ಸಂಪುಟಗಳಲ್ಲಿ ಪರಿವರ್ತಿಸಿದ್ದಾರೆ. 2013ರ ವೇಳೆಗೆ ಏಳು ಮುದ್ರಣಗಳಾಗಿರುವುದು ಇದರ ಜನಪ್ರಿಯತೆಗೆ ಸಾಕ್ಷಿ ಆಗಿದೆ. ಸರಳ ಕನ್ನಡದಲ್ಲಿ ಅನುವಾದ, ಚಿತ್ರಗಳು, ಸುಂದರ ಮುದ್ರಣ, ಕಾಗದ ಕಡಿಮೆ ಬೆಲೆ. ಕಾಲಂವಾರು ಎಡದಲ್ಲಿ ಸಂಸ್ಕೃತ ಬಲಗಡೆ ಕನ್ನಡಾನುವಾದವು ಸುಮಾರು 1800 ಪುಟಗಳಲ್ಲಿ ಎರಡು ಭಾಗಗಳಲ್ಲಿ ಪ್ರಕಟವಾಗಿದೆ. ಕನ್ನಡದಲ್ಲಿ ಏಕೈಕ ಜನಪ್ರಿಯ ಭಾಗವತ ಸಮಗ್ರ ಪ್ರಕಟನಾ ಗ್ರಂಥವಾಗಿದೆ. ಕೀರ್ತನಕಾರ ಲಕ್ಷ್ಮಣದಾಸ ವೇಲಣಕರ್ ಅವರು ಇದೇ ರೀತಿ ರಾಮಾಯಣವನ್ನು ಅನುವಾದಿಸಿದ್ದಾರೆ. ಭಾರತದ ಅನುವಾದದಲ್ಲಿ ತೊಡಗಿದ್ದಾರೆ.

ಕನ್ನಡದಲ್ಲಿ ರಾಮಾಯಣ, ಭಾರತ, ಭಾಗವತ ತ್ರಿಮಹಾಕಾವ್ಯಗಳನ್ನು ಕನ್ನಡಕ್ಕೆ ಕೊಟ್ಟ ಲೇಖಕರು ಕೆಲವರೇ. ಅಳಸಿಂಗರಾಚಾರ್ಯರು ಮೊದಲಿಗರು. ನಂತರ ಕೌಶಿಕರು, ಅನಂತರ ಮೂರನೆಯವರೇ ಲಕ್ಷ್ಮಣದಾಸರು. ಇನ್ನೂ ಹಲವರು ಈ ಮೂರನ್ನೂ ಸಂಗ್ರಹವಾಗಿ ಅನುವಾದಿಸಿದ್ದಾರೆ. ಪೂರ್ಣವಾಗಿ ಅನುವಾದಿಸಲು ಯತ್ನಿಸಿದವರು ಹಲವರಿದ್ದರೂ ಅವರು ಪೂರ್ಣಗೊಳಿಸಿಲ್ಲ.

ಸಂಗ್ರಹ ಭಾಗವತಗಳು (ಗದ್ಯ)

ಕೀರ್ತನಾಚಾರ್ಯ ಶ್ರೀಲಕ್ಷ್ಮಣದಾಸ ವೇಲಣಕರ್ ಅವರು ಸಂತ ಭದ್ರಗಿರಿ ಅಚ್ಯುತದಾಸರ ಪರಮಶಿಷ್ಯರಲ್ಲೊಬ್ಬರು. ಪ್ರಸಿದ್ಧ ಕೀರ್ತನಕಾರರು, ಅನುವಾದಕರು, ಪ್ರವಚನಕಾರರೂ ಆಗಿದ್ದಾರೆ. ಹತ್ತಾರು ಗ್ರಂಥಗಳನ್ನು ಕನ್ನಡದಲ್ಲಿ ರಚಿಸಿದ್ದಾರೆ.

ಮೂಲಭಾಗವತ ಪುರಾಣವನ್ನು ಕನ್ನಡಕ್ಕೆ ಸಮಗ್ರವಾಗಿ ಅನುವಾದಿಸಿದ 4–6 ಜನರಲ್ಲಿ ಇವರೊಬ್ಬರಾಗಿದ್ದಾರೆ. ಆ ಮೂಲಕ ಭಾಗವತವನ್ನು ಆಮೂಲಾಗ್ರವಾಗಿ ಅಧ್ಯಯನ ಮಾಡಿದ ಅವರು ಭಾಗವತ ಸಪ್ತಾಹ ಆಚರಿಸುವವರಿಗಾಗಿ 28 ಪ್ರವಚನಗಳನ್ನಾಧರಿಸಿ ಭಾಗವತವನ್ನು ಶ್ರೀಮದ್ಭಾಗವತ ಪ್ರವಚನ ಎಂಬ ಗ್ರಂಥ ರಚಿಸಿ ಸಂಗ್ರಹಿಸಿದ್ದಾರೆ. ಈ

ಸಂಗ್ರಹದ ಕಥಾನುವಾದವನ್ನು ದಿನಕ್ಕೆ 4ರಂತೆ ಓದಿದರೆ ಒಂದು ವಾರದಲ್ಲಿ ಭಾಗವತ ಸಂಗ್ರಹ ಓದಬಹುದು. ಅದಕ್ಕೆ ಅನುಗುಣವಾಗಿ ಮುಖ್ಯ ಮೂಲಶ್ಲೋಕಗಳೊಡನೆ ಗದ್ಯಾನುವಾದ ಮಾಡಿದ್ದಾರೆ. ಮೂಲದ ಮುಖ್ಯ ವಿಚಾರಗಳನ್ನು ಬಿಡದಂತೆ, ಸರಳ ಗದ್ಯದಲ್ಲಿ ಬರೆದಿರುವ ಈ ಗ್ರಂಥವನ್ನು ಓದಿದರೆ ಮೂಲಗ್ರಂಥವನ್ನೇ ಓದಿದ ರಸಾನುಭವ ಉಂಟಾಗುತ್ತದೆ.

ಪ್ರವಚನ ವಿಧಾನದಲ್ಲಿ ಅನುವಾದಿಸಿರುವುದು ಮುಖ್ಯ ಶ್ಲೋಕಗಳನ್ನು ಉದಾಹರಿಸಿ ಅವುಗಳಿಗೆ ವ್ಯಾಖ್ಯಾನ ನೀಡಿ ಜತೆಗೆ ಹರಿದಾಸರ ಕೀರ್ತನೆಗಳನ್ನು, ಗೀತೆ ಮತ್ತು ಇತರ ಉಲ್ಲೇಖಗಳನ್ನು, ದೃಷ್ಟಾಂತ ಕಥೆಗಳನ್ನು ಅಳವಡಿಸಿದ್ದಾರೆ. ವಿಶೇಷ ವರ್ಣನೆಗಳಿಲ್ಲದೆ ಸಾರಾಂಶ ರೂಪದಲ್ಲಿ ಕಥೆ ಹೇಳುತ್ತಾ ಹೋಗುತ್ತಾರೆ. ಹೀಗಾಗಿ ಈ ಗ್ರಂಥ ಪ್ರವಚನಕಾರರಿಗೂ ಜನಸಾಮಾನ್ಯರಿಗೂ ಭಾಗವತವನ್ನು ಓದಿ ಆನಂದಿಸಲು ಸಹಕಾರಿಯಾಗಿದೆ ಮತ್ತು ಭಾಗವತ ಸಪ್ತಾಹಕ್ಕೆ ಅನುಕೂಲ ಗ್ರಂಥವಾಗಿದೆ ಎಂಬ ಓದುಗರೊಬ್ಬರ ಅಭಿಪ್ರಾಯ ಸಮಂಜಸವಾಗಿದೆ.

ಲಕ್ಷ್ಮಣದಾಸರ ಅನುವಾದ ಎಷ್ಟು ಆಕರ್ಷಕವಾಗಿದೆ ಎಂದರೆ ಹಿಂದೆ ಅಳಸಿಂಗರಾಚಾರ್ಯರು ಮಾಡಿದ ಗದ್ಯಾನುವಾದವನ್ನು ಓದುಗರು ಜೀವನಪರ್ಯಂತ ಬಿಡದೆ ನೂರಾರು ಸಲ ಓದುತ್ತಿದ್ದರೂ ಬೇರೆ ಗ್ರಂಥಗಳನ್ನೇ ಓದುತ್ತಿರಲಿಲ್ಲ ಹಾಗೆ ಲಕ್ಷ್ಮಣದಾಸರ ಭಾಗವತವನ್ನು ಓದುಗರೊಬ್ಬರು ಉಳಿದ ಗ್ರಂಥಗಳನ್ನು ಓದುವುದನ್ನು ಬಿಟ್ಟು ಇದೊಂದನ್ನೇ ಜೀವನದುದ್ದಕ್ಕೂ ಓದುತ್ತಿದ್ದಾರೆ.

ಕಥಾಸಾರ ಗ್ರಂಥಗಳು
ಸಚಿತ್ರ ವಚನ ಭಾಗವತ (ಕಥಾಸಂಗ್ರಹ)
ಲೇ : ವೇ। ಬಿ.ಸಿ. ಶ್ರೀನಿವಾಸಯ್ಯಂಗಾರ್, ವೇ॥ಪ॥
ಅಶ್ವತ್ಥನಾರಾಯಣಶಾಸ್ತ್ರಿ
ಪ್ರ : ಟಿ.ಎನ್. ಕೃಷ್ಣಯ್ಯಶೆಟ್ಟಿ ಅಂಡ್ ಸನ್ಸ್, ಚಿಕ್ಕಪೇಟೆ, ಬೆಂಗಳೂರು
ಇ: 1954, 388 ಪುಟಗಳು

ಪುರಾಣಗಳು ಸಾವಿರಾರು ಶ್ಲೋಕಗಳಿಂದ ಕೂಡಿದ ಬೃಹತ್ ಗ್ರಂಥಗಳು. ಸ್ಕಂದ ಪುರಾಣದಲ್ಲಿ 81,100 ಶ್ಲೋಕಗಳಿರುವ ಹೆಚ್ಚು ಕಡಿಮೆ ಮಹಾಭಾರತ ಗ್ರಂಥದ ಪ್ರಮಾಣದ ಬೃಹತ್ ಪುರಾಣವೆನಿಸಿದರೆ, ಮಾರ್ಕಂಡೇಯ ಪುರಾಣ ಪುರಾಣಗಳಲ್ಲೇ ಚಿಕ್ಕ ಪುರಾಣವೆಂದರೂ 9000 ಶ್ಲೋಕಗಳನ್ನು ಒಳಗೊಂಡಿದೆ. ಹೀಗೆ ಸಾವಿರಾರು ಶ್ಲೋಕಗಳ ಗ್ರಂಥಗಳನ್ನು ಜನಸಾಮಾನ್ಯರು ಓದಲು ಸಾಧ್ಯವಿಲ್ಲದ್ದನ್ನು ಕಂಡು ಅನೇಕ ಪರಿಚಿತರು ಕಥೆಯನ್ನಷ್ಟೇ ಸರಳವಾಗಿ ನೇರವಾಗಿ ಹೇಳುವ ಕೆಲವೇ ನೂರು ಪದಗಳ ಗ್ರಂಥ ರಚಿಸಿದ್ದಾರೆ. ಅವುಗಳ ಪೈಕಿ ವಚನ ಭಾಗವತ ಕಥಾ ಸಂಗ್ರಹವೂ ಒಂದಾಗಿದೆ. ಹೈಸ್ಕೂಲ್-ಕಾಲೇಜು ವಿದ್ಯಾರ್ಥಿಗಳು ಆಸಕ್ತಿಯಿಂದ ಓದುವ ರೀತಿಯಲ್ಲಿ ಕಥಾಸಂಗ್ರಹ ಮಾಡಿದ್ದಾರೆ.

ಶ್ರೀಕೃಷ್ಣ (3 ಭಾಗಗಳು) – ಭ್ರಾ. ವೇದಾಂತ ಸ್ವಾಮಿ ಪ್ರಭುಪಾದ

ಕನ್ನಡದಲ್ಲಿ ಮೂಡಿಬಂದಿರುವ ಭಾಗವತ ಸಾಹಿತ್ಯದ ಬಹುಪಾಲು ಸಂಸ್ಕೃತದ ಭಾಗವನ್ನು ಆಧರಿಸಿ ಬಂದಿರುವ ಕೃತಿಗಳೇ ಆಗಿವೆ. ಆಪೈಕಿ ಕೆಲವು ಅನುವಾದಗಳಾದರೆ ಕೆಲವು ಸ್ವತಂತ್ರ ರಚನೆಗಳಾಗಿವೆ. ಇವಲ್ಲದೆ ಭಾಗವತವನ್ನು ಆಧರಿಸಿ ತಮಿಳು, ತೆಲುಗು, ಇಂಗ್ಲಿಷ್, ಮರಾಠಿ ಮೊದಲಾದ ಭಾಷೆಗಳಲ್ಲಿ ಬರೆದ ಭಾಗವತದ ಗ್ರಂಥಗಳನ್ನು ಕನ್ನಡಕ್ಕೆ ತಂದಿರುವ ಗ್ರಂಥಗಳಿವೆ. ಆಪೈಕಿ ಇಸ್ಕಾನಿನ ಕೃಷ್ಣ ಗ್ರಂಥವು ಒಂದು. ಇದು ಇಂಗ್ಲಿಷಿನಿಂದ ಕನ್ನಡಕ್ಕೆ ಬಂದ ಗ್ರಂಥ. ಇಂಗ್ಲಿಷ್ ಗ್ರಂಥಕ್ಕೆ ಮೂಲಸಂಸ್ಕೃತ ಗ್ರಂಥ ಆಧಾರ. ವಿದೇಶೀಯರನ್ನು ಗಮನದಲ್ಲಿಟ್ಟುಕೊಂಡು ಶ್ರೀಕೃಷ್ಣ ಪ್ರಜ್ಞೆ ಮೂಡಿಸುವ ದೃಷ್ಟಿಯಿಂದ ಭಾಗವತದ ಕಥೆಯನ್ನು ಇಲ್ಲಿ ನಿರೂಪಿಸಿದೆ. ಭಾಗವತದ ಕಥೆಯನ್ನು ಗದ್ಯದಲ್ಲಿ ಹೇಳುತ್ತಾ ಹೇಳುತ್ತಾ ನಡುನಡುವೆ ವ್ಯಾಖ್ಯಾನಿಸುತ್ತಾ ಸ್ವಾಮಿ ಪ್ರಭುಪಾದರು ತಮ್ಮ ವಿಚಾರಧಾರೆಯನ್ನು ಮಂಡಿಸುತ್ತಾರೆ. ಈ ಗ್ರಂಥ ಒಂದು ಕಡೆ ಭಾಗವತದ ಅನುವಾದವೂ ಹೌದು; ಇನ್ನೊಂದು ಕಡೆ ವ್ಯಾಖ್ಯಾನಗ್ರಂಥವೂ ಹೌದು. 89 ಅಧ್ಯಾಯಗಳಲ್ಲಿ 809 ಪುಟಗಳಲ್ಲಿ ಸಾಕಷ್ಟು ವಿಸ್ತಾರವಾಗಿ ಭಾಗವತದ ಕಥೆ ಇಲ್ಲಿ ಬಂದಿದೆ. ಸುಂದರ ಚಿತ್ರಗಳು ಪುಸ್ತಕದ ಆಕರ್ಷಣೆಗೆ ಕಾರಣವಾಗಿದೆ.

ಸಂಗ್ರಹ ಭಾಗವತ (ಗದ್ಯ)

ವಚನ ಭಾಗವತ – ತ.ಸು. ಶಾಮರಾಯರು

ಕನ್ನಡದಲ್ಲಿ ಭಾಗವತದ ಗದ್ಯಾನುವಾದಗಳು ಎರಡು ಬಗೆಯಾಗಿವೆ. ಮೂಲಭಾಗವತವನ್ನು ಸಮಗ್ರವಾಗಿ ತದ್ವತ್ತಾಗಿ ಅನುವಾದಿಸಿರುವುದು ಒಂದು ಬಗೆಯಾದರೆ, ಅದರ ಕಥಾಸಾರವನ್ನು ರಸವತ್ತಾಗಿ ಹೇಳಿರುವುದು ಇನ್ನೊಂದು ಬಗೆ. ಎರಡನೆಯ ರೀತಿಯ ಕೃತಿಗಳು ಕನ್ನಡದಲ್ಲಿ ಸಾಕಷ್ಟಿವೆ. ಆಪೈಕಿ ಜನಪ್ರಿಯವಾಗಿ ಮರುಮುದ್ರಣವಾಗಿರುವ ಕೃತಿಗಳಲ್ಲಿ ತ.ಸು. ಶಾಮರಾಯರ ವಚನ ಭಾಗವತವೂ ಒಂದು. ಸರಳ ಗದ್ಯದಲ್ಲಿ ಚೇತೋಹಾರಿಯಾಗಿ ಭಾಗವತದ ಕಥೆಯನ್ನು ಹೇಳಿದ್ದಾರೆ. ವಿಸ್ತಾರವಾದ 30 ಪುಟಗಳ ಮುನ್ನುಡಿಯಲ್ಲಿ ಭಾಗವತವನ್ನು ಕುರಿತು ವಿಮರ್ಶಾತ್ಮಕವಾಗಿ ಬರೆದಿದ್ದಾರೆ. ಭ್ರಮರಗೀತ ಮುಂತಾದವನ್ನು ಪರಿಶಿಷ್ಟವಾಗಿ ಕೊಟ್ಟು ಅನುವಾದಿಸಿದ್ದಾರೆ.

ಸಂಕ್ಷೇಪ ಭಾಗವತ – ಲೇ: ಕೊಂಡಜ್ಜಿ ವಿ. ವೆಂಕಟನರಸಿಂಹಯ್ಯ

ಲೇಖಕರು 'ಕಾಮಕೋಟಿ ಜ್ಯೋತಿ' ಎಂಬ ಧಾರ್ಮಿಕ ಮಾಸಪತ್ರಿಕೆಗೆ ಸಹಸಂಪಾದಕರಾಗಿ ಕಾರ್ಯನಿರ್ವಹಿಸಿದವರು. "ಭಾಗವತದ ಮೂಲ ಮತ್ತು ಸಂಬಂಧಿಸಿದ ನಾನಾ ಸಾಹಿತ್ಯಗಳನ್ನು ಓದಿ ಜ್ಞಾನಪೂರ್ಣ ಉದ್ಯಾನದಲ್ಲಿ ಸುತ್ತಾಡಿ ಅಲ್ಲಿ ಕಂಡ ಪವಿತ್ರವೂ ಸುಂದರವೂ ಮಧುರವೂ ಆದ ದಿವ್ಯ ಪುಷ್ಪಗಳನ್ನು ಆರಿಸಿ, ಜೋಡಿಸಿ, ಪರಮಾತ್ಮನ ಕಂಠದಲ್ಲಿ ಅರ್ಪಿಸಿರುವ ಪುಷ್ಪಮಾಲೆ" ಎಂದಿದ್ದಾರೆ. ಲೇಖಕರು ಕೇವಲ 12 ಸ್ಕಂಧಗಳ ಕಥಾಸಾರ ಹೇಳಲು ಹೊರಟಿಲ್ಲ. ಆಯಾ ಸ್ಕಂಧದ ಕಥಾಭಾಗವನ್ನು ಸಂಕ್ಷಿಪ್ತವಾಗಿ ವಿಮರ್ಶಿಸುತ್ತಾ ಒಂದೊಂದು ಸ್ತುತಿ ಭಾಗವನ್ನೂ ಆಯಾ ಸ್ಕಂದದಿಂದ ಆರಿಸಿ ಅನುವಾದದೊಂದಿಗೆ ಕೊಟ್ಟಿದ್ದಾರೆ. ಧ್ರುವನ ಪ್ರಾರ್ಥನೆ, ಪ್ರಹ್ಲಾದನ ಸ್ತುತಿ, ಗಜೇಂದ್ರ ಮೋಕ್ಷಸ್ತುತಿ, ಗೋಪಿಕಾ ಸ್ತುತಿ, ಭ್ರಮರ ಗೀತಾ ಮುಂತಾದ ಸ್ತುತಿಗಳನ್ನು ನೀಡಿದ್ದಾರೆ. ಭಾಗವತವನ್ನು ಸಂಕ್ಷೇಪವಾಗಿ ತಿಳಿಸುವುದರಲ್ಲಿ ಲೇಖಕರು ವಿನೂತನ ವಿಧಾನವನ್ನು ಅನುಸರಿಸಿದ್ದಾರೆ. ಸ್ಕಂಧದ ಕಥೆಯನ್ನು ಅತಿ ಸಂಕ್ಷಿಪ್ತವಾಗಿ ವಿಮರ್ಶಾ ರೀತಿಯಲ್ಲಿ ತಿಳಿಸುವುದು, ಮುಖ್ಯ ಸ್ತುತಿ ಇದ್ದರೆ ಅನುವಾದದೊಡನೆ ಕೊಡುವುದು – ಇದು ಈ ಲೇಖಕರು ಈ ಗ್ರಂಥ ರಚನೆಯಲ್ಲಿ ಅನುಸರಿಸಿರುವ ಕ್ರಮವಾಗಿದೆ.

ಶ್ರೀಕೃಷ್ಣ ಚರಿತ್ರೆ (ವಿಮರ್ಶೆ)

ಲೇ : ಬಂಕಿಮಚಂದ್ರ ಛಟೋಪಾಧ್ಯಾಯರ ಬಂಗಾಳಿ ರಚನೆ
ಅನು : ಆರ್. ವ್ಯಾಸರಾವ್ (ಡಿವಿಜಿ ಅವರ ಮುನ್ನುಡಿ)
ಪ್ರ : ಆರ್.ವಿ. ಪ್ರಭಾಕರ ರಾವ್, 11ನೇ ರಸ್ತೆ, 4ನೇ ಬ್ಲಾಕ್, ಜಯನಗರ, ಬೆಂಗಳೂರು
ಇ : 1965 (4) ಪುಟಗಳು : 440

ಭಾರತ, ಭಾಗವತ ಪುರಾಣಗಳಲ್ಲಿ ಬರುವ ವಿಷಯಗಳನ್ನು ಐತಿಹಾಸಿಕವಾಗಿ ಮತ್ತು ವೈಚಾರಿಕವಾಗಿ ಕೃಷ್ಣನನ್ನು ಕುರಿತು ಚರ್ಚಿಸಿದ ಗ್ರಂಥ. ಚಾರಿತ್ರಿಕ, ವಾಸ್ತವಿಕ, ಪೌರಾಣಿಕ ನೆಲೆಗಟ್ಟಿನಲ್ಲಿ ಕೃಷ್ಣ ಪುರಾಣಕಾವ್ಯಗಳಲ್ಲಿ ಹೇಗೆ ಚಿತ್ರಿತನಾಗಿದ್ದಾನೆ ಎಂದು ಲೇಖಕರು ಚಿತ್ರಿಸಿದ್ದಾರೆ. ಭಾಗವತದ ಕೃಷ್ಣನ ಬಗ್ಗೆ ವಿಮರ್ಶಾತ್ಮಕ ನೋಟಗಳು ಇಲ್ಲಿವೆ. 22 ಪುಟಗಳ ಡಿವಿಜಿ ಅವರ ವಿದ್ವತ್ಪೂರ್ಣ ಮುನ್ನುಡಿ ಗ್ರಂಥಕ್ಕೆ ಕಿರೀಟಪ್ರಾಯವಾಗಿದೆ. ಈ ಗ್ರಂಥದಲ್ಲಿ ಪುರಾಣದ ವಿಚಾರವಾಗಿ ಹೇಳಿರುವ ಸಂಗತಿಗಳು ಮನನಾರ್ಹವಾಗಿದೆ.

ಪ್ರಾಚೀನ ಪೌರಾಣಿಕ ವೃತ್ತಾಂತಗಳೆಲ್ಲವೂ ಹೀಗೆ ಬಾಯಿಂದ ಬಾಯಿಗೆ ಹರಡಿ ಬಹುವೇಳೆ ಬರೀ ಹೇಳಿಕೆಗಳಾಗಿ ಪರಿಣಾಮಗೊಂಡಿದ್ದವು. ಆಮೇಲೆ ಒಂದಾನೊಂದು ಕಾಲದಲ್ಲಿ ಹೇಳಿಕೆಗಳನ್ನೂ ಪ್ರಾಚೀನ ರಚನೆಗಳನ್ನೂ ಒಟ್ಟುಗೂಡಿಸಿದ ಪುರಾಣಗಳು ಒಂದೊಂದಾಗಿ ತಯಾರಾದವು. ವೇದಗಳನ್ನು ವಿಂಗಡಿಸಿದವನು ವಿಭಾಗ ಮಾಡಿದ್ದಕ್ಕಾಗಿ ವ್ಯಾಸ (ವಿಂಗಡಿಸು) ನೆಂಬ ಹೆಸರನ್ನು ಪಡೆದನಲ್ಲದೆ ವ್ಯಾಸನೆಂಬುದು ಅವನ ಹುಟ್ಟು ಹೆಸರಲ್ಲ. ಕೃಷ್ಣದ್ವೀಪದಲ್ಲಿ ಹುಟ್ಟಿದುದರಿಂದ ಇವನನ್ನು ಕೃಷ್ಣದ್ವೈಪಾಯನನೆಂದು ಕರೆಯುತ್ತಿದ್ದರು. ಇಲ್ಲಿ ಪುರಾಣಗಳನ್ನು ವಿಂಗಡಿಸಿದವನ ವಿಷಯದಲ್ಲಿ ಎರಡು ಮತಗಳಿಗೆ ದಾರಿಯುಂಟು.

ವೇದಗಳನ್ನು ವಿಂಗಡಿಸಿದ ಕೃಷ್ಣದ್ವೈಪಾಯನನೇ ಪುರಾಣಗಳನ್ನೂ ಕೂಡಿಸಿದವನೆಂಬುದು ಒಂದು ಮತ. ಹೀಗಿಲ್ಲದಿರಬಹುದಾದರೂ ಪುರಾಣಗಳನ್ನು ಕೂಡಿಸಿದವನಿಗಂತೂ 'ವ್ಯಾಸ'ನೆಂಬ ಬಿರುದು ಬಂದೇ ಬರುವುದು ಸಂಭವ. ಈಗಿರುವ 18 ಪುರಾಣಗಳೂ ಒಬ್ಬನಿಂದ ಅಥವಾ

ಒಂದೇ ಕಾಲದಲ್ಲಿ ಕೂಡಿಸಿದವು ಅಥವಾ ವಿಂಗಡವಾದವುಗಳೆಂದು ಕಂಡುಬರುವುದಿಲ್ಲ. ಬೇರೆ ಬೇರೆ ಕಾಲಗಳಲ್ಲಿ ಇವು ಜೋಡಿಸಲ್ಪಟ್ಟಿರುವುದೆಂಬುದಕ್ಕೆ ಈ ಪುರಾಣಗಳಲ್ಲಿಯೇ ಪುರಾವೆಗಳಿರುವುದಿಲ್ಲ. ಆದ್ದರಿಂದ ವೇದವಿಭಕ್ತವ್ಯಾಸನೂ, ಮಹಾಭಾರತ ಪ್ರಣೀತವ್ಯಾಸನೂ, ಅಷ್ಟಾದಶಾಪುರಾಣಗಳ 1 ವ್ಯಾಸರೂ ಒಬ್ಬನೇ ಅಲ್ಲವೆಂಬುದು ಸರಿಯೆಂದು ತೋರುವುದು. – (ಶ್ರೀಕೃಷ್ಣಚರಿತ್ರೆ, ಪುಟ 75–76).

ಇನ್ನೊಂದು ವಾದ 18 ಪುರಾಣಗಳ ರಚನೆ ಬಗ್ಗೆ ಹೀಗಿದೆ:
"ಕೃಷ್ಣದ್ವೈಪಾಯನನೇ ಮೊಟ್ಟಮೊದಲು ಪುರಾಣವನ್ನು ಕೂಡಿಸಿದವನು. ವಿಷ್ಣು, ಭಾಗವತ, ಅಗ್ನಿ ಪುರಾಣಗಳನ್ನು ಪರಿಶೀಲಿಸಿದರೆ ವ್ಯಾಸನು ಒಂದೇ ಪುರಾಣವನ್ನು ರಚಿಸಿದನು, ಹದಿನೆಂಟಲ್ಲ. ಈಗ ಆ ಪುರಾಣವಿಲ್ಲ. ಅದನ್ನೊಡೆದು ಅವನ ಶಿಷ್ಯರು 3 ಪುರಾಣಗಳನ್ನು ಮಾಡಿದರು. ಅವು ಈಗಿಲ್ಲ. ಕಾಲಕ್ರಮವಾಗಿ ಅವು ಹಲವು ಜನಗಳ ಕೈಗೆ ಬಿದ್ದು ಹದಿನೆಂಟಾದವು" (ಶ್ರೀಕೃಷ್ಣಚರಿತ್ರೆ, ಪುಟ 76).

ಭಾಗವತದ ಕಾದಂಬರಿಗಳು

'ಪರೀಕ್ಷಿತ' ಕಾದಂಬರಿಯು ಶ್ರೀಮದ್ಭಾಗವತವನ್ನು ಆಧರಿಸಿ ರಚಿತವಾಗಿದೆ. ಸಾಗರದ ಪ್ರೊ. ರಘುಪತಿ ಜೋಯಿಸರು 1994ರಲ್ಲಿ 552 ಪುಟಗಳಲ್ಲಿ ಕಥೆ ಹೇಳಿದ್ದಾರೆ. ಈ ಕಾದಂಬರಿಯಲ್ಲಿ ಪರೀಕ್ಷಿತ, ಆತನ ಪತ್ನಿ ಇರಾವತಿ ಮತ್ತು ಶುಕಮುನಿಗಳು ಮುಖ್ಯ ಪಾತ್ರಧಾರಿಗಳಾಗಿದ್ದಾರೆ. ಭಾಗವತವನ್ನು ಕಾದಂಬರಿ ರೂಪದಲ್ಲಿ ಕೊಟ್ಟಿರುವುದರಿಂದ ಈ ಕಾಲದ ಓದುಗರಿಗೆ ಅನುಕೂಲವಾಗಿದೆ.

ಆದ್ಯ ರಾಮಾಚಾರ್ಯರು ಪದ್ಮಾವತಿ ಶ್ರೀನಿವಾಸ ಕಲ್ಯಾಣ ಕಾದಂಬರಿ ಬರೆದಿದ್ದಾರೆ. 1989ರಲ್ಲಿ ಪ್ರಕಟವಾಗಿದೆ. ಆದ್ಯಸೇತುರಾಮಾಚಾರ್ಯರು ಪ್ರವಚನಗಳ ಮೂಲಕ ಭಾಗವತವನ್ನು ಜನತೆಗೆ ತಿಳಿಸುವುದರಲ್ಲೇ ಜೀವಿತವನ್ನು ಕಳೆದವರು. ಅವರ ಪ್ರಭಾವದಿಂದ ಮಗ ಆದ್ಯರಾಮಾಚಾರ್ಯರು ಈ ಕಾದಂಬರಿಯನ್ನು (ಪದ್ಮಾವತಿ ಶ್ರೀನಿವಾಸ ಕಲ್ಯಾಣ) ರಚಿಸಿದ್ದಾರೆ.

'ಶ್ರೀಕೃಷ್ಣದರ್ಶನ' ಸಮೇತನಹಳ್ಳಿ ರಾಮರಾಯರು 1987ರಲ್ಲಿ ರಚಿಸಿದ ಕಾದಂಬರಿ. ಹಲವಾರು ವರ್ಷಗಳ ಅಧ್ಯಯನದ ಫಲವಾಗಿ ಲೇಖಕರು ಈ ಕೃತಿ ರಚಿಸಿದ್ದಾರೆ. ಈ ಮುಂಚೆ ಇವರು ರಚಿಸಿದ ರಾಸಲೀಲೆ ನಾಟಕ ಸಹಿತ ಕೃಷ್ಣಾಧ್ಯಯನಕ್ಕೆ ಸಂಬಂಧಿಸಿದುದು. ಭಾಗವತ ಪುರಾಣ ಆಧಾರಿತ ಕೃಷ್ಣನನ್ನು ಕಾದಂಬರಿಯ ಪೂರ್ವಭಾಗದಲ್ಲಿ ಮಹಾಭಾರತ ಆಧಾರಿತ ಕೃಷ್ಣನನ್ನು ಕಾದಂಬರಿಯ ಉತ್ತರಾರ್ಧದಲ್ಲೂ ಚಿತ್ರಿಸಿದ್ದಾರೆ. ಇಲ್ಲಿ ಚಿತ್ರಿಸಿರುವುದರ ಕೃಷ್ಣ ಯಾವ ಪರಿಯವನು ಎಂಬುದನ್ನು ಕುರಿತು ಲೇಖಕರು ಹೇಳಿರುವ ಮಾತುಗಳಿವು. (ಪು XIV).

"ವಿಜ್ಞಾನದ ದಿನಗಳಿವು. ಕೃಷ್ಣ ಚರಿತೆಯಲ್ಲಿನ ಕಟ್ಟುಕತೆಗಳನ್ನು ಸಂಶೋಧಕರು ತಳ್ಳಿಹಾಕಿದರು. ಈ ಕೃಷ್ಣಾಧ್ಯಯನ ಈ ದೃಷ್ಟಿಯುಳ್ಳದ್ದು. ಆದ್ದರಿಂದ ಈ ಕಾದಂಬರಿಯಲ್ಲಿ ಹೇಳಿರುವುದಷ್ಟು ಮಾತ್ರ ಮಾನವ ಕೃಷ್ಣನಿಗೆ ಸಂಬಂಧಿಸಿದವು, ಗಟ್ಟಿಯಾದವು ಮತ್ತು ಸಹಜವಾದವು ಎಂದು ಬೇರೆಯಾಗಿ ಹೇಳುವುದು ಅನವಶ್ಯಕ ನನ್ನ ಕಲ್ಪನೆಯಲೋಕ ಇಲ್ಲಿ ಯಥೇಚ್ಛವಾಗಿ ವಿಹರಿಸಿರುವುದೇನೋ ನಿಜ. ಅದೇನಿದ್ದರೂ ಇತಿಹಾಸದ ಮಾನವ ಕೃಷ್ಣನು ನಿಂತ ಗಟ್ಟಿಯಾದ ನೆಲಗಟ್ಟಿನ ಮೇಲೆ ನಿಂತುದು ಎಂಬುದನ್ನು ಅರಿಕೆ ಮಾಡಿಕೊಳ್ಳುತ್ತೇನೆ." ಈ ದೃಷ್ಟಿಯನ್ನು ಎಸ್.ಎಲ್. ಭೈರಪ್ಪನವರ ಪರ್ವದಲ್ಲೂ ಕಾಣಬಹುದು.

ಮಕ್ಕಳಿಗಾಗಿ ಭಾಗವತ (ಗೀತಾಪ್ರೆಸ್ ಪ್ರಕಟನೆಗಳು)

ಕನ್ನಡದಲ್ಲಿ ಧಾರ್ಮಿಕ ಮಕ್ಕಳ ಸಾಹಿತ್ಯ ಸ್ವಾತಂತ್ರ್ಯ ಪೂರ್ವದಲ್ಲಿ ಹಾಗೂ 20ನೇಯ ಶತಮಾನದಲ್ಲಿ ಪ್ರಕಟವಾದ ಹಾಗೆ 21ನೇಯ ಶತಮಾನದಲ್ಲಿ ಪ್ರಕಟವಾಗುತ್ತಿಲ್ಲ ವಿಜ್ಞಾನ, ಸಾಮಾಜಿಕ ಕೃತಿಗಳು ಮಕ್ಕಳಿಗಾಗಿ ಈಗ ಅಧಿಕವಾಗಿ ಪ್ರಕಟವಾಗುತ್ತಿವೆ. [ಭಾಗವತವನ್ನು ಕುರಿತು ಹತ್ತಾರು ಮಕ್ಕಳ ಗ್ರಂಥಗಳು ಪ್ರಕಟವಾಗಿವೆ.] ಇವುಗಳಲ್ಲಿ ಚಿಕ್ಕಮಕ್ಕಳಿಗೆ ಅಂದರೆ ಪ್ರಾಥಮಿಕ ಶಾಲಾ ವಿದ್ಯಾರ್ಥಿಗಳಿಗೆ ಸೂಕ್ತವಾದ ಪ್ರಕಟನೆಗಳು ಕಡಿಮೆ. [ಸುಂದರ ಮುದ್ರಣದ ಸಚಿತ್ರ ವರ್ಣ ಮತ್ತು ಪ್ರಕಟಣೆಗಳು ತೀರಾ ಕಡಿಮೆ.] ಈ ಪೈಕಿ ಗೋರಖಪುರದ ಗೀತಾ ಪ್ರೆಸ್‌ನಿಂದ ಪ್ರಕಟವಾದ ಮಕ್ಕಳ ಗ್ರಂಥಗಳು ಗಮನಾರ್ಹವಾಗಿವೆ.

ಎಡ ಪುಟದಲ್ಲಿ ಚಿತ್ರ, ಬಲ ಪುಟದಲ್ಲಿ ಕಥೆ ಹೇಳುವ ಈ ಪ್ರಕಟನೆಗಳು ಎಂಥಾ ಮಕ್ಕಳನ್ನಾದರೂ ಆಕರ್ಷಿಸುತ್ತವೆ. ಗೋಪಾಲ, ಮುದ್ದುಕೃಷ್ಣ, ಶ್ರೀಕೃಷ್ಣ, ಮೋಹನ ಮೊದಲಾದ ಪುಸ್ತಕಗಳಲ್ಲಿ ಭಾಗವತದ ಕಥೆಗಳನ್ನು ಆಕರ್ಷಕವಾಗಿ ನಿರೂಪಿತವಾಗಿದೆ.

ಮೋಹನ ಗ್ರಂಥದಲ್ಲಿ ಗೋವರ್ಧನ ಲೀಲೆ, ರಾಸಲೀಲಾ ಬ್ರಹ್ಮದೇವರ ಮೋಹಭಂಗ, ಪ್ರಸಂಗಗಳು, ಶ್ರೀಕೃಷ್ಣ ಗ್ರಂಥದಲ್ಲಿ ಕುವಲಯಾಪೀಡನ ಉದ್ಧಾರದಿಂದ ಭಗವಂತನ ಪರಂಧಾಮ ಗಾಯನದವರೆಗೆ 9 ಪ್ರಸಂಗಗಳನ್ನುಗೋಪಾಲ ಗ್ರಂಥದಲ್ಲಿ ಕೃಷ್ಣಬಾಲ್ಯ ಪ್ರಸಂಗಗಳನ್ನು ಚಿತ್ರಿಸಿದೆ. ಮುದ್ದುಕೃಷ್ಣ ಗ್ರಂಥದಲ್ಲಿ ಚಂದಮಾಮ ಪ್ರಸಂಗ, ಕಾಕಸುರನ ಸೋಲು, ಬೆಣ್ಣೆ ಬೇಡಿದ್ದು ಮೊದಲಾದ ಪ್ರಸಂಗಗಳಿವೆ. ಕನ್ನಡ ಮಕ್ಕಳು ಓದಿ ಆನಂದಿಸುವಂಥ ಪುಟ್ಟ ಗ್ರಂಥಗಳಿವು.

ಕೋಶಗಳು

18 ಪುರಾಣಗಳಲ್ಲಿ ಬರುವ ವ್ಯಕ್ತಿ ಪರಿಚಯ ನೀಡುವ ಕೋಶಗಳು ಕನ್ನಡದಲ್ಲಿ ಹಲವಾರಿವೆ. ಆ ಪೈಕಿ ಪುರಾಣ ಭಾರತಕೋಶ ಮತ್ತು ಪುರಾಣನಾಮ ಚೂಡಾಮಣಿ ಉಪಯುಕ್ತ, ಪ್ರಸಿದ್ಧ ಕೋಶಗಳಾಗಿವೆ. ಇಂದಿಗೂ ಅಂಥ ಪೌರಾಣಿಕ ಕೋಶಗಳು ಕನ್ನಡದಲ್ಲಿ ಬೇರೆ ಬಂದಿಲ್ಲ. ಇತರ ಭಾಷೆಗಳಲ್ಲೂ ಇಂಥ ಹಲವಾರು ಕೋಶಗಳಿವೆ. ಪುರಾಣಾನುಸಾರ ಈ ಕೋಶಗಳನ್ನು ವರ್ಗೀಕರಿಸುವುದು ಅಗತ್ಯವಿದೆ. ಆ ರೀತಿ ಕೋಶವೊಂದು ಬರಬೇಕಾಗಿದೆ. ರಾಮಾಯಣ, ಭಾರತದ ಬಗ್ಗೆ ಈ ರೀತಿ ಕೋಶಗಳು ಬಂದಿವೆ. ಭಾಗವತದ ಬಗ್ಗೆ ಕನ್ನಡದಲ್ಲಿ ಬಂದಿಲ್ಲ.

ಶ್ರೀಮದ್ಭಾಗವತಂ (ಪೂರ್ವಾರ್ಧ) ಮೂಲ ಮತ್ತು ಅನುವಾದ ಟಿಪ್ಪಣಿಗಳ ಸಹಿತ– ಹೆಚ್. ಅನಂತಮೂರ್ತಿಶಾಸ್ತ್ರಿ ಹೂಸಕೆರೆ ಚಿದಂಬರಯ್ಯನವರು ಕನ್ನಡದ ಅದ್ವಿತೀಯ ವಿದ್ವಾಂಸರಲ್ಲಿ ಒಬ್ಬರು ರಾಮಾಯಣ, ಭಾರತ, ಭಾಗವತ ಮೊದಲಾದ ಕೃತಿಗಳನ್ನು ವಿಶೇಷ ಅಧ್ಯಯನ ಮಾಡಿದವರು. ಅವರ ಮಗ ಹೆಚ್. ಅನಂತಮೂರ್ತಿ ಶಾಸ್ತ್ರಿಗಳೂ ತಂದೆಯಂತೆಯೇ ಸಂಸ್ಕೃತ ಕನ್ನಡ ವಿದ್ವಾಂಸರು. ಆದರೆ ತಂದೆ ಅವರ ಹಾಗೆ ಹೆಚ್ಚು ಕೃತಿಗಳನ್ನು ಕನ್ನಡದಲ್ಲಿ ಬರೆಯಲಿಲ್ಲ. ಇವರ ಭಾಗವತವನ್ನು ಪೂರ್ತಿ ಅನುವಾದಿಸಿದ್ದರು. ಆ ಪೈಕಿ ದಶಮಸ್ಕಂದ ಪೂರ್ವಾರ್ಧ ಪ್ರಕಟವಾಗಿದೆ. ವಿವರಣಾತ್ಮಕ ತಾತ್ಪರ್ಯವನ್ನು ಮೂಲದೊಡನೆ ಕೊಟ್ಟಿದ್ದಾರೆ. ಉಪಯುಕ್ತ ಟಿಪ್ಪಣಿಗಳಿವೆ. ಪೂರ್ಣ ಗ್ರಂಥ ಪ್ರಕಟವಾಗಿದ್ದರೆ ಕನ್ನಡಕ್ಕೆ ಒಳ್ಳೆಯ ಕೂಡುಗೆ ಆಗುತ್ತಿತ್ತು.

ಗ್ರಂಥಋಣ

1) **ಪುರಾಣದಲ್ಲೇನಿದೆ ?** ಲೇ ರಮಾರಾಮನ್
ಪ್ರ : ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು 2011

2) **ಶ್ರೀಕೃಷ್ಣಚರಿತ್ರೆ :** ಲೇ ಬಂಕಿಂಚಂದ್ರ ಛಟೋಪಾಧ್ಯಾಯ
ಅನು: ಆರ್. ವ್ಯಾಸರಾವ್ ಪ್ರ : ಆರ್.ವಿ. ಪ್ರಭಾಕರರಾವ್,
ಜಯನಗರ, ಬೆಂಗಳೂರು. 1965(4)

3) **ಸಾಹಿತ್ಯ ಮತ್ತು ಪುರಾಣ–ಲೇ :** ಮಲ್ಲೇಪುರಂ ಜಿ. ವೆಂಕಟೇಶ್ ಪ್ರ:
ಪವಿತ್ರಾ ಪಬ್ಲಿಕೇಷನ್ಸ್ ಮಾಗಡಿ ರಸ್ತೆ, ಬೆಂಗಳೂರು. ಇ: 2008

4) **ಇತಿಹಾಸ ಪುರಾಣ :** – ಲೇ ಪ್ರೊ. ಕೆ.ಎಸ್. ಕಣ್ಣನ್ ಪ್ರ :
ಭಾರತೀಯ ವಿದ್ಯಾಭವನದ ಗಾಂಧೀ ಕೇಂದ್ರ, ರೇಸ್‌ಕೋರ್ಸ್
ರಸ್ತೆ, ಬೆಂಗಳೂರು.
ಇ. 2000

5) **ಶ್ರೀಮದ್ಭಾಗವತ ಕಥಾಸಾರ (ಸಂಗ್ರಹ ಗದ್ಯಾನುವಾದ)**
ಲೇ: ಸುಬೋಧರಾಮರಾಯರು. ಪ್ರ : ಸುಬೋಧ
ಪ್ರಕಟನಾಲಯ, ಗಿರಿನಗರ, ಬೆಂಗಳೂರು. ಇ. 2014 (6)
ಪುಟಗಳು 680

6) **ಪುರಾಣದಲ್ಲೇನಿದೆ ? (18 ಪುರಾಣಗಳ ಸಂಕ್ಷಿಪ್ತ ಪರಿಚಯ) ಲೇ :**
ರಮಾ ರಾಮನ್, ಪ್ರ : ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.
ಇ. 2001 220 ಪುಟಗಳು

ಗ್ರಂಥ ಋಣ–2

ಮೂಲಾನುವಾದ

7) **ಶ್ರೀವಿಷ್ಣುಪುರಾಣ (ಪೂರ್ವಭಾಗ) ಮೂಲ ಮತ್ತು ಅನುವಾದ) ಅನು:**
ವಿದ್ವಾನ್ ಎನ್. ರಂಗನಾಥಶರ್ಮ, ಪ್ರ : ಶ್ರೀರಾಮಕೃಷ್ಣಾಶ್ರಮ,
ಬೆಂಗಳೂರು. ಇ. 1986 ಪು 615

8) **ಶ್ರೀವಿಷ್ಣುಪುರಾಣ (ಉತ್ತರಾರ್ಧ) ಮೂಲ ಮತ್ತು ಅನುವಾದ) ಅನು:** ವಿದ್ವಾನ್ ಎನ್. ರಂಗನಾಥಶರ್ಮ, ಪ್ರ : ರಾಮಕೃಷ್ಣಮಠ, ಬೆಂಗಳೂರು. ಇ. 1988 ಪು. 640

9) **ಸಚಿತ್ರ ವಚನ ಭಾಗವತ ಕಥಾಸಂಗ್ರಹವು (12 ಸ್ಕಂದಗಳು).** ವೇ॥ ಬಿ.ಸಿ. ಶ್ರೀನಿವಾಸಯ್ಯಂಗಾರ್, ವೇ॥ಬ್ರ॥ ಅಶ್ವತ್ಥ ನಾರಾಯಣ ಶಾಸ್ತ್ರೀ, ಪ್ರ : ಟಿ.ಎನ್. ಕೃಷ್ಣಯ್ಯಶೆಟ್ಟಿ ಆ್ಯಂಡ್ ಸನ್ಸ್, ಚಿಕ್ಕಪೇಟೆ, ಬೆಂಗಳೂರು. ಇ. 1954, 388 ಪುಟಗಳು

10) **ಸುನೀತಿಭಾಗವತ (ಮೂಲ ಮತ್ತು ಕನ್ನಡಾನುವಾದ) ಸಂಗ್ರಹಾನುವಾದ (ಸಮಗ್ರ) 470 ಶ್ಲೋಕಗಳು, ಲೇ :** ಶ್ರೀಸಾಗರ ರಾಮಾಚಾರ್ಯ, ಅನು : ಅ.ರಾ. ಪಂಚಮುಖಿ, ಪ್ರ : ಪ್ರಾಚ್ಯವಿದ್ಯಾ ಸಂಶೋಧನ ಕೇಂದ್ರ, ಧಾರವಾಡ, ಪುಟಗಳು 110 ಇಸವಿ 2000

11) **ನಿತ್ಯಾತ್ಮ ಶುಕಯೋಗಿ ಕನ್ನಡ ಭಾಗವತ (10ನೇ ಸ್ಕಂದ, ಷಟ್ಪದಿವಾಕ್ಯಾ),** ಸಂ : ಕೆ. ವೆಂಕಟರಾಮಪ್ಪ, ಇಸವಿ 1964 ಪ್ರ : ಶಾರದಾ ಮಂದಿರ, ಮೈಸೂರು; 460 ಪುಟಗಳು.

12) **ನಿತ್ಯಾತ್ಮ ಶುಕಯೋಗಿ ಕನ್ನಡ ಭಾಗವತ (ಸಂಪುಟ I ಮತ್ತು II ನೇ ಸ್ಕಂದಗಳು), ಸಂ :** ಕೆ. ವೆಂಕಟರಾಮಪ್ಪ, ಪ್ರ : ಶಾರದಾ ಮಂದಿರ, ಮೈಸೂರು, ಇಸವಿ 1960.

13) **ನಿತ್ಯಾತ್ಮ ಶುಕಯೋಗಿ ಕನ್ನಡ ಭಾಗವತ (III ಮತ್ತು IV ನೇ ಸ್ಕಂದಗಳು) ಸಂ. :** ಕೆ. ವೆಂಕಟರಾಮಪ್ಪ, 1975 ಶಾರದಾ ಮಂದಿರ, ಮೈಸೂರು.

ಸಮಗ್ರಮೂಲಾನುವಾದ

14) **ಶ್ರೀಮದ್ಭಾಗವತ ಮಹಾಪುರಾಣಂ (ಸಮಗ್ರ ಮೂಲ ಮತ್ತು ಗದ್ಯಾನುವಾದ)** 2 ಭಾಗಗಳು (1–8 ಸ್ಕಂದ 1ನೇ ಭಾಗ; 9–12 ಎರಡನೇ ಭಾಗ) ಅನು :
ಕೀರ್ತನಾಚಾರ್ಯ ಶ್ರೀಲಕ್ಷ್ಮಣದಾಸವೇಲಣಕರ, ಪ್ರ : ಗೀತಾಪ್ರೆಸ್ ಗೋರಖಪುರ, 2013; ಪು. 902+865=1767

15) **ಸಂಗ್ರಹಾನುವಾದ ಶ್ರೀಮದ್ಭಾಗವತ ಪ್ರವಚನ (ಸಪ್ತಾಹದ ಭಾಗವತ), ಲೇ :** ಕೀರ್ತನಾಚಾರ್ಯ ಶ್ರೀಲಕ್ಷ್ಮಣದಾಸ ವೇಲಣಕರ, ಪ್ರ : ಷಡ್ಜ ಕಲಾಕೇಂದ್ರ ಟ್ರಸ್ಟ್ (ರಿ) ಬೆಂಗಳೂರು, ಇಸವಿ 2014, ಪುಟಗಳು 685+32=717.

16) **ಜಗನ್ನಾಥ ವಿಜಯ (1185ಸು) ರುದ್ರಭಟ್ಟ (ಚಂಪೂ)**
ವಿಷ್ಣುಪುರಾಣದ ಕಥೆ
(ಕೃಷ್ಣ ಜನನದಿಂದ ಬಾಣಾಸುರನ ವಧೆಯವರೆಗೆ) ಪ್ರ : ಮೈವಿವಿ, ಸಂಪಾದಕರು.

17) ಗೋಪಾಲ } ಮಕ್ಕಳ ಸಾಹಿತ್ಯ
18) ಮೋಹನ } ಕಥಾರೂಪದಲ್ಲಿ
19) ಮುದ್ದುಕೃಷ್ಣ } ಪ್ರ : ಗೀತಾ ಪ್ರೆಸ್, ಗೋರಖಪುರ
20) ಶ್ರೀಕೃಷ್ಣ ಇಸವಿ } 2010, ಲೇ ?

21) **ವಚನ ಭಾಗವತ (ಕಥಾಸಾರ) ಲೇ : ತ.ಸು. ಶಾಮರಾಯ,** ಪ್ರ : ತ.ವೆಂ. ಸ್ಮಾರಕ ಗ್ರಂಥಮಾಲೆ, ಮೈಸೂರು 1971.

22) **ಶ್ರೀಕೃಷ್ಣಚರಿತೆ (ಸಂಗ್ರಹ ಭಾರತ) ಸಂ. ಕೆ. ವೆಂಕಟರಾಮಪ್ಪ,** ಪ್ರ : ಮೈ.ವಿ.ವಿ ಮೈಸೂರು 1955

23) **ಶ್ರೀಮದ್ಭಾಗವತ ಮಹಾಪುರಾಣ** (8 ಸಂಪುಟಗಳು) (ಮೂಲ, ಅನ್ವಯ, ತಾತ್ಪರ್ಯ) ಅನು : ಮೋಟಗಾನಹಳ್ಳಿ ರಾಮಶೇಷಶಾಸ್ತ್ರೀ, ಪ್ರ : ಶ್ರೀವಿದ್ಯಾಗಣಪತಿ ಪ್ರಕಾಶನ, ತ್ಯಾಗರಾಜನಗರ, ಬೆಂಗಳೂರು.

24) **ಸಂಗ್ರಹ ಭಾಗವತ (ಕಥಾಸಾರ) ಲೇ :** ಬನ್ನಂಜೆಗೋವಿಂದಾಚಾರ್ಯ, ಯುಗಪುರುಷ ಪ್ರಕಟನಾಲಯ, ದ.ಕ. 1983.

25) **ಕರ್ನಾಟಕ ಭಾಗವತ (ಪೀಠಿಕೆ–ಮೂಲ ಕನ್ನಡಕಾವ್ಯ ಷಟ್ಪದಿ + ಇಂಗ್ಲೀಷ್ ಅನುವಾದ ಗದ್ಯ)** ಸಂ : ಹೊಳಲ್ಕೆರೆ ರಂಗರಾವ್ ಚಂದ್ರಶೇಖರ್ (ಷಟ್ಪದಿಕಾವ್ಯ : ಚಾಟುವಿಠ್ಠಲನಾಥ) (ಭಾಗ 1 ಮತ್ತು 2, 12 ಸ್ಕಂದಗಳು) ಪ್ರ : ಚಂದ್ರ ಪಬ್ಲಿಕೇಷನ್ಸ್, 2404, ಲಿಮಕ್ ಲೇನ್, ಕೊಲಂಬಿಯ ಎಂ.ಒ. 65203 USA) 19

26) **ಕನ್ನಡ ಸಾಹಿತ್ಯದಲ್ಲಿ ವೈದಿಕ ಪುರಾಣಗಳು (ವಿಮರ್ಶೆ) ಲೇ :** ಡಾ. ಸದಾನಂದನಾಯಕ, ಕ.ವಿ.ವಿ., ಧಾರವಾಡ 1964.

27) **ಕನ್ನಡ ಸಾಹಿತ್ಯದ ಭಾಗವತ ಕವಿಗಳು ಲೇ :** ಎ.ಎಸ್. ವೇಣುಗೋಪಾಲರಾವ್, ಮೈವಿವಿ ಪ್ರಸಾರಾಂಗ 1983.

28) **ಶ್ರೀಕೃಷ್ಣಕಥೆಯ ಉಗಮ ಮತ್ತು ವಿಕಾಸ :** (ಮಹಾಪ್ರಬಂಧ), ಲೇ : ಪ್ರಧಾನ್ ಗುರುದತ್, 1990; ಪ್ರ : ಮೈವಿವಿ ಪ್ರಸಾರಾಂಗ.

29) **ಭಾಗವತ ತಾತ್ಪರ್ಯ ನಿರ್ಣಯ ಶ್ರೀಮಧ್ವಾಚಾರ್ಯರು (1199) (ಭಾಗವತ ವ್ಯಾಖ್ಯಾನ)**

30) **ಕನ್ನಡ ಭಾಗವತ ಕಾವ್ಯಗಳ ಸಮೀಕ್ಷೆ** – (ಮಹಾಪ್ರಬಂಧ) ಡಾ. ಎನ್.ಬಿ. ಪರಿಮಳಾಬಾಯಿ ಪ್ರ : ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು–2011.

31) **ಸಂಪೂರ್ಣ ಕನ್ನಡ ಭಾಗವತ ಭಾಗ 1 (ಸ್ಕಂದ 1 ರಿಂದ 7) ಭಾಗ 2 (8–12 ಸ್ಕಂದಗಳು) ಲೇ :** ಭಕ್ತಕವಿ ಕೆ.ವಿ. ವರದ ರಾಜಯ್ಯಂಗಾರ್
ಪ್ರ : ಲೇಖಕರು, ಜಯನಗರ, ಬೆಂಗಳೂರು, 2012; ಪುಟಗಳು: 632+900=1532.

32) **ತಿಮ್ಮಪ್ಪದಾಸಕೃತ ಶ್ರೀಕೃಷ್ಣಬಾಲಲೀಲೆ (ಭಾಗ 1 ಮತ್ತು 2) ಸಂಪಾದಕರು :** ಎಂ.ವಿ. ಸೀತಾರಾಮಯ್ಯ ಪ್ರ : ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ, ಬೆಂಗಳೂರು (ಭಾಗ 1) 2002 ಇಸವಿ; 2006 ಭಾಗ (2)

33) **ನರಹರಿ ಕವಿ ರಚಿತ ಪ್ರಹ್ಲಾದ ಚರಿತ್ರೆ (ಷಟ್ಪದೀ ಕಾವ್ಯ) ಸಂ :** ಆರ್.ಎಸ್. ರಾಮರಾವ್, ಪ್ರ : ಕರ್ನಾಟಕ ಗಮಕ ಕಲಾ ಪರಿಷತ್ತು, ಬೆಂಗಳೂರು;
ಇ. 1986.

34) **ಸಂಕ್ಷಿಪ್ತ ಭಾಗವತ ಲೇ :** ಕೆ.ವಿ. ವೆಂಕಟನರಸಿಂಹಯ್ಯ ಪ್ರಾಕಾಶಕರು ಲೇಖಕರು ಬೆಂಗಳೂರು ಇ 1982

35) **ಕೃಷ್ಣ (3ಭಾಗಗಳು) (ಭಾವಾರ್ಥರೂಪ) ಲೇ :** ಎ.ಸಿ. ಭಕ್ತಿವೇದಾಂತಸ್ವಾಮಿ ಪ್ರಭುಪಾದ, ಪ್ರಕಾಶಕರು : ಭಕ್ತಿವೇದಾಂತ ಬುಕ್ ಟ್ರಸ್ಟ್, ಬೆಂಗಳೂರು–2004.

36) **ಆದಿಪುರಾಣಂ (ಕೃಷ್ಣ ಕಥೆ) ಸಂಸ್ಕೃತ ಮೂಲ ಮತ್ತು ಕನ್ನಡಾನುವಾದ,** ಅನು : ಆಸ್ಥಾನ ವಿದ್ವಾನ್ ಎಡತೂರೆ ಚಂದ್ರಶೇಖರಶಾಸ್ತ್ರಿ, ಪ್ರ : ಶ್ರೀವಿದ್ಯಾಗಣಪತಿ ಪ್ರಕಾಶನ, ಬೆಂಗಳೂರು–2011.

37) **ಪೋತನ ಭಾಗವತ (ತೆಲಗು ಮೂಲ ಮತ್ತು ಕನ್ನಡಾನುವಾದ)** 8 ಸಂಪುಟಗಳು ಸಂಪಾದಕ ಮಂಡಳಿ ಆರ್ವಿಯಸ್ ಸುಂದರಂ ಮತ್ತು ಇತರರು ಪ್ರ : ಶ್ರೀಯೋಗಿನಾರಾಯಣ ಅಧ್ಯಯನ ಕೇಂದ್ರ, ಬೆಂಗಳೂರು; 2014.

38) **ಸಂತೆಕಲ್ಲಹಳ್ಳಿ ಲಕ್ಷ್ಮೀನರಸಿಂಹ ಶಾಸ್ತ್ರಿ** – ಪೋತನ ಭಾಗವತ (ಸಂಗ್ರಹಾನುವಾದ)

39) **ಶ್ರೀಮದಾಂಧ್ರ ಭಾಗವತವು (3 ಸಂಪುಟಗಳು) ಅನು :** ಸುನಂದ ರಂಗನಾಥಸ್ವಾಮಿ ಪ್ರ : ಅನುವಾದಕರು ರಾಮಸೌರಭ ಅಪಾರ್ಟ್‌ಮೆಂಟ್, ನ.ರಾ. ಕಾಲೋನಿ, ಬೆಂಗಳೂರು, 2014.

40) **ಪೋತನ (ಪರಿಚಯ ಗ್ರಂಥ) ಲೇ :** ಎನ್.ಎಸ್. ದಕ್ಷಿಣಾ ಮೂರ್ತಿ ಪ್ರ : ಡಿವಿಕೆ. ಮೂರ್ತಿ, ಮೈಸೂರು, 1971.

41) **ಆಧುನಿಕ ಕನ್ನಡ ನಾಟಕ (ಮಹಾಪ್ರಬಂಧ) ಕೆ.ಮರುಳಸಿದ್ದಪ್ಪ ಪ್ರ :** ಪ್ರಿಂಟರ್ಸ್ ಪ್ರಕಾಶನ, ಬೆಂಗಳೂರು, 1983

42) **ಪುರಾಣ ಕಥೆಗಳು (ಬಯಲು ನಾಟಕ ಸಂಪುಟ) ಸಂ:** ಡಾ. ಆರ್.ಸಿ. ಹಿರೇಮಠ, 2007; ಶ್ರೀಶುಭ ಮುದ್ರಣ ಪ್ರಕಾಶನ, ಬೆಂಗಳೂರು.

43) **ವರಾಹ ಪುರಾಣ (ಸಂಗ್ರಹಾನುವಾದ)** ಪುಂಡರೀನಾಥಾಚಾರ್ಯ ಗಲಗಲಿ 1980 ? ಪ್ರ : ವೇದ ಪುರಾಣ ಸಾಹಿತ್ಯಮಾಲಾ, ಗದಗ.

44) **ಭಾಗವತಾಮೃತ (ಸಂಗ್ರಹಾನುವಾದ) ಕೆ.ರಾ.ವೆ. ಸುಬ್ರಹ್ಮಣ್ಯಶಾಸ್ತ್ರೀ ಪ್ರ:** ಶ್ರೀಭಾಗವತ ಪ್ರಕಾಶನ, ಬೆಂಗಳೂರು; 1988

45) **ಸಂಸ್ಕೃತದ ಮೂರು ಮೇರುಕೃತಿಗಳು ಎ.ಎಸ್. ನಂಜುಂಡಸ್ವಾಮಿ ಪ್ರ:** ಭಾರತೀಯ ವಿದ್ಯಾಭವನ, ಬೆಂಗಳೂರು; 2003

46) **ಶ್ರೀಕೃಷ್ಣಲೀಲಾ (ನಾಟಕ) ಎಸ್.ಕೆ. ಕರೀಂಖಾನ್; ಪ್ರ :** ಆದರ್ಶ ಸುಗಮ ಸಂಗೀತ ಅಕಾಡೆಮಿ, ಬೆಂಗಳೂರು; 1997.

47) **ಶ್ರೀಕೃಷ್ಣಾವತಾರ (ಪೂರ್ವಾರ್ಧ ಮತ್ತು ಉತ್ತರಾರ್ಧ ದಶಮ ಸ್ಕಂದ) (ಕಾದಂಬರಿ ರೂಪ) ಲೇ :** ಕೆ.ಎಸ್. ನಾರಾಯಣಾಚಾರ್ಯ ಪ್ರ : ಗೀತಾ ಬುಕ್ ಹೌಸ್, ಮೈಸೂರು 2001

48) **ಭಾಗವತ ವಾಹಿನಿ (ತೆಲುಗಿನಿಂದ ಕನ್ನಡಕ್ಕೆ) ಲೇ :** ಭಗವಾನ್ ಶ್ರೀಸತ್ಯಸಾಯಿಬಾಬಾ; ಅನು : ಎಚ್.ಎಂ. ಶಿವರಾಂ, 1975 ಸತ್ಯಸಾಯಿ ಎಜುಕೇಷನ್ ಆ್ಯಂಡ್ ಪಬ್ಲಿಕೇಷನ್ಸ್ ಫೌಂಡೇಶನ್, ಬೆಂಗಳೂರು ಜಿಲ್ಲೆ.

49) **ಸಂಪಿಗೆ ಭಾಗವತ (ಕಥಾ ಸಂಗ್ರಹ) ಲೇ :** ಲಕ್ಷ್ಮೀಶ ತೋಳ್ಪಾಡಿ; 2011; ಕೆಂಡಸಂಪಿಗೆ ಪ್ರಕಾಶನ, ಲೆಮನ್–ಟ್ರಿ ಮೀಡಿಯಾ ಪ್ರೈ.ಲಿ., ಬೆಂಗಳೂರು.

50) **ಸಮುದ್ರ ಮಥನ (ವಿಮರ್ಶೆ) ಸಚ್ಚಿದಾನಂದೇಂದ್ರ ಸರಸ್ವತೀಸ್ವಾಮಿ ಪ್ರ:** ಅಧ್ಯಾತ್ಮ ಪ್ರಕಾಶ ಕಾರ್ಯಾಲಯ, ಹೊಳೆನಸರಸೀಪುರ; 1956

51) **ಭಾಗವತದ ಕಥೆಗಳು (ಕಥಾ ಸಂಗ್ರಹ) ಲೇ :** ಬಿ.ಎಸ್. ಸ್ವಾಮಿ ಪ್ರ : ಧಾಮಿನಿ ಸಾಹಿತ್ಯ, ಬೆಂಗಳೂರು; ಇ. 2004.

52) **ಜಗನ್ನಾಥ ವಿಜಯ (ಮೂಲ ಗದ್ಯಾನುವಾದ ಕನ್ನಡಕಾವ್ಯ) ಅನು :** ಎಂ.ಆರ್. ವರದಾಚಾರ್ಯ ಪ್ರ : ಕನ್ನಡ ಸಾಹಿತ್ಯ ಪರಿಷತ್ತು; 1999.

53) **ಕೃಷ್ಣಾವತಾರ (10 ಭಾಗಗಳು) ಲೇ : ಕೆ.ಎಂ. ಮುನ್ಷಿ ಅನು :** ಸಿದ್ದವನಹಳ್ಳಿ ಕೃಷ್ಣಶರ್ಮ, 1967 ರಿಂದ ಪ್ರ : ಲೋಕಶಿಕ್ಷಣ ಟ್ರಸ್ಟ್, ಹುಬ್ಬಳ್ಳಿ.

54) **ಶ್ರೀಮದ್ಭಾಗವತಂ (ಪೂರ್ವಾರ್ಧ) ಅನು :** ಹೆಚ್: ಅನಂತಮೂರ್ತಿಶಾಸ್ತ್ರಿ; ಪ್ರ : ಮೋಹನಕೃಷ್ಣ ಜೆ.; ಕತ್ತರಿಗುಪ್ಪೆ, ಐಟಿಐ ಲೇಔಟ್, ಬೆಂಗಳೂರು–85, 2011.

55) **ಪುರಾಣ ಭಾರತ ಕೋಶ–ಯಜ್ಞನಾರಾಯಣ,** ಪ್ರ : ಗೀತಾ ಬುಕ್ ಹೌಸ್; 1975.

56) **ಪುರಾಣನಾಮ ಚೂಡಾಮಣಿ–ಬೆನಗಲ್ ರಾಮರಾವ್ ಮತ್ತು ಪಾನ್ಯಂ ಸುಂದರಶಾಸ್ತ್ರಿ; ಪ್ರ :** ಮೈಸೂರು ವಿಶ್ವವಿದ್ಯಾಲಯ; 1959

ಕನ್ನಡದಲ್ಲಿ ಪುರಾಣ ಸಾಹಿತ್ಯ

ಲೇಖನಗಳು

1) **ಕನ್ನಡ ಪುರಾಣಗಳು, ಪುರಾಣ ಕಥೆಗಳು ಸಂಸ್ಕೃತ ಕನ್ನಡ ಬಾಂಧವ್ಯ** (1991) (ಸಾಹಿತ್ಯ ಸನ್ನಿಧಿ: ಟಿ.ವಿ. ವೆಂಕಟಾಚಲಶಾಸ್ತ್ರಿ, ಶಾಸ್ತ್ರೀಯ 7ನೇ ಸಂಪುಟ ಪ್ರ : ಸಪ್ನಬುಕ್ ಹೌಸ್, ಬೆಂಗಳೂರು; ಇ 2008.

2) **ಗಳಗನಾಥರ ಇತರ ಕೃತಿಗಳು(ಪುಟ 295–298) ಗ್ರಂಥ : ಗಳಗನಾಥರು ಮತ್ತು ಅವರ ಕಾದಂಬರಿಗಳು; ಲೇ :** ಕೃಷ್ಣಮೂರ್ತಿ ಕಿತ್ತೂರ; ಪ್ರ : ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ; 1978.

3) **ಕನ್ನಡ ಸಾಹಿತ್ಯ ಚರಿತ್ರೆ** – ರಂ.ಶ್ರೀ. ಮುಗಳಿ, ಉಷಾ ಸಾಹಿತ್ಯ ಮಾಲೆ, ಮೈಸೂರು, ಪುಟ 270–271, 288.

4) **ಕನ್ನಡ ಸಾಹಿತ್ಯ ಚರಿತ್ರೆ :** ತ.ಸು. ಶಾಮರಾವ್, ಪು : 124–126, ತ.ವೆಂ. ಸ್ಮಾರಕ ಗ್ರಂಥಮಾಲೆ, ಮೈಸೂರು.

5) **ಕರ್ನಾಟಕದ ಪರಂಪರೆ (ಸಂಪುಟ 2, ಪುಟ 139) ಲೇ :** ಡಿ.ಎಲ್.ಎನ್. 1970; ಕರ್ನಾಟಕ ಸರ್ಕಾರದ ಪ್ರಕಟಣೆ.

6) **ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ** – ಆರ್.ಎಸ್. ರಾಮರಾವ್ (ಲೇಖನ) ಸಂಪುಟ 4 ಪುಟ 436–447, 1978; ಬೆಂ.ವಿ.ವಿ. ಪ್ರಸಾರಾಂಗ.

7) **ಕನ್ನಡ ಕವಿ ಚರಿತೆ,** ಸಂಪುಟ 2, ಪುಟ 172 ಆರ್. ನರಸಿಂಹಾಚಾರ್, ಪ್ರ : ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

❑

Padma Shri awardee Dr. Ved Kumari Ghai, from Jammu being felicitated by Sri Madhu Pandit Dasa (center), Sri H.N. Suresh, Pathi Sridhar, Sri Sri Sri Jayendra Puri Mahaswamiji and Sri K.G. Raghavan

Sri Murali Manohar Patak from Gorakhpur being felicitated by Sri K.G. Raghavan and Sri H.N. Suresh

Dr. H.S. Nagabhushana Bhatta being felicitated by Sri H.R. Ananth, Sri H.N. Suresh, Sri Vedavyasa and Sri K.B. Sudarshan

Sri H.N. Suresh felicitates Prof. K.E. Devanathan from Tirupati also seen in the pic. Dr. M. Shivashankar, Sri M.A. Jayarama Rao and Dr. S. Krishna Kumar

Dr. S. Ranganath being felicitated by Sri Madhu Pandit Dasa and Sri Sri Sri Jayendra Puri Mahaswamiji

Prof. K.T. Pandurangi,
well known scholor
giving the
valedictory address

Dignitaries with Prof. K.T. Pandurangi, well known scholor after the felicitation ceremony

A Section of the audience

With Best Compliments from:

Tirumala Tirupati Devasthanams
(TTD)

TTD Administrative Building,
K.T. Road Tirupati 517 501,
Andhra Pradesh, India.

With
best
compliments
from:

Pathi Sridhara Shantha
Charitable Trust

Bangalore - 560 011

With best compliments from:

mantri

Mantri Developers Pvt. Ltd.

#41, Vittal Mallya Road
Bengaluru - 560 001.

Tel: +91-80-41300000
Fax: +91-80-41325000
Email: Enquiry@mantri.in

With best compliments from:

विजया बैंक

VIJAYA BANK

(A GOVT. OF INDIA UNDERTAKING)

A friend you can bank upon

With best compliments from:

Jyothy Institute of Technology

Agara Hobli–Kanakapura Road, Thataguni Village,
Bengaluru, Karnataka 560062

With best compliments from:

WOODART
CREATION

Jagadish P. Kateliya

Woodart Creation

No. 26, 1st Floor, 1st "R" Block, 20th Main,
1st Cross, Rajaji Nagar – Bangalore – 560 010
Tel: +91 080 23376700 | Email: info@woodartcreation.com
www.woodartcreation.com

With best compliments from:

Department of Kannada & Culture

Government of Karnataka

இளமை
இனிமை
புதுமை!
With Best Compliments From
குமுதம்

BIG OR SMALL. It's your call.

Resize your investment every month with **UNION MONTHLY PLUS RECURRING DEPOSIT SCHEME**

SALIENT FEATURES :

- Minimum core amount to open the account is ₹100 & Maximum ₹1,00,000 per month.
- Flexibility of Stepping up upto 10 times the core deposit amount to a maximum of ₹1,00,000.
- Deposit period 06 months to 60 months.
- Interest calculated on contractual Term Deposit rate.
- No penalty for premature withdrawal or delayed installments.
- Nomination facility available.
- No TDS deducted on maturity.
- Loan facility up to 75% of deposit amount.

यूनियन बैंक
ऑफ इंडिया
अच्छे लोग, अच्छा बैंक

Union Bank
of India
Good people to bank with

Call 1800-2222-44 (Toll Free) 080-25300175 (Chargeable)
Log on to www.unionbankofindia.co.in

Your dreams are not yours alone

Minimise your interest burden!

Avail Housing Loan as an OVERDRAFT*
Maximise your Joy!
Enjoy reducing interest liability without losing tax benefits

Same rate of interest as applicable to regular Housing Loan

STATE BANK OF MYSORE
Building on a Century of Trust

Contact (Toll Free): 1800 425 3637 | www.statebankofmysore.co.in

*Conditions apply

SyndNivas
Home Loan

Dream Your Home

we will make it true.

Attractive Rate of Interest

- Low interest rate
- No pre-payment penalty
- No hidden charges
- 30 years repayment period
- Quick sanction
- No guarantor
- 50% concession on processing & documentation charges

*Conditions apply

विश्वसनीय. मैत्रीपूर्ण
Faithful. Friendly

सिंडिकेटबैंक
SyndicateBank
भारत सरकार का उपक्रम A Govt. of India Undertaking

For more details, please contact our nearest branch or visit **www.syndicatebank.in**

MISSED CALL BANKING

Get your account information
FREE OF CHARGE
through missed call from your registered mobile number

GIVE A MISS CALL TO
1800 425 1445
& get a SMS giving
BALANCE
of your account

GIVE A MISS CALL TO
1800 425 1446
& get a SMS giving
MINI STATEMENT
of your account

Call Toll free No. 1800 425 1444 or step into your nearest branch for details

Karnataka Bank Ltd.
Your Family Bank. Across India.

Regd. & Head Office: Mangalore - 575 002
E-mail: info@ktkbank.com Visit us at: www.karnatakabank.com

With best compliments from:

Infosys
Foundation

Infosys Foundation

Neralu, #1/2 (1878), 11th Main,
39th Cross, 4th T Block, Jayanagar,
Bangalore 560011, Karnataka, India
Tel.: +91-80-26534653 / 41261700
Fax: +91-80-41032140
Email: foundation@infosys.com

With best compliments from:

Malpani Charitable Trust

Bengaluru

Puranas contain historical truths. No doubt our puranas which are predominantly real history, do contain some allegories, some metaphor, some stories to demonstrate the truth too. But in all instances when these allegories, metaphor and stories appear in the puranas which are all composed in poetic form, there is ample evidence of context in the same literature to differentiate it as such, from true history narrated in the rest of the book.

Bharatiya Vidya Bhavan
#43, Race Course Road, Bengaluru 560 001
Ph: 080-22267303/ 22267421/22265746 Fax: 22287373
Email: bhavanblrhns50@gmail.com, hbcollege18@yahoo.co.in
Website: www.bhavankaranataka.com, Facebook : wwwfacebook/bhavanbengaluru

THE BANGALORE PRESS